ಆತನೇ ಮೂರ್ತಿಮತ್ತಾಗಿರುವ ದೋಷವು. ಸರ್ವಭೂತಸುಹೃದನಾಗಿರುವ ಶ್ರೀಕೃಷ್ಣನಲ್ಲಿ ದ್ವೇಷಬುದ್ಧಿಯಿಂದ ಕೂಡಿ ಆತನಿಗೆ ವಿಮುಖನಾಗಿ ತನ್ನ ಭಾಗ್ಯವನ್ನು ಕಳೆದುಕೊಂಡವನು. ಇಡೀ ಕುಲವು ಕುಶಲವಾಗಿ ಬಾಳಲೆಂದು ಆ ದುಷ್ಟನೊಬ್ಬನನ್ನು ಒಡನೆಯೇ ತೊರೆದುಬಿಡು. **'ತ್ಯಜಾಶ್ವಶೈವಂ ಕುಲಕೌಶಲಾಯ'** ಎಂದು ಧೃತರಾಷ್ಟ್ರನಿಗೆ ಹಿತವಚನವನ್ನು ಹೇಳಿದನು.* (ಶ್ಲೋಕ 11-13)

ಸತ್ಪುರುಷರಿಗೆ ಪ್ರಿಯವಾದ ಶೀಲಸ್ವಭಾವವುಳ್ಳ ವಿದುರನ ಆ ವಚನವನ್ನು ಕೇಳಿ ಕರ್ಣ-ದುಃಶಾಸನ-ಶಕುನಿಸಹಿತನಾಗಿದ್ದ ದುರ್ಯೋಧನನು ಕಿಡಿ-ಕಿಡಿಯಾದನು. ಕೋಪದಿಂದ ಅವನ ತುಟಿಗಳು ಅದುರತೊಡಗಿದುವು. ಆತನು ವಿದುರನನ್ನು ಸತ್ಕರಿಸುವ ಬದಲು ಹೀನಾಯವಾಗಿ ಕಾಣುತ್ತಾ ಹೀಗೆ ಗುಡುಗಿದನು : "ಈ ವಕ್ರಬುದ್ಧಿಯುಳ್ಳ ದಾಸೀಪುತ್ರನನ್ನು ಇಲ್ಲಿಗೆ ಬರಮಾಡಿದವರಾರು? ನಮ್ಮ ಮನೆಯ ಕೂಳನ್ನೇ ತಿಂದು-ಬೆಳೆದು, ನಮಗೇ ವಿರೋಧಿಯಾಗಿ, ಶತ್ರುಗಳಿಗೆ ಹಿತವನ್ನು ಕೋರುತ್ತಿರುವ ಕೃತಘ್ನ ಈತ. ಈತನನ್ನು ಒಡನೆಯೇ ಪಟ್ಟಣದಿಂದ ಹೊರದೂಡಿರಿ. ಪ್ರಾಣ ತೆಗೆಯದೇ ತಿರಸ್ಕಾರಪೂರ್ವಕವಾಗಿ ಹೊರಕ್ಕೆ ಅಟ್ಟಿಬಿಡಿರಿ."

ಕ ಏನಮತ್ರೋಪಜುಹಾವ ಜಿಹ್ಮಂ
ದಾಸ್ಯಾಃ ಸುತಂ ಯದ್ಬಲಿನೈವ ಪುಷ್ಟಃ ।
ತಸ್ಮಿನ್ಪ್ರತೀಪಃ ಪರಕೃತ್ಯ ಆಸ್ತೇ
ನಿರ್ವಾಸ್ಯತಾಮಾಶು ಪುರಾಚ್ಛ್ವಸಾನಃ ॥೧೫॥

---

* ಆವಶ್ಯಕತೆ ಬಿದ್ದರೆ ಇಡೀ ಕುಲದ ರಕ್ಷಣೆಗಾಗಿ ಕುಲದಲ್ಲಿ ಇರುವ ಒಬ್ಬನನ್ನು ತ್ಯಜಿಸಬೇಕು. ಗ್ರಾಮದ ರಕ್ಷಣೆಗಾಗಿ ಕುಲವನ್ನೂ, ದೇಶದ ರಕ್ಷಣೆಗಾಗಿ ಗ್ರಾಮವನ್ನೂ ಬಲಿಕೊಡಬೇಕಾಗಬಹುದು. ಆತ್ಮೋದ್ಧಾರಕ್ಕಾಗಿ ಇಡೀ ಭೂಮಿಯನ್ನೇ ತ್ಯಜಿಸಬೇಕಾಗುವುದು.

"ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥"

ತ್ಯಜಾಶ್ವಶೈವಂ = ಅಮಂಗಲನಾದ ಆ ಕುಪುತ್ರನನ್ನು ತೊರೆಯಬೇಕು. ಇಲ್ಲಿ 'ತ್ಯಜಾಶ್ವಸೇನಂ', 'ತ್ಯಜಾಶ್ವಸೇವ್ಯಂ', 'ತ್ಯಜಾಶ್ವಥೈನಂ'–ಎಂಬ ಪಾಠಾಂತರಗಳುಂಟು. (ವೀರರಾಘವೀಯ) (ಶ್ಲೋಕ ೧೩)

ಕಿವಿಗೆ ಶೂಲದಂತಿದ್ದ ಇಂತಹ ಮರ್ಮಭೇದಕವಾದ ಮಾತುಗಳನ್ನು ವಿದುರನು ಅಣ್ಣನ ಎದುರಿನಲ್ಲೇ ಕೇಳಬೇಕಾಯಿತು. ಆದರೂ ಆ ಯೋಗಿ ರಾಜನು ಅವುಗಳಿಂದ ಮನೋವ್ಯಥೆಗೊಳ್ಳದೇ 'ಭಗವಂತನ ಮಾಯೆಯು ಪ್ರಬಲವಾದುದು'–ಎಂದು ಭಾವಿಸಿ ಸಭಾಮರ್ಯಾದೆಯನ್ನು ಕಾಪಾಡುತ್ತಾ ತನ್ನ ಬಲಿಷ್ಠವಾಗಿದ್ದ ಬಿಲ್ಲನ್ನು ಬಾಗಿಲಿನಲ್ಲೇ ಇರಿಸಿ* ತಾನೇ ಅಲ್ಲಿಂದ ಹೊರಟುಬಿಟ್ಟನು. (ಶ್ಲೋಕ 14-16)

ವಿದುರನು ಹಸ್ತಿನಾವತಿಯನ್ನು ಬಿಟ್ಟು ಹೊರಡಲು ಕೌರವರ ಭಾಗ್ಯವೇ ಅವನೊಡನೆ ಹೊರಟುಬಿಟ್ಟಂತಾಯಿತು. ತಮ್ಮ ಪುಣ್ಯಪುಂಜದ ಫಲವಾಗಿ ದೊರಕಿದ್ದ ಸಿದ್ಧಿಯನ್ನು ಅವರು ಕಳೆದುಕೊಂಡಂತಾಯಿತು. ಆ ಮಹಾತ್ಮನು ಅಲ್ಲಿಂದ ಹೊರಟು ಪುಣ್ಯಯಾತ್ರಿಕನಾಗಿ–ತೀರ್ಥಪಾದನಾದ ಶ್ರೀಭಗವಂತನು ತನ್ನ ಸಾವಿರಾರು ಅರ್ಚಾಮೂರ್ತಿಗಳಿಂದ ಸಾನ್ನಿಧ್ಯವನ್ನು ಕರುಣಿಸಿರುವ ಭೂಮಂಡಲದ ನಾನಾತೀರ್ಥಕ್ಷೇತ್ರಗಳಲ್ಲಿ ಸಂಚರಿಸತೊಡಗಿದನು. ಭಗವಂತನ ದಿವ್ಯಮಂಗಳವಿಗ್ರಹಗಳು ಕಂಗೊಳಿಸುತ್ತಿರುವ ಪುಣ್ಯವಾದ ಅರಣ್ಯಗಳಲ್ಲೂ, ಗಿರಿಗಳಲ್ಲೂ, ನಗರಗಳಲ್ಲೂ, ಪೊದೆಗಳಲ್ಲೂ, ನಿರ್ಮಲಜಲಭರಿತವಾದ ನದೀ-ಸರೋವರ-ಪುಷ್ಕರಿಣ್ಯಾದಿ ತೀರ್ಥಗಳಲ್ಲೂ ಏಕಾಕಿಯಾಗಿಯೇ ಓಡಾಡುತ್ತಿದ್ದನು. ಬಂಧು-ಮಿತ್ರಾದಿಗಳು ತನ್ನನ್ನು ಗುರುತಿಸದಿರಲೆಂದು ಅವಧೂತವೇಷದಲ್ಲಿಯೇ ಸಂಚರಿಸುತ್ತಿದ್ದನು. ಶರೀರಕ್ಕೆ ಅಲಂಕಾರಮಾಡಿಕೊಳ್ಳುತ್ತಿರಲಿಲ್ಲ. ಶುದ್ಧವಾದ ಸಾಧಾರಣವಾದ ಆಹಾರಪ್ರಸದಾವನ್ನೇ ಸೇವಿಸುತ್ತಿದ್ದನು. ತೀರ್ಥಗಳಲ್ಲಿ ಸ್ನಾನಮಾಡುತ್ತಿದ್ದನು. ಬರೀ ನೆಲದ ಮೇಲೆ ಮಲಗುತ್ತಿದ್ದನು. ಶ್ರೀಭಗವಂತನನ್ನು ಸಂತೋಷ ಪಡಿಸುವಂತಹ ವ್ರತಗಳನ್ನು ಆಚರಿಸುತ್ತಾ ಶುದ್ಧವಾದ ವೃತ್ತಿಯಿಂದ ಶರೀರ ಯಾತ್ರೆಯನ್ನು ನಡೆಸುತ್ತಿದ್ದನು. (ಶ್ಲೋಕ 17-19)

---

* ಕುರುಪತಿಗೆ ಕಷ್ಟಕಾಲದಲ್ಲಿ ಸಹಾಯಕವಾಗಬಹುದಾಗಿದ್ದ ಬಿಲ್ಲನ್ನು ವಿದುರನು ಬಿಟ್ಟುಹೋಗುತ್ತಾನೆ ಇದಕ್ಕೆ ಮುಖ್ಯಕಾರಣ ಆತನ ವೈರಾಗ್ಯಬುದ್ಧಿ ತಾನು ಆ ಬಿಲ್ಲಿನಿಂದ ಪಾಂಡವರಿಗೆ ಸಹಾಯಮಾಡಬಹುದು–ಎಂಬ ಸಂಶಯವನ್ನು ಹೋಗಲಾಡಿಸಲು ಅದನ್ನು ದುರ್ಯೋಧನನ ಮನೆಯ ಬಾಗಿಲಿನಲ್ಲೇ ಬಿಟ್ಟು ಹೋಗುತ್ತಾನೆ.

(ಶ್ಲೋಕ ೧೬)

ಹೀಗೆ ಆತನು ಭಾರತವರ್ಷದಲ್ಲೆಲ್ಲಾ ಸಂಚಾರಮಾಡುತ್ತಾ ಪ್ರಭಾಸ ಕ್ಷೇತ್ರಕ್ಕೆ ದಯಮಾಡಿಸಿದನು. ಆ ವೇಳೆಗೆ ಭಗವಂತನಾದ ಶ್ರೀಕೃಷ್ಣನ ಸಹಾಯದಿಂದ ಯುಧಿಷ್ಠಿರನು ಅಖಂಡಭೂಮಂಡಲದ ಏಕಛತ್ರಾಧಿಪತಿಯಾಗಿ ರಾಜ್ಯಭಾರಮಾಡುತ್ತಿದ್ದನು. ಬಿದಿರುಮೆಳೆಗಳ ಪರಸ್ಪರಸಂಘರ್ಷದಿಂದ ಇಡೀ ಬಿದಿರುಕಾಡು ಸುಟ್ಟು ಬೂದಿಯಾಗುವಂತೆ–ತನ್ನ ಬಂಧು-ಮಿತ್ರರು ತಮ್ಮ-ತಮ್ಮಲ್ಲಿಯೇ ಉಂಟಾದ ಸಂಘರ್ಷಸಮರದಲ್ಲಿ ನಾಶ ಹೊಂದಿಬಿಟ್ಟರು–ಎಂಬ ಸಮಾಚಾರವು ಆತನಿಗೆ ಅಲ್ಲಿ ತಿಳಿಯಿತು.* ಆತನು ದುಃಖಿಸುತ್ತಾ ಪಶ್ಚಿಮಾಭಿಮುಖವಾಗಿ ಹೊರಟು ಸರಸ್ವತೀನದಿಯನ್ನು ತಲುಪಿದನು. ಅಲ್ಲಿ ತ್ರಿತ, ಉಶನ, ಮನು, ಪೃಥು, ಅಗ್ನಿ, ಅಸಿತ, ವಾಯು, ಸುದಾಸ, ಗೌ, ಗುಹ ಮತ್ತು ಶ್ರಾದ್ಧದೇವ–ಎಂಬ ಹೆಸರುಗಳಿಂದ ಪ್ರಸಿದ್ಧವಾದ ಹನ್ನೊಂದು ತೀರ್ಥಗಳನ್ನೂ ಸೇವಿಸಿದನು. ಅವುಗಳನ್ನಲ್ಲದೇ ಭೂಮಿಯಲ್ಲಿ ಬ್ರಾಹ್ಮಣರಿಂದಲೂ–ದೇವತೆಗಳಿಂದಲೂ ಸ್ಥಾಪಿಸಲ್ಪಟ್ಟ ಇನ್ನೂ ಅನೇಕ ವಿಷ್ಣುಮಂದಿರಗಳನ್ನೂ ಸೇವಿಸಿದನು. ಗೋಪುರಶಿಕರದ ಪೂರ್ಣಕುಂಭಾದಿಗಳಲ್ಲಿ ಭಗವಂತನ ಆಯುಧಶ್ರೇಷ್ಠವಾದ ಚಕ್ರದ ಗುರುತಿನಿಂದ ಅಲಂಕೃತವಾಗಿ ದರ್ಶನಮಾತ್ರದಿಂದ ಶ್ರೀಕೃಷ್ಣನ ಸ್ಮರಣೆಯನ್ನು ತರುತ್ತಿದ್ದ ಆ ದಿವ್ಯಮಂದಿರಗಳನ್ನು ಸಂದರ್ಶಿಸಿ ಸೇವಿಸಿದನು. ಅಲ್ಲಿಂದ ಹೊರಟು ಧನ-ಧಾನ್ಯಾದಿಗಳಿಂದ ಸಮೃದ್ಧವಾಗಿದ್ದ ಸೌರಾಷ್ಟ್ರ , ಸೌವೀರ, ಮತ್ಸ್ಯ ಮತ್ತು ಕುರುಜಾಂಗಲಗಳೇ ಮುಂತಾದ ದೇಶಗಳ ಮಾರ್ಗವಾಗಿ ಸಂಚರಿಸುತ್ತಾ

---

* ಇಲ್ಲಿ ಅಂತಃಕಲಹದಿಂದ ನಾಶಹೊಂದಿದರೆಂದು ತಿಳಿದುಬಂದ ಬಂಧು-ಮಿತ್ರರು ಯಾರು? ಎಂದರೆ : 'ಕೌರವಾದಿಗಳು'–ಎಂದು ಶ್ರೀಧರೀಯ ಮತ್ತು ವೀರರಾಘವೀಯ ವ್ಯಾಖ್ಯಾನಗಳು. 'ಅವರು ಯಾದವರು'–ಎಂದು ವಿಜಯಧ್ವಜೀಯ. ವಿಪ್ರಶಾಪ ನಿಮಿತ್ತವಾಗಿ ಯಾದವರು ನಾಶಹೊಂದುವ ಸಮಾಚಾರವನ್ನು ಆತನು ಪ್ರಭಾಸದಲ್ಲಿ ಮೊದಲು ಕೇಳಿದನು. ಅನಂತರ ಉದ್ಧವನಿಂದ ಯಾದವವಿನಾಶವನ್ನು ವಿಸ್ತಾರವಾಗಿ ಕೇಳಿ ತಿಳಿದನು–ಎಂದು ಅರ್ಥೈಸಬೇಕು. "ವಿದುರಸ್ತು ಪ್ರಭಾಸಸ್ಥಃ ಶಾಪಂ ಸಂಕ್ಷೇಪತೋಽಶೃಣೋತ್ । ಯದೂನಾಂ ವಿಸ್ತರಾತ್ಪಶ್ಚಾತ್ ಉದ್ಧವಾದ್ಯ- ಮುನಾಮನು ॥" ಎಂಬ ವಚನವಿರುವುದರಿಂದ ಹೀಗೆಯೇ ಅರ್ಥಮಾಡಬೇಕು. ಇಲ್ಲದಿದ್ದರೆ ಮಹಾಭಾರತಕ್ಕೆ ವಿರೋಧವಾಗುತ್ತದೆ–ಎಂದೂ ವಿಜಯಧ್ವಜೀಯದಲ್ಲಿ ವಿವರಿಸಿದೆ.

(ಶ್ಲೋಕ ೨೧)

ಕೆಲವು ಕಾಲದಲ್ಲೇ ಯಮುನಾದಿಯ ತೀರಕ್ಕೆ ಹೋದಾಗ ಅಲ್ಲಿ ಆತನಿಗೆ ಪರಮಭಾಗವತನಾದ ಉದ್ಧವನ ಸಂದರ್ಶನವಾಯಿತು. ಆ ಉದ್ಧವನಾದರೋ ಭಗವಂತನಾದ ವಾಸುದೇವನ ಪ್ರಖ್ಯಾತಸೇವಕನು. ಪ್ರಶಾಂತವಾದ ಮನಸ್ಸು-ಮೂರ್ತಿಗಳುಳ್ಳವನು. ಬೃಹಸ್ಪತಿಗೇ ಹಿಂದೆ ಶಿಷ್ಯನಾಗಿದ್ದವನೆಂಬ ಪ್ರಸಿದ್ಧಿಯುಳ್ಳ ನೀತಿಶಾಸ್ತ್ರವಿಶಾರದನು. ಆ ಮಹಾತ್ಮನನ್ನು ಪ್ರೀತಿಯಿಂದ ಧೃಢವಾಗಿ ಆಲಿಂಗಿಸಿಕೊಂಡು ವಿದುರನು ಭಗವಂತನಾದ ಶ್ರೀಕೃಷ್ಣನಿಗೆ ಸೇರಿದವರಾದ ತನ್ನ ಬಂಧು-ಮಿತ್ರರ ಯೋಗ-ಕ್ಷೇಮಗಳನ್ನು ವಿಚಾರಿಸತೊಡಗಿದನು. (ಶ್ಲೋಕ 20-25)

"ಓ ಉದ್ಧವ! ವಸುದೇವನ ಮನೆಯಲ್ಲಿ ಪುರಾಣಪುರುಷರಾದ ಶ್ರೀಕೃಷ್ಣ-ಬಲರಾಮರು ಕುಶಲರಾಗಿದ್ದಾರೆಯೇ? ತನ್ನ ನಾಭಿಕಮಲದಲ್ಲಿ ಹುಟ್ಟಿದ ಬ್ರಹ್ಮದೇವರ ಪ್ರಾರ್ಥನೆಯಂತೆ ಈ ಭೂಮಿಯಲ್ಲಿ ಅವತರಿಸಿದ ಅವರು ಭೂಮಿಯ ಭಾರವನ್ನು ಇಳುಹಿ ಅದರ ಕ್ಷೇಮವನ್ನು ಸಾಧಿಸಿ ತಾವೂ ಆನಂದದಿಂದ ಕ್ಷೇಮವಾಗಿದ್ದಾರೆಯೇ? ಕುರುವಂಶಿಗಳಾದ ನಮಗೆ ಪರಮ ಸ್ನೇಹಿತನಾಗಿರುವ ಶೂರನ ಪುತ್ರನಾದ ವಸುದೇವನು ಕುಶಲನಾಗಿದ್ದಾ ನೆಯೇ? ತಂದೆಯಂತೆ ಕೊಡುಗೈಯುಳ್ಳವನಾಗಿ ತನ್ನ ಸೋದರಿಯರಿಗೂ, ಅವರ ಪತಿಗಳಿಗೂ ಸಂತೋಷ-ತೃಪ್ತಿಗಳುಂಟಾಗುವಂತೆ ಅವರು ಬಯಸಿದ ಬಳುವಳಿಗಳನ್ನು ಧಾರಾಳವಾಗಿ ಕೊಡುತ್ತಿರುವ ಆ ಪ್ರೇಮೌದಾರ್ಯನಿಧಿಯಾದ ವಸುದೇವನು ಸೌಖ್ಯವೇ? ಯಾದವರ ಸೇನಾಪತಿಯಾದ ಮಹಾವೀರನಾದ ಪ್ರದ್ಯುಮ್ನನು ಸುಖವಾಗಿದ್ದಾನಷ್ಟೇ? ರುಕ್ಮಿಣೀದೇವಿಯು ಬ್ರಾಹ್ಮಣರನ್ನು ಆರಾಧಿಸಿದವಳಾಗಿ ಹಿಂದಿನ ಜನ್ಮದಲ್ಲಿ ಸಾಕ್ಷಾತ್ ಮನ್ಮಥನೇ ಆಗಿದ್ದ ಯಾವನನ್ನು ತನ್ನ ಸುಪುತ್ರನನ್ನಾಗಿ ಭಗವಂತನಿಂದ ಪಡೆದಳೋ–ಅಂತಹ ಪ್ರದ್ಯುಮ್ನನ ಕುಶಲವನ್ನೂ ವಿಚಾರಿಸುತ್ತಿದ್ದೇನೆ. ಸಾತ್ವತರು, ವೃಷ್ಣಿಗಳು, ಭೋಜರು ಮತ್ತು ದಾಶಾರ್ಹರು–ಇವರಿಗೆಲ್ಲಾ ಅಧಿಪತಿಯಾಗಿರುವ ಉಗ್ರಸೇನಮಹಾರಾಜನು ಕ್ಷೇಮವಾಗಿದ್ದಾನೆಯೇ? ಸಿಂಹಾಸನದ ಆಸೆಯನ್ನು ದೂರದಿಂದಲೇ ತೊರೆದಿದ್ದ ಆತನನ್ನು ಸಾಕ್ಷಾತ್ ಶ್ರೀಕೃಷ್ಣಪರಮಾತ್ಮನೇ ಮತ್ತೆ ರಾಜ್ಯಪೀಠದ ಮೇಲೆ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿದ್ದನಲ್ಲವೇ? ಶ್ರೀಹರಿಗೆ ತಕ್ಕ ಪುತ್ರನಾಗಿ, ಸಮಸ್ತ

ರಥಿಗಳಿಗೂ ಅಗ್ರಗಣ್ಯನಾಗಿರುವ ಸಾಂಬನು ಕುಶಲನಾಗಿರುವನಷ್ಟೇ? ಆತನು ಮೊದಲು ಪಾರ್ವತೀದೇವಿಗೇ ಪುತ್ರನಾಗಿದ್ದ ಕುಮಾರಸ್ವಾಮಿಯಾಗಿದ್ದವನು. ಜಾಂಬವತಿಯು ಅನೇಕವ್ರತಗಳನ್ನಾಚರಿಸಿ ಆತನನ್ನು ತನ್ನ ಪುತ್ರನನ್ನಾಗಿ ಪಡೆದುಕೊಂಡಳು. ಅರ್ಜುನನಿಂದಲೇ ಸರಹಸ್ಯವಾದ ಧನುರ್ವಿದ್ಯೆಯ ಶಿಕ್ಷಣವನ್ನು ಪಡೆದ ವೀರಾಧಿವೀರನಾದ ಯುಯಧಾನನು (ಸಾತ್ಯಕಿಯು) ಸೌಖ್ಯವಷ್ಟೇ? ಮಹಾಯೋಗಿಗಳಿಗೂ ದುರ್ಲಭವಾಗಿರುವ ಭಾಗವತಯೋಗದ ಸಿದ್ಧಿಯನ್ನು ಶ್ರೀಕೃಷ್ಣನ ಸೇವೆಯಿಂದ ಅನಾಯಾಸ ವಾಗಿಯೇ ಪಡೆದುಕೊಂಡ ಸುಕೃತಿ ಆತನು. ಶ್ರೀಭಗವಂತನನ್ನು ಶರಣು ಹೊಂದಿದ, ನಿರ್ಮಲಭಕ್ತಿನಿಧಿಯೂ, ವಿದ್ವನ್ಮಣಿಯೂ ಆದ ಶ್ವಫಲ್ಕಪುತ್ರನು (ಅಕ್ರೂರನು) ಕ್ಷೇಮವಾಗಿದ್ದಾನೆಯೇ? ನಂದಗೋಕುಲಕ್ಕೆ ಹೋಗುತ್ತಿದ್ದಾಗ ಅಲ್ಲಿನ ಭೂಮಿಯ ಧೂಳಿನಲ್ಲಿ ಶ್ರೀಕೃಷ್ಣಪರಮಾತ್ಮನ ಪಾದಚಿಹ್ನೆಗಳು ಅಂಕಿತವಾಗಿರುವುದನ್ನು ಕಂಡು ಪ್ರೇಮವಶನಾಗಿ ಅದರಲ್ಲಿ ಉರುಳು ಸೇವೆಮಾಡಿದ ಭಾಗವತೋತ್ತಮನವನು. ಭೋಜವಂಶಜಳಾದ ದೇವಕನ ಸುಪುತ್ರೀ ದೇವಕೀದೇವಿಯು ಕುಶಲವಷ್ಟೇ? ದೇವಮಾತೆಯಾದ ಅದಿತಿ ಯಂತೆಯೇ ಸಾಕ್ಷಾತ್ ಮಹಾವಿಷ್ಣುವಿನ ಮಾತೆಯಾದ ಮಹಾಭಾಗ್ಯಶಾಲಿನಿ ಆಕೆ ; 'ತ್ರಯೀ' ಎನಿಸಿದ ವೇದವಿದ್ಯೆಯು ತನ್ನ ಮಂತ್ರಗಳಲ್ಲಿ ಯಜ್ಞವಿಸ್ತಾರರೂಪವಾದ ಅರ್ಥವನ್ನು ಧರಿಸಿರುವಂತೆ–ತನ್ನ ಗರ್ಭದಲ್ಲಿ ಭಗವಂತನಾದ ಶ್ರೀಕೃಷ್ಣಪರಮಾತ್ಮನನ್ನು ಧರಿಸಿದ್ದ ಮಹಾಸುಕೃತಶಾಲಿನಿ. ಭಕ್ತಜನರ ಎಲ್ಲ ಕಾಮನೆಗಳನ್ನೂ ಈಡೇರಿಸುವ ಮಹಾನುಭಾವನಾದ ಭಗವಾನ್ ಅನಿರುದ್ಧನು ಕ್ಷೇಮವಾಗಿದ್ದಾನೆಯೇ? ಆತನನ್ನು ವೇದಗಳ ಆದಿಕಾರಣನೆಂದೂ, ವೇದವೇದ್ಯನೆಂದೂ, ಅಂತಃಕರಣದ ನಾಲ್ಕನೆಯ ಅಂಶವಾದ ಮನಸ್ತತ್ತ್ವದ* ಅಧಿಷ್ಠಾತೃವೆಂದೂ ಶಾಸ್ತ್ರಗಳು ಸಾರುತ್ತವೆ. ಎಲೈ

* ಮನೋಮಯಂ ಸತ್ತ್ವತುರೀಯತತ್ತ್ವಂ=ಚಿತ್ತ, ಅಹಂಕಾರ, ಬುದ್ಧಿ ಮತ್ತು ಮನಸ್ಸು–ಇವು ಅಂತಃಕರಣದ ನಾಲ್ಕು ಅಂಶಗಳು. ಇವುಗಳಿಗೆ ಕ್ರಮವಾಗಿ ವಾಸುದೇವ-ಸಂಕರ್ಷಣ–ಪ್ರದ್ಯುಮ್ನ-ಅನಿರುದ್ಧರು ಅಧಿಷ್ಠಾತೃದೇವತೆಗಳು. ಅನಿರುದ್ಧನು ಸತ್ತ್ವದ ನಾಲ್ಕನೇ ಅಂಶವಾಗಿರುವ ಮನಸ್ಸಿಗೆ ಪ್ರವರ್ತಕನು. 'ಮನಃ ಪೂರ್ವಂ ವಾಗುತ್ತರರೂಪಂ', 'ಅನ್ಯೋಽನ್ತರ ಆತ್ಮಾ ಮನೋಮಯಃ'–ಇತ್ಯಾದಿ ಶ್ರುತಿಗಳಂತೆ

ಸೌಮ್ಯನೇ! ತಮ್ಮ ಆತ್ಮದೈವತವಾದ ಶ್ರೀಕೃಷ್ಣಪರಮಾತ್ಮನನ್ನು ಅನನ್ಯ ಭಾವದಿಂದ ಅನುಸರಿಸುತ್ತಿರುವ ಹೃದೀಕ, ಸತ್ಯಭಾಮಾಪುತ್ರನಾದ ಚಾರುದೇಷ್ಣ ಮತ್ತು ಗದನೇ ಮುಂತಾದವರೆಲ್ಲರೂ ಕುಶಲವಾಗಿ ಬಾಳು ತ್ತಿದ್ದಾರಲ್ಲವೇ? (ಶ್ಲೋಕ 26-35)

ಧರ್ಮರಾಜನು ಅರ್ಜುನ ಮತ್ತು ಶ್ರೀಕೃಷ್ಣರೆಂಬ ತನ್ನ ಎರಡು ಭುಜಗಳ ಬಲದಿಂದ ಧರ್ಮಪೂರ್ವಕವಾಗಿ ಧರ್ಮಸೇತುವನ್ನು ಕಾಪಾಡು ತ್ತಿದ್ದಾನಷ್ಟೇ? ಅರ್ಜುನನ ಸಹಾಯದಿಂದ ದೊರೆತ ಮಯನಿರ್ಮಿತವಾದ ಮಹಾಸಭೆಯಲ್ಲಿ ಆತನ ರಾಜ್ಯವೈಭವವನ್ನೂ ಐಶ್ವರ್ಯವನ್ನೂ ಕಂಡು ದುರ್ಯೋಧನನು ಅಸೂಯಾಸಂತಾಪಕ್ಕೆ ಒಳಗಾಗಿದ್ದನು.

ಅಪರಾಧಿಗಳ ವಿಷಯದಲ್ಲಿ ಕಡುಕೋಪವುಳ್ಳ ಭೀಮಸೇನನು ಸರ್ಪ ದಂತೆ ಅತಿದೀರ್ಘಕಾಲದಿಂದ ಇಟ್ಟುಕೊಂಡಿದ್ದ ರೋಷವನ್ನು ಬಿಟ್ಟು ಬಿಟ್ಟಿದ್ದಾನಲ್ಲವೇ? ಆತನ ಪರಾಕ್ರಮವಾದರೋ ಎಂತಹುದು! ಗದೆಯನ್ನು ಅತ್ಯದ್ಭುತವಾಗಿ ತಿರುಗಿಸುತ್ತಾ ಮಾರ್ಗದಲ್ಲಿ ಓಡಾಡುತ್ತಿದ್ದ ಆತನ ಪಾದಗಳ ಭಾರವನ್ನು ಯುದ್ಧಭೂಮಿಗೇ ತಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಯಾವನ ಬಾಣಗಳ ರಾಶಿಯಲ್ಲಿ ಮರೆಯಾಗಿ ಕಣ್ಣಿಗೇ ಕಾಣಿಸದೇ ಹೋಗಿದ್ದ ಮಾಯಾಕಿರಾತರೂಪಿಯಾದ ಶಿವನು ಸುಪ್ರಸನ್ನನಾದನೋ–ಅಂತಹ ಅತಿರಥಿಯೂ, ರಥಿಗಳ ಮತ್ತು ಸೇನಾಪತಿಗಳ ಕೀರ್ತಿಯನ್ನು ವೃದ್ಧಿಪಡಿಸುವವನೂ ಆದ ಗಾಂಡೀವಪಾಣಿಯಾದ ಅರ್ಜುನನು ಕ್ಷೇಮವಾಗಿದ್ದಾನೆಯೇ? ಈಗಲಂತೂ ಆತನ ಸಕಲಶತ್ರುಗಳೂ ಶಾಂತರಾಗಿ ಬಿಟ್ಟಿರಬೇಕು. ಕಣ್ಣುಗಳು ರೆಪ್ಪೆಗಳಿಂದ ರಕ್ಷಿಸಲ್ಪಡುವಂತೆ–ಕುಂತೀಪುತ್ರ

ಮನಸ್ಸು ಶಬ್ದಯೋನಿಯಾಗಿದೆ. (ಶ್ರೀಧರೀಯ) ಸತ್ತ್ವತುರೀಯ ತತ್ತ್ವಂ = ಭಗವಂತನ ಚತುರ್ಥಾಂಶವಾದ, ಶಬ್ದಯೋನಿಂ = ಶಾಸ್ತ್ರಪ್ರಮಾಣದಿಂದಲೇ ತಿಳಿಯಲ್ಪಡುವ, ಮನೋಮಯಂ= ಯೋಗಪರಿಶುದ್ಧವಾದ ಮನಸ್ಸಿನಿಂದ ಗ್ರಹಿಸಲ್ಪಡುವ ಅನಿರುದ್ಧ ಸ್ವಾಮಿಯನ್ನು (ವೀರರಾಘವೀಯ) ಮನಸ್ಸಿಗೆ ಅಭಿಮಾನಿಯಾಗಿರುವುದರಿಂದ ಅನಿರುದ್ಧನು ಮನೋಮಯನೆಂದು ಕರೆಯಲ್ಪಟ್ಟಿದ್ದಾನೆ. 'ಮನಸಾ ವಾ ಅಗ್ರೇ ಸಂಕಲ್ಪಯತಿ' 'ಮನ ಏವ ಮನುಷ್ಯಾಣಾಂ ಕಾರಣಂ ಬನ್ಧಮೋಕ್ಷಯೋಃ' (ವಿಜಯಧ್ವಜೀಯ)

(ಶ್ಲೋಕ ೩೪)

ರಿಂದ ಸದಾ ರಕ್ಷಿಸಲ್ಪಡುತ್ತಾ, ಕುಂತೀದೇವಿಯಿಂದ ಮುದ್ದಿನ ಮಕ್ಕಳಾಗಿ ಬೆಳೆಸಲ್ಪಟ್ಟ ಮಾದ್ರಿಯ ಅವಳೀಮಕ್ಕಳಾದ ನಕುಲ-ಸಹದೇವರು ಕ್ಷೇಮ ವಾಗಿದ್ದಾರೆಯೇ? ಅವರೂ ಮಹಾಪರಾಕ್ರಮಿಗಳು. ಇಬ್ಬರು ಗರುಡರು ಇಂದ್ರನ ಮುಖದಿಂದ ಅಮೃತವನ್ನು ಕಿತ್ತುಕೊಂಡಂತೆ ಅವರು–ಯುದ್ಧದಲ್ಲಿ ಶತ್ರುವಿನಿಂದ ರಾಜ್ಯವನ್ನು ಕಿತ್ತುಕೊಳ್ಳುತ್ತಿದ್ದರು. ಇನ್ನು ಕುಂತಿಯ ಯೋಗ ಕ್ಷೇಮ. ಅಯ್ಯೋ ಪಾಪ! ಆಕೆಯು ರಾಜರ್ಷಿಶ್ರೇಷ್ಠನಾದ ಪಾಂಡುವಿನ ಅಗಲಿಕೆಯಿಂದ ಮೃತಳಂತೆ ಆಗಿಬಿಟ್ಟಿದ್ದರೂ ಈ ಪುತ್ರರಿಗಾಗಿ ತನ್ನ ಪ್ರಾಣ ವನ್ನು ಉಳಿಸಿಕೊಂಡಳು. ರಥಿಗಳಲ್ಲಿ ಶ್ರೇಷ್ಠನಾಗಿದ್ದ ಪಾಂಡುವೂ ಅನುಪಮವೀರನು. ಒಂದೇ ಧನುಸ್ಸಿನಿಂದ–ಒಬ್ಬಂಟಿಗನಾಗಿಯೇ–ನಾಲ್ಕು ದಿಕ್ಕುಗಳನ್ನೂ ಗೆದ್ದುಬಂದಿದ್ದವನು. ಅಂತಹ ವೀರನ ಪತ್ನಿಯಾದ ಕುಂತಿಯು ಕ್ಷೇಮದಿಂದಿರುವಳೇ? ಎಲೈ ಸೌಮ್ಯನೇ! ಸ್ವರ್ಗಸ್ಥನಾದ ತನ್ನ ತಮ್ಮನ ವಿಷಯದಲ್ಲಿ ದ್ರೋಹವನ್ನೆಸಗಿ ಅಧಃಪತನಹೊಂದಿದ ಧೃತ ರಾಷ್ಟ್ರನಿಗಾಗಿ ನನಗೆ ಮತ್ತೆ-ಮತ್ತೆ ದುಃಖವುಂಟಾಗುತ್ತಿದೆ. ಆತನು ದುಷ್ಟ ರಾಗಿದ್ದ ತನ್ನ ಪುತ್ರರ ಎಲ್ಲ ಕೆಲಸಗಳಿಗೂ ಹೂಂಗುಟ್ಟುತ್ತಾ, ಹಿತಚಿಂತಕನಾದ ನನ್ನನ್ನು ನಗರಿಯಿಂದ ಹೊರದೂಡಿಬಿಟ್ಟಿದ್ದನು. ಅಯ್ಯೋ ಪಾಪ! ಆತನು ಎಂತಹ ಕಷ್ಟಕ್ಕೆ ಸಿಕ್ಕಿಕೊಂಡ! ಆದರೂ ನನಗೆ ಈ ಬಗೆಗೆ ದುಃಖ ವಾಗಲೀ-ಆಶ್ಚರ್ಯವಾಗಲೀ ಇಲ್ಲ. ಏಕೆಂದರೆ : ಜಗತ್ತನ್ನು ಸೃಷ್ಟಿಸಿ ಧರಿಸು ತ್ತಿರುವ ಶ್ರೀಹರಿಯು ಮನುಷ್ಯನಂತೆ ಆಟವಾಡುತ್ತಾ ಜನರ ಮನೋವೃತ್ತಿ ಗಳನ್ನು ಹೀಗೆಲ್ಲಾ ತಿರುಗಿಸುತ್ತಿದ್ದಾನೆ–ಎಂಬುದು ನನಗೆ ತಿಳಿದಿದೆ. ಆದ್ದರಿಂದ ನಾನು ಆತನ ಕೃಪೆಯಿಂದ ಆತನ ಮಹಿಮೆಗಳನ್ನು ಚಿಂತಿಸುತ್ತಾ ಇತರ ರಿಂದ ಗುರುತಿಸಲ್ಪಡದೇ ಆನಂದದಿಂದ ಸಂಚಾರಮಾಡುತ್ತಿದ್ದೇನೆ. ಕೌರವರು ತನ್ನಲ್ಲಿ ತುಂಬಾ ಅಪರಾಧಗಳನ್ನು ಮಾಡಿದ್ದರೂ ಭಗವಂತನು ಅವರನ್ನು ಒಡನೆಯೇ ಶಿಕ್ಷಿಸದೇ ಏಕೆ ಉಪೇಕ್ಷೆಮಾಡಿದ? ಎಂದರೆ : ಧನಮದ, ವಿದ್ಯಾಮದ, ಜಾತಿಮದಗಳೆಂಬ ಮುಬ್ಬಗೆಯ ಮದಗಳಿಂದ* ಕೊಬ್ಬಿ ಕುರುಡರಾಗಿ ದುರ್ಮಾರ್ಗವನ್ನು ಹಿಡಿದು ತಮ್ಮ ಸೇನೆಗಳಿಂದ ಮತ್ತೆ-ಮತ್ತೆ ಭೂಮಿಯನ್ನು ನಡುಗಿಸುತ್ತಿದ್ದ ದುಷ್ಟರಾಜರನ್ನೂ ಅವರೊಡನೆ

---

* ಮದತ್ರಯ : "ವಿದ್ಯಾಮದೋ ಧನಮದಃ ತಥೈವಾಭಿಜನೋ ಮದಃ । ಏತೇ

ನಾಶಮಾಡಿ ಶರಣಾಗತರ ದುಃಖವನ್ನು ದೂರಮಾಡುವುದಕ್ಕಾಗಿ ಹಾಗೆ ಮಾಡಿದನು. ಉದ್ಧವ! ಭಗವಂತನಾದ ಶ್ರೀಕೃಷ್ಣನಿಗೆ ಜನ್ಮವಾಗಲೀ– ಕರ್ಮವಾಗಲೀ ನಿಜವಾಗಿಯೂ ಇಲ್ಲ. ಆದರೂ ದುಷ್ಟರನ್ನು ನಾಶ ಪಡಿಸುವುದಕ್ಕೋಸ್ಕರವೂ ಜನರನ್ನು ತನ್ನೆಡೆಗೆ ಆಕರ್ಷಿಸುವುದಕ್ಕೋಸ್ಕರವೂ ಆತನು ತನ್ನ ದಿವ್ಯವಾದ ಜನ್ಮ-ಕರ್ಮಗಳನ್ನು ಪ್ರಕಟಿಸುತ್ತಾನೆ. ತ್ರಿಗುಣ ಗಳನ್ನು ದಾಟಿಹೋದ ಯಾವನೂ ಕರ್ಮಾಧೀನವಾದ ಈ ದೇಹದ ಕಟ್ಟಿಗೆ ಸಿಲುಕಲು ಬಯಸುವುದಿಲ್ಲ. ಹೀಗಿರುವಾಗ ಭಗವಂತನು ವಾಸ್ತವ ವಾಗಿಯೂ ಕರ್ಮಪರವಶನಾಗಿ* ದೇಹಧಾರಿಯಾಗುತ್ತಾನೆಯೇ? ಆದ್ದ ರಿಂದ ಎಲೈ ಮಿತ್ರನೇ! ಯಾವನು ಜನ್ಮರಹಿತನಾಗಿದ್ದರೂ ತನ್ನಲ್ಲಿ ಶರಣು ಬಂದ ಲೋಕಪಾಲಕರಿಗೂ ಮತ್ತು ತನ್ನ ಅನುಶಾಸನಕ್ಕೆ ವಿಧೇಯರಾಗಿ ನಡೆಯುವ ಭಕ್ತರಿಗೂ ಪ್ರಿಯವನ್ನು ಉಂಟುಮಾಡುವುದಕ್ಕಾಗಿ ಯದು ವಂಶದಲ್ಲಿ ಸ್ವೇಚ್ಛೆಯಿಂದ ಜನ್ಮವನ್ನು ತಳೆದನೋ[1] ಅಂತಹ ತೀರ್ಥ (ಪವಿತ್ರ) ಕೀರ್ತಿಯುಳ್ಳ ಪರಮಾತ್ಮನಾದ ಶ್ರೀಕೃಷ್ಣನ ಸಮಾಚಾರವನ್ನು ನನಗೆ ತಿಳಿಸಪ್ಪ.” (ಶ್ಲೋಕ 36-45)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೧ನೆಯ ಅಧ್ಯಾಯವು ಮುಗಿಯಿತು.

ಮದಾ ಮದಾಂಧಾನಾಂ ಏತ ಏವ ಸತಾಂ ದಮಾಃ ॥” (ಶ್ರೀಧರೀಯ) ಅಥವಾ ಧನ, ಐಶ್ವರ್ಯ ಮತ್ತು ಸೇನಾಮದಗಳು ಮದತ್ರಯ ಎನಿಸುತ್ತವೆ. (ವೀರರಾಘವೀಯ)

(ಶ್ಲೋಕ ೪೩)

* ಭಗವಂತನು ಕರ್ಮಾಧೀನವಾದ ಕರಣಗಳಿಗೆ ವಶವಾದ ವ್ಯಾಪಾರರಹಿತನಾದ್ದ ರಿಂದ ಅಕರ್ತಾ (ಕರ್ತೃತ್ವರಹಿತ) ಎಂದು ಕರೆಯಲ್ಪಟ್ಟಿದ್ದಾನೆ (ವೀರರಾಘವೀಯ) ‘ಭಗವಂತನು ತನಗೆ ಯಾವುದಾದರೂ ಫಲವು ಸಿದ್ಧಿಸಲಿ’–ಎಂಬ ಆಶಯದಿಂದ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವುದಿಲ್ಲ. (“ಹರಿಃ ಕರ್ತಾಪ್ಯಕರ್ತೇತಿ ಫಲಾಭಾವೇನ ಕಥ್ಯತೇ”) ಆದ್ದರಿಂದ ಆತನು ಅಕರ್ತಾ ಎಂದು ಕರೆಯಲ್ಪಡುತ್ತಾನೆ. ಶರಣಾಗತರ ಶ್ರವಣ- ಮನನಗಳೇ ಮುಂತಾದ ಜಿಜ್ಞಾಸೆಗಾಗಿ ಸೃಷ್ಟ್ಯಾದಿಗಳನ್ನು ಆತನು ಎಸಗುತ್ತಾನೆ. (ವಿಜಯಧ್ವಜೀಯ)
(ಶ್ಲೋಕ ೪೪)

1 ಭಗವಂತನಿಗೆ ವಾಸ್ತವವಾಗಿ ಶರೀರಸಂಬಂಧದಿಂದ ಹುಟ್ಟು ಇರುವುದಿಲ್ಲ. ಅವನ ಅಭಿವ್ಯಕ್ತಿಯನ್ನೇ ಅವನ ಹುಟ್ಟು ಎಂದು ಕರೆಯಲಾಗುತ್ತದೆ. “ನ ದೇಹಯೋಗಾದಿ

ತೃತೀಯಸ್ಕಂಧ ೨ನೆಯ ಅಧ್ಯಾಯ

ಉದ್ಧವನು ವಿದುರನಿಗೆ ಭಗವಂತನ ಬಾಲಲೀಲೆಗಳನ್ನು ವರ್ಣಿಸಿದುದು

ಇತಿ ಭಾಗವತಃ ಪೃಷ್ಟಃ ಕ್ಷತ್ತ್ರಾ ವಾರ್ತಾಂ ಪ್ರಿಯಾಶ್ರಯಾಮ್ * ।
ಪ್ರತಿವಕ್ತುಂ ನ ಚೋತ್ಸೇಹ ಔತ್ಕಣ್ಠ್ಯಾತ್ಸ್ಮಾರಿತೇಶ್ವರಃ ॥೧॥

ಪರೀಕ್ಷಿದ್ರಾಜನ ಪ್ರಶ್ನೆಗಳಿಗೆ ಉತ್ತರವನ್ನು ಮುಂದುವರಿಸುತ್ತಾ ಶುಕಮುನಿಗಳು ಹೀಗೆಂದರು :

"ಮಹಾರಾಜ! ಹೀಗೆ ವಿದುರನು ಪ್ರಿಯತಮನಾದ ಶ್ರೀಕೃಷ್ಣ ಪರಮಾತ್ಮನ ವಿಷಯವಾಗಿ ವಿಚಾರಮಾಡಲು–ಭಾಗವತಶ್ರೇಷ್ಠನಾದ ಉದ್ಧವನಿಗೆ ಭಗವಂತನ ಸ್ಮರಣೆಯಿಂದ ಹೃದಯವು ತುಂಬಿಹೋಯಿತು. ಭಗವಂತನ ವಿಯೋಗವ್ಯಥೆಯಿಂದ ಹೃದಯವು ಭಾರವಾಗಿ ಅವನು ಕೊಂಚ ಕಾಲ ಏನೂ ಉತ್ತರಕೊಡಲಾರದೇ ಹೋದನು.

ಉದ್ಧವನ ಭಗವದ್ಭಕ್ತಿಯಾದರೋ ಅನುಪಮವಾದುದು. ಆತನು ಐದು ವರ್ಷದ ಬಾಲಕನಾಗಿದ್ದಾಗ ಆಟ-ಪಾಟಗಳಲ್ಲಿಯೂ ಶ್ರೀಕೃಷ್ಣನಲ್ಲಿ ತನ್ಮಯನಾಗಿರುತ್ತಿದ್ದನು. ಆಟದಲ್ಲಿ ಒಮ್ಮೆ ಆತನು ಶ್ರೀಕೃಷ್ಣನ ಪೂಜೆಯಲ್ಲಿ ನಿರತನಾಗಿದ್ದಾಗ ತಾಯಿಯು ಪ್ರಾತಃಕಾಲದ ಊಟಕ್ಕೆ ಬಾರೆಂದು ಬೇಡಿಕೊಂಡರೂ ಹೋಗಲಿಲ್ಲ. ಇಂತಹವನು ಶ್ರೀಕೃಷ್ಣನ ಸೇವೆಯಲ್ಲಿಯೇ ದೀರ್ಘಕಾಲ ತೊಡಗಿ ಮುಪ್ಪಿಗೆ ಬಂದಿದ್ದಾಗ ಮಹಾಪ್ರಭುವಿನ ವಿಷಯವಾಗಿ ವಿಚಾರಮಾಡಿದರೆ ಆತನಿಗೆ ಭಗವಂತನ ಶ್ರೀಚರಣಗಳ ಸ್ಮೃತಿ

ಜನಿರ್ವಿಷ್ಣೋಃ ವ್ಯಕ್ತಿರ್ಜನಿಃ ಸ್ಮೃತಾ" (ವಿಜಯಧ್ವಜೀಯ) ಅಜಸ್ಯ = ಕರ್ಮಾಧೀನವಾದ ಹುಟ್ಟಿಲ್ಲದವನಾದ ಭಗವಂತನು. (ವೀರರಾಘವೀಯ) (ಶ್ಲೋಕ ೪೫)

* ವಾರ್ತಾಂ ಪ್ರಿಯಾಶ್ರಯಾಂ = ಪ್ರಿಯತಮನಾದ ಶ್ರೀಭಗವಂತನ ವಿಚಾರವನ್ನು, ಎಲ್ಲಕ್ಕಿಂತಲೂ ಪ್ರಿಯವಾದುದು ಆತ್ಮ. ಆ ಆತ್ಮಕ್ಕಿಂತಲೂ ಪ್ರಿಯತಮನಾದವನು "ಚೇತನಶ್ಚೇತನಾನಾಂ"–ಎಂಬಂತೆ ಆತ್ಮಕ್ಕೂ ಆತ್ಮನಾಗಿರುವ ಪರಮಾತ್ಮನೇ ತಾನೇ? ಔತ್ಕಣ್ಠ್ಯ –ಎಂದರೆ : ಮನಸ್ಸು ಕರಗುವುದಕ್ಕೆ ಕಾರಣವಾದ ಉತ್ಸುಕತೆ. (ವಿಜಯಧ್ವಜೀಯ) (ಶ್ಲೋಕ ೧)

ಯಿಂದ ಹೃದಯವು ಭಾರವಾಗುವುದು ಸಹಜವಲ್ಲವೇ? ಆ ಸ್ಥಿತಿಯಲ್ಲಿ ಆತನಿಗೆ ಪ್ರತ್ಯುತ್ತರಹೇಳಲು ಹೇಗೆ ಸಾಧ್ಯವಾದೀತು? ಆತನು ಶ್ರೀಕೃಷ್ಣ ಪಾದಾರವಿಂದಗಳ ಧ್ಯಾನಾಮೃತಪಾನದಿಂದ ಆನಂದಭರಿತನಾಗಿ ಎರಡು ಘಳಿಗೆಗಳಕಾಲ ಏನೂ ಮಾತನಾಡಲಾರದೇ ಸುಮ್ಮನಿದ್ದುಬಿಟ್ಟನು. ಆತನು ತೀವ್ರವಾದ ಭಕ್ತಿಯೋಗಸಮಾಧಿಯಲ್ಲಿ ಮುಳುಗಿಹೋಗಿದ್ದನು.

(ಶ್ಲೋಕ 1-4)

ಪರಮಾನಂದದಿಂದ ಆತನ ಮೈಯ್ಯಲ್ಲಿ ಸರ್ವಾಂಗಗಳೂ ರೋಮಾಂಚಿತವಾದುವು. ಮುಚ್ಚಿದ ಕಣ್ಣುಗಳಿಂದ ಆನಂದಾಶ್ರುಗಳು ಸೋರತೊಡಗಿದುವು. ಹೀಗೆ ಭಕ್ತಿಪ್ರವಾಹದಲ್ಲಿ ಮಗ್ನನಾಗಿದ್ದ ಆತನು ಕೃತ ಕೃತ್ಯನಾದ ಸುಕೃತಿಯೆಂದು ವಿದುರನಿಗೆ ಆತನ ಲಕ್ಷಣಗಳಿಂದ ಮನವರಿಕೆ ಯಾಯಿತು. ಆ ಭಕ್ತಶಿರೋಮಣಿಯು ಕೊಂಚಕಾಲಾನಂತರ ಭಗವಂತನ ಧಾಮದಿಂದ ಮನುಷ್ಯಲೋಕಕ್ಕೆ ಹಿಂದಿರುಗಿ ಕಣ್ಣುಗಳನ್ನು ಒರೆಸಿಕೊಂಡು ಪವಿತ್ರವಾದ ನಸುನಗೆಯೊಡನೆ ವಿದುರನಿಗೆ ಹೀಗೆ ಉತ್ತರಿಸಿದನು :

"ಅಪ್ಪ ವಿದುರ! ನಮ್ಮ ಕುಶಲದ ಬಗೆಗೆ ಪ್ರಶ್ನೆಮಾಡಿದೆಯಲ್ಲವೇ? ಕೃಷ್ಣನೆಂಬ ಸೂರ್ಯನು ಅಸ್ತಮನಹೊಂದಿಬಿಟ್ಟನು. ಎಲ್ಲೆಲ್ಲೂ ಕತ್ತಲೆಯು ತುಂಬಿಕೊಳ್ಳಲು ಕಾಲವೆಂಬ ಸರ್ಪವು ನಮ್ಮ ಕುಟುಂಬಗಳನ್ನು ಕಬಳಿಸಿ ಬಿಟ್ಟಿತು. ನಮ್ಮೆಲ್ಲರ ಮನೆಗಳೂ ಕಾಂತಿಹೀನವಾಗಿಬಿಟ್ಟಿವೆ. ಹೀಗಿರುವಾಗ ನಾನು ಏನು ಕುಶಲಸಮಾಚಾರ ಹೇಳಲಿ?

ಕೃಷ್ಣದ್ಯುಮಣಿನಿಮ್ಲೋಚೇ ಗೀರ್ಣೇಷ್ವಜಗರೇಣ ಹ ।
ಕಿಂ ನು ನಃ ಕುಶಲಂ ಬ್ರೂಯಾಂ ಗತಶ್ರೀಷು ಗೃಹೇಷ್ವಹಮ್ ॥೭॥

ಎಂತಹ ದುರದೃಷ್ಟ! ಈ ಲೋಕವೇ ಭಾಗ್ಯಹೀನವಾಗಿಬಿಟ್ಟಿತು. ಅದರಲ್ಲೂ ವಿಶೇಷವಾಗಿ ಯಾದವರು ನಿರ್ಭಾಗ್ಯರಾದರು. ಏಕೆಂದರೆ : ಅವರು ಭಗವಂತನ ಜೊತೆಯಲ್ಲೇ ಇರುತ್ತಿದ್ದರೂ ಆತನ ನಿಜಸ್ವರೂಪವನ್ನು ಗುರುತಿಸಲಾರದೇ ಹೋದರು. ನೀರಿನಲ್ಲಿರುವ ಮೀನುಗಳು ಆ ನೀರಿನಲ್ಲಿ ಪ್ರತಿಬಿಂಬಿತನಾಗಿರುವ ಚಂದ್ರನನ್ನು ಅಥವಾ ಅಲ್ಲಿ ಓಡಾಡುತ್ತಿರುವ ತೆಪ್ಪವನ್ನು ಕಂಡು ಅದು ತಮ್ಮಂತೆಯೇ ಇರುವ ಒಂದು ಜಲಚರವಿರ

ಬಹುದು ಎಂದು ಭಾವಿಸುವುವೇ ಹೊರತು–ಅದು ಅಮೃತಮಯವಾದ ಚಂದ್ರ ಅಥವಾ ದಾಟಿಸುವ ತೆಪ್ಪ ಎಂದು ಗುರುತಿಸಲಾರವಲ್ಲವೇ? ನಮ್ಮ ಯಾದವರ ಸ್ಥಿತಿಯೂ ಹಾಗೆಯೇ ಆಗಿತ್ತು.

ದುರ್ಭಗೋ ಬತ ಲೋಕೋಽಯಂ ಯದವೋ ನಿತರಾಮಪಿ ।
ಯೇ ಸಂವಸನ್ತೋ ನ ವಿದುರ್ಹರಿಂ ಮೀನಾ ಇವೋಡುಪಮ್ ॥೮॥*

ಆ ಯಾದವರೇನೂ ಸಾಮಾನ್ಯರಲ್ಲ. ಮಹಾಬುದ್ಧಿಶಾಲಿಗಳು. ಇಂಗಿತಜ್ಞರು. ಅವರು ಶ್ರೀಕೃಷ್ಣಪರಮಾತ್ಮನೊಡನೆ ಒಂದೇ ಜಾಗದಲ್ಲಿದ್ದು ಆತನೊಡನೆ ಕ್ರೀಡಿಸುತ್ತಿದ್ದರೆಂಬುದೂ ನಿಜವೇ. ಆದರೆ ಅವರು ಸರ್ವ ಭೂತಗಳಿಗೂ ಆಶ್ರಯನಾಗಿ ಸರ್ವಾಂತರ್ಯಾಮಿಯಾಗಿರುವ ಆ ವಾಸು ದೇವನನ್ನು ಒಬ್ಬ ಯಾದವಶ್ರೇಷ್ಠನೆಂದು ಮಾತ್ರವೇ ಭಾವಿಸಿದ್ದರು. ಇದಕ್ಕೆ ಕಾರಣ–ಭಗವಂತನ ಮಾಯೆ. ಹಾಗೆಯೇ ಭಗವಂತನ ಮಾಯೆಗೆ ಒಳಗಾದ ಶಿಶುಪಾಲಾದಿಗಳು ಆತನನ್ನು ಕುರಿತು ಅಮಂಗಲವಾದ ಮಾತುಗಳ ನ್ನಾಡುತ್ತಿದ್ದರು. ಆದರೆ ಭಗವಂತನಲ್ಲಿ ಮನಸ್ಸಮಾಧಿಯನ್ನು ಹೊಂದಿದ್ದ ಮಹಾತ್ಮರು ಇಂತಹವರ ಮಾತುಗಳಿಗೆ ಮರುಳಾಗಲಿಲ್ಲ. ಅವರು ಶ್ರೀಕೃಷ್ಣಪರಮಾತ್ಮನನ್ನು ಪರಮಾತ್ಮಭಾವದಿಂದಲೇ ಕಾಣುತ್ತಿದ್ದರು. ಇನ್ನು ಆತನ ಯೋಗ-ಕ್ಷೇಮಗಳ ವಿಷಯ! ಆತನು ತನ್ನ ದಿವ್ಯಮಂಗಳ ವಿಗ್ರಹವನ್ನು ಮರೆಸಿಕೊಂಡುಬಿಟ್ಟನಪ್ಪ! ತಪಸ್ಸಿದ್ಧರಾದ ಸುಕೃತಿಗಳಿಗೆ ಮಾತ್ರವೇ ಗೋಚರಿಸಲು ಯೋಗ್ಯವಾಗಿ ಎಷ್ಟೆಷ್ಟು ನೋಡಿದರೂ ಮತ್ತೂ ನೋಡುತ್ತಿರಬೇಕೆಂದು ಎನ್ನಿಸುವ ಆ ಜಗನ್ಮೋಹನಮೂರ್ತಿಯನ್ನು ಪ್ರಾಕೃತಜನರಿಗೂ ತೋರಿಸಿ ಅವರ ಮನಸ್ಸನ್ನು ಸೂರೆಗೊಂಡು ಕಣ್ಮರೆ ಯಾಗಿಬಿಟ್ಟನು. ಜಗತ್ತಿಗೇ ಕಣ್ಣಾಗಿದ್ದ ತನ್ನ ಆ ಕಮನೀಯಮೂರ್ತಿಯನ್ನು ಕಣ್ಣುತಣಿಯುವ ಮುನ್ನವೇ ಅಂತರ್ಧಾನಮಾಡಿಕೊಂಡುಬಿಟ್ಟನು. ತನ್ನ ಯೋಗಮಾಯೆಯ ಪ್ರಭಾವವನ್ನು ತೋರ್ಪಡಿಸುತ್ತಾ ಮನುಷ್ಯಲೀಲೆಗೆ

---

* ಇಲ್ಲಿರುವ 'ಉಡುಪ' ಎಂಬ ಶಬ್ದಕ್ಕೆ ಶ್ರೀಧರೀಯವು 'ಚಂದ್ರ' ನೆಂಬ ಅರ್ಥವನ್ನು ತೆಗೆದುಕೊಂಡಿದೆ. ಚಂದ್ರನು ಉಡುಪತಿ = ನಕ್ಷತ್ರಗಳ ರಾಜ. ವೀರರಾಘವೀಯವು ಅದಕ್ಕೆ 'ತೆಪ್ಪ' ಎಂಬ ಅರ್ಥವನ್ನು ತೆಗೆದುಕೊಂಡಿದೆ. 'ಉಡುಪಂ ತು ಪ್ಲವಃ ಕೋಲಃ' ಎರಡು ಅರ್ಥಗಳೂ ಇಲ್ಲಿ ಹೊಂದಿಕೆಯಾಗುತ್ತವೆ. (ಶ್ಲೋಕ ೮)

ತಕ್ಕಂತೆ ಆತನು ಸ್ವೀಕರಿಸಿದ್ದ ಆ ಶ್ರೀಮೂರ್ತಿಯ ಸೊಬಗನ್ನು ಹೇಗೆ ವರ್ಣಿಸೋಣ! ಅದು ಸೌಂದರ್ಯ-ಸೌಭಾಗ್ಯಗಳ ಪರಮನೆಲೆಯೇ ಆಗಿತ್ತು. ತಾನು ಆಭರಣಗಳರೂಪದಲ್ಲಿ ಧರಿಸಿಕೊಂಡಿದ್ದ ಭೂಷಣಗಳಿಗೂ ಭೂಷಣವಾಗಿತ್ತು. ಜಗತ್ತಿಗೆ ಮಾತ್ರವಲ್ಲದೇ ಸ್ವಯಂ ಭಗವಂತನಿಗೇ ಆಶ್ಚರ್ಯವನ್ನುಂಟುಮಾಡುವುದಾಗಿತ್ತು.

ವಿಸ್ಮಾಪನಂ ಸ್ವಸ್ಯ ಚ ಸೌಭಗರ್ಧೇಃ ಪರಂ ಪದಂ
ಭೂಷಣಭೂಷಣಾಙ್ಗಮ್ ।

ಧರ್ಮರಾಜನ ರಾಜಸೂಯಯಜ್ಞದ ಸಮಯದಲ್ಲಿ ಕಣ್ಣುಗಳಿಗೆ ಹಬ್ಬವಾಗಿದ್ದ ಆ ಭಗವಂತನ ಶ್ರೀಮೂರ್ತಿಯನ್ನು ಕಂಡು ಮೂರು ಲೋಕಗಳ ಜನರೂ–'ಬ್ರಹ್ಮದೇವರು ಮನುಷ್ಯಸೃಷ್ಟಿಯ ರಚನೆಯಲ್ಲಿರುವ ಎಲ್ಲ ಜಾಣ್ಮೆಯನ್ನೂ ಈ ರೂಪದಲ್ಲಿಯೇ ಸೇರಿಸಿಬಿಟ್ಟಿದ್ದಾನೆ'–ಎಂದು ಭಾವಿಸಿಕೊಂಡರಲ್ಲವೇ! ರಾಸಕ್ರೀಡೆಯ ಸಮಯದಲ್ಲಿ ಆತನ ಅನುರಾಗಪೂರ್ಣವಾದ ಹಾಸ್ಯ ಮತ್ತು ವಿನೋದಮಯವಾದ ಕಣ್ನೋಟಗಳಿಂದ ಸಂಭಾವಿತರಾದ ಗೋಕುಲದ ಸ್ತ್ರೀಯರು ಅದರಲ್ಲಿ ಆಳವಾಗಿ ಮನೋಲಯವನ್ನು ಹೊಂದಿ ಮನೆಯ ಕೆಲಸಗಳನ್ನು ನಿಲ್ಲಿಸಿ ಬೊಂಬೆಗಳಂತೆ ಸ್ತಬ್ಧರಾಗಿ ನಿಂತುಬಿಟ್ಟರಲ್ಲವೇ!

ಜೀವಜಗತ್ತುಗಳಿಗೆ ಅಧಿಪತಿಯಾದ ಆ ಭಗವಂತನು ಸ್ವಯಂ ಜನ್ಮರಹಿತನು. ಆದರೂ ದುಷ್ಟಶಿಕ್ಷಣ ಮತ್ತು ಶಿಷ್ಟಪರಿಪಾಲನೆಗಳಿಗಾಗಿ ತನ್ನ ಮಹಾಂಶದೊಡನೆ ಕಟ್ಟಿಗೆಯಲ್ಲಿ ಬೆಂಕಿಯು ಆವಿರ್ಭವಿಸುವಂತೆ–ಇಲ್ಲಿ ಪ್ರಕಟಗೊಂಡನು. ಸೌಮ್ಯಸ್ವರೂಪಿಗಳಾದ ದೇವತೆಗಳೇ ಮುಂತಾದವರು ಘೋರರೂಪಿಗಳಾದ ಅಸುರಾದಿಗಳಿಂದ ಪೀಡಿಸಲ್ಪಡುತ್ತಿರುವುದನ್ನು ಕಂಡು ಕರುಣಾಪೂರಿತನಾಗಿ ಆತನು ಹೀಗೆ ಆವಿರ್ಭವಿಸಿದನು. ಜನ್ಮರಹಿತನಾಗಿದ್ದರೂ ಆ ಮಹಾಪ್ರಭುವು ವಸುದೇವನ ಮನೆಯಲ್ಲಿ ಜನ್ಮವನ್ನು ತಳೆದು ಲೀಲೆಯನ್ನು ತೋರಿದನು. ಸಮಸ್ತಭೂತಗಳಿಗೂ ಅಭಯಪ್ರದನಾಗಿದ್ದರೂ ಕಂಸನೆಂಬ ಶತ್ರುವಿಗೆ ಭಯಗೊಂಡವನಂತೆ ಗೋಕುಲದಲ್ಲಿ ಕೊಂಚಕಾಲ ಅಜ್ಞಾತವಾಸಮಾಡಿದನಲ್ಲವೇ! ಅನಂತಪರಾಕ್ರಮಿಯಾಗಿದ್ದರೂ ಕಾಲಯವನಾದಿಗಳಿಗೆ ಭಯಗೊಂಡವನಂತೆ ಮಥುರಾನಗರಿ

ಯಿಂದ ಹೊರಹೊರಟು ಓಡಿಹೋದಂತೆ ಅಭಿನಯಮಾಡಿದನಲ್ಲವೇ! ಇವೆಲ್ಲವನ್ನೂ ನೆನೆಸಿಕೊಂಡರೆ ಮನಸ್ಸಿಗೆ ಕಳವಳವಾಗುತ್ತದೆ. ಮೂರು ಲೋಕಗಳ ತಂದೆಯಾಗಿದ್ದರೂ ದೇವಕೀ-ವಸುದೇವರ ಕಾಲುಗಳಿಗೆ ಎರಗಿ–'ಅಪ್ಪಾ! ಅಮ್ಮಾ! ಕಂಸನ ಭಯಕ್ಕೆ ಒಳಗಾಗಿ ನಾವು ನಿಮಗೆ ಏನೂ ಸೇವೆ ಮಾಡದೇ ಹೋದೆವು. ನಮ್ಮ ಅಪರಾಧವನ್ನು ಮನ್ನಿಸಿ ಪ್ರಸನ್ನರಾಗ ಬೇಕು'–ಎಂದು ಬೇಡಿಕೊಂಡನು. ಇದೂ ಎಂತಹ ವಿಡಂಬನೆ! ಇದನ್ನು ನೆನೆಸಿಕೊಂಡರೆ ಮನಸ್ಸಿಗೆ ದುಃಖವಾಗುತ್ತದೆ. (ಶ್ಲೋಕ 13-18)

ಕಾಲಸ್ವರೂಪವಾದ ತನ್ನ ಹುಬ್ಬುಗಳ ಲೀಲಾವಿಲಾಸದಿಂದಲೇ ಭೂಮಿಯ ಸಮಸ್ತಭಾರವನ್ನೂ ಕಳೆದುಹಾಕಿದ ಆ ಪರಮಪುರುಷನ ಪಾದಾರವಿಂದಗಳ ಧೂಳಿಯನ್ನು ಸೇವೆಮಾಡಿದ ಯಾವನು ತಾನೇ ಆತ ನನ್ನು ಮರೆಯಲಾದೀತು? ಶಿಶುಪಾಲನಾದರೋ ಶ್ರೀಕೃಷ್ಣನಲ್ಲಿ ಬದ್ಧದ್ವೇಷ ಹೊಂದಿದ್ದವನು. ಆದರೂ ಆತನು ಯೋಗಿಗಳು ಯೋಗಸಾಧನೆಯಿಂದ ಪಡೆಯಲು ಬಯಸುತ್ತಿರುವ ಪರಮಸಿದ್ಧಿಯನ್ನು ಪಡೆದುದನ್ನು ನೀವು ರಾಜಸೂಯಯಜ್ಞದ ಸಭೆಯಲ್ಲಿ ಸಾಕ್ಷಾತ್ತಾಗಿಯೇ ನೋಡಿದಿರಿ. ಇಂತಹ ಕರುಣಾಳುವಾದ ಯೋಗೇಶ್ವರನ ವಿರಹವನ್ನು ಯಾವನು ತಾನೇ ಸಹಿಸಿಯಾನು? ಆ ಶಿಶುಪಾಲನು ಮಾತ್ರವೇ ಅಲ್ಲ ; ಮಹಾಭಾರತ ಯುದ್ಧ ದಲ್ಲಿ ಕಣ್ಣುಗಳಿಗೆ ಹಬ್ಬವಾಗಿದ್ದ ಆ ಶ್ರೀಕೃಷ್ಣಪರಮಾತ್ಮನ ಮುಖಾರವಿಂದ ವನ್ನು ತಮ್ಮ ಕಣ್ಣುಗಳಿಂದ ಪಾನಮಾಡುತ್ತಿರುವಂತೆಯೇ ಅರ್ಜುನನ ಅಸ್ತ್ರ ಗಳಿಂದ ಸಂಹಾರದ ಶುದ್ಧಿಯನ್ನು ಪಡೆದ ಇನ್ನೂ ನೂರಾರು ಮಂದಿ ಯುದ್ಧ ವೀರರಾದ ಮನುಷ್ಯಶ್ರೇಷ್ಠರೂ ಆತನ ಪರಮಧಾಮವನ್ನು ಪಡೆದರು. ಆತನ ಯೋಗಮಾಯೆಯನ್ನು ವರ್ಣಿಸಲು ಅಳವೇ? ಆತನು ಮೂರು ಲೋಕಗಳ ಸ್ವಾಮಿಯು ಎಣೆ-ಮಿಗಿಲಿಲ್ಲದ ಮಹಾಪ್ರಭುವು. ಸ್ವಾರಾಜ್ಯ ಲಕ್ಷ್ಮಿಗೇ ಒಡೆಯನಾಗಿ ಪರಿಪೂರ್ಣಕಾಮನಾದವನು. ಬಗೆ-ಬಗೆಯ ಕಾಣಿಕೆ ಗಳನ್ನು ತಂದೊಪ್ಪಿಸುತ್ತಿರುವ ಇಂದ್ರನೇ ಮುಂತಾದ ಲೋಕಪಾಲರ ಕಿರೀಟ ಗಳ ಅಗ್ರಭಾಗಗಳಿಂದ ಪೂಜಿತವಾದ ಪಾದಪೀಠವುಳ್ಳವನು. ಹಾಗಿದ್ದರೂ ಆತನು ಭೂಮಿಯ ಒಂದು ಭಾಗಕ್ಕೆ ಅಧಿಪತಿಯಾಗಿ ಸಿಂಹಾಸನದ

ಮೇಲೆ ಕುಳಿತಿದ್ದ ಉಗ್ರಸೇನನ ಮುಂದೆ ನಿಂತುಕೊಂಡು–'ಜೀಯಾ! ನಮ್ಮ ಅರಿಕೆಯನ್ನು ಲಾಲಿಸಬೇಕು'–ಎಂದು ಬಿನ್ನಪಮಾಡುತ್ತಿದ್ದ ದೃಶ್ಯವನ್ನು ನೆನೆಸಿಕೊಂಡರೆ ಆತನ ಸೇವಕರಾದ ನಮ್ಮ ಮನಸ್ಸಿಗೆ ತುಂಬಾ ನೋವುಂಟಾಗುತ್ತಿದೆ. ಪಾಪಿಷ್ಠೆಯಾದ ಪೂತನಿಯು ಆತನನ್ನು ಕೊಂದು ಹಾಕಿಬಿಡಬೇಕೆಂಬ ಸ್ಪಷ್ಟವಾದ ಅಭಿಲಾಷೆಯಿಂದ ಸ್ತನಗಳಲ್ಲಿ ಕಾಲಕೂಟ ವಿಷವನ್ನು ತುಂಬಿಕೊಂಡು ಆತನಿಗೆ ಆ ಸ್ತನ್ಯವನ್ನು ಕುಡಿಸಿದಳು. ಆದರೆ ಭಗವಂತನು ಆಕೆಗೆ ನಿಜವಾದ ದಾದಿಗೆ ಸಿಕ್ಕಬೇಕಾದ ಸದ್ಗತಿಯನ್ನೇ ಕರುಣಿಸಿದನಲ್ಲವೇ! ಶರಣುಹೊಂದುವುದಕ್ಕೆ ಯೋಗ್ಯವಾದ ಕರುಣಾಳುವು ಆತನಲ್ಲದೇ ಮತ್ತೆ ಯಾರಿದ್ದಾರೆ, ವಿದುರ! ಈ ಅಸುರರನ್ನೂ ನಾನು ಭಗವದ್ಭಕ್ತರೆಂದೇ ಪರಿಗಣಿಸುತ್ತೇನೆ. ಏಕೆಂದರೆ : ಅವರ ಚಿತ್ತವು ಸದಾ ಶ್ರೀಕೃಷ್ಣಪರಮಾತ್ಮನಲ್ಲಿಯೇ ಆಸಕ್ತವಾಗಿರುತ್ತಿತ್ತು. ಯುದ್ಧಭೂಮಿಯಲ್ಲಿ ಸುದರ್ಶನಚಕ್ರಧಾರಿಯಾದ ಶ್ರೀಭಗವಂತನನ್ನು ತನ್ನ ಹೆಗಲಿನ ಮೇಲೆ ಬಿಜಯಮಾಡಿಸಿಕೊಂಡು ಬರುತ್ತಿದ್ದ ಶ್ರೀಗರುಡನ ದರ್ಶನವಾಗುತ್ತಿತ್ತು.

(ಶ್ಲೋಕ 19-24)

ಬ್ರಹ್ಮದೇವರ ಪ್ರಾರ್ಥನೆಯಂತೆ ಭೂಮಿಯ ಭಾರವನ್ನಿಳುಹಿ ಆಕೆಗೆ ಸುಖವನ್ನುಂಟುಮಾಡುವುದಕ್ಕೋಸ್ಕರ ಆ ಭಗವಂತನು ಕಂಸನ ಕಾರಾಗೃಹ ದಲ್ಲಿ ವಸುದೇವ-ದೇವಕಿಯರ ಪುತ್ರನಾಗಿ ಅವತರಿಸಿದನು. ಆಗ ಕಂಸನಿಗೆ ಭಯಪಟ್ಟ ತಂದೆ ವಸುದೇವನು ಆತನನ್ನು ನಂದಗೋಕುಲಕ್ಕೆ ಕೊಂಡೊಯ್ದು ಇರಿಸಿದನು. ಅಲ್ಲಿ ಆತನು ತನ್ನ ಪ್ರಭಾವವು ಹೊರಗೆ ಯಾರಿಗೂ ತಿಳಿಯಲಾಗದಂತೆ ಅಡಗಿಕೊಂಡು ಹನ್ನೊಂದು ವರ್ಷಗಳ ಕಾಲ ಬಲರಾಮನೊಡನೆ ವಾಸವಾಗಿದ್ದನು. ಹಕ್ಕಿಗಳ ಹಿಂಡು ಕಲ-ಕಲನಿನಾದ ಮಾಡುತ್ತಾ ಸುಖವಾಗಿ ವಾಸಮಾಡುತ್ತಿದ್ದ ಯಮುನಾತೀರದ ಉದ್ಯಾನವನ ದಲ್ಲಿ ಕರುಗಳನ್ನು ಮೇಯಿಸುತ್ತಾ ಗೊಲ್ಲಬಾಲಕರೊಡನೆ ಕ್ರೀಡಿಸುತ್ತಿದ್ದನು. ಗೋಕುಲನಿವಾಸಿಗಳ ದೃಷ್ಟಿಯನ್ನು ಸೆಳೆಯುವಂತಹ ನಾನಾಬಾಲಲೀಲೆ ಗಳನ್ನು ಅಲ್ಲಿ ಪ್ರಭುವು ಪ್ರಕಟಿಸಿದನು. ಕೆಲವೊಮ್ಮೆ ಅಳುವಂತೆಯೂ–ಕೆಲವು ವೇಳೆ ನಗುವಂತೆಯೂ ಕಾಣಿಸಿಕೊಳ್ಳುತ್ತಿದ್ದನು. ಕೆಲವೊಮ್ಮೆ ಸಿಂಹದ ಮರಿಯಂತೆ ಮುಗ್ಧದೃಷ್ಟಿಯಿಂದ ನೋಡುತ್ತಿರುತ್ತಿದ್ದನು. ಸ್ವಲ್ಪ ವಯಸ್ಸು

ಏರಿದಾಗ ಬಿಳಿಯ ಎತ್ತುಗಳನ್ನೂ ಬಗೆ-ಬಗೆಯ ಬಣ್ಣಗಳ ಹಸುಗಳನ್ನೂ ಮೇಯಿಸುತ್ತಾ ಕೊಳಲನ್ನೂದಿ ಅದರ ಇಂಚರದಿಂದ ಗೋವಳರನ್ನು ಸಂತೋಷಪಡಿಸುತ್ತಿದ್ದನು. ಆ ಸಮಯದಲ್ಲಿ ಆತನನ್ನು ಸಂಹರಿಸಿಬಿಡ ಬೇಕೆಂದು ಕಂಸನು, ಮಾಯಾವಿಗಳೂ–ಕಾಮರೂಪಿಗಳೂ ಆದ ಅನೇಕ ರಾಕ್ಷಸರನ್ನು ಕಳುಹಿಸಿದಾಗ–ಹುಡುಗರು ಆಟದ ಸಾಮಾನುಗಳನ್ನು ಒಡೆದು ಹಾಕುವಂತೆ–ಭಗವಂತನು ಲೀಲಾಜಾಲವಾಗಿ ಅವರನ್ನು ಬಡಿದುಹಾಕಿ ಬಿಟ್ಟನು. ಕಾಳಿಂಗನಾಗನನ್ನು ಮರ್ದನಮಾಡಿ, ವಿಷಮಿಶ್ರಿತವಾದ ನೀರು ಕುಡಿದು ವಿಪತ್ತಿಗೊಳಗಾಗಿದ್ದ ಗೋವುಗಳನ್ನೂ–ಗೋವಳರನ್ನೂ ಬದುಕಿಸಿ ಆ ಮಡುವಿನ ನೀರು ಶುದ್ಧಸ್ವರೂಪಕ್ಕೆ ಬರುವಂತೆ ಮಾಡಿದನು. ಗೋಪ ರಾಜನಾದ ನಂದಗೋಪನಲ್ಲಿದ್ದ ಹೇರಳವಾದ ಹಣವು ಸದ್ವಿನಿಯೋಗವಾಗ ಲೆಂದು ಅವನಿಂದ ಶ್ರೇಷ್ಠಬ್ರಾಹ್ಮಣರ ಮೂಲಕ ಗೋವರ್ಧನಪೂಜಾರೂಪ ವಾದ ಗೋಯಜ್ಞವನ್ನು ಆ ಭಗವಂತನು ಮಾಡಿಸಿದನು. ಅದರಿಂದ ತನಗೆ ಮಾನಭಂಗವಾಯಿತೆಂದು ಭಾವಿಸಿ ಕಡುಕೋಪಗೊಂಡ ಇಂದ್ರನು ಗೋಕುಲವನ್ನು ಧ್ವಂಸಮಾಡಿಬಿಡುವುದಕ್ಕೋಸ್ಕರ ಭಯಂಕರವಾದ ಜಡಿ ಮಳೆಯನ್ನು ಸುರಿಸತೊಡಗಲು–ಸ್ವಾಮಿಯು ಕರುಣಾಪೂರ್ಣನಾಗಿ ಗೋವರ್ಧನಪರ್ವತವನ್ನು ನಾಯಿಯ ಕೊಡೆಯಂತೆ ಲೀಲಾಜಾಲವಾಗಿ ಎತ್ತಿಹಿಡಿದು ಭೀತಿಗೊಂಡಿದ್ದ ಗೋವುಗಳನ್ನೂ–ಗೋವಳರನ್ನೂ ಸಂರಕ್ಷಿಸಿ ದನು. ಸಾಯಂಕಾಲದಲ್ಲಿ ಇಡೀ ನಂದಗೋಕುಲದಲ್ಲಿ ಶರತ್ಕಾಲದ ಬೆಳದಿಂಗಳು ಚೆಲ್ಲುತ್ತಿರಲು ಆ ಸಮಯವನ್ನು ಸಂಭಾವಿಸುತ್ತಾ ಆ ಮುರಳೀ ಮೋಹನನು ಇಂಪಾಗಿ ಗಾನಮಾಡುತ್ತಾ ಗೋಪಸ್ತ್ರೀಸಮೂಹದೊಡನೆ ರಾಸಕ್ರೀಡೆಯಾಡಿದನು.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೨ನೆಯ ಅಧ್ಯಾಯವು ಮುಗಿಯಿತು.

ವಿದುರೋದ್ಧಸಂವಾದ (ಮುಂದುವರಿದಿದೆ.)

ಉದ್ಧವನು ಮುಂದುವರಿಸುತ್ತಾ ಹೇಳಿದನು :

ತತಃ ಸ ಆಗತ್ಯ ಪುರಂ ಸ್ವಪಿತ್ರೋ-
ಶ್ಚಿಕೀರ್ಷಯಾ ಶಂ ಬಲದೇವಸಂಯುತಃ ।
ನಿಪಾತ್ಯ ತುಙ್ಗಾದ್ರಿಪುಯೂಥನಾಥಂ
ಹತಂ ವ್ಯಕರ್ಷದ್ವ್ಯಸುಮೋಜಸೋರ್ವ್ಯಾಮ್ ॥೧॥

ಅನಂತರ ಶ್ರೀಕೃಷ್ಣಪರಮಾತ್ಮನು ತನ್ನ ತಂದೆ-ತಾಯಿಗಳಿಗೆ ಸುಖವನ್ನುಂಟುಮಾಡುವುದಕ್ಕೋಸ್ಕರ ಬಲರಾಮದೇವನೊಡನೆ ಮಧುರಾ ನಗರಿಗೆ ದಯಮಾಡಿಸಿ ಶತ್ರುಸಮುದಾಯಕ್ಕೆ ಒಡೆಯನಾದ ಕಂಸನನ್ನು ಅವನ ಉನ್ನತವಾದ ಸಿಂಹಾಸನದಿಂದ ಕೆಳಕ್ಕೆ ಕೆಡವಿ, ಸಂಹರಿಸಿ ಆತನ ಶವವನ್ನು ನೆಲದ ಮೇಲೆ ಎಳೆದುಹಾಕಿದನು.

ಸಾಂದೀಪಿನೀಆಚಾರ್ಯರ ಬಳಿಗೆ ವಿದ್ಯಾಭ್ಯಾಸಕ್ಕಾಗಿ ಹೋಗಿ ಅವರು ಒಂದು ಬಾರಿ ಹೇಳಿಕೊಟ್ಟ ಮಾತ್ರದಿಂದಲೇ ವೇದ-ವೇದಾಂಗಾದಿಗಳೆಲ್ಲವನ್ನೂ ಸಂಪೂರ್ಣವಾಗಿ ಕಲಿತುಕೊಂಡನು. ಆ ಆಚಾರ್ಯರಿಗೆ ಗುರುದಕ್ಷಿಣಾರೂಪವಾಗಿ ಅವರ ಮೃತನಾಗಿದ್ದ ಪುತ್ರನನ್ನು ಪಂಚಜನನೆಂಬ ರಾಕ್ಷಸನ ಹೊಟ್ಟೆಯನ್ನು ಸೀಳಿ ಯಮಪುರಿಯಿಂದ ತಂದುಕೊಟ್ಟನು. ಇದು ಎಂತಹ ಅದ್ಭುತ! ಅನಂತರ ಆತನು ರುಕ್ಮಿಣಿಯನ್ನು ಗೆದ್ದುತಂದ ವಿಷಯವೂ ಪರಮಾದ್ಭುತವಾದುದು. ಲಕ್ಷ್ಮೀದೇವಿಗೆ ಸಮಾನಳಾದ* ಆ ಭೀಷ್ಮಕಪುತ್ರಿಯ ಸೌಂದರ್ಯಾದಿಗಳಿಂದ ಆಕೃಷ್ಟರಾಗಿ ಆಕೆಯನ್ನು ವಿವಾಹವಾಗಲೆಂದು ಶಿಶುಪಾಲನೇ ಮುಂತಾದ ಅತಿಬಲಿಷ್ಠರಾದ ರಾಜರೂ

---

* ಶ್ರಿಯಃ ಸವರ್ಣೇನ = ಲಕ್ಷ್ಮೀದೇವಿಗೆ ಸಮಾನವಾದ ರೂಪವನ್ನು ಹೊಂದಿದ್ದ ಕಾರಣ ಆಕೆಯ ಆ ಸೌಂದರ್ಯದಿಂದ ಆಕೃಷ್ಟರಾಗಿ (ಶ್ರೀಧರೀಯ) ರುಕ್ಮಿಣಿ ಗೋಸ್ಕರ ಕ್ಷತ್ರಿಯತ್ವಮಾತ್ರಯೋಗ್ಯತೆಯಿಂದ ಆಹ್ವಾನಿತರಾಗಿದ್ದ ಕ್ಷತ್ರಿಯರನ್ನು ಭಗವಂತನು ಮೆಟ್ಟಿದನು. ಅವರ ಶ್ರೀಯನ್ನು ಅಪಹರಿಸಲು ಭಗವಂತನು ಅವರ ತಲೆಯ ಮೇಲೆ ಕಾಲಿಟ್ಟನು. (ವಿಜಯಧ್ವಜೀಯ) ಸುಪರ್ಣಃ = ಪರಮಾನಂದರೂಪನು. ಸುಪರ್ಣಃ = ಎಂಬ ಪದದಿಂದ ಅನಾಯಾಸವಾಗಿ ಆಕೆಯನ್ನು ಭಗವಂತನು ಗೆದ್ದು

ಮತ್ತು ಆತನ ಸಹಾಯಕರೂ ಸ್ವಯಂವರದ ಕರೆಗೆ ಓಗೊಟ್ಟು ಸಭೆಗೆ ಬಂದಿದ್ದರು. ಆದರೆ ಶ್ರೀಕೃಷ್ಣನು ತನ್ನ ಪರಾಕ್ರಮದಿಂದ ಅವರ ತಲೆಗಳನ್ನು ಮೆಟ್ಟಿ ಅವರ ಕಣ್ಣೆದುರಿಗೇ ತನ್ನ ಆ ನಿತ್ಯಸಂಗಾತಿಯನ್ನು ಗಾಂಧರ್ವವಿಧಿಯಿಂದ ವಿವಾಹಮಾಡಿಕೊಳ್ಳುವುದಕ್ಕೋಸ್ಕರ ಕರೆತಂದನು. ಗರುಡನು ಅಮೃತಕಲಶವನ್ನು ಜಯಿಸಿ ತಂದಂತೆ ಆಕೆಯನ್ನು ಜಯಿಸಿತಂದನು. "ಜಹ್ರೇ **ಪದಂ ಮೂರ್ಧ್ನಿ ದಧತ್ಸುಪರ್ಣಃ**" ನಗ್ನಜಿತನ ಪುತ್ರಿಯಾದ ಸತ್ಯೆಯನ್ನು ಆತನು ಜಯಿಸಿತಂದ ಪ್ರಕರಣವೂ ಸ್ಮರಣೀಯವಾದುದು. ಮೂಗುದಾರ ಪೋಣಿಸಲ್ಪಡದೇ ಇದ್ದ ಏಳು ಕೊಬ್ಬಿದ ಗೂಳಿಗಳನ್ನು ಹಿಡಿದು ಅವುಗಳಿಗೆ ಮೂಗುದಾರ ಹಾಕಿ ಅವುಗಳ ಕೊಬ್ಬನ್ನಡಗಿಸಿ ವೀರ್ಯಶುಲ್ಕೆಯಾಗಿದ್ದ ಆ ರಾಜಕುಮಾರಿಯನ್ನು ಆತನು ವಿವಾಹವಾದನು. ತಮಗೆ ಮಾನಭಂಗವಾಯಿತೆಂದು ಭಾವಿಸಿ ಶಸ್ತ್ರಗಳನ್ನೆತ್ತಿಕೊಂಡು ಆಕೆಯನ್ನು ಕಿತ್ತುಕೊಳ್ಳಲು ಬಂದ ಮೂರ್ಖರಾದ ರಾಜರ ಅಹಂಕಾರವನ್ನು ಆಗ ಅವನು ಮರ್ದನಮಾಡಿದನು. ತಾನು ಅವರ ಶಸ್ತ್ರಗಳಿಂದ ಗಾಯಗೊಳ್ಳದೆಯೇ ಅವರನ್ನು ತನ್ನ ಶಸ್ತ್ರಗಳಿಂದ ಕೊಂದುಹಾಕಿದನು. ಇನ್ನು ಆತನು ಪಾರಿಜಾತ ವೃಕ್ಷವನ್ನು ಇಂದ್ರನಿಂದ ಜಯಿಸಿತಂದ ಪ್ರಕರಣ. ಆ ಭಗವಂತನು ಸ್ತ್ರೀಸಕ್ತನಾದ ಪುರುಷನಂತೆ ಅಭಿನಯಿಸುತ್ತಾ ಪ್ರಿಯೆಯಾದ ಸತ್ಯಭಾಮೆಯನ್ನು ಸಂತೋಷಪಡಿಸುವುದಕ್ಕೋಸ್ಕರ ಸ್ವರ್ಗದಿಂದ ಕಲ್ಪವೃಕ್ಷವನ್ನು ಕಿತ್ತುತಂದನು. ನಿಶ್ಚಯವಾಗಿಯೂ ತನ್ನ ಹೆಂಗಸರಿಗೆ ಕ್ರೀಡಾಮೃಗದಂತೆ ವಶನಾದ ದೇವೇಂದ್ರನೇ ಕ್ರೋಧದಿಂದ ಆ ಸಮಯದಲ್ಲಿ ತನ್ನ ಸೈನಿಕರೊಡನೆ ಆತ ನನ್ನು ಎದುರಿಸುವ ಸಾಹಸಮಾಡಿದ್ದನು. ಭಗವಂತನು ಮಾಡಿದ ನರಕಾಸುರವಧೆಯ ಲೀಲೆಯೂ ಸ್ಮರಣೆಗೆ ಬರುತ್ತಿದೆ. ತನ್ನ ರಾಕ್ಷಸಾಕಾರದಿಂದ ಆಕಾಶವನ್ನೇ ನುಂಗುವಂತಿದ್ದ ಆ ಭೂದೇವಿಯ ಪುತ್ರನಾದ ಅಸುರನನ್ನು ಸ್ವಾಮಿಯು ಯುದ್ಧದಲ್ಲಿ ಸಂಹಾರಮಾಡಿದನು. ಆಗ ಭೂದೇವಿಯ

ತಂದನು ಎಂದು ಸೂಚಿತವಾಗುತ್ತದೆ. 'ಸ್ವಭಾಗಂ'–ಎಂಬ ಪದದಿಂದ ಆಕೆಯು ಭಗವಂತನಿಗೆ ಮಾತ್ರವೇ ಯೋಗ್ಯಳು–ಎಂಬುದು ಸ್ಪಷ್ಟಪಡುತ್ತದೆ. (ವಿಜಯಧ್ವಜೀಯ) ಶ್ರೀದೇವಿಗೆ ಸಮಾನವಾದ ರೂಪವುಳ್ಳ ರುಕ್ಮಿಣಿಯ ನಿಮಿತ್ತವಾಗಿ ವಿವಾಹಕ್ಕೆ ಆಹ್ವಾನಪಡೆದು ಬಂದಿದ್ದ ಶಿಶುಪಾಲಾದಿಗಳನ್ನು. (ವೀರರಾಘವೀಯ) (ಶ್ಲೋಕ ೩.)

ಪ್ರಾರ್ಥನೆಯನ್ನು ಮನ್ನಿಸಿ ಆತನು ನರಕಾಸುರನ ಪುತ್ರನಾದ ಭಗದತ್ತನಿಗೆ ಆತನ ರಾಜ್ಯವನ್ನು ಕೊಟ್ಟು ಅಂತಃಪುರವನ್ನು ಪ್ರವೇಶಿಸಿದನು. ಅಲ್ಲಿ ಆ ಭೂಪುತ್ರನಾದ ಅಸುರನಿಂದ ಅಪಹರಿಸಿ ತರಲ್ಪಟ್ಟಿದ್ದ ರಾಜಪುತ್ರಿಯರು ಆ ದೀನಬಂಧುವಾದ ಶ್ರೀಹರಿಯನ್ನು ನೋಡಿದೊಡನೆಯೇ ಎದ್ದು ನಿಂತು ಹರ್ಷ, ಲಜ್ಜೆ ಮತ್ತು ಪ್ರೇಮಪೂರ್ಣವಾದ ದೃಷ್ಟಿಗಳಿಂದ ಒಡನೆಯೇ ಆತನನ್ನು ತಮ್ಮ ಪತಿಯನ್ನಾಗಿ ವರಿಸಿಬಿಟ್ಟರು. ಆಗ ಭಗವಂತನು ತನ್ನ ಯೋಗಶಕ್ತಿಯಿಂದ ಆ ಎಲ್ಲ ಹೆಂಗಸರಿಗೂ ಅನುಗುಣವಾಗಿ ಅಷ್ಟೇ ರೂಪಗಳನ್ನು ತಾಳಿ ಬೇರೆ-ಬೇರೆ ಅರಮನೆಗಳಲ್ಲಿ ಒಂದೇ ಮುಹೂರ್ತದಲ್ಲಿ ಅವರೆಲ್ಲರನ್ನೂ ವಿಧಿಪೂರ್ವಕವಾಗಿ ವಿವಾಹವಾದನಷ್ಟೇ! ಅಲ್ಲಿ ತನ್ನ ಲೀಲೆಯನ್ನು ವಿಸ್ತರಿಸುವುದಕ್ಕಾಗಿ ಆತನು ಅವರಲ್ಲಿ ಪ್ರತಿಯೊಬ್ಬರ ಗರ್ಭದಿಂದಲೂ, ಸರ್ವಗುಣಗಳಿಂದಲೂ ತನ್ನನ್ನೇ ಹೋಲುವಂತಹ ಹತ್ತು-ಹತ್ತು ಮಂದಿ ಪುತ್ರರನ್ನು ಪಡೆದುಕೊಂಡದ್ದೂ ಪ್ರಸಿದ್ಧವಾಗಿದೆ. (ಶ್ಲೋಕ 2-9)

ದುಷ್ಟಶಿಕ್ಷಣಮಾಡುವಾಗ ಕೆಲವು ದುಷ್ಟರನ್ನು ತಾನೇ ದಂಡಿಸಿದನು. ಮತ್ತೆ ಕೆಲವರನ್ನು ತನ್ನವರ ಮೂಲಕ ಸಂಹಾರಮಾಡಿಸಿದನು. ಕಾಲಯವನ, ಜರಾಸಂಧ, ಶಾಲ್ವರೇ ಮುಂತಾದವರು ತಮ್ಮ-ತಮ್ಮ ಸೇನೆಗಳೊಡನೆ ಮಧುರೆಯನ್ನೂ–ದ್ವಾರಕೆಯನ್ನೂ ಮುತ್ತಿದಾಗ ಭಗವಂತನು ಮುಚುಕುಂದ-ಭೀಮಸೇನರೇ ಮುಂತಾದ ಸ್ವಜನರಿಗೆ ತನ್ನ ಅಲೌಕಿಕಶಕ್ತಿಯನ್ನು ಅನುಗ್ರಹಿಸಿ ಅವರ ಮೂಲಕ ತಾನೇ ಅವರನ್ನು ಸಂಹರಿಸಿದನು. ಶಂಬರ, ದ್ವಿವಿದ, ಬಾಣ, ಮುರ, ಬಲ್ವಲ ಮತ್ತು ದಂತವಕ್ತ್ರಾದಿಗಳಲ್ಲಿಯೂ ಕೆಲವರನ್ನು ತಾನೇ ನಿಗ್ರಹಿಸಿದನು. ಮತ್ತೆ ಕೆಲವರನ್ನು ಪ್ರದ್ಯುಮ್ನನೇ ಮುಂತಾದವರ ಮೂಲಕ ಸಂಹಾರಮಾಡಿಸಿದನು. ಅನಂತರ ಭಗವಂತನು ನಿನ್ನ ಅಣ್ಣಂದಿರಾದ ಧೃತರಾಷ್ಟ್ರ ಮತ್ತು ಪಾಂಡು–ಇವರ ಪುತ್ರರ ಪಕ್ಷವನ್ನು ವಹಿಸಿ ಯುದ್ಧಕ್ಕೆ ಬಂದ ರಾಜರನ್ನೂ ಯಮನಿಗೆ ಅತಿಥಿಗಳನ್ನಾಗಿಸಿದನು. ಆ ರಾಜರ ಸೇನೆಗಳಾದರೋ ಎಷ್ಟು ದೊಡ್ಡವು! ಅವುಗಳು ಕುರುಕ್ಷೇತ್ರಕ್ಕೆ ಬಂದು ನೆರೆದಾಗ ಇಡೀ ಭೂಮಿಯೇ ಆ ಭಾರಕ್ಕೆ ನಡುಗಿಹೋಯಿತು. ದುಷ್ಟದುರ್ಯೋಧನನು ಕರ್ಣ, ದುಃಶಾಸನ ಮತ್ತು ಶಕುನಿಗಳ ದುರಾಲೋಚನೆಗೆ ಒಳಗಾಗಿ ತನ್ನ ಆಯುಸ್ಸು-

ಸಂಪತ್ತು-ಕಾಂತಿಗಳನ್ನು ಕಳೆದುಕೊಂಡು ಭೀಮಸೇನನ ಗದೆಯಿಂದ ತೊಡೆಗಳು ಮುರಿದು ಪರಿವಾರಸಮೇತನಾಗಿ ನೆಲದ ಮೇಲೆ ಬಿದ್ದಿರುವು ದನ್ನು ನೋಡಿದರೂ ಆತನಿಗೆ ಪೂರ್ತಿಯಾಗಿ ಸಮಾಧಾನ-ಸಂತೃಪ್ತಿ ಗಳುಂಟಾಗಲಿಲ್ಲ. ಏಕೆಂದರೆ : ದ್ರೋಣ, ಭೀಷ್ಮ, ಅರ್ಜುನ, ಭೀಮಸೇನ–ಇವರುಗಳ ಮೂಲಕ ಹದಿನೆಂಟು ಅಕ್ಷೌಹಿಣೀಸೈನ್ಯವು ಸಂಹರಿಸಲ್ಪಟ್ಟರೂ ಭೂಮಿಯ ಭಾರವು ಏನು ಇಳಿದಂತಾಯಿತು? ನನ್ನ ಅಂಶಭೂತರಾಗಿರುವ ಪ್ರದ್ಯುಮ್ನನೇ ಮುಂತಾದವರ ಬಲದಿಂದ ಕೊಬ್ಬಿಹೋಗಿರುವ ಯಾದವರ ಸಹಿಸಲಸದಳವಾದ ಬಲವೂ ಇನ್ನೂ ಉಳಿದೇ ಇದೆಯಲ್ಲಾ! ಎಂದು ಆತನು ಚಿಂತಿಸಿದನು. ‘ಮುಂದೆ ಈ ಯಾದವರು ಮದ್ಯಪಾನದಿಂದ ಮತ್ತೇರಿ ಕಣ್ಣುಗಳು ಕೆಂಪೇರಲು ಪರಸ್ಪರ ಹೊಡೆದಾಡಿ ನಾಶಹೊಂದಬೇಕು. ಇವರನ್ನು ಸಂಹರಿಸಲು ಬೇರಾವ ಉಪಾಯವೂ ಇಲ್ಲ. ಆದ್ದರಿಂದ ಹೀಗೆ ಆಗುವಂತೆ ನಾನು ಸಂಕಲ್ಪಿಸಿ ಆ ದಿಸೆಯಲ್ಲಿ ಪ್ರಯತ್ನಮಾಡಿದರೆ ಅವರು ತಾವಾಗಿಯೇ ಕಾದಾಡಿ ಮಡಿಯುವರು’–ಎಂದು ಯೋಜನೆಮಾಡಿದನು.

(ಶ್ಲೋಕ 10-15)

ಪ್ರಭುವು ಹೀಗೆ ಆಲೋಚನೆಮಾಡಿ ಧರ್ಮರಾಜನಿಗೆ ಅವನ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿಸಿ ಅವನನ್ನು ನೆಲೆಗೊಳಿಸಿದನು. ಬಂಧು ಗಳಿಗೂ–ಮಿತ್ರರಿಗೂ ಆನಂದವನ್ನುಂಟುಮಾಡಿದನು. ರಾಜಧರ್ಮಾದಿ ಗಳನ್ನು ತಿಳಿಸಿ ಅವರಿಗೆ ಸನ್ಮಾರ್ಗವನ್ನು ಉಪದೇಶಿಸಿದನು. ಉತ್ತರೆಯ ಗರ್ಭಮಾತ್ರದಿಂದ ಪೂರುವಿನ ವಂಶಬೀಜವು ಉಳಿದಿದ್ದಾಗ ಅಶ್ವತ್ಥಾಮನು ತನ್ನ ಬ್ರಹ್ಮಶಿರಸ್ಸೆಂಬ ಅಸ್ತ್ರದಿಂದ ಅದನ್ನು ಸುಟ್ಟುಹಾಕಲು ಯತ್ನಿಸಿ ಕುಲದ ಕುಡಿಯನ್ನೇ ಸುಟ್ಟುಹಾಕುವುದರಲ್ಲಿದ್ದನು. ಆದರೆ ಭಗವಂತನು ಅಭಿಮನ್ಯು ವಿನ ಆ ಸಂತಾನವನ್ನು ಕಾಪಾಡಿದನು. ಧರ್ಮರಾಜ ಯುಧಿಷ್ಠಿರನಿಂದ ಮೂರು ಅಶ್ವಮೇಧಯಜ್ಞಗಳನ್ನು ಮಾಡಿಸಿದನು. ಆ ಮಹಾತ್ಮನು ಶ್ರೀಕೃಷ್ಣನನ್ನು ಅನುವರ್ತಿಸುತ್ತಾ ತನ್ನ ತಮ್ಮಂದಿರೊಡನೆ ಭೂರಕ್ಷಣೆ-ರಾಜ್ಯಭಾರಗಳನ್ನು ನಿರ್ವಹಿಸುತ್ತಾ ಸುಖವಾಗಿದ್ದನು.

ಆ ಮೇಲೆ ವಿಶ್ವಾತ್ಮನಾದ ಆ ಭಗವಂತನು ದ್ವಾರಕೆಗೆ ಹಿಂದಿರುಗಿ ಅಲ್ಲಿ ಲೋಕ ಮತ್ತು ವೇದಗಳ ಮರ್ಯಾದೆಯನ್ನು ಪಾಲಿಸುತ್ತಾ ಸಾಂಖ್ಯ-

ಯೋಗಗಳಿಗೆ ಅನುಗುಣವಾಗಿ ನಿರ್ಲಿಪ್ತನಾಗಿ ಕಾಮ-ಸುಖಗಳನ್ನು ಅನು ಭವಿಸುತ್ತಿದ್ದನು. ತನ್ನ ಮಧುರವಾದ ಮುಗುಳುನಗೆ, ಸ್ನೇಹಪೂರ್ಣವಾದ ಕಟಾಕ್ಷ, ಅಮೃತಸದೃಶವಾದ ವಾಣಿ, ನಿರ್ಮಲವಾದ ನಡತೆ ಮತ್ತು ಸೌಂದರ್ಯ-ಕಾಂತಿಗಳಿಗೆ ನೆಲೆಮನೆಯಾದ ತನ್ನ ದಿವ್ಯಮಂಗಳವಿಗ್ರಹ–ಇವು ಗಳಿಂದ ಇಹಲೋಕ-ಪರಲೋಕಗಳನ್ನೂ ಮತ್ತು ವಿಶೇಷವಾಗಿ ಯಾದವ ರನ್ನೂ ಸಂತೋಷಪಡಿಸುತ್ತಿದ್ದನು. ಹಾಗೂ ರಾತ್ರಿಯಲ್ಲಿ ತನ್ನ ಸ್ತ್ರೀಜನರಿಗೆ ಕೊಂಚಕಾಲದ ಸುಖವನ್ನು ತೋರಿಸುತ್ತಾ ಸಮಯೋಚಿತವಾದ ವಿಹಾರ ದಿಂದ ಅವರನ್ನು ಸಂತೋಷಪಡಿಸುತ್ತಿದ್ದನು. ಹೀಗೆ ಅನೇಕವರ್ಷಗಳ ಕಾಲ ವಿಹರಿಸುತ್ತಿದ್ದ ಆತನಿಗೆ ಗೃಹಸ್ಥಾಶ್ರಮಕ್ಕೆ ಸಂಬಂಧಪಟ್ಟ ಭೋಗಗಳಲ್ಲಿ ವೈರಾಗ್ಯವುಂಟಾಯಿತು. ವಾಸ್ತವವಾಗಿ ಈ ಭೋಗಸಾಮಗ್ರಿಗಳು ಭಗವಂತನಿಗೆ ಅಧೀನವಾದುವು ಮತ್ತು ಇವುಗಳನ್ನು ಅನುಭವಿಸುವ ಜೀವನೂ ಕೂಡ ಭಗವಂತನಿಗೆ ಅಧೀನನಾಗಿದ್ದಾನೆ. ಯೋಗೇಶ್ವರನಾದ ಶ್ರೀಕೃಷ್ಣಪರಮಾತ್ಮನಿಗೇ ಸಾಂಸಾರಿಕಭೋಗಗಳಲ್ಲಿ ವೈರಾಗ್ಯವುಂಟಾಯಿ ತೆಂದರೆ ಆ ಭಗವಂತನನ್ನು ಅನುಸರಿಸುವ ಭಕ್ತನಿಗೆ ಈ ಭೋಗಗಳಲ್ಲಿ ವಿಶ್ವಾಸವು ಹೇಗೆ ತಾನೇ ಉಂಟಾದೀತು?

ದೈವಾಧೀನೇಷು ಕಾಮೇಷು ದೈವಾಧೀನಃ ಸ್ವಯಂ ಪುಮಾನ್ ।
ಕೋ ವಿಸ್ರಮ್ಭೇತ ಯೋಗೇನ ಯೋಗೇಶ್ವರಮನುವ್ರತಃ ॥೨೩॥

(ಶ್ಲೋಕ 16-23)

ಒಮ್ಮೆ ದ್ವಾರಕಾನಗರಿಯಲ್ಲಿ ಆಟವಾಡುತ್ತಿದ್ದ ಯಾದವ ಮತ್ತು ಭೋಜವಂಶಗಳ ಕುಮಾರರು ಕೆಲವು ಮುನೀಶ್ವರರಿಗೆ ಕೋಪವನ್ನುಂಟು ಮಾಡಿದರು. ಯಾದವಕುಲವನ್ನು ಸಂಹಾರಮಾಡುವುದೇ ಭಗವಂತನಿಗೆ ಇಷ್ಟವೆಂಬುದನ್ನು ತಿಳಿದಿದ್ದ ಆ ಮಹರ್ಷಿಗಳು ಆ ಕುಮಾರರಿಗೆ ಶಾಪವನ್ನು ಕೊಟ್ಟುಬಿಟ್ಟರು. ಅದಾದ ಕೆಲವು ತಿಂಗಳುಗಳನಂತರ ಮುಂದೆ ಒದಗುವ ದುರದೃಷ್ಟಕ್ಕೆ ಅಧೀನರಾದ ವೃಷ್ಣಿ, ಭೋಜ ಮತ್ತು ಅಂಧಕರೇ ಮುಂತಾದ ಯಾದವರು ಮಹಾಸಂತೋಷದಿಂದ ರಥಗಳನ್ನೇರಿ ಪ್ರಭಾಸಕ್ಷೇತ್ರಕ್ಕೆ ಹೋದರು. ಅಲ್ಲಿ ಸ್ನಾನಮಾಡಿ ಅವರು ಆ ತೀರ್ಥೋದಕದಿಂದ ಪಿತೃಗಳಿಗೂ, ದೇವತೆಗಳಿಗೂ, ಋಷಿಗಳಿಗೂ ತರ್ಪಣಗಳನ್ನು ಕೊಟ್ಟು

ಬ್ರಾಹ್ಮಣರಿಗೆ ಉತ್ತಮವಾದ ಗೋವುಗಳನ್ನು ದಾನಮಾಡಿದರು. ಚಿನ್ನ, ಬೆಳ್ಳಿ, ಹಾಸಿಗೆ, ವಸ್ತ್ರ, ಕೃಷ್ಣಾಜಿನ, ಕಂಬಳಿ, ಪಲ್ಲಕ್ಕಿ, ರಥ, ಆನೆಗಳು, ಕನ್ಯೆಯರು ಮತ್ತು ಜೀವನೋಪಾಯವಾಗುವ ಭೂಮಿ ಮತ್ತು ಬಗೆ-ಬಗೆಯ ರಸಭರಿತವಾದ ಅನ್ನಗಳನ್ನು ಭಗವದರ್ಪಣಬುದ್ಧಿಯಿಂದ ಬ್ರಾಹ್ಮಣರಿಗೆ ದಾನಮಾಡಿದರು ಮತ್ತು ಗೋ-ಬ್ರಾಹ್ಮಣರ ಸಂರಕ್ಷಣೆಗಾಗಿಯೇ ಜೀವಿಸುತ್ತಿದ್ದ ಆ ಮಹಾವೀರರು ಭೂಮಿಯಲ್ಲಿ ತಲೆಯನ್ನಿರಿಸಿ ಅವರಿಗೆ ದಂಡಪ್ರಣಾಮಮಾಡಿದರು.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೩ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೪ನೆಯ ಅಧ್ಯಾಯ

ಉದ್ಧವನಿಂದ ಬೀಳ್ಕೊಂಡ ವಿದುರನು ಮೈತ್ರೇಯರ ಬಳಿಗೆ ತೆರಳಿದುದು

ಉದ್ಧವನು ಯಾದವರ ಕಥೆಯನ್ನು ಮುಂದುವರಿಸುತ್ತಾ ಹೀಗೆಂದನು:

ಅಥ ತೇ ತದನುಜ್ಞಾತಾ ಭುಕ್ತ್ವಾ ಪೀತ್ವಾ ಚ ವಾರುಣೀಮ್ ।
ತಯಾ ವಿಭ್ರಂಶಿತಜ್ಞಾನಾ ದುರುಕ್ತೈರ್ಮರ್ಮ ಪಸ್ಪೃಶುಃ ॥೧॥

"ಓ ಮಹಾತ್ಮನೇ! ಯಾದವರು ಬ್ರಾಹ್ಮಣರಿಗೆ ದಾನ-ಧರ್ಮ-ನಮಸ್ಕಾರಾದಿಗಳನ್ನು ಮಾಡಿದ ಬಳಿಕ ಅವರ ಅನುಮತಿಯನ್ನು ಪಡೆದು ಭೋಜನಮಾಡಿದರು. ಜೊತೆಗೆ ವಾರುಣೀಮದ್ಯಪಾನವನ್ನೂ ಮಾಡಿದ್ದರಿಂದ ಅವರು ಜ್ಞಾನತಪ್ಪಿ* ಸಿಕ್ಕಾಪಟ್ಟೆಯಾಗಿ ಮಾತನಾಡತೊಡಗಿದರು.

---

* **ತಯಾ ವಿಭ್ರಂಶಿತಜ್ಞಾನಾಃ** = ಆ ಮದಿರಾಪಾನದಿಂದ ಅವರ ಜ್ಞಾನವು ಭ್ರಷ್ಟವಾಯಿತು. ಅವರು ಬುದ್ಧಿಗೆಟ್ಟರು. ಭ್ರಾಂತರಾದರು. ಬುದ್ಧಿಯು ಭ್ರಾಂತವಾದರೆ ಯಾವ ಸಾಧನದಿಂದಲೂ ಸಹಾಯವಾಗುವುದಿಲ್ಲ. **"ಸರ್ವಂ ಹಿ ಸಾಧನಂ ವ್ಯರ್ಥಂ ಯದಿ ಬುದ್ಧಿರ್ವಿನಶ್ಯತಿ । ಅಕರ್ತವ್ಯಂ ತದಾ ನಾಸ್ತಿ ಮಹತಾಮಪಿ ನಿಶ್ಚಿತಮ್ ॥ ತಸ್ಮಾದೇವಂ ನ ಕರ್ತವ್ಯಂ ಇತಿ ಬುದ್ಧ್ಯಾ ಸ ಉಚ್ಯತೇ । ಅತೋಽತ್ರ ಶಾಸ್ತ್ರೇ ಸರ್ವತ್ರ ಹ್ಯಪ್ರಾಮಾಣ್ಯಂ ಸ್ಮೃತೇ ಸ್ತದಾ ॥"** (ಶ್ಲೋಕ ೧)

ಹೃದಯಕ್ಕೆ ನೋವನ್ನುಂಟುಮಾಡುವ ಮಾತುಗಳನ್ನು ಪರಸ್ಪರ ಬಳಸ ತೊಡಗಿದರು. ಮದ್ಯದ ಮತ್ತಿನಿಂದ ಅವರ ಬುದ್ಧಿಯು ಕೆಟ್ಟುಹೋಗಿ ಸೂರ್ಯಾಸ್ತವಾಗುತ್ತಿದ್ದಂತೆಯೇ ಅವರಲ್ಲಿ ಪರಸ್ಪರ ಹೊಡೆದಾಟ-ಬಡಿದಾಟ ಆಗತೊಡಗಿತು. ಬಿದಿರುಮೆಳೆಗಳು ಪರಸ್ಪರ ಮಸೆದಾಡುವಂತೆ ಅವರು ಪರಸ್ಪರಸಂಘರ್ಷಣೆಯಿಂದ ಬಡಿದಾಡತೊಡಗಿದರು. ತನ್ನ ಮಾಯಾಶಕ್ತಿಯಿಂದ ಉಂಟಾದ ಆ ವಿಚಿತ್ರವಾದ ಗತಿಯನ್ನು ಕಂಡು ಭಗವಂತನು ಸರಸ್ವತೀನದಿಯ ಜಲದಲ್ಲಿ ಶುದ್ಧಾಚಮನಮಾಡಿ ಒಂದು ಅಶ್ವತ್ಥವೃಕ್ಷದ ಬುಡದಲ್ಲಿ ಕುಳಿತುಕೊಂಡುಬಿಟ್ಟನು. ಆಶ್ರಿತರ ಪೀಡೆಯನ್ನು ಪರಿಹರಿಸುವ ಆ ಶ್ರೀಭಗವಂತನು ತನ್ನ ಕುಲವನ್ನು ಉಪಸಂಹಾರಮಾಡಬೇಕೆಂದು ಸಂಕಲ್ಪಿಸಿದವನಾಗಿ ನನಗೆ ಬದರಿಕಾಶ್ರಮಕ್ಕೆ ಹೋಗಬೇಕೆಂದು ಆಜ್ಞೆ ಮಾಡಿದನು. ಆತನ ಆಶಯವು ಹೀಗಿತ್ತೆಂದು ತಿಳಿದಿದ್ದರೂ ನಾನು ಆತನ ಚರಣಾರವಿಂದಗಳ ಅಗಲಿಕೆಯನ್ನು ಸಹಿಸಲಾರದೇ ಆತನನ್ನೇ ಹುಡುಕುತ್ತಾ ಪ್ರಭಾಸಕ್ಷೇತ್ರಕ್ಕೆ ಹಿಂಬಾಲಿಸಿದೆನು. ಅಲ್ಲಿ ನಾನು ಕಂಡದ್ದೇನು? ಎಲ್ಲರಿಗೂ ಆಶ್ರಯನಾಗಿ ಯಾರ ಆಶ್ರಯಕ್ಕೂ ಒಳಗಾಗದೇ ಇರುವ ಪ್ರಿಯತಮನಾದ ಮಹಾಪ್ರಭುವು ಸರಸ್ವತೀನದಿಯ ತೀರದಲ್ಲಿ ಒಬ್ಬಂಟಿಗನಾಗಿ ಕುಳಿತಿದ್ದನು. ಶ್ಯಾಮಲವರ್ಣದಿಂದ ಕಂಗೊಳಿಸುತ್ತಿರುವ ಶುದ್ಧವಾದ ಸತ್ತ್ವಮಯವಾದ ಶ್ರೀಮೂರ್ತಿ, ಪ್ರಸನ್ನವಾಗಿ ಕೆಂಬಣ್ಣದಿಂದ ಹೊಳೆಯುತ್ತಿರುವ ನೇತ್ರಕಮಲಗಳು, ಶೋಭಾಯಮಾನವಾದ ಚತುರ್ಭುಜಗಳು, ಥಳ-ಥಳಿಸುತ್ತಿರುವ ರೇಷ್ಮೆಯ ಪೀತಾಂಬರ–ಈ ಪ್ರಸಿದ್ಧವಾದ ಲಕ್ಷಣಗಳಿಂದ ದೂರದಿಂದಲೇ ಆತನನ್ನು ಗುರುತಿಸಬಹುದಾಗಿತ್ತು. ಸ್ವಾಮಿಯು ಒಂದು ಸಣ್ಣ ಅರಳಿಯ ಮರವನ್ನು ಒರಗಿಕೊಂಡು ಎಡತೊಡೆಯ ಮೇಲೆ ಬಲಪಾದವನ್ನು ಇರಿಸಿ ಸುಖಾಸೀನನಾಗಿದ್ದನು. ಆಹಾರತ್ಯಾಗಮಾಡಿದ್ದರೂ ಆನಂದದಿಂದ ಪುಷ್ಟನಾಗಿಯೇ ಪ್ರಕಾಶಿಸುತ್ತಿದ್ದನು. ಸಂಸಾರವನ್ನು ದೂರಸರಿಸಿ ಕರ್ಮಫಲಸಂಗವನ್ನು ತ್ಯಜಿಸಿದ್ದ ಮಹಾಯೋಗೇಶ್ವರನಲ್ಲವೇ ಆತ?

ಶ್ರೀನಿಕೇತಂ ಸರಸ್ವತ್ಯಾಂ ಕೃತಕೇತಮಕೇತನಮ್ ।
ಶ್ಯಾಮಾವದಾತಂ ವಿರಜಂ ಪ್ರಶಾನ್ತಾರುಣಲೋಚನಮ್ ॥೭॥

ದೋರ್ಭಿಶ್ಚತುರ್ಭಿರ್ವಿದಿತಂ ಪೀತಕೌಶಾಮ್ಬರೇಣ ಚ ।
ವಾಮ ಊರಾವಧಿಶ್ರಿತ್ಯ ದಕ್ಷಿಣಾಙ್ಘ್ರಿಸರೋರುಹಮ್ ।
ಅಪಾಶ್ರಿತಾರ್ಭಕಾಶ್ವತ್ಥಮಕೃಶಂ ತ್ಯಕ್ತಪಿಪ್ಪಲಮ್* ॥೮॥

ಇಂತಹ ಶ್ರೀಭಗವದ್ರೂಪವನ್ನು ನಾನು ಕಣ್ಣುಗಳಿಗೆ ಹಬ್ಬವಾಗಿ ಅವಲೋಕಿಸುತ್ತಿರುವಂತೆಯೇ ವೇದವ್ಯಾಸರ ಪ್ರಿಯಮಿತ್ರರೂ, ಪರಮಭಾಗವತರೂ, ಪರಮಾತ್ಮಸಿದ್ಧರೂ ಆಗಿದ್ದ ಮೈತ್ರೇಯಮಹರ್ಷಿಗಳು ಅಲ್ಲಿಗೆ ಆಕಸ್ಮಿಕವಾಗಿ ಬಂದು ಸೇರಿದರು. ಮೈತ್ರೇಯರಾದರೋ ಭಗವಂತನಲ್ಲಿ ಪರಮಪ್ರೇಮಪೂರ್ಣರಾಗಿದ್ದ ಭಾಗವತಶಿರೋಮಣಿಗಳು. ಅವರ ಕತ್ತು ಆನಂದ ಮತ್ತು ಭಕ್ತಿಭಾವಗಳಿಂದ ಬಾಗಿತ್ತು. ಶ್ರೀಹರಿಯು ಆ ಮಹಾತ್ಮರ ಎದುರಿಗೇ ತನ್ನ ಮಂದಹಾಸಶೋಭಿತವಾದ ಕಟಾಕ್ಷದಿಂದ ನನ್ನನ್ನು ಆನಂದಗೊಳಿಸುತ್ತಾ ಹೀಗೆ ಹೇಳಿದನು :

"ಉದ್ಧವ! ನಿನ್ನ ಮನಸ್ಸಿನ ಬಯಕೆಯೇನೆಂಬುದು ನನಗೆ ತಿಳಿದಿದೆಯಪ್ಪ. ಆದ್ದರಿಂದ ಇತರರಿಗೆ ಅತ್ಯಂತದುರ್ಲಭವಾಗಿರುವ ಸಾಧನವೊಂದನ್ನು ನಿನಗೆ ಕೊಡುವೆನು. ನೀನು ಹಿಂದಿನ ಜನ್ಮದಲ್ಲಿ ವಸುದೇವತೆಯಾಗಿದ್ದೆ. ಪ್ರಜಾಪತಿಗಳೂ ಮತ್ತು ವಸುದೇವತೆಗಳೂ ಕೂಡಿಮಾಡಿದ ಯಜ್ಞದಲ್ಲಿ ನೀನು ನನ್ನನ್ನು ಪಡೆಯುವ ಇಚ್ಛೆಯಿಂದಲೇ ನನ್ನ ಆರಾಧನೆಯನ್ನು ಮಾಡಿದ್ದೆ. ಎಲೈ ಸಾಧುಶ್ರೇಷ್ಠನೇ! ನನ್ನ ಅನುಗ್ರಹದಿಂದ ಈ ಜನ್ಮದಲ್ಲಿ ನೀನು ಅದನ್ನು ಪಡೆದಿದ್ದೀಯೆ. ಆದ್ದರಿಂದ ಇದೇ ಸಂಸಾರದಲ್ಲಿ ನಿನ್ನ ಕೊನೆಯ ಹುಟ್ಟು. ನಾನು ಈಗ ಮರ್ತ್ಯ ಲೋಕವನ್ನು ತ್ಯಜಿಸಿ ಸ್ವಧಾಮಕ್ಕೆ ತೆರಳಲು ನಿಶ್ಚಯಿಸಿದ್ದೇನೆ. ಇಂತಹ ಸಮಯದಲ್ಲಿ ನೀನು ಏಕಾಂತದಲ್ಲಿ ಅನನ್ಯಭಕ್ತಿಯಿಂದ ನನ್ನ ದರ್ಶನವನ್ನು ಪಡೆದೆ. ಇದು ನಿನ್ನ ಮಹಾಭಾಗ್ಯವು. ಹಿಂದೆ ಪದ್ಮಕಲ್ಪದ ಪ್ರಾರಂಭದಲ್ಲಿ ನಾನು ನನ್ನ ನಾಭಿಕಮಲದಲ್ಲಿ ಕುಳಿತಿದ್ದ ಬ್ರಹ್ಮನಿಗೆ ನನ್ನ ಮಹಿಮೆಯನ್ನು ಪ್ರಕಟಪಡಿಸುವಂತಹ ಶ್ರೇಷ್ಠತಮವಾದ ಜ್ಞಾನವನ್ನು ಉಪದೇಶಮಾಡಿ

---

* ತ್ಯಕ್ತಪಿಪ್ಪಲಮ್ = ಆಹಾರವನ್ನು ತ್ಯಜಿಸಿದ್ದ ಅಥವಾ ಕರ್ಮಫಲಸಂಗವನ್ನು ತ್ಯಜಿಸಿದ್ದ. "ತಯೋರೇಕಃ ಪಿಪ್ಪಲಂ ಸ್ವಾದ್ವತ್ತಿ" (ಶ್ಲೋಕ ೮)

ದ್ದೆನು. ಅದನ್ನು ಜ್ಞಾನಿಗಳು 'ಭಾಗವತ' ಎಂದು ಕರೆಯುತ್ತಾರೆ. ನಿನಗೂ ಅದನ್ನೇ ನಾನು ಅನುಗ್ರಹಿಸುತ್ತೇನೆ." (ಶ್ಲೋಕ 11-13)

ವಿದುರ! ಪರಮಪುರುಷನು ನನಗೆ ಹೀಗೆ ಅಪ್ಪಣೆಕೊಡಿಸಿದನು. ಆತನ ಕೃಪಾರಸವು ಪ್ರತಿಕ್ಷಣದಲ್ಲೂ ನನ್ನ ಮೇಲೆ ಹರಿದುಬರುತ್ತಿತ್ತು. ಆತನ ಪ್ರೀತ್ಯಾದರಪೂರ್ಣವಾದ ಮಾತುಗಳನ್ನು ಕೇಳಿ ನಾನು ಸ್ನೇಹದಿಂದ ರೋಮಾಂಚಿತನಾದೆನು. ನನ್ನ ವಾಣಿಯು ಗದ್ಗದವಾಯಿತು. ಕಣ್ಣುಗಳಿಂದ ಕಂಬನಿಯ ಧಾರೆಯು ಹರಿಯತೊಡಗಿತು. ಕೈಜೋಡಿಸಿಕೊಂಡು ನಾನು ಆತನಲ್ಲಿ ಹೀಗೆ ಬಿನ್ನೈಸಿದೆನು :

"ಜೀಯಾ! ನಿನ್ನ ಚರಣಕಮಲಗಳನ್ನು ಸೇವಿಸುವ ಮನುಷ್ಯನಿಗೆ ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಯಾವುದೂ ದುರ್ಲಭವಲ್ಲ. ಆದರೆ ನನಗೆ ಅವುಗಳಲ್ಲಿ ಯಾವುದರಲ್ಲೂ ಇಚ್ಛೆಯಿಲ್ಲ. ನಿನ್ನ ಪಾದಾರವಿಂದಗಳ ಕೈಂಕರ್ಯವೊಂದರಿಂದಲೇ ನನಗೆ ತೃಪ್ತಿಯಾಗುವುದು. ಪ್ರಭೋ! ನೀನು ನಿಃಸ್ಪೃಹನಾಗಿದ್ದರೂ ಕರ್ಮಗಳನ್ನು ಆಚರಿಸುತ್ತಿದ್ದೀಯೆ. ಜನ್ಮರಹಿತನಾಗಿದ್ದರೂ ಜನ್ಮತಾಳುತ್ತೀಯೆ. ಕಾಲಾತ್ಮನೇ ಆಗಿದ್ದರೂ ಶತ್ರುವಿಗೆ ಹೆದರಿದವನಂತೆ ಪಲಾಯನಮಾಡಿ ಕೋಟೆ-ಕೊತ್ತಲುಗಳಲ್ಲಿ ಸೇರಿಕೊಳ್ಳುತ್ತೀಯೆ. ಆತ್ಮಕ್ರೀಡನಾಗಿದ್ದರೂ ಹದಿನಾರು ಸಾವಿರ ಮಂದಿ ಸ್ತ್ರೀಯರೊಡನೆ ಕ್ರೀಡಿಸಿದೆ. ನಿನ್ನ ಈ ವಿಚಿತ್ರವಾದ ಚರಿತ್ರವನ್ನು ನೋಡಿ ವಿದ್ವಾಂಸರೂ ಮರುಳಾಗುತ್ತಾರೆ. ಸರ್ವಜ್ಞನಾಗಿ ಸದಾ ಅಕುಂಠಿತವಾದ ಅಖಂಡಜ್ಞಾನವನ್ನು ಹೊಂದಿದ್ದರೂ ನೀನು ಮೂಢನಂತೆ ಕಾರ್ಯಾಲೋಚನೆಗಳಲ್ಲಿ ನನ್ನನ್ನು ಕರೆದು ಸಲಹೆಕೇಳುತ್ತಿದ್ದೆ. ಈ ಲೀಲೆಯು ನನ್ನ ಮನಸ್ಸಿಗೆ ಭ್ರಾಂತಿಯನ್ನುಂಟುಮಾಡುತ್ತಿದೆ. ಸ್ವಾಮೀ! ನೀನು ಹಿಂದೆ ಬ್ರಹ್ಮದೇವರಿಗೆ ನಿನ್ನ ಸ್ವರೂಪದ ಗೂಢರಹಸ್ಯವನ್ನು ಪ್ರಕಾಶಪಡಿಸುವ ಯಾವ ಶ್ರೇಷ್ಠತಮವಾದ ಜ್ಞಾನವನ್ನು ಉಪದೇಶ ಮಾಡಿದೆಯೋ–ಅದನ್ನು ನನಗೆ ಗ್ರಹಿಸುವ ಯೋಗ್ಯತೆಯಿದ್ದರೆ ಉಪದೇಶ ಮಾಡು. ಅದರಿಂದ ಸಂಸಾರಬಂಧನವನ್ನು ಕಳೆದುಕೊಂಡು ಕೃತಾರ್ಥನಾಗುವೆನು."

(ಶ್ಲೋಕ 14-18)

ಹೀಗೆ ನಾನು ನನ್ನ ಹೃದಯದ ಭಾವವನ್ನು ಅರಿಕೆಮಾಡಿಕೊಳ್ಳಲು ಆ ಪರಮಪುರುಷನಾದ ಪುಂಡರೀಕಾಕ್ಷನು ನನಗೆ ತನ್ನ ಸ್ವರೂಪದ ಪರಮಸ್ಥಿತಿಯನ್ನು ಉಪದೇಶಮಾಡಿದನು. ಆ ತೀರ್ಥಪಾದನಾದ ಪರಮ ಗುರು-ಶ್ರೀಕೃಷ್ಣನಿಂದ ಹೀಗೆ ಆತ್ಮತತ್ತ್ವಜ್ಞಾನವನ್ನು ಪಡೆಯುವ ಸಾಧನವನ್ನು ತಿಳಿದುಕೊಂಡು ಆತನ ಅಡಿಗಳಿಗೆರಗಿ ಪ್ರದಕ್ಷಿಣೆಮಾಡಿ ನಾನು ಇಲ್ಲಿಗೆ ಬಂದಿರುವೆನು. ಆತನ ಅಗಲಿಕೆಯ ಕಾರಣ ನನ್ನ ಚಿತ್ತವು ತುಂಬಾ ಕಳವಳದಿಂದ ತುಂಬಿದೆ. ಆ ಭಗವಂತನ ದರ್ಶನವೆಂಬ ಆನಂದವನ್ನನುಭವಿಸಿದ್ದ ನಾನು ಈಗ ಆತನ ಅಗಲಿಕೆಯ ದುಃಖವನ್ನೂ ಅನುಭವಿಸುತ್ತಿದ್ದೇನೆ. ಇನ್ನು ನಾನು ಆತನ ಅಪ್ಪಣೆಯಂತೆ ಆತನಿಗೆ ಪ್ರಿಯವಾದ ಬದರಿಕಾಶ್ರಮಕ್ಕೆ ಹೋಗುತ್ತೇನೆ. ಭಗವಂತರಾದ ನರ-ನಾರಾಯಣಮಹರ್ಷಿಗಳು ಲೋಕಾನುಗ್ರಹಮಾಡುವುದಕ್ಕಾಗಿ ಅವರ ದೃಷ್ಟಿಯಿಂದ ಮೃದುವೂ, ಇತರರ ದೃಷ್ಟಿಯಿಂದ ಅತಿಕಠಿನವೂ ಆದ ತಪಸ್ಸನ್ನಾಚರಿಸಿದ ಶ್ರೀಕ್ಷೇತ್ರವಲ್ಲವೇ ಅದು!"
(ಶ್ಲೋಕ 19-22)

ಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ವಿದುರೋದ್ಧವಸಂವಾದವನ್ನು ವಿವರಿಸುತ್ತಾ ಹೀಗೆಂದರು : "ಮಹಾರಾಜ! ಹೀಗೆ ಉದ್ಧವನ ಬಾಯಿಂದ ಪ್ರಿಯಬಂಧುಗಳ ವಿನಾಶವೆಂಬ ಘೋರತಮವಾದ ವೃತ್ತಾಂತವನ್ನು ಕೇಳಿ ವಿದುರನಿಗೆ ತಡೆಯಲಾಗದ ದುಃಖ ಉಕ್ಕಿಬಂದಿತು. ಆದರೆ ಆ ಮಹಾತ್ಮನು ಜ್ಞಾನಬಲದಿಂದ ಅದನ್ನು ಶಮನಗೊಳಿಸಿಕೊಂಡನು. ಬದರಿಕಾಶ್ರಮಕ್ಕೆ ತೆರಳುತ್ತಿದ್ದ, ಶ್ರೀಕೃಷ್ಣನ ಆತ್ಮೀಯಪರಿವಾರದಲ್ಲಿ ಮುಖ್ಯನಾಗಿದ್ದ, ಆ ಭಾಗವತೋತ್ತಮನಲ್ಲಿ ಹೀಗೆ ಪ್ರಾರ್ಥನೆಮಾಡಿದನು :

"ಉದ್ಧವರಾಯರೇ! ಯೋಗೇಶ್ವರನಾದ ಶ್ರೀಕೃಷ್ಣಪರಮಾತ್ಮನು ನಿಮಗೆ ತನ್ನ ಸ್ವರೂಪರಹಸ್ಯವನ್ನು ಪ್ರಕಟಿಸುವ ಯಾವ ಪರಮಜ್ಞಾನವನ್ನು ಉಪದೇಶಮಾಡಿದ್ದನೋ–ಅದನ್ನು ನನಗೂ ತಿಳಿಸಿರಿ. ನಿಮ್ಮಂತಹ ಭಗವದ್ಭಕ್ತಶಿರೋಮಣಿಗಳು ಸೇವಕರ ಕಾರ್ಯಾರ್ಥವಾಗಿಯೇ ಅಲ್ಲವೇ ಸಂಚಾರಮಾಡುತ್ತಿರುವುದು!"

ಅದಕ್ಕೆ ಉದ್ಧವನು "ಮಹಾತ್ಮನೇ! ಮೈತ್ರೇಯಮಹರ್ಷಿಗಳ ಸೇವೆಯನ್ನು ಮಾಡಿಯೇ ನೀನು ಆ ತತ್ತ್ವಜ್ಞಾನವನ್ನು ಪಡೆಯಬೇಕಲ್ಲವೇ!

ಈ ಮರ್ತ್ಯಲೋಕವನ್ನು ಬಿಡುವ ಮುನ್ನ ಆ ಭಗವಂತನೇ ನಿನಗೆ ಆ ತತ್ತ್ವಜ್ಞಾನವನ್ನು ಉಪದೇಶಮಾಡಬೇಕೆಂದು ಅವರಿಗೆ ನನ್ನ ಎದುರಿಗೇ ಅಪ್ಪಣೆ ಮಾಡಿರುವನಷ್ಟೇ! ಅವರೇ ನಿನಗೆ ಆ ಉಪದೇಶವನ್ನು ನೀಡುವರು"–ಎಂದು ಹೇಳಿದನು. (ಶ್ಲೋಕ 23-25)

"ಹೀಗೆ ವಿದುರನೊಡನೆ ವಿಶ್ವಮೂರ್ತಿಯಾದ ಶ್ರೀಕೃಷ್ಣಪರಮಾತ್ಮನ ಗುಣಗಳ ಸಂಕೀರ್ತನೆ ಮಾಡಿದ್ದರಿಂದ ಉದ್ಧವನ ಆ ಮಹಾವಿಯೋಗ ಸಂತಾಪವು ಆ ಕಥಾಮೃತದಿಂದ ಶಮನಗೊಂಡಿತು. ಯಮುನಾನದಿಯ ತೀರದಲ್ಲಿ ಆ ರಾತ್ರಿಯು ಅವನಿಗೆ ಒಂದು ಕ್ಷಣದಂತೆ ಕಳೆದುಹೋಯಿತು. ಮತ್ತೆ ಬೆಳಗಾಗುತ್ತಲೇ ಅವನು ಅಲ್ಲಿಂದ ಹೊರಟುಬಿಟ್ಟನು"–ಎಂದು ಶುಕಮಹರ್ಷಿಗಳು ಹೇಳಿದಾಗ ಪರೀಕ್ಷಿದ್ರಾಜನು ಅವರನ್ನು ಪ್ರಶ್ನೆಮಾಡಿ ದನು. "ಪೂಜ್ಯರೇ! ವೃಷ್ಣಿವಂಶ ಮತ್ತು ಭೋಜವಂಶಗಳ ಮಹಾರಥಿಗಳೂ ನಾಯಕ-ಮಹಾನಾಯಕರೂ ಎಲ್ಲರೂ ನಾಶಹೊಂದಿಬಿಟ್ಟರು. ಮೂರು ಲೋಕಗಳ ಒಡೆಯನಾದ ಶ್ರೀಹರಿಯೂ ಕೂಡ ತನ್ನ ರೂಪವನ್ನು ತ್ಯಜಿಸ ಬೇಕಾಗಿ ಬಂದಿತು. ಹೀಗಿರುವಾಗ ಆ ಯಾದವರ ವಂಶದ ನಾಯಕರ ಲ್ಲೊಬ್ಬನಾದ ಉದ್ಧವನೊಬ್ಬನು ಮಾತ್ರವೇ ಹೇಗೆ ಉಳಿದುಕೊಂಡನು?"

(ಶ್ಲೋಕ 27-28)

ಮಹರ್ಷಿಗಳು ರಾಜನಿಗೆ ಉತ್ತರಿಸಿದರು :

"ಅಮೋಘಕಾಮನಾದ ಶ್ರೀಹರಿಯು ಬ್ರಾಹ್ಮಣರ ಶಾಪದ ನೆಪದಲ್ಲಿ ಒದಗಿದ್ದ ಮೃತ್ಯುವಿನಿಂದ ತನ್ನ ಕುಲವನ್ನು ಸಂಹಾರಮಾಡಿಸಿ ತಾನೂ ತನ್ನ ದಿವ್ಯಮಂಗಳವಿಗ್ರಹವನ್ನೂ ಮರೆಸಿಕೊಳ್ಳುವ ಸಮಯದಲ್ಲಿ–'ಈಗ ನಾನು ಈ ಲೋಕವನ್ನು ಬಿಟ್ಟು ಹೊರಟುಹೋದ ಬಳಿಕ ನನ್ನ ಜ್ಞಾನವನ್ನು ಗ್ರಹಿಸಲು ಯೋಗ್ಯನಾದ ಅಧಿಕಾರಿಯೆಂದರೆ ಸಂಯಮಿಗಳಲ್ಲಿ ಶ್ರೇಷ್ಠನಾದ ಉದ್ಧವನೊಬ್ಬನೇ! ಈತನು ನನಗಿಂತಲೂ ಅಣುಮಾತ್ರವೂ ಕಡಿಮೆಯವನಲ್ಲ. ಏಕೆಂದರೆ : ಇವನು ವಿಷಯಗಳ ಬಾಧೆಗೆ ಎಂದಿಗೂ ತುತ್ತಾದವನಲ್ಲ. ಆದ್ದರಿಂದ ಈತನು ಜನರಿಗೆ ನನ್ನ ಜ್ಞಾನದ ಬಗೆಗೆ ತಿಳಿವಳಿಕೆ ನೀಡುತ್ತಾ ಇಲ್ಲಿಯೇ ಇರಲಿ'–ಎಂದು ಯೋಚನೆಮಾಡಿದನು. ವೇದಗಳಿಗೆ ಮೂಲಕಾರಣನಾದ ಮತ್ತು ವೇದೈಕವೇದ್ಯನಾದ ಜಗದ್ಗುರು

ಶ್ರೀಕೃಷ್ಣಪರಮಾತ್ಮನಿಂದ ಹಾಗೆ ಆಜ್ಞೆಪಡೆದ ಮಹಾತ್ಮನಾದ ಉದ್ಧವನು ಬದರಿಕಾಶ್ರಮಕ್ಕೆ ಹೋಗಿ ಸಮಾಧಿಯೋಗದಿಂದ ಶ್ರೀಹರಿಯನ್ನು ಆರಾಧಿಸ ತೊಡಗಿದನು.

ಏವಂ ತ್ರಿಲೋಕಗುರುಣಾ ಸನ್ದಿಷ್ಟಃ ಶಬ್ದಯೋನಿನಾ ।
ಬದರ್ಯಾಶ್ರಮಮಾಸಾದ್ಯ ಹರಿಮೀಜೇ ಸಮಾಧಿನಾ ॥೩೨॥

ಭಗವಾನ್ ಶ್ರೀಕೃಷ್ಣನು ಲೀಲೆಯಿಂದಲೇ ತನ್ನ ದಿವ್ಯಮಂಗಳ ವಿಗ್ರಹವನ್ನು ಈ ಲೋಕದಲ್ಲಿ ಪ್ರಕಟಪಡಿಸಿದನು. ಆತನು ಅದನ್ನು ಮರೆಸಿಕೊಂಡಿದ್ದೂ ಲೀಲಾಮಾತ್ರವೇ. ಆತನು ಅಂತರ್ಧಾನಹೊಂದಿದ ಈ ಘಟನೆಯು ಧೀರಪುರುಷರಿಗೆ ಧೈರ್ಯವನ್ನೂ–ಉತ್ಸಾಹವನ್ನೂ ತುಂಬು ತ್ತದೆ. ಆದರೆ ಪಶುಸಮಾನರಾದ ಹೇಡಿಗಳಿಗೆ ಅತ್ಯಂತದುಷ್ಕರವಾಗಿದೆ. ಪರಮಭಾಗವತೋತ್ತಮನಾದ ಉದ್ಧವನ ಬಾಯಿಂದ ಭಗವಂತನ ಶ್ರೇಷ್ಠ ವಾದ ಕರ್ಮಗಳನ್ನೂ, ಅಂತರ್ಧಾನಹೊಂದಿದ ವೃತ್ತಾಂತವನ್ನೂ ವಿದುರನು ಹೀಗೆ ಕೇಳಿದನು. ಹಾಗೆಯೇ ಪರಂಧಾಮಹೊಂದುವ ಸಮಯದಲ್ಲಿ ಸ್ವಾಮಿಯು ತನ್ನನ್ನೂ ನೆನಪುಮಾಡಿಕೊಂಡನು ಎಂಬ ಸಮಾಚಾರವನ್ನೂ ಕೇಳಿ, ಉದ್ಧವನು ಹೊರಟುಹೋದಬಳಿಕ ಪ್ರೇಮಪರವಶನಾಗಿ ರೋದಿಸ ತೊಡಗಿದನು. ಅನಂತರ ಆ ಸಾಧುಶಿರೋಮಣಿಯು ಯಮುನಾನದಿಯ ತೀರದಿಂದ ಹೊರಟು ಕೆಲವು ದಿನಗಳಲ್ಲೇ ಶ್ರೀಮೈತ್ರೇಯಮಹರ್ಷಿಗಳು ತಂಗಿದ್ದ ಗಂಗಾನದೀತೀರವನ್ನು ತಲುಪಿದನು.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ
ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೪ನೆಯ ಅಧ್ಯಾಯವು
ಮುಗಿಯಿತು.

ವಿದುರನ ಪ್ರಶ್ನೆ: ಮೈತ್ರೇಯರಿಂದ ಸೃಷ್ಟಿಕ್ರಮದ ವರ್ಣನೆ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನ ಪ್ರಶ್ನೆಗೆ ಉತ್ತರವನ್ನು ಮುಂದುವರಿಸಿದರು :

ದ್ವಾರಿ ದ್ಯುನದ್ಯಾ ಋಷಭಃ ಕುರೂಣಾಂ
ಮೈತ್ರೇಯಮಾಸೀನಮಗಾಧಬೋಧಮ್ ।
ಕ್ಷತ್ತೋಪಸೃತ್ಯಾಚ್ಯುತಭಾವಶುದ್ಧಃ
ಪಪ್ರಚ್ಛ ಸೌಶೀಲ್ಯಗುಣಾಭಿತೃಪ್ತಃ ॥೧॥

ಮಹಾರಾಜನೇ! ಕೇಳು. ಅನಂತರ ಶ್ರೀಕೃಷ್ಣಧ್ಯಾನದಿಂದ ನಿರ್ಮಲ ಚಿತ್ತನಾದ ಕುರುಶ್ರೇಷ್ಠನಾದ ವಿದುರನು ಶ್ರೀಹರಿದ್ವಾರಕ್ಷೇತ್ರದಲ್ಲಿ ಬಿಜಯ ಮಾಡಿಸಿದ್ದ ಅಗಾಧಜ್ಞಾನನಿಧಿಗಳಾದ ಮೈತ್ರೇಯಮಹರ್ಷಿಗಳ ಬಳಿಗೆ ಹೋದನು. ಆ ಮಹಾತ್ಮರ ಸೌಶೀಲ್ಯಾದಿಗುಣಗಳಿಂದ ಸಂತೃಪ್ತನಾಗಿ ಅವರಲ್ಲಿ ಹೀಗೆ ಅರಿಕೆಮಾಡಿಕೊಂಡನು :

"ಎಲೈ ಮಹಾತ್ಮರೇ! ಪ್ರಪಂಚದಲ್ಲಿ ಎಲ್ಲ ಜನರೂ ಸುಖವನ್ನು ಪಡೆಯಬೇಕೆಂಬ ಅಭಿಲಾಷೆಯಿಂದಲೇ ಕರ್ಮಗಳನ್ನು ಮಾಡುತ್ತಾರೆ. ಆದರೆ ಆ ಕರ್ಮಗಳಿಂದ ಅವರಿಗೆ ಸುಖಪ್ರಾಪ್ತಿಯಾಗುವುದಿಲ್ಲ. ದುಃಖ ನಿವೃತ್ತಿಯೂ ಆಗುವುದಿಲ್ಲ. ಅಷ್ಟೇ ಅಲ್ಲ ; ಅದರಿಂದ ಅವರಿಗೆ ದುಃಖವೇ ಹೆಚ್ಚುತ್ತದೆ. ಆದುದರಿಂದ ಈ ಬಗೆಗೆ ಜನರು ಏನು ಮಾಡಬೇಕು? ಸುಖವನ್ನೇ ಉಂಟುಮಾಡುವ ದಾರಿ ಯಾವುದು?–ಎಂಬುದನ್ನು ದಯೆಯಿಟ್ಟು ತಿಳಿಸಿರಿ. ದುರದೃಷ್ಟವಶದಿಂದ ಶ್ರೀಕೃಷ್ಣಪರಮಾತ್ಮನಲ್ಲಿ ವಿಮುಖರಾಗಿ ಅಧರ್ಮದಲ್ಲಿ ಆಸಕ್ತರಾಗಿ ಅತಿದುಃಖಪಡುತ್ತಿರುವ ಬಡಜೀವಿಗಳನ್ನು ಅನುಗ್ರಹಿಸುವುದಕ್ಕೋಸ್ಕರವೇ ಅಲ್ಲವೇ ತಮ್ಮಂತಹ ಸುಕೃತಿಗಳು ಲೋಕಸಂಚಾರ ಮಾಡುತ್ತಿರುವುದು? ಸಾಧುಶ್ರೇಷ್ಠರೇ! ಆದ್ದರಿಂದ ಭಗವಂತನನ್ನು ಹೇಗೆ ಆರಾಧಿಸಿದರೆ ಆತನು ಭಕ್ತರ ಭಕ್ತಿಶುದ್ಧವಾದ ಹೃದಯದಲ್ಲಿ ಬಂದು ನೆಲೆಸಿ ತನ್ನ ಸ್ವರೂಪದ ಅನುಭವವನ್ನುಂಟುಮಾಡುವ

ಸನಾತನಜ್ಞಾನವನ್ನು ಅನುಗ್ರಹಿಸುತ್ತಾನೆಯೋ–ಅಂತಹ ಶಾಂತಿಪ್ರದವಾದ ಸಾಧನಾಮಾರ್ಗವನ್ನು ತಾವು ನನಗೆ ಉಪದೇಶಿಸೋಣವಾಗಲಿ. ತ್ರಿಲೋಕ ಗಳಿಗೆ ಒಡೆಯನಾಗಿ ಪರಮಸ್ವತಂತ್ರನಾಗಿರುವ ಶ್ರೀಹರಿಯು ಅವತಾರಮಾಡಿ ಯಾವ-ಯಾವ ಲೀಲೆಗಳನ್ನು ಆಚರಿಸಿದನು? ಪೂರ್ಣಕಾಮನಾಗಿ ಕರ್ತೃತ್ವ ಲೇಪವಿಲ್ಲದ ಆ ಸ್ವಾಮಿಯು ಕಲ್ಪದ ಪ್ರಾರಂಭದಲ್ಲಿ ಈ ಜಗತ್ತನ್ನು ಹೇಗೆ ನಿರ್ಮಿಸಿದನು? ತಾನು ಸೃಷ್ಟಿಸಿದ ಜೀವಿಗಳನ್ನು ನೆಲೆಗೊಳಿಸಿ ಅವುಗಳಿಗೆ ಜೀವನೋಪಾಯವನ್ನು ಹೇಗೆ ಕಲ್ಪಿಸಿದನು? ಮತ್ತೆ ಆತನು ತನ್ನ ಈ ಕಾರ್ಯಗಳನ್ನು ತೊರೆದು ಈ ಜಗತ್ತೆಲ್ಲವನ್ನೂ ತನ್ನ ಹೃದಯಾಕಾಶದಲ್ಲಿ ವಿಲೀನಗೊಳಿಸಿಕೊಂಡು ಯೋಗಮಾಯೆಯಿಂದ ಶಯನಿಸುವುದೆಂತು? ಆ ಯೋಗೇಶ್ವರನು ಒಬ್ಬನೇ ಆಗಿದ್ದರೂ ಈ ಬ್ರಹ್ಮಾಂಡದಲ್ಲಿ ಅಂತರ್ಯಾಮಿ ಯಾಗಿ ಒಳಹೊಕ್ಕು ಅನೇಕರೂಪಗಳಲ್ಲಿ ಹೇಗೆ ಪ್ರಕಟಗೊಳ್ಳುತ್ತಾನೆ?–ಈ ಎಲ್ಲ ರಹಸ್ಯಗಳನ್ನೂ ನನಗೆ ತಿಳಿಸಿರಿ. ಬ್ರಾಹ್ಮಣರು, ಗೋವುಗಳು ಮತ್ತು ದೇವತೆಗಳು–ಇವರೆಲ್ಲರಿಗೂ ಕ್ಷೇಮವನ್ನುಂಟುಮಾಡುವುದಕ್ಕಾಗಿ ಯಾವ ನಾನಾ ಅವತಾರಗಳನ್ನು ಕೈಗೊಂಡು ಅನೇಕದಿವ್ಯಕರ್ಮಗಳನ್ನು ಮಾಡು ವನು? ಎಂಬುದನ್ನೂ ತಿಳಿಸೋಣವಾಗಲಿ. ಪುಣ್ಯಕೀರ್ತಿಶಾಲಿಗಳಿಗೆ ಚೂಡಾಮಣಿಯಾಗಿರುವ ಆ ಶ್ರೀಹರಿಯ ಕಥಾಮೃತವನ್ನು ಎಷ್ಟು ಪಾನ ಮಾಡಿದರೂ ನಮ್ಮ ಮನಸ್ಸಿಗೆ ತೃಪ್ತಿಯಿಲ್ಲವಾಗಿದೆ. **"ಮನೋ ನ ತೃಪ್ಯ-ತ್ಯಪಿ ಶೃಣ್ವತಾಂ ನಃ ಸುಶ್ಲೋಕಮೌಲೇಶ್ಚರಿತಾಮೃತಾನಿ"** (ಶ್ಲೋಕ 2-7)

ತಮ್ಮ-ತಮ್ಮ ಕರ್ಮಗಳಿಗೆ ಅನುಸಾರವಾಗಿ ಆಕಾರವನ್ನು ಪಡೆದು ಜೀವಿಸುತ್ತಿರುವ ಜೀವಿಗಳಿಂದ ಕೂಡಿರುವ ಈ ಲೋಕಗಳನ್ನೂ, ಲೋಕ ಪಾಲರನ್ನೂ ಮತ್ತು ಲೋಕಗಳ ಹೊರಗಿರುವ ಕತ್ತಲೆಯ ಪ್ರದೇಶಗಳನ್ನೂ ಸಮಸ್ತಲೋಕಾಧಿಪತಿಗಳಿಗೂ ಒಡೆಯನಾದ ಶ್ರೀಹರಿಯು ಯಾವ-ಯಾವ ತತ್ತ್ವಗಳಿಂದ ಹೇಗೆ-ಹೇಗೆ ಸೃಷ್ಟಿಸುವನು? ಸ್ವಯಂಭುವೂ–ಸರ್ವಕಾರಣನೂ ಆಗಿರುವ ಶ್ರೀಮನ್ನಾರಾಯಣನು ತನ್ನ ಪ್ರಜೆಗಳ ಸ್ವಭಾವ, ಕರ್ಮ, ರೂಪ ಮತ್ತು ನಾಮಭೇದಗಳನ್ನು ಹೇಗೆ ರಚನೆಮಾಡುವನು?–ಎಂಬುದನ್ನೂ ನಮಗೆ ವರ್ಣಿಸಿ ಹೇಳಿರಿ. ಮುನಿಶ್ರೇಷ್ಠರೇ! ಪೂಜ್ಯರೇ! ವ್ಯಾಸಮಹರ್ಷಿ

ಗಳಿಂದ ನಾನು ಎಲ್ಲ ವರ್ಣಾಶ್ರಮಧರ್ಮಗಳನ್ನೂ ಹಲವುಬಾರಿ ಕೇಳಿದ್ದಾಗಿದೆ. ಆದರೆ ಈಗ ಶ್ರೀಕೃಷ್ಣಕಥಾಮೃತಪ್ರವಾಹವನ್ನು ಬಿಟ್ಟು ಕ್ಷಣಿಕ ಸುಖವನ್ನುಂಟುಮಾಡುವ ಆ ಬೇರಾವ ಧರ್ಮಗಳನ್ನು ಕೇಳಿದರೂ ಮನಸ್ಸಿಗೆ ತೃಪ್ತಿಯಾಗುವುದಿಲ್ಲ. ಆದರೆ ಆ ಭಗವತ್ಕಥಾಮೃತವು ಕಿವಿದೆರೆಯನ್ನು ಹೊಕ್ಕೊಡನೆಯೇ ಸಂಸಾರದ ಕಟ್ಟಿಗೆ ಕಾರಣವಾದ ವಿಷಯಾಸಕ್ತಿಯನ್ನು ತೊಡೆದುಹಾಕುವುದು. ದಿವ್ಯಸೂರಿಗಳೇ ಅದನ್ನು ನಿಮ್ಮ ಸಭಾಸಮಾಜಗಳಲ್ಲಿ ಸದಾ ಕೊಂಡಾಡುತ್ತಿರುವರು. ತೀರ್ಥಪಾದನಾದ ಶ್ರೀಹರಿಯ ಅಂತಹ ಕಥಾಮೃತವನ್ನಾದರೋ ಎಷ್ಟು ಕೇಳುತ್ತಿದ್ದರೂ ಸಾಕೆನಿಸುವುದಿಲ್ಲ.

ಕಸ್ತೃಪ್ನುಯಾತ್ತೀರ್ಥಪದೋಽಭಿಧಾನಾ-
ತ್ಸತ್ರೇಷು ವಃ ಸೂರಿಭಿರೀಡ್ಯಮಾನಾತ್ ।
ಯಃ ಕರ್ಣನಾಡೀಂ ಪುರುಷಸ್ಯ ಯಾತೋ
ಭವಪ್ರದಾಂ ಗೇಹರತಿಂ ಛಿನತ್ತಿ ॥೧೧॥

ನಿಮ್ಮ ಗೆಳೆಯರಾದ ಮುನಿಶ್ರೇಷ್ಠರಾದ ಕೃಷ್ಣದ್ವೈಪಾಯನರು ಶ್ರೀಭಗವಂತನ ಗುಣಗಳನ್ನು ವರ್ಣಿಸುವುದಕ್ಕಾಗಿಯೇ ಮಹಾಭಾರತವನ್ನು ರಚಿಸಿದರು. ಅದರಲ್ಲಿ ಅವರು ವಿಷಯಸುಖಗಳನ್ನೂ ವರ್ಣನೆಮಾಡಿ ಅವುಗಳ ಮೂಲಕ ಜನರ ಮನಸ್ಸು ಶ್ರೀಕೃಷ್ಣನಲ್ಲಿ ನೆಲೆಗೊಳ್ಳುವಂತೆ ಮಾಡಿದ್ದಾರೆ.* ಶ್ರದ್ಧಾಳುವಾದ ಮನುಷ್ಯನ ಮನಸ್ಸಿನಲ್ಲಿ ಭಗವಂತನ ಕಥೆ

---

* "**ಯಸ್ಮಿನ್ನೃಣಾಂ ಗ್ರಾಮ್ಯಸುಖಾನುವಾದೈರ್ಮತಿರ್ಗೃಹೀತಾ ನು ಹರೇಃ ಕಥಾಯಾಮ್**" ವೇದವ್ಯಾಸರು ಮಹಾಭಾರತದಲ್ಲಿ ವಿಷಯಸುಖಗಳನ್ನು ವರ್ಣಿಸಿದರೂ ಅವುಗಳ ಮೂಲಕ ಭಗವಂತನ ಕಥೆಗಳಲ್ಲಿಯೇ ಆಸಕ್ತಿಯುಂಟಾಗುವಂತೆ ಮಾಡಿದ್ದಾರಂತೆ! ಇದು ಹೇಗೆ? ಕಾಮವಿಷಯಗಳನ್ನೂ, ಲೋಭವಿಷಯಗಳನ್ನೂ ಕೇಳುತ್ತಿದ್ದರೆ ಕಾಮ-ಲೋಭಗಳಲ್ಲಿಯೇ ಆಸಕ್ತಿಯು ಹೆಚ್ಚಿ ಕುರುಡನನ್ನು ಬಾವಿಯಲ್ಲಿ ತಳ್ಳಿದಂತೆ ಆಗುವುದಿಲ್ಲವೇ? ಇದರಲ್ಲಿ ಭಗವತ್ಕಥೆಗಳಲ್ಲಿ ಅನುರಾಗವುಂಟಾಗುವುದು ಅಸಾಧ್ಯ ವಲ್ಲವೇ? ಹೀಗಿರುವಾಗ ಕರುಣಾಳುಗಳೂ, ಜ್ಞಾನಿಶ್ರೇಷ್ಠರೂ ಆದ ವ್ಯಾಸಮಹರ್ಷಿಗಳು ಮಹಾಭಾರತದಲ್ಲಿ ಕಾಮ-ಲೋಭಗಳನ್ನು ಏಕೆ ವರ್ಣಿಸಿದರು? ಎಂದರೆ : ಅವರು ಜನರ ಮನಸ್ಸನ್ನು ಆಕರ್ಷಣೆಮಾಡುವುದಕ್ಕೆ ಮೊದಲು ಕಾಮ-ಲೋಭಗಳನ್ನು ವರ್ಣನೆಮಾಡಿದ್ದಾರೆ. ಅನಂತರ ಪವಿತ್ರವಾದ ಕಥೆಗಳಿಂದ ಆ ಕಾಮ-ಲೋಭಗಳು ನೀಚಗುಣಗಳೆಂದು ಮನವರಿಕೆಮಾಡಿ ಅವುಗಳಲ್ಲಿ ತಿರಸ್ಕಾರಬುದ್ಧಿಯನ್ನುಂಟುಮಾಡಿ

ಯಲ್ಲಿ ಹೀಗೆ ಅಭಿರುಚಿಯು ಹೆಚ್ಚಿದರೆ ಅದಕ್ಕೆ ಭಿನ್ನವಾದ ವಿಷಯಗಳಲ್ಲಿ ವೈರಾಗ್ಯವೇ ಅವನಿಗೆ ಅದರಿಂದ ಉಂಟಾಗುವುದು. ಆಗ ಆತನು ಭಗವಂತನ ಶ್ರೀಚರಣಗಳನ್ನು ನಿರಂತರವಾಗಿ ಧ್ಯಾನಿಸುತ್ತಾ ಪರಮಾನಂದದಲ್ಲಿ ಮುಳುಗುವನು. ಆಗ ಅವನ ಸಮಸ್ತದುಃಖಗಳೂ ಒಡನೆಯೇ ನಾಶಹೊಂದುತ್ತವೆ. ಆದರೆ ಅಜ್ಞಾನಿಗಳು ತಮ್ಮ ಪೂರ್ವಪಾಪದಿಂದ ಭಗವತ್ಕಥೆಗೆ ವಿಮುಖರಾಗುತ್ತಾರೆ. ಆ ಬಡಜೀವಿಗಳ ಮೇಲೆ ನನಗೆ ಅಯ್ಯೋ ಪಾಪ!' ಎಂದು ಕರುಣೆಯೇ ಉಂಟಾಗುತ್ತದೆ. ಭಗವಂತನಾದ ಕಾಲಪುರುಷನು ಅವರ ಅಮೂಲ್ಯವಾದ ಜೀವನಕಾಲವನ್ನು ಕಟಾಯಿಸುತ್ತಾ ಹೋಗುತ್ತಿದ್ದರೂ ಅವರು ತಮ್ಮ ಮಾತು, ಮನಸ್ಸು ಮತ್ತು ದೇಹಗಳನ್ನು ವ್ಯರ್ಥವಾದ ವಾದ-ವಿವಾದ, ವ್ಯರ್ಥಪ್ರಯತ್ನಗಳು ಮತ್ತು ವ್ಯರ್ಥವಾದ ಚಿಂತನೆಗಳಲ್ಲಿ ತೊಡಗಿಸುತ್ತಾ ಜೀವನವನ್ನೇ ಪೋಲುಮಾಡಿಕೊಳ್ಳುತ್ತಾರೆ. ಎಂತಹ ಶೋಚನೀಯವಾದ ವಿಷಯವಿದು!

ಮುನಿವರೇಣ್ಯರೇ! ತಾವು ದೀನಬಂಧುಗಳು. ದಯಾಳುಗಳು. ದುಂಬಿಯು ನಾನಾಪುಷ್ಪಗಳಿಂದ ರಸವನ್ನು ಶೋಧಿಸಿ ತೆಗೆಯುವಂತೆ– ತಾವು ಈ ಲೌಕಿಕಕಥೆಗಳಿಂದ ಅವುಗಳ ಸಾರಭೂತವಾಗಿರುವ ಪರಮ

ಪರಮಾತ್ಮನ ಕಲ್ಯಾಣಗುಣಗಳಲ್ಲಿ ಆಸಕ್ತಿಯು ಮೂಡುವಂತೆ ಮಾಡಿದ್ದಾರೆ. ಮಹಾಭಾರತದ ಕಥೆಯನ್ನು ಚೆನ್ನಾಗಿ ಅನುಸಂಧಾನಮಾಡಿದವರಿಗೆ ಈ ನೀತಿಯ ಅರಿವು ಉಂಟಾಗುತ್ತದೆ. "ಕಾಮಿನೋ ವರ್ಣಯನ್ಕಾಮಾನ್ ಲೋಭಂ ಲುಬ್ಧಸ್ಯ ವರ್ಣಯನ್ । ನರಃ ಕಿಂ ಫಲಮಾಪ್ನೋತಿ ಕೂಪೇऽನ್ಧಮಿವ ಪಾತಯನ್ ॥ ಲೋಕಚಿತ್ತಾವತಾರಾರ್ಥಂ ವರ್ಣಯಿತ್ವಾತ್ರ ತೇನ ತೌ । ಇತಿಹಾಸೈಃ ಪವಿತ್ರಾರ್ಥೈಃ ಪುನಸ್ತತ್ರೈವ ನಿನ್ದಿತೌ ॥ ಅನ್ಯಥಾ ಘೋರಸಂಸಾರಬನ್ಧಹೇತೂ ಜನಸ್ಯ ತೌ । ವರ್ಣಯೇತ್ಸ ಕಥಂ ವಿದ್ವಾನ್ ಮಹಾಕಾರುಣಿಕೋ ಮುನಿಃ ॥ " (ಇತಿಹಾಸ ಸಮುಚ್ಚಯ) (ಶ್ರೀಧರೀಯ).

ಮಹಾಭಾರತವನ್ನು ಅಭ್ಯಾಸಮಾಡುತ್ತಿದ್ದರೆ ಜನರ ಮನಸ್ಸು ಗ್ರಾಮ್ಯಸುಖ ವರ್ಣನೆಯಲ್ಲಿ ಲಗ್ನವಾಗದೇ ಶ್ರೀಹರಿಯ ಕಥೆಯಲ್ಲೇ ಲಗ್ನವಾಗುತ್ತದೆ. "ಭಾರತಾನ್ನಾಧಿಕಂ ವಿಷ್ಣೋರ್ಮಹಿಮಾವಾಚಕಂ ಕ್ವಚಿತ್ । ಭಾರತಾನ್ನ ವಿರಾಗಾಯ ಭಾರತಾನ್ನ ವಿಮುಕ್ತಯೇ ॥" (ವಿಜಯಧ್ವಜೀಯ)

ಶಾಖಾಚಂದ್ರನ್ಯಾಯದಿಂದ ಕೊನೆಗೆ ಭಗವತ್ಕಥೆಯಲ್ಲಿಯೇ ಬುದ್ಧಿಯು ಲಗ್ನ

ಪವಿತ್ರವೂ ಮಂಗಳಕರವೂ ಆದ ಶ್ರೀಹರಿಯ ಕಥೆಗಳನ್ನು ನಮ್ಮ ಮಂಗಳಕ್ಕಾಗಿ ಸಂಗ್ರಹಿಸಿ ಹೇಳಿರಿ. ಭಗವಂತನು ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗಾಗಿ ತನ್ನ ಶಕ್ತಿಯನ್ನು ಸ್ವೀಕರಿಸಿ, ಹಲವಾರು ಅವತಾರಗಳನ್ನು ಧರ್ಮಸಂಸ್ಥಾಪನೆಗಾಗಿ ಮಾಡಿ, ಅವುಗಳಲ್ಲಿ ತನ್ನ ಅತಿಮಾನುಷವಾದ ಅನೇಕಕಾರ್ಯಗಳನ್ನೂ ಮಾಡಿದನಲ್ಲವೇ? ಅವುಗಳನ್ನು ನನಗೆ ವಿಸ್ತರಿಸಿ ಹೇಳೋಣವಾಗಲಿ !" (ಶ್ಲೋಕ 8-16)

ಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ಮಹಾತ್ಮನಾದ ವಿದುರನು ಸಮಸ್ತಜೀವಿಗಳ ಕಲ್ಯಾಣಕ್ಕಾಗಿಯೇ ಮೈತ್ರೇಯರನ್ನು ಹೀಗೆ ಪ್ರಶ್ನೆಮಾಡಿದನು. ಅವನ ಸದಾಶಯವನ್ನೂ, ಸೌಜನ್ಯವನ್ನೂ, ಭಕ್ತಿ-ಜ್ಞಾನ-ವೈರಾಗ್ಯಮಹಿಮೆಯನ್ನೂ ಅಭಿನಂದಿಸುತ್ತಾ ಮೈತ್ರೇಯಮಹರ್ಷಿಗಳು ಹೀಗೆ ಉತ್ತರಿಸಿದರು :

"ಓ ಸಾಧುಶ್ರೇಷ್ಠನೇ! ಲೋಕಾನುಗ್ರಹಕ್ಕಾಗಿ ನೀನು ತುಂಬಾ ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ. ನಿನ್ನ ಮನಸ್ಸು ಸದಾ ಶ್ರೀಭಗವಂತನಲ್ಲೇ ಆಸಕ್ತವಾಗಿದೆ. ನೀನು ಕೃತಕೃತ್ಯನಾದ ಜ್ಞಾನಿಯಾಗಿರುವೆ. ಆದರೂ ನೀನು ಹೀಗೆ ಪ್ರಶ್ನೆಮಾಡಿದ್ದರಿಂದ ಈ ಲೋಕದಲ್ಲಿ ನಿನ್ನ ಕೀರ್ತಿಯು ಹಬ್ಬಿ

ವಾಗುವಂತೆ ಮಾಡುವುದಕ್ಕಾಗಿ ವ್ಯಾಸರು ಮಹಾಭಾರತದಲ್ಲಿ ಮೊದಲು ಗ್ರಾಮ್ಯಸುಖ ಗಳನ್ನು ವರ್ಣಿಸಿದ್ದಾರೆ. ಗ್ರಾಮ್ಯಸುಖಗಳಲ್ಲಿ ಮನಸ್ಸನ್ನು ಆಸಕ್ತಿಗೊಳಿಸುವುದರಲ್ಲಿ ಅವರಿಗೆ ತಾತ್ಪರ್ಯವೆಂದು ತಿಳಿಯಬಾರದು. 'ಕಾಮಿನಾಂ ವರ್ಣಯನ್ ಕಾಮಾನ್ ಮುನಿಃ' (ವೀರರಾಘವೀಯ) "ನಿನ್ನ ಮಿತ್ರರಾದ ಭಗವಾನ್ ವೇದವ್ಯಾಸರು ಭಗವಂತನ ಗುಣಗಳನ್ನು ವರ್ಣಿಸುವ ಇಚ್ಛೆಯಿಂದಲೇ ಮಹಾಭಾರತವನ್ನು ರಚಿಸಿದರು. ಆದರೆ ಅವರು ಅದರಲ್ಲಿ ಗ್ರಾಮ್ಯಸುಖಗಳನ್ನೂ ಪ್ರಾಸಂಗಿಕವಾಗಿ ವರ್ಣನೆಮಾಡಿದ್ದಾರೆ. ಅದರಿಂದ ಭಗವತ್ಕಥೆಯಲ್ಲಿ ಆಸಕ್ತಿ ಉಂಟಾದೀತೇ? ಎಂಬುದು ಪ್ರಶ್ನೆ. ಆದ್ದರಿಂದ ವಿಷಯಸುಖವರ್ಣನೆಯ ಬೆರಕೆಯಿಲ್ಲದೇ ಕೇವಲ ಭಗವತ್ಕಥೆಯನ್ನು ನೀನು ನನಗೆ ಹೇಳಬೇಕು" ಎಂದೂ ಅನುವಾದ ಮಾಡಬಹುದು. ಇದರಿಂದ ವ್ಯಾಸರ ಮಹಾಭಾರತದ ನಿಂದೆಯಾಗುವುದಿಲ್ಲ. ಭಾರತದ ಸಾರವಾದ ಭಗವತ್ಕತೆಯೇ ನೇರವಾಗಿ ಭಾಗವತದಲ್ಲಿ ಬಂದಿದೆ–ಎಂದು ಭಾಗವತದ ಹೊಗಳಿಕೆಯೂ ಆಗುತ್ತದೆ. ಭಾಗವತಾವತಾರಕ್ಕೆ ಕಾರಣವನ್ನು ಒಂದನೆಯ ಸ್ಕಂಧದಲ್ಲಿ ಹೀಗೆಯೇ ಹೇಳಿದೆ. (ಶ್ಲೋಕ ೧೨)

ಹರಡುವುದು. ಅನನ್ಯಭಾವದಿಂದ ಸರ್ವೇಶ್ವರನಾದ ಶ್ರೀಹರಿಯನ್ನು ಹಿಡಿದಿಟ್ಟುಕೊಂಡಿರುವ ಭಕ್ತಶ್ರೇಷ್ಠನು ನೀನು. ಬಾದರಾಯಣರ ಔರಸ ಪುತ್ರನೇ ಆಗಿರುವ ನಿನ್ನಲ್ಲಿ ಇಂತಹ ಮಹಿಮಾತಿಶಯವಿರುವುದು ಅಚ್ಚರಿ ಯೇನೂ ಅಲ್ಲ. ನೀನು ದುಷ್ಟಜೀವಿಗಳಿಗೆ ದಂಡನೆಯನ್ನು ಕೊಡುವ ಪೂಜ್ಯ ನಾದ ಯಮಧರ್ಮರಾಜನೇ ಆಗಿದ್ದೀಯೆ. ಮಾಂಡವ್ಯಮಹರ್ಷಿಗಳ ಶಾಪ ದಂತೆ ಶ್ರೀವೇದವ್ಯಾಸರಿಂದ ಅವರ ತಮ್ಮನಾದ ವಿಚಿತ್ರವೀರ್ಯನ ದಾಸಿಯ* ಗರ್ಭದಲ್ಲಿ ಜನ್ಮತಳೆದಿರುವೆ. ನೀನು ಸದಾ ಶ್ರೀಭಗವಂತನಿಗೂ ಆತನ ಭಕ್ತರಿಗೂ ಅತ್ಯಂತಪ್ರಿಯನಾದವನು. ಅದಕ್ಕೋಸ್ಕರವೇ ಭಗವಂತನು ಪರಂಧಾಮಕ್ಕೆ ತೆರಳುವಾಗ ನಿನಗೆ ಜ್ಞಾನೋಪದೇಶಮಾಡಬೇಕೆಂದು ನನಗೆ ಅಪ್ಪಣೆಯನ್ನು ಅನುಗ್ರಹಿಸಿದನು. ಅದರಂತೆ ಈಗ ನಾನು ನಿನಗೆ–ಭಗವಂತನು ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳ ಕಾರ್ಯಕ್ಕಾಗಿ ತನ್ನ ಯೋಗ ಮಾಯೆಯ ಮೂಲಕ ವಿಸ್ತಾರಗೊಳಿಸಿದ ಭಗವಂತನ ವಿವಿಧವಾದ ದಿವ್ಯಲೀಲೆಗಳನ್ನು ಕ್ರಮವಾಗಿ ವರ್ಣಿಸುತ್ತೇನೆ ; ಕೇಳು : (ಶ್ಲೋಕ 17-22)

---

* ವಿದುರನು ದಾಸೀಪುತ್ರನಾದರೂ ಅತ್ಯಂತಪೂಜ್ಯನಾದ ಮಹಾತ್ಮನೆಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ : (೧) ಅವನು ಯೋಗಿರಾಜನೂ–ದೇವಶ್ರೇಷ್ಠನೂ ಆದ ಯಮಧರ್ಮರಾಜನ ಅಂಶವೇ ಆಗಿದ್ದಾನೆ. (೨) ಭಗವದ್ಭಕ್ತಿಯುಳ್ಳವರು ಯಾವುದೇ ಕ್ಷೇತ್ರದಲ್ಲಿ ಹುಟ್ಟಿದ್ದರೂ ಅವರು ಭಾಗವತರಾದ್ದರಿಂದ ಪೂಜ್ಯರು. ಭಗವದ್ಭಕ್ತಿಯಿಲ್ಲದವರು ಉತ್ತಮಜಾತಿಯಲ್ಲಿ ಜನಿಸಿದ್ದರೂ ಅವರು ನಿಕೃಷ್ಟರೇ ಆಗಿದ್ದಾರೆ–ಎಂಬುದು ಶಾಸ್ತ್ರಗಳ ಘೋಷಣೆ. **"ನ ಶೂದ್ರಾಭಗವದ್ಭಕ್ತಾಸ್ತೇ ತು ಭಾಗವತಾಃ ಸ್ಮೃತಾಃ । ಸರ್ವವರ್ಣೇಷು ತೇ ಶೂದ್ರಾ ಯೇ ನ ಭಕ್ತಾ ಜನಾರ್ದನೇ ॥"** (೩) ವಿದುರನು ದಾಸಿಯ ಕ್ಷೇತ್ರದಲ್ಲಿ ಹುಟ್ಟಿದ್ದರೂ ಶ್ರೇಷ್ಠನಾದ ಮಹರ್ಷಿಯ ವೀರ್ಯದಿಂದ ಹುಟ್ಟಿದ್ದರಿಂದ ಮಹನೀಯನು. ಬೀಜಶಕ್ತಿಯಿಂದ ತಿರ್ಯಗ್ಜಂತುಗಳೂ ಕೂಡ ಮಹರ್ಷಿಗಳಾಗಬಹುದು. ಆದುದರಿಂದ ಕ್ಷೇತ್ರ-ಬೀಜಗಳಲ್ಲಿ ಬೀಜವೇ ಪ್ರಧಾನ ಎಂದೂ ಶಾಸ್ತ್ರಗಳು ಹೇಳುತ್ತವೆ.

"ಕ್ಷೇತ್ರಮನ್ಯೇ ಪ್ರಶಂಸನ್ತಿ ಬೀಜಮನ್ಯೇ ಮನೀಷಿಣಃ । ಬೀಜಮೇವೋತ್ತಮಂ ಯಸ್ಮಾತ್ ತಿರ್ಯಂಚೋ ಋಷಯೋಽಭವನ್ ॥" ಬೀಜ-ಕ್ಷೇತ್ರಗಳೆರಡರಿಂದಲೂ ಶುದ್ಧರಾಗಿ ಜ್ಞಾನಿಗಳೂ ಆಚಾರಶುದ್ಧರೂ ಆದ ಮಹಾತ್ಮರು ಶ್ರೇಷ್ಠತಮರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. (ಶ್ಲೋಕ ೨೦)

ಭಗವಾನೇಕ ಆಸೇದಮಗ್ರ ಆತ್ಮಾತ್ಮನಾಂ ವಿಭುಃ ।
ಆತ್ಮೇಚ್ಛಾನುಗತಾವಾತ್ಮಾ ನಾನಾಮತ್ಯುಪಲಕ್ಷಣಃ* ॥೨೩॥

ಈ ಜಗತ್ತಿನ ಸೃಷ್ಟಿಗೆ ಮೊದಲು ಎಲ್ಲ ಆತ್ಮಗಳಿಗೂ ಆತ್ಮವಾಗಿರುವ ಪ್ರಭು-ವಿಭು-ಪರಮಾತ್ಮನೊಬ್ಬನೇ ಇದ್ದನು. ಬಗೆ-ಬಗೆಯ ಶಕ್ತಿ-ವೃತ್ತಿ ಗಳಿಂದ ಕೂಡಿದ ಆತನು ತನ್ನ ಇಚ್ಛೆಯಿಂದ ತಾನೊಬ್ಬನೇ ತಾನೇ ತಾನಾಗಿ ದ್ದನು. ಏಕೈಕರಾಜನಾಗಿದ್ದ ಆತನೊಬ್ಬನೇ ದ್ರಷ್ಟಾರನಾಗಿದ್ದನು. ಆತನಿಗೆ ದೃಶ್ಯವಾವುದೂ ಕಾಣಲಿಲ್ಲ. 'ನಾನು ಅಸತ್ (ಅಭಾವ) ಪದಾರ್ಥದಂತೆ ಇದ್ದೇನಲ್ಲಾ!' ಎಂದು ಆತನು ಅಂದುಕೊಂಡನು. ಆದರೆ ವಾಸ್ತವವಾಗಿ ಆತನು ಅಸತ್‌ಪದಾರ್ಥವಾಗಿರಲಿಲ್ಲ. ಏಕೆಂದರೆ : ಆಗ ಆತನ ಶಕ್ತಿಗಳು ನಿದ್ರಿಸುತ್ತಿದ್ದುವು ಅಷ್ಟೇ ; ಆತನ ಜ್ಞಾನವೇನೂ ಲುಪ್ತವಾಗಿರಲಿಲ್ಲ. ದ್ರಷ್ಟಾರನಾಗಿದ್ದ ಆ ಪರಮಾತ್ಮನ ಸದಸದಾತ್ಮಕವಾದ (ಕಾರ್ಯ-ಕಾರಣ ರೂಪವಾದ) ಶಕ್ತಿಯೇ ಮಾಯೆ. ಅದರಿಂದಲೇ ಪ್ರಭುವು ಈ ಜಗತ್ತನ್ನು ಸೃಷ್ಟಿಸಿದನು. ಓ ಮಹಾತ್ಮನೇ! ಇಂದ್ರಿಯಾತೀತನೂ ತ್ರಿಗುಣಾತೀತನೂ ಆದ ಆ ವೀರ್ಯವಂತನಾದ ಪರಮಾತ್ಮನು ತ್ರಿಗುಣಮಯಿಯಾದ

---

* ಸೃಷ್ಟಿಗೆ ಮೊದಲು ಈ ವಿಶ್ವವು ಎಲ್ಲ ಜೀವಗಳಿಗೂ ಆತ್ಮವೂ (ಸ್ವರೂಪವೂ) ಸ್ವಾಮಿಯೂ ಆದ ಭಗವಂತನೇ ಆಗಿತ್ತು. ಆತನನ್ನು ಬಿಟ್ಟು ದ್ರಷ್ಟಾ ಅಥವಾ ದೃಶ್ಯವಾದ ಬೇರಾವುದೂ ಇರಲಿಲ್ಲ. ನಾನಾ ದ್ರಷ್ಟೃ ಮತ್ತು ದೃಶ್ಯಬುದ್ಧಿಗಳಿಂದ ಉಪಲಕ್ಷಿತವಾಗಿರಲಿಲ್ಲ. (ಕಾರಣಾತ್ಮಕವಾಗಿ ಇದ್ದರೂ ಪ್ರತ್ಯೇಕವಾದ ಪ್ರತೀತಿ ಯಾವುದಕ್ಕೂ ಇರಲಿಲ್ಲ. ಸೃಷ್ಟಿಯಲ್ಲಿ ನಾನಾಮತಿಗಳಿಂದ ಕಾಣುವ ಇದಾವುದೂ ಆಗ ಇರಲಿಲ್ಲ.) ಆಗ ಆ ಪರಮಾತ್ಮನೊಬ್ಬನೇ ದ್ರಷ್ಟೃವು ಆತನಿಗೆ ದೃಶ್ಯಪದಾರ್ಥವಾವುದೂ ಕಾಣಿಸಲಿಲ್ಲ. ತಾನೊಬ್ಬನೇ ಪ್ರಕಾಶಿಸುತ್ತಿದ್ದುದರಿಂದ ತನ್ನನ್ನೂ ಅಸತ್ ಪದಾರ್ಥವೋ ಎಂಬಂತೆ ಆತನು ತಿಳಿದುಕೊಂಡನು. (ಏಕೆಂದರೆ : ದೃಶ್ಯವೇ ಇಲ್ಲದಿರುವಾಗ ದ್ರಷ್ಟೃತ್ವವಾದರೂ ಎಲ್ಲಿಂದ ಬಂತು?) ಆದರೆ ಆತನು ಅಸತ್ತಾಗಿರಲಿಲ್ಲ. ಮಾಯಾದಿಶಕ್ತಿಗಳು ಆತನಲ್ಲಿ ಸುಪ್ತವಾಗಿದ್ದುವು, ಅಷ್ಟೇ. ಆ ದ್ರಷ್ಟಾರನ ಸದ ಸದಾತ್ಮಕವಾದ ಅಂದರೆ : ಕಾರ್ಯ-ಕಾರಣರೂಪವಾದ ಅಥವಾ ಆತ್ಮಾನಾತ್ಮರೂಪವಾದ ಶಕ್ತಿಯೇ ಮಾಯೆ. ಅದರಿಂದಲೇ ಭಗವಂತನು ಈ ಜಗತ್ತನ್ನು ನಿರ್ಮಾಣಮಾಡಿ ದನು. ಪರಮಾತ್ಮನು ಕಾಲಶಕ್ತಿಯಿಂದ ಗುಣಕ್ಷೋಭೆಗೊಂಡ ಆ ಮಾಯೆಯಲ್ಲಿ ತನ್ನ ಅಂಶವಾಗಿ ಪ್ರಕೃತಿಗೆ ಅಧಿಷ್ಠಾತೃವಾದ ಪುರುಷನಿಂದ ಚಿದಾಭಾಸರೂಪವಾದ

ಮಾಯೆಯಲ್ಲಿ ತನ್ನ ಅಂಶವಾದ ಪುರುಷನಿಂದ ತನ್ನ ವೀರ್ಯವನ್ನು ಇರಿಸಿದನು. ಕಾಲಶಕ್ತಿಯಿಂದ ತ್ರಿಗುಣಮಯಿಯಾದ ಮಾಯೆಯು ಕ್ಷೋಭೆಯನ್ನು ಹೊಂದಿದಾಗ ಆತನು ಆ ವೀರ್ಯಾಧಾನವನ್ನು ಅದರಲ್ಲಿ ಮಾಡಿದನು. ಆಗ ಕಾಲದ ಪ್ರೇರಣೆಯಿಂದ ಆ ಅವ್ಯಕ್ತವಾದ ಮಾಯೆಯಿಂದ ಮಹತ್ತತ್ತ್ವವು ಪ್ರಕಟಗೊಂಡಿತು. ಅದು ತನ್ನಲ್ಲಿ ಸೂಕ್ಷ್ಮವಾಗಿ ಅಡಗಿದ್ದ ಪ್ರಪಂಚವನ್ನು ಪ್ರಕಾಶಗೊಳಿಸುವ ತತ್ತ್ವವು. ಅಜ್ಞಾನವನ್ನು ನಾಶಪಡಿಸುವುದರಿಂದ ಅದು 'ವಿಜ್ಞಾನಾತ್ಮಾ' ಎಂದೂ ಕರೆಯಲ್ಪಡುತ್ತದೆ. ಅನಂತರ ಭಗವಂತನ ಅಂಶ, ಗುಣ ಮತ್ತು ಕಾಲಗಳಿಂದ ಕೂಡಿಕೊಂಡ ಆ ಮಹತ್ತತ್ತ್ವವು ಭಗವಂತನ ದೃಷ್ಟಿಗೆ ಬಿದ್ದು, ಈ ವಿಶ್ವವನ್ನು ರಚಿಸುವುದಕ್ಕೋಸ್ಕರ ತನ್ನನ್ನು ರೂಪಾಂತರಗೊಳಿಸಿಕೊಂಡಿತು. ಮಹತ್ತತ್ತ್ವವು ವಿಕಾರಗೊಳ್ಳಲು ಅಹಂಕಾರತತ್ತ್ವವು ಉತ್ಪನ್ನಗೊಂಡಿತು. ಕಾರ್ಯ (ಅಧಿಭೂತ), ಕಾರಣ (ಅಧ್ಯಾತ್ಮ) ಮತ್ತು ಕರ್ತೃ (ಅಧಿದೈವ) ಎಂಬ ಮೂರು ರೂಪಗಳಿಂದ ಕ್ರಮವಾಗಿ ಭೂತ, ಇಂದ್ರಿಯ ಮತ್ತು ಮನೋರೂಪವಾಗಿ ಈ ಅಹಂಕಾರತತ್ತ್ವವು ಸಾತ್ತ್ವಿಕ, ರಾಜಸ ಮತ್ತು ತಾಮಸ ಎಂದು ಮೂರು

ವೀರ್ಯವನ್ನು ಇರಿಸಿದನು. ಅನಂತರ ಕಾಲದಿಂದ ಪ್ರೇರಿತವಾದ ಆ ಅವ್ಯಕ್ತದಿಂದ ಅಂದರೆ ಮಾಯೆಯಿಂದ ಮಹತತ್ತ್ವವುಂಟಾಯಿತು. ಸತ್ತ್ವಪ್ರಧಾನವಾದ್ದರಿಂದ ಈ ತತ್ತ್ವವನ್ನು 'ವಿಜ್ಞಾನಾತ್ಮಾ' ಎಂದು ಪುಲ್ಲಿಂಗದಿಂದ ನಿರ್ದೇಶಿಸಿದೆ. ಬೀಜವನ್ನು ಅಂಕುರಾದಿ ರೂಪದಲ್ಲಿ ವ್ಯಕ್ತಗೊಳಿಸುವಂತೆ ಪ್ರಕಾಶಗೊಳಿಸಿದ್ದರಿಂದ ಇದು ತಮೋನಿವಾರಕ-ಪ್ರಕಾಶಕ-ವಿಜ್ಞಾನಾತ್ಮಾ ಎನಿಸಿದೆ. **"ವಿಷ್ಣೋಸ್ತು ತ್ರೀಣಿ ರೂಪಾಣಿ ಪುರುಷಾಖ್ಯಾನ್ಯತೋ ವಿದುಃ । ಪ್ರಥಮಂ ಮಹತೋ ರೂಪಂ ದ್ವಿತೀಯಂ ತ್ವಂಡ ಸಂಸ್ಥಿತಮ್ । ತೃತೀಯಂ ಸರ್ವಭೂತಸ್ಥಂ ತಾನಿ ಜ್ಞಾತ್ವಾ ವಿಮುಚ್ಯತೇ ॥"** (ಶ್ರೀಧರೀಯ)

ಸೃಷ್ಟಿಗೆ ಪ್ರಾರಂಭದಲ್ಲಿ ಜೀವಗಳಿಗೆ ಅಧಿಪತಿಯಾದ ಪರಮಾತ್ಮನೊಬ್ಬನೇ ಇದ್ದನು. ಅವನು ಸೃಷ್ಟಿಮಾಡಬೇಕೆಂಬ ತನ್ನ ಇಚ್ಛಾಭಾವದಿಂದ ತನಗೆ ಅಧೀನವಾದ ನಾನಾ ಶಕ್ತಿ (ಸಾಧನ) ಗಳಿಂದ ಕೂಡಿದವನಾಗಿದ್ದನು. (**'ನಾನಾಶಕ್ತ್ಯುಪಲಕ್ಷಣಃ;'** ಎಂಬ ಪಾಠದಂತೆ) **'ನಾನಾಮತ್ಯುಪಲಕ್ಷಣಃ'** ಎಂಬ ಪಾಠಾಂತರದಂತೆ **"ಸದೇವ ಸೋಮ್ಯೇದಮಗ್ರ ಆಸೀತ್"**, **'ಅಸದೇವೇದಮಗ್ರ ಆಸೀತ್'** ಇತ್ಯಾದಿ ಶ್ರುತಿಗಳ ತಾತ್ಪರ್ಯವನ್ನರಿಯದ ನಾನಾವಾದಿಗಳ ಮತದಿಂದ ಉಪಲಕ್ಷಿತನಾಗಿ ಎಂದು ಅಭಿಪ್ರಾಯ.) ಏಕೈಕಚಕ್ರವರ್ತಿಯಾದ ಆತನು ಆ ಪ್ರಳಯಕಾಲದಲ್ಲಿ ವಿಶ್ವವನ್ನು ಕಾಣಲಿಲ್ಲ.

ಬಗೆಯಾಯಿತು. ಅವುಗಳಲ್ಲಿ ಸಾತ್ತ್ವಿಕಾಹಂಕಾರದಿಂದ ಮನಸ್ಸೂ ಮತ್ತು ದೇವತೆಗಳೂ ಹುಟ್ಟಿದರು. ರಾಜಸಾಹಂಕಾರವು ಜ್ಞಾನ ಮತ್ತು ಕರ್ಮೇಂದ್ರಿಗಳಿಗೆ ಕಾರಣವಾಯಿತು. ತಾಮಸಾಹಂಕಾರದಿಂದ ಸೂಕ್ಷ್ಮ ಭೂತಗಳಿಗೆ ಕಾರಣವಾದ ಶಬ್ದತನ್ಮಾತ್ರೆಯು ಉಂಟಾಯಿತು. ಅದರಿಂದ ಪರಮಾತ್ಮನಿಗೆ ಶರೀರಭೂತವಾಗಿರುವ (ಪರಮಾತ್ಮನಿಗೆ ದೃಷ್ಟಾಂತವಾಗಿ ಹೇಳಲ್ಪಟ್ಟಿರುವ) ಆಕಾಶತತ್ತ್ವವು* ಹುಟ್ಟಿತು. ಭಗವಂತನ ದೃಷ್ಟಿಯು ಆಕಾಶದ ಮೇಲೆ ಬೀಳಲು ಆಗ ಅದರಿಂದ ಮತ್ತೆ (ಕಾಲಮಾಯೆ ಮತ್ತು ಚಿದಂಶಗಳ ಯೋಗದಿಂದ) ಸ್ಪರ್ಶತನ್ಮಾತ್ರೆಯು ಉಂಟಾಯಿತು. ಅದು ವಿಕಾರಗೊಂಡಾಗ ವಾಯುವು ಉತ್ಪನ್ನವಾಯಿತು. ಮಹಾಬಲಶಾಲಿಯಾದ

ಏಕೆಂದರೆ : ಸರ್ವಕಾರ್ಯಗಳೂ ಆಗ ಮೂಲಪ್ರಕೃತಿಯಲ್ಲಿ ಲೀನವಾಗಿದ್ದುವು. ಆದರೆ ಆತನಿಗೆ ದರ್ಶನಶಕ್ತಿಯಿರಲಿಲ್ಲವೆಂದು ಅಭಿಪ್ರಾಯವಲ್ಲ. ಏಕೆಂದರೆ : ಆತನೇ ದ್ರಷ್ಟಾ ಎಂದು ಹೇಳಿದೆ. "ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ದೃಶ್ಯತೇ ।" ಜೀವಗಳು ನಿತ್ಯವಾದ್ದರಿಂದ ಅವುಗಳಿಗೆ ಲಯವಿಲ್ಲ. ಆದ್ದರಿಂದ ಅವುಗಳನ್ನಾದರೂ ನೋಡ ಬೇಕಲ್ಲಾ! ಎಂದರೆ : ಜೀವಗಳು ಅಶಕ್ತವಾಗಿದ್ದರಿಂದ ಅಸತ್ತೋ ಎಂದು ಅವುಗಳನ್ನು ತಿಳಿದನು. "ಪರಮಾತ್ಮಾ ಯತೋ ಜೀವಂ ಮೇನೇಽಸನ್ತಮಶಕ್ತತಃ ।" ಪರಮಾತ್ಮನನ್ನು ಬಿಟ್ಟು ಜೀವಪದಾರ್ಥವಿಲ್ಲ–ಎಂದು ಅಪಾರ್ಥವು ಕೂಡದು. ಆತ್ಮಾನಂ–ಎಂದರೆ ಆತ್ಮ (ಜೀವ) ಗಳನ್ನು ಎಂದರ್ಥ. (ಜಾತಾವೇಕವಚನಂ) ಆತನು ಸುಪ್ತಶಕ್ತಿಯಾಗಿದ್ದನು ಎಂದರೆ : ಆತನ ಭಾರ್ಯೆಯಾದ ರಮಾದೇವಿಯು ಆತನಲ್ಲಿ ಅತ್ಯಂತ ರತಳಾಗಿದ್ದಳು ಎಂದೂ ಅಭಿಪ್ರಾಯ. ಮಹತ್ತತ್ತ್ವ = ಚತುರ್ಮುಖ ಬ್ರಹ್ಮದೇವರ ಶರೀರ. ವಿಜ್ಞಾನಾತ್ಮಾ = ಬ್ರಹ್ಮದೇವರು ಅವ್ಯಕ್ತಾಭಿಮಾನಿಯಾಗಿ ಅವ್ಯಕ್ತ ಎನಿಸಿದ ಕೂಟಸ್ಥವಾದ ರಮಾದೇವಿಯಿಂದ–'ಇದು ನನ್ನ ದೇಹ' ಎಂದು ಅರಿವುಳ್ಳವನಾದನು. (ವಿಜಯಧ್ವಜೀಯ)

ಸ್ಥೂಲಸದಸದಾತ್ಮಕವಾದ ಈ ಜಗತ್ತು ಸೃಷ್ಟಿಗೆ ಹಿಂದೆ ಜೀವಾತ್ಮಗಳಿಗೆ (ಅಂತರ್ಯಾಮಿಯಾಗಿ ಧಾರಕವಾದ) ಆತ್ಮವೂ-ಸ್ವಾಮಿಯೂ ಆಗಿರುವ (ನಾಮ-ರೂಪ-ವಿಭಾಗರಹಿತವಾಗಿ ಸೂಕ್ಷ್ಮಚಿತಚಿದಾತ್ಮಕವಾದ) ಭಗವಂತನೇ ಆಗಿತ್ತು. ಆ ಭಗವಂತನೇ ತನ್ನ ಸೃಷ್ಟಿಸಂಕಲ್ಪವು ಅಂಕುರಿಸಿದಾಗ ನಾನಾಮತಿಗಳಿಂದ ಉಪಲಕ್ಷಿತ

---

* ಆಕಾಶವು ಪರಮಾತ್ಮನಿಗೆ ಶರೀರ ಮತ್ತು ಪರಮಾತ್ಮನಿಗೆ ದೃಷ್ಟಾಂತ ಎಂಬುದಕ್ಕೆ ಪ್ರಮಾಣವಾಕ್ಯಗಳು : "ಆಕಾಶಶರೀರಂ ಬ್ರಹ್ಮ", "ಖಂ ಬ್ರಹ್ಮೋಪಾಸೀತ"

(ಶ್ಲೋಕ ೩೧)

ವಾಯುವು ಆಕಾಶದೊಡನೆ ವಿಕಾರಗೊಂಡಾಗ ರೂಪತನ್ಮಾತ್ರೆಯು ಹುಟ್ಟಿಕೊಂಡಿತು. ಅದರಿಂದ ಜಗತ್ತಿಗೇ ಪ್ರಕಾಶವನ್ನು ನೀಡುವ ತೇಜಸ್ಸು ಉತ್ಪನ್ನವಾಯಿತು. ಮತ್ತೆ ಪರಮಾತ್ಮನ ದೃಷ್ಟಿಗೆ ಪಾತ್ರವಾಗಿ ವಾಯುಸಹಿತವಾದ ತೇಜಸ್ಸು ಕಾಲಮಾಯೆ ಮತ್ತು ಚಿದಂಶಗಳ ಯೋಗದಿಂದ ವಿಕಾರಗೊಂಡು ರಸತನ್ಮಾತ್ರೆಯ ಕಾರ್ಯವಾದ ಜಲತತ್ತ್ವವನ್ನು ನಿರ್ಮಾಣಮಾಡಿತು. ಅನಂತರ ಜಲವು ತೇಜಸ್ಸಿನೊಡನೆ ಸೇರಿ ಭಗವಂತನ ನೋಟದಿಂದ ವಿಕಾರಗೊಂಡು ಕಾಲಮಾಯೆ ಮತ್ತು ಚಿದಂಶಗಳ ಯೋಗದಿಂದ ಗಂಧಗುಣವುಳ್ಳ ಪೃಥಿವಿಯನ್ನು ಉಂಟುಮಾಡಿತು. ಆಕಾಶವೇ ಮುಂತಾದ ಪಂಚಭೂತಗಳಲ್ಲಿ ಉತ್ತರೋತ್ತರಭೂತಗಳಲ್ಲಿ ಕ್ರಮವಾಗಿ ಅವುಗಳ ಹಿಂದು-ಹಿಂದಿನ ಭೂತಗಳ ಗುಣಗಳೂ ಅನುವರ್ತಿಸುತ್ತವೆಯೆಂದು ತಿಳಿಯಬೇಕು. (ಉದಾಹರಣೆಗೆ ಆಕಾಶದ ಅನಂತರ ಬರುವ ವಾಯುವಿನಲ್ಲಿ ಆಕಾಶದ ಗುಣವಾದ ಸ್ಪರ್ಶವು ಅನುವೃತ್ತಿಹೊಂದುತ್ತದೆ. ಕೊನೆಯದಾದ ಪೃಥಿವಿಯಲ್ಲಿ ಅದರ ಹಿಂದಿನದಾದ ಎಲ್ಲ ಭೂತಗಳ ಗುಣಗಳೂ ಅನುವೃತ್ತಿಹೊಂದುತ್ತವೆ.) ಆ ಮಹತ್ತತ್ತ್ವಾದಿಗಳಿಗೆ ಅಭಿಮಾನಿಗಳಾಗಿ ವಿಕಾರ, ವಿಕ್ಷೇಪ

ವಾಗುವ (ದೇವತೆಗಳೇ ಮುಂತಾದ ನಾನಾ ನಾಮ-ರೂಪವಿಷಯವಾದ) ಬುದ್ಧಿಯಿಂದ ಬೋಧ್ಯನಾಗಿದ್ದನು. ಏಕೆಂದರೆ : ನಾಮ-ರೂಪವಿಷಯವಾದ ಮತಿಗಳೆಲ್ಲಕ್ಕೂ ಅವನಲ್ಲಿಯೇ ವಿಶ್ರಾಂತಿ. ನಾಮ-ರೂಪ-ವಿಭಾಗವಸ್ಥೆಯಲ್ಲಿರುವಾಗ ಅವನಿಗೆ ಕಾರ್ಯಾವಸ್ಥೆ ; ಆ ವಿಭಾಗ ಇಲ್ಲದಿರುವಾಗ ಕಾರಣಾವಸ್ಥೆ. (ಅಥವಾ '**ಅನಾನಾಮತ್ಯುಪಲಕ್ಷಣಃ** ' ಎಂದು ಪದವಿಭಾಗ ಮಾಡಿರಿ. ಸಂಹಾರವಿಷಯವಾದ ಸಂಕಲ್ಪವುಂಟಾದಾಗ ದೇವಾದಿ ನಾಮ-ರೂಪ-ವಿಷಯ-ಬುದ್ಧಿಗಳಿಂದ ಉಪಲಕ್ಷಿತನಾಗದವನು ಭಗವಂತ ಎಂದರ್ಥ.)...ಪ್ರಳಯದಶೆಯಲ್ಲಿಯೂ ಆ ಪರಮಾತ್ಮನು ದ್ರಷ್ಟಾ–ಅಂದರೆ : ಸರ್ವಜ್ಞನು ; ಅಸುಪ್ತದೃಷ್ಟಿಯುಳ್ಳವನು ; ಅಸಂಕುಚಿತಜ್ಞಾನವುಳ್ಳವನು. ಜೀವಾತ್ಮನಂತೆ ಸಂಕೋಚ-ವಿಕಾಸಗಳುಳ್ಳವನಲ್ಲ. **ಏಕರಾಟ್**-ಏಕರೂಪಪ್ರಕಾಶವುಳ್ಳವನು. ಆಗ ಆತನ ಶಕ್ತಿಯು ಸುಪ್ತವಾಗಿತ್ತು. ಚಿದಚಿದಾಖ್ಯಶಕ್ತಿಯು ಸೂಕ್ಷ್ಮಾವಸ್ಥೆಯಲ್ಲಿತ್ತು. ಆದ್ದರಿಂದ ದೃಶ್ಯವು (ಕಾರ್ಯಜಗತ್ತು) ಆತನಿಗೆ ಕಾಣಲಿಲ್ಲ. **ಅಸತ್ತ್ವೋ**–ಎಂದರೆ : ಅವ್ಯವಹಾರಕ್ಕೆ ಅರ್ಹವಾದ ನಾಮ-ರೂಪರಹಿತನೋ ಎಂಬಂತೆ ತನ್ನನ್ನು ಭಾವಿಸಿದನು. ಸೂಕ್ಷ್ಮದರ್ಶಿಯಾದ್ದರಿಂದ ತನ್ನ ಶರೀರದಲ್ಲಿರುವ ಸೂಕ್ಷ್ಮಾವಸ್ಥೆಯುಳ್ಳ ಚಿದಚಿದ್ವಿಷಯದ ಜ್ಞಾನವು ಆತನಿಗೆ ಆಗಲೂ ಉಂಟೇ ಉಂಟು. ಅವನು ಸರ್ವಜ್ಞ, ಆದರೆ ನಾಮ-ರೂಪ-ವಿಭಾಗ ಆಗ ಇಲ್ಲವಾದ್ದರಿಂದ **ಅಸತ್**-

ಮತ್ತು ಚೇತನಾಂಶಗಳಿಂದ ಯುಕ್ತರಾದ ದೇವಗಣಗಳೆಲ್ಲಾ ಶ್ರೀಭಗವಂತನ ಅಂಶಗಳೇ ಆಗಿದ್ದಾರೆ. ಆದರೆ ಪ್ರತ್ಯೇಕ-ಪ್ರತ್ಯೇಕವಾಗಿ ಸಮಾನವಾಗಿದ್ದುದರಿಂದ ಅವರು ಪ್ರಪಂಚರಚನೆಯೆಂಬ ತಮ್ಮ ಕಾರ್ಯಗಳನ್ನು ಮಾಡಲು ವಿಫಲರಾದರು. ಆಗ ಅವರು ಕೈಜೋಡಿಸಿಕೊಂಡು ಭಗವಂತನನ್ನು ಹೀಗೆ ಪ್ರಾರ್ಥಿಸಿದರು : (ಶ್ಲೋಕ 23-37)

"ಓ ದೇವದೇವನೇ! ನಿನ್ನ ಪಾದಾರವಿಂದಗಳಿಗೆ ನಮಸ್ಕಾರವು. ಅವು ಶರಣುಬಂದ ಜೀವಿಗಳ ತಾಪವನ್ನು ಹೋಗಲಾಡಿಸುವ ವಿಷಯದಲ್ಲಿ ಛತ್ರಗಳಂತಿವೆ. ಅವುಗಳ ಆಸರೆಪಡೆದರೆ ಯತಿಗಳು ಅನಂತವಾದ ಸಂಸಾರ ದುಃಖವನ್ನೂ ಸುಲಭವಾಗಿ ದೂರಕ್ಕೆ ಬಿಸಾಡಿಬಿಡಬಹುದು. ಇಂತಹ ಮಹಾಮಹಿಮವಾದ ನಿನ್ನ ಅಡಿದಾವರೆಗಳಿಗೆ ನಮೋನಮಃ.

ಓ ಸೃಷ್ಟಿಕರ್ತನೇ! ಜಗದೀಶ್ವರ! ಈ ಸಂಸಾರದಲ್ಲಿ ಮುಬ್ಬಗೆಯ ತಾಪಗಳಿಗೆ ಒಳಗಾಗಿ ಜೀವಗಳು ಕಳವಳಪಡುತ್ತಿರುವುದರಿಂದ ಅವುಗಳಿಗೆ

ಸದೃಶನಾಗಿದ್ದಾನೆ ಅಷ್ಟೇ. ಸತ್ ಎಲ್ಲವನ್ನೂ ನೋಡುವ ಆತನ ವಿಶೇಷಣವಾದ ಮಾಯಾಶಕ್ತಿಯು ಸದಸದಾತ್ಮಕ ಅಂದರೆ : ಚೇತನಾಚೇತನಾತ್ಮಕವಾದುದು. ಅಂತಹ ತನ್ನ ಪ್ರಕೃತಿಯಿಂದ (ಶಕ್ತಿಯಿಂದ) ಆತನು ತನ್ನ ಕಾರ್ಯಾವಸ್ಥೆಯಾದ ಚೇತನಾಚೇತನಾತ್ಮಕವಾದ ಜಗತ್ತನ್ನು ಸೃಷ್ಟಿಸಿದನು. ಸೂಕ್ಷ್ಮ ಚಿದಚಿದ್ವಿಶಿಷ್ಟನಾಗಿ ಆತನು ಜಗತ್ತಿಗೆ ಉಪಾದಾನಕಾರಣ. ಆತನ ಕೇವಲ ನಿಷ್ಕೃಷ್ಟಸ್ವರೂಪವು ನಿಮಿತ್ತಕಾರಣ.

ಕಾಲವೃತ್ತ್ಯಾ = ಕಾಲಾನುಗುಣವಾದ ವೃತ್ತಿಯಿಂದ. ಆದ್ದರಿಂದಲೇ ಸೌಮ್ಯತೆಯಿಲ್ಲದೇ ಸತ್ತ್ವಾದಿಗುಣಗಳುಳ್ಳ ಪ್ರಕೃತಿಯಲ್ಲಿ ತನ್ನ ಶರೀರಭೂತನಾದ ಪುರುಷ (ಜೀವ) ನಿಂದ ವೀರ್ಯ (ಸೃಷ್ಟಿಸಾಮರ್ಥ್ಯ)ವನ್ನೂ ತಾನು ನಿರ್ವಿಕಾರನಾಗಿಯೇ ಇದ್ದುಕೊಂಡು ಇರಿಸಿದನು. ಹಾಗೆ ವೀರ್ಯವು ಇರಿಸಲ್ಪಡಲು ಕಾಲಪ್ರೇರಿತವಾದ ಅವ್ಯಕ್ತದಿಂದ ವಿಜ್ಞಾನಾತ್ಮನಾದ (ಜೀವಾಂತರಾತ್ಮನಾದ) ತಾನೇ ತನ್ನ ಶರೀರಭೂತವಾಗಿ ತನ್ನಲ್ಲಿದ್ದು ವಿಶ್ವವನ್ನು (ಕಾರ್ಯವನ್ನು) ಪ್ರಕಾಶಪಡಿಸುತ್ತಾ ತಮೋನುದನಾಗಿ (ತಮಶ್ಶಬ್ದವಾಚ್ಯವಾದ ಪ್ರಕೃತಿಗೆ ಪ್ರೇರಕನಾಗಿ) ಮಹತ್ತತ್ತ್ವವಾದನು. ಮಹತ್ತತ್ತ್ವಶರೀರಕನಾದನು. ಸಾತ್ತ್ವಿಕ-ರಾಜಸ ಅಹಂಕಾರಗಳನ್ನು ಕ್ರಮವಾಗಿ ವೈಕಾರಿಕ ಮತ್ತು ತೈಜಸ-ಅಹಂಕಾರಗಳೆಂದೂ ಕರೆಯುತ್ತಾರೆ. (ವೀರರಾಘವೀಯ)
(ಶ್ಲೋಕ ೨೩-೨೮)

ಸ್ವಲ್ಪವೂ ಶಾಂತಿಯಿಲ್ಲವಾಗಿದೆ. ಆದ್ದರಿಂದ ನಾವು ನಿನ್ನ ಶ್ರೀಚರಣಗಳ ಜ್ಞಾನಮಯವಾದ ಛಾಯೆಯ ಆಶ್ರಯವನ್ನು ಪಡೆಯುತ್ತೇವೆ.

ಮುನಿಗಳು ಏಕಾಂತವಾದ ಜಾಗದಲ್ಲಿ ಕುಳಿತು ನಿನ್ನ ಮುಖಕಮಲದ ಆಶ್ರಯದಲ್ಲಿರುವ ವೇದಮಂತ್ರಗಳೆಂಬ ಪಕ್ಷಿಗಳ ಸಹಾಯದಿಂದ ಯಾವುದನ್ನು ಅರಸುತ್ತಿರುವರೋ ಮತ್ತು ಯಾವುದು ಸಮಸ್ತಪಾಪಗಳನ್ನೂ ನಾಶ ಮಾಡುವ ನದಿಗಳಲ್ಲಿ ಶ್ರೇಷ್ಠವಾದ ಶ್ರೀಗಂಗಾದೇವಿಗೆ ಉತ್ಪತ್ತಿಧಾಮ ವಾಗಿದೆಯೋ–ಅಂತಹ ನಿನ್ನ ಪರಮಪಾವನವಾದ ಪಾದಪದ್ಮಗಳನ್ನು ಮರೆಹೋಗುತ್ತೇವೆ.

ಧೀರರಾದ ಯೋಗೀಶ್ವರನು ಯಾವುದನ್ನು–ಶ್ರದ್ಧೆ ಮತ್ತು ಶ್ರವಣ-ಕೀರ್ತನಾರೂಪವಾದ ಭಕ್ತಿಯಿಂದ–ಶುದ್ಧವಾದ ತಮ್ಮ ಅಂತಃಕರಣದಲ್ಲಿ ಧರಿಸಿ, ಜ್ಞಾನ-ವೈರಾಗ್ಯಗಳ ಬಲದಿಂದ ಮುಕ್ತಿಯನ್ನು ಪಡೆಯುತ್ತಾರೆಯೋ–ಅಂತಹ ನಿನ್ನ ಪಾದಗಳ ಪೀಠವು ನಮಗೆ ಶರಣಾಗಲಿ.

ಪ್ರಭೋ! ನೀನು ಪ್ರಪಂಚದ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗಾಗಿಯೇ ಅವತರಿಸುತ್ತೀಯೆ. ಆದುದರಿಂದ ನಾವೆಲ್ಲರೂ ಸ್ಮರಣೆಮಾಡುವ, ಭಕ್ತಜನರಿಗೆ ಅಭಯವನ್ನೀಯುವ ನಿನ್ನ ಆ ಅಡಿದಾವರೆಗಳನ್ನು ಶರಣುಹೊಂದುತ್ತೇವೆ.

ನೀನು ಸಕಲಮನುಷ್ಯರ ಹೃದಯಗಳಲ್ಲಿಯೂ ಅಂತರ್ಯಾಮಿಯಾಗಿ ವಾಸಮಾಡುತ್ತಿದ್ದರೂ ಯಾರು ಮನೆ-ಮಡದಿ-ಮಕ್ಕಳು-ದೇಹ-ಮುಂತಾದುವುಗಳಲ್ಲಿ 'ನಾನು' 'ನನ್ನದು'–ಎಂಬ ಮಾಯಾಮೋಹಪಾಶಗಳಿಂದ ತಮ್ಮನ್ನು ಕಟ್ಟಿಕೊಂಡಿರುತ್ತಾರೋ–ಅಂತಹವರಿಗೆ ಮಾತ್ರ ಅತ್ಯಂತದೂರ ವಾಗಿರುವ ನಿನ್ನ ಚರಣಾರವಿಂದಗಳನ್ನು ಭಜಿಸುತ್ತೇವೆ.

ಮಹಾಪಾದನೂ ಮಹಾಕೀರ್ತಿಸಂಪನ್ನನೂ ಆಗಿರುವ ಓ ಪರಮೇಶ್ವರನೇ! ಇಂದ್ರಿಯಗಳು ವಿಷಯಗಳಿಗೇ ಅಭಿಮುಖವಾಗಿರುವುದರಿಂದ ಯಾರ ಮನಸ್ಸು ಸದಾ ಹೊರಗಡೆಯೇ ಅಲೆದಾಡುತ್ತದೆಯೋ–ಅಂತಹ ಪಾಮರಜನರು ನಿಜವಾಗಿಯೂ ನಿನ್ನ ಶ್ರೀಪಾದವಿನ್ಯಾಸದ ಕಾಂತಿ

ಯನ್ನು ವಿಶೇಷವಾಗಿ ತಿಳಿದಿರುವ ಭಕ್ತಜನರ ದರ್ಶನವನ್ನು ಪಡೆಯುವು ದಿಲ್ಲ. ಅದಕ್ಕೇ ಅವರು ನಿನ್ನ ಶ್ರೀಚರಣಾರವಿಂದಗಳಿಂದ ದೂರವಾಗಿದ್ದಾರೆ.

ಪ್ರಭೋ! ನಿನ್ನ ಕಥಾಮೃತವನ್ನು ಪಾನಮಾಡಿದ್ದರಿಂದ ಉಕ್ಕಿಬರುವ ಭಕ್ತಿಯಿಂದ ಯಾರ ಮನಸ್ಸು ನಿರ್ಮಲವಾಗಿಬಿಟ್ಟಿದೆಯೋ–ಅಂತಹವರು ವೈರಾಗ್ಯಸಾರವಾದ ಆತ್ಮಜ್ಞಾನವನ್ನು ಪಡೆದು ಅನಾಯಾಸವಾಗಿಯೇ ವೈಕುಂಠಧಾಮವನ್ನು ಹೊಂದಿಬಿಡುವರು.

ಅಂತೆಯೇ ಮತ್ತೆ ಕೆಲವು ಧೀರರು ಚಿತ್ತವೃತ್ತಿನಿರೋಧರೂಪವಾದ ಸಮಾಧಿಯ ಬಲದಿಂದ ನಿನ್ನ ಪ್ರಬಲವಾದ ಮಾಯೆಯನ್ನು ದಾಟಿದವರಾಗಿ ನಿನ್ನಲ್ಲಿ ಲೀನರಾಗುತ್ತಾರೆ. ಆದರೆ ಅವರು ಅದಕ್ಕಾಗಿ ತುಂಬಾ ಶ್ರಮಪಡ ಬೇಕಾಗುತ್ತದೆ. ನಿನ್ನ ಸೇವಾಮಾರ್ಗದಲ್ಲಾದರೋ ಯಾವ ಶ್ರಮವೂ ಇರುವುದಿಲ್ಲ. ಸಿದ್ಧಿಯಲ್ಲಿ ಮಾತ್ರವಲ್ಲದೇ ಸಾಧನೆಯ ದಾರಿಯಲ್ಲೂ ಸುಖ ಕರವಾದುದು ನಿನ್ನ ಸೇವೆ. (ಶ್ಲೋಕ 38-46)

ಓ ಆದಿದೇವನೇ! ಪ್ರಪಂಚದ ಸೃಷ್ಟಿಗಾಗಿ ನೀನು ನಮ್ಮನ್ನು ತ್ರಿಗುಣಮಯವನ್ನಾಗಿ ಸೃಷ್ಟಿಸಿರುವೆ. ಆದರೆ ನಮ್ಮಲ್ಲಿ ಪರಸ್ಪರ ಸಾಮ್ಯವಿಲ್ಲ. ಎಲ್ಲರ ಸ್ವಭಾವವೂ ಬೇರೆ-ಬೇರೆಯಾಗಿದೆ. ಆದ್ದರಿಂದ ನಾವು ಒಟ್ಟಾರೆ ಸೇರಿ ನಿನ್ನ ಕ್ರೀಡೆಗಾಗಿ ಲೋಕಸೃಷ್ಟಿಯನ್ನು ಮಾಡಿ ನಿನಗೆ ಸಮರ್ಪಿಸಲು ಅಸಮರ್ಥರಾಗಿದ್ದೇವೆ.

ಆದ್ದರಿಂದ ಜೀಯಾ! ನಾವು ಹೇಗಾದರೆ ಬ್ರಹ್ಮಾಂಡವನ್ನು ರಚಿಸಿ ನಿನಗೆ ಸಮಸ್ತಪೂಜೆಗಳನ್ನೂ ಸಮರ್ಪಿಸಲು ಸಮರ್ಥರಾಗುವೆವು? ಅನ್ನ ವನ್ನೂ ಪಡೆದು ಜೀವಿಸುವೆವು? ಮತ್ತು ಈ ಎಲ್ಲ ಜೀವಗಳೂ ಕೂಡ ಎಲ್ಲ ವಿಘ್ನಗಳಿಂದಲೂ ದೂರವಾಗಿದ್ದು ನಮಗೂ ಮತ್ತು ನಿನಗೂ ಸೇವೆ ಗಳನ್ನು ಸಮರ್ಪಿಸುತ್ತಾ ತಮ್ಮ-ತಮ್ಮ ಆಹಾರಗಳನ್ನು ಸೇವಿಸಲು ಸಮರ್ಥ ವಾದಾವು?–ಅಂತಹ ಯಾವುದಾದರೂ ಉಪಾಯವನ್ನು ಹೂಡುವವ ನಾಗು.

ಓ ಭಗವಂತ! ವಿಕಾರರಹಿತನಾದ ಪುರಾಣಪುರುಷನಾದ ನೀನೇ ಇತರ ಕಾರ್ಯವರ್ಗಗಳಿಂದೊಡಗೂಡಿದ ದೇವತೆಗಳಾದ ನಮಗೆಲ್ಲರಿಗೂ ಆದಿಕಾರಣನಾಗಿದ್ದೀಯೆ. ಜನ್ಮರಹಿತನಾದ ನೀನೇ ಹಿಂದೆ ಗುಣಗಳಿಗೂ–

ಕರ್ಮಗಳಿಗೂ ಕಾರಣವಾದ ಪ್ರಕೃತಿ (ಮಾಯಾ) ಶಕ್ತಿಯಲ್ಲಿ ಚಿದಂಶರೂಪ ವಾದ ವೀರ್ಯವನ್ನು ಸ್ಥಾಪಿಸಿದವನಲ್ಲವೇ?

ಪರಮಾತ್ಮ! ಮಹತ್ತತ್ತ್ವಾದಿರೂಪದೇವಗಣಗಳಿಂದ ನಾವು ಯಾವ ಕಾರ್ಯಕ್ಕಾಗಿ ಸೃಷ್ಟಿಸಲ್ಪಟ್ಟಿದ್ದೇವೆಯೋ–ಆ ಬಗೆಗೆ ನಾವು ಏನು ತಾನೇ ಮಾಡೋಣ? ನಮ್ಮ ಮೇಲೆ ಅನುಗ್ರಹವನ್ನು ಬೀರು. ಬ್ರಹ್ಮಾಂಡವನ್ನು ರಚಿಸುವುದಕ್ಕಾಗಿ ನೀನು ನಮಗೆ ನಿನ್ನ ಅದ್ಭುತವಾದ ಕ್ರಿಯಾಶಕ್ತಿಯೊಡನೆ ನಿನ್ನ ದಿವ್ಯವಾದ ಜ್ಞಾನಶಕ್ತಿಯನ್ನೂ ಕರುಣಿಸುವವನಾಗು."

(ಶ್ಲೋಕ 47-50)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ತೃತೀಯಸ್ಕಂಧದ ೫ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೬ನೆಯ ಅಧ್ಯಾಯ

ವಿರಾಟ್‌ಶರೀರದ ಉತ್ಪತ್ತಿ

ಮೈತ್ರೇಯಮಹರ್ಷಿಗಳು ಮಹಾತ್ಮನಾದ ವಿದುರನಿಗೆ ಭಗವಂತನ ಸೃಷ್ಟಿಪ್ರಕ್ರಿಯೆಯನ್ನು ವಿವರಿಸುತ್ತಾ ಹೇಳಿದರು :

ಎಲೈ ವಿದುರನೇ ಕೇಳು :

ಇತಿ ತಾಸಾಂ ಸ್ವಶಕ್ತೀನಾಂ ಸತೀನಾಮಸಮೇತ್ಯ ಸಃ ।
ಪ್ರಸುಪ್ತಲೋಕತನ್ತ್ರಾಣಾಂ ನಿಶಾಮ್ಯ ಗತಿಮೀಶ್ವರಃ ॥೧॥

ಕಾಲಸಂಜ್ಞಾಂ ತದಾ ದೇವೀಂ ಬಿಭ್ರಚ್ಛಕ್ತಿಮುರುಕ್ರಮಃ ।
ತ್ರಯೋವಿಂಶತಿತತ್ತ್ವಾನಾಂ ಗಣಂ ಯುಗಪದಾವಿಶತ್ ॥೨॥

ತನ್ನ ಮಹತ್ತತ್ತ್ವವೇ ಮುಂತಾದ ಶಕ್ತಿಗಳು ಹೀಗೆ ಒಂದಕ್ಕೊಂದು ಸೇರದೇ ಬೇರೆಯಾಗಿದ್ದ ಕಾರಣ ಸೃಷ್ಟಿಕಾರ್ಯವನ್ನು ಮುಂದುವರಿಸಲು ಅಸಮರ್ಥವಾಗಿದ್ದುದನ್ನು ಕಂಡು ಆ ತ್ರಿವಿಕ್ರಮನಾದ ಭಗವಂತನು ಕಾಲಶಕ್ತಿಯನ್ನು ತಳೆದವನಾಗಿ (ಮಹತ್ತು, ಅಹಂಕಾರ, ಪಂಚಭೂತಗಳು, ಪಂಚತನ್ಮಾತ್ರೆಗಳು ಮತ್ತು ಹನ್ನೊಂದು ಇಂದ್ರಿಯಗಳು)–ಎಂಬ ಆ ಇಪ್ಪತ್ತಮೂರು ತತ್ತ್ವಗಳ ಸಮುದಾಯವನ್ನು ಒಟ್ಟಿಗೇ ಒಳಹೊಕ್ಕನು.

ಹೀಗೆ ಒಳಹೊಕ್ಕ ಮಹಾಪ್ರಭುವು ಪ್ರಸುಪ್ತವಾಗಿದ್ದ ಜೀವಗಳ ಅದೃಷ್ಟಕರ್ಮವನ್ನು ಎಚ್ಚರಗೊಳಿಸಿ ದೂರ-ದೂರವಾಗಿದ್ದ ಆ ತತ್ತ್ವ ಸಮೂಹವನ್ನು ತನ್ನ ಕ್ರಿಯಾಶಕ್ತಿಯಿಂದ ಒಂದುಗೂಡಿಸಿದನು. ಹೀಗೆ ಅದೃಷ್ಟಕರ್ಮಗಳು ಎಚ್ಚರಗೊಳ್ಳಲು ಆ ಇಪ್ಪತ್ತಮೂರು ತತ್ತ್ವಗಳು ಭಗವಂತನ ಪ್ರೇರಣೆಯಂತೆ ತಮ್ಮ ಅಂಶಗಳಿಂದ ವಿರಾಟ್‌ಪುರುಷನನ್ನು ಸೃಷ್ಟಿಸಿದುವು. (ಭಗವಂತನು ಅಂಶರೂಪದಿಂದ ತನ್ನ ಆ ಶರೀರದಲ್ಲಿ ಪ್ರವೇಶಿಸಲು ಆ ತತ್ತ್ವಸಮುದಾಯವು ಒಂದರೊಡನೊಂದು ಬೆರೆತು ಪರಿಣಾಮಹೊಂದಿತು. ಆ ತತ್ತ್ವಗಳ ಪರಿಣಾಮವೇ ವಿರಾಟ್‌ಪುರುಷನು. ಚರಾಚರಜಗತ್ತು ಆ ವಿರಾಟ್‌ಪುರುಷನಲ್ಲಿಯೇ ಇರುವುದು). ಆ ಹಿಣ್ಮಯ ನಾದ ವಿರಾಟ್‌ಪುರುಷನು ಸಮಸ್ತಜೀವರಾಶಿಗಳನ್ನೂ ತನ್ನಲ್ಲಿರಿಸಿಕೊಂಡು ಜಲರಾಶಿಯ ಮಧ್ಯದಲ್ಲಿರುವ ಬ್ರಹ್ಮಾಂಡವೆಂಬ ಕೋಶದಲ್ಲಿ* ಸಾವಿರ ದಿವ್ಯವರ್ಷಗಳವರೆಗೆ ವಾಸಿಸುತ್ತಿದ್ದನು.

ಅನಂತರ ಭಗವಂತನ ಜ್ಞಾನ, ಕ್ರಿಯೆ ಮತ್ತು ಆತ್ಮಶಕ್ತಿಗಳಿಂದ ಸಂಪನ್ನವಾದ ಆ ತತ್ತ್ವಗರ್ಭನಾದ ವಿರಾಟ್‌ಪುರುಷನು ತನ್ನನ್ನು ತಾನೇ ವಿಭಾಗಮಾಡಿಕೊಂಡನು. ಏಕಹೃದಯರೂಪವಾಗಿಯೂ [1]ಹತ್ತು ಪ್ರಾಣಗಳ ರೂಪವಾಗಿಯೂ, ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕಗಳೆಂಬ ಮುಬ್ಬಗೆಯಾಗಿಯೂ ವಿಭಾಗಮಾಡಿಕೊಂಡನು. ಆ ವಿರಾಟ್‌ಪುರುಷನೇ ಚೈತನ್ಯರೂಪದಿಂದ ಸಮಸ್ತಜೀವಗಳ ಆತ್ಮನೆನಿಸುತ್ತಾನೆ. ಅವನು ಜೀವರೂಪನಾಗಿರುವುದರಿಂದ ಪರಮಾತ್ಮನ ಅಂಶವೆನಿಸುತ್ತಾನೆ ಮತ್ತು ಶ್ರೀಭಗವಂತನ ಮೊದಲನೆಯ ಅಭಿವ್ಯಕ್ತಿ (ಪ್ರಕಟರೂಪ) ಆಗಿರುವುದರಿಂದ

---

* "ಅಂಭಸ್ಯಪಾರೇ ಭುವನಸ್ಯ ಮಧ್ಯೇ" "ಯ ಅಣ್ಡಕೋಶೇ ಭುವನಂ ಬಿಭರ್ತಿ"

1 ಹತ್ತು ಪ್ರಾಣಗಳು ಯಾವುವೆಂದರೆ : ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನಗಳೆಂಬ ಐದು ಪ್ರಾಣಗಳು ಮತ್ತು ನಾಗ, ಕೂರ್ಮ, ಕೃಕಲ, ದೇವದತ್ತ ಮತ್ತು ಧನಂಜಯಗಳೆಂಬ ಐದು ಉಪಪ್ರಾಣಗಳು ಒಟ್ಟಿಗೆ ಸೇರಿ ಹತ್ತು.

ಅಧ್ಯಾತ್ಮಾದಿಗಳು ಯಾವುದೆಂದರೆ : ಹತ್ತು ಇಂದ್ರಿಯಗಳ ಸಹಿತವಾದ ಮನಸ್ಸು, ಆಧ್ಯಾತ್ಮ ಇಂದ್ರಿಯಾದಿ ವಿಷಯಗಳು, ಆಧಿಭೂತ ಮತ್ತು ಇಂದ್ರಿಯಗಳ ಅಧಿಷ್ಠಾತೃಗಳಾದ ದೇವತೆಗಳು ಆಧಿದೈವರು. (ಶ್ಲೋಕ ೭)

ಮೊದಲನೆಯ ಅವತಾರ ಎನಿಸುತ್ತಾನೆ. ಈ ಸಮಸ್ತಭೂತಗಳ ಸಮುದಾ ಯವೂ ಇದರಲ್ಲಿಯೇ ಪ್ರಕಾಶಗೊಳ್ಳುವುದು. ಇಂದ್ರಿಯಗಳು, ದೇವತೆಗಳು ಮತ್ತು ಭೂತಗಳು ಎಂಬ ಇವುಗಳೊಡನೆ ಸೇರಿ ಅಧ್ಯಾತ್ಮ ಅಧಿದೈವ ಮತ್ತು ಅಧಿಭೂತಗಳೆಂದು ಮೂರು ಬಗೆಗಳಾಗಿಯೂ, ಪ್ರಾಣ ಮತ್ತು ಉಪಪ್ರಾಣಗಳೊಡನೆ ಸೇರಿ ಹತ್ತು ಬಗೆಗಳಾಗಿಯೂ ಮತ್ತು ಹೃದಯ (ಚೈತನ್ಯ) ರೂಪದಿಂದ ಏಕಪ್ರಕಾರವಾಗಿಯೂ ಇದ್ದನೆಂದು ತಿಳಿಯಬೇಕು.

(ಶ್ಲೋಕ 3-9)

ಮತ್ತೆ ವಿಶ್ವರಚನೆಯನ್ನು ಮಾಡುವ ಮಹತ್ತೇ ಮುಂತಾದ ತತ್ತ್ವಗಳ ಅಧಿಪತಿಯಾದ ಶ್ರೀಭಗವಂತನು ಆ ತತ್ತ್ವಗಳ ಪ್ರಾರ್ಥನೆಯನ್ನು ನೆನೆದು ಅವುಗಳ ವೃತ್ತಿಗಳನ್ನು ಎಚ್ಚರಗೊಳಿಸುವುದಕ್ಕಾಗಿ ತನ್ನ ಚೈತನ್ಯರೂಪವಾದ ತೇಜಸ್ಸಿನಿಂದ ಆ ವಿರಾಟ್ಪುರುಷನನ್ನು ಪ್ರಕಾಶಪಡಿಸಿದನು ; ಎಚ್ಚರ ಗೊಳಿಸಿದನು. ಆತನು ಎಚ್ಚರಗೊಂಡೊಡನೆಯೇ ದೇವತೆಗಳಿಗೋಸ್ಕರ ಎಷ್ಟು ಸ್ಥಾನಗಳು ಪ್ರಕಟಗೊಂಡವೆಂಬುದನ್ನು ಹೇಳುತ್ತೇನೆ ; ಕೇಳು : ಮೊಟ್ಟ ಮೊದಲಿಗೆ ಆ ವಿರಾಟ್‌ಪುರುಷನ ಮುಖವು ಪ್ರಕಟವಾಯಿತು. ಅದರಲ್ಲಿ ಲೋಕಪಾಲನಾದ ಅಗ್ನಿಯು ತನ್ನ ಅಂಶವಾದ ವಾಗಿಂದ್ರಿಯದೊಡನೆ ಪ್ರವೇಶಮಾಡಿದನು. ಆ ವಾಗಿಂದ್ರಿಯದಿಂದಲೇ ಈ ಜೀವವು ಮಾತನಾಡು ವುದು. ಅನಂತರ ವ್ಯಕ್ತಗೊಂಡಿದ್ದು ವಿರಾಟ್‌ಪುರುಷನ ದವಡೆ. ಲೋಕ ಪಾಲನಾದ ವರುಣನು ತನ್ನ ಅಂಶವಾದ ರಸನೇಂದ್ರಿಯದೊಡನೆ ಅದರಲ್ಲಿ ಪ್ರವೇಶಮಾಡಿದನು. ಅದರಿಂದಲೇ ಜೀವವು ರಸಗ್ರಹಣಮಾಡುವುದು. ಅದಾದನಂತರ ಆತನ ಮೂಗು-ಹೊಳ್ಳೆಗಳು ಪ್ರಕಟಹೊಂದಲು ಇಬ್ಬರು ಅಶ್ವಿನೀಕುಮಾರರು ತಮ್ಮ ಅಂಶವಾದ ಘ್ರಾಣೇಂದ್ರಿಯದೊಡನೆ ಅವುಗಳನ್ನು ಹೊಕ್ಕರು. ಅದರಿಂದಲೇ ಜೀವವು ವಾಸನೆಯನ್ನು ಗ್ರಹಣಮಾಡುತ್ತದೆ. ಇದೇ ರೀತಿಯಲ್ಲಿ ವಿರಾಟ್‌ಪುರುಷನ ದೇಹದಲ್ಲಿ ಕಣ್ಣುಗಳು ಪ್ರಕಟಗೊಳ್ಳಲು ಲೋಕಾಧಿಪತಿಯಾದ ಸೂರ್ಯದೇವನು ತನ್ನ ಅಂಶವಾದ ನೇತ್ರೇಂದ್ರಿಯ ದೊಡನೆ ಅವುಗಳನ್ನು ಪ್ರವೇಶಿಸಿದನು. ಆ ಇಂದ್ರಿಯದಿಂದಲೇ ಜೀವವು ಬಗೆ-ಬಗೆಯ ರೂಪಗಳನ್ನು ಗ್ರಹಿಸುವುದು. ಅನಂತರ ಆ ವಿರಾಟ್ ಪುರುಷನ ವಿಗ್ರಹದಲ್ಲಿ ತೊಗಲು ಪ್ರಕಟವಾಗಲು ಲೋಕಪತಿಯಾದ

ವಾಯುವು ತ್ವಗಿಂದ್ರಿಯದೊಡನೆ ಅದನ್ನು ಒಳಹೊಕ್ಕನು. ಜೀವವು ಸ್ಪರ್ಶವನ್ನು ಅನುಭವಿಸುವುದು ಆ ಇಂದ್ರಿಯದಿಂದಲೇ. ಆ ವಿರಾಟ್‌ಪುರುಷನ ದೇಹದಲ್ಲಿ ಕಿವಿಯ ಬಿಲಗಳು ಪ್ರಕಟವಾದಾಗ ತನ್ನ ಅಂಶವಾದ ಶ್ರವಣೇಂದ್ರಿಯದೊಡನೆ ದಿಕ್ಕುಗಳು ಅವುಗಳಲ್ಲಿ ಪ್ರವೇಶಮಾಡಿದುವು. ಆ ಇಂದ್ರಿಯದಿಂದಲೇ ಜೀವಗಳಿಗೆ ಶಬ್ದದ ಜ್ಞಾನವುಂಟಾಗುವುದು. ಅನಂತರ ಆ ವಿರಾಟ್‌ಪುರುಷನ ಶರೀರದಲ್ಲಿ ಚರ್ಮವು ಉತ್ಪನ್ನವಾಯಿತು. ಆಗ ತಮ್ಮ ಅಂಶವಾದ ರೋಮ (ಮೈಗೂದಲು) ಗಳೊಡನೆ ಓಷಧಿಗಳು ಅಲ್ಲಿ ಒಳಹೊಕ್ಕುವು. ಆ ರೋಮಗಳಿಂದಲೇ ಜೀವಗಳಿಗೆ ನವೆ (ತುರಿಕೆ) ಮುಂತಾದುವುಗಳ ಅನುಭವವಾಗುವುದು. ಹಾಗೆಯೇ ಆ ವಿರಾಟ್‌ಪುರುಷನ ಶ್ರೀವಿಗ್ರಹದಲ್ಲಿ ಲಿಂಗವು ಉತ್ಪನ್ನವಾಯಿತು. ತನ್ನ ಆಶ್ರಯವಾದ ಅದನ್ನು ಪ್ರಜಾಪತಿಯು ತನ್ನ ಅಂಶವಾದ ವೀರ್ಯದೊಡನೆ ಪ್ರವೇಶಿಸಿದನು. ಜೀವವು ಆನಂದವನ್ನು ಅನುಭವಿಸುವುದು ಈ ಇಂದ್ರಿಯದಿಂದಲೇ. ಆಗ ವಿರಾಟ್‌ಪುರುಷನಲ್ಲಿ ಗುದವು ಪ್ರಕಟಗೊಳ್ಳಲು ಲೋಕಪಾಲನಾದ ಮಿತ್ರನು ತನ್ನ ಅಂಶವಾದ ಪಾಯು ಎಂಬ ಇಂದ್ರಿಯದೊಡನೆ ಅದನ್ನು ಒಳಹೊಕ್ಕನು. ಜೀವವು ಮಲತ್ಯಾಗಮಾಡುವುದು ಈ ಇಂದ್ರಿಯದಿಂದಲೇ. ಅದಾದನಂತರ ಆ ದೇಹದಲ್ಲಿ ಕೈಗಳು ಪ್ರಕಟಗೊಂಡುವು. ಆಗ ದೇವರಾಜನಾದ ಇಂದ್ರನು ತನ್ನ ಗ್ರಹಣತ್ಯಾಗರೂಪವಾದ ಶಕ್ತಿಯೊಡನೆ ಅವುಗಳಲ್ಲಿ ಪ್ರವೇಶಮಾಡಿದನು. ಆ ಶಕ್ತಿಯಿಂದಲೇ ಜೀವವು ತನ್ನ ಕೊಡುವಿಕೆ, ತೆಗೆದುಕೊಳ್ಳುವಿಕೆ ಮತ್ತು ಹಿಡಿದುಕೊಳ್ಳುವಿಕೆ ಎಂಬ ತನ್ನ ಜೀವನೋಪಾಯವನ್ನು ಸಾಧಿಸುವುದು. ಆ ದೇಹದಲ್ಲಿ ಕಾಲುಗಳು ಕಾಣಿಸಿಕೊಳ್ಳಲು ಲೋಕೇಶ್ವರನಾದ ವಿಷ್ಣುವು ತನ್ನ ಶಕ್ತಿಯಾದ ಗತಿಯೊಡನೆ ಅದನ್ನು ಪ್ರವೇಶಮಾಡಿದನು. ಆ ಗಮನಶಕ್ತಿಯಿಂದಲೇ ಜೀವವು ತನ್ನ ಗಮ್ಯಸ್ಥಾನಕ್ಕೆ ತಲುಪುವುದು. ಆಮೇಲೆ ಆ ದೇಹದಲ್ಲಿ ಬುದ್ಧಿಯು ಉತ್ಪನ್ನವಾಗಲು ವಾಗೀಶನಾದ ಬೃಹಸ್ಪತಿಯು ತನ್ನ ಅಂಶವಾದ ಬುದ್ಧಿಶಕ್ತಿಯೊಡನೆ ಅದನ್ನು ಒಳಹೊಕ್ಕನು. ಜೀವವು ತಿಳಿಯಬೇಕಾದ ವಿಷಯಗಳನ್ನು ತಿಳಿದುಕೊಳ್ಳುವುದು ಆ ಬುದ್ಧಿಯಿಂದಲೇ. ಅನಂತರ ಆ ವಿರಾಟ್‌ಪುರುಷನ ಶ್ರೀದೇಹದಲ್ಲಿ ಹೃದಯವು ಪ್ರಕಟಗೊಳ್ಳಲು ತನ್ನ ಅಂಶವಾದ ಮನಸ್ಸಿನೊಡನೆ ಚಂದ್ರನು

ಅದರಲ್ಲಿ ಹೋಗಿ ಸೇರಿದನು. ಜೀವನು ಸಂಕಲ್ಪಾದಿರೂಪವಾದ ವಿಕಾರಗಳನ್ನು ಹೊಂದುವುದು ಮನಶ್ಶಕ್ತಿಯಿಂದಲೇ. ಇದಾದನಂತರ ಅಹಂಕಾರವು ಆ ವಿರಾಟ್‌ಪುರುಷನ ದೇಹದಲ್ಲಿ ಉತ್ಪನ್ನವಾಯಿತು. ತನಗೆ ಆಶ್ರಯವಾದ ಇದರೊಳಗೆ ತನ್ನ ಕ್ರಿಯಾಶಕ್ತಿಯೊಡನೆ ಅದರ ಅಭಿಮಾನಿಯಾದ ರುದ್ರದೇವರು ಪ್ರವೇಶಮಾಡಿದರು. ಆ ಇಂದ್ರಿಯದಿಂದಲೇ ಜೀವನು ತನ್ನ ಕರ್ತವ್ಯಗಳನ್ನು ಸ್ವೀಕರಿಸುತ್ತಾನೆ. ಅದಾದನಂತರ ಆ ದೇಹದಲ್ಲಿ ಚಿತ್ತವು ಪ್ರಕಟಗೊಳ್ಳಲು ತನ್ನ ಅಂಶವಾದ ಚಿತ್ತಶಕ್ತಿಯೊಡನೆ ಮಹತ್ತು ಅಂದರೆ ಬ್ರಹ್ಮದೇವರು ಅದರಲ್ಲಿ ಪ್ರವೇಶಮಾಡಿದರು. ಆ ಚಿತ್ತಶಕ್ತಿಯಿಂದಲೇ ಜೀವವು ವಿಜ್ಞಾನವನ್ನು ಪಡೆಯುವುದು. ವಿರಾಟ್‌ಪುರುಷನ ಶಿರಸ್ಸಿನಿಂದ ಸ್ವರ್ಗಲೋಕವೂ, ಪಾದಗಳಿಂದ ಪೃಥಿವೀಲೋಕವೂ ಮತ್ತು ನಾಭಿಯಿಂದ ಅಂತರಿಕ್ಷಲೋಕವೂ ಉತ್ಪನ್ನವಾದುವು. ಇವುಗಳಲ್ಲಿ ಕ್ರಮವಾಗಿ ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಗಳ ಪರಿಣಾಮಸ್ವರೂಪರಾದ ದೇವತೆಗಳೂ, ಮನುಷ್ಯರೂ ಮತ್ತು ಪ್ರೇತ ಮುಂತಾದುವುಗಳೂ ಕಂಡುಬರುತ್ತವೆ. ಇದರಲ್ಲಿ ದೇವತೆಗಳು ಸತ್ತ್ವಗುಣದ ಆಧಿಕ್ಯವಿರುವುದರಿಂದ ಸ್ವರ್ಗಲೋಕದಲ್ಲೂ, ಮನುಷ್ಯರೂ ಮತ್ತು ಅವರಿಗೆ ಉಪಯೋಗಪಡುವ ಪ್ರಾಣಿಗಳಾದ ಗೋವು ಮುಂತಾದುವುಗಳು ರಜೋಗುಣದ ಆಧಿಕ್ಯದಿಂದ ಪೃಥ್ವಿಯಲ್ಲೂ ವಾಸಿಸುತ್ತಾರೆ ಮತ್ತು ತಮೋಗುಣಸ್ವಭಾವವನ್ನು ಹೊಂದಿರುವುದರಿಂದ ರುದ್ರದೇವರ ಪಾರ್ಷದಗಣಗಳು ಅಂದರೆ ಭೂತ-ಪ್ರೇತಾದಿಗಳು ಆ ಎರಡು ಲೋಕಗಳ ಮಧ್ಯದಲ್ಲಿ ಶ್ರೀಭಗವಂತನಿಗೆ ಹೊಕ್ಕುಳಿನ ಸ್ಥಾನದಲ್ಲಿರುವ ಅಂತರಿಕ್ಷಲೋಕದಲ್ಲೂ ವಾಸಮಾಡುತ್ತವೆ. (ಶ್ಲೋಕ 11-29)

ಓ ಮಹಾತ್ಮನಾದ ವಿದುರನೇ! ವೇದಗಳೂ ಮತ್ತು ಬ್ರಾಹ್ಮಣರೂ ಭಗವಂತನ ಮುಖದಿಂದ ಪ್ರಕಟಗೊಂಡರು. ಹೀಗೆ ಆತನ ಮುಖದಿಂದ ಪ್ರಕಟಗೊಂಡಿದ್ದರಿಂದಲೇ ಬ್ರಾಹ್ಮಣರು ಸಕಲವರ್ಣಗಳಲ್ಲೂ ಶ್ರೇಷ್ಠರು ಮತ್ತು ಸರ್ವವರ್ಣಗಳಿಗೂ ಗುರುವೆನಿಸುವರು. ಆತನ ಭುಜಗಳಿಂದ ಕ್ಷತ್ರಿಯವೃತ್ತಿಯೂ ಮತ್ತು ಅದನ್ನು ಅವಲಂಬಿಸಿರುವ ಕ್ಷತ್ರಿಯವರ್ಣವೂ ಉತ್ಪನ್ನವಾದುವು. ವಿರಾಟ್‌ಪುರುಷನ ಅಂಶವಾಗಿ ಜನಿಸಿದ ಕಾರಣ ಎಲ್ಲ

ವರ್ಣಗಳನ್ನೂ ಶತ್ರುಗಳು, ಕಳ್ಳ-ಕಾಕರರೇ ಮುಂತಾದ ಉಪದ್ರವಗಳಿಂದ ರಕ್ಷಣೆಮಾಡುವ ವರ್ಣವಿದು. ಶ್ರೀಭಗವಂತನ ಎರಡು ತೊಡೆಗಳಿಂದ ಕೃಷಿ-ವಾಣಿಜ್ಯಗಳೇ ಮುಂತಾದ ವೃತ್ತಿಗಳೂ ಮತ್ತು ಅವುಗಳನ್ನು ಅವಲಂಬಿಸಿ ಎಲ್ಲ ಜನರ ಜೀವಿಕೆಗೂ ಕಾರಣರಾಗಿವ ವೈಶ್ಯರು ಜನಿಸಿದರು. ಅನಂತರ ಧರ್ಮಗಳ ಸಿದ್ಧಿಗಾಗಿ ಶ್ರೀಭಗವಂತನ ಎರಡು ಪಾದಗಳಿಂದ ಸೇವೆಯೆಂಬ ವೃತ್ತಿಯೂ ಮತ್ತು ಅದನ್ನು ಅವಲಂಬಿಸಿ ಶ್ರೀಹರಿಯನ್ನು ತೃಪ್ತಿಗೊಳಿಸುವ ಶೂದ್ರವರ್ಣವೂ ಉತ್ಪನ್ನವಾದುವು.* ಈ ನಾಲ್ಕು ವರ್ಣಗಳೂ ಕೂಡ ತಮ್ಮ-ತಮ್ಮ ವೃತ್ತಿಗಳೊಡನೆ ಯಾರಿಂದ ಹುಟ್ಟಿವೆಯೋ–ಆ ತಮ್ಮ ಪರಮ ಗುರುವಾದ ಶ್ರೀಹರಿಯನ್ನು ಚಿತ್ತಶುದ್ಧಿಗೋಸ್ಕರ ತಮ್ಮ-ತಮ್ಮ ಧರ್ಮಗಳಿಂದ ಶ್ರದ್ಧಾಪೂರ್ವಕವಾಗಿ ಆರಾಧಿಸುತ್ತವೆ. ಓ ವಿದುರನೇ! ಈ ವಿರಾಟ್ ಪುರುಷನು ಕಾಲ, ಕರ್ಮ ಮತ್ತು ಸ್ವಭಾವಶಕ್ತಿಗಳಿಂದ ಕೂಡಿ ಭಗವಂತನ ಯೋಗಮಾಯೆಯ ಪ್ರಭಾವವನ್ನು ಪ್ರಕಟಪಡಿಸುವವನು. ಈತನ ಸ್ವರೂಪವನ್ನು ಪೂರ್ಣವಾಗಿ ವರ್ಣಿಸಲು ಯಾವನಿಗೆ ತಾನೇ ಸಾಧ್ಯ? ಆದರೂ ಇತರ ವ್ಯಾವಹಾರಿಕವಾದ ಚರ್ಚೆಗಳಿಂದ ಕಲುಷಗೊಂಡಿರುವ ನನ್ನ ವಾಣಿಯನ್ನು ಪವಿತ್ರಗೊಳಿಸಿಕೊಳ್ಳುವುದಕ್ಕೋಸ್ಕರ ನನ್ನ ಬುದ್ಧಿಗೂ ಮತ್ತು ಶ್ರೀಗುರುಗಳ ಬಾಯಿಂದ ನಾನು ಕೇಳಿರುವುದಕ್ಕೂ ಅನುಗುಣವಾಗಿ ಶ್ರೀಹರಿಯ ಸುಕೀರ್ತಿಯನ್ನು ವರ್ಣನೆಮಾಡುತ್ತೇನೆ. ಪುಣ್ಯಕೀರ್ತಿ ಸಂಪನ್ನರಾದ ಸುಕೃತಿಗಳಿಗೆ ಶಿರೋಮಣಿಯಾದ ಶ್ರೀಹರಿಯ ಗುಣಗಳನ್ನು

---

* **"ತಸ್ಯಾಂ ಜಾತಃ ಪುರಾ ಶೂದ್ರೋ ಯದ್ವೃತ್ತ್ಯಾ ತುಷ್ಯತೇ ಹರಿಃ ।"** ಎಲ್ಲ ಧರ್ಮಗಳ ಸಿದ್ಧಿಗೂ ಮೂಲಭೂತವಾದುದು ಸೇವೆ. ಸೇವೆಯಿಲ್ಲದೇ ಯಾವ ಧರ್ಮವೂ ಈಡೇರುವುದಿಲ್ಲ. ಆದ್ದರಿಂದ ಎಲ್ಲ ಧರ್ಮಗಳಿಗೂ ಮೂಲಭೂತವಾದ ಸೇವೆಯೇ ಯಾವನ ವೃತ್ತಿಯಾಗಿದೆಯೋ–ಆ ಶೂದ್ರನೂ ಎಲ್ಲ ವರ್ಣಗಳಲ್ಲೂ ಶ್ರೇಷ್ಠನೇ. ಬ್ರಾಹ್ಮಣನ ಧರ್ಮವಿರುವುದು ಮೋಕ್ಷಕ್ಕಾಗಿ. ಕ್ಷತ್ರಿಯರ ಧರ್ಮವಿರುವುದು ಭೋಗಕ್ಕೋಸ್ಕರವಾಗಿ ಮತ್ತು ವೈಶ್ಯಧರ್ಮವಿರುವುದು ಹಣಸಂಪಾದನೆಗೋಸ್ಕರವಾಗಿ. ಹೀಗೆ ಮೊದಲನೆಯ ಮೂರು ವರ್ಣಗಳ ಧರ್ಮಗಳು ಇರುವುದು ಇತರ ಪುರುಷಾರ್ಥಗಳಿಗಾಗಿ. ಆದರೆ ಶೂದ್ರನ ಧರ್ಮವಿರುವುದು ತನ್ನ ಪುರುಷಾರ್ಥಗಳ ಸಾಧನೆಗಾಗಿ ಅಲ್ಲವು. ಆದ್ದರಿಂದ ಇವನ ವೃತ್ತಿಯಿಂದಲೇ ಶ್ರೀಭಗವಂತನು ಪ್ರಸನ್ನನಾಗುವುದು. (ಶ್ಲೋಕ ೩೩)

ಗಾನಮಾಡುವುದೇ ಮನುಷ್ಯರ ವಾಣಿಗೆ ಮತ್ತು ವಿದ್ವಾಂಸರ ಬಾಯಿಂದ ಭಗವಂತನ ಕಥಾಮೃತವನ್ನು ಪಾನಮಾಡುವುದೇ ಅವರ ಕಿವಿಗಳಿಗೆ ಸರ್ವ ಶ್ರೇಷ್ಠವಾದ ಪರಮಲಾಭವಾಗಿದೆಯೆಂಬುದೇ ಮಹಾಪುರುಷರ ಸಿದ್ಧಾಂತವು.

ಏಕಾನ್ತಲಾಭಂ ವಚಸೋ ನು ಪುಂಸಾಂ
ಸುಶ್ಲೋಕಮೌಲೇರ್ಗುಣವಾದಮಾಹುಃ ।
ಶ್ರುತೇಶ್ಚ ವಿದ್ವದ್ಭಿರುಪಾಕೃತಾಯಾಂ
ಕಥಾಸುಧಾಯಾಮುಪಸಮ್ಪ್ರಯೋಗಮ್ ॥೩೮॥

ವತ್ಸ, ವಿದುರ! ನಾವು ಮಾತ್ರವೇ ಅಲ್ಲ ; ಆದಿಕವಿಯಾದ ಶ್ರೀಬ್ರಹ್ಮ ದೇವರೂ ಕೂಡ ಒಂದು ಸಾವಿರ ದಿವ್ಯಸಹಸ್ರವರ್ಷಗಳವರೆಗೆ ತಮ್ಮ ಯೋಗ ದಿಂದ ಪರಿಪಕ್ವವಾದ ಬುದ್ಧಿಯಿಂದ ವಿಚಾರಮಾಡಿದರೂ ಅಪ್ರಮೇಯವಾದ ಆತನ ಮಹಿಮೆಯ ಪಾರವನ್ನು ಕಾಣಲಾರದೇ ಹೋದರು. ಇನು ಉಳಿದವರ ಮಾತೇನು? ಭಗವಂತನ ಮಾಯೆಯು ದೊಡ್ಡ-ದೊಡ್ಡ ಮಾಯಾವಿಗಳನ್ನೂ ಮರುಳುಗೊಳಿಸುವ ಸಾಮರ್ಥ್ಯವುಳ್ಳದ್ದು. ಅಘಟನ ಘಟನಾಸಾಮರ್ಥ್ಯವುಳ್ಳ ಅದರ ಭ್ರಾಮಕವಾದ ಗತಿಯು ಅನಂತವಾದುದು. ಅದಕ್ಕೋಸ್ಕರ ಸ್ವಯಂ ಭಗವಂತನೇ ಯಾವುದರ ಅಡಿ-ಆಳಗಳನ್ನು ಅರಿಯದೇ ಹೋದನೋ–ಅದನ್ನು ಅರಿತುಕೊಳ್ಳುವುದು ಇತರರಿಗೆ ಅಸಾಧ್ಯವೆಂಬುದನ್ನು ಒತ್ತಿಹೇಳಬೇಕಾಗಿಲ್ಲವಷ್ಟೇ!

ಯಾವುದನ್ನು ಮುಟ್ಟಲಾರದೇ, ಮನಸ್ಸು ಮಾತಿನೊಡನೆ ಹಿಂದಿರುಗಿ ಬಿಡುವುದೋ ಮತ್ತು ಯಾವುದರ ಪಾರವನ್ನು ಕಾಣುವ ವಿಷಯದಲ್ಲಿ ವೇದಮೂರ್ತಿಗಳಾದ ಬ್ರಹ್ಮದೇವರು ತಾವೇ ಸಮರ್ಥರಾಗದೇ ಹೋದರೋ–ಆ ಶ್ರೀಭಗವಂತನಿಗೆ ನಮ್ಮ ನಮಸ್ಕಾರಗಳು.

ಯತೋಽಪ್ರಾಪ್ಯ ನ್ಯವರ್ತನ್ತ ವಾಚಶ್ಚ ಮನಸಾ ಸಹ ।
ಅಹಂ ಚಾನ್ಯ ಇಮೇ ದೇವಾಸ್ತಸ್ಮೈ ಭಗವತೇ ನಮಃ* ॥೪೦॥

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ತೃತೀಯಸ್ಕಂಧದ ೬ನೆಯ ಅಧ್ಯಾಯವು ಮುಗಿಯಿತು.

---

* "ಯತೋ ವಾಚೋ ನಿವರ್ತನ್ತೇ ಅಪ್ರಾಪ್ಯ ಮನಸಾ ಸಹ" (ತೈ.ಉ.)
(ಶ್ಲೋಕ ೪೦)

ಮೈತ್ರೇಯ-ವಿದುರರ ಸಂವಾದ

ಶ್ರೀ ಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ಏವಂ ಬ್ರುವಾಣಂ ಮೈತ್ರೇಯಂ ದ್ವೈಪಾಯನಸುತೋ ಬುಧಃ ।
ಪ್ರೀಣಯನ್ನಿವ ಭಾರತ್ಯಾ ವಿದುರಃ ಪ್ರತ್ಯಭಾಷತ ॥೧॥

ಓ ರಾಜೇಂದ್ರನೇ! ಕೇಳು. ಹೀಗೆ ಮೈತ್ರೇಯಮಹರ್ಷಿಗಳು ಮಾಡಿದ ನಿರೂಪಣೆಯನ್ನು ಕೇಳಿ ವ್ಯಾಸಪುತ್ರನೂ ಬುದ್ಧಿವಂತರಲ್ಲಿ ಶ್ರೇಷ್ಠನೂ ಆದ ವಿದುರನು ತನ್ನ ಮಧುರವಾಣಿಯಿಂದ ಅವರನ್ನು ಸಂತೋಷಪಡಿಸುತ್ತಾ ಹೀಗೆ ವಿಜ್ಞಾಪಿಸಿದನು :

"ಎಲೈ ಬ್ರಾಹ್ಮಣಶ್ರೇಷ್ಠರೇ! ಶ್ರೀಭಗವಂತನಾದರೋ ಕೇವಲ ಜ್ಞಾನ ಸ್ವರೂಪನು. ನಿರ್ವಿಕಾರನು ಮತ್ತು ಸತ್ತ್ವಾದಿ ತ್ರಿಗುಣರಹಿತನು. ಆತನಿಗೆ ಲೀಲಾರ್ಥವಾಗಿಯಾದರೂ ಗುಣಗಳೊಡನೆಯೂ ಕ್ರಿಯೆಗಳೊಡನೆಯೂ ಸಂಬಂಧವು ಹೇಗೆ ಉಂಟಾಗುವುದು? ಬಾಲಕನಿಗೆ ಆಟವಾಡುವ ಇಷ್ಟ ಉಂಟಾಗುವಂತೆಯೇ ಭಗವಂತನಿಗೂ ಕ್ರೀಡಿಸುವ ಇಚ್ಛೆ ಏಕೆ ಉಂಟಾಯಿತು? ಬಾಲಕನಲ್ಲಿ ಕಾಮನೆ ಇರುತ್ತದೆ ; ಮತ್ತೊಬ್ಬರೊಡನೆ ಕ್ರೀಡಿಸುವ ಇಚ್ಛೆಯುಂಟಾಗುವುದು ಸಹಜ. ಅದಕ್ಕಾಗಿ ಆತನು ಆಟವಾಡಲು ಪ್ರಯತ್ನಪಡುತ್ತಾನೆ. ಆದರೆ ಭಗವಂತನು ಸ್ವತಃ ನಿತ್ಯತೃಪ್ತನು. ಪೂರ್ಣ ಕಾಮನು ಮತ್ತು ಸದಾ ನಿರ್ಲಿಪ್ತನು. ಹೀಗಿರುವಾಗ ಆತನು ಕ್ರೀಡಿಸುವ ಸಂಕಲ್ಪವನ್ನು ಏಕೆ ಮಾಡಿಯಾನು? ಇದಲ್ಲದೇ ಭಗವಂತನು ತನ್ನ ಮಾಯೆಯಿಂದ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುತ್ತಾನೆಂದು ಹೇಳಿದಿರಲ್ಲವೇ? ಇಲ್ಲಿಯೂ ಒಂದು ಪ್ರಶ್ನೆ ಉದ್ಭವಿಸುತ್ತದೆ. *ಯಾವನ ಜ್ಞಾನಕ್ಕೆ ದೇಶ-ಕಾಲ-ಅವಸ್ಥೆಗಳಿಂದ ತನ್ನಿಂದಲಾಗಲೀ, ಬೇರೆ ನಿಮಿತ್ತ ದಿಂದಾಗಲೀ ಎಂದಿಗೂ ಲೋಪವಿಲ್ಲವೋ–ಅಂತಹ ಭಗವಂತನಿಗೆ ಮಾಯೆ ಯೊಡನೆ ಸಂಯೋಗವಾದರೂ ಹೇಗೆ ಉಂಟಾದೀತು? ಭಗವಂತನೊಬ್ಬನೇ

---

* ಭಗವಂತನ ಜ್ಞಾನಕ್ಕೆ ಎಂದಿಗೂ ಲೋಪವಿಲ್ಲ. ಆತನು ಸರ್ವವ್ಯಾಪಕನಾದುದರಿಂದ ದೇಶತಃ ಪರಿಮಿತಿಯಿಲ್ಲ. ಶಾಶ್ವತನಾದುದರಿಂದ ಕಾಲತಃ ಪರಿಮಿತಿಯಿಲ್ಲ. ಸ್ವತ್ವಾವ್ಯವಸ್ಥೆ ಗಳಿಲ್ಲವಾದುದರಿಂದ ಅವಸ್ಥಾಭೇದವಿಲ್ಲ. (ಶ್ಲೋಕ ೫)

ಸಮಸ್ತಕ್ಷೇತ್ರಗಳಲ್ಲಿಯೂ ಸಾಕ್ಷಿಯಾಗಿ ಇರುತ್ತಾನೆ–ಅಂದಮೇಲೆ ಆತನಿಗೆ ದುರ್ಭಾಗ್ಯವಾಗಲೀ, ಯಾವುದಾದರೂ ಕರ್ಮದಿಂದುಂಟಾದ ಕ್ಲೇಶವಾಗಲೀ ಹೇಗೆ ಉಂಟಾದೀತು? ಈ ಅಜ್ಞಾನಸಂಕಟದಲ್ಲಿ ಬಿದ್ದು ನನ್ನ ಮನಸ್ಸು ಖೇಡಪಡುತ್ತಿದೆ. ತಾವು ಕೃಪೆಯಿಟ್ಟು ಈ ಅಜ್ಞಾನಮೋಹವನ್ನು ನಿವಾರಣೆ ಮಾಡಬೇಕು?"–ಎಂದು ಬೇಡಿಕೊಂಡನು.

ಶ್ರೀ ಶುಕಮಹರ್ಷಿಗಳು ಹೇಳುತ್ತಾರೆ.

ತತ್ತ್ವಜಿಜ್ಞಾಸುವಾದ ವಿದುರನ ಪ್ರಶ್ನೆಯನ್ನು ಕೇಳಿ ನಿಗರ್ವಿಗಳಾದ ಮೈತ್ರೇಯಮಹರ್ಷಿಗಳು ಶ್ರೀಭಗವಂತನನ್ನು ಸ್ಮರಣೆಮಾಡಿ ನಸುನಗುತ್ತಾ ಹೀಗೆ ಉತ್ತರಿಸಿದರು :

"ಪರಮಾತ್ಮನು ಎಲ್ಲರಿಗೂ ಸ್ವಾಮಿಯು. ನಿತ್ಯಮುಕ್ತನು. ಆತನಿಗೂ ದೈನ್ಯ ಮತ್ತು ಬಂಧನಗಳು ಒದಗುತ್ತವೆಯೆಂಬುದು ಯುಕ್ತಿವಿರುದ್ಧ ವೆಂಬುದರಲ್ಲಿ ಸಂಶಯವಿಲ್ಲ. ಆದರೆ ವಸ್ತುತಃ ಇದೇ ಭಗವಂತನ ಮಾಯೆ. ಮನುಷ್ಯನಿಗೆ ಕೆಲವೊಮ್ಮೆ ಕನಸಿನಲ್ಲಿ ತನ್ನ ತಲೆಯು ಕತ್ತರಿಸಿಹೋದಂತೆ ಅನುಭವ ಉಂಟಾಗಬಹುದು. ಆದರೆ ಆಗ ವಾಸ್ತವವಾಗಿ ಅವನ ತಲೆಯನ್ನು ಯಾರೂ ಕತ್ತರಿಸಿರುವುದಿಲ್ಲ. ಆದರೂ ಅಜ್ಞಾನದಿಂದ ಆತನು ಹಾಗೆ ಆಗಿದೆಯೆಂದು ತಿಳಿಯುತ್ತಾನೆ. ಹಾಗೆಯೇ ಜೀವನಿಗೆ ನಿಜವಾಗಿ ಬಂಧನಾದಿ ಗಳು ಯಾವುವೂ ಇಲ್ಲದಿದ್ದರೂ ಅಜ್ಞಾನವಶದಿಂದ ಹಾಗೆ ಇರುವಂತೆ ಕಂಡುಬರುತ್ತದೆ. ಬಂಧನವೇ ಮುಂತಾದುವುಗಳ ತೋರಿಕೆ ಈಶ್ವರನಲ್ಲಿ ಏಕೆ ಉಂಟಾಗುವುದಿಲ್ಲ? ಎಂದರೆ : ಚಲಿಸುತ್ತಿರುವ ನೀರಿನಲ್ಲಿ ಬೀಳುವ ಚಂದ್ರನ ಪ್ರತಿಬಿಂಬವನ್ನು ಗಮನಿಸೋಣ. ನೀರು ಚಲಿಸುತ್ತಿರುವುದರಿಂದ ಚಂದ್ರನ ಪ್ರತಿಬಿಂಬವು ಅದರಲ್ಲಿ ಚಲಿಸುತ್ತಿರುವಂತೆ ತೋರಿದರೂ ವಾಸ್ತವವಾಗಿ ಆಕಾಶದಲ್ಲಿರುವ ಚಂದ್ರನಲ್ಲಿ ಚಲನೆ ಇರುವುದಿಲ್ಲ. ಹಾಗೆಯೇ ದೇಹಾದಿಧರ್ಮಗಳು ಅಜ್ಞಾನವಶದಿಂದ ಜೀವನಲ್ಲಿ ತೋರಿಬರುವುವೇ ಹೊರತು ಸಾಕ್ಷಿಯಾಗಿರುವ ಪರಬ್ರಹ್ಮದಲ್ಲಿ ಕಂಡುಬರುವುದಿಲ್ಲ.

ಯಥಾ ಜಲೇ ಚನ್ದ್ರಮಸಃ ಕಮ್ಪಾದಿಸ್ತತ್ಕೃತೋ ಗುಣಃ ।
ದೃಶ್ಯತೇಽಸನ್ನಪಿ ದ್ರಷ್ಟುರಾತ್ಮನೋಽನಾತ್ಮನೋ ಗುಣಃ ॥೧೧॥

ಹಾಗಾದರೆ ಈ ಸುಳ್ಳು ತಿಳಿವಳಿಕೆಯು ತೊಲಗುವುದೆಂತು? ಎಂದರೆ :

ನಿವೃತ್ತಿಧರ್ಮವನ್ನು ಆಚರಿಸುತ್ತಿದ್ದರೆ ನಿಷ್ಕಾಮಭಾವದಿಂದ ಭಗವದರ್ಪಣ ಬುದ್ಧಿಯಿಂದ ಕರ್ಮಗಳನ್ನಾಚರಿಸುತ್ತಿದ್ದರೆ ಶ್ರೀವಾಸುದೇವನ ಕೃಪೆಯಿಂದ ಭಗವದ್ಭಕ್ತಿಯೋಗವು ಸಿದ್ಧಿಸಿ ಅದರಿಂದ ಆ ಸುಳ್ಳು ತಿಳಿವಳಿಕೆಯು ನಿಧಾನ ವಾಗಿ ತೊಲಗುವುದು.

ಸ ವೈ ನಿವೃತ್ತಿಧರ್ಮೇಣ ವಾಸುದೇವಾನುಕಮ್ಪಯಾ ।
ಭಗವದ್ಭಕ್ತಿಯೋಗೇನ ತಿರೋಧತ್ತೇ ಶನೈರಿಹ ॥೧೨॥

ಗಾಢನಿದ್ರೆಯುಂಟಾದಾಗ ಮನುಷ್ಯನಿಗೆ ಸಮಸ್ತಕ್ಲೇಶಗಳೂ ಲಯ ಹೊಂದುವಂತೆ–ಸಮಸ್ತಇಂದ್ರಿಯಗಳೂ ತಮ್ಮ-ತಮ್ಮ ವಿಷಯಗಳನ್ನು ಬಿಟ್ಟು ಸಾಕ್ಷಿಸ್ವರೂಪನಾದ ಶ್ರೀಭಗವಂತನಾದ ಶ್ರೀಹರಿಯಲ್ಲಿ ನೆಲೆಗೊಂಡಾಗ ರಾಗ-ದ್ವೇಷಾದಿ ಸಮಸ್ತಕ್ಲೇಶಗಳೂ ಪೂರ್ಣವಾಗಿ ನಾಶಹೊಂದಿಬಿಡುವುವು.

ಯಥೇನ್ದ್ರಿಯೋಪರಾಮೋಽಥ ದ್ರಷ್ಟ್ರಾತ್ಮನಿ ಪರೇ ಹರೌ ।
ವಿಲೀಯನ್ತೇ ತದಾ ಕ್ಲೇಶಾಃ ಸಂಸುಪ್ತಸ್ಯೇವ ಕೃತ್ಸ್ನಶಃ ॥೧೩॥

ಶ್ರೀಕೃಷ್ಣಪರಮಾತ್ಮನ ಗುಣಗಳ ವರ್ಣನೆಯನ್ನೂ–ಶ್ರವಣವನ್ನೂ ಮಾಡುತ್ತಿದ್ದರೆ ಸಮಸ್ತದುಃಖರಾಶಿಯೂ ಶಾಂತವಾಗಿಬಿಡುವುದು. ಹೀಗಿರುವಾಗ ನಮ್ಮ ಹೃದಯದಲ್ಲಿ ಆತನ ಪಾದಾರವಿಂದಗಳ ಧೂಳನ್ನು ಸೇವಿಸಬೇಕೆಂಬ ಪರಮಪ್ರೇಮವೇ ಎಚ್ಚರಗೊಂಡಿತೆಂದರೆ–ಆ ದುಃಖರಾಶಿಯು ಲಯಹೊಂದಿಬಿಡುವುದೆಂಬುದನ್ನು ಬೇರೆ ಹೇಳಬೇಕೇ!"

ಅಶೇಷಸಂಕ್ಲೇಶಶಮಂ ವಿಧತ್ತೇ
ಗುಣಾನುವಾದಶ್ರವಣಂ ಮುರಾರೇಃ ।
ಕುತಃ ಪುನಸ್ತಚ್ಚರಣಾರವಿನ್ದ-
ಪರಾಗಸೇವಾರತಿರಾತ್ಮಲಬ್ಧಾ ॥೧೪॥*

---

* ಭಗವಂತನು ಚಿನ್ಮಾತ್ರನು ; ಜ್ಞಾನೈಕರಸಶರೀರನು. ಆದ್ದರಿಂದಲೇ ನಿರ್ಗುಣನು. ಅಂದರೆ: ಸತ್ತ್ವಾದಿಗುಣತ್ರಯವಿಲ್ಲದವನು. ಆದ್ದರಿಂದಲೇ ಅವಿಕಾರಿಯು. ಇಂತಹ ಭಗವಂತನಾದ (ಐಶ್ವರ್ಯಾದಿಗುಣಸಮುದ್ರನಾದ) ಶ್ರೀಹರಿಗೆ ಸತ್ತ್ವಾದಿಗುಣಗಳೂ ಮತ್ತು ಆ ಗುಣನಿಮಿತ್ತವಾದ ಜಗತ್ಸೃಷ್ಟಿಯೇ ಮುಂತಾದ ಕ್ರಿಯೆಗಳೂ ಹೇಗೆ ಕೂಡುವುವು? ಇವೆಲ್ಲವೂ ಭಗವಂತನ ಲೀಲೆ–ಎಂಬ ಕಾರಣದಿಂದ ಅವು ಅವನಲ್ಲಿ ಕೂಡಬಹುದಲ್ಲಾ! ಎಂದರೆ : ಯಾವನಾದರೂ ಆಟಕ್ಕೋಸ್ಕರ ಮುಳ್ಳಿನ ಪೊದೆಯಲ್ಲಿ ಕಾಲನ್ನು ಇಡುತ್ತಾನೆಯೇ? ಅದನ್ನು ದೂರದಿಂದಲೇ ತೊರೆಯುವನಲ್ಲವೇ?

ಮೈತ್ರೇಯಮಹರ್ಷಿಗಳ ಉತ್ತರವನ್ನು ಕೇಳಿ ಪ್ರಸನ್ನನಾದ ವಿದುರನು ಅವರನ್ನು ಅಭಿನಂದಿಸುತ್ತಾ ಹೀಗೆಂದನು :

ಸಂಛಿನ್ನಃ ಸಂಶಯೋ ಮಹ್ಯಂ ತವ ಸೂಕ್ತಾಸಿನಾ ವಿಭೋ ।
ಉಭಯತ್ರಾಪಿ ಭಗವನ್ಮನೋ ಮೇ ಸಮ್ಪ್ರಧಾವತಿ ॥೧೫॥

'ಐಶ್ವರ್ಯದ ಕಾರಣದಿಂದ ಅವು ಅವನಲ್ಲಿ ಕೂಡಬಹುದು' ಎಂದರೆ ಅದೂ ಹೊಂದಿಕೆಯಾಗುವುದಿಲ್ಲ. "ನಿರನಿಷ್ಟೋ ನಿರವದ್ಯಃ" ಎಂಬ ಶ್ರುತಿಯಂತೆ ಆತನಿಗೆ ಅವದ್ಯಾತ್ಮಕವಾದ ಗುಣಸಂಬಂಧವು ಬರುವಂತಿಲ್ಲ. ಆದ್ದರಿಂದ ತತ್ತ್ವವೇನೆಂಬುದನ್ನು ತಿಳಿಸು ಎಂಬುದು ವಿದುರನ ಪ್ರಶ್ನೆಯ ಅರ್ಥ.

ಕ್ರೀಡೆಯ ಸುಖ ಎನ್ನುವುದು ಪೂರ್ಣಸುಖವಿಲ್ಲದವನಿಗೆ ಮಾತ್ರವೇ ಉಂಟಾಗು ತ್ತದೆ. ಯಥೇಷ್ಟವಾಗಿ ಆಡುವ ಇಷ್ಟವು ಉಂಟಾಗುವುದು ಬೇಜಾರಿನಿಂದ. ಅಥವಾ ತನಗೆ ಸಮನಾದ ಮತ್ತೊಬ್ಬ ಪುರುಷನಿದ್ದರೆ ಆತನೊಡನೆ ಆಡುವ ಇಷ್ಟವು ಉಂಟಾಗುವುದು. ಭಗವಂತನಾದರೋ ಸ್ವತಃ ತೃಪ್ತನಾದವನು. ಆತನು ಆನಂದ ಸಮುದ್ರದಲ್ಲಿ ನಿಮಗ್ನನಾಗಿದ್ದಾನೆ. ಹೀಗೆ ರೋಮಾಂಚಿತಗಾತ್ರನಾಗಿರುವವನಿಗೆ ಬೇಜಾರು ಎಲ್ಲಿಂದ ಬಂತು? ಇದಲ್ಲದೇ **"ಸದೇವ ಸೋಮ್ಯೇದಮಗ್ರ ಆಸೀತ್"**, **"ಏಕಮೇವಾ ದ್ವಿತೀಯಂ ಬ್ರಹ್ಮ"**, **"ಆತ್ಮಾ ವಾ ಇದಮೇಕಮೇವಾಗ್ರ ಆಸೀತ್"** ಎಂದು ಶ್ರುತಿಗಳು ಸಾರುವಂತೆ ಅವನಿಗೆ ಎಣೆಯಾದ ಮತ್ತೊಬ್ಬ ಪುರುಷನೇ ಇಲ್ಲ. ಆದ್ದರಿಂದ ಆತನಿಗೆ ಕ್ರೀಡಿಸುವ ಇಷ್ಟವೇ ಇರುವಹಾಗಿಲ್ಲ. ಇನ್ನು ಕ್ರೀಡಾಕಾರ್ಯವೆಲ್ಲಿಂದ ಬಂತು?

ಶ್ರೀಹರಿಗೆ ಗುಣಗಳಿಂದ ಸೃಷ್ಟ್ಯಾದಿ ಕ್ರೀಡೆಗಳಿದ್ದರೆ ಮೇಲ್ಕಂಡ ಯೋಚನೆ. ಆದರೆ 'ನಿಷ್ಕ್ರಿಯಂ' ಎಂದು ಶ್ರುತಿಯು ಹೇಳುವಂತೆ ಆತನಿಗೆ ಅವುಗಳೇ ಇಲ್ಲ–ಎಂದು ಆಕ್ಷೇಪಿಸಿದರೆ–ಭಗವಂತನು ತನಗೆ ಸ್ವಾಧೀನವಾಗಿರುವ ಪ್ರಕೃತಿಯಿಂದ ಅವುಗಳನ್ನು ಮಾಡುತ್ತಾನೆ. ರಜೋರೂಪವಾದ ಪ್ರಕೃತಿಯಿಂದ ಜಗತ್ತನ್ನು ಸೃಷ್ಟಿಸಿದು. ಸತ್ತ್ವರೂಪವಾದ ಪ್ರಕೃತಿಯಿಂದ ಜಗತ್ತನ್ನು ಸ್ಥಾಪಿಸುತ್ತಾನೆ ಮತ್ತು ತಮೋರೂಪ ವಾದ ಪ್ರಕೃತಿಯಿಂದ ಆ ವಿಶ್ವವನ್ನೂ ಸಂಹರಿಸುವನು. ಆದ್ದರಿಂದ ಆತನಿಗೆ ಗುಣ ಕ್ರಿಯೆಗಳ ಸಂಬಂಧವು ಇರಲೇಬೇಕು. ಆದ್ದರಿಂದ ನನಗೆ ಸಂಶಯ ಬಂದಿದೆ. ನನ್ನ ಸಂಶಯಕ್ಕೆ ಮತ್ತೊಂದು ಕಾರಣವಿದೆ. ಜ್ಞಾನಸ್ವರೂಪದ ಲೋಪವೇ ಇಲ್ಲದ ಆ ಭಗವಂತನು ದೇಶಾದಿನಿಮಿತ್ತದಿಂದಾಗಲೀ, ಜಾಗ್ರತ್-ಸ್ವಪ್ನ ಮುಂತಾದ ಅವಸ್ಥಾ ಕಾರಣದಿಂದಾಗಲೀ, ತನ್ನಿಂದಾಗಲೀ, ಇತರರಿಂದಾಗಲೀ ಪ್ರಕೃತಿಯೊಡನೆ ಯೋಗವನ್ನು ಹೇಗೆ ಹೊಂದಿಯಾನು? ಗುಣರೂಪವಾದ ಪ್ರಕೃತಿಯ ಸಂಸರ್ಗವು ಆತನಿಗೆ ಸಂಭವಿಸುವಂತಿಲ್ಲ. ಆದರೆ ಆ ಸಂಸರ್ಗವು ಇರುವುದು ಕಂಡುಬರುತ್ತದೆ.

"ಎಲೈ ಮಹಾತ್ಮರೇ! ನನ್ನ ಪ್ರಶ್ನೆಗೆ ಉತ್ತರವಾಗಿ ತಾವು ಹೇಳಿದ ಸೂಕ್ತಿಯೆಂಬ ಕತ್ತಿಯಿಂದ ನನ್ನ ಸಂಶಯವು ಸಮೂಲವಾಗಿ ಕತ್ತರಿಸಿ ಹೋಯಿತು. ಈಗ ನನ್ನ ಮನಸ್ಸು ಪರಮಾತ್ಮನ ಪೂರ್ಣಸ್ವಾತಂತ್ರ್ಯ ಮತ್ತು ಜೀವನಪರಾಧೀನತೆ–ಎಂಬ ಎರಡು ವಿಷಯಗಳಲ್ಲಿ ಚೆನ್ನಾಗಿ ಪ್ರವೇಶ ಮಾಡಿದೆ.

ಓ ಜ್ಞಾನಿಶ್ರೇಷ್ಠರೇ! ಎಲ್ಲವೂ ಭಗವಂತನ ಮಾಯೆಗೆ ಹೇಗೆ ಅಧೀನ

'ತುಚ್ಛೇನಾಭ್ವಪಿ ಹಿತಂ' ಎಂದು ಶ್ರುತಿಯು ಅದನ್ನು ಸಾರುತ್ತದೆ. ಆದ್ದರಿಂದ ನನಗೆ ಸಂದೇಹವುಂಟಾಗಿದೆ.

ಲೋಕದಲ್ಲಿ ಮನುಷ್ಯನಲ್ಲಿ ಐಶ್ವರ್ಯದ ಅಭಾವವಿರುತ್ತದೆ. ರಾಗ-ದ್ವೇಷಗಳಲ್ಲಿ ಅಧಿನಿವೇಶರೂಪವಾದ ಸಾಂಸಾರಿಕದುಃಖವೆಂಬ ಕ್ಲೇಶವನ್ನೂ ಅವರಲ್ಲಿ ನೋಡುತ್ತೇವೆ. ಅಂತಹ ಐಶ್ವರ್ಯಹೀನವಾದ (ದುರ್ಭಗವಾದ) ಎಲ್ಲ ಕ್ಷೇತ್ರಗಳಲ್ಲಿಯೂ ಭಗವಂತನು ಇರುವುದರಿಂದ ಆತನಿಗೆ ಅದರ ಸಂಬಂಧ ಬರಬೇಕಾಗುತ್ತದೆ. ಆದರೆ ಅವನು ಭಗವಂತನಾದ್ದರಿಂದ ಆತನಿಗೆ ಈ ಕ್ಲೇಶಾದಿಸಂಸರ್ಗ ಬರುವಂತಿಲ್ಲ. ಇದು ಹೇಗೆಂದು ನನಗೆ ಅರ್ಥವಾಗಿಲ್ಲ. ಹೀಗೆ ನಿಶ್ಚಿತವಾದ ಜ್ಞಾನವಿಲ್ಲದೇ ವಿಷಾದಗೊಂಡಿರುವ ನನ್ನ ಈ ದೊಡ್ಡ ಮೋಹವನ್ನು ಹೋಗಲಾಡಿಸಿರಿ, ಮಹರ್ಷಿಗಳೇ! (ಸತ್ಪುರುಷರು ತಮ್ಮಲ್ಲಿ ಅತ್ಯಲ್ಪ ದೋಷವಿದ್ದರೂ ಅದನ್ನು ತುಂಬಾ ದೊಡ್ಡದೆಂದು ಭಾವಿಸುತ್ತಾರೆ.) ಇದಿಷ್ಟೂ ವಿದುರನ ಪ್ರಶ್ನೆ.

ಅದಕ್ಕೆ ಶ್ರೀಮೈತ್ರೇಯರ ಉತ್ತರ : ಭಗವಂತನು ಐಶ್ವರ್ಯಹೀನವಾದ ಶರೀರಗಳಲ್ಲಿದ್ದರೂ ಆತನ ಮಹಾತ್ಮ್ಯವು ನಿರತಿಶಯವಾದ್ದರಿಂದ ಆತನಿಗೆ ದುಃಖವೇ

---

* ನಿನ್ನ ಉಪಪತ್ತಿಪೂರ್ವಕವಾದ ಸೂಕ್ತಿಯೆಂಬ ಖಡ್ಗದಿಂದ ಭಗವಂತನ ಕಾರಣತ್ವದ ಬಗೆಗೆ ನನಗಿದ್ದ ಸಂಶಯವು ನಿರ್ಮೂಲವಾಗಿ ಕತ್ತರಿಸಿಹೋಯಿತು. ಈಗ ನನ್ನ ಮನಸ್ಸು ಶ್ರೀಭಗವಂತನ ಗುಣಾನುವಾದ ಮತ್ತು ಶ್ರೀಚರಣಸೇವೆ–ಎಂಬ ಎರಡು ವಿಷಯಗಳಲ್ಲೂ ತತ್ಪರವಾಗಿದೆ. (ವೀರರಾಘವೀಯ)

ನಿನ್ನ ಸೂಕ್ತವೆಂಬ ಖಡ್ಗದಿಂದ ನನ್ನ ಸಂಶಯವು ಅಂದರೆ : ಅನ್ಯಥಾಜ್ಞಾನವು ಅಥವಾ ಅಜ್ಞಾನವು ತೊಡೆದುಹೋಯಿತು. ಶ್ರೀಹರಿಯು ದುರ್ಭಗದೇಹದಲ್ಲಿರುವುದರಿಂದ ಆತನಿಗೆ ಆ ದೇಹದಲ್ಲಿರುವ ದುಃಖಾದಿಭೋಗವು ಸಂಭವಿಸಬಹುದೆಂಬ ಅನ್ಯಥಾಜ್ಞಾನವು ನಿರ್ಮೂಲವಾಯಿತು. ಈ ಅನ್ಯಥಾಜ್ಞಾನವು ಹೋದದ್ದರಿಂದ ಈಗ ನನ್ನ ಮನಸ್ಸು-ದೇಹಾದಿಗಳಲ್ಲಿರುವ ಅಹಂಕಾರ-ಮಮಕಾರಗಳಲ್ಲಿ ಮತ್ತು ಶ್ರೀಹರಿಯಲ್ಲಿ ಇದೋ-ಅದೋ ಎಂಬ ಸಂದೇಹವನ್ನು ಪಡೆದಿದೆ. (ವಿಜಯಧ್ವಜೀಯ) (ಶ್ಲೋಕ ೧೫)

ವಾಗಿವೆ ಎಂಬುದನ್ನು ತಾವು ಚೆನ್ನಾಗಿ ಪ್ರತಿಪಾದನೆಮಾಡಿದಿರಿ. 'ಈ ಪ್ರಕೃತಿವ್ಯಾಪಾರವು ಸ್ವತಂತ್ರವಾದದ್ದು. ಅದಕ್ಕೆ ಮೂಲವೇ ಇಲ್ಲ'–ಎಂಬ ಅಭಿಪ್ರಾಯವು ತಪ್ಪೆಂದು ನನಗೆ ತಿಳಿದುಬಂದಿತು. ಏಕೆಂದರೆ : ಪರಮಾತ್ಮನೇ ವಿಶ್ವಕ್ಕೆ ಮೂಲ. ಅವನು ಎಲ್ಲದರಲ್ಲೂ ಒಳಹೊಕ್ಕು ಎಲ್ಲಕ್ಕೂ ನಿಯಾಮಕ ನಾಗಿದ್ದಾನೆ. ಯಾವುದೂ ಅವನಿಗೆ ಹೊರಗಿನದಲ್ಲ. ಅವನು ಯಾವುದಕ್ಕೂ ಹೊರಗಿನವನಲ್ಲ.

ಸಾಧ್ವೇತದ್ವ್ಯಾಹೃತಂ ವಿದ್ವನ್ನಾತ್ಮಮಾಯಾಯನಂ ಹರೇಃ ।
ಅಭಾತ್ಯಪಾರ್ಥಂ ನಿರ್ಮೂಲಂ ವಿಶ್ವಮೂಲಂ ನ ಯದ್ಬಹಿಃ ॥೧೬॥

ಮುಂತಾದ ಕೆಸರು ಅಂಟುವುದಿಲ್ಲ. ಆತನಿಗೆ ದೈನ್ಯವಾಗಲೀ ಬಂಧನವಾಗಲೀ ಉಂಟಾಗುತ್ತದೆಯೆಂಬುದು ಪ್ರಮಾಣಕ್ಕೂ ವಿರುದ್ಧ; ಯುಕ್ತಿಗೂ ವಿರುದ್ಧ. ದುರ್ಭಗ (ಐಶ್ವರ್ಯಹೀನ) ವಾದ ಶರೀರಗಳಲ್ಲಿ ಇದ್ದರೂ ಆ ಶರೀರಗಳ ದೋಷವು ಆತನಿಗೆ ಅಂಟುವುದಿಲ್ಲ. ಅದೇ ಆತನ ಮಹಾಮಹಿಮೆ. ಆತನು ಮಾಯೆಯಿಂದ ಇದನ್ನೆಲ್ಲಾ ಮಾಡುತ್ತಾನೆ–ಎಂಬ ವಿವರಣೆಯೂ ಸರಿಯಲ್ಲ. ಅಶಕ್ತರಾದ ಸಾಲ್ವನೇ ಮುಂತಾದವರಿಗೆ ತಮ್ಮ ಕಾರ್ಯವನ್ನು ಸಾಧಿಸಲು ಮಾಯೆಯ ಸಹಾಯ ಬೇಕಾಗುತ್ತದೆ. ಸತ್ಯವಾದ ಸೃಷ್ಟಿಯನ್ನು ಮಾಡಲು ಅಸಮರ್ಥರಾದ್ದರಿಂದ ಅವರು ಮಾಯಾಸೃಷ್ಟಿಯನ್ನು ಮಾಡಬೇಕಾಯಿತು. **'ಅಶಕ್ತಾಃ ಸತ್ಯಸೃಷ್ಟಾ ಹಿ ಮಾಯಾಸೃಷ್ಟಿಂ ವಿಶನ್ತ್ವತೇ'** ಭಗವಂತನ ಸೃಷ್ಟಿ ಮುಂತಾದುವುಗಳು ಭ್ರಾಂತಿ ಎನ್ನುವುದು ದಾನವರ ವಾದ. ಭಗವಂತನಿಗೆ ಭ್ರಾಂತಿ ಮುಂತಾದುವುಗಳ ಸಂಬಂಧವೇ ಇಲ್ಲ.

ಹಾಗಾದರೆ ಯಾರಿಗೆ ಭ್ರಾಂತಿ? ಯಾರ ಭ್ರಾಂತಿಯಿಂದ ಸಂಸಾರ? ಎಂದರೆ : ಪ್ರಕೃತಿಸಂಬಂಧದಿಂದ ಭ್ರಾಂತಿಹೊಂದಿದ ಜೀವನಿಗೆ ಮಾತ್ರರೇ ಸಂಸಾರ–ಎಂಬುದಕ್ಕೆ ಸ್ವಪ್ನದ ದೃಷ್ಟಾಂತವನ್ನು ಕೊಟ್ಟಿದೆ. ಕನಸುಕಾಣುತ್ತಿರುವಾಗ ಜೀವನಿಗೆ ತನ್ನ ತಲೆಯನ್ನು ಕತ್ತರಿಸಿದಂತೆ ಇತ್ಯಾದಿಗಳ ಅನುಭವ ಆಗಬಹುದು. ಜಗತ್ತಿನಲ್ಲಿ ಕಂಡ ಅಥವಾ ಕೇಳಿದ ವಾಸನೆಯ ಕಾರಣದಿಂದ ಈ ಇಲ್ಲದ ವಿಷಯದ ಅನುಭವ ಆತನಿಗೆ ಉಂಟಾಗುವುದು. ಭ್ರಾಂತಿಯಿಂದ ಈ ದರ್ಶನ ಆತನಿಗೆ ಉಂಟಾಗುವುದು. ಆದರೆ ಸ್ವಪ್ನವು ಸುಳ್ಳಲ್ಲ. ಏಕೆಂದರೆ : ಅದು ಅರ್ಥಕ್ರಿಯಾಕಾರಿಯಾಗಿದೆ.

ಹಾಗೆಯೇ ಚಂದ್ರಪ್ರತಿಬಿಂಬದೃಷ್ಟಾಂತವನ್ನೂ ಗಮನಿಸಬಹುದು. ಚಲಿಸುತ್ತಿರುವ ಜಲದಲ್ಲಿರುವ ಚಂದ್ರಪ್ರತಿಬಿಂಬಕ್ಕೆ ನಿಜವಾಗಿಯೂ ಚಲನೆಯಿಲ್ಲ. ಚಲನೆಯು ಆ ಜಲದ ಗುಣವೇ ಹೊರತು ಚಂದ್ರನ ಪ್ರತಿಬಿಂಬದ ಗುಣವಲ್ಲ. ಆದರೂ ಅದನ್ನು ನೋಡುವ ಮನುಷ್ಯನಿಗೆ ಚಂದ್ರಪ್ರತಿಬಿಂಬವೇ ಚಲಿಸುತ್ತಿರುವಂತೆ ತೋರುತ್ತದೆ.

ಎಲೈ ಬ್ರಾಹ್ಮಣಶ್ರೇಷ್ಠರೇ! ಜೀವರು ಅನುಭವಿಸುತ್ತಿರುವ ಈ ಕ್ಲೇಶವೇ ಮುಂತಾದ ಅನರ್ಥಕ್ಕೆ ಮೂಲವೇ ಇಲ್ಲ. ಅದು ಜೀವರಿಗೆ ಸ್ವಾಭಾವಿಕವಾದುದು–ಎಂದು ಅಜ್ಞಾನಿಗಳಿಗೆ ಕಂಡುಬಂದರೂ ವಾಸ್ತವವಾಗಿ ಅದಕ್ಕೆ ಶ್ರೀಹರಿಯ ಅದ್ಭುತವಾದ ಮಾಯಾಶಕ್ತಿಯೇ ಕಾರಣ.* ವಿಶ್ವಕ್ಕೆ ಕಾರಣವಾದ ಪರಬ್ರಹ್ಮವು ಅದಕ್ಕೆ ಹೊರಗಿನದಲ್ಲ. ಅದನ್ನು ಒಳಹೊಕ್ಕು ಅದಕ್ಕೆ ನಿಯಾಮಕವಾಗಿದೆ–ಎಂದು ತಾವು ಹೇಳಿರುವುದು ತುಂಬಾ ಸರಿಯಾಗಿದೆ.

ಹಾಗೆಯೇ ಜೀವನಿಗೆ ಈಶ್ವರನ ಇಚ್ಛೆಯಂತೆ ಅನಾತ್ಮವಾದ ದೇಹದ ಗುಣಗಳಾದ ಜನನ-ಮರಣಾದಿಗಳು ತೋರಿಬರುತ್ತವೆ. ಜೀವನು ಸ್ವತಃ ಜ್ಞಾನರೂಪನಾದರೂ ಸ್ವತಂತ್ರನಾದ ಈಶ್ವರನ ಇಚ್ಛೆಗೆ ವಶನಾಗಿ ಭ್ರಾಂತಿಗೊಂಡು ಸಂಸಾರದಲ್ಲಿ ಸಿಲುಕಿ ಬೀಳುತ್ತಾನೆ. ಬಿಳಿಯ ಸ್ಫಟಿಕಕ್ಕೆ ಕೆಂಪುದಾಸವಾಳದಿಂದ ಉಂಟಾಗುವ ಕೆಂಪುಬಣ್ಣವು ಸತ್ಯವಾಗಿರುವಂತೆ–ಜೀವನಿಗೆ ಪ್ರಕೃತಿಸಂಬಂಧದಿಂದ ಉಂಟಾಗುವ ಸಂಸಾರವು ಸತ್ಯವೇ ಆಗಿದೆ.

ಸ್ವಪ್ನವು ವಾಸನೆಗಳಿಂದ ಉಂಟಾಗುವುದರಿಂದ ಅದರ ಅನುಭವವು ಅಸ್ಪಷ್ಟವಾಗಿದೆ. ಆದ್ದರಿಂದ ಅದರ ದೃಷ್ಟಾಂತದಿಂದ ಸಂಸಾರದ ಸತ್ಯತ್ವವನ್ನು ಪ್ರತಿಪಾದಿಸುವುದು ಕಷ್ಟ. ಅದಕ್ಕೋಸ್ಕರ ಚಂದ್ರಪ್ರತಿಬಿಂಬದ ಉದಾಹರಣೆಯನ್ನು ಕೊಟ್ಟಿದೆ.

ಹಾಗಾದರೆ ಸಂಸಾರವು ಸತ್ಯವಾದರೆ ಅದಕ್ಕೆ ನಿವೃತ್ತಿಯೇ ಇಲ್ಲ. ಜೀವರಿಗೆ ಎಂದಿಗೂ ಮೋಕ್ಷವೇ ದೊರಕುವುದಿಲ್ಲವಲ್ಲಾ! ಎಂದರೆ : ಶ್ರೀಭಗವಂತನನ್ನು ಕುರಿತ

---

* ೧) ಜೀವನು ಅನುಭವಿಸುತ್ತಿರುವ ಕ್ಲೇಶಾದಿಗಳಿಗೆ ಶ್ರೀಹರಿಯ ಮಾಯೆಯೇ ಕಾರಣ. ಅದು, ಕನಸಿನಲ್ಲಿ ತನ್ನ ತಲೆಯು ಕತ್ತರಿಸಿಹೋದದ್ದನ್ನು ತಾನು ಕಾಣುವಂತೆ ಅಸತ್ತು ; ಅರ್ಥರಹಿತವಾದುದು. ಅದರಿಂದುಂಟಾದ ಈ ದೇಹಾದಿಪ್ರಪಂಚಕ್ಕೆ ಮೂಲವು ಹೊರಗಿಲ್ಲ. ಹಾಗೆ ಸ್ವಯಂ ಮೂಲಶೂನ್ಯವಾದ ವಸ್ತುವನ್ನು ನೀನು ಚೆನ್ನಾಗಿ ತಿಳಿಸಿದೆ.

(ಶ್ರೀಧರೀಯ)

೨) ಈ ಭಗವಂತನ ಮಹಿಮೆಯು ಶ್ರೀಹರಿಯ ಮಾಯೆಯನ್ನು (ಸ್ವರೂಪ-ಸಾಮರ್ಥ್ಯವನ್ನು) ಆಶ್ರಯಿಸಿದೆ–ಎಂದು ನೀನು ಹೇಳಿದ್ದು ತುಂಬಾ ಚೆನ್ನಾಗಿದೆ. ಸಂಶಯನಿರಸನಮಾಡುವ ಹರಿತವನ್ನು ಹೊಂದಿದೆ. (ಆತ್ಮ–ಎಂಬ ಶಬ್ದವನ್ನು ಹೇಳಿರುವುದರಿಂದ ಮಾಯಾಶಬ್ದವು ಇಂದ್ರಜಾಲವಲ್ಲ– ಎಂಬುದು ಸ್ಪಷ್ಟ.) ಹಾಗಿದ್ದರೂ ಅದು ಪ್ರಯೋಜನಶೂನ್ಯವಾದುದು. ಆದ್ದರಿಂದಲೇ ನಿರ್ಮೂಲವಾದುದು. ಹಿಂದಿನ ಅದೃಷ್ಟವಲ್ಲದೇ ಅದಕ್ಕೆ ಬೇರೆ ಕಾರಣವಿಲ್ಲ. ವಿಶ್ವಮೂಲಭಕ್ತಿಯೋಗದಿಂದ ಉಂಟಾದ

ಈ ಪ್ರಪಂಚದಲ್ಲಿ ಯಾವ ಯೋಚನೆಯೂ ಇಲ್ಲದೇ ಸುಖವಾಗಿರುವವರು ಎರಡು ವರ್ಗದ ಜನರು– (1) ಏನೂ ಅರಿಯದಿರುವುದರಿಂದ ಯಾವ ಚಿಂತೆಯೂ ಇಲ್ಲದೇ ಇರುವ ಕಡುಮೂರ್ಖರು. (2) ಬುದ್ಧಿ ಮುಂತಾದುವುಗಳನ್ನು ಮೀರಿರುವ ಶ್ರೀಭಗವಂತನನ್ನು ಹೊಂದಿದವರು. ಈ ಎರಡು ವರ್ಗಗಳಿಗೂ ಸೇರದ ಮಧ್ಯವರ್ಗದ ಜನರು ಸಂಶಯಗಳಿಗೆ ವಶರಾಗಿ ದುಃಖಪಡುತ್ತಾರೆ.

ಯಶ್ಚ ಮೂಢತಮೋ ಲೋಕೇ ಯಶ್ಚ ಬುದ್ಧೇಃ ಪರಂ ಗತಃ ।
ತಾವುಭೌ ಸುಖಮೇಧೇತೇ ಕ್ಲಿಶ್ಯತ್ಯನ್ತರಿತೋ ಜನಃ ॥೧೭॥

ಶ್ರೀಭಗದನುಗ್ರಹದಿಂದ ಸಂಸಾರದ ನಿವೃತ್ತಿಯುಂಟಾಗುವುದು. 'ಯಸ್ಯ ಪ್ರಸಾದಾತ್' ಎಂದು ಶ್ರುತಿಯು ಮೊಳಗುವಂತೆ ಶ್ರೀವಾಸುದೇವನ ಅನುಗ್ರಹದಿಂದಲೇ ಮೋಕ್ಷವು ಉಂಟಾಗುತ್ತದೆ. ಈಶ್ವರಜ್ಞಾನದಿಂದ ಸತ್ಯವಾಗಿರುವ ಸಂಸಾರವು ಹೇಗೆ ತೊಲಗುತ್ತದೆ? ಎಂದರೆ : **'ಈಶ್ವರಜ್ಞಾನಾದ್ವಿಲೀಯತೇ'** ಎಂಬ ಪ್ರಮಾಣವಚನವನ್ನು ನೋಡುವುದು. ಗರುಡದೇವರ ಧ್ಯಾನದಿಂದ ಸತ್ಯವೇ ಆದ ವಿಷವು ನಾಶಹೊಂದುವಂತೆ–ಈಶ್ವರಜ್ಞಾನದಿಂದ ಸತ್ಯವೇ ಆಗಿರುವ ಸಂಸಾರವು ತೊಲಗುವುದು. ದೇಹಾಭಿಮಾನವು ಭ್ರಾಂತಿ–ಅದು ಈಶ್ವರನ ಸ್ವಾತಂತ್ರ್ಯದ ಜ್ಞಾನ ಇಲ್ಲದೇ ಇರುವುದರಿಂದ ಉಂಟಾಗುವುದು. ಈಶ್ವರನ ಜ್ಞಾನ ಉಂಟಾದರೆ ಅದು ಸತ್ಯವಾಗಿಯೂ ತೊಲಗಿಹೋಗುವುದು. '**ಭ್ರಾನ್ತಿರ್ಹಿ ದೇಹಾಭಿಮತಿಃ ಈಶಜ್ಞಾನಾತ್** ವಿನಶ್ಯತಿ' ಅದು 'ಬಹೂನಾಂ ಜನ್ಮನಾಮನ್ತೇ' ಎಂಬ ಗೀತಾವಚನದಂತೆ ನಿಧಾನವಾಗಿ ತೊಲಗಬೇಕು. (ವಿಜಯಧ್ವಜೀಯ)

ಭಗವಂತನ ಸೃಷ್ಟಿಕರ್ತೃತ್ವ ಮತ್ತು ಜಗತ್ತಿನ ಉಪಾದಾನಕಾರಣತ್ವವನ್ನು ಕುರಿತು ಇಲ್ಲಿ ಆಕ್ಷೇಪವನ್ನು ಹೇಳಿ, ಅದಕ್ಕೆ ಸಮಾಧಾನವನ್ನು ಕೊಡಲಾಗಿದೆ.

ವಾದ ಬ್ರಹ್ಮವೂ ನನ್ನ ಜ್ಞಾನದಿಂದ ಹೊರಗಿಲ್ಲ. ಆದ್ದರಿಂದ ನಾನು ಎರಡೂ ಕಡೆಗಳಿಂದ ಜಾರಿದವನಂತೆ ಆಗಿದ್ದೇನೆ. (ವಿಜಯಧ್ವಜೀಯ)

೩) ಆತ್ಮ ಅಂದರೆ ಜೀವ. ಮಾಯೆ ಅಂದರೆ ಪ್ರಕೃತಿ–ಇವೆರಡೂ ಶ್ರೀಹರಿಯ ವಾಸಸ್ಥಾನವೆಂದು ನೀನು ಪ್ರತಿಪಾದಿಸಿದ್ದು ಚೆನ್ನಾಗಿದೆ. ವಿಶ್ವಮೂಲ (ಕಾರಣ)ವಾದ ಬ್ರಹ್ಮವು ಜಗತ್ತಿನ ಹೊರಗಿನದಲ್ಲ. ಅದನ್ನು ಒಳಹೊಕ್ಕಿದೆ. ಅಂತರ್ಯಾಮಿಯಾಗಿದೆ. ಆದ್ದರಿಂದ ಈ ಜಗತ್ತು ನಿರ್ಮೂಲ ; ಬ್ರಹ್ಮಾತ್ಮಕವಲ್ಲ ಎಂಬ ವಾದವು ಅರ್ಥಶೂನ್ಯವಾದುದು. ಭ್ರಾಂತಿರೂಪವಾದುದು. ಇದು ಅಬ್ರಹ್ಮಾತ್ಮಕವೆಂದು ಕಾಣುವುದು ಮಿಥ್ಯೆ. (ವೀರರಾಘವೀಯ) (ಶ್ಲೋಕ ೧೬)

ಅಜ್ಞಾನದಿಂದ ಈ ಕ್ಲೇಶಾದಿಗಳು ತೋರಿಬರುತ್ತಿದ್ದರೂ ಅವು ಆತ್ಮನಿಗೆ ಸಂಬಂಧಪಟ್ಟವುಗಳಲ್ಲ ; ಪುರುಷಾರ್ಥಗಳಲ್ಲ–ಎಂಬುದನ್ನು ತಮ್ಮ ಉಪದೇಶಬಲದಿಂದ ನಿಶ್ಚಯಿಸಿಕೊಂಡೆನು. ನಿಮ್ಮ ಚರಣಸೇವೆಯಿಂದ ನಾನು ಈ ಕ್ಲೇಶಾದಿ ಅನರ್ಥಗಳಿಗೆ ಕಾರಣವಾದ ಮಾಯೆಯನ್ನೂ ಹೋಗಲಾಡಿಸಿಕೊಳ್ಳುತ್ತೇನೆ. ಸ್ವಾಮಿಯಾದ ಶ್ರೀಮಧುಸೂದನನ ಶ್ರೀಪಾದಪದ್ಮ ಕಮಲಗಳಲ್ಲಿ ಉತ್ಕಟವಾದ ಪ್ರೇಮವು ಉಂಟಾದರೆ ಮಾತ್ರವೇ ಎಲ್ಲ ವ್ಯಸನಗಳ ಪರಿಹಾರವಾಗುವುದು. ತಮ್ಮ ಶ್ರೀಚರಣಗಳ ಸೇವೆಯಿಂದ ನನಗೆ ನಿತ್ಯಸಿದ್ಧನೂ–ಸರ್ವಮೂಲನೂ ಆಗಿರುವ ಆ ಭಗವಂತನ ಅಡಿದಾವರೆ

ಶ್ರೀಭಗವಂತನು ಚಿನ್ಮಾತ್ರೈಕರಸನು. ಅಪರಿಣಾಮಿಯು, ನಿರ್ಗುಣನು (ಸತ್ವಾದಿ ಗುಣರಹಿತನು) ಆತನಿಗೆ ಗುಣಗಳು ಅಂದರೆ : ಗುಣಕಾರ್ಯಗಳಾದ ಕ್ಲೇಶಾದಿಗಳೂ ಮತ್ತು ಪರಿಣಾಮಾದಿಕ್ರಿಯೆಗಳೂ ಆಟಗಾರಿಕೆಯೆಂಬ ಕಾರಣದಿಂದಲಾದರೂ ಹೇಗೆ ಬಂದಾವು? ಭಗವಂತನು ಸೃಷ್ಟ್ಯಾದಿಗಳನ್ನು ಮಾಡುವುದು ಮತ್ತು ಜಗದಾಕಾರವಾಗಿ ಪರಿಣಾಮಹೊಂದುವುದು ಲೀಲೆಯಿಂದ ಎಂದೇ ಹೇಳಬೇಕು. ಏಕೆಂದರೆ : ಅವನು ಕರ್ಮವಶನಲ್ಲ. (ಏಷ ಆತ್ಮಾ ಅಪಹತಪಾಪ್ಮಾ) ಇದನ್ನು 'ಲೋಕವತ್ತು ಲೀಲಾಕೈವಲ್ಯಂ'–ಎಂಬ ಬ್ರಹ್ಮಸೂತ್ರದಲ್ಲಿ ಸಿದ್ಧಾಂತಮಾಡಿದೆ. ಸಾರ್ವಭೌಮನು ಸಪ್ತದ್ವೀಪಸಹಿತವಾದ ಭೂಮಿಯನ್ನು ಆಳುತ್ತಿದ್ದರೂ ಆತನು ಚೆಂಡಾಟವನ್ನು ಆಡುವುದುಂಟು. ಹಾಗೆಯೇ ಭಗವಂತನು ಪೂರ್ಣಷಾಡ್ಗುಣ್ಯಮೂರ್ತಿಯಾಗಿ, ಅವಾಪ್ತಸಮಸ್ತಕಾಮನಾಗಿ, ಯಾವುದೇ ಪ್ರಯೋಜನ ಇಲ್ಲದವನಾಗಿದ್ದರೂ ಕೇವಲ ಲೀಲೆಯೆಂಬ ಪ್ರಯೋಜನಕ್ಕಾಗಿ ಜಗದ್ವ್ಯಾಪಾರಮಾಡುತ್ತಾನೆ–ಎಂದು ಆ ಸೂತ್ರದಲ್ಲಿ ಹೇಳಿದೆ. ಆದರೆ ಆ ದೃಷ್ಟಾಂತವು ಸರಿಯಲ್ಲ. ಲೋಕದಲ್ಲಿ ಸಾರ್ವಭೌಮನು ಷಾಡ್ಗುಣ್ಯಪರಿಪೂರ್ಣನೂ ಅಲ್ಲ. ಅವಾಪ್ತಸಮಸ್ತಕಾಮನೂ ಆಗಿಲ್ಲ. ಅವನು ಸತ್ತ್ವಾದಿಗುಣವಶನಾಗಿದ್ದಾನೆ. ವಿಕಾರಿಯಾಗಿದ್ದಾನೆ. ಆತನನ್ನು ಪರಿಪೂರ್ಣನೂ, ಆಪ್ತಕಾಮನೂ, ತ್ರಿಗುಣರಹಿತನೂ, ನಿರ್ವಿಕಾರನೂ ಆಗಿರುವ ಭಗವಂತನಿಗೆ ಉಪಮಾನವಾಗಿ ಕೊಡುವುದು ಸರಿಯಲ್ಲ. ಬಾಲಕನ ಆಟದ ದೃಷ್ಟಾಂತವೂ ಹೊಂದಿಕೆಯಾಗುವುದಿಲ್ಲ. ಬಾಲಕನು ಆಟವಾಡುವ ಪ್ರಯತ್ನವನ್ನು ಏಕೆ ಮಾಡುತ್ತಾನೆ? ಎಂದರೆ : ಅವನಿಗೆ ಕ್ರೀಡೋಪಕರಣಗಳು ಇರುವುದರಿಂದಲೂ–ಇತರ ಬಾಲಕರ ಪ್ರೇರಣೆಯಿಂದಲೂ ಆಟವಾಡುವ ಇಷ್ಟ ಉಂಟಾಗುವುದರಿಂದ ಅದರಲ್ಲಿ ತೊಡಗುತ್ತಾನೆ. ಶ್ರೀಭಗವಂತನಾದರೋ ಸ್ವತಃ ತೃಪ್ತನು. ಸ್ವಾನುಭವದಿಂದಲೇ ಸಂತೃಪ್ತನು. ಆತನಿಗೆ ಅವನಿಂದ ವ್ಯತಿರಿಕ್ತವಾದ ಕ್ರೀಡಾಸಾಮಗ್ರಿಯಾಗಲೀ, ಕ್ರೀಡೆಗೆ ಪ್ರೇರಣೆ

ಗಳಲ್ಲಿ ಅಂತಹ ಉತ್ಕಟವಾದ ಭಕ್ತಿಯು ಉಂಟಾಗುವುದು. ದೇವದೇವನಾದ ಶ್ರೀಹರಿಯ ಗುಣಗಳನ್ನು ಸದಾ ಗಾನಮಾಡುತ್ತಾ ಶ್ರೀಭಗವಂತನ ಪ್ರಾಪ್ತಿಗೆ ಮಾರ್ಗವಾಗಿರುವ ತಮ್ಮಂತಹ ಮಹಾತ್ಮರ ಸೇವಾಭಾಗ್ಯವು ಅಲ್ಪಪುಣ್ಯವುಳ್ಳ ವರಿಗೆ ದೊರಕುವುದಿಲ್ಲ. (ಶ್ಲೋಕ 15-20)

ಸೃಷ್ಟಿಯ ಪ್ರಾರಂಭದಲ್ಲಿ ಶ್ರೀಭಗವಂತನು ಕ್ರಮವಾಗಿ ಮಹತ್ತೇ ಮುಂತಾದ ತತ್ತ್ವಗಳನ್ನೂ ಅವುಗಳ ವಿಕಾರಗಳನ್ನೂ ರಚಿಸಿ, ಅವುಗಳ ಅಂಶಗಳಿಂದ ವಿರಾಟ್‌ಪುರುಷನನ್ನು ನಿರ್ಮಿಸಿದನು ಮತ್ತು ಅನಂತರ ತಾನೇ ಅವುಗಳನ್ನು ಒಳಹೊಕ್ಕನು–ಎಂದು ತಾವು ತಿಳಿಸಿದಿರಿ. ಆ ವಿರಾಟ್‌ಪುರುಷ ನಿಗೆ ಸಾವಿರಾರು ಕಾಲುಗಳೂ, ಮೊಣಕಾಲುಗಳೂ, ಬಾಹುಗಳೂ ಉಂಟು. ಆತನನ್ನೇ ವೇದಗಳು ಆದಿಪುರುಷನೆಂದು ಕರೆಯುತ್ತವೆ. ವಿಸ್ತಾರಗೊಂಡ ಈ ಸಮಸ್ತಲೋಕಗಳೂ ಆತನಲ್ಲಿಯೇ ಅಡಕವಾಗಿವೆ. ಇಂದ್ರಿಯವಿಷಯ ಗಳಿಂದಲೂ, ತ್ರಿಗುಣಗಳಿಂದಲೂ ಕೂಡಿದ ಹತ್ತು ವಿಧವಾದ ಪ್ರಾಣಗಳೂ

ಕೊಡುವ ಇತರೇ ಪುರುಷರಾಗಲೀ ಇಲ್ಲವಾದ್ದರಿಂದ ಈ ಬಾಲಕನ ದೃಷ್ಟಾಂತವೂ ಹೊಂದಿಕೆಯಾಗುವುದಿಲ್ಲ–ಎಂಬ ಆಪಾದನೆಗಳು ಬರುವುದರಿಂದ ವಿದುರನ ಪ್ರಶ್ನೆ ಪ್ರಾರಂಭವಾಗುತ್ತದೆ.

ದೀಪಪ್ರಭೆಗೆ ದೇಶೋಪಾಧಿಯಿಂದ ಲೋಪ ಉಂಟಾಗುವುದು. ಮಿಂಚಿನ ಬೆಳಕಿಗೆ ಕಾಲೋಪಾಧಿಯಿಂದ ಲೋಪವುಂಟಾಗುವುದು. ಸ್ಮರಣೆಯ ಪ್ರಕಾಶಕ್ಕೆ ಅವಸ್ಥೆಯಿಂದ ಲೋಪವು ಒದಗುವುದು. ಸ್ವಪ್ನದ ಪ್ರಭೆಗೆ ಸ್ವತಃ ಲೋಪವುಂಟಾಗುವುದು. ಜೀವನು ಸ್ವತಃ ಪ್ರಕಾಶಸ್ವರೂಪನಾದರೂ ಪ್ರಕೃತಿಸಂಬಂಧದಿಂದ ಆತನ ಜ್ಞಾನವು ಲೋಪಹೊಂದುವುದು. ಆದರೆ ಪರಮಾತ್ಮನಿಗೆ ಯಾವುದೇ ಕಾರಣದಿಂದಲೂ ಜ್ಞಾನಲೋಪವಿಲ್ಲ. ಏಕೆಂದರೆ : ಆತನು ಸದಾ ಅಸಂಕುಚಿತಜ್ಞಾನವುಳ್ಳವನು. ಸರ್ವವ್ಯಾಪಿಯು. ನಿತ್ಯನು. ಕರ್ಮಕ್ಕೆ ವಶನಾಗದವನು. ಆದ್ದರಿಂದ ಇಂತಹವನಿಗೆ ಮಾಯೆಯ ಯೋಗ ಹೇಗೆ ಬಂದಿತು?

ಪರಮಾತ್ಮನು ಸರ್ವವ್ಯಾಪಕ ಎನ್ನುವುದಾದರೆ–ಜೀವನಿಗೆ ಜಾಗ್ರತ್-ಸ್ವಪ್ನ-ಸುಷುಪ್ತಿ-ಮೂರ್ಛೆ-ಮರಣಾದಿಗಳಲ್ಲಿ ಆಯಾ ಸ್ಥಾನಪ್ರಯುಕ್ತವಾದ ದೋಷಗಳಿರು ವುದರಿಂದ ಅವುಗಳಲ್ಲಿ ಅಂತರ್ಯಾಮಿಯಾಗಿರುವ ಭಗವಂತನಿಗೆ ಆಯಾ ದೋಷಗಳು ಅಂಟಿಕೊಳ್ಳಲೇಬೇಕು. ಪರಮಾತ್ಮನು ಕರ್ಮವಶನಲ್ಲವಾದ್ದರಿಂದ ಆತನಿಗೆ ಈ ದೋಷಗಳಿಲ್ಲ–ಎನ್ನುವುದೂ ಸರಿಯಲ್ಲ. ಏಕೆಂದರೆ : ಯಾವುದೇ ಕಾರಣದಿಂದಲಾದರೂ ನಾನಾವಿಧವಾದ ಅಶುಚಿತ್ವವುಳ್ಳ ದೇಹದ ಸಂಬಂಧ ಹೊಂದುವುದೇ ಕೆಟ್ಟದ್ದು ; ಅದು

ಆತನಲ್ಲಿಯೇ ಸೇರಿಕೊಂಡಿವೆ. ಬ್ರಾಹ್ಮಣಾದಿ ವರ್ಣಗಳೂ ಆತನಿಂದಲೇ ಹುಟ್ಟಿದುವು–ಎಂಬುದನ್ನೂ ವರ್ಣಿಸಿದಿರಿ. ಈಗ ನನಗೆ ಆ ಪರಮಾತ್ಮನ ವಿಭೂತಿಗಳನ್ನು ತಿಳಿಸೋಣವಾಗಲಿ. ಈ ಇಡೀ ಬ್ರಹ್ಮಾಂಡವನ್ನು ತುಂಬಿ ಕೊಂಡಿರುವ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೇ ಮುಂತಾದ ಬಂಧು ಗಳೊಡನೆ ಕೂಡಿದ ಎಲ್ಲ ಪ್ರಜೆಗಳೂ ಆ ವಿಭೂತಿಯಿಂದಲೇ ಉಂಟಾದವ ರಲ್ಲವೇ! ಆ ವಿರಾಟ್‌ಪುರುಷನು ಬ್ರಹ್ಮಾದಿ ಪ್ರಜಾಪತಿಗಳಿಗೂ ಪ್ರಭು ವಾದವನು. ಆತನು ಯಾವ-ಯಾವ ಪ್ರಜಾಪತಿಗಳನ್ನು ಸೃಷ್ಟಿಸಿದನು? ಹಾಗೆಯೇ ಸೃಷ್ಟಿ, ಉಪಸೃಷ್ಟಿ ಮತ್ತು ಮನ್ವಂತರಾಧಿಪತಿಗಳನ್ನು ಸೃಷ್ಟಿ ಮಾಡಿದನು? ಎಂಬುದನ್ನು ತಿಳಿಸಿರಿ. ಮಹಾತ್ಮರೇ! ಹಾಗೆಯೇ ಆ ಮನುಗಳ ವಂಶಗಳನ್ನೂ ಆ ವಂಶಗಳಿಗೆ ಸೇರಿದ ರಾಜರ ಚರಿತ್ರೆಗಳನ್ನೂ ವರ್ಣಿಸಿರಿ. ಭೂಮಿಗೆ ಮೇಲೆ ಯಾವ` ಲೋಕಗಳಿವೆ? ಕೆಳಗೆ ಯಾವ

ಪುರುಷಾರ್ಥವಾಗುವುದಿಲ್ಲ. ರಕ್ತ-ಮಾಂಸಾದಿಗಳಲ್ಲಿ ಮನಃಪೂರ್ವಕವಾಗಿ ಮುಳುಗಿ ದರೂ ಅದು ಅನಿಷ್ಟವೇ ಅಲ್ಲವೇ? ಆದ್ದರಿಂದ ಬಗೆ-ಬಗೆಯ ದೋಷಗಳುಳ್ಳ ಕ್ಷೇತ್ರಜ್ಞ (ಶರೀರಸ್ಥಜೀವ) ರಲ್ಲಿ ಕರ್ಮವಶನಾಗಿಯೋ ಅಥವಾ ಸ್ವೇಚ್ಛೆಯಿಂದಲೋ ಹೇಗೆಯೇ ವಾಸಮಾಡಿದರೂ ಅದು ಅನಿಷ್ಟವೇ ಅಲ್ಲವೇ? ಎಂಬುದು ವಿದುರನ ಪ್ರಶ್ನೆಯ ಆಶಯ.

ಅದಕ್ಕೆ ಮೈತ್ರೇಯರು ಕೊಡುವ ಉತ್ತರದ ಅಭಿಪ್ರಾಯವು ಹೀಗಿದೆ : ಅಚಿದ್ವಸ್ತುಗಳೂ ಕೂಡ ಸ್ವಭೂವದಿಂದಲೇ ಅನಿಷ್ಟ, ಅಪುರುಷಾರ್ಥ ಎಂದು ಹೇಳಲಿಕ್ಕಾಗುವುದಿಲ್ಲ. ಕರ್ಮಸ್ವಭಾವಕ್ಕೆ ಅನುಗುಣವಾಗಿ ಭಗವಂತನ ಸಂಕಲ್ಪದಿಂದ ಒಂದೇ ವಸ್ತುವೇ ಬೇರೆ-ಬೇರೆ ಕಾಲದಲ್ಲಿ ಬೇರೆ-ಬೇರೆ ಪುರುಷರಿಗೆ ಸುಖಕರವೋ ಅಥವಾ ದುಃಖಕರವೋ ಆಗಬಹುದು. ವಸ್ತುಸ್ವರೂಪದಿಂದಲೇ ಅವು ಸುಖ-ದುಃಖಕರ ಎನ್ನುವುದಾದರೆ ಎಲ್ಲವೂ–ಯಾವಾಗಲೂ–ಎಲ್ಲರಿಗೂ ಸುಖಕರವೇ ಆಗಿರಬೇಕು. ಅಥವಾ ದುಃಖಕರವೇ ಆಗಿರಬೇಕು. ಆದರೆ ನಮಗೆ ಹಾಗೇನೂ ಕಂಡುಬರುವುದಿಲ್ಲ.

'ನರಕ-ಸ್ವರ್ಗಸಂಜ್ಞೇ ವೈ ಪಾಪ-ಪುಣ್ಯೇ ದ್ವಿಜೋತ್ತಮ । ವಸ್ತ್ವೇಕಮೇವ ದುಃಖಾಯ ಸುಖಾಯೇರ್ಷ್ಯಾಗಮಾಯ ಚ ॥ ಕೋಪಾಯ ಚ ಯತಸ್ತಸ್ಮಾತ್ ವಸ್ತುವಸ್ತ್ವಾತ್ಮಕಂ ಯತಃ । ತದೇವ ಪ್ರೀತಯೇ ಭೂತ್ವಾ ಪುನರ್ದುಃಖಾಯ ಜಾಯತೇ ॥ ತದೇವ ಕೋಪಾಯ ತತಃ ಪ್ರಸಾದಾಯ ಚ ಜಾಯತೇ । ತಸ್ಮಾ ದ್ದುಃಖಾತ್ಮಕಂ ನಾಸ್ತಿ ನ ಚ ಕಿಂಚಿತ್ಸುಖಾತ್ಮಕಮ್ ॥ '

ಅದರಂತೆ ಜೀವನು ಕರ್ಮವಶನಾಗಿರುವುದರಿಂದ ಆಯಾ ಕರ್ಮಗಳಿಗೆ ಅನುಗುಣ

ಲೋಕಗಳಿವೆ? ಭೂಲೋಕದ ವಿಸ್ತಾರವೇನು? ಸ್ಥಿತಿಯೇನು?–ಎಂಬು ದನ್ನೂ ವಿವರಿಸಿರಿ. ತಿರ್ಯಕ್ ಪ್ರಾಣಿಗಳು, ಮನುಷ್ಯರು, ದೇವತೆಗಳು, ತೆವಳುವ ಪ್ರಾಣಿಗಳು, ಪಕ್ಷಿಗಳು, ಗರ್ಭಕೋಶದಿಂದ ಜನಿಸುವ (ಜರಾ ಯುಜ) ಪ್ರಾಣಿಗಳು, ಬೆವರಿನಿಂದ ಹುಟ್ಟುವ (ಸ್ವೇದಜ) ಪ್ರಾಣಿಗಳು, ಮೊಟ್ಟೆಯಿಂದ ಹುಟ್ಟುವ (ಅಂಡಜ) ಪ್ರಾಣಿಗಳು ಮತ್ತು ಭೂಮಿಯನ್ನು ಒಡೆದುಕೊಂಡು ಬರುವ (ಉದ್ಭಿಜ್ಜ) ಪ್ರಾಣಿಗಳು–ಇವುಗಳ ಉತ್ಪತ್ತಿ ಕ್ರಮಗಳನ್ನು ತಿಳಿಸಿರಿ. ಸ್ವಾಮಿಯಾದ ಶ್ರೀನಿವಾಸನು ಸೃಷ್ಟಿಸಮಯದಲ್ಲಿ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಸಂಹಾರಗಳಿಗಾಗಿ ತನ್ನ ಗುಣಾವತಾರಗಳಾದ ಬ್ರಹ್ಮ, ವಿಷ್ಣು ಮತ್ತು ರುದ್ರರೂಪಗಳಲ್ಲಿಯೂ–ಇತರ ಅವತಾರಗಳ ರೂಪಗಳಲ್ಲಿಯೂ ಯಾವ ಮಂಗಳಕರವಾದ ಲೀಲೆಗಳನ್ನು ಮಾಡಿ ದನು?–ಎಂಬುದನ್ನು ವರ್ಣಿಸೋಣವಾಗಲಿ. ವೇಷ, ಆಚಾರ ಮತ್ತು ಸ್ವಭಾವಗಳಿಗೆ ಅನುಗುಣವಾಗಿ ಇರುವ ವರ್ಣಾಶ್ರಮವಿಭಾಗ, ಋಷಿಗಳ

ವಾಗಿ ಪ್ರಕೃತಿಯ ಆಯಾ ವಸ್ತುಸಂಬಂಧವು ಆತನಿಗೆ ಅನಿಷ್ಟ, ಅಪುರುಷಾರ್ಥ ಆಗ ಬಹುದು. ಪರಮಾತ್ಮನಿಗಾದರೋ ಆತನು ನಿಖಿಲದೋಷರಹಿತನೂ, ಸಮಸ್ತಕಲ್ಯಾಣ ಗುಣಪರಿಪೂರ್ಣನೂ, ಸರ್ವಶಕ್ತನೂ, ಸ್ವತಂತ್ರನೂ ಆಗಿರುವುದರಿಂದ ಆತನಿಗೆ ಜೀವ-ಪ್ರಕೃತಿಸಂಬಂಧವು ಅನಿಷ್ಟವೂ–ಅಪುರುಷಾರ್ಥವೂ ಆಗುವುದಿಲ್ಲ. ಆತನು ಅವುಗಳಿಗೆ ನಿಯಾಮಕನೇ ಆಗಿರುವುದರಿಂದ ಅದು ಅವನಿಗೇ ಲೀಲಾಮಾತ್ರವಾಗಿ ರಸವನ್ನೇ ಉಂಟುಮಾಡುತ್ತದೆ. ಆತನಿಗೆ ಕೃಪಣತ್ವವೂ ಬಂಧನವೂ ಏತಕ್ಕೆ ಇಲ್ಲ? ಎಂದರೆ : ಆತನ ಮಾಯೆಯಿಂದ ಅಂದರೆ ಪರಮಾದ್ಭುತವಾದ ಶಕ್ತಿಯಿಂದ ಆತನು ವ್ಯಾಪಕನು ಮತ್ತು ಆಶ್ಚರ್ಯಶಕ್ತಿಸಂಪನ್ನನು. ಆದ್ದರಿಂದಲೇ ವ್ಯಾಪ್ಯವಾಗಿರುವ ಬದ್ಧಜೀವ ನಲ್ಲಿರುವ ಯಾವುದೇ ದೋಷವೂ ಆತನಿಗೆ ಅಂಟದು. ಆತನ ಮಹಾಶಕ್ತಿಯೇ ಅಂತಹುದು. 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲ ಕ್ರಿಯಾ ಚ ।'

ಹಾಗೆಯೇ ಗುಣ-ಕ್ರಿಯೆಗಳೂ ಚೇತನಾಚೇತನದ್ವಾರದಿಂದಲೇ ಭಗವಂತನಿಗೆ ಒದ ಗುವುದರಿಂದ ವಾಸ್ತವವಾಗಿ ಆತನಿಗೆ ಅವುಗಳ ಸ್ಪರ್ಶವಿಲ್ಲ. ಶರೀರದಲ್ಲಿರುವ ಬಾಲ್ಯ-ಮುಪ್ಪು–ಇತ್ಯಾದಿಗಳು ಹೇಗೆ ಜೀವನಿಗೆ ಅಂಟುವುದಿಲ್ಲವೋ–ಹಾಗೆಯೇ ಜೀವಗಳಲ್ಲಿ ಅಂತರ್ಯಾಮಿಯಾಗಿರುವ ಭಗವಂತನಿಗೆ ಜೀವಗತವಾದ ದೋಷಗಳು ಅಂಟುವುದಿಲ್ಲ. ಜೀವನಿಗೆ ತನ್ನ ತಲೆಯು ಕತ್ತರಿಸಿಹೋಗುವಿಕೆಯೇ ಮುಂತಾದ ಅನುಭವ ಗಳೂ ಆತನಿಗೆ ಶರೀರಭೂತವಾದ ದೇವ-ಮನುಷ್ಯರೇ ಮುಂತಾದ ಶರೀರಗಳನ್ನು ತನ್ನ

ಜನ್ಮ-ಕರ್ಮಾದಿಗಳು, ವೇದಗಳ ವಿಭಾಗ, ಯಜ್ಞಗಳ ವಿಸ್ತಾರ, ಯೋಗದ ಮಾರ್ಗ, ಜ್ಞಾನಮಾರ್ಗ ಮತ್ತು ಅದಕ್ಕೆ ಸಾಧನವಾದ ಸಾಂಖ್ಯಮಾರ್ಗ ಮತ್ತು ಶ್ರೀಭಗವಂತನು ಉಪದೇಶಿಸಿದ ಶ್ರೀ ಪಂಚರಾತ್ರತಂತ್ರಗಳನ್ನೂ ಕುರಿತು ವಿವರಿಸಿರಿ. ವೇದಬಾಹ್ಯರಾದ ಪಾಷಂಡಮತಗಳ ಮಾರ್ಗಭೇದ ಗಳನ್ನೂ, ಅವುಗಳ ಪ್ರಚಾರದಿಂದ ಉಂಟಾಗುವ ವೈಷಮ್ಯವನ್ನೂ, ಪ್ರತಿ ಲೋಮವರ್ಣಗಳ* ಸೃಷ್ಟಿ-ಸ್ಥಿತಿಗಳನ್ನೂ ಮತ್ತು ಬೇರೆ-ಬೇರೆ ಗುಣ ಗಳಿಂದಲೂ–ಕರ್ಮಗಳಿಂದಲೂ ಜೀವರಿಗೆ ಉಂಟಾಗುವ ಬಗೆ-ಬಗೆಯ ಗತಿಗಳನ್ನೂ ನಿರೂಪಿಸಿರಿ. (ಶ್ಲೋಕ 20-31)

ಮಹಾತ್ಮರೇ! ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ, ಪರಸ್ಪರವಾಗಿ ವಿರೋಧಬರದಂತೆ ಸಾಧಿಸುವ ಮಾರ್ಗ

ಆತ್ಮವೆಂದು ಭ್ರಾಂತಿಯಿಂದ ತಿಳಿಯುವುದರಿಂದಲೇ ಉಂಟಾಗುತ್ತವೆ. ದೇವ-ಮನುಷ್ಯಾದಿ ಶರೀರಗಳ ತಲೆ ಕತ್ತರಿಸಿಹೋದರೆ ತನ್ನ ತಲೆಯೇ ಕತ್ತರಿಸಿಹೋಯಿತೆಂದು ದೇಹಾಭಿಮಾನದಿಂದ ಆತನು ತಿಳಿಯುತ್ತಾನೆ. ಅದಕ್ಕಾಗಿ ಶೋಕಿಸುತ್ತಾನೆ. ಇದೂ ಭಗವಂತನ ಮಾಯೆಯೇ. ಜಲದಲ್ಲಿರುವ ಚಂದ್ರನ ಪ್ರತಿಬಿಂಬಕ್ಕೆ ಚಲನಾದಿಗಳು ಸ್ವತಃ ಇಲ್ಲದಿದ್ದರೂ ಉಪಾಧಿಯಾದ ಜಲದ ಗುಣವು ಚಂದ್ರನ ಪ್ರತಿಬಿಂಬದಲ್ಲಿ ಇರುವಂತೆ ತೋರುತ್ತದೆ. ಹಾಗೆಯೇ ಕರ್ಮವಶನಾದ ಜೀವನಿಗೆ ಅವಿದ್ಯಾಸಂಬಂಧದಿಂದ ದೇಹಾತ್ಮಭ್ರಮೆಯೂ, ಆ ನಿಮಿತ್ತದಿಂದ ಶೋಕಾದಿಗಳೂ ಉಂಟಾಗುತ್ತವೆ. ವಾಸ್ತವವಾಗಿ ಆತನಿಗೆ ದೇಹಧರ್ಮಗಳಿಲ್ಲ. ಪರಮಾತ್ಮನಿಗಾದರೋ ಆತನು ಅವಿದ್ಯಾ ಗಂಧರಹಿತನಾಗಿ ಈ ಪ್ರಕೃತಿ-ಪುರುಷರಿಗೆ ನಿಯಾಮಕನಾಗಿರುವುದರಿಂದ ಅವಿದ್ಯೆ ಯಾಗಲೀ, ಅದರ ಕಾರ್ಯಗಳಾಗಲೀ ಅಂಟುವ ಪ್ರಸಂಗವೇ ಇಲ್ಲ. ಒಂದೇ ಪ್ರಕೃತಿಯೇ ತನಗೆ ವಶನಾಗಿರುವ ಒಬ್ಬನಿಗೆ ಅಶುಭವನ್ನುಂಟುಮಾಡುತ್ತದೆ. ತನ್ನ ನಿಯಾಮಕ ನಾಗಿರುವ ಮತ್ತೊಬ್ಬನಿಗೆ ಲೀಲೋಪಕರಣವಾಗಿದೆ. 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್' ಭಗವಂತನಿಗೆ ಜೀವಸಂಬಂಧಕೃತವಾದ ದೋಷಗಳುಂಟಾಗುವುದಿಲ್ಲ– ಎಂಬುದು ಮಾತ್ರವಲ್ಲ ; ಭಗವದ್ಭಕ್ತಿಯಿಂದುಂಟಾದ ಭಗವದನುಗ್ರಹದಿಂದ ಜೀವನ ಹೇಯಗುಣಗಳೂ ತೊಲಗಿಹೋಗುತ್ತವೆ. (ವೀರರಾಘವೀಯ)

(ಶ್ಲೋಕ ೨-೧೪)

---

* ಪ್ರತಿಲೋಮವರ್ಣ=ಸಂಕರವರ್ಣ. ಉತ್ತಮವರ್ಣದ ಸ್ತ್ರೀಯಲ್ಲಿ ನಿಮ್ನವರ್ಣದ ಪುರುಷನಿಂದ ಉಂಟಾಗುವುದು ಸಂಕರವರ್ಣ.

ಗಳನ್ನೂ, ವಾಣಿಜ್ಯ–ದಂಡನೀತಿ ಮತ್ತು ಶಾಸ್ತ್ರಶ್ರವಣವಿಧಿಗಳನ್ನೂ ಬೋಧಿಸಿರಿ. ಶ್ರಾದ್ಧವಿಧಾನವನ್ನೂ, ಪಿತೃದೇವತೆಗಳ ಸೃಷ್ಟಿಯನ್ನೂ, ಹಾಗೆಯೇ ಕಾಲಚಕ್ರದಲ್ಲಿ ಗ್ರಹ, ನಕ್ಷತ್ರ ಮತ್ತು ತಾರಾಗಣಗಳ ಸ್ಥಿತಿಗಳನ್ನೂ ಬೇರೆ-ಬೇರೆಯಾಗಿ ತಿಳಿಸಿರಿ. ದಾನ, ತಪಸ್ಸು, ಇಷ್ಟಾ-ಪೂರ್ತಕರ್ಮ ಗಳು–ಇವುಗಳ ಫಲಗಳೇನು? ಪ್ರವಾಸಕಾಲದಲ್ಲಿ ಮತ್ತು ಆಪತ್ಕಾಲದಲ್ಲಿ ಯಾವ ಧರ್ಮಗಳನ್ನು ಅನುಸರಿಸಬೇಕು?–ಎಂಬುದನ್ನೂ ವಿವರಿಸಿರಿ. ಮಹರ್ಷಿಗಳೇ! ಧರ್ಮಕ್ಕೆ ಮೂಲಕಾರಣನಾದ ಸ್ವಾಮೀ ಶ್ರೀಜನಾರ್ದನನು ಯಾವ ಮತ್ತು ಎಂತಹ ಆಚರಣೆಗಳಿಂದ ಸಂತುಷ್ಟನಾಗುತ್ತಾನೆ? ಯಾರ ಮೇಲೆ ಅನುಗ್ರಹವನ್ನು ತೋರಿಸುತ್ತಾನೆ?–ಎಂಬುದನ್ನೂ ವರ್ಣಿಸಿರಿ. ದ್ವಿಜಶ್ರೇಷ್ಠರೇ! ದೀನವತ್ಸಲರಾಗಿರುವ ಗುರುಗಳು–ತಮಗೆ ವಿಧೇಯ ರಾಗಿರುವ ಶಿಷ್ಯರಿಗೂ ಮತ್ತು ಪುತ್ರರಿಗೂ ಅವರು ಕೇಳದೆಯೇ ಹಿತೋಪ ದೇಶ ಮಾಡುತ್ತಾರೆ. ತಾವೂ ನನ್ನಲ್ಲಿ ಕೃಪೆಯಿಟ್ಟು ಹಾಗೆಯೇ ಹಿತೋಪದೇಶ ಮಾಡಬೇಕು. ಪೂಜ್ಯರೇ! ಮಹತ್ತೇ ಮುಂತಾದ ತತ್ತ್ವಗಳ ಪ್ರಳಯಗಳು ಎಷ್ಟು ಪ್ರಕಾರಗಳಾಗಿವೆ? ಶ್ರೀಭಗವಂತನು ಯೋಗನಿದ್ರೆಯಲ್ಲಿರುವಾಗ ಅವುಗಳಲ್ಲಿ ಯಾವ-ಯಾವ ತತ್ತ್ವಗಳು ಅವನ ಸೇವೆಮಾಡುತ್ತವೆ ಮತ್ತು ಯಾವ-ಯಾವ ತತ್ತ್ವಗಳು ಅವನಲ್ಲಿ ಲಯಹೊಂದಿರುತ್ತವೆ? ಜೀವದ ತತ್ತ್ವವೇನು? ಪರಮಪುರುಷನ ಸ್ವರೂಪವೇನು ಮತ್ತು ಉಪನಿಷತ್ತು ಗಳು ಪ್ರತಿಪಾದನೆಮಾಡುವ ಜ್ಞಾನದ ಸ್ವರೂಪವೇನು? ವಿದ್ವಾಂಸರು ಆ ಜ್ಞಾನದ ಪ್ರಾಪ್ತಿಗೆ ಯಾವ-ಯಾವ ಉಪಾಯಗಳನ್ನು ತಿಳಿಸಿದ್ದಾರೆ?– ಗುರು-ಶಿಷ್ಯರಲ್ಲಿ ಒಬ್ಬರಿಂದೊಬ್ಬರಿಗೆ ಉಂಟಾಗುವ ಪ್ರಯೋಜನವೇನು?– ಎಂಬುದನ್ನೂ ವರ್ಣಿಸಿರಿ. ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳು ತಮಗೆ ತಾವೇ ಉಂಟಾಗುವುದಿಲ್ಲವಷ್ಟೇ! ಬ್ರಾಹ್ಮಣಶ್ರೇಷ್ಠರೇ! ನನ್ನ ವಿಚಾರ ದೃಷ್ಟಿಯು ಮಾಯಾಮೋಹದಿಂದ ನಷ್ಟವಾಗಿಬಿಟ್ಟಿದೆ. ನಾನು ಅಜ್ಞನು. ತಾವೋ ನನ್ನ ಪರಮಮಿತ್ರರು ಮತ್ತು ಜ್ಞಾನಿಶ್ರೇಷ್ಠರು. ಆದ್ದರಿಂದ ಶ್ರೀಹರಿಲೀಲೆಯ ಜ್ಞಾನವನ್ನು ಪಡೆಯಲು ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ದಯಪಾಲಿಸಿರಿ.

ಎಲೈ ಮಹಾತ್ಮರೇ! ಪರಮಾತ್ಮತತ್ತ್ವವನ್ನು ಉಪದೇಶಮಾಡುವುದರ ಮೂಲಕ ಜೀವವನ್ನು ಹುಟ್ಟು-ಸಾವುಗಳ ಸಂಕೋಲೆಯಿಂದ ಬಿಡಿಸಿ ಅದಕ್ಕೆ ಅಭಯಪ್ರದಾನವನ್ನು ಮಾಡುವುದೇ ಪುಣ್ಯತಮವಾದ ಕಾರ್ಯವು. ಸಮಸ್ತವೇದಗಳನ್ನು ಅಧ್ಯಯನಮಾಡುವುದರಿಂದಲೂ, ಯಜ್ಞದಿಂದಲೂ, ತಪಸ್ಸಿನಿಂದಲೂ, ದಾನಾದಿಗಳಿಂದಲೂ ಯಾವ ಪುಣ್ಯವುಂಟಾಗುತ್ತದೆಯೋ–ಆ ಪುಣ್ಯವು ಜೀವಕ್ಕೆ ಅಭಯವನ್ನು ಕೊಡುವಿಕೆ–ಎಂಬ ಈ ಪುಣ್ಯದ ಹದಿನಾರನೆಯ ಒಂದು ಭಾಗಕ್ಕೂ ಸಾಟಿಯಾಗಲಾರದು."

ಸರ್ವೇ ವೇದಾಶ್ಚ ಯಜ್ಞಾಶ್ಚ ತಪೋ ದಾನಾನಿ ಚಾನಘ ।
ಜೀವಾಭಯಪ್ರದಾನಸ್ಯ ನ ಕುರ್ವೀರನ್ಕಲಾಮಪಿ ॥೪೧॥

ಶ್ರೀ ಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ಎಲೈ ರಾಜೇಂದ್ರನೇ! ಕುರುಶ್ರೇಷ್ಠನಾದ ವಿದುರನು ಹೀಗೆ ಪುರಾಣದ ಬಗೆಗೆ ಪ್ರಶ್ನೆಮಾಡಿದ್ದನ್ನು ಕೇಳಿ ಮುನಿಶ್ರೇಷ್ಠರಾದ ಮೈತ್ರೇಯನಿಗೆ ತುಂಬಾ ಸಂತೋಷವಾಯಿತು. ಶ್ರೀಭಗವಂತನ ಕಥೆಯನ್ನು ಹೇಳಲು ಪ್ರೇರಣೆ ಬಂದಿದ್ದರಿಂದ ಅತಿಸಂತೋಷಗೊಂಡ ಆ ಮಹಾತ್ಮರು ನಸುನಗುತ್ತಾ ಹೀಗೆ ಆತನಿಗೆ ಉತ್ತರಿಸಿದರು. (ಶ್ಲೋಕ 32-42)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೭ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೮ನೆಯ ಅಧ್ಯಾಯ

ಬ್ರಹ್ಮದೇವರ ಉತ್ಪತ್ತಿ

ಮೈತ್ರೇಯಮಹರ್ಷಿಗಳು ಮಹಾತ್ಮನಾದ ವಿದುರನಿಗೆ ಹೇಳುತ್ತಾರೆ :

ಸತ್ಸೇವನೀಯೋ ಬತ ಪೂರುವಂಶೋ
ಯಲ್ಲೋಕಪಾಲೋ ಭಗವತ್ಪ್ರಧಾನಃ ।
ಬಭೂವಿಥೇಹಾಜಿತಕೀರ್ತಿಮಾಲಾಂ
ಪದೇ ಪದೇ ನೂತನಯಸ್ಯಭೀಕ್ಷ್ಣಮ್ ॥೧॥

ಸೋಽಹಂ ನೃಣಾಂ ಕ್ಷುಲ್ಲಸುಖಾಯ ದುಃಖಂ
ಮಹದ್ಗತಾನಾಂ ವಿರಮಾಯ ತಸ್ಯ ।
ಪ್ರವರ್ತಯೇ ಭಾಗವತಂ ಪುರಾಣಂ
ಯದಾಹ ಸಾಕ್ಷಾದ್ಭಗವಾನೃಷಿಭ್ಯಃ ॥೨॥

"ಓ ಮಹಾತ್ಮನೇ! ಭಗವದ್ಭಕ್ತರಲ್ಲಿ ಪ್ರಧಾನನೂ, ಲೋಕಪಾಲಕನೂ ಆದ ಯಮಧರ್ಮರಾಜನೇ ನೀನು. ಪೂರುವಂಶವನ್ನು ನೀನು ನಿನ್ನ ಜನ್ಮದಿಂದ ಅಲಂಕರಿಸಿದ್ದರಿಂದ ಆ ವಂಶವು ಸಾಧು-ಸಂತರಿಗೂ ಸೇವ್ಯವಾಗಿಬಿಟ್ಟಿದೆ. ಎಂತಹ ಧನ್ಯನು ನೀನು! ಶ್ರೀಹರಿಯ ಕೀರ್ತಿಯ ಮಾಲೆಯನ್ನು ಪ್ರತಿಯೊಂದು ಪದದಲ್ಲಿಯೂ ನಿರಂತರವಾಗಿ ಹೊಸದಾಗಿಸುತ್ತಿದ್ದೀಯೆ. ಈಗ ನಾನು ಕ್ಷುದ್ರವಾದ ವಿಷಯಸುಖದ ಕಾಮನೆಯಿಂದ ಮಹಾದುಃಖವನ್ನು ಅನುಭವಿಸುತ್ತಿರುವ ಜನರ ದುಃಖವನ್ನು ತೊಲಗಿಸುವುದಕ್ಕಾಗಿ ಶ್ರೀಮದ್ಭಾಗವತ ಮಹಾಪುರಾಣವನ್ನು ಪ್ರಾರಂಭಿಸುತ್ತೇನೆ. ಸಂಕರ್ಷಣಭಗವಂತನು ಸನಕಾದಿಮಹರ್ಷಿಗಳಿಗೆ ತಾನೇ ನೇರವಾಗಿ ಉಪದೇಶಮಾಡಿದ ತತ್ತ್ವದ ಪುರಾಣವಿದು.

ಆಸೀನಮುರ್ವ್ಯಾಂ ಭಗವನ್ತಮಾದ್ಯಂ
ಸಙ್ಕರ್ಷಣಂ ದೇವಮಕುಣ್ಠಸತ್ತ್ವಮ್ ।
ವಿವಿತ್ಸವಸ್ತತ್ತ್ವಮತಃ ಪರಸ್ಯ
ಕುಮಾರಮುಖ್ಯಾ ಮುನಯೋಽನ್ವಪೃಚ್ಛನ್ ॥೩॥

ಸ್ವಮೇವ ಧಿಷ್ಣ್ಯಂ ಬಹು ಮಾನಯನ್ತಂ
ಯಂ ವಾಸುದೇವಾಭಿಧಮಾಮನನ್ತಿ ।
ಪ್ರತ್ಯಗ್ಧೃತಾಕ್ಷಾಮ್ಬುಜಕೋಶಮೀಷ-
ದುನ್ಮೀಲಯನ್ತಂ ವಿಬುಧೋದಯಾಯ ॥೪॥

ಅಕುಂಠಿತವಾದ ಜ್ಞಾನ-ಬಲಗಳಿಂದ ಸಂಪನ್ನನಾದ ದೇವದೇವನಾದ ಸಂಕರ್ಷಣಭಗವಂತನು ಪಾತಾಳದಲ್ಲಿ ಬಿಜಯಮಾಡಿಸಿದ್ದನು. ಆಗ ಸನತ್ಕುಮಾರನೇ ಮುಂತಾದ ಋಷಿಗಳು ಆತನನ್ನು ಪುರುಷೋತ್ತಮ ಪರಬ್ರಹ್ಮತತ್ತ್ವದ ಬಗೆಗೆ ಪ್ರಶ್ನೆಮಾಡಿದರು. ಸ್ವಾಮೀ ಸಂಕರ್ಷಣನು ಆಗ

ತನಗೆ ಆಶ್ರಯನಾಗಿರುವ ಮತ್ತು ವೇದಗಳಿಂದ ವಾಸುದೇವ ಎಂದು ನಿರೂಪಿಸಲ್ಪಡುತ್ತಿರುವ ಆ ಪರಮಾತ್ಮನನ್ನೇ ಮನಸ್ಸಿನಲ್ಲಿ ಆರಾಧಿಸುತ್ತಿ ದ್ದನು. ಧ್ಯಾನದಲ್ಲಿ ಮುಳುಗಿದ್ದ ಆತನ ಕಮಲಸದೃಶವಾದ ಕಣ್ಣುಗಳು ಮುಚ್ಚಿಕೊಂಡಿದ್ದುವು. ಋಷಿಗಳ ಪ್ರಶ್ನೆಯನ್ನು ಕೇಳಿ ಆತನು ಅವರನ್ನು ಅನುಗ್ರಹಿಸುವುದಕ್ಕಾಗಿ ಅರೆತೆರೆದ ಕಣ್ಣುಗಳಿಂದ ಅವರನ್ನು ನೋಡಿದನು.

ಸ್ವರ್ಧುನ್ಯುದಾರ್ದ್ರೈಃ ಸ್ವಜಟಾಕಲಾಪೈ-
ರುಪಸ್ಪೃಶಂತಶ್ಚರಣೋಪಧಾನಮ್ ।
ಪದ್ಮಂ ಯದರ್ಚಂತ್ಯಹಿರಾಜಕನ್ಯಾಃ
ಸಪ್ರೇಮ ನಾನಾಬಲಿಭಿರ್ವರಾರ್ಥಾಃ ॥೫॥

ಮಹರ್ಷಿಗಳು ಮಂದಾಕಿನಿಯ ಜಲದಿಂದ ಒದ್ದೆಯಾಗಿದ್ದ ತಮ್ಮ ಜಟೆಗಳಿಂದ ಆ ಆದಿಶೇಷಸ್ವಾಮಿಯ ಪಾದಪೀಠರೂಪವಾದ ಪದ್ಮವನ್ನು ಮುಟ್ಟಿ ನಮಸ್ಕರಿಸಿದರು. ನಾಗರಾಜಕುಮಾರಿಯರು ತಮ್ಮ ಅಭೀಷ್ಟವಾದ ವರಗಳನ್ನು ಪಡೆಯಲು ಪ್ರೇಮದಿಂದ ಬಗೆ-ಬಗೆಯ ಕಾಣಿಕೆಗಳನ್ನು ಸಮರ್ಪಿಸುತ್ತಾ ಪೂಜಿಸುತ್ತಿದ್ದ ಪವಿತ್ರವಾದ ಪದ್ಮಪೀಠವದು.

ಮುಹುರ್ಗೃಣಂತೋ ವಚಸಾನುರಾಗ-
ಸ್ಖಲತ್ಪದೇನಾಸ್ಯ ಕೃತಾನಿ ತಜ್ಞಾಃ ।
ಕಿರೀಟಸಾಹಸ್ರಮಣಿಪ್ರವೇಕ-
ಪ್ರದ್ಯೋತಿತೋದ್ದಾಮಫಣಾಸಹಸ್ರಮ್ ॥೬॥

ಆತನ ಕೃತಿಗಳ ಮರ್ಮವನ್ನು ಅರಿತಿದ್ದ ಶ್ರೇಷ್ಠಮಹರ್ಷಿಗಳು ಪ್ರೇಮದಿಂದ ಗದ್ಗದವಾದ ವಾಣಿಯಿಂದ ಆ ದಿವ್ಯಲೀಲೆಗಳನ್ನು ಮತ್ತೆ-ಮತ್ತೆ ಹಾಡಿಹೊಗಳುತ್ತಿದ್ದರು. ಹರಡಿಕೊಂಡು ಮೇಲಕ್ಕೆ ಎತ್ತಿದ ಸ್ವಾಮಿಯ ಸಾವಿರ ಹೆಡೆಗಳು, ಕಿರೀಟಗಳ ಸಾವಿರಾರು ರತ್ನಶ್ರೇಷ್ಠಗಳಿಂದ ಹೊರಹೊಮ್ಮುತ್ತಿದ್ದ ಕಿರಣಗಳಿಂದ ಥಳ-ಥಳಿಸುತ್ತಿದ್ದುವು.

ಪ್ರೋಕ್ತಂ ಕಿಲೈತದ್ಭಗವತ್ತಮೇನ
ನಿವೃತ್ತಿಧರ್ಮಾಭಿರತಾಯ ತೇನ ।

ಸನತ್ಕುಮಾರಾಯ ಸ ಚಾಹ ಪೃಷ್ಟಃ
ಸಾಂಖ್ಯಾಯನಾಯಾಙ್ಗ ಧೃತವ್ರತಾಯ ॥೭॥

ಸಂಕರ್ಷಣಭಗವಂತನು ನಿವೃತ್ತಿಧರ್ಮನಿಷ್ಠರಾದ ಸನತ್ಕುಮಾರ ಮಹರ್ಷಿಗಳಿಗೆ ಆಗ ಶ್ರೀಮದ್ಭಾಗವತವನ್ನು ಉಪದೇಶಮಾಡಿದನೆಂಬುದು ಪ್ರಸಿದ್ಧವಾಗಿದೆ. ಅನಂತರ ಆ ಮಹರ್ಷಿವರ್ಯರು ತಮ್ಮನ್ನು ಪ್ರಶ್ನೆಮಾಡಿದ ವ್ರತನಿಷ್ಠರಾದ ಸಾಂಖ್ಯಾಯನಮುನಿಗಳಿಗೆ ಅದನ್ನು ಉಪದೇಶಮಾಡಿದರು.

ಸಾಂಖ್ಯಾಯನಃ ಪಾರಮಹಂಸ್ಯಮುಖ್ಯೋ
ವಿವಕ್ಷಮಾಣೋ ಭಗವದ್ವಿಭೂತೀಃ ।
ಜಗಾದ ಸೋಽಸ್ಮದ್ಗುರವೇಽನ್ವಿತಾಯ
ಪರಾಶರಾಯಾಥ ಬೃಹಸ್ಪತೇಶ್ಚ ॥೮॥

ಪರಮಹಂಸರಲ್ಲಿ ಶ್ರೇಷ್ಠರಾದ ಶ್ರೀಸಾಂಖ್ಯಾಯನರಿಗೆ ಶ್ರೀಭಗವಂತನ ವಿಭೂತಿಗಳನ್ನು ವರ್ಣಿಸಬೇಕೆಂದು ಇಷ್ಟವುಂಟಾಗಲು–ಆ ಮಹಾತ್ಮರು ಅದನ್ನು ತಮ್ಮ ಆಪ್ತರೂ, ವಿಧೇಯರೂ, ಶಿಷ್ಯಶ್ರೇಷ್ಠರೂ ಆಗಿದ್ದ ನಮ್ಮ ಪರಮಗುರುಗಳಾದ ಪರಾಶರರಿಗೂ ಮತ್ತು ಬೃಹಸ್ಪತಿಗೂ ಉಪದೇಶಿಸಿದರು.

ಪ್ರೋವಾಚ ಮಹ್ಯಂ ಸ ದಯಾಲುರುಕ್ತೋ
ಮುನಿಃ ಪುಲಸ್ತ್ಯೇನ ಪುರಾಣಮಾದ್ಯಮ್ ।
ಸೋಽಹಂ ತವೈತತ್ಕಥಯಾಮಿ ವತ್ಸ
ಶ್ರದ್ಧಾಲವೇ ನಿತ್ಯಮನುವ್ರತಾಯ ॥೯॥

ಅದಾದನಂತರ ಪರಮದಯಾಳುಗಳಾದ ಪರಾಶರರು* ಪುಲಸ್ತ್ಯ ಮುನಿಗಳಿಂದ ಆಶೀರ್ವಾದಪಡೆದು ಆ ಆದಿಪುರಾಣವನ್ನು ನನಗೆ ಉಪದೇಶ ಮಾಡಿದರು. ವತ್ಸನೇ! ನೀನು ಶ್ರದ್ಧಾಳುವೂ, ನಿಷ್ಠೆಯಿಂದ ಅನುಸರಿಸು

---

* ಪುಲಸ್ತ್ಯಮುನಿಗಳಿಂದ ಪರಾಶರರು 'ನೀನು ಪುರಾಣಾಚಾರ್ಯನಾಗು'–ಎಂದು ವರವನ್ನು ಪಡೆದರು. ಸರ್ವರಾಕ್ಷಸಸಂಹಾರಯಜ್ಞವನ್ನು ಪುಲಸ್ತ್ಯಮಹರ್ಷಿಗಳ ಆದೇಶದಂತೆ ಪರಾಶರರು ಮಾಡದೇ ನಿಲ್ಲಿಸಿದರು. ಅದರಿಂದ ಸಂತುಷ್ಟರಾದ ಪುಲಸ್ತ್ಯರು ಅವರಿಗೆ ಈ ಆಶೀರ್ವಾದನೀಡಿದರು–ಎಂದು ವಿಷ್ಣುಪುರಾಣದಲ್ಲಿ ಹೇಳಿದೆ. (ಶ್ಲೋಕ ೯)

ತ್ತಿರುವ ಭಕ್ತನೂ ಆಗಿರುವುದರಿಂದ ನಿನಗೆ ಅದೇ ಪುರಾಣವನ್ನು ಉಪ ದೇಶಿಸುತ್ತೇನೆ.

ಉದಾಪ್ಲುತಂ ವಿಶ್ವಮಿದಂ ತದಾಸೀ-
ದ್ಯನ್ನಿದ್ರಯಾಮೀಲಿತದೃಙ್ನ್ಯಮೀಲಯತ್ ।
ಅಹೀನ್ದ್ರತಲ್ಪೇऽಧಿಶಯಾನ ಏಕಃ
ಕೃತಕ್ಷಣಃ ಸ್ವಾತ್ಮರತೌ ನಿರೀಹಃ ॥೧೦॥

ಸೋऽನ್ತಃಶರೀರೇऽರ್ಪಿತಭೂತಸೂಕ್ಷ್ಮಃ
ಕಾಲಾತ್ಮಿಕಾಂ ಶಕ್ತಿಮುದೀರಯಾಣಃ ।
ಉವಾಸ ತಸ್ಮಿನ್ಸಲಿಲೇ ಪದೇ ಸ್ವೇ
ಯಥಾನಲೋ ದಾರುಣಿ ರುದ್ಧವೀರ್ಯಃ ॥೧೧॥

ಸೃಷ್ಟಿಗೆ ಹಿಂದೆ ಈ ಜಗತ್ತೆಲ್ಲವೂ ನೀರಿನಲ್ಲಿ ಮುಳುಗಿಹೋಗಿತ್ತು. ಆಗ ಶ್ರೀನಾರಾಯಣನೊಬ್ಬನೇ ಶೇಷತಲ್ಪದಲ್ಲಿ ಯೋಗನಿದ್ರಾಸಕ್ತನಾಗಿ ಪವಡಿಸಿದ್ದನು. ಯೋಗನಿದ್ರೆಯಲ್ಲಿ ಕಣ್ಣುಮುಚ್ಚಿಕೊಂಡಿದ್ದರೂ ಆತನ ಜ್ಞಾನಶಕ್ತಿಯು ಮಾತ್ರ ಸಂಪೂರ್ಣವಾಗಿ ಎಚ್ಚರವಾಗಿಯೇ ಇತ್ತು. ಆತನು ಆತ್ಮಾನಂದದಲ್ಲಿಯೇ ಮಗ್ನನಾಗಿದ್ದನು. ಯಾವ ಸಂಕಲ್ಪವೂ–ಕ್ರಿಯೆಯೂ ಇಲ್ಲದೇ ಸ್ವಾಮಿಯು ತಾನೇ ತಾನಾಗಿ ಜಲದಲ್ಲಿ ಪವಡಿಸಿದ್ದನು. ಆಗ ಕಟ್ಟಿಗೆಯಲ್ಲಿ ಅಡಗಿರುವ ಬೆಂಕಿಯಂತೆ–ಸಕಲಭೂತಗಳೂ ಆತನ ದೇಹದಲ್ಲಿ ಸೂಕ್ಷ್ಮರೂಪದಲ್ಲಿ ಅಡಗಿಕೊಂಡಿದ್ದುವು. ಎಲ್ಲ ಶಕ್ತಿಗಳನ್ನೂ ಲಯಗೊಳಿಸಿಕೊಂಡಿದ್ದರೂ ಸೃಷ್ಟಿಕಾಲಬಂದಾಗ ತನ್ನನ್ನು ಎಚ್ಚರಗೊಳಿಸುವುದಕ್ಕೋಸ್ಕರ ಕಾಲಶಕ್ತಿಯೊಂದನ್ನು ಮಾತ್ರ ಆತನು ಎಚ್ಚರವಾಗಿ ಇರಿಸಿಕೊಂಡಿದ್ದನು.

ಚತುರ್ಯುಗಾನಾಂ ಚ ಸಹಸ್ರಮಪ್ಸು
ಸ್ವಪನ್ಸ್ವಯೋದೀರಿತಯಾ ಸ್ವಶಕ್ತ್ಯಾ ।
ಕಾಲಾಖ್ಯಯಾಸಾದಿತಕರ್ಮತನ್ತ್ರೋ
ಲೋಕಾನಪೀತಾನ್ದದೃಶೇ ಸ್ವದೇಹೇ ॥೧೨॥

ಹೀಗೆ ಸ್ವಾಮಿಯು ತನ್ನ ಸ್ವರೂಪವಾದ ಶಕ್ತಿಯೊಡನೆ ಒಂದು

ಸಾವಿರ ಚತುರ್ಯುಗಗಳವರೆಗೆ ನೀರಿನಲ್ಲಿ ಪವಡಿಸಿದಾಗ ಆತನಿಂದಲೇ ನೇಮಿಸಲ್ಪಟ್ಟಿದ್ದ ಕಾಲಶಕ್ತಿಯು ಆತನನ್ನು ಸೃಷ್ಟಿಕರ್ಮದಲ್ಲಿ ತೊಡಗಲು ಪ್ರೇರಿಸಿತು. ಆಗ ಆತನು ತನ್ನ ಶರೀರದಲ್ಲಿ ಲೀನವಾಗಿದ್ದ ಅನಂತಲೋಕ ಗಳನ್ನೂ ನೋಡಿದನು.

ತಸ್ಯಾರ್ಥಸೂಕ್ಷ್ಮಾಭಿನಿವಿಷ್ಟದೃಷ್ಟೇ-
ರನ್ತರ್ಗತೋಽರ್ಥೋ ರಜಸಾ ತನೀಯಾನ್ ।
ಗುಣೇನ ಕಾಲಾನುಗತೇನ ವಿದ್ಧಃ
ಸೂಷ್ಯಂಸ್ತದಾಭಿದ್ಯತ ನಾಭಿದೇಶಾತ್ ॥೧೩॥

ಸೂಕ್ಷ್ಮರೂಪದಲ್ಲಿರುವ ಲಿಂಗಶರೀರಾದಿಗಳಲ್ಲಿ ಆತನ ದೃಷ್ಟಿಯು ಬೀಳಲು ಆಗ ಆತನ ಮನೋಗತವಾದ ಅರ್ಥವು ಕಾಲಶಕ್ತಿಯನ್ನು ಆಶ್ರಯಿಸಿದ ರಜೋಗುಣದಿಂದ ಪ್ರೇರಣೆಗೊಂಡು ಆತನ ಹೊಕ್ಕುಳಿನ ಜಾಗ ದಿಂದ ಹೊರಗೆ ಉದ್ಭವಿಸಿತು.

ಸ ಪದ್ಮಕೋಶಃ ಸಹಸೋದತಿಷ್ಠ-
ತ್ಕಾಲೇನ ಕರ್ಮಪ್ರತಿಬೋಧನೇನ ।
ಸ್ವರೋಚಿಷಾ ತತ್ಸಲಿಲಂ ವಿಶಾಲಂ
ವಿದ್ಯೋತಯನ್ನರ್ಕ ಇವಾತ್ಮಯೋನಿಃ ॥೧೪॥

ಕರ್ಮಶಕ್ತಿಯನ್ನು ಎಚ್ಚರಗೊಳಿಸುವ ಕಾಲದ ಮೂಲಕ ಮಹಾ ವಿಷ್ಣುವಿನ ನಾಭಿಯಿಂದ ಪ್ರಕಟಗೊಂಡ ಆ ಸೂಕ್ಷ್ಮತತ್ತ್ವವು ಕಮಲದ ಮೊಗ್ಗಿನ ರೂಪದಲ್ಲಿ ಒಡನೆಯೇ ಮೇಲಕ್ಕೆ ಎದ್ದು ಸೂರ್ಯಸದೃಶವಾದ ತನ್ನ ತೇಜಸ್ಸಿನಿಂದ ಆ ಅಪಾರವಾದ ಜಲರಾಶಿಯನ್ನು ತೊಳ-ತೊಳಗಿ ಬೆಳಗಿಸಿತು.

ತಲ್ಲೋಕಪದ್ಮಂ ಸ ಉ ಏವ ವಿಷ್ಣುಃ
ಪ್ರಾವೀವಿಶತ್ಸರ್ವಗುಣಾವಭಾಸಮ್ ।
ತಸ್ಮಿನ್ಸ್ವಯಂ ವೇದಮಯೋ ವಿಧಾತಾ
ಸ್ವಯಮ್ಭುವಂ ಯಂ ಸ್ಮ ವದನ್ತಿ ಸೋಽಭೂತ್ ॥೧೫॥

ತಸ್ಯಾಂ ಸ ಚಾಮ್ಭೋರುಹಕರ್ಣಿಕಾಯಾ-
ಮವಸ್ಥಿತೋ ಲೋಕಮಪಶ್ಯಮಾನಃ ।
ಪರಿಕ್ರಮನ್ ವ್ಯೋಮ್ನಿ ನಿವೃತ್ತನೇತ್ರ-
ಶ್ಚತ್ವಾರಿ ಲೇಭೇಽನುದಿಶಂ ಮುಖಾನಿ ॥೧೬॥

ಸಮಸ್ತಗುಣಗಳಿಗೂ ಪ್ರಕಾಶಕವಾದ ಆ ಸರ್ವಜಗದ್ರೂಪವಾದ ಕಮಲವನ್ನು ಭಗವಂತನು ಅಂತರ್ಯಾಮಿರೂಪದಲ್ಲಿ ಪ್ರವೇಶಮಾಡಿದನು. ಆಗ ಸರ್ವವೇದಮಯರಾಗಿ ಸೃಷ್ಟಿಕರ್ತರಾಗಿ 'ಸ್ವಯಂಭೂ' ಎಂದು ಜ್ಞಾನಿಗಳಿಂದ ಕರೆಯಲ್ಪಡುವ ಬ್ರಹ್ಮದೇವರು ಅದರಿಂದ ಹುಟ್ಟಿಕೊಂಡರು.* ಆ ಕಮಲದ ಕರ್ಣಿಕೆಯ ಮಧ್ಯದಲ್ಲಿ ಕುಳಿತಿದ್ದ ಬ್ರಹ್ಮದೇವರಿಗೆ ಆಗ ಯಾವ ಲೋಕವೂ ಕಾಣದಿರಲು ಅವರು ಆಕಾಶದಲ್ಲಿ ದೃಷ್ಟಿಯನ್ನಿಟ್ಟು ಕಣ್ಣುಗಳನ್ನು ನಾಲ್ಕು ಕಡೆಗಳಿಗೂ ಹೊರಳಿಸಿದರು. ಆಗ ಅವರಿಗೆ ನಾಲ್ಕು ಮುಖಗಳು ಹುಟ್ಟಿಕೊಂಡುವು.

ತಸ್ಮಾದ್ಯುಗಾನ್ತಶ್ವಸನಾವಘೂರ್ಣ-
ಜಲೋರ್ಮಿಚಕ್ರಾತ್ಸಲಿಲಾದ್ವಿರೂಢಮ್ ।
ಉಪಾಶ್ರಿತಃ ಕಞ್ಜಮು ಲೋಕತತ್ತ್ವಂ
ನಾತ್ಮಾನಮದ್ಧಾವಿದದಾದಿದೇವಃ ॥೧೭॥

ಆಗ ಪ್ರಳಯಕಾಲದ ಪ್ರಚಂಡವಾಯುವಿನ ಹೊಡೆತಗಳಿಂದ ಚಿಮ್ಮುತ್ತಿದ್ದ ಜಲರಾಶಿಯಿಂದ ಉದ್ಭವಿಸಿದ ಕಮಲದ ಮೇಲೆ ಅಲಂಕೃತರಾಗಿದ್ದ ಆ ಆದಿಬ್ರಹ್ಮದೇವರಿಗೆ ತಾನು ಯಾರು?-ಎಂಬ ಯಾವ ರಹಸ್ಯವೂ ಅರಿವಿಗೆ ಬರಲಿಲ್ಲ.

ಕ ಏಷ ಯೋಽಸಾವಹಮಬ್ಜಪೃಷ್ಠ
ಏತತ್ಕುತೋ ವಾಬ್ಜಮನನ್ಯದಪ್ಸು ।

---

* "ಪದ್ಮಸಂಸ್ಥಾದ್ಧರೇಸ್ತತ್ರ ಬ್ರಹ್ಮಾಽಜನಿ ಚತುರ್ಮುಖ ।
ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ।
ಹಿರಣ್ಯಗರ್ಭಸ್ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ ॥"
(ಶ್ಲೋಕ ೧೫)

ಅಸ್ತಿ ಹ್ಯಧಸ್ತಾದಿಹ ಕಿಞ್ಚನೈತ-
ದಧಿಷ್ಠಿತಂ ಯತ್ರ ಸತಾ ನು ಭಾವ್ಯಮ್ * ॥೧೮॥

ಈ ಕಮಲದ ಕರ್ಣಿಕೆಯಲ್ಲಿ ಕುಳಿತಿರುವ ನಾನು ಯಾರು? ಈ ಪದ್ಮವು ನೀರಿನಲ್ಲಿ ಹುಟ್ಟಲು ಕಾರಣವೇನು? ಹಾಗಾದರೆ ಇದರ ಕೆಳಗಡೆ ಇದಕ್ಕೆ ಆಧಾರವಾಗಿರುವ ಯಾವುದೋ ಒಂದು ವಸ್ತು ಇರಲೇ ಬೇಕಲ್ಲವೇ?–ಎಂದು ಅವರು ಆಲೋಚನೆಮಾಡಿದರು.

ಸ ಇತ್ಥಮುದ್ವೀಕ್ಷ್ಯ ತದಬ್ಜನಾಲ-
ನಾಡೀಭಿರನ್ತರ್ಜಲಮಾವಿವೇಶ ।
ನಾರ್ವಾಗ್ಗತಸ್ತತ್ಖರನಾಲನಾಲ-
ನಾಭಿಂ ವಿಚಿನ್ವಂಸ್ತದವಿನ್ದತಾಜಃ ॥೧೯॥

ಹಾಗೆ ಆಲೋಚಿಸಿದ ಅವರು ಆ ಕಮಲನಾಳದ ರಂಧ್ರಗಳ ಒಳಗಿನಿಂದ ನೀರಿನ ಒಳಹೊಕ್ಕು ಅದರ ತಳವನ್ನು ಹುಡುಕಿದನು. ಹಾಗೆ ಹುಡುಕುತ್ತಾ ಆ ನಾಳದ ನಾಭಿಪ್ರದೇಶದ ಬಳಿಗೆ ಬಂದರೂ ಅವರಿಗೆ ಅದರ ಆಧಾರವು ಪತ್ತೆಯಾಗಲಿಲ್ಲ.

ತಮಸ್ಯಪಾರೇ ವಿದುರಾತ್ಮಸರ್ಗಂ
ವಿಚಿನ್ವತೋಽಭೂತ್ಸುಮಹಾಂಸ್ತ್ರಿಣೇಮಿಃ ।
ಯೋ ದೇಹಭಾಜಾಂ ಭಯಮೀರಯಾಣಃ
ಪರಿಕ್ಷಿಣೋತ್ಯಾಯುರಜಸ್ಯ ಹೇತಿಃ ॥೨೦॥

ಓ ವಿದುರ! ಹೀಗೆ ಅಪಾರವಾದ ಕಗ್ಗತ್ತಲೆಯಲ್ಲಿ ತನ್ನ ಉತ್ಪತ್ತಿಸ್ಥಾನವನ್ನು ಹುಡುಕುತ್ತಿರಲು ಬ್ರಹ್ಮದೇವರಿಗೆ ಬಹಳ ಕಾಲವು ಕಳೆದು ಹೋಯಿತು. ಆ ಕಾಲವೇ ಪ್ರಾಣಿಗಳಿಗೆ ಭಯವನ್ನುಂಟುಮಾಡುತ್ತಾ ಅವರ ಆಯುಸ್ಸನ್ನು ಕ್ಷೀಣಗೊಳಿಸುತ್ತಿರುವ ಶ್ರೀಭಗವಂತನ ಸುದರ್ಶನಚಕ್ರವೆಂದು ತಿಳಿ.

---

* "ಸೋಽಪಶ್ಯತ್ಪುಷ್ಕರಪರ್ಣೇ ತಿಷ್ಠನ್ ಸೋಽಮನ್ಯತ ಅಸ್ತಿ ವೈ ಯದ್ಯಸ್ಮಿನ್ ಇದಮಧಿತಿಷ್ಠತಿ ॥"
(ಶ್ಲೋಕ ೧೮)

ತತೋ ನಿವೃತ್ತೋಽಪ್ರತಿಲಬ್ಧಕಾಮಃ
ಸ್ವಧಿಷ್ಣ್ಯಮಾಸಾದ್ಯ ಪುನಃ ಸ ದೇವಃ ।
ಶನೈರ್ಜಿತಶ್ವಾಸನಿವೃತ್ತಚಿತ್ತೋ
ನ್ಯಷೀದದಾರೂಢಸಮಾಧಿಯೋಗಃ ॥೨೧॥

ಹೀಗೆ ಎಷ್ಟು ಹುಡುಕಿದರೂ ತನ್ನ ನೆಲೆಯು ಸಿಕ್ಕದಿರಲು ಬ್ರಹ್ಮ ದೇವರು ವಿಫಲಮನೋರಥರಾಗಿ ಅಲ್ಲಿಂದ ಹಿಂದಿರುಗಿ ತಮಗೆ ಆಧಾರ ವಾಗಿದ್ದ ಕಮಲದ ಮೇಲೆ ಕುಳಿತು ನಿಧಾನವಾಗಿ ಪ್ರಾಣವಾಯುವನ್ನು ಜಯಿಸಿ ಚಿತ್ತದ ಸಂಕಲ್ಪ-ವಿಕಲ್ಪಗಳನ್ನೂ ತೊರೆದು ಸಮಾಧಿಸ್ಥರಾದರು.

ಕಾಲೇನ ಸೋಽಜಃ ಪುರುಷಾಯುಷಾಭಿ-
ಪ್ರವೃತ್ತಯೋಗೇನ ವಿರೂಢಬೋಧಃ ।
ಸ್ವಯಂ ತದನ್ತರ್ಹೃದಯೇಽವಭಾತ-
ಮಪಶ್ಯತಾಪಶ್ಯತ ಯನ್ನ ಪೂರ್ವಮ್ ॥೨೨॥

ಹೀಗೆ ಬ್ರಹ್ಮದೇವರಿಗೆ ಪುರುಷನ ಪೂರ್ಣಾಯುಷ್ಯವಾದ ದಿವ್ಯವಾದ ನೂರು ವರ್ಷಗಳ ಕಾಲದವರೆಗೆ ಯೋಗಾಭ್ಯಾಸಮಾಡಿದ್ದರಿಂದ ದಿವ್ಯ ಜ್ಞಾನೋದಯವಾಗಲು ಆ ಹಿಂದೆ ಎಷ್ಟು ಹುಡುಕಿದರೂ ಯಾವುದು ಕಾಣಲಿಲ್ಲವೋ–ಆ ಸ್ಥಾನವು ತಮ್ಮ ಅಂತಃಕರಣದಲ್ಲೇ ಬೆಳಗುತ್ತಿರುವುದನ್ನು ಅವರು ಕಂಡುಕೊಂಡರು.

ಮೃಣಾಲಗೌರಾಯತಶೇಷಭೋಗ-
ಪರ್ಯಙ್ಕ ಏಕಂ ಪುರುಷಂ ಶಯಾನಮ್ ।
ಫಣಾತಪತ್ರಾಯುತಮೂರ್ಧರತ್ನ-
ದ್ಯುಭಿರ್ಹತಧ್ವಾನ್ತಯುಗಾನ್ತತೋಯೇ ॥೨೩॥

ಎಂತಹ ದಿವ್ಯದರ್ಶನ! ಆ ಪ್ರಳಯಕಾಲದ ಜಲದಲ್ಲಿ ಕಮಲನಾಳ ದಂತೆ ಬೆಳ್ಳಗೆ ಹೊಳೆಯುತ್ತಿದ್ದ ವಿಶಾಲವಾದ ಆದಿಶೇಷನ ದಿವ್ಯದೇಹವೆಂಬ ಹಾಸಿಗೆಯ ಮೇಲೆ ಪುರುಷೋತ್ತಮನು ಒಬ್ಬಂಟಿಗನಾಗಿ ಪವಡಿಸಿದ್ದಾನೆ. ಆದಿಶೇಷನ ಹತ್ತು ಸಾವಿರ ಹೆಡೆಗಳು ಕೊಡೆಗಳಂತೆ ಮೇಲಕ್ಕೆ ಬಿಚ್ಚಿಕೊಂಡು ಹರಡಿಕೊಂಡಿವೆ. ಆತನ ಹೆಡೆಗಳ ಮೇಲಿನ ಕಿರೀಟಗಳು ಕಂಗೊಳಿಸುತ್ತಿದ್ದು

ಅಲ್ಲಿ ಕೆತ್ತಿದ್ದ ಮಣಿಗಳ ಕಾಂತಿಯಿಂದ ನಾಲ್ಕು ದಿಕ್ಕುಗಳ ಕತ್ತಲೆಯೂ ತೊಲಗಿಹೋಗಿದೆ.

ಪ್ರೇಕ್ಷಾಂ ಕ್ಷಿಪನ್ತಂ ಹರಿತೋಪಲಾದ್ರೇಃ
ಸನ್ಧ್ಯಾಭ್ರನೀವೇರುರುರುಕ್ಮಮೂರ್ಧ್ನಃ ।
ರತ್ನೋದಧಾರೌಷಧಿಸೌಮನಸ್ಯ-
ವನಸ್ರಜೋ ವೇಣಭುಜಾಙ್ಘ್ರಿಪಾಙ್ಘ್ರೇಃ ॥೨೪॥

ಶ್ರೀಭಗವಂತನು ತನ್ನ ಶರೀರದ ಶ್ಯಾಮಲವಾದ ಕಾಂತಿಯಿಂದ ನೀಲಮರಕತಮಣಿಪರ್ವತದ ಕಾಂತಿಯನ್ನೂ ನಾಚಿಸುತ್ತಿದ್ದಾನೆ. ಆತನ ನಡುವಿನ ಪೀತಾಂಬರವು ಪರ್ವತದ ತಪ್ಪಲಿನಲ್ಲಿ ಹರಡಿರುವ ಹೊಂಬಣ್ಣದ ಸಂಜೆಮೋಡದ ಕಾಂತಿಯನ್ನು ಸೋಲಿಸುತ್ತಿದೆ. ಆತನ ತಲೆಯ ಮೇಲೆ ಜಗ-ಜಗಿಸುತ್ತಿರುವ ಸ್ವರ್ಣಕಿರೀಟವು ಸ್ವರ್ಣಪರ್ವತದ ಶಿಖರಗಳ ಗರ್ವ ವನ್ನೂ ಭಂಜಿಸುತ್ತಿದೆ. ಆತನು ಧರಿಸಿರುವ ವನಮಾಲೆಯು ಪರ್ವತದ ರತ್ನಗಳೇನು, ಜಲಪಾತಗಳೇನು, ಓಷಧಿಗಳೇನು, ಪುಷ್ಪಗಳೇನು–ಇವೆಲ್ಲದರ ಶೋಭೆಯನ್ನೂ ಪರಾಜಯಗೊಳಿಸುತ್ತಿದೆ. ಆತನ ಭುಜದಂಡವು ಪರ್ವತ ದಲ್ಲಿ ಬೆಳೆದಿರುವ ವೇಣುದಂಡಗಳನ್ನೂ, ಚರಣಗಳು ಅಲ್ಲಿ ಕಂಗೊಳಿಸು ತ್ತಿರುವ ಇತರ ವೃಕ್ಷಗಳನ್ನೂ ತಿರಸ್ಕರಿಸುತ್ತಿವೆ.

ಆಯಾಮತೋ ವಿಸ್ತರತಃ ಸ್ವಮಾನ-
ದೇಹೇನ ಲೋಕತ್ರಯಸಂಗ್ರಹೇಣ ।
ವಿಚಿತ್ರದಿವ್ಯಾಭರಣಾಂಶುಕಾನಾಂ
ಕೃತಶ್ರಿಯಾಪಾಶ್ರಿತವೇಷದೇಹಮ್ ॥೨೫॥

ಆತನ ದಿವ್ಯಮಂಗಳವಿಗ್ರಹವು ಮೂರು ಲೋಕಗಳನ್ನೂ ಒಳ ಗೊಳ್ಳುವ ಉದ್ದಗಲಗಳಿಂದ ಕೂಡಿ ತನ್ನ ಕಾಂತಿಯಿಂದ ಬಗೆ-ಬಗೆಯ ದಿವ್ಯವಸ್ತ್ರಾಭರಣಗಳಿಗೆ ಕಾಂತಿಯನ್ನು ತುಂಬುತ್ತಿದ್ದರೂ ದಿವ್ಯವಸ್ತ್ರಾ ಭರಣಗಳನ್ನು ಧರಿಸಿಕೊಂಡಿದೆ.

ಪುಂಸಾಂ ಸ್ವಕಾಮಾಯ ವಿವಿಕ್ತಮಾರ್ಗೈ-
ರಭ್ಯರ್ಚತಾಂ ಕಾಮದುಘಾಙ್ಘ್ರಿಪದ್ಮಮ್ ।

ಪ್ರದರ್ಶಯನ್ತಂ ಕೃಪಯಾ ನಖೇನ್ದು-
ಮಯೂಖಭಿನ್ನಾಙ್ಗುಲಿಚಾರುಪತ್ರಮ್ ॥೨೬॥

ಮುಖೇನ ಲೋಕಾರ್ತಿಹರಸ್ಮಿತೇನ
ಪರಿಸ್ಫುರತ್ಕುಣ್ಡಲಮಣ್ಡಿತೇನ ।
ಶೋಣಾಯಿತೇನಾಧರಬಿಮ್ಬಭಾಸಾ
ಪ್ರತ್ಯರ್ಹಯನ್ತಂ ಸುನಸೇನ ಸುಭ್ರ್ವಾ ॥೨೭॥

ಶ್ರೀಭಗವಂತನು ತಮ್ಮ ಇಷ್ಟಾರ್ಥಗಳ ಸಿದ್ಧಿಗಾಗಿ ನಾನಾಮಾರ್ಗ ಗಳಿಂದ ಆರಾಧಿಸುತ್ತಿರುವ ಭಕ್ತಜನರಿಗೆ ಪರಮಕರುಣೆಯಿಂದ ಅವರ ಎಲ್ಲ ಇಷ್ಟಗಳಿಗೂ ಕಲ್ಪವೃಕ್ಷದಂತಿರುವ ತನ್ನ ಪಾದಾರವಿಂದಗಳ ದರ್ಶನವನ್ನು ದಯಪಾಲಿಸುತ್ತಿದ್ದಾನೆ. ಆ ದಿವ್ಯಪಾದಪದ್ಮಗಳ ಎಸಳುಗಳು–ಕಾಲುಗುರು ಗಳೆಂಬ ತಿಂಗಳು ಬೆಳಕಿನ ಕಾಂತಿಯಿಂದ–ಬಿಡಿ-ಬಿಡಿಯಾಗಿ ಕಂಗೊಳಿ ಸುತ್ತಿವೆ. ಸ್ವಾಮಿಯು–ಸುಂದರವಾದ ಮೂಗು, ಚೆಲುವಾದ ಹುಬ್ಬುಗಳು, ಕಿವಿಗಳಲ್ಲಿ ಹೊಳೆಯುತ್ತಿರುವ ಕುಂಡಲಗಳ ಕಾಂತಿ, ತೊಂಡೆಯ ಹಣ್ಣಿನಂತೆ ಕೆಂಪಾದ ಕೆಳದುಟಿಗಳ ಸೊಬಗು ಮತ್ತು ಸಕಲಲೋಕಗಳ ಪೀಡೆಗಳನ್ನೂ ಪರಿಹರಿಸುವ ಮಂದಹಾಸದಿಂದ ಶೋಭಿಸುತ್ತಿರುವ ಮುಖಾರವಿಂದದಿಂದ ಉಪಾಸಕರನ್ನು ಸಂಭಾವಿಸಿ ಅಭಿನಂದನೆ ಮಾಡುತ್ತಿದ್ದಾನೆ.

ಕದಮ್ಬಕಿಞ್ಜಲ್ಕಪಿಶಙ್ಗವಾಸಸಾ
ಸ್ವಲಂಕೃತಂ ಮೇಖಲಯಾ ನಿತಮ್ಬೇ ।
ಹಾರೇಣ ಚಾನನ್ತಧನೇನ ವತ್ಸ
ಶ್ರೀವತ್ಸವಕ್ಷಃಸ್ಥಲವಲ್ಲಭೇನ ॥೨೮॥

ಆತನ ಸೊಂಟದಲ್ಲಿ ಕದಂಬಕುಸುಮದ ಕೇಸರದಂತೆ ಹೊಂಬಣ್ಣ ದಿಂದ ಹೊಳೆಯುತ್ತಿರುವ ಉಡಿಗೆ ಮತ್ತು ಚಿನ್ನದ ಉಡಿದಾರಗಳನ್ನೂ, ವಕ್ಷಃಸ್ಥಳದಲ್ಲಿ ಅಮೂಲ್ಯವಾದ ಹಾರಗಳೂ ಮತ್ತು ಹೊಂಬಣ್ಣದ ರೇಖೆಗಳುಳ್ಳ ಶ್ರೀವತ್ಸದ ಗುರುತೂ ಅಪೂರ್ವವಾದ ಕಾಂತಿಯ ಮಳೆಯನ್ನು ಸುರಿಸುತ್ತಿವೆ.

ಪರಾರ್ಧ್ಯಕೇಯೂರಮಣಿಪ್ರವೇಕ-
ಪರ್ಯಸ್ತದೋರ್ದಣ್ಡಸಹಸ್ರಶಾಖಮ್ ।
ಅವ್ಯಕ್ತಮೂಲಂ ಭುವನಾಙ್ಘ್ರಿಪೇನ್ದ್ರ-
ಮಹೀನ್ದ್ರಭೋಗೈರಧಿವೀತಮಲ್ಯಮ್ ॥೨೯॥

ಶ್ರೀಭಗವಂತನು ಆಳವಾಗಿ ಅವ್ಯಕ್ತವಾದ ಬೇರುಗಳುಳ್ಳ ಮಹಾ ಚಂದನವೃಕ್ಷದ ಬೆಡಗನ್ನು ಬೀರುತ್ತಿದ್ದಾನೆ. ಅಮೂಲ್ಯವಾದ ಕಂಕಣ-ಕೇಯೂರಗಳಿಂದಲೂ, ಪರಮೋತ್ಕೃಷ್ಟವಾದ ಮಣಿಗಳಿಂದಲೂ ಮೆರೆಯುತ್ತಿರುವ ಆತನ ವಿಶಾಲವಾದ ಭುಜದಂಡಗಳೇ ಆ ವೃಕ್ಷದ ಸಾವಿರಾರು ಶಾಖೆಗಳು. ಶ್ರೀದೇಹವನ್ನು ಬಳಸಿರುವ ಆದಿಶೇಷದೇವರ ದೇಹವೇ ವೃಕ್ಷವನ್ನು ಸುತ್ತಿಕೊಂಡಿರುವ ಮಹಾಸರ್ಪಗಳ ದೇಹಗಳು.

ಚರಾಚರೌಕೋ ಭಗವನ್ಮಹೀಧ್ರ-
ಮಹೀನ್ದ್ರಬನ್ಧುಂ ಸಲಿಲೋಪಗೂಢಮ್ ।
ಕಿರೀಟಸಾಹಸ್ರಹಿರಣ್ಯಶೃಙ್ಗ-
ಮಾವಿರ್ಭವತ್ಕೌಸ್ತುಭರತ್ನಗರ್ಭಮ್ ॥೩೦॥

ಮಹಾಜಲರಾಶಿಯಲ್ಲಿ ಶೇಷದೇವರಿಗೆ ಆಶ್ರಯವಾಗಿರುವ ಆದಿದೇವ ಶ್ರೀಮನ್ನಾರಾಯಣನು ನೀರಿನಿಂದ ಆವೃತವಾಗಿರುವ ಪರ್ವತರಾಜನಂತೆ ರಾರಾಜಿಸುತ್ತಿದ್ದಾನೆ. ಗಿರಿಯು ನಾನಾಜೀವಗಳಿಗೆ ಆಸರೆಯಾಗಿರುವಂತೆ-ಆತನು ಚರಾಚರಜೀವಗಳಿಗೆಲ್ಲಾ ಆಶ್ರಯನಾಗಿದ್ದಾನೆ. ಶೇಷದೇವರ ಹೆಡೆಗಳಲ್ಲಿ ಬೆಳಗುತ್ತಿರುವ ಸಹಸ್ರಾರು ಕಿರೀಟಗಳೇ ಪರ್ವತದ ಹೊನ್ನಿನಂತೆ ಹೊಳೆಯುವ ಶಿಖರಗಳು ಮತ್ತು ಆತನ ವಕ್ಷಃಸ್ಥಳದಲ್ಲಿ ಬೆಳಗುತ್ತಿರುವ ಕೌಸ್ತುಭಮಣಿಯೇ ಪರ್ವತಗರ್ಭದಲ್ಲಿ ಪ್ರಕಟಗೊಂಡ ಮಹಾರತ್ನ.

ನಿವೀತಮಾಮ್ನಾಯಮಧುವ್ರತಶ್ರಿಯಾ
ಸ್ವಕೀರ್ತಿಮಯ್ಯಾ ವನಮಾಲಯಾ ಹರಿಮ್ ।
ಸೂರ್ಯೇನ್ದುವಾಯ್ವಗ್ನ್ಯಗಮಂ ತ್ರಿಧಾಮಭಿಃ
ಪರಿಕ್ರಮತ್ಪ್ರಾಧನಿಕೈರ್ದುರಾಸದಮ್ ॥೩೧॥

ಪ್ರಭುವಿನ ಕಂಠದಲ್ಲಿ ವೇದಗಳೆಂಬ ದುಂಬಿಗಳು ಉಲಿಯುತ್ತಿರುವ

ಕೀರ್ತಿರೂಪವಾದ ವನಮಾಲೆಯು ಮೆರೆಯುತ್ತಿದೆ. ಸೂರ್ಯ, ಚಂದ್ರ, ವಾಯು ಮತ್ತು ಅಗ್ನಿಗಳೇ ಮುಂತಾದ ದೇವರುಗಳೂ, ಶ್ರೀಧಾಮಗಳು ಮತ್ತು ಮೂರು ಲೋಕಗಳಲ್ಲಿಯೂ ಅಡೆ-ತಡೆಗಳಿಲ್ಲದೇ ಸಂಚರಿಸುವ ಸುದರ್ಶನಚಕ್ರವೇ ಮುಂತಾದ ಆಯುಧಗಳೂ ಆತನನ್ನು ಸುಲಭವಾಗಿ ಮುಟ್ಟಲಾರದೇ ಆತನ ಅಕ್ಕ-ಪಕ್ಕಗಳಲ್ಲಿಯೇ ಓಡಾಡುತ್ತಿವೆ.

ರಜೋಗುಣದಿಂದ ರಂಜಿತರಾಗಿ ಜಗತ್ತನ್ನು ಸೃಷ್ಟಿಸುವ ಬಯಕೆ ಯಿಂದ ಕೂಡಿದ್ದ ಬ್ರಹ್ಮದೇವರಿಗೆ ಆಗ ಕಾಣಿಸಿದ್ದು ಶ್ರೀಭಗವಂತನ ನಾಭಿಸರೋವರದಿಂದ ಪ್ರಕಟಗೊಂಡ ಕಮಲ, ಜಲರಾಶಿ, ಆಕಾಶ, ವಾಯು ಮತ್ತು ತನ್ನ ಶ್ರೀದೇಹ–ಎಂಬ ಐದೇ ಪದಾರ್ಥಗಳು. ಸೃಷ್ಟಿಯನ್ನು ರಚಿಸಲು ಈ ಐದಲ್ಲದೇ–ಬೇರಾವ ಪದಾರ್ಥಗಳೂ ಅವರಿಗೆ ಕಾಣಲಿಲ್ಲ. ಆಗ ಅವರು ತಾವು ಸಾಕ್ಷಾತ್ಕರಿಸಿದ್ದ ಅಚಿಂತ್ಯಗತಿಯಾದ ಶ್ರೀಹರಿಯಲ್ಲಿ ಚಿತ್ತವನ್ನಿರಿಸಿ ಸೃಷ್ಟಿಸಾಮರ್ಥ್ಯಕ್ಕಾಗಿ ಆ ಪರಮಪೂಜ್ಯನಾದ ಪ್ರಭುವನ್ನು ಹೀಗೆ ಸ್ತೋತ್ರಮಾಡತೊಡಗಿದರು.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೮ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೯ನೆಯ ಅಧ್ಯಾಯ

ಬ್ರಹ್ಮದೇವರು ಮಾಡಿದ ಭಗವತ್‌ಸ್ತೋತ್ರ

ಬ್ರಹ್ಮದೇವರು ಸ್ತೋತ್ರಮಾಡತೊಡಗಿದರು :

ಜ್ಞಾತೋಽಸಿ ಮೇಽದ್ಯ ಸುಚಿರಾನ್ನನು ದೇಹಭಾಜಾಂ
ನ ಜ್ಞಾಯತೇ ಭಗವತೋ ಗತಿರಿತ್ಯವದ್ಯಮ್ ।
ನಾನ್ಯತ್ತ್ವದಸ್ತಿ ಭಗವನ್ನಪಿ ತನ್ನ ಶುದ್ಧಂ
ಮಾಯಾಗುಣವ್ಯತಿಕರಾದ್ಯದುರುರ್ವಿಭಾಸಿ ॥೧॥

"ಪ್ರಭೋ! ಬಹುಕಾಲದ ನಂತರ ನಿನ್ನ ದರ್ಶನವನ್ನು ಪಡೆದು ನಾನು ಧನ್ಯನಾದೆನು. ನಿನ್ನ ಈ ದಿವ್ಯಸ್ವರೂಪವನ್ನು ತಿಳಿಯದೇ ಜೀವಿಗಳು ಅದೆಷ್ಟು ತೊಳಲಾಡುತ್ತಿದ್ದಾರೆ? ಅವರದು ಎಂತಹ ದೌರ್ಭಾಗ್ಯ? ನಿನ್ನನ್ನು

ಬಿಟ್ಟು ಬೇರಾವುದೂ ಇಲ್ಲವು. ಓ ಭಗವಂತ! ನೀನೊಬ್ಬನೇ ಶುದ್ಧನು. ನಿನ್ನನ್ನು ಬಿಟ್ಟು* ಬೇರೆ ಯಾವುದು ಗೋಚರಿಸುತ್ತದೆಯೋ–ಅದೆಲ್ಲವೂ ಅಶುದ್ಧವು. ಮಾಯೆಯ ಗುಣಗಳಾದ ಸತ್ತ್ವ-ರಜಸ್ತಮೋಗುಣಗಳ ವೈಷಮ್ಯದಿಂದ ಹಲವು ರೂಪಗಳಾಗಿ ನೀನು ಕಾಣುತ್ತಿದ್ದೀಯೆ.

ರೂಪಂ ಯದೇತದವಬೋಧರಸೋದಯೇನ
ಶಶ್ವನ್ನಿವೃತ್ತತಮಸಃ ಸದನುಗ್ರಹಾಯ ।
ಆದೌ ಗೃಹೀತಮವತಾರಶತೈಕಬೀಜಂ
ಯನ್ನಾಭಿಪದ್ಮಭವನಾದಹಮಾವಿರಾಸಮ್ ॥೨॥

ಓ ಭಗವಂತನೇ! ನೀನು ಸದಾ ಜ್ಞಾನಪ್ರಕಾಶದಿಂದ ಬೆಳಗುತ್ತಿರುವವನು. ಆದ್ದರಿಂದ ಅಜ್ಞಾನವು ಸದಾ ನಿನ್ನಿಂದ ದೂರವಾಗಿರುತ್ತದೆ. ಯಾವ ನಾಭಿಕಮಲದಿಂದ ನಾನು ಜನಿಸಿದ್ದೇನೆಯೋ–ಅಂತಹ ನಿನ್ನ ಈ ದಿವ್ಯದೇಹವು ನೂರಾರು ಅವತಾರಗಳಿಗೆ ಮೂಲಕಾರಣವಾದುದು. **(ಅವತಾರಶತೈಕಬೀಜಂ)** ಸತ್ಪುರುಷರ ಮೇಲೆ ಕೃಪೆದೋರಿ ಅವರನ್ನು ಅನುಗ್ರಹಿಸುವುದಕ್ಕೋಸ್ಕರ ಈ ಮೊಟ್ಟಮೊದಲನೆಯ ಅವತಾರವನ್ನು ನೀನು ಕೈಗೊಂಡಿದ್ದೀಯೆ.

---

* ನಿನ್ನನ್ನು ಬಿಟ್ಟು ಸ್ವತಃ ಬೇರಾವುದೂ ಇಲ್ಲ. ಏಕೆಂದರೆ : ಎಲ್ಲದರ ಸತ್ತೆಯೂ ನಿನಗೆ ಅಧೀನ. "ದ್ರವ್ಯಂ ಕರ್ಮ ಚ ಕಾಲಶ್ಚ' ನಿನ್ನಿಂದ ಭಿನ್ನವಾದ ಜಗತ್ತೆಂಬುದು ಅಶುದ್ಧ; ದೋಷಸಹಿತ. ಹೀಗೆ ಅದು ಸದೋಷವಾಗಿರುವುದರಿಂದ ನಿರ್ದೋಷನಾದ ನೀನು ತಿಳಿದುಬರುತ್ತಿಲ್ಲ. ನಿನ್ನನ್ನು ಬಿಟ್ಟು ಉಳಿದುವೆಲ್ಲಾ ಅಶುದ್ಧ, ನೀನೊಬ್ಬನೇ ನಿರ್ದೋಷ–ಎಂಬುದು ಹೇಗೆ ? ಎಂದರೆ : ಪ್ರಕೃತಿಯ ಸತ್ತ್ವಾದಿಗುಣಗಳ ವ್ಯತಿಕರ (ವಿಕಾರ)ದಿಂದ ಉಂಟಾದ ಮಹದಾದಿ ತತ್ತ್ವಗಳಲ್ಲಿ ಅಂತರ್ಯಾಮಿರೂಪಗಳಿಂದಲೂ ಅವತಾರಗಳಿಂದಲೂ ನೀನು ಬಹುವಾಗಿ ಕಾಣುತ್ತೀಯೆ. ಆದ್ದರಿಂದ ಉಳಿದುದೆಲ್ಲಾ ಸದೋಷ. ನೀನೊಬ್ಬನೇ ನಿರ್ದೋಷನು. ಆದ್ದರಿಂದ 'ವಿಭಾಸಿ' ಎಂದು ಹೇಳಿದೆ. ಪರಮಾತ್ಮನಲ್ಲಿ ನಿಜವಾಗಿಯೂ ಯಾವ ಭೇದವೂ ಇಲ್ಲ. ಸ್ಥಾನಭೇದದಿಂದ ಆತನಲ್ಲಿ ಕಾಣುವ ಆತನ ನಾನಾತ್ವವು ಅಸತ್ತೆಂದೇ ತಿಳಿದುಬರುತ್ತದೆ. **"ಏಕೋಽಪಿ ಸ್ಥಾನನಾನಾತ್ವಾತ್ ನಾನೇವ ಹರಿರೀಯತೇ । ಸರ್ವಾನ್ತರ್ಯಾಮಿಣಸ್ತಸ್ಯ ನ ಭೇದೋ ವಿದ್ಯತೇ ಕ್ವಚಿತ್ ॥"** ಎಲ್ಲ ವಸ್ತುಗಳ ನೆಲೆಯೂ ಭಗವಂತನಿಗೆ ಅಧೀನ.

(ವಿಜಯಧ್ವಜೀಯ)

ನಾತಃ ಪರಂ ಪರಮ ಯದ್ಭವತಶ್ರ ಸ್ವರೂಪ-
ಮಾನನ್ದಮಾತ್ರಮವಿಕಲ್ಪಮವಿದ್ಧವರ್ಚಃ ।
ಪಶ್ಯಾಮಿ ವಿಶ್ವಸೃಜಮೇಕಮವಿಶ್ವಮಾತ್ಮ-
ನ್ಭೂತೇನ್ದ್ರಿಯಾತ್ಮಕಮದಸ್ತ ಉಪಾಶ್ರಿತೋಽಸ್ಮಿ ॥೩॥

ಸ್ವಾಮಿ! ನಿನ್ನ ಆನಂದೈಕಮಯವೂ ವಿಕಲ್ಪ (ಭೇದ) ರಹಿತವೂ ಅಖಂಡತೇಜೋಮಯವೂ ಆದ ಯಾವ ಸ್ವರೂಪವುಂಟೋ–ಅದನ್ನು ನಾನು ಈ ದಿವ್ಯರೂಪದಿಂದ ಭಿನ್ನವೆಂದು ತಿಳಿಯುವುದಿಲ್ಲ. ಆದುದರಿಂದ ನಾನು ವಿಶ್ವಸೃಷ್ಟಿಮಾಡುವುದಾದರೂ ವಿಶ್ವಾತೀತವಾಗಿರುವ, ಅದ್ವಿತೀಯ ವಾಗಿರುವ, ಸಮಸ್ತಭೂತಗಳಿಗೂ ಇಂದ್ರಿಯಗಳಿಗೂ ಅಧಿಷ್ಠಾನವಾಗಿರುವ ಈ ದಿವ್ಯರೂಪವನ್ನು ಶರಣುಹೊಂದುತ್ತೇನೆ.

ತದ್ವಾ ಇದಂ ಭುವನಮಙ್ಗಲಮಙ್ಗಲಾಯ
ಧ್ಯಾನೇ ಸ್ಮ ನೋ ದರ್ಶಿತಂ ತ ಉಪಾಸಕಾನಾಮ್ ।
ತಸ್ಮೈ ನಮೋ ಭಗವತೇಽನುವಿಧೇಮ ತುಭ್ಯಂ
ಯೋಽನಾದೃತೋ ನರಕಭಾಗ್ಭಿರಸತ್ಪ್ರಸಙ್ಗೈಃ ॥೪॥

ನಿನ್ನನ್ನು ಬಿಟ್ಟು ಬೇರಾವುದೂ ವಾಸ್ತವವಾಗಿ ಇಲ್ಲ. ಇರುವಂತೆ ಕಾಣುತ್ತದೆಯಲ್ಲಾ! ಎಂದರೆ : ಹಾಗೆ ಕಾಣುವುದು ಶುದ್ಧಸತ್ತ್ವವಲ್ಲ ಅಸತ್ತಾದ ಅದರ ಪ್ರತೀತಿಯುಂಟಾಗಲು ಏನು ಕಾರಣ?–ಎಂದರೆ : ಮಾಯಾಗುಣಗಳ ಕ್ಷೋಭೆಯಿಂದ (ವ್ಯತಿಕರದಿಂದ) ನೀನೇ ಬಹುರೂಪನಾಗಿ ಕಾಣುತ್ತಿದ್ದೀಯೆ. (ಶ್ರೀಧರೀಯ)

"ನಾನ್ಯತ್ತ್ವದಸ್ತಿ ಭಗವನ್ನಪಿ ತನ್ನ ಶುದ್ಧಂ... ವಿಭಾಸಿ..." ನಿನ್ನನ್ನು ಬಿಟ್ಟು ಬೇರೆ ಏನೂ ಇಲ್ಲ ಏಕೆಂದರೆ : ಎಲ್ಲವೂ ತ್ವದಾತ್ಮಕವಾಗಿದೆ. ನಿನ್ನೊಬ್ಬನನ್ನು ತಿಳಿದರೆ ಉಳಿದುದೆಲ್ಲವನ್ನೂ ತಿಳಿದಂತೆ. ತಿಳಿಯಲ್ಪಡಬೇಕಾದವರು ನೀನಲ್ಲದೇ ಬೇರಾರೂ ಇಲ್ಲ. "ಯೇನಾಶ್ರುತಂ ಶ್ರುತಂ ಭವತಿ", "ಸ ಬ್ರಹ್ಮವಿದ್ಯಾಂ ಸರ್ವವಿದ್ಯಾ ಪ್ರತಿಷ್ಠಾಂ", "ತಮೇವ ವಿದಿತ್ವಾಽತಿಮೃತ್ಯುಮೇತಿ" "ಆತ್ಮನಿ ಖಲ್ವರೇ ದೃಷ್ಟೇ ಶ್ರುತೇ ಮತೇ ವಿಜ್ಞಾತೇ ಇದಂ ಸರ್ವಂ ವಿಜ್ಞಾತಂ ಭವತಿ" ಅಬ್ರಹ್ಮಾತ್ಮಕವಾದ ಸ್ವತಂತ್ರವಸ್ತು ಯಾವುದೂ ಇಲ್ಲ. ಸ್ವತಂತ್ರವೆಂದು ಪಾಮರರಿಗೆ ದೇವಾದಿಬಹುವಸ್ತುಗಳು ಪ್ರತೀತವಾಗುತ್ತವೆಯಲ್ಲಾ! ಎಂದರೆ : ಅದು ಶುದ್ಧವಲ್ಲ, ಅಬ್ರಹ್ಮಾತ್ಮಕ ಸ್ವತಂತ್ರಬುದ್ಧಿಯ ಭ್ರಾಂತಿ. ನೀನೇ ಪ್ರಕೃತಿಯ ಗುಣಗಳ ವೈಷಮ್ಯದಿಂದ ಬಹುಪ್ರಕಾರವಾಗಿ ಕಾಣುತ್ತಿದ್ದೀಯೆ. ನಿನಗೆ ಶರೀರಭೂತವಾದ' ಪ್ರಕೃತಿ-ಪುರುಷರನ್ನು

ಓ ವಿಶ್ವಮಂಗಲ–ಮಂಗಲಸ್ವರೂಪನೇ! ನಿನ್ನ ಉಪಾಸಕನಾಗಿರುವ ನನ್ನ ಹಿತಕ್ಕೋಸ್ಕರವೇ ಧ್ಯಾನದಲ್ಲಿ ನನಗೆ ಈ ದಿವ್ಯರೂಪವನ್ನು ತೋರಿಸಿದ್ದೀಯೆ. ಇದನ್ನು ಅನಾದರಿಸುವುದುಂಟೇ? ಪಾಪಾತ್ಮರೂ ವಿಷಯಾಸಕ್ತರೂ ಆದ ಕೆಟ್ಟ ಜೀವಗಳು ಮಾತ್ರವೇ ಇದನ್ನು ತಿರಸ್ಕರಿಸುವರು. ನಾನಾದರೋ ನಿನ್ನನ್ನು ಈ ದಿವ್ಯರೂಪದಲ್ಲಿಯೇ ನೋಡುತ್ತಾ ಮತ್ತೆ-ಮತ್ತೆ ನಮಸ್ಕಾರಮಾಡುತ್ತೇನೆ.

ಯೇ ತು ತ್ವದೀಯಚರಣಾಮ್ಬುಜಕೋಶಗನ್ಧಂ
ಜಿಘ್ರನ್ತಿ ಕರ್ಣವಿವರೈಃ ಶ್ರುತಿವಾತನೀತಮ್ ।
ಭಕ್ತ್ಯಾ ಗೃಹೀತಚರಣಃ ಪರಯಾ ಚ ತೇಷಾಂ
ನಾಪೈಷಿ ನಾಥ ಹೃದಯಾಮ್ಬುರುಹಾತ್ಸ್ವಪುಂಸಾಮ್ ॥

ಪ್ರಭೋ! ಸುಕೃತಿಗಳು–ವೇದಗಳೆಂಬ ವಾಯುವು ಒಯ್ದು ತಂದಿ ರುವ ನಿನ್ನ ಪಾದಗಳೆಂಬ ಕಮಲಕೋಶದ ಕಂಪನ್ನು ತಮ್ಮ ಕಿವಿದೆರೆಗಳಿಂದ ಸ್ವೀಕರಿಸುತ್ತಾರೆ. ಅಂತಹ ಭಕ್ತೋತ್ತಮರ ಹೃದಯಕಮಲದಿಂದ ನೀನು ಎಂದಿಗೂ ದೂರವಾಗುವುದಿಲ್ಲ. ಏಕೆಂದರೆ : ಅವರು ತಮ್ಮ ಪರಾಭಕ್ತಿಯೆಂಬ ಹಗ್ಗದಿಂದ ನಿನ್ನ ಪಾದಪದ್ಮವನ್ನು ತಮ್ಮಲ್ಲಿ ಕಟ್ಟಿಹಾಕಿಕೊಂಡಿರುತ್ತಾರೆ.

ಒಳಹೊಕ್ಕು ಬಹುವಾಗಿ ಪರಿಣಾಮಗೊಳಿಸಿ ಆಯಾ ಶರೀರವುಳ್ಳವನಾಗಿ ನೀನೇ ಬಹು ಪ್ರಕಾರವಾಗಿ ತೋರುತ್ತಿದ್ದೀಯೆ. "ಬಹು ಸ್ಯಾಂ ಪ್ರಜಾಯೇಯೇತಿ", "ತತ್ಸೃಷ್ಟ್ವಾ ತದೇವಾನುಪ್ರಾವಿಶತ್" ಭಗವಂತನು ಹೀಗೆ ಜಗದ್ರೂಪವಾಗಿ ವಿಸ್ತಾರಗೊಂಡರೂ ಆತನ ಶರೀರವಾಗಿರುವ (ಪ್ರಕಾರವಿಶೇಷಣಗಳಾಗಿರುವ) ಅಚಿತ್ತಾದ ಪ್ರಕೃತಿಯ ವಿಕಾರಗಳಾಗಲೀ, ಕ್ಷೇತ್ರಜ್ಞನಾಗಿರುವ ಜೀವನಲ್ಲಿರುವ ವಿಕಾರಗಳಾಗಲೀ–ಅವುಗಳಿಗೆ ಆತ್ಮಭೂತನಾಗಿರುವ ಸ್ವಾಮಿಗೆ ಅಂಟುವುದಿಲ್ಲ. ಆತನು ಎಂದೆಂದಿಗೂ ಶುದ್ಧನೇ. ಎಲ್ಲವನ್ನೂ ಬ್ರಹ್ಮಾತ್ಮಕವೆಂದು ಉಪಾಸನೆಮಾಡಬೇಕು.

"ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾನ್ತಉಪಾಸೀತ" ಚಿದಚಿದಾತ್ಮಕವಾದ ಜಗತ್ತೆಲ್ಲವೂ ಶ್ರೀಭಗವಂತನ ಶರೀರವಾದುದರಿಂದ ಆತನ ಸ್ವರೂಪವಲ್ಲದ (ಅಬ್ರಹ್ಮಾತ್ಮಕವಾದ) ಬೇರಾವುದೂ ಇಲ್ಲ. ಆತನನ್ನು ತಿಳಿದರೆ ಸರ್ವವನ್ನೂ ತಿಳಿದಂತೆಯೇ. (ವೀರರಾಘವೀಯ)

ತಾವದ್ಭಯಂ ದ್ರವಿಣಗೇಹಸುಹೃನ್ನಿಮಿತ್ತಂ
ಶೋಕಃ ಸ್ಪೃಹಾ ಪರಿಭವೋ ವಿಪುಲಶ್ಚ ಲೋಭಃ ।
ತಾವನ್ಮಮೇತ್ಯಸದವಗ್ರಹ ಆರ್ತಿಮೂಲಂ
ಯಾವನ್ನ ತೇಽಙ್ಘ್ರಿಮಭಯಂ ಪ್ರವೃಣೀತ ಲೋಕಃ ॥

ಶರಣಾಗತರಿಗೆ ಅಭಯಪ್ರದಾನಮಾಡುವ ಭಗವಂತನೇ! ಮನುಷ್ಯನು ಅಭಯಪ್ರದವಾದ ನಿನ್ನ ಚರಣಾರವಿಂದಗಳ ಆಸರೆಯನ್ನು ಎಲ್ಲಿಯವರೆಗೆ ಪಡೆಯುವುದಿಲ್ಲವೋ–ಅಲ್ಲಿಯವರೆಗೆ ಮಾತ್ರವೇ ಆತನಿಗೆ ಸಾಂಸಾರಿಕ ಆಕರ್ಷಣೆಗಳು–ಅಂದರೆ : ಹಣವೇನು, ಮನೆಯೇನು, ಬಂಧು-ಮಿತ್ರರೇನು ಅವುಗಳಿಂದ ಉಂಟಾಗುವ ಭಯ, ಶೋಕ, ದುರಾಸೆ, ದೈನ್ಯ ಮತ್ತು ಕಡುಲೋಭಗಳೇನು–ಇವು ತೊಂದರೆಕೊಡುತ್ತವೆ ಮತ್ತು ದುಃಖಕ್ಕೆ ಏಕಮಾತ್ರಕಾರಣವಾದ ಅಹಂಕಾರ-ಮಮಕಾರಗಳ ದುರಾಗ್ರಹಗಳು ಇರುತ್ತವೆ.

ದೈವೇನ ತೇ ಹತಧಿಯೋ ಭವತಃ ಪ್ರಸಙ್ಗಾ-
ತ್ಸರ್ವಾಶುಭೋಪಶಮನಾದ್ವಿಮುಖೇನ್ದ್ರಿಯಾ ಯೇ ।
ಕುರ್ವನ್ತಿ ಕಾಮಸುಖಲೇಶಲವಾಯ ದೀನಾ
ಲೋಭಾಭಿಭೂತಮನಸೋಽಕುಶಲಾನಿ ಶಶ್ವತ್ ॥೭॥

ದೇವದೇವನೇ! ಮೂರ್ಖರು ಎಲ್ಲ ಅಮಂಗಳಗಳನ್ನೂ ನಾಶಪಡಿಸುವ ನಿನ್ನ ಶ್ರವಣ-ಕೀರ್ತನೆ ಮುಂತಾದ ಸತ್ಪ್ರಸಂಗಗಳಿಂದ ಇಂದ್ರಿಯಗಳನ್ನು

ಇಲ್ಲಿ ವೇದಾರ್ಥಭೂತನೂ–ಜಗತ್ಕಾರಣನೂ ಆದ ಭಗವಂತನನ್ನು ಪ್ರಶಂಸೆಮಾಡುತ್ತಾ ವೇದವಿರುದ್ಧಗಳಾದ ಮತಗಳನ್ನು ನಿಂದನೆಮಾಡಿದೆ. ಹೇಗೆಂದರೆ : ಶ್ರುತಿಯು ಸಾರುವಂತೆ ಜಗತ್ಕಾರಣನಾದ ನೀನು ಸತ್ತ್ವಾದಿಗುಣಗಳ ವೈಷಮ್ಯದಿಂದ ಹಲವು ಬಗೆಯಾಗಿದ್ದೀಯೆ. (ಅಂತಹ ನೀನು ಬಹುಕಾಲದ ತಪಸ್ಸಿನಿಂದ ನನಗೆ ದರ್ಶನವನ್ನು ದಯಪಾಲಿಸಿದ್ದೀಯೆ.) ಹೀಗೆ ಸತ್ಯವೂ–ವೇದಾರ್ಥವೂ ಆದ ನಿನ್ನನ್ನು ಜಗತ್ಕಾರಣನೆಂದು ತಿಳಿಯದೇ ಕಾಲ, ಸ್ವಭಾವ, ನಿಯತಿ–ಮುಂತಾದ ಕೆಲವು ವಸ್ತುಗಳನ್ನು ಜಗತ್ಕಾರಣನೆಂದು ತಿಳಿಯುವವರು ಪಾಮರರು. ಅವರಿಗೆ ನಿನ್ನ ದರ್ಶನವು ಸಿಕ್ಕುವುದಿಲ್ಲ. ನಿನಗಿಂತಲೂ ಬೇರೆ ಯಾವುದೂ ಇಲ್ಲವಾದ್ದರಿಂದ ಜನರು ತಮ್ಮ-ತಮ್ಮ ಬುದ್ಧಿಗಳಿಗೆ ಅನುಸಾರವಾಗಿ ಊಹೆಮಾಡಿ ಕೊಂಡಿರುವ ಆ ಮತವಾವುದೂ ಸತ್ಯವಲ್ಲ. (ಸಿದ್ಧಾಂತದೀಪಿಕಾಗ್ರಂಥ) (ಶ್ಲೋಕ ೧)

ಬೇರೆಡೆಗೆ ಸೆಳೆದು ಅಣುಮಾತ್ರವಾದ ವಿಷಯಸುಖಗಳನ್ನೇ ಬಯಸುತ್ತಾ, ದೀನರಾಗಿ ಅವುಗಳಿಗೇ ಮನಸ್ಸಿನಲ್ಲಿ ಆಸೆಪಡುತ್ತಾ ದುಷ್ಟಕರ್ಮಗಳಲ್ಲಿ ತೊಡಗುತ್ತಾರೆ. ಅದೃಷ್ಟದಿಂದ ವಿವೇಕವನ್ನು ಕಳೆದುಕೊಂಡ ಅಂತಹವರು ನಿಜವಾಗಿಯೂ ಬಡಪಾಯಿಗಳು.

ಕ್ಷುತ್ತೃಟ್ತ್ರಿಧಾತುಭಿರಿಮಾ ಮುಹುರರ್ದ್ಯಮಾನಾಃ
ಶೀತೋಷ್ಣವಾತವರ್ಷೈರಿತರೇತರಾಚ್ಚ ।
ಕಾಮಾಗ್ನಿನಾಚ್ಯುತ ರುಷಾ ಚ ಸುದುರ್ಭರೇಣ
ಸಂಪಶ್ಯತೋ ಮನ ಉರುಕ್ರಮ ಸೀದತೇ ಮೇ ॥೮॥

ಓ ಅಚ್ಯುತ! ತ್ರಿವಿಕ್ರಮ! ಈ ಜನರು ಹಸಿವು-ಬಾಯಾರಿಕೆ, ವಾತ, ಪಿತ್ತ, ಕಫ, ಚಳಿ, ಸೆಕೆ, ಗಾಳಿ-ಮಳೆಗಳಿಂದಲೂ, ಇವುಗಳಲ್ಲಿ ಒಂದು ಮತ್ತೊಂದರಿಂದಲೂ, ಕಾಮಾಗ್ನಿಯಿಂದಲೂ, ಸಹಿಸಲಸದಳವಾದ ಕ್ರೋಧ ವೆಂಬ ಅಗ್ನಿಯಿಂದಲೂ ಮತ್ತೆ-ಮತ್ತೆ ಕಷ್ಟಪಡುತ್ತಿರುವುದನ್ನು ನೋಡಿ ನನ್ನ ಮನಸ್ಸಿಗೆ ತುಂಬಾ ವಿಷಾದವಾಗುತ್ತಿದೆ.

ಯಾವತ್ಪೃಥಕ್ತ್ವಮಿದಮಾತ್ಮನ ಇನ್ದ್ರಿಯಾರ್ಥ-
ಮಾಯಾಬಲಂ ಭಗವತೋ ಜನ ಈಶ ಪಶ್ಯೇತ್ ।
ತಾವನ್ನ ಸಂಸೃತಿರಸೌ ಪ್ರತಿಸಂಕ್ರಮೇತ
ವ್ಯರ್ಥಾಪಿ ದುಃಖನಿವಹಂ ವಹತೀ ಕ್ರಿಯಾರ್ಥಾ ॥೯॥

ಎಲೈ ಪ್ರಭುವೇ! ಮನುಷ್ಯನು ಎಲ್ಲಿಯವರೆಗೆ ಇಂದ್ರಿಯ ಮತ್ತು ಅವುಗಳ ವಿಷಯರೂಪವಾದ ಮಾಯೆಯ ಪ್ರಭಾವಕ್ಕೆ ಒಳಪಟ್ಟವನಾಗಿ ತನ್ನನ್ನು ಬೇರೆಯಾಗಿ ನೋಡುತ್ತಾನೆಯೋ–*ಅಲ್ಲಿಯವರೆಗೂ ಆತನಿಗೆ ಈ

---

* ಆತ್ಮನಃ ಪೃಥಕ್ತ್ವಂ ಯದಾ ಪಶ್ಯೇತ್ = ಎಲ್ಲಿಯವರೆಗೆ ತನ್ನನ್ನು ಬೇರೆಯವನನ್ನಾಗಿ ನೋಡುತ್ತಾನೆಯೋ–ಅಲ್ಲಿಯವರೆಗೂ ಅಂದರೆ : ತನ್ನನ್ನು ಪರಮಾತ್ಮನಿಂದ ಎಲ್ಲಿಯ ವರೆಗೂ ಭಿನ್ನನನ್ನಾಗಿ ತಿಳಿಯುತ್ತಾನೆಯೋ–ಅಲ್ಲಿಯವರೆಗೂ ಇವನಿಗೆ ಸಂಸಾರವು ತಪ್ಪುವುದಿಲ್ಲ–ಎಂದು ಅದ್ವೈತಪರವಾದ ಅರ್ಥ.

ಎಲ್ಲಿಯವರೆಗೂ ತನ್ನನ್ನು ಪರಮಾತ್ಮನ ನಿರಂತರಧ್ಯಾನದಿಂದ ಬೇರ್ಪಡಿಸಿಕೊಳ್ಳು ತ್ತಾನೆಯೋ–ಅಲ್ಲಿಯವರೆಗೂ ಅಥವಾ ತನ್ನನ್ನು ಪರಮಾತ್ಮನಿಂದ ಸ್ವತಂತ್ರನನ್ನಾಗಿ ತಿಳಿದಿರುವವರೆಗೂ ಅಥವಾ ತನ್ನ ನಿಜಸ್ವರೂಪವನ್ನು ಮರೆತು ತನ್ನನ್ನು ತನಗಿಂತಲೂ

ಸಂಸಾರಚಕ್ರದಿಂದ ಬಿಡುಗಡೆಯಾಗುವುದಿಲ್ಲ. ಈ ಸಂಸಾರವು ವ್ಯರ್ಥವಾದರೂ ಕರ್ಮಫಲವನ್ನು ಅನುಭವಿಸುವ ಕ್ಷೇತ್ರವಾಗಿರುವುದರಿಂದ ಮನುಷ್ಯನನ್ನು ನಾನಾಪ್ರಕಾರವಾದ ದುಃಖಗಳಲ್ಲಿ ಸಿಕ್ಕಿಸುತ್ತದೆ.

ಅಹ್ನ್ಯಾಪೃತಾರ್ತಕರಣಾ ನಿಶಿ ನಿಃಶಯಾನಾ
ನಾನಾಮನೋರಥಧಿಯಾ ಕ್ಷಣಭಗ್ನನಿದ್ರಾಃ ।
ದೈವಾಹತಾರ್ಥರಚನಾ ಋಷಯೋಽಪಿ ದೇವ
ಯುಷ್ಮತ್ಪ್ರಸಙ್ಗವಿಮುಖಾ ಇಹ ಸಂಸರನ್ತಿ ॥೧೦॥

ಇತರರ ಪಾಡಿರಲಿ–ಸಾಕ್ಷಾತ್ ಋಷಿ-ಮುನಿಗಳೂ ಕೂಡ ನಿನ್ನ ಕಥಾಪ್ರಸಂಗಕ್ಕೆ ವಿಮುಖರಾದರೆ ಸಂಸಾರಬಂಧನಕ್ಕೆ ಸಿಕ್ಕಿಕೊಳ್ಳಬೇಕಾಗುತ್ತದೆ. ಕೆಲವು ಋಷಿಗಳು ಹಗಲಿನಲ್ಲಿ ಬಗೆ-ಬಗೆಯ ವಿಷಯವ್ಯಾಪಾರಗಳಲ್ಲಿ ಆಸಕ್ತರಾಗಿರುವುದರಿಂದ ಅವರ ಚಿತ್ತವು ವಿಕ್ಷಿಪ್ತವಾಗಿರುತ್ತದೆ. ರಾತ್ರಿಯಲ್ಲಿ ಅವರು ಪ್ರಜ್ಞೆಯಿಲ್ಲದೇ ಬಿದ್ದುಕೊಂಡಿರುತ್ತಾರೆ. ಅಂತಹ ಸಮಯದಲ್ಲೂ ಅವರು ಬಗೆ-ಬಗೆಯ ಮನೋರಥಗಳಿಂದ ಪೀಡಿತರಾಗಿ ಕ್ಷಣ-

---

ಬೇರೆಯಾದ ದೇಹಾದಿಭಾವದಿಂದ ಎಲ್ಲಿಯವರೆಗೂ ನೋಡುತ್ತಾನೆಯೋ–ಅಲ್ಲಿಯವರೆಗೂ ಇವನಿಗೆ ಸಂಸಾರವು ತಪ್ಪುವುದಿಲ್ಲ–ಎಂದು ವಿಶಿಷ್ಟಾದ್ವೈತಪರವಾದ ಅರ್ಥ.

ದೇವ-ಮನುಷ್ಯಾದಿ ದೇಹಗತವಾದ ಬೇರೆ-ಬೇರೆ ತನವನ್ನು ಆತ್ಮಸಂಬಂಧವಾದುದೆಂದು ಎಲ್ಲಿಯವರೆಗೆ ತಿಳಿದಿರುತ್ತಾನೋ–ಅಲ್ಲಿಯವರೆಗೂ. (ವೀರರಾಘವೀಯ)

ಜೀವರಲ್ಲಿ ಮುಕ್ತಿಯೋಗ್ಯರು, ಸಂಸಾರಯೋಗ್ಯರು, ತಮೋಯೋಗ್ಯರು–ಎಂದು ಮೂರು ಬಗೆ. ಅವರಲ್ಲಿ ಮುಕ್ತಿಯೋಗ್ಯರಿಗೆ ಸಂಸಾರವು ಯಾವಾಗ ತೊಲಗುತ್ತದೆಯೆಂಬುದನ್ನು ಇಲ್ಲಿ ಹೇಳಿದೆ. ಮುಕ್ತಿಯೋಗ್ಯಜನರು ಇಂದ್ರಿಯವಿಷಯಭೋಗಾರ್ಥವಾದ 'ನಾನು ಧ್ಯಾನಿಸುತ್ತೇನೆ, ಕೇಳುತ್ತೇನೆ, ನೋಡುತ್ತೇನೆ'–ಇತ್ಯಾದಿ ಬೇರೆ-ಬೇರೆ ವಿಭಾಗಗಳು ಭಗವಂತನ ಮಾಯಾಬಲದಿಂದ ಅಂದರೆ : ಇಚ್ಛಾಬಲದಿಂದ ಎಂದು ಯಾವಾಗ ತಿಳಿಯುತ್ತಾನೋ–ಆಗ ಈ ಸಂಸಾರವು ನಾಶಹೊಂದಿಯೇ ಹೊಂದುವುದು.

(ವಿಜಯಧ್ವಜೀಯ)

'ನಾನೇ ತಿಳಿಯುತ್ತೇನೆ, ಕೇಳುತ್ತೇನೆ–ಇತ್ಯಾದಿ ಸ್ವಾತಂತ್ರ್ಯವೆಲ್ಲವೂ ಭಗವಂತನ ಇಚ್ಛೆಯಿಂದ ಉಂಟಾದುದೆಂದು ಯಾವಾಗ ತಿಳಿಯುತ್ತಾನೋ ಆಗ'–ಎಂದು ಅನಂತತೀರ್ಥರ ವಿವರಣೆ. (ಶ್ಲೋಕ ೯)

ಕ್ಷಣಕ್ಕೂ ನಿದ್ರಾಭಂಗವನ್ನು ಹೊಂದುತ್ತಾರೆ. ದೈವವಶದಿಂದ ಅವರ ಅರ್ಥಸಿದ್ಧಿಯ ಉದ್ಯೋಗಗಳೆಲ್ಲವೂ ವಿಫಲವಾಗುತ್ತಿರುತ್ತವೆ.

ತ್ವಂ ಭಾವಯೋಗಪರಿಭಾವಿತಹೃತ್ಸರೋಜ
ಆಸ್ಸೇ ಶ್ರುತೇಕ್ಷಿತಪಥೋ ನನು ನಾಥ ಪುಂಸಾಮ್ ।
ಯದ್ಯದ್ಧಿಯಾ ತ ಉರುಗಾಯ ವಿಭಾವಯನ್ತಿ
ತತ್ತದ್ವಪುಃ ಪ್ರಣಯಸೇ ಸದನುಗ್ರಹಾಯ ॥೧೧॥

ಜೀಯಾ! ಯಾರು ಶ್ರವಣ-ಮನನಾದಿಗಳಿಂದ ನಿನ್ನ ಮಾರ್ಗವನ್ನು ತಿಳಿದು ಅನನ್ಯವಾದ ಭಕ್ತಿಯೋಗದಿಂದ ಮನಸ್ಸನ್ನು ಪರಿಶುದ್ಧಗೊಳಿಸಿ ಕೊಂಡಿರುತ್ತಾರೋ–ಅಂತಹವರ ಹೃದಯಕಮಲದಲ್ಲಿ ನೀನು ವಾಸ ಮಾಡುತ್ತೀಯಲ್ಲವೇ? ಓ ಪುಣ್ಯಕೀರ್ತಿಯಾದ ಪ್ರಭುವೇ! ನಿನ್ನ ಭಕ್ತ ಜನರು ಯಾವ-ಯಾವ ಭಾವನೆಯಿಂದ ನಿನ್ನನ್ನು ಚಿಂತನೆಮಾಡುತ್ತಾರೋ–ಅವರನ್ನು ಅನುಗ್ರಹಿಸುವುದಕ್ಕಾಗಿ ಆಯಾ ರೂಪವನ್ನೇ ಧರಿಸಿಕೊಳ್ಳುತ್ತೀಯೆ.

ನಾತಿಪ್ರಸೀದತಿ ತಥೋಪಚಿತೋಪಚಾರೈ-
ರಾರಾಧಿತಃ ಸುರಗಣೈರ್ಹೃದಿ ಬದ್ಧಕಾಮೈಃ ।
ಯತ್ಸರ್ವಭೂತದಯಯಾಸದಲಭ್ಯಯೈಕೋ
ನಾನಾಜನೇಷ್ವವಹಿತಃ ಸುಹೃದನ್ತರಾತ್ಮಾ ॥೧೨॥

ಓ ಭಗವಂತನೇ! ನೀನು ಅದ್ವಿತೀಯನು ಮತ್ತು ಸಮಸ್ತಪ್ರಾಣಿಗಳ ಅಂತಃಕರಣದಲ್ಲಿರುವ ಪರಮಹಿತಕರನಾದ ಅಂತರ್ಯಾಮೀ–ಅಂತ ರಾತ್ಮನು. ದುರ್ಜನರಿಗೆ ಅಸಾಧ್ಯವಾಗಿರುವ 'ಭೂತದಯೆ' ಎಂಬ ಗುಣದಿಂದ ಅತ್ಯಂತಪ್ರಸನ್ನನಾಗುವವನು. ಆ ಭೂತದಯೆಯಿಂದ ಎಷ್ಟರಮಟ್ಟಿಗೆ ಪ್ರಸನ್ನನಾಗುವೆಯೋ–ಅಷ್ಟರಮಟ್ಟಿಗೆ ನಾನಾಕಾಮನೆಗಳಿಂದ ಬಗೆ-ಬಗೆಯ ಉಪಚಾರಗಳಿಂದ ನಿನ್ನನ್ನು ಆರಾಧಿಸುವ ದೇವತಾಗಣಗಳ ಪೂಜೆಯಿಂದಲೂ ನೀನು ಪ್ರಸನ್ನನಾಗುವುದಿಲ್ಲ.*

---

* ಬದ್ಧಕಾಮೈಃ = ಈ ಪದಕ್ಕೆ ಕಾಮನಿರೋಧಮಾಡಿದ ಅಥವಾ ಕಾಮನೆಗಳಿಗೆ ಕಟ್ಟುಬಿದ್ದಿರುವ–ಎಂದು ಎರಡು ಬಗೆಗಳಲ್ಲಿಯೂ ಅರ್ಥೈಸಬಹುದು. (ಶ್ಲೋಕ ೧೨)

ಪುಂಸಾಮತೋ ವಿವಿಧಕರ್ಮಭಿರಧ್ವರಾದ್ಯೈ-
ರ್ದಾನೇನ ಚೋಗ್ರತಪಸಾ ವ್ರತಚರ್ಯಯಾ ಚ ।
ಆರಾಧನಂ ಭಗವತಸ್ತವ ಸತಿ ಯಾರ್ಥೋ
ಧರ್ಮೋಽರ್ಪಿತಃ ಕರ್ಹಿಚಿದ್ಧ್ರಿಯತೇ ನ ಯತ್ರ ॥೧೩॥

ಯಾವ ಕರ್ಮಗಳು ನಿನಗೆ ಸಮರ್ಪಣೆಮಾಡಲ್ಪಡುತ್ತವೆಯೋ–ಅವುಗಳಿಗೆ ಎಂದಿಗೂ ನಾಶವಿಲ್ಲ. ಅವು ಅಕ್ಷಯವಾಗಿಬಿಡುತ್ತವೆ. ಆದುದರಿಂದ ಯಜ್ಞ, ದಾನ, ಉಗ್ರವಾದ ತಪಸ್ಸು–ಮುಂತಾದ ನಾನಾಪ್ರಕಾರವಾದ ಕರ್ಮಗಳ ಮೂಲಕ ನಿನ್ನ ಪ್ರಸನ್ನತೆಯನ್ನು ಪಡೆಯುವುದೇ ಸರ್ವೋತ್ತಮವಾದ ಕರ್ಮಫಲ. ಏಕೆಂದರೆ : ನಿನ್ನ ಪ್ರಸನ್ನತೆಯುಂಟಾದ ಬಳಿಕ ಯಾವ ಫಲವು ತಾನೇ ದುರ್ಲಭವಾಗುವುದು? ಕಾಮಪ್ರಾಪ್ತಿಯೇ ಕರ್ಮದ ಮುಖ್ಯಫಲವಲ್ಲ. ಅದು ಅವಾಂತರಫಲವಾದರೂ–ಅದು ನಶ್ವರವಾದುದರಿಂದ–ನಿನ್ನಲ್ಲಿ ಸಮರ್ಪಿಸಿದ ಕರ್ಮವೇ ಮೋಕ್ಷಕ್ಕೆ ಸಾಧನವಾಗುವುದು.

ಶಶ್ವತ್ಸ್ವರೂಪಮಹಸೈವ ನಿಪೀತಭೇದ-
ಮೋಹಾಯ ಬೋಧಧಿಷಣಾಯ ನಮಃ ಪರಸ್ಮೈ ।
ವಿಶ್ವೋದ್ಭವಸ್ಥಿತಿಲಯೇಷು ನಿಮಿತ್ತಲೀಲಾ-
ರಾಸಾಯ ತೇ ನಮ ಇದಂ ಚಕೃಮೇಶ್ವರಾಯ ॥೧೪॥

ನೀನು ಸದಾ ನಿನ್ನ ಸ್ವರೂಪಭೂತವಾದ ಪ್ರಕಾಶದಿಂದಲೇ ಪ್ರಾಣಿಗಳ ಭೇದಭ್ರಮರೂಪವಾದ* ಕತ್ತಲೆಯನ್ನು ನಾಶಪಡಿಸುವವನು. ವಿದ್ಯೆಯೆಂಬ ಜ್ಞಾನಸ್ವರೂಪವನ್ನು ಬೆಳಗಿಸುವವನು. ಜ್ಞಾನಕ್ಕೆ ಅಧಿಷ್ಠಾನವಾಗಿರುವ ಸಾಕ್ಷಾತ್ ಪರಮಪುರುಷನು. ಸಂಸಾರದ ಸೃಷ್ಟಿ-ಸ್ಥಿತಿ-ಲಯಗಳ ನಿಮಿತ್ತ

---

* ನಿಪೀತಭೇದಮೋಹಾಯ–ಕೇವಲವಾದ ಶುದ್ಧಾತ್ಮಸ್ವರೂಪದ, ಯಥಾರ್ಥವಾದ ಜ್ಞಾನದಿಂದ ದೇವ-ಮನುಷ್ಯಾದಿ ಭೇದಗಳೂ, ದೇಹಾತ್ಮಭ್ರಮೆಯೂ, ಜೀವನು ಸ್ವತಂತ್ರನೆಂಬ ಭ್ರಾಂತಿಯೂ ತೊಲಗುವುದು. (ವೀರರಾಘವೀಯ)

ಭೇದಮೋಹ ಎಂದರೆ : ೧) ಪರಮೇಶ್ವರನು ಪೂರ್ಣನಲ್ಲ–ಎಂಬ ಭಾವನೆ. ೨) ವಿಷ್ಣುವಿಗಿಂತಲೂ ದೊಡ್ಡವರಿದ್ದಾರೆಂಬ ಭಾವನೆ. ೩) ವಿಷ್ಣುವಿನ ಅವತಾರಗಳು ಬೇರೆ-ಬೇರೆ ಎನ್ನುವುದು. ೪) ಜೀವನು ಸ್ವತಂತ್ರನೆಂಬ ಭಾವನೆ. ೫) ಈಶ್ವರನೂ

ವಾಗಿ ನಡೆಯುವ ಮಾಯಾಲೀಲೆಯು ನಿನ್ನ ಆಟವೇ ಆಗಿದೆ. ಇಂತಹ ಪ್ರಭುವಾದ ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು.

ಯಸ್ಯಾವತಾರಗುಣಕರ್ಮವಿಡಮ್ಬನಾನಿ
ನಾಮಾನಿ ಯೇಽಸುವಿಗಮೇ ವಿವಶಾ ಗೃಣನ್ತಿ ।
ತೇ ನೈಕಜನ್ಮಜಮಲಂ ಸಹಸೈವ ಹಿತ್ವಾ
ಸಂಯಾನ್ತ್ಯಪಾವೃತಮೃತಂ ತಮಜಂ ಪ್ರಪದ್ಯೇ ॥೧೫॥

ಪ್ರಾಣವು ಹೋಗುವ ಸಮಯದಲ್ಲಿ ಯಾವ ಜನರು ನಿನ್ನ ಅವತಾರ, ಗುಣ ಮತ್ತು ಕರ್ಮಗಳನ್ನು ಸೂಚಿಸುವ–ವಾಸುದೇವ, ದೇವಕೀನಂದನ, ಸರ್ವಜ್ಞ, ಮುರಾರಿ–ಇನ್ನೂ ಮುಂತಾದ ನಾಮಗಳನ್ನು ಆಕಸ್ಮಿಕವಾಗಿಯೋ, ವಿವಶತೆಯಿಂದಲೋ ಉಚ್ಚರಿಸುವರೋ–ಅವರು ಅನೇಕ ಜನ್ಮಗಳ ಪಾಪಗಳನ್ನು ಒಡನೆಯೇ ಕಳೆದುಕೊಂಡು ಮಾಯೆಯೇ ಮುಂತಾದ ಆವರಣಗಳಿಂದ ರಹಿತವಾದ ಬ್ರಹ್ಮಪದವನ್ನು ಪಡೆಯುವರು. ಅಂತಹ ಅಜನೂ, ನಿತ್ಯನೂ, ಶಾಶ್ವತನೂ ಆದ ನಿನ್ನನ್ನು ಶರಣುಹೊಂದುತ್ತೇನೆ.

ಯೋ ವಾ ಅಹಂ ಚ ಗಿರಿಶಶ್ಚ ವಿಭುಃ ಸ್ವಯಂ ಚ
ಸ್ಥಿತ್ಯುದ್ಭವಪ್ರಲಯಹೇತವ ಆತ್ಮಮೂಲಮ್ ।
ಭಿತ್ತ್ವಾ ತ್ರಿಪಾದ್ವವೃಧ ಏಕ ಉರುಪ್ರರೋಹ-
ಸ್ತಸ್ಮೈ ನಮೋ ಭಗವತೇ ಭುವನದ್ರುಮಾಯ ॥೧೬॥

ಓ ಭಗವಂತನೇ! ವಿಶ್ವವೃಕ್ಷರೂಪನಾಗಿ ವಿರಾಜಿಸುತ್ತಿರುವ ನಿನಗೆ ನಮಸ್ಕಾರವು. ಜಗತ್ತಿನ ಸೃಷ್ಟಿ, ಲಯ ಮತ್ತು ಸ್ಥಿತಿಗಳಿಗೆ ಕಾರಣರಾದ ನಾನೂ, ರುದ್ರನೂ ಮತ್ತು ಸ್ವಯಂ ನೀನೂ–ಎಂಬ ತ್ರಿಮೂರ್ತಿಗಳು ಅದರ

ಜೀವವೆಂಬ ಭಾವನೆ. ೬) ಜೀವೇಶ್ವರರಿಗೂ–ಜಡಕ್ಕೂ ಭೇದವಿಲ್ಲವೆಂಬ ಭಾವನೆ–ಈ ಆರಕ್ಕೂ ಭೇದಮೋಹವೆಂದು ಹೆಸರು. ಇದು ಶ್ರೀಭಗವಂತನಲ್ಲಿ ಇಲ್ಲ. ಭಗವದ್ಭಕ್ತರಲ್ಲೂ ಇದು ಇರಬಾರದು. "ಈಶಸ್ಯಾಪೂರ್ಣತಾಜ್ಞಾನಂ ವಿಷ್ಣೋರನ್ಯಸ್ಯ ಚೇಶತಾ । ಭೇದಸ್ತಸ್ಯಾವತಾರೇಷು ಜೀವಸ್ಯೇಶತ್ವಮೇವ ಚ ॥ ತಥಾ ಜೀವತ್ವ ಮೀಶಸ್ಯ ಜಡಾಭೇದಸ್ತಯೋರಪಿ । ಭೇದಮೋಹ ಇತಿ ಪ್ರೋಕ್ತಃ ಸ ಸದಾ ನ ಹರೇಃ ಕ್ವಚಿತ್ । ಅನ್ಯೇಷಾಂ ತತ್ಪ್ರಸಾದೇನ ಶನೈರ್ಯಾತಿ ಸತಾಮಪಿ ॥" (ಶ್ಲೋಕ ೧೪)

ಮೂರು ಮಹಾಶಾಖೆಗಳು. ಪ್ರಜಾಪತಿಗಳು, ಮನುಗಳು ಮುಂತಾದವರು ಇದರ ಕಿರುಗೊಂಬೆಗಳು. ಇದರ ಮೂಲವಾದರೋ* ನೀನೇ ಆಗಿದ್ದೀಯೆ. ಹೀಗೆ ಮೂಲಪ್ರಕೃತಿಯನ್ನು ಸ್ವೀಕರಿಸಿ, ತ್ರಿಗುಣಾತ್ಮಕವಾಗಿ ವಿಭಾಗಿಸಿಕೊಂಡು, ವಿಸ್ತಾರವಾಗಿ ಹಬ್ಬಿಕೊಂಡಿರುವ ವಿಶ್ವವೃಕ್ಷರೂಪನಾದ ನಿನಗೆ ನಮೋ ನಮಃ.

ಲೋಕೋ ವಿಕರ್ಮನಿರತಃ ಕುಶಲೇ ಪ್ರಮತ್ತಃ
ಕರ್ಮಣ್ಯಯಂ ತ್ವದುದಿತೇ ಭವದರ್ಚನೇ ಸ್ವೇ ।
ಯಸ್ತಾವದಸ್ಯ ಬಲವಾನಿಹ ಜೀವಿತಾಶಾಂ
ಸದ್ಯಶ್ಛಿನತ್ತ್ಯನಿಮಿಷಾಯ ನಮೋಽಸ್ತು ತಸ್ಮೈ ॥೧೭॥

ಪ್ರಭೋ! ಭಗವಂತನಾದ ನಿನ್ನ ಆರಾಧನೆಯೇ ಜನರಿಗೆ ಅತ್ಯಂತ ಕಲ್ಯಾಣಕರವಾದ ಸ್ವಧರ್ಮ–ಎಂದು ನೀನು ಸಾರಿದ್ದೀಯೆ. ಆದರೂ ಅವರು ಈ ವಿಷಯದಲ್ಲಿ ಉದಾಸೀನರಾಗಿ ಸದಾ ನಿಷಿದ್ಧವಾದ ಕರ್ಮಗಳಲ್ಲಿಯೇ ತೊಡಗಿರುತ್ತಾರೆ. ಹೀಗೆ ಅಸಾವಧಾನವಾಗಿರುವ ಜೀವಗಳ ಬದುಕುವ ಆಶೆಯನ್ನು ಸದಾ ಸಾವಧಾನವಾಗಿದ್ದುಕೊಂಡು ಶೀಘ್ರಾತಿಶೀಘ್ರವಾಗಿ ಕತ್ತರಿಸಿಹಾಕುತ್ತಿರುವ ಮಹಾಬಲಶಾಲಿಯಾದ ಕಾಲವೂ ನಿನ್ನ ರೂಪವೇ ಆಗಿದೆ. ಅಂತಹ ಮಹಾಕಾಲರೂಪನಾದ ನಿನಗೆ ನಮಸ್ಕಾರವು.

ಯಸ್ಮಾದ್ಬಿಭೇಮ್ಯಹಮಪಿ ದ್ವಿಪರಾರ್ಧಧಿಷ್ಣ್ಯ-
ಮಧ್ಯಾಸಿತಃ ಸಕಲಲೋಕನಮಸ್ಕೃತಂ ಯತ್ ।
ತೇಪೇ ತಪೋ ಬಹುಸವೋಽವರುರುತ್ಸಮಾನ-
ಸ್ತಸ್ಮೈ ನಮೋ ಭಗವತೇಽಧಿಮಖಾಯ ತುಭ್ಯಮ್ ॥

ಎರಡು ಪರಾರ್ಧಗಳ ಕಾಲದವರೆಗೆ ಇರುತ್ತಾ ಸಮಸ್ತಲೋಕ

---

* ಆತ್ಮಮೂಲಂ = ಪರಮಾತ್ಮನೇ ಜಗತ್ತೆಂಬ ವೃಕ್ಷಕ್ಕೆ ಮೂಲನು. "ಸನ್ಮೂಲಾಃ ಖಲು ಸೌಮ್ಯ ಇಮಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ ।"

ತ್ರಿಪಾತ್=ಅನಂತಾಸನ, ವೈಕುಂಠ ಮತ್ತು ಕ್ಷೀರಸಮುದ್ರ–ಇವುಗಳಲ್ಲಿರುವುದರಿಂದ ಶ್ರೀಹರಿಯು ತ್ರಿಪಾತ್ ಎನಿಸುತ್ತಾನೆ. "ಅನನ್ತಾಸನ-ವೈಕುಣ್ಠ-ಕ್ಷೀರಾಬ್ಧಿಸ್ಥೋ ಹರಿಸ್ತ್ರಿಪಾತ್ ।" (ವಿಜಯಧ್ವಜೀಯ) (ಶ್ಲೋಕ ೧೬)

ಗಳಿಂದಲೂ ನಮಸ್ಕರಿಸಲ್ಪಡುತ್ತಿರುವ, ಸತ್ಯಲೋಕಕ್ಕೆ ಅಧಿಪತಿಯಾಗಿರುವ ನಾನೂ ನಿನ್ನ ಆ ಕಾಲರೂಪಕ್ಕೆ ಹೆದರುತ್ತೇನೆ. ಅದನ್ನು ತಪ್ಪಿಸಿಕೊಂಡು ನಿನ್ನನ್ನು ಹೊಂದುವುದಕ್ಕೋಸ್ಕರ ಇಷ್ಟು ಕಾಲ ತಪಸನ್ನಾಚರಿಸಿದ್ದೇನೆ. ಅಧಿಯಜ್ಞರೂಪದಲ್ಲಿರುವ ನೀನೇ ಈ ತಪಸ್ಸಿಗೆ ಸಾಕ್ಷಿಯಾಗಿದ್ದೀಯೆ. ನಿನಗೆ ನಮೋ ನಮಃ.

ತಿರ್ಯಙ್ಮನುಷ್ಯವಿಬುಧಾದಿಷು ಜೀವಯೋನಿ-
ಷ್ವಾತ್ಮೇಚ್ಛಯಾತ್ಮಕೃತಸೇತುಪರೀಪ್ಸಯಾ ಯಃ ।
ರೇಮೇ ನಿರಸ್ತರತಿರಪ್ಯವರುದ್ಧದೇಹ-
ಸ್ತಸ್ಮೈ ನಮೋ ಭಗವತೇ ಪುರುಷೋತ್ತಮಾಯ ॥೧೯॥

ಸ್ವಾಮಿನ್! ನೀನು ಪೂರ್ಣಕಾಮನು. ಯಾವ ವಿಷಯಸುಖದ ಇಚ್ಛೆಯೂ ಇಲ್ಲದವನು. ಆದರೂ ನೀನೇ ನಿರ್ಮಿಸಿದ ಧರ್ಮಸೇತುವನ್ನು ಸಂರಕ್ಷಿಸುವುದಕ್ಕಾಗಿ ನೀನು ಪಶು-ಪಕ್ಷಿ, ಮನುಷ್ಯರು, ದೇವತೆಗಳು ಮುಂತಾದ ಜೀವಯೋನಿಗಳಲ್ಲಿ ಸ್ವೇಚ್ಛೆಯಿಂದ ಶರೀರಗಳನ್ನು ಧರಿಸಿ ಅನೇಕ ಲೀಲೆಗಳನ್ನು ಆಚರಿಸಿದ್ದೀಯೆ. ಇಂತಹ *ಪುರುಷೋತ್ತಮ–ಭಗವಂತನಾದ ನಿನಗೆ ನಮಸ್ಕಾರವು.

ಯೋಽವಿದ್ಯಯಾನುಪಹತೋಽಪಿ ದಶಾರ್ಧವೃತ್ತ್ಯಾ
ನಿದ್ರಾಮುವಾಹ ಜಠರೀಕೃತಲೋಕಯಾತ್ರಃ ।
ಅನ್ತರ್ಜಲೇಽಹಿಕಶಿಪುಸ್ಪರ್ಶಾನುಕೂಲಾಂ
ಭೀಮೋರ್ಮಿಮಾಲಿನಿ ಜನಸ್ಯ ಸುಖಂ ವಿವೃಣ್ವನ್ ॥೨೦॥

ಪ್ರಭೋ! ನೀನು ಅಜ್ಞಾನದ ಲವಲೇಶವೂ ಇಲ್ಲದವನು. ನಿದ್ರೆಗೆ ಕಾರಣವಾದ ಅವಿದ್ಯೆಯೇ ಮುಂತಾದ ಐದು ವೃತ್ತಿಗಳುಳ್ಳ[1] ಅಜ್ಞಾನಕ್ಕೆ

---

* ಕ್ಷರಪುರುಷ–ನಾಶಹೊಂದುವ ಸಮಸ್ತಭೂತಗಳು. ಅಕ್ಷರಪುರುಷ–ನಾಶರಹಿತನಾದ ಕೂಟಸ್ಥ. ಇವೆರಡನ್ನೂ ಮೀರಿ ಇವೆರಡಕ್ಕಿಂತಲೂ ಉತ್ತಮನಾಗಿರುವುದರಿಂದ ಶ್ರೀಭಗವಂತನಿಗೆ ಪುರುಷೋತ್ತಮನೆಂದು ಹೆಸರು. (ಶ್ಲೋಕ ೧೯)

1 ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ–ಎಂಬ ಐದೂ (ಅಜ್ಞಾನದ) ವೃತ್ತಿಗಳು, ಪಂಚಕ್ಲೇಶಗಳು ಅಥವಾ ಪಂಚಪರ್ವಗಳು. (ಶ್ಲೋಕ ೨೦)

ಸ್ವಲ್ಪವೂ ವಶಪಡದವನು. ಆದರೂ ಇಡೀ ವಿಶ್ವವನ್ನು ಉದರದಲ್ಲಿ ಅಡಗಿಸಿ ಕೊಂಡು ಭಯಂಕರವಾದ ಅಲೆಗಳ ಮಾಲೆಗಳಿಂದ ಕ್ಷೋಭೆಗೊಂಡ ಪ್ರಲಯ ಜಲರಾಶಿಯಲ್ಲಿ ಆದಿಶೇಷಸರ್ಪವೆಂಬ ಕೋಮಲವಾದ ಹಾಸಿಗೆಯಲ್ಲಿ ಪವಡಿಸಿದ್ದೀಯೆ. ನಿದ್ರಾಕಾರಣವಿಲ್ಲದವನಿಗೆ ಏಕೆ ಈ ನಿದ್ರೆಯ ಮುದ್ರೆ?–ಎಂದರೆ : ಅಜ್ಞಾನಿಗಳು ಮಾಡುವ ನಿದ್ರೆಯಸುಖ ಇಂತಹುದು ಎಂದು ವಿಡಂಬನೆಮಾಡುವುದಕ್ಕಾಗಿ ಅಥವಾ ಹಿಂದಿನ ಕಲ್ಪದ ಕರ್ಮಪರಂಪರೆ ಯನ್ನು ಅನುಭವಿಸಿ ಆಯಾಸಗೊಂಡಿರುವ ಅನಂತಜೀವರಾಶಿಗಳಿಗೆ ವಿಶ್ರಾಂತಿಸುಖವನ್ನು ಕೊಡಲಿಕ್ಕಾಗಿ.

ಯನ್ನಾಭಿಪದ್ಮಭವನಾದಹಮಾಸಮೀಡ್ಯ
ಲೋಕತ್ರಯೋಪಕರಣೋ ಯದನುಗ್ರಹೇಣ ।
ತಸ್ಮೈ ನಮಸ್ತ ಉದರಸ್ಥಭವಾಯ ಯೋಗ–
ನಿದ್ರಾವಸಾನವಿಕಸನ್ನಲಿನೇಕ್ಷಣಾಯ ॥೨೧॥

ಎಲೈ ಸ್ತುತಿಯೋಗ್ಯನಾದ ಸ್ವಾಮಿಯೇ! ನಿನ್ನ ಅನುಗ್ರಹದಿಂದಲೇ ನಾನು ಮೂರು ಲೋಕಗಳನ್ನೂ ಸೃಷ್ಟಿಮಾಡಿ ಉಪಕರಿಸುವ ಸಾಮರ್ಥ್ಯ ವನ್ನು ಪಡೆದು ನಿನ್ನ ನಾಭಿಪದ್ಮವೆಂಬ ಮನೆಯಲ್ಲಿ ಜನಿಸಿದ್ದೇನೆ. ಸಮಸ್ತ ವಿಶ್ವವೂ ನಿನ್ನ ಉದರದಲ್ಲಿ ಅಡಗಿದೆ. ಈಗ ಯೋಗನಿದ್ರೆಯು ಮುಗಿಯುವ ವೇಳೆಯಲ್ಲಿ ಅರಳುತ್ತಿರುವ ತಾವರೆಯಂತಹ ಕಣ್ಣುಗಳಿಂದ ಕಂಗೊಳಿಸು ತ್ತಿರುವ ನಿನಗೆ ನಮಸ್ಕಾರಗಳು.

ಸೋಽಯಂ ಸಮಸ್ತಜಗತಾಂ ಸುಹೃದೇಕ ಆತ್ಮಾ
ಸತ್ತ್ವೇನ ಯನ್ಮೃಡಯತೇ ಭಗವಾನ್ಭಗೇನ ।
ತೇನೈವ ಮೇ ದೃಶಮನುಸ್ಪೃಶತಾದ್ಯಥಾಹಂ
ಸ್ರಕ್ಷ್ಯಾಮಿ ಪೂರ್ವವದಿದಂ ಪ್ರಣತಪ್ರಿಯೋಽಸೌ ॥೨೨॥

ಪ್ರತ್ಯುಪಕಾರದ ಅಪೇಕ್ಷೆಯಿಲ್ಲದೇ–ಇಡೀ ಜಗತ್ತಿಗೇ ಉಪಕಾರ ಮಾಡುವ ಏಕೈಕಮಿತ್ರನೂ, ಏಕೈಕಜಗದಾತ್ಮನೂ, ಶರಣ್ಯನೂ ಮತ್ತು ಭಕ್ತಪ್ರಿಯನೂ ಆಗಿರುವ ನಿನಗೆ ನಮಸ್ಕಾರವು. ಹಿಂದಿನ ಕಲ್ಪದಲ್ಲಿ ಹೇಗಿತ್ತೋ ಹಾಗೆಯೇ ಈ ಜಗತ್ತನ್ನು ಸೃಷ್ಟಿಸಲು ಬಯಸಿದ್ದೇನೆ. ಅದಕ್ಕೆ ಬೇಕಾದ ಬುದ್ಧಿಯನ್ನು ಅನುಗ್ರಹಿಸು. ಯಾವ ಜ್ಞಾನ ಮತ್ತು ಐಶ್ವರ್ಯ

ಗಳಿಂದ ವಿಶ್ವಕ್ಕೆ ಆನಂದವನ್ನು ತುಂಬುತ್ತಿರುವೆಯೋ–ಅದು ನನ್ನ ಬುದ್ಧಿಯಲ್ಲಿ ಸೇರಿಕೊಳ್ಳುವಂತೆ ಮಾಡು, ಸ್ವಾಮಿ!

ಏಷ ಪ್ರಪನ್ನವರದೋ ರಮಯಾತ್ಮಶಕ್ತ್ಯಾ
ಯದ್ಯತ್ಕರಿಷ್ಯತಿ ಗೃಹೀತಗುಣಾವತಾರಃ ।
ತಸ್ಮಿನ್ಸ್ವವಿಕ್ರಮಮಿದಂ ಸೃಜತೋಽಪಿ ಚೇತೋ
ಯುಞ್ಜೀತ ಕರ್ಮಶಮಲಂ ಚ ಯಥಾ ವಿಜಹ್ಯಾಮ್ ॥

ಶರಣಾಗತರಿಗೆ ವರಗಳನ್ನು ನೀಡುವ ವರೇಣ್ಯನಾದ ಶ್ರೀಪತಿಯೇ! ನಿನ್ನ ಶಕ್ತಿಸ್ವರೂಪಳೇ ಆಗಿರುವ ಲಕ್ಷ್ಮೀದೇವಿಯಿಂದೊಡಗೂಡಿ ಅನೇಕ ಗುಣಾವತಾರಗಳನ್ನು ಮಾಡಿ ಹಲವಾರು ಅದ್ಭುತಕರ್ಮಗಳನ್ನು ಎಸಗುತ್ತಿರುವೆ. ಈ ಜಗತ್ಸೃಷ್ಟಿಯ ಉದ್ಯಮವೂ ಅವುಗಳಲ್ಲಿ ಒಂದಾಗಿದೆ. ಆದ್ದರಿಂದ ಈ ಸೃಷ್ಟಿಸಮಯದಲ್ಲಿ ನನ್ನ ಚಿತ್ತಕ್ಕೆ ಪ್ರೇರಣೆಯನ್ನು ನೀಡು ; ಅದಕ್ಕೆ ಶಕ್ತಿಯನ್ನು ತುಂಬು. ನಾನೇ ಸೃಷ್ಟಿಯನ್ನು ಮಾಡುವವನು ಎಂಬ ಅಭಿಮಾನದಿಂದಲೂ ಕರ್ಮಶಕ್ತಿಗಳ ವೈಷಮ್ಯದಿಂದಲೂ ಉಂಟಾಗುವ ಕಶ್ಮಲವು ಅದಕ್ಕೆ ಸೇರದಂತೆ ಅನುಗ್ರಹಮಾಡು.

ನಾಭಿಹ್ರದಾದಿಹ ಸತೋಽಮ್ಭಸಿ ಯಸ್ಯ ಪುಂಸೋ
ವಿಜ್ಞಾನಶಕ್ತಿರಹಮಾಸಮನನ್ತಶಕ್ತೇಃ ।
ರೂಪಂ ವಿಚಿತ್ರಮಿದಮಸ್ಯ ವಿವೃಣ್ವತೋ ಮೇ
ಮಾ ರೀರಿಷೀಷ್ಟ ನಿಗಮಸ್ಯ ಗಿರಾಂ ವಿಸರ್ಗಃ ॥೨೪॥

ಈ ಪ್ರಳಯಜಲರಾಶಿಯಲ್ಲಿ ಶಯನಿಸಿರುವ ಅನಂತಶಕ್ತಿಯಾದ ನಿನ್ನ ನಾಭಿಕಮಲದಿಂದ ಜನಿಸಿರುವ ನಾನು ನಿನ್ನ ವಿಜ್ಞಾನಶಕ್ತಿಯೇ ಆಗಿದ್ದೇನೆ. ಮಹತ್ತತ್ತ್ವದ ಅಭಿಮಾನಿದೇವತೆಯೇ ಆಗಿದ್ದೇನೆ. ಆದುದರಿಂದ ಜಗತ್ತಿನ ವಿಚಿತ್ರರೂಪವನ್ನು ವಿಸ್ತರಿಸುವಾಗ ನನ್ನ ವೇದವಾಣಿಯ ಉಚ್ಚಾರಣೆಯು ಲುಪ್ತವಾಗದಂತೆ ಅನುಗ್ರಹಮಾಡು.

ಸೋಽಸಾವದಭ್ರಕರುಣೋ ಭಗವಾನ್ವಿವೃದ್ಧ-
ಪ್ರೇಮಸ್ಮಿತೇನ ನಯನಾಮ್ಬುರುಹಂ ವಿಜೃಮ್ಭನ್ ।
ಉತ್ಥಾಯ ವಿಶ್ವವಿಜಯಾಯ ಚ ನೋ ವಿಷಾದಂ
ಮಾಧ್ವ್ಯಾ ಗಿರಾಪನಯತಾತ್ಪುರುಷಃ ಪುರಾಣಃ ॥೨೫॥

ನೀನು ಪರಮಕರುಣಾಪೂರ್ಣನಾದ ಪುರಾಣಪುರುಷನು. ಪ್ರೇಮ ಪ್ರವಾಹವನ್ನು ಸೂಸುವ, ಕಿರುನಗೆಯಿಂದ ಶೋಭಿಸುತ್ತಿರುವ ಕಮಲಸದೃಶ ವಾದ ಕಣ್ಣುಗಳನ್ನು ತೆರೆದು ವಿಶ್ವಸೃಷ್ಟಿಯ ವಿಜಯಕ್ಕಾಗಿ ಎದ್ದು ಸವಿನುಡಿ ಗಳಿಂದ ನನ್ನ ವಿಷಾದವನ್ನು ತೊಡೆದುಹಾಕುವವನಾಗು."

ಮೈತ್ರೇಯರು ಹೇಳುತ್ತಾರೆ :

ವಿದುರನೇ! ಬ್ರಹ್ಮದೇವರು ಹೀಗೆ ತಪಸ್ಸು, ಜ್ಞಾನ ಮತ್ತು ಸಮಾಧಿಗಳಿಂದ ತನ್ನ ಹುಟ್ಟಿಗೆ ಕಾರಣನಾದ ನಾರಾಯಣನನ್ನು ಕಂಡು ಕೊಂಡು ತಮ್ಮ ಮನಸ್ಸು ಮತ್ತು ಮಾತುಗಳ ಶಕ್ತ್ಯನುಸಾರ ಆತನನ್ನು ಸ್ತೋತ್ರಮಾಡಿ ಆಯಾಸಗೊಂಡವರಂತೆ ಮೌನವನ್ನು ತಾಳಿದರು. ತನ್ನ ಪುತ್ರನಿಗೆ ಪ್ರಳಯಕಾಲದ ಜಲರಾಶಿಯನ್ನು ಕಂಡು ತಂಬಾ ಗಾಬರಿ ಯಾಗಿದೆ; ಸೃಷ್ಟಿಯ ವಿಷಯದಲ್ಲಿ ನಿಶ್ಚಯವಾದ ವಿಚಾರವು ಹೊಳೆಯದೇ ಆತನ ಚಿತ್ತಕ್ಕೆ ತುಂಬಾ ಕಳವಳವುಂಟಾಗಿದೆ–ಎಂಬುದನ್ನು ಪ್ರಭುವಾದ ಮಧುಸೂದನನು ಕಂಡುಕೊಂಡನು. ಆತನ ಆಶಯವನ್ನು ಅರಿತು ಭಗವಂತನು ತನ್ನ ಗಂಭೀರವಾದ ವಾಣಿಯಿಂದ ಆತನ ಖೇದವನ್ನು ಶಮನಗೊಳಿಸುತ್ತಾ ಹೀಗೆಂದನು : (ಶ್ಲೋಕ ೨೬-೨೮)

ಮಾ ವೇದಗರ್ಭ ಗಾಸ್ತನ್ದ್ರೀಂ ಸರ್ಗ ಉದ್ಯಮಮಾವಹ ।
ತನ್ಮಯಾಪಾದಿತಂ ಹ್ಯಗ್ರೇ ಯನ್ಮಾಂ ಪ್ರಾರ್ಥಯತೇ ಭವಾನ್ ॥

ಭೂಯಸ್ತ್ವಂ ತಪ ಆತಿಷ್ಠ ವಿದ್ಯಾಂ ಚೈವ ಮದಾಶ್ರಯಾಮ್ ।
ತಾಭ್ಯಾಮನ್ತರ್ಹೃದಿ ಬ್ರಹ್ಮನ್ ಲೋಕಾನ್ದ್ರಕ್ಷ್ಯಸ್ಯಪಾವೃತಾನ್ ॥

ತತ ಆತ್ಮನಿ ಲೋಕೇ ಚ ಭಕ್ತಿಯುಕ್ತಃ ಸಮಾಹಿತಃ ।
ದ್ರಷ್ಟಾಸಿ ಮಾಂ ತತಂ ಬ್ರಹ್ಮನ್ಮಯಿ ಲೋಕಾಂಸ್ತ್ವಮಾತ್ಮನಃ ॥೩೧॥

"ವತ್ಸ, ವೇದಗರ್ಭನೇ! ನೀನು ಹೀಗೆ ವಿಷಾದಗೊಂಡು ಅಲಸಿಕೆ ಹೊಂದಬೇಡ. ಸೃಷ್ಟಿವಿಷಯದಲ್ಲಿ ಪ್ರಯತ್ನಮಾಡು. ನೀನು ಏನನ್ನು ಬೇಕೆಂದು ಪ್ರಾರ್ಥಿಸಿದೆಯೋ–ಆ ಜ್ಞಾನವನ್ನು ನಿನಗೆ ಈ ಮೊದಲೇ ಕೊಟ್ಟಿದ್ದಾಗಿದೆ. ಅದು ಎಚ್ಚರಗೊಳ್ಳುವುದಕ್ಕಾಗಿ ಈಗ ನೀನು ಮತ್ತೊಮ್ಮೆ ತಪಸ್ಸನ್ನಾಚರಿಸು. ಭಗವತ್ಸಂಬಂಧವಾದ ಜ್ಞಾನವನ್ನು ಪಡೆದುಕೋ. ಆಗ

ನಿನಗೆ ಮರೆಯಾಗಿರುವ ಲೋಕಗಳೆಲ್ಲವೂ ನಿನ್ನ ಅಂತಃಕರಣದಲ್ಲಿಯೇ ಕಾಣುವುವು. ಮತ್ತೆ ಭಕ್ತಿಯುಕ್ತನಾಗಿ ಏಕಾಗ್ರಚಿತ್ತನಾದ ನೀನು—ನಾನು ನಿನ್ನ ಲ್ಲಿಯೂ ಮತ್ತು ಸಮಸ್ತಲೋಕಗಳಲ್ಲಿಯೂ ವ್ಯಾಪಿಸಿರುವುದನ್ನೂ ಮತ್ತು ನೀನೂ ಮತ್ತು ಸಮಸ್ತಲೋಕಗಳೂ ನನ್ನಲ್ಲಿ ಅಡಗಿರುವುದನ್ನೂ—ಕಾಣುವೆ.

ಯದಾ ತು ಸರ್ವಭೂತೇಷು ದಾರುಷ್ವಗ್ನಿಮಿವ ಸ್ಥಿತಮ್ ।
ಪ್ರತಿಚಕ್ಷೀತ ಮಾಂ ಲೋಕೋ ಜಹ್ಯಾತ್ತರ್ಹ್ಯೇವ ಕಶ್ಮಲಮ್ ॥೩೨॥

ಯದಾ ರಹಿತಮಾತ್ಮಾನಂ ಭೂತೇನ್ದ್ರಿಯಗುಣಾಶಯೈಃ ।
ಸ್ವರೂಪೇಣ ಮಯೋಪೇತಂ ಪಶ್ಯನ್ಸ್ವಾರಾಜ್ಯಮೃಚ್ಛತಿ ॥೩೩॥

ಜೀವನು—ಕಟ್ಟಿಗೆಯಲ್ಲಿ ಬೆಂಕಿಯು ಅಡಗಿ ವ್ಯಾಪಿಸಿಕೊಂಡಿರುವಂತೆ—ನಾನು ಸಮಸ್ತಭೂತಗಳಲ್ಲಿಯೂ ಅಡಗಿ ವ್ಯಾಪಿಸಿಕೊಂಡಿರುವುದನ್ನು ಯಾವಾಗ ಸಾಕ್ಷಾತ್ಕರಿಸುವನೋ—ಆಗಲೇ ಅವನಿಗೆ ಅಜ್ಞಾನರೂಪವಾದ ಕಶ್ಮಲವು ಕಳೆದುಹೋಗುವುದು. ತಾನು—ಭೂತಗಳು, ಇಂದ್ರಿಯಗಳು, ಗುಣಗಳು ಮತ್ತು ಅಂತಃಕರಣ—ಇವುಗಳಿಂದ ರಹಿತನಾಗಿ ಸ್ವಸ್ವರೂಪದಿಂದ ನನ್ನಲ್ಲಿ ಸೇರಿರುವುದನ್ನು ಕಂಡಾಗ ಆತನು ಮೋಕ್ಷವನ್ನು ಪಡೆಯುವನು.*

ನಾನಾಕರ್ಮವಿತಾನೇನ ಪ್ರಜಾ ಬಹ್ವೀಃ ಸಿಸೃಕ್ಷತಃ ।
ನಾತ್ಮಾವಸೀದತ್ಯಸ್ಮಿಂಸ್ತೇ ವರ್ಷೀಯಾನ್ಮದನುಗ್ರಹಃ ॥೩೪॥

---

* ದೇಹಾದಿಗಳಲ್ಲಿ ಆತ್ಮಭಾವನೆಯನ್ನು ತೊರೆದು ಹೃದಯದಲ್ಲಿರುವ ಜೀವಸ್ವರೂಪದಲ್ಲಿಯೇ ಆತ್ಮಭಾವವನ್ನು ಕಂಡು, ಹೃದಯದಲ್ಲಿ ಸ್ವರೂಪವಾಗಿರುವ ಅಂದರೆ : ಬಿಂಬಸ್ವರೂಪನಾಗಿರುವ ನನ್ನ ಬಳಿ ಸೇರಿ ಪಾದಾಬ್ಜಭಕ್ತನೆಂದು ತನ್ನನ್ನು ಯಾವನು ಅಪರೋಕ್ಷಜ್ಞಾನದಿಂದ ಕಂಡುಕೊಳ್ಳುತ್ತಾನೆಯೋ—ಅವನೇ ಸ್ವರೂಪಾನಂದವನ್ನು ಅನುಭವಿಸುತ್ತಾನೆ. ಮುಕ್ತನಾಗುತ್ತಾನೆ. **"ತ್ಯಕ್ತ್ವಾ ದೇಹಾದ್ಯಾತ್ಮಭಾವಂ ಜೀವರೂಪೇ ಹೃದಿ ಸ್ಥಿತೇ । ದೃಷ್ಟ್ವಾತ್ಮಭಾವಂ ತಂ ಚಾಪಿ ಹರಿಪಾದಾಬ್ಜಸಂಸ್ಥಿತಮ್ । ಯದಾ ಪಶ್ಯತ್ಯಾಪರೋಕ್ಷ್ಯಾತ್ ತದಾ ಮುಕ್ತಿಂ ವ್ರಜತ್ಯಸೌ ॥"** (ವಿಜಯಧ್ವಜೀಯ)

ಭೂತೇಂದ್ರಿಯಾದಿಗಳಿಂದ ರಹಿತನಾದ ಜೀವಾತ್ಮನಿಗೆ ನಾನೇ ಧಾರಕನೆಂದೂ ಆ ಜೀವನು ನನಗೆ ಧಾರ್ಯನೆಂದೂ ಸಾಕ್ಷಾತ್ಕರಿಸಿಕೊಂಡು ಕರ್ಮಬಂಧನದಿಂದ ಬಿಡುಗಡೆ ಹೊಂದುವನು. (ವೀರರಾಘವೀಯ)

ಭೂತಾದಿವಿರಹಿತನಾಗಿ ಶುದ್ಧ ('ತ್ವಂ') ಪದಾರ್ಥವಾಗಿರುವ ಜೀವವನ್ನು ತನಗೆ

ಋಷಿಮಾದ್ಯಂ ನ ಬಧ್ನಾತಿ ಪಾಪೀಯಾಂಸ್ತ್ವಾಂ ರಜೋಗುಣಃ ।
ಯನ್ಮನೋ ಮಯಿ ನಿರ್ಬದ್ಧಂ ಪ್ರಜಾಃ ಸಂಸೃಜತೋಽಪಿ ತೇ ॥೩೫॥

ನಿನ್ನ ಮೇಲೆ ನನ್ನ ಪೂರ್ಣವಾದ ಅನುಗ್ರಹವಿದೆ. ಆದುದರಿಂದ ನಾನಾಪ್ರಕಾರವಾದ ಕರ್ಮಸಂಸ್ಕಾರಗಳಿಗೆ ಅನುಗುಣವಾಗಿ ಅನೇಕಪ್ರಕಾರಗಳಾದ ಜೀವಗಳನ್ನು ಸೃಷ್ಟಿಸಲು ಬಯಸಿದರೂ ನಿನ್ನ ಮನಸ್ಸಿಗೆ ಕೊಂಚವೂ ಬೇಸರವಾಗುವುದಿಲ್ಲ. ಮೋಹವೂ ಅಂಟುವುದಿಲ್ಲ. ಇಷ್ಟೆಲ್ಲಾ ಪ್ರಜೆಗಳನ್ನು ಸೃಷ್ಟಿಮಾಡುತ್ತಿದ್ದರೂ ನಿನ್ನ ಮನಸ್ಸು ನನ್ನಲ್ಲಿ ನೆಟ್ಟಿರುವುದರಿಂದ ಪಾಪಿಷ್ಠವಾದ ರಜೋಗುಣವು ನಿನ್ನನ್ನು ಕಟ್ಟಿಹಾಕುವುದಿಲ್ಲ. ನೀನು ಆದಿಋಷಿಯು ಮಂತ್ರದ್ರಷ್ಟಾರರಲ್ಲಿ ಮೊದಲಿಗನು.

ಜ್ಞಾತೋಽಹಂ ಭವತಾ ತ್ವದ್ಯ ದುರ್ವಿಜ್ಞೇಯೋಽಪಿ ದೇಹಿನಾಮ್ ।
ಯನ್ಮಾಂ ತ್ವಂ ಮನ್ಯಸೇಽಯುಕ್ತಂ ಭೂತೇನ್ದ್ರಿಯಗುಣಾತ್ಮಭಿಃ ॥

ವತ್ಸ! ನಾನು–ಭೂತಗಳು, ಇಂದ್ರಿಯಗಳು, ಗುಣಗಳು ಮತ್ತು ಅಂತಃಕರಣಗಳು–ಇವುಗಳಿಂದ ರಹಿತನಾಗಿರುವೆನೆಂದು ನೀನು ತಿಳಿದುಕೊಂಡಿರುವೆಯಲ್ಲವೇ? ಆದ್ದರಿಂದ ಸಾಮಾನ್ಯದೇಹಿಗಳಿಗೆ ತಿಳಿಯಲು ಅತಿ ಕಷ್ಟವಾಗಿರುವ ನನ್ನ ನಿಜಸ್ವರೂಪವು ನಿನಗೆ ಗೋಚರವಾಗಿದೆಯೆಂಬುದರಲ್ಲಿ ಸಂಶಯವಿಲ್ಲ.

ತುಭ್ಯಂ ಮದ್ವಿಚಿಕಿತ್ಸಾಯಾಮಾತ್ಮಾ ಮೇ ದರ್ಶಿತೋಽಬಹಿಃ ।
ನಾಲೇನ ಸಲಿಲೇ ಮೂಲಂ ಪುಷ್ಕರಸ್ಯ ವಿಚಿನ್ವತಃ ॥೩೭॥

‘ನನಗೆ ಆಶ್ರಯವಾದ ಬೇರೊಂದು ಪದಾರ್ಥ ಇದೆಯೋ ಇಲ್ಲವೋ?’–ಎಂಬ ಸಂದೇಹದಿಂದ ನೀನು ಕಮಲನಾಳದ ಮೂಲಕ ಜಲದಲ್ಲಿ ಪ್ರವೇಶಿಸಿ ಅದರ ಮೂಲವನ್ನು ಹುಡುಕುತ್ತಿದ್ದೆ. ಅದಕ್ಕಾಗಿ ನಾನು ನಿನಗೆ ನನ್ನ ಈ ಸ್ವರೂಪವನ್ನು ನಿನ್ನ ಅಂತಃಕರಣದಲ್ಲಿಯೇ ತೋರಿಸಿದ್ದೇನಪ್ಪಾ.

ಸ ರೂಪವಾಗಿ ಆತ್ಮಭೂತನಾಗಿ ‘ತತ್’ ಪದಾರ್ಥವಾಗಿರುವ ನನ್ನೊಡನೆ ಐಕ್ಯಹೊಂದಿರುವುದನ್ನು ಕಂಡುಕೊಂಡಾಗ ಮೋಕ್ಷವನ್ನು ಪಡೆಯುವನು. (ಶ್ರೀಧರೀಯ)
(ಶ್ಲೋಕ ೩೩)

ಯಚ್ಚಕರ್ಥಾಙ್ಗ ಮತ್ಸ್ತೋತ್ರಂ ಮತ್ಕಥಾಭ್ಯುದಯಾಙ್ಕಿತಮ್ ।
ಯದ್ವಾ ತಪಸಿ ತೇ ನಿಷ್ಠಾ ಸ ಏಷ ಮದನುಗ್ರಹಃ ॥೩೮॥

ಪ್ರೀತಿಯ ಪುತ್ರನೇ! ನೀನು ಮಾಡಿರುವ ನನ್ನ ಕಥಾವೈಭವದಿಂದ ಕೂಡಿದ ಸ್ತುತಿ ಮತ್ತು ನಿನಗಿರುವ ತಪೋನಿಷ್ಠೆ–ಇವೂ ನನ್ನ ಅನುಗ್ರಹ ದಿಂದಲೇ ಉಂಟಾಗಿವೆ.

ಪ್ರೀತೋऽಹಮಸ್ತು ಭದ್ರಂ ತೇ ಲೋಕಾನಾಂ ವಿಜಯೇಚ್ಛಯಾ ।
ಯದಸ್ತೌಷೀರ್ಗುಣಮಯಂ ನಿರ್ಗುಣಂ ಮಾನುವರ್ಣಯನ್ ॥೩೯॥

ಲೋಕಗಳನ್ನು ಸೃಷ್ಟಿಸುವ ಇಷ್ಟದಿಂದ ನೀನು ನನ್ನನ್ನು ಸಗುಣ ನನ್ನಾಗಿಯೂ–ನಿರ್ಗುಣನನ್ನಾಗಿಯೂ *ವರ್ಣಿಸಿ ಸ್ತೋತ್ರಮಾಡಿರುವುದ ಕ್ಕಾಗಿ ನಾನು ನಿನ್ನಲ್ಲಿ ಅತ್ಯಂತಸಂತುಷ್ಟನಾಗಿದ್ದೇನೆ. ನಿನಗೆ ಮಂಗಳ ವಾಗಲಿ.

ಯ ಏತೇನ ಪುಮಾನ್ನಿತ್ಯಂ ಸ್ತುತ್ವಾ ಸ್ತೋತ್ರೇಣ ಮಾಂ ಭಜೇತ್ ।
ತಸ್ಯಾಶು ಸಮ್ಪ್ರಸೀದೇಯಂ ಸರ್ವಕಾಮವರೇಶ್ವರಃ ॥೪೦॥

ಸ್ವಯಂಭುವೇ! ಸಮಸ್ತಮನೋರಥಗಳನ್ನೂ ಈಡೇರಿಸುವ ಸಾಮರ್ಥ್ಯವುಳ್ಳ ಈಶ್ವರನು ನಾನು. ನೀನು ಮಾಡಿರುವ ಈ ಸ್ತೋತ್ರದ ಮೂಲಕ ಪ್ರತಿದಿನವೂ ನನ್ನನ್ನು ಭಜಿಸುವವನಿಗೆ ನಾನು ಬೇಗನೆ ಪ್ರಸನ್ನ ನಾಗುತ್ತೇನೆ.

---

* **ಗುಣಮಯಂ =** ನಿರ್ಗುಣಂ **:**

ಸರ್ವಜ್ಞತ್ವವೇ ಮುಂತಾದ ಗುಣಗಳಿಂದ ಪೂರ್ಣನಾಗಿರುವವನನ್ನಾಗಿಯೂ ಸತ್ವಾದಿ ಗುಣರಹಿತನನ್ನಾಗಿಯೂ ನನ್ನನ್ನು ವರ್ಣಿಸಿ ಸ್ತುತಿಸಿರುವುದಕ್ಕಾಗಿ ನಾನು ಪ್ರಸನ್ನನಾಗಿದ್ದೇನೆ. **"ಸರ್ವಜ್ಞಾದಿಗುಣೈರ್ಯುಕ್ತಂ ಸತ್ತ್ವಾದಿಗುಣವರ್ಜಿತಮ್ । ಯೋ ಜಾನಾತಿ ಹರಿಂ ತಸ್ಯ ಪ್ರೀತೋ ಭವತಿ ಕೇಶವಃ ॥"** (ವಿಜಯಧ್ವಜೀಯ)

ಕಲ್ಯಾಣಗುಣಪೂರ್ಣನನ್ನಾಗಿಯೂ ಹೇಯಗುಣರಹಿತನನ್ನಾಗಿಯೂ ನನ್ನನ್ನು ವರ್ಣಿಸಿ ಸ್ತುತಿಸಿದ್ದಕ್ಕಾಗಿ ನಿನ್ನಲ್ಲಿ ತುಂಬಾ ಪ್ರಸನ್ನನಾಗಿದ್ದೇನೆ. (ವೀರರಾಘವೀಯ)

ಗುಣಮಯನಾಗಿ ಕಂಡರೂ ವಸ್ತುತಃ ನಿರ್ಗುಣನೇ ಆಗಿರುವವನನ್ನಾಗಿ ವರ್ಣಿಸಿ ಸ್ತುತಿಸಿದ್ದಕ್ಕಾಗಿ ನಾನು ನಿನ್ನಲ್ಲಿ ತುಂಬಾ ಪ್ರಸನ್ನನಾಗಿದ್ದೇನೆ. (ಶ್ರೀಧರೀಯ)

ಪೂರ್ತೇನ ತಪಸಾ ಯಜ್ಞೈರ್ದಾನೈರ್ಯೋಗಸಮಾಧಿನಾ ।
ರಾದ್ಧಂ ನಿಃಶ್ರೇಯಸಂ ಪುಂಸಾಂ ಮತ್ಪ್ರೀತಿಸ್ತತ್ತ್ವವಿನ್ಮತಮ್ ॥೪೧॥

ಪುಣ್ಯಾತ್ಮರಾದ ಜನರು ಲೋಕದಲ್ಲಿ ಕೊಳ-ಬಾವಿ ಮುಂತಾದುವುಗಳನ್ನು ತೋಡಿಸುವ 'ಪೂರ್ತ'ವೆಂಬ ಕರ್ಮವನ್ನು ಮಾಡುತ್ತಾರೆ. ಕಾಯಕ್ಲೇಶಕರವಾದ ತಪಸ್ಸನ್ನು ಆಚರಿಸುತ್ತಾರೆ. 'ಜ್ಯೋತಿಷ್ಟೋಮವೇ' ಮುಂತಾದ ಯಜ್ಞಗಳನ್ನು ಆಚರಿಸುತ್ತಾರೆ. ದಾನ-ಧರ್ಮಗಳನ್ನು ಮಾಡುತ್ತಾರೆ. ಯೋಗಿಗಳು ಯೋಗಸಮಾಧಿಯನ್ನು ಹೊಂದುತ್ತಾರೆ. ಈ ಎಲ್ಲ ಸಾಧನಗಳಿಂದಲೂ ಉಂಟಾಗುವ ಪರಮಫಲವೇನು? ಎಂದರೆ : 'ಭಗವಂತನ ಪ್ರಸನ್ನತೆಯೇ'–ಎಂದು ತಂತ್ರಜ್ಞರು ಹೇಳುತ್ತಾರೆ.

ಅಹಮಾತ್ಮಾತ್ಮನಾಂ ಧಾತಃ ಪ್ರೇಷ್ಠಃ ಸನ್ಪ್ರೇಯಸಾಮಪಿ ।
ಅತೋ ಮಯಿ ರತಿಂ ಕುರ್ಯಾದ್ದೇಹಾದಿರ್ಯತ್ಕೃತೇ ಪ್ರಿಯಃ ॥೪೨॥

ವಿಧಾತನೇ! ನಾನು ಆತ್ಮಗಳಿಗೂ ಆತ್ಮನಾದವನು. ಹೆಂಡಿರು-ಮಕ್ಕಳು ಮುಂತಾದ ಪ್ರಿಯವಸ್ತುಗಳಿಗೂ ಪ್ರಿಯನಾದವನು. ದೇಹಿಗಳಿಗೆ ದೇಹಾದಿಗಳು ಪ್ರಿಯವಾಗಿರುವುದೂ ನನಗೋಸ್ಕರವೇ. ಆದುದರಿಂದ ಪ್ರಿಯಕ್ಕೂ ಪ್ರಿಯತಮನಾಗಿರುವ ನನ್ನನ್ನೇ ಪ್ರೇಮಿಸಬೇಕಪ್ಪಾ.

ಸರ್ವವೇದಮಯೇನೇದಮಾತ್ಮನಾತ್ಮಾತ್ಮಯೋನಿನಾ ।
ಪ್ರಜಾಃ ಸೃಜ ಯಥಾಪೂರ್ವಂ ಯಾಶ್ಚ ಮಯ್ಯನುಶೇರತೇ ॥೪೩॥

ನಾನು ನಿನಗೆ ಅನುಗ್ರಹಿಸಿರುವ ಸರ್ವವೇದಮಯನಾದ ಸ್ವರೂಪದಿಂದ ನೀನೇ ಈಗ ಮೂರು ಲೋಕಗಳನ್ನೂ ಮತ್ತು ನನ್ನಲ್ಲಿ ಲೀನವಾಗಿರುವ ಪ್ರಜೆಗಳನ್ನೂ ಹಿಂದಿನ ಕಲ್ಪದಲ್ಲಿ ಅವು ಹೇಗಿದ್ದುವೋ ಅದಕ್ಕೆ ತಕ್ಕಂತೆ ಸೃಷ್ಟಿಸು."

ತಸ್ಮಾ ಏವಂ ಜಗತ್ಸ್ರಷ್ಟ್ರೇ ಪ್ರಧಾನಪುರುಷೇಶ್ವರಃ ।
ವ್ಯಜ್ಯೇದಂ ಸ್ವೇನ ರೂಪೇಣ ಕಞ್ಜನಾಭಸ್ತಿರೋದಧೇ ॥೪೪॥

ಮೈತ್ರೇಯರು ಹೇಳುತ್ತಾರೆ :

ಪ್ರಕೃತಿಗೂ–ಪುರುಷರಿಗೂ ಪ್ರಭುವಾದ ಸ್ವಾಮಿಪದ್ಮನಾಭನು ಸೃಷ್ಟಿ

ಕರ್ತರಾದ ಬ್ರಹ್ಮದೇವರಿಗೆ ಹೀಗೆ ಜಗತ್ತಿನ ಸೃಷ್ಟಿಕ್ರಮವನ್ನು ವ್ಯಕ್ತಪಡಿಸಿ, ಜಯವಾಗಲಿ ಎಂದು ಆಶೀರ್ವದಿಸಿ ತನ್ನ ನಿಜರೂಪವನ್ನು ಕಣ್ಮರೆಗೊಳಿಸಿಕೊಂಡನು.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೯ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೧೦ನೆಯ ಅಧ್ಯಾಯ

ಸೃಷ್ಟಿಯ ಹತ್ತು ಬಗೆಗಳು

ವಿದುರನು ಮೈತ್ರೇಯರನ್ನು ಪ್ರಶ್ನೆಮಾಡಿದನು :

ಅನ್ತರ್ಹಿತೇ ಭಗವತಿ ಬ್ರಹ್ಮಾ ಲೋಕಪಿತಾಮಹಃ ।
ಪ್ರಜಾಃ ಸಸರ್ಜ ಕತಿಧಾ ದೈಹಿಕೀರ್ಮಾನಸೀರ್ವಿಭುಃ ॥೧॥

ಯೇ ಚ ಮೇ ಭಗವನ್ಪೃಷ್ಟಾಸ್ತ್ವಯ್ಯರ್ಥಾ ಬಹುವಿತ್ತಮ ।
ತಾನ್ವದಸ್ವಾನುಪೂರ್ವ್ಯೇಣ ಛಿನ್ಧಿ ನಃ ಸರ್ವಸಂಶಯಾನ್ ॥೨॥

"ಮುನಿವರ್ಯರೇ! ಶ್ರೀಭಗವಂತನು ಅಂತರ್ಧಾನಹೊಂದಿದ ಬಳಿಕ ಸರ್ವಲೋಕಪಿತಾಹಮರಾದ ಬ್ರಹ್ಮದೇವರು ತಮ್ಮ ದೇಹದಿಂದ ಮತ್ತು ಮನಸ್ಸಿನಿಂದ ಎಷ್ಟು ಬಗೆಯ ಸೃಷ್ಟಿಗಳನ್ನು ಹೊರತಂದರು?–ಎಂಬುದನ್ನು ವರ್ಣಿಸಿರಿ. ಇದಲ್ಲದೇ ನಾನು ತಮ್ಮಲ್ಲಿ ವಿಜ್ಞಾಪಿಸಿದ್ದ ಎಲ್ಲ ಪ್ರಶ್ನೆಗಳಿಗೂ ಕ್ರಮವಾಗಿ ಉತ್ತರವನ್ನು ದಯಪಾಲಿಸಿ ನನ್ನ ಎಲ್ಲ ಸಂಶಯಗಳನ್ನೂ ಪರಿಹರಿಸೋಣವಾಗಲಿ. ತಾವು ಜ್ಞಾನಿಗಳಲ್ಲಿಯೇ ಅತ್ಯಂತ ಶ್ರೇಷ್ಠರಾದವರು."

ಸೂತಪುರಾಣಿಕರು ಹೇಳುತ್ತಾರೆ :

ಮಹಾತ್ಮನಾದ ವಿದುರನು ಹೀಗೆ ಪ್ರಶ್ನೆಮಾಡಲು ಮುನಿಶ್ರೇಷ್ಠರಾದ ಮೈತ್ರೇಯರು ಬಹಳ ಪ್ರಸನ್ನರಾಗಿ ತಮ್ಮ ಹೃದಯದಲ್ಲಿದ್ದ ಆ ಪ್ರಶ್ನೆಗಳಿಗೆ ಈ ರೀತಿ ಉತ್ತರಿಸತೊಡಗಿದರು :

ವಿರಿಞ್ಚೋಽಪಿ ತಥಾ ಚಕ್ರೇ ದಿವ್ಯಂ ವರ್ಷಶತಂ ತಪಃ ।
ಆತ್ಮನ್ಯಾತ್ಮಾನಮಾವೇಶ್ಯ ಯದಾಹ ಭಗವಾನಜಃ ॥೪॥

ತದ್ವಿಲೋಕ್ಯಾಬ್ಜಸಮ್ಭೂತೋ ವಾಯುನಾ ಯದಧಿಷ್ಠಿತಃ ।
ಪದ್ಮಮಮ್ಭಶ್ಚ ತತ್ಕಾಲಕೃತವೀರ್ಯೇಣ ಕಮ್ಪಿತಮ್ ॥೫॥

"ಅಯ್ಯಾ ವಿದುರನೇ! ಕೇಳು. ಅನಂತರ ಬ್ರಹ್ಮದೇವರು ಜನ್ಮರಹಿತನಾದ ಶ್ರೀಭಗವಂತನು ಅಪ್ಪಣೆಕೊಡಿಸಿದ್ದ ರೀತಿಯಲ್ಲಿಯೇ ಚಿತ್ತವನ್ನು ತನಗೆ ಆತ್ಮಭೂತನಾದ ಶ್ರೀಹರಿಯಲ್ಲಿ ನೆಲೆಗೊಳಿಸಿ ನೂರು ದಿವ್ಯವರ್ಷಗಳ ಕಾಲದವರೆಗಿನ ತಪಸ್ಸನ್ನಾಚರಿಸತೊಡಗಿದರು. ಆಗ ಪ್ರಳಯಕಾಲದ ಮಹಾವಾಯುವಿನ ಬಡಿತಗಳಿಂದ ಅವರು ಕುಳಿತಿದ್ದ ಕಮಲವೂ ಮತ್ತು ಸುತ್ತಲೂ ಇದ್ದ ಜಲರಾಶಿಯೂ ಅಲ್ಲಾಡುತ್ತಿರುವುದು ಅವರಿಗೆ ಕಾಣಿಸಿತು.

ತಪಸಾ ಹ್ಯೇಧಮಾನೇನ ವಿದ್ಯಯಾ ಚಾತ್ಮಸಂಸ್ಥಯಾ ।
ವಿವೃದ್ಧವಿಜ್ಞಾನಬಲೋ ನ್ಯಪಾದ್ವಾಯಂ ಸಹಾಮ್ಭಸಾ ॥೬॥

ದಿನೇ-ದಿನೇ ವೃದ್ಧಿಹೊಂದುತ್ತಿದ್ದ ತಪಸ್ಸಿನಿಂದಲೂ ಮತ್ತು ತಮ್ಮಲ್ಲಿದ್ದ ಅಮೋಘವಾದ ವಿದ್ಯೆಯಿಂದಲೂ ಅದ್ಭುತವಾದ ಜ್ಞಾನವನ್ನೂ-ಶಕ್ತಿಯನ್ನೂ ಗಳಿಸಿ ಅವುಗಳ ಬಲದಿಂದ ಅವರು ಆ ಜಲರಾಶಿಯನ್ನೂ ಮತ್ತು ವಾಯುವನ್ನೂ ಕುಡಿದುಬಿಟ್ಟರು.

ತದ್ವಿಲೋಕ್ಯ ವಿಯದ್ವ್ಯಾಪಿ ಪುಷ್ಕರಂ ಯದಧಿಷ್ಠಿತಮ್ ।
ಅನೇನ ಲೋಕಾನ್ಪ್ರಾಗ್ಲೀನಾನ್ಕಲ್ಪಿತಾಸ್ಮೀತ್ಯಚಿನ್ತಯತ್ ॥೭॥

ಅನಂತರ ಅವರು ತಮಗೆ ಆಸನವಾಗಿದ್ದ ಮತ್ತು ಆಕಾಶದವರೆಗೂ ವ್ಯಾಪಿಸಿದ್ದ ಮಹಾಕಮಲವನ್ನು ನೋಡಿ–'ಹಿಂದಿನ ಕಲ್ಪದಲ್ಲಿ ಲೀನವಾಗಿ ಹೋಗಿದ್ದ ಲೋಕಗಳನ್ನು ನಾನು ಈ ಕಮಲದಿಂದಲೇ ಮತ್ತೆ ಸೃಷ್ಟಿಸುವೆನು'–ಎಂದು ಅಂದುಕೊಂಡರು.

ಪದ್ಮಕೋಶಂ ತದಾವಿಶ್ಯ ಭಗವತ್ಕರ್ಮಚೋದಿತಃ ।
ಏಕಂ ವ್ಯಭಾಙ್ಕ್ಷೀದುರುಧಾ ತ್ರಿಧಾ ಭಾವ್ಯಂ ದ್ವಿಸಪ್ತಧಾ ॥೮॥

ಏತಾವಾಞ್ಜೀವಲೋಕಸ್ಯ ಸಂಸ್ಥಾಭೇದಃ ಸಮಾಹೃತಃ ।
ಧರ್ಮಸ್ಯ ಹ್ಯನಿಮಿತ್ತಸ್ಯ ವಿಪಾಕಃ ಪರಮೇಷ್ಠ್ಯಸೌ ॥೯॥

ಶ್ರೀಭಗವಂತನಿಂದ ಸೃಷ್ಟಿಕಾರ್ಯವನ್ನು ಮಾಡಲು ನೇಮಕಗೊಂಡಿದ್ದ ಆ ಬ್ರಹ್ಮದೇವರು ಆ ಕಮಲಕೋಶದಲ್ಲಿ ಪ್ರವೇಶಮಾಡಿ ಅದೊಂದನ್ನೇ "ಭೂಃ, ಭುವಃ ಮತ್ತು ಸುವಃ'–ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಿದರು. ಆ ಕಮಲವು ಅತ್ಯಂತ ದೊಡ್ಡದಾಗಿದ್ದು ಅದನ್ನು ಹದಿನಾಲ್ಕು ಲೋಕಗಳನ್ನಾಗಿ ಅಥವಾ ಅದಕ್ಕೂ ಹೆಚ್ಚು ಸಂಖ್ಯೆಯ ಲೋಕಗಳನ್ನಾಗಿ ವಿಭಾಗಮಾಡಬಹುದಾಗಿದ್ದರೂ ಆಗ ಅವರು ಮಾಡಿದ್ದು ಈ ಮೂರು ವಿಭಾಗಗಳನ್ನೇ. ಜೀವಗಳ ಭೋಗಸ್ಥಾನಗಳಾಗಿ ಶಾಸ್ತ್ರಗಳಲ್ಲಿ ವರ್ಣಿಸಲ್ಪಟ್ಟಿರುವುವು ಈ ಮೂರು ಲೋಕಗಳು ಮಾತ್ರವೇ. ನಿಷ್ಕಾಮಕರ್ಮವನ್ನು ಮಾಡುವವರಿಗಾದರೋ–ಮಹಃ,ಜನಃ,ತಪಃಮತ್ತುಸತ್ಯಲೋಕರೂಪವಾದ ಬ್ರಹ್ಮಲೋಕ–ಇವುಗಳು ದೊರಕುತ್ತವೆ."

ಯದಾತ್ಥ ಬಹುರೂಪಸ್ಯ ಹರೇರದ್ಭುತಕರ್ಮಣಃ ।
ಕಾಲಾಖ್ಯಂ ಲಕ್ಷಣಂ ಬ್ರಹ್ಮನ್ಯಥಾ ವರ್ಣಯ ನಃ ಪ್ರಭೋ ॥೧೦॥

ಮೈತ್ರೇಯರ ಆ ಮಾತನ್ನು ಕೇಳಿ ವಿದುರನು–"ಓ ಬ್ರಾಹ್ಮಣೋತ್ತಮರೇ! ತಾವು ಅದ್ಭುತಕರ್ಮನಾದ ವಿಶ್ವರೂಪನಾದ ಶ್ರೀಹರಿಯ ಕಾಲವೆಂಬ ಶಕ್ತಿಯ ಮಾತನ್ನು ಹೇಳಿದಿರಿ. ದಯೆಯಿಟ್ಟು ನನಗೆ ಅದನ್ನು ಕುರಿತು ವಿಸ್ತಾರವಾಗಿ ವರ್ಣಿಸಬೇಕು"–ಎಂದು ವಿಜ್ಞಾಪಿಸಲು ಮೈತ್ರೇಯರು ಹೀಗೆ ಹೇಳಿದರು :

ಗುಣವ್ಯತಿಕರಾಕಾರೋ ನಿರ್ವಿಶೇಷೋಽಪ್ರತಿಷ್ಠಿತಃ ।
ಪುರುಷಸ್ತದುಪಾದಾನಮಾತ್ಮಾನಂ ಲೀಲಯಾಸೃಜತ್ ॥೧೧॥

"ಅಪ್ಪಾ, ವಿದುರ! ವಿಷಯಗಳು ರೂಪಾಂತರಹೊಂದುವುದೇ ಕಾಲದ ಆಕಾರವು. ಅದು ಸ್ವತಃ ನಿರ್ವಿಶೇಷವೂ, ಅನಾದಿಯೂ ಮತ್ತು ಅನಂತರವೂ ಆಗಿದೆ. ಅದನ್ನೇ ನಿಮಿತ್ತವನ್ನಾಗಿ ಮಾಡಿಕೊಂಡು ಶ್ರೀಭಗವಂತನು ಲೀಲಾಜಾಲವಾಗಿ ತನ್ನನ್ನೇ ಸೃಷ್ಟಿಯ ರೂಪದಲ್ಲಿ ಪ್ರಕಟಪಡಿಸಿಕೊಳ್ಳುತ್ತಾನೆ.

ವಿಶ್ವಂ ವೈ ಬ್ರಹ್ಮತನ್ಮಾತ್ರಂ ಸಂಸ್ಥಿತಂ ವಿಷ್ಣುಮಾಯಯಾ ।
ಈಶ್ವರೇಣ ಪರಿಚ್ಛಿನ್ನಂ ಕಾಲೇನಾವ್ಯಕ್ತಮೂರ್ತಿನಾ ॥೧೨॥

ಮೊದಲಿಗೆ ಈ ವಿಶ್ವವೆಲ್ಲವೂ ಭಗವಂತನ ಮಾಯೆಯಲ್ಲಿ ಲೀನವಾಗಿ

ಬ್ರಹ್ಮರೂಪದಲ್ಲಿಯೇ ಇತ್ತು. ಅದನ್ನೇ ಅವ್ಯಕ್ತಮೂರ್ತಿಯಾದ ಕಾಲದ ಮೂಲಕ ಶ್ರೀಭಗವಂತನು ಮತ್ತೆ ಪ್ರತ್ಯೇಕವಾಗಿ ಪ್ರಕಟಪಡಿಸಿದ್ದಾನೆ.

ಯಥೇದಾನೀಂ ತಥಾಗ್ರೇ ಚ ಪಶ್ಚಾದಪ್ಯೇತದೀದೃಶಮ್ ।
ಸರ್ಗೋ ನವವಿಧಸ್ತಸ್ಯ ಪ್ರಾಕೃತೋ ವೈಕೃತಸ್ತು ಯಃ ॥೧೩॥

ಕಾಲದ್ರವ್ಯಗುಣೈರಸ್ಯ ತ್ರಿವಿಧಃ ಪ್ರತಿಸಂಕ್ರಮಃ ।
ಆದ್ಯಸ್ತು ಮಹತಃ ಸರ್ಗೋ ಗುಣವೈಷಮ್ಯಮಾತ್ಮನಃ ॥೧೪॥

ದ್ವಿತೀಯಸ್ತ್ವಹಮೋ ಯತ್ರ ದ್ರವ್ಯಜ್ಞಾನಕ್ರಿಯೋದಯಃ ।
ಭೂತಸರ್ಗಸ್ತೃತೀಯಸ್ತು ತನ್ಮಾತ್ರೋ ದ್ರವ್ಯಶಕ್ತಿಮಾನ್ ॥೧೫॥

ಈ ಜಗತ್ತು ಈಗ ಹೇಗಿದೆಯೋ ಹಾಗೆಯೇ ಹಿಂದೆಯೂ ಇತ್ತು ಮತ್ತು ಮುಂದೆಯೂ ಹಾಗೆಯೇ ಇರುವುದು. ಇದರ ಸೃಷ್ಟಿಯು ಒಂಬತ್ತು ಬಗೆಯಾಗಿರುವುದು ಮತ್ತು ಪ್ರಾಕೃತ-ವೈಕೃತಭೇದದಿಂದ ಹತ್ತನೆಯದಾದ ಒಂದು ಸೃಷ್ಟಿಯೂ ಉಂಟು. ಇದರ ಪ್ರಳಯಕಾಲವು ಕಾಲ, ದ್ರವ್ಯ ಮತ್ತು ಗುಣಗಳ ಮೂಲಕ ಮುಬ್ಬಗೆಯಾಗಿದೆ. ಈಗ ಇವುಗಳಲ್ಲಿ ಮೊದಲಿಗೆ ಹತ್ತು ಪ್ರಕಾರವಾದ ಸೃಷ್ಟಿಗಳನ್ನು ಹೇಳುವೆನು ಕೇಳು. ಮೊದಲನೆಯದು ಮಹತ್ತತ್ತ್ವದ ಸೃಷ್ಟಿ ; ಶ್ರೀಭಗವಂತನ ಪ್ರೇರಣೆಯಂತೆ ಸತ್ತ್ವಾದಿಗುಣಗಳಲ್ಲಿ ವಿಷಮತೆ ಉಂಟಾಗುವುದೇ ಇದರ ಸ್ವರೂಪವು. ಎರಡನೆಯದು ಅಹಂಕಾರತತ್ತ್ವದ ಸೃಷ್ಟಿಯು. ಪೃಥಿವಿಯೇ ಮುಂತಾದ ಪಂಚಭೂತಗಳೂ ಮತ್ತು ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳೂ ಇದರಿಂದಲೇ ಹುಟ್ಟುವುವು. ಮೂರನೆಯ ಸೃಷ್ಟಿಗೆ ಭೂತಸೃಷ್ಟಿ ಎಂದು ಹೆಸರು. ಇದರಲ್ಲಿ ಪಂಚಮಹಾಭೂತಗಳನ್ನು ಉತ್ಪತ್ತಿಮಾಡುವ ತನ್ಮಾತ್ರವರ್ಗವು ಇರುವುದು.

ಚತುರ್ಥ ಐನ್ದ್ರಿಯಃ ಸರ್ಗೋ ಯಸ್ತು ಜ್ಞಾನಕ್ರಿಯಾತ್ಮಕಃ ।
ವೈಕಾರಿಕೋ ದೇವಸರ್ಗಃ ಪಞ್ಚಮೋ ಯನ್ಮಯಂ ಮನಃ ॥೧೬॥

ನಾಲ್ಕನೆಯದು ಇಂದ್ರಿಯಗಳ ಸೃಷ್ಟಿಯು. ಇದು ಜ್ಞಾನ ಮತ್ತು ಕ್ರಿಯಾಶಕ್ತಿಗಳಲ್ಲಿ ಸಂಪನ್ನವಾಗುವುದು. ಐದನೆಯದಾದ ಸೃಷ್ಟಿಯು ಸಾತ್ತ್ವಿಕಾಹಂಕಾರದಿಂದ ಉತ್ಪನ್ನವಾದ ಇಂದ್ರಿಯಗಳಿಗೆ ಅಧಿಷ್ಠಾತೃ

ಗಳಾದ ದೇವತೆಗಳದು. ಮನಸ್ಸು ಈ ಸೃಷ್ಟಿಯಲ್ಲೇ ಅಂತರ್ಗತವಾಗು ವುದು.

ಷಷ್ಠಸ್ತು ತಮಸಃ ಸರ್ಗೋ ಯಸ್ತ್ವಬುದ್ಧಿಕೃತಃ ಪ್ರಭೋ ।
ಷಡಿಮೇ ಪ್ರಾಕೃತಾಃ ಸರ್ಗಾ ವೈಕೃತಾನಪಿ ಮೇ ಶೃಣು ॥೧೭॥

ಆರನೆಯ ಸೃಷ್ಟಿಯು ಅವಿದ್ಯೆಯದು. ಇದರಲ್ಲಿ ತಾಮಿಸ್ರ, ಅಂಧ ತಾಮಿಸ್ರ, ತಮಸ್ಸು, ಮೋಹ ಮತ್ತು ಮಹಾಮೋಹ–ಎಂಬ ಐದು ಗಂಟುಗಳು ಇರುವುವು. ಇದು ಜೀವಗಳ ಬುದ್ಧಿಗೆ ಆವರಣಹಾಕುವುದು ಮತ್ತು ಅದನ್ನು ವಿಕ್ಷಿಪ್ತಗೊಳಿಸುವುದು. ಈ ಆರೂ ಪ್ರಾಕೃತಸೃಷ್ಟಿಗಳು. ಈಗ ವೈಕೃತಸೃಷ್ಟಿಗಳನ್ನೂ ವಿವರಿಸುವೆನು ; ಕೇಳು.

ರಜೋಭಾಜೋ ಭಗವತೋ ಲೀಲೇಯಂ ಹರಿಮೇಧಸಃ ।
ಸಪ್ತಮೋ ಮುಖ್ಯಸರ್ಗಸ್ತು ಷಡ್ವಿಧಸ್ತಸ್ಥುಷಾಂ ಚ ಯಃ ॥೧೮॥

ವನಸ್ಪತ್ಯೋಷಧಿಲತಾತ್ವಕ್ಸಾರಾ ವೀರುಧೋ ದ್ರುಮಾಃ ।
ಉತ್ಸ್ರೋತಸಸ್ತಮಃಪ್ರಾಯಾ ಅನ್ತಃಸ್ಪರ್ಶಾ ವಿಶೇಷಿಣಃ* ॥೧೯॥

ತನ್ನನ್ನು ಚಿಂತನೆಮಾಡುವವರ ಸಮಸ್ತದುಃಖಗಳನ್ನೂ ಯಾವ ಭಗವಂತನು ಪರಿಹರಿಸುವನೋ–ಅದೇ ಶ್ರೀಹರಿಗೆ ಸೇರಿದ ಲೀಲೆಗಳೇ ಇವೆಲ್ಲಾ. ಆತನೇ ಬ್ರಹ್ಮದೇವರ ರೂಪದಲ್ಲಿ ರಜೋಗುಣವನ್ನು ಸ್ವೀಕರಿಸಿ ಜಗತ್ತನ್ನು ರಚಿಸುವನು. ವೈಕೃತಸೃಷ್ಟಿಯಲ್ಲಿ ಪ್ರಧಾನವಾದ ಸ್ಥಾವರಸೃಷ್ಟಿಯೇ

---

* ಹೂವಿಲ್ಲದೇ ಫಲಿಸುವ ಅರಳಿ, ಅತ್ತಿ, ಹಲಸು, ಆಲ–ಮುಂತಾದುವುಗಳು ವನಸ್ಪತಿಗಳೆನಿಸುತ್ತವೆ. ಹೂಬಿಟ್ಟು ಫಲಕೊಡುವ ಜವೆ, ಭತ್ತ, ಹೆಸರು–ಮುಂತಾದುವುಗಳಿಗೆ ಓಷಧಿಗಳೆಂದು ಹೆಸರು. ಇವುಗಳು ಫಲವು ಪಕ್ವವಾದ ಮೇಲೆ ನಾಶಹೊಂದುತ್ತವೆ. ಆಶ್ರಯವೃಕ್ಷಾದಿಗಳಿಗೆ ಹಬ್ಬಿ ಮೇಲಕ್ಕೆ ಬೆಳೆಯುವ ಮಲ್ಲಿಗೆ ಮುಂತಾದ ಬಳ್ಳಿಗಳಿಗೆ ಲತೆಗಳೆಂದು ಹೆಸರು. ಗಟ್ಟಿಯಾಗಿ ಕುರುಚಲಾಗಿರುವುದರಿಂದ ಮೇಲಕ್ಕೆ ಹತ್ತದೇ ನೆಲದ ಮೇಲೆಯೇ ಹರಡಿಕೊಳ್ಳುವ ಬಳ್ಳಿಗಳು ವೀರುಧ ಎನಿಸುತ್ತವೆ. ಉದಾಹರಣೆಗೆ : ಕರ್ಬೂಜ, ಕಲ್ಲಂಗಡಿ ಮುಂತಾದುವು. ಕಠೋರವಾದ ಸಿಪ್ಪೆಯನ್ನು ಹೊಂದಿರುವ ಬಿದಿರು–ಮುಂತಾದುವು ತ್ವಕ್ಸಾರವೆನಿಸುತ್ತವೆ. ಮೊದಲು ಹೂವು ಬಿಟ್ಟು ನಂತರ ಹೂವುಗಳ ಜಾಗದಲ್ಲಿ ಹಣ್ಣುಗಳು ಬಿಡುವ ಮಾವು, ನೇರಳೆ ತೆಂಗು–ಮುಂತಾದುವುಗಳು ದ್ರುಮಗಳು ಎನಿಸುತ್ತವೆ. (ಶ್ಲೋಕ ೧೯)

ಏಳನೆಯ ಸೃಷ್ಟಿಯು. ಅದು ಆರು ವಿಧವಾಗಿರುವುದು. ವನಸ್ಪತಿಗಳು, ಓಷಧಿಗಳು, ಲತೆಗಳು, ಬಿದಿರು ಮುಂತಾದ ತ್ವಕ್ಸಾರಗಳು, ವೀರುಧಗಳು ಮತ್ತು ದ್ರುಮಗಳು–ಇವೇ ಆ ಆರು ಬಗೆಗಳು. ಇವು ಕೆಳಭಾಗದಿಂದ (ಬೇರಿನಿಂದ) ಮೇಲುಗಡೆಗೆ ಆಹಾರಸಂಚಾರಗಳನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಇವುಗಳಲ್ಲಿ ಜ್ಞಾನಶಕ್ತಿಯು ಪ್ರಕಟವಾಗುವುದಿಲ್ಲ.

ತಿರಶ್ಚಾಮಷ್ಟಮಃ ಸರ್ಗಃ ಸೋಽಷ್ಟಾವಿಂಶದ್ವಿಧೋ ಮತಃ ।
ಅವಿದೋ ಭೂರಿತಮಸೋ ಘ್ರಾಣಜ್ಞಾ ಹೃದ್ಯವೇದಿನಃ ॥೨೦॥

ಈ ಸ್ಥಾವರಸೃಷ್ಟಿಯನಂತರ ಎಂಟನೆಯದಾದ ತಿರ್ಯಗ್ಜಂತುಗಳ ಸೃಷ್ಟಿಯುಂಟಾಯಿತು. ಆ ಸೃಷ್ಟಿಯಲ್ಲಿ ಇಪ್ಪತ್ತೆಂಟು ಜಾತಿಗಳ ಪ್ರಾಣಿಗಳು ಜನಿಸಿದುವು. ಇವುಗಳಿಗೆ ಇಂದು-ನಾಳೆ ಎಂಬ ಕಾಲಜ್ಞಾನವಿಲ್ಲ. ಆಹಾರಾದಿ ಗಳ ಜ್ಞಾನಮಾತ್ರ ಇರುತ್ತದೆ. ದೀರ್ಘವಾದ ಆಲೋಚನೆ ಇರುವುದಿಲ್ಲ. ತಮ್ಮ ಇಷ್ಟವಸ್ತುಗಳು ಯಾವುವು? ಅನಿಷ್ಟ ವಸ್ತುಗಳು ಯಾವುವು?– ಎಂಬುದನ್ನು ಮೂಸಿ ವಾಸನೆನೋಡುವುದರಿಂದಲೇ ತಿಳಿದುಕೊಳ್ಳುತ್ತವೆ.

ಗೌರಜೋ ಮಹಿಷಃ ಕೃಷ್ಣಃ ಸೂಕರೋ ಗವಯೋ ರುರುಃ ।
ದ್ವಿಶಫಾಃ ಪಶವಶ್ಚೇಮೇ ಅವಿರುಷ್ಟ್ರಶ್ಚ ಸತ್ತಮ ॥೨೧॥

ತಿರ್ಯಕ್‌ಪ್ರಾಣಿಗಳಾದ ಎತ್ತು, ಆಡು, ಕೋಣ, ಹುಲ್ಲೆ, ಹಂದಿ, ಗವಯ (ನೀಲಗೋವು), ರುರು ಎಂಬ ಮೃಗ, ಟಗರು ಮತ್ತು ಒಂಟೆ– ಇವುಗಳಿಗೆ 'ದ್ವಿಶಫ' (ಎರಡು ಸೀಳಾಗಿರುವ ಕಾಲ್ಗೊರಸುಗಳುಳ್ಳವುಗಳು) ಗಳೆಂದು ಹೆಸರು.

ಖರೋಽಶ್ವೋಽಶ್ವತರೋ ಗೌರಃ ಶರಭಶ್ಚಮರೀ ತಥಾ ।
ಏತೇ ಚೈಕಶಫಾಃ ಕ್ಷತ್ತಃ ಶೃಣು ಪಞ್ಚನಖಾನ್ಪಶೂನ್ ॥೨೨॥

ಶ್ವಾ ಸೃಗಾಲೋ ವೃಕೋ ವ್ಯಾಘ್ರೋ ಮಾರ್ಜಾರಃ ಶಶಶಲ್ಲಕೌ ।
ಸಿಂಹಃ ಕಪಿರ್ಗಜಃ ಕೂರ್ಮೋ ಗೋಧಾ ಚ ಮಕರಾದಯಃ ॥೨೩॥

ಕಙ್ಕಗೃಧ್ರುವಟಶ್ಯೇನಭಾಸಬಲ್ಲೂಕಬರ್ಹಿಣಃ ।
ಹಂಸಸಾರಸಚಕ್ರಾಹ್ವಕಾಕೋಲೂಕಾದಯಃ ಖಗಾಃ ॥೨೪॥

ಕತ್ತೆ, ಕುದುರೆ, ಹೇಸರಗತ್ತೆ, ಗೌರ, ಶರಭ, ಚಮರೀಮೃಗ–ಈ ಆರು ಜಾತಿಯ ಪ್ರಾಣಿಗಳೂ 'ಏಕಶಫ' ಎನಿಸುತ್ತವೆ. (ಇವುಗಳ ಕಾಲ್ಗೊರಸುಗಳು ಸೀಳಾಗಿರುವುದಿಲ್ಲ.) ಈಗ ಐದು ನಖಗಳುಳ್ಳ ಪ್ರಾಣಿಗಳ ಹೆಸರುಗಳನ್ನು ಹೇಳುತ್ತೇನೆ : ಕೇಳು : ನಾಯಿ, ನರಿ, ತೋಳ, ಹುಲಿ, ಬೆಕ್ಕು, ಮೊಲ, ಮುಳ್ಳುಹಂದಿ, ಸಿಂಹ, ಕಪಿ, ಆನೆ, ಆಮೆ ಮತ್ತು ಉಡ–ಈ ಹನ್ನೆರಡು ಜಾತಿಯ ಪ್ರಾಣಿಗಳೂ 'ಪಂಚನಖ' ಗಳಾಗಿವೆ. (ಈ ಪ್ರಾಣಿಗಳ ಕಾಲುಗಳಲ್ಲಿ ಐದು ಉಗುರುಗಳು ಇರುತ್ತವೆ.) ಈ ಇಪ್ಪತ್ತೇಳು ಜಾತಿಗಳಲ್ಲದೇ ಮೊಸಳೆಯೇ ಮುಂತಾದ ಜಲಚರಪ್ರಾಣಿಗಳೂ ಮತ್ತು ಕಂಕ, ಗೃಧ್ರ, ಬಕ, ಗಿಡಗ, ಭಾಸ, ನವಿಲು, ಹಂಸ, ಸಾರಸ, ಚಕ್ರವಾಕ, ಕಾಗೆ, ಗೂಬೆ–ಇವೇ ಮೊದಲಾದುವೂ ಸೇರಿ ಇಪ್ಪತ್ತೆಂಟು ಜಾತಿಗಳು ಎರಡನೆಯ ವೈಕೃತ ಸೃಷ್ಟಿಯೆನಿಸುವುದು.

ಅರ್ವಾಕ್ಸ್ರೋತಸ್ತು ನವಮಃ ಕ್ಷತ್ತರೇಕವಿಧೋ ನೃಣಾಮ್ ।
ರಜೋಽಧಿಕಾಃ ಕರ್ಮಪರಾ ದುಃಖೇ ಚ ಸುಖಮಾನಿನಃ ॥೨೫॥

ಇನ್ನು ಒಂಬತ್ತನೆಯ ಸೃಷ್ಟಿಯು ಮನುಷ್ಯರದು. ಇದು ಒಂದೇ ಬಗೆಯದು. ಇವರಲ್ಲಿ ಆಹಾರದ ಪ್ರವಾಹವು ಮೇಲಿನಿಂದ (ಬಾಯಿಂದ ಕೆಳಗಡೆಗೆ ಹರಿಯುವುದಾಗಿರುತ್ತದೆ. ಮನುಷ್ಯರು ರಜೋಗುಣಪ್ರಧಾನರು.) ಇವರು ಕರ್ಮಪರಾಯಣರು ಮತ್ತು ದುಃಖರೂಪವಾದ ವಿಷಯಗಳಲ್ಲೇ ಸುಖವಿದೆಯೆಂದು ಭಾವಿಸುವವರು.

ವೈಕೃತಾಸ್ತ್ರಯ ಏವೈತೇ ದೇವಸರ್ಗಶ್ಚ ಸತ್ತಮ ।
ವೈಕಾರಿಕಸ್ತು ಯಃ ಪ್ರೋಕ್ತಃ ಕೌಮಾರಸ್ತೂಭಯಾತ್ಮಕಃ ॥೨೬॥

ಸ್ಥಾವರ, ಪಶು-ಪಕ್ಷೀ ಮತ್ತು ಮನುಷ್ಯ–ಎಂಬ ಈ ಮೂರು ಬಗೆಯ ಸೃಷ್ಟಿಗಳೂ ಮತ್ತು ಮುಂದೆ ಹೇಳಲ್ಪಡುವ ದೇವಸೃಷ್ಟಿಯೂ ವೈಕೃತ ಸೃಷ್ಟಿಯೇ ಆಗಿವೆ. ಮಹತ್ತತ್ತ್ವಾದಿರೂಪವಾದ ಯಾವ ವೈಕಾರಿಕದೇವ ಸೃಷ್ಟಿಯುಂಟೋ–ಅದನ್ನು ಹಿಂದೆ ಪ್ರಾಕೃತಸೃಷ್ಟಿಯಲ್ಲಿಯೇ ಲೆಕ್ಕಿಸಿ ಯಾಗಿದೆ. ಇವುಗಳಲ್ಲದೇ ಸನತ್ಕುಮಾರರೇ ಮುಂತಾದ ಋಷಿಗಳ ಸೃಷ್ಟಿ

ಯಾದ ಕೌಮಾರಸೃಷ್ಟಿಯೆಂಬುದು ಪ್ರಾಕೃತ ಮತ್ತು ವೈಕೃತ–ಎಂಬ ಎರಡೂ ಪ್ರಕಾರಗಳಿಂದ ಕೂಡಿದೆ.

ದೇವಸರ್ಗಶ್ಚಾಷ್ಟವಿಧೋ ವಿಬುಧಾಃ ಪಿತರೋಽಸುರಾಃ ।
ಗನ್ಧರ್ವಾಪ್ಸರಸಃ ಸಿದ್ಧಾ ಯಕ್ಷರಕ್ಷಾಂಸಿ ಚಾರಣಾಃ ॥೨೭॥

ಭೂತಪ್ರೇತಪಿಶಾಚಾಶ್ಚ ವಿದ್ಯಾಧ್ರಾಃ ಕಿನ್ನರಾದಯಃ ।
ದಶೈತೇ ವಿದುರಾಖ್ಯಾತಾಃ ಸರ್ಗಾಸ್ತೇ ವಿಶ್ವಸೃಕ್ಕೃತಾಃ ॥೨೮॥

ದೇವಸೃಷ್ಟಿಯೆಂಬುದು–ದೇವತೆಗಳು, ಪಿತೃಗಳು, ಅಸುರರು, ಗಂಧರ್ವ-ಅಪ್ಸರಸ್ಸುಗಳು, ಯಕ್ಷ-ರಾಕ್ಷಸರು, ಸಿದ್ಧರು, ಚಾರಣ-ವಿದ್ಯಾಧರರು, ಭೂತ-ಪ್ರೇತ-ಪಿಶಾಚಗಳು ಮತ್ತು ಕಿನ್ನರ-ಕಿಂಪುರುಷ-ಅಶ್ವಮುಖ ಮೊದಲಾದ ಭೇದಗಳಿಂದ ಎಂಟು ಪ್ರಕಾರವಾಗಿದೆ. ಹೀಗೆ ನಿನಗೆ ಸೃಷ್ಟಿಕರ್ತರಾದ ಬ್ರಹ್ಮದೇವರು ಮಾಡಿದ ಹತ್ತು ಬಗೆಯ ಸೃಷ್ಟಿಗಳನ್ನೂ ನಾನು ತಿಳಿಸಿಯಾಗಿದೆ.

ಇನ್ನು ಮುಂದೆ ನಾನು ವಂಶ ಮತ್ತು ಮನ್ವಂತರಾದಿಗಳನ್ನು ವರ್ಣಿಸುವೆನು. ಈ ರೀತಿಯಲ್ಲಿ ಸೃಷ್ಟಿಕರ್ತನಾದ ಸತ್ಯಸಂಕಲ್ಪನಾದ ಶ್ರೀಹರಿಯೇ ಬ್ರಹ್ಮದೇವರ ರೂಪದಲ್ಲಿ ಪ್ರತಿಕಲ್ಪದ ಪ್ರಾರಂಭದಲ್ಲೂ ರಜೋಗುಣದಿಂದ ವ್ಯಾಪಿಸಲ್ಪಟ್ಟು ತಾನೇ ಜಗದ್ರೂಪದಲ್ಲಿ ತನ್ನನ್ನೇ ಸೃಷ್ಟಿಮಾಡಿಕೊಳ್ಳುತ್ತಾನೆ.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೧೦ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೧೧ನೆಯ ಅಧ್ಯಾಯ

ಮನ್ವಂತರವೇ ಮುಂತಾದ ಕಾಲವಿಭಾಗದ ವರ್ಣನೆ

ಮೈತ್ರೇಯರು ಹೇಳುತ್ತಾರೆ :

ಚರಮಃ ಸದ್ವಿಶೇಷಾಣಾಮನೇಕೋಽಸಂಯುತಃ ಸದಾ ।
ಪರಮಾಣುಃ ಸ ವಿಜ್ಞೇಯೋ ನೃಣಾಮೈಕ್ಯಭ್ರಮೋ ಯತಃ ॥೧॥

ವಿದುರ! ಈಗ ನಿನಗೆ ಕಾಲದ ವಿಶೇಷಸ್ವರೂಪಗಳನ್ನು ವರ್ಣಿ

ಸುವೆನು ; ಕೇಳು. ಅವುಗಳಲ್ಲಿ ಮೊದಲನೆಯದು ಪರಮಾಣುವು. ಈ ಪರಮಾಣು ಎಂಬುದು ಪೃಥಿವಿಯೇ ಮುಂತಾದ ಕಾರ್ಯವರ್ಗದ ಸೂಕ್ಷ್ಮತಮವಾದ ಅಂಶ ; ಇನ್ನು ಮುಂದೆ ವಿಭಾಗಮಾಡಲಾಗದಿರುವ ಅಂಶ ; ಬದಲಾವಣೆಯನ್ನು ಹೊಂದದೇ ಇರುವ ಮತ್ತು ಇತರ ಪರಮಾಣುಗಳೊಡನೆ ಸಂಯೋಗವನ್ನು ಹೊಂದಲಾಗದಿರುವ ಅಂಶ. ಇಂತಹ ಅನೇಕಪರಮಾಣುಗಳು ಪರಸ್ಪರವಾಗಿ ಕೂಡಿರುವಾಗಲೇ ಮನುಷ್ಯರಿಗೆ ಭ್ರಮೆಯಿಂದ ಪರಮಾಣುಸಮುದಾಯರೂಪವಾದ ಒಂದು ಅವಯವ ಉಂಟು–ಎಂದು ತೋರಿಬರುತ್ತದೆ.

ಸತ ಏವ ಪದಾರ್ಥಸ್ಯ ಸ್ವರೂಪಾವಸ್ಥಿತಸ್ಯ ಯತ್ ।
ಕೈವಲ್ಯಂ ಪರಮಮಹಾನವಿಶೇಷೋ ನಿರನ್ತರಃ ॥೨॥

ಅನಂತರ ತಿಳಿಯಬೇಕಾದ್ದು ಪರಮಮಹತ್ತು. ಈ ಪರಮಾಣುವು ಯಾವುದರ ಸೂಕ್ಷ್ಮತ್ರಮವಾದ ಅಂಶವಾಗಿದೆಯೋ–ಅಂತಹ ಪೃಥಿವ್ಯಾದಿ ಕಾರ್ಯಗಳ ಏಕತೆಯೇ, ಸಮುದಾಯವೇ, ಸಮಗ್ರರೂಪವೇ ಪರಮ ಮಹತ್ತು ಎನಿಸುವುದು. ಆ ಸಮಯದಲ್ಲಿ ಅದರಲ್ಲಿ ಪ್ರಳಯವೇ ಮುಂತಾದ ಅವಸ್ಥಾಭೇದಗಳ ಸ್ಫೂರ್ತಿ ಇರುವುದಿಲ್ಲ. ಹೊಸಕಾಲ, ಹಳೆಯ ಕಾಲ ಇತ್ಯಾದಿ ಕಾಲಬೇಧಗಳು ತಿಳಿದುಬರುವುದಿಲ್ಲ. ಪಟ-ಘಟ ಮುಂತಾದ ರೀತಿಯಲ್ಲಿ ವಸ್ತುಭೇದಗಳ ಕಲ್ಪನೆಯೂ ತೋರುವುದಿಲ್ಲ.

ಏವಂ ಕಾಲೋಽಪ್ಯನುಮಿತಃ ಸೌಕ್ಷ್ಮ್ಯೇ ಸ್ಥೌಲ್ಯೇ ಚ ಸತ್ತಮ ।
ಸಂಸ್ಥಾನುಭುಕ್ತ್ಯಾ ಭಗವಾನವ್ಯಕ್ತೋ ವ್ಯಕ್ತಭುಗ್ವಿಭುಃ ॥೩॥

ಓ ಸಾಧುಶ್ರೇಷ್ಠನೇ! ಹೀಗೆ ವಸ್ತುವಿನ ಸೂಕ್ಷ್ಮತ್ರಮ ಮತ್ತು ಮಹತ್ತಮಸ್ವರೂಪವನ್ನು ತಿಳಿಸಿದೆನಲ್ಲವೇ? ಹೀಗೆಯೇ ಅವ್ಯಕ್ತಸ್ವರೂಪನಾದ ಭಗವಂತನಾದ ಕಾಲಪುರುಷನಲ್ಲೂ ಸೂಕ್ಷ್ಮತ್ವ ಮತ್ತು ಸ್ಥೂಲತ್ವಗಳನ್ನು ಊಹಿಸಿಕೊಳ್ಳಬೇಕು. ಆ ಅವ್ಯಕ್ತಸ್ವರೂಪನಾದ ಕಾಲಪುರುಷನು ಪರಮಾಣುವೇ ಮುಂತಾದ ಎಲ್ಲ ಅವಸ್ಥೆಗಳಲ್ಲೂ ವ್ಯಾಪಕನಾಗಿದ್ದು ವ್ಯಕ್ತ ಪದಾರ್ಥಗಳನ್ನೆಲ್ಲಾ ಭೋಗಿಸುತ್ತಿದ್ದಾನೆ. ಸೃಷ್ಟಿಯೇ ಮುಂತಾದ ಕಾರ್ಯಗಳನ್ನು ನಡೆಸಲು ಸಮರ್ಥನಾಗಿದ್ದಾನೆ–ಎಂದು ತಿಳಿಯಬೇಕು.

ಸ ಕಾಲಃ ಪರಮಾಣುರ್ವೈ ಯೋ ಭುಙ್ಕ್ತೇ ಪರಮಾಣುತಾಮ್ ।
ಸತೋಽವಿಶೇಷಭುಗ್ಯಸ್ತು ಸ ಕಾಲಃ ಪರಮೋ ಮಹಾನ್ ॥೪॥

ಪ್ರಪಂಚದಲ್ಲಿ ಪರಮಾಣುವಿನಂತಹ ಸೂಕ್ಷ್ಮವಾದ ಅವಸ್ಥೆಯಲ್ಲಿ ವ್ಯಾಪಕವಾಗಿರುವ ಕಾಲವನ್ನು ಸೂಕ್ಷ್ಮತಮಕಾಲವೆಂದು ಅರಿಯಬೇಕು. ಸೃಷ್ಟಿಯಿಂದಾರಂಭಿಸಿ ಪ್ರಳಯದವರೆಗೆ ಅದರ ಎಲ್ಲ ಅವಸ್ಥೆಗಳನ್ನೂ ಅನುಭವಿಸುವ ಕಾಲವೇ ಪರಮಮಹತ್ಕಾಲವು.

ಅಣುರ್ದ್ವೌ ಪರಮಾಣೂ ಸ್ಯಾತ್ತ್ರಸರೇಣುಸ್ತ್ರಯಃ ಸ್ಮೃತಃ ।
ಜಾಲಾರ್ಕರಶ್ಮ್ಯವಗತಃ ಖಮೇವಾನುಪತನ್ನಗಾತ್ ॥೫॥

ಎರಡು ಪರಮಾಣುಗಳು ಸೇರಿ ಒಂದು 'ಅಣು' ವಾಗುತ್ತದೆ ಮತ್ತು ಮೂರು ಅಣುಗಳು ಸೇರಿ ಒಂದು 'ತ್ರಸರೇಣು' ಆಗುವುದು. ಇದು ಕಿಟಕಿಯ ಮೂಲಕ ಬರುವ ಸೂರ್ಯಕಿರಣಗಳಲ್ಲಿ–ಆಕಾಶದಲ್ಲಿ ಹಾರಿ ಹೋಗುತ್ತಾ ಭೂಮಿಗಿಳಿಯುತ್ತಿರುವಂತೆಯೇ–ಅತಿಸೂಕ್ಷ್ಮವಾಗಿ ಗೋಚರಿ ಸುವುದು.

ಇಂತಹ ಮೂರು ತ್ರಸರೇಣುಗಳನ್ನು ವ್ಯಾಪಿಸುವ ಕಾಲವು 'ತ್ರುಟಿ' ಎಂದು ಕರೆಯಲ್ಪಡುತ್ತದೆ. ತ್ರುಟಿಯ ನೂರರಷ್ಟು ಕಾಲವು 'ವೇಧ' ಎನ್ನಿಸುತ್ತದೆ. ಮೂರು ವೇಧಗಳ ಕಾಲವೇ 'ಲವ'. ಮೂರು ಲವಗಳ ಕಾಲವು 'ನಿಮೇಷ' ಮತ್ತು ಮೂರು ನಿಮೇಷಗಳಿಗೆ ಒಂದು 'ಕ್ಷಣ'. ಐದು ಕ್ಷಣಗಳ ಕಾಲಕ್ಕೆ 'ಕಾಷ್ಠಾ' ಎಂದು ಹೆಸರು. ಹದಿನೈದು ಕಾಷ್ಠಗಳ ಕಾಲವನ್ನು ಒಂದು 'ಲಘು' ಎನ್ನುತ್ತಾರೆ. ಹದಿನೈದು ಲಘುಗಳಿಗೆ ಒಂದು 'ನಾಡಿಕಾ' ಮತ್ತು ಎರಡು ನಾಡಿಕೆಗಳ ಕಾಲವನ್ನು ಒಂದು 'ಮುಹೂರ್ತ' ಎನ್ನುತ್ತಾರೆ. ದಿವಸವು ಕುಗ್ಗುವುದಕ್ಕೆ ಮತ್ತು ಹಿಗ್ಗುವುದಕ್ಕೆ ತಕ್ಕಂತೆ ಆರು ಅಥವಾ ಏಳು ನಾಡಿಕೆಗಳ ಕಾಲವು ಒಂದು 'ಪ್ರಹರ' ಎನ್ನಿಸುತ್ತದೆ. (ಇದರಲ್ಲಿ ಹಗಲು ಮತ್ತು ರಾತ್ರಿಗಳ ಸಂಧಿ ಕಾಲಗಳಲ್ಲಿ ಬರುವ ಎರಡು ಮುಹೂರ್ತಗಳು ಲೆಕ್ಕಕ್ಕೆ ಬರುವುದಿಲ್ಲ.) ಮನುಷ್ಯರ ಹಗಲು ಅಥವಾ ರಾತ್ರಿಯ ನಾಲ್ಕನೇ ಒಂದು ಭಾಗವಾಗಿರುವ ಇದನ್ನು 'ಯಾಮ' ಎಂದೂ ಕರೆಯುತ್ತಾರೆ.*

---

* ಐದನೆಯ ಸ್ಕಂಧದಲ್ಲಿ ಸಂವತ್ಸರ, ಯುಗ, ಮನ್ವಂತರ–ಮುಂತಾದ ಕ್ರಮದಿಂದ

ಇಪ್ಪತ್ತು ಗುಲಗಂಜಿತೂಕವುಳ್ಳ ಚಿನ್ನದಿಂದ ನಾಲ್ಕು ಅಂಗುಲ ಪ್ರಮಾಣದ ಸೂಜಿಯನ್ನು ಮಾಡಿ, ಅದರಿಂದ ಆರು ಪಲಗಳ ತೂಕವುಳ್ಳ ತಾಮ್ರದ ಪಾತ್ರೆಯ ಕೆಳಗಡೆಯಲ್ಲಿ ರಂಧ್ರವನ್ನು ಕೊರೆದು, ಅದನ್ನು ಒಂದು ಸೇರು ನೀರುಳ್ಳ ಮತ್ತೊಂದು ಪಾತ್ರೆಯಲ್ಲಿ ಇಡಬೇಕು. ಆಗ ಕೆಳಗಿನ ರಂಧ್ರದಲ್ಲಿ ನೀರು ಮೇಲಕ್ಕೆ ಉಕ್ಕಿ ಆ ಪಾತ್ರೆಯು ಎಷ್ಟುಹೊತ್ತಿನಲ್ಲಿ ಮುಳುಗಿಹೋಗುವುದೋ ಅಷ್ಟು ಕಾಲಕ್ಕೆ 'ನಾಡಿಕಾ'* ಎಂದು ಹೆಸರು.

ಈ ಮೇಲೆ ಹೇಳಿದ ನಾಲ್ಕು ಯಾಮಗಳು ಹಗಲೆಂದೂ ನಾಲ್ಕು ಯಾಮಗಳು ರಾತ್ರಿಯೆಂದೂ ಮನುಷ್ಯಮಾನದ ಪ್ರಕಾರ ತಿಳಿಯಬೇಕು. ಇಂತಹ ಹದಿನೈದು ಹಗಲು-ರಾತ್ರಿಗಳು ಸೇರಿದರೆ ಒಂದು 'ಪಕ್ಷವು'. ಈ ಪಕ್ಷಗಳಲ್ಲಿ 'ಶುಕ್ಲ', 'ಕೃಷ್ಣ'–ಎಂದು ಎರಡು ವಿಭಾಗಗಳು. ಈ ಎರಡು ಪಕ್ಷಗಳು ಸೇರಿದರೆ ಮನುಷ್ಯರಿಗೆ ಒಂದು 'ಮಾಸ' ಮತ್ತು ಪಿತೃದೇವತೆಗಳಿಗೆ ಒಂದು ದಿವಸ (ಹಗಲಿರುಳು) ಆಗುತ್ತದೆಯೆಂದು ತಿಳಿಯಬೇಕು. ಈ ಎರಡು ಮಾಸಗಳು ಒಂದು 'ಋತು' ಎನಿಸುತ್ತವೆ. ಆರು ಋತುಗಳಿಗೆ ಒಂದು 'ಅಯನ' ಎಂದು ಹೆಸರು. ಅಯನಗಳಲ್ಲಿ 'ಉತ್ತರಾಯಣ', 'ದಕ್ಷಿಣಾಯನ'–ಎಂಬ ಎರಡು ಭೇದಗಳುಂಟು. ಈ ಎರಡು ಅಯನಗಳು ಸೇರಿದರೆ ದೇವತೆಗಳಿಗೆ ಒಂದು ದಿವಸ (ಹಗಲಿರುಳು) ಮತ್ತು ಮನುಷ್ಯಮಾನದಲ್ಲಿ ಒಂದು ವರ್ಷ ಅಥವಾ ದ್ವಾದಶಮಾಸಗಳು. ಇಂತಹ ನೂರು ವರ್ಷಗಳೇ ಮನುಷ್ಯನ ಪರಮಾಯುಸ್ಸು ಎಂದು ಹೇಳಲ್ಪಟ್ಟಿದೆ. ಗ್ರಹಗಳು, ನಕ್ಷತ್ರಗಳು ಮತ್ತು ತಾರಾಮಂಡಲ–ಇವುಗಳಿಗೆ ಅಧಿಷ್ಠಾತೃವಾದ ಕಾಲಸ್ವರೂಪಿಯಾದ ಸೂರ್ಯಭಗವಂತನು ಪರಮಾಣುವಿನಿಂದ ಹಿಡಿದು ಸಂವತ್ಸರಪರ್ಯಂತವಾದ ಕಾಲದಲ್ಲಿ ಜಗತ್ತನ್ನು ನಿರಂತರವಾಗಿ ಪ್ರದಕ್ಷಿಣೆಮಾಡುತ್ತಾ ಕ್ರಮಕ್ರಮವಾಗಿ ಪ್ರಾಣಿಗಳ ಆಯುಸ್ಸನ್ನು ಕಳೆ

ಎರಡು 'ಪರಾರ್ಧ' ಗಳವರೆಗೆ ಇರುವ ಕಾಲಗತಿಯನ್ನು ವರ್ಣಿಸಲಾಗುವುದು. ಆದ್ದರಿಂದ ಇಲ್ಲಿ 'ದ್ವ್ಯಣುಕ' ಮೊದಲಾದ ಮಧ್ಯಮಕಾಲಸ್ವರೂಪವನ್ನು ಮಾತ್ರ ವಿವರಿಸಿದೆ.

*ಈ ಯಂತ್ರವೇ ಹಳೆಯ ಕಾಲದಲ್ಲಿ ಉಪಯೋಗಿಸಲ್ಪಡುತ್ತಿದ್ದ ಗಡಿಯಾರವು.

(ಶ್ಲೋಕ ೯)

ಯುತ್ತಿರುವನು. ಸಂವತ್ಸರವನ್ನು ಪ್ರಮಾಣಭೇದಕ್ಕೆ ಅನುಗುಣವಾಗಿ ಸಂವತ್ಸರ, ಪರಿವತ್ಸರ, ಇಡಾವತ್ಸರ, ಅನುವತ್ಸರ ಮತ್ತು ವತ್ಸರಗಳೆಂದು ಐದು ಬಗೆಯಾಗಿ ವಿದ್ವಾಂಸರು ವಿಂಗಡಿಸುವರು.*

ಈ ಕಾಲಸ್ವರೂಪಿಯಾದ ಸೂರ್ಯಭಗವಂತನನ್ನು ಆರಾಧನೆ ಮಾಡಿರಿ. ಈತನೇ ನೆಲದಲ್ಲಿ ಬಿತ್ತಿದ ಬೀಜಗಳು ಮೊಳಕೆಯಾಗುವುದೇ ಮುಂತಾದ ಹಲವು ರೂಪಗಳಲ್ಲಿ ತನ್ನ ಶಕ್ತಿಯನ್ನು ಪ್ರಕಟಪಡಿಸುವ ಶಕ್ತಿನಿಧಿಯು ; ತೇಜಸ್ವರೂಪವಾದ ಮಹಾಭೂತವು. ಫಲಾಪೇಕ್ಷೆಯಿಂದ ಯಜ್ಞವೇ ಮುಂತಾದ ಕರ್ಮಗಳನ್ನು ಆಚರಿಸುವ ಜನರಿಗೆ ಸ್ವರ್ಗವೇ ಮುಂತಾದ ಮಂಗಲಸ್ವರೂಪವಾದ ಫಲಗಳನ್ನು ನೀಡುವ ಸ್ವಾಮಿಯು. ಪ್ರಾಣಿಗಳ ಮೋಹವನ್ನು ಕಳೆಯುವುದಕ್ಕೆ ಆಕಾಶದಲ್ಲಿ ತೇಜೋರೂಪದಿಂದ ಸಂಚರಿಸುತ್ತಿರುವ ಪ್ರಭುವು. ಇಂತಹ ಪಂಚವತ್ಸರಸ್ವರೂಪನಾದ ಸೂರ್ಯನಾರಾಯಣನಿಗೆ ಉಪಹಾರಗಳನ್ನು ಸಮರ್ಪಿಸಿರಿ."

ಯಃ ಸೃಜ್ಯಶಕ್ತಿಮುರುಧೋಚ್ಛ್ವಸಯನ್ಸ್ವಶಕ್ತ್ಯಾ
ಪುಂಸೋಽಭ್ರಮಾಯ ದಿವಿ ಧಾವತಿ ಭೂತಭೇದಃ ।
ಕಾಲಾಖ್ಯಯಾ ಗುಣಮಯಂ ಕ್ರತುಭಿರ್ವಿತನ್ವಂ-
ಸ್ತಸ್ಮೈ ಬಲಿಂ ಹರತ ವತ್ಸರಪಞ್ಚಕಾಯ ॥೧೫॥

---

* ಸೂರ್ಯನು ಮೇಷವೇ ಮುಂತಾದ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಹೋಗುವಷ್ಟು ಕಾಲವನ್ನು ಮಾಸವೆಂದೂ–ಅಂತಹ ಹನ್ನೆರಡು ಮಾಸಗಳು ಪೂರ್ಣವಾದರೆ ಆ ಕಾಲವನ್ನು ಸಂವತ್ಸರವೆಂದೂ ಕರೆಯುತ್ತಾರೆ. ಬೃಹಸ್ಪತಿಯೆಂಬ ಗ್ರಹವು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಹೋಗುವುದಕ್ಕೆ ಎಷ್ಟು ಕಾಲವಾಗುತ್ತದೆಯೋ ಅದರಲ್ಲಿ 1 ಭಾಗಕ್ಕೆ ಬಾರ್ಹಸ್ಪತ್ಯಮಾಸವೆಂದು ಹೆಸರು. ಅಂತಹ ಹನ್ನೆರಡು ಮಾಸಗಳು ಕಳೆದರೆ ಅದಕ್ಕೆ ಪರಿವತ್ಸರವೆಂದು ಹೆಸರು. ಸಂಬಳ, ಬಡ್ಡಿ ಮುಂತಾದ ವ್ಯವಹಾರಗಳಿಗಾಗಿ ಜನರು ತೀರ್ಮಾನಿಸಿರುವ ೩೦ ದಿನಗಳ ಮಾಸಕ್ಕೆ 'ಸಾವನ' ಮಾಸವೆಂದು ನಾಮಧೇಯ. ಇಂತಹ ಹನ್ನೆರಡು ಸಾವನಮಾಸಗಳು ಪೂರ್ಣವಾದರೆ ಅದಕ್ಕೆ 'ಇಡಾವತ್ಸರ' ವೆಂದು ಹೆಸರು. ಸಾವನ ಮಾಸವನ್ನು ಯಜ್ಞವನ್ನು ಆಚರಿಸುವುದಕ್ಕೂ ಬಳಸಿಕೊಳ್ಳುತ್ತಾರೆ. ಅಮಾವಾಸ್ಯೆಯಿಂದ ಮತ್ತೊಂದು ಅಮಾವಾಸ್ಯೆಯವರೆಗೆ ಆಗುವ ಕಾಲಕ್ಕೆ ಚಾಂದ್ರಮಾಸವೆಂದು ಸಂಜ್ಞೆ. ಅಂತಹ ಹನ್ನೆರಡು ಚಾಂದ್ರಮಾಸಗಳು ಕಳೆದರೆ ಅದನ್ನು 'ಅನುವತ್ಸರ'ವೆಂದು ಕರೆಯು

ಮೈತ್ರೇಯರು ಸೃಷ್ಟಿಯನ್ನು ಕುರಿತು ಹೀಗೆ ವರ್ಣನೆಮಾಡುತ್ತಿರುವಾಗ ವಿದುರನು ಮಧ್ಯದಲ್ಲಿ ಅವರನ್ನು ಪ್ರಾರ್ಥನೆಮಾಡಿದನು :

"ಮುನಿವರ್ಯರೇ! ತಾವು ದೇವತೆಗಳ, ಪಿತೃದೇವತೆಗಳ ಮತ್ತು ಮನುಷ್ಯರ ಪರಮಾಯುಸ್ಸು ಎಷ್ಟೆಂಬುದನ್ನು ವರ್ಣಿಸಿದಿರಿ. ಇನ್ನು ಮೂರು ಲೋಕಗಳ ಹೊರಗಿದ್ದು, ಕಲ್ಪಕಾಲಕ್ಕಿಂತಲೂ ಹೆಚ್ಚು ಕಾಲದವರೆಗೆ ಇರುವ ಜ್ಞಾನಿಶ್ರೇಷ್ಠರಾದ ಸನಕಾದಿಮಹಾಮುನಿಗಳ ಆಯುಸ್ಸು ಎಷ್ಟೆಂಬುದನ್ನೂ ತಿಳಿಸೋಣವಾಗಲಿ. ಏಕೆಂದರೆ : ಪೂಜ್ಯರಾದ ತಮಗೆ ಕಾಲದ ಗತಿಯು ಚೆನ್ನಾಗಿ ತಿಳಿದಿದೆ. ಧೀರರಾದ ಜ್ಞಾನಿಗಳು ತಮ್ಮ ಯೋಗಸಿದ್ಧವಾದ ದೃಷ್ಟಿಯಿಂದ ಇಡೀ ವಿಶ್ವವನ್ನೇ ನೋಡಬಲ್ಲರಷ್ಟೇ!"

ವಿಶ್ವಂ ವಿಚಕ್ಷತೇ ಧೀರಾ ಯೋಗರಾದ್ಧೇನ ಚಕ್ಷುಷಾ ॥೧೭॥

ಅದಕ್ಕೆ ಮೈತ್ರೇಯಮಹರ್ಷಿಗಳು ಹೀಗೆಂದರು :

"ವಿದುರ! ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗ–ಎಂಬ ಈ ನಾಲ್ಕು ಯುಗಗಳು ತಮ್ಮ ಸಂಧ್ಯಾಕಾಲ ಮತ್ತು ಸಂಧ್ಯಾಂಶಗಳೊಡನೆ ಕೂಡಿ ದೇವತೆಗಳ ಹನ್ನೆರಡು ಸಾವಿರ ವರ್ಷಗಳವರೆಗೆ ಇರುತ್ತವೆ–ಎಂದು ಹೇಳುತ್ತಾರಪ್ಪಾ. ಈ ಕೃತಯುಗವೇ ಮುಂತಾದ ನಾಲ್ಕು ಯುಗಗಳಲ್ಲಿ ಕ್ರಮವಾಗಿ ನಾಲ್ಕು, ಮೂರು, ಎರಡು ಮತ್ತು ಒಂದು ಸಾವಿರ ದಿವ್ಯವರ್ಷಗಳಿರುತ್ತವೆ ಮತ್ತು ಪ್ರತಿಯೊಂದರಲ್ಲೂ ಎಷ್ಟೆಷ್ಟು ಸಾವಿರ ವರ್ಷಗಳಿರುತ್ತವೆಯೋ ಅವಕ್ಕೆ ಎರಡರಷ್ಟು ನೂರು ವರ್ಷಗಳು ಅವುಗಳ ಸಂಧ್ಯಾಕಾಲ ಮತ್ತು ಸಂಧ್ಯಾಂಶಗಳಲ್ಲಿರುತ್ತವೆ.* ಅಂದರೆ ಕೃತಯುಗಕ್ಕೆ

ತ್ತಾರೆ. ಚಂದ್ರನು ಅಶ್ವಿನಿಯೇ ಮುಂತಾದ ೨೭ ನಕ್ಷತ್ರಗಳಲ್ಲಿ ಸಂಚರಿಸುವಷ್ಟು ಕಾಲಕ್ಕೆ 'ನಾಕ್ಷತ್ರಮಾನ'ವೆಂದೂ, ಅವು ಹನ್ನೆರಡು ತುಂಬಿದರೆ ಆ ಕಾಲಕ್ಕೆ 'ವತ್ಸರ' ವೆಂದೂ ಹೆಸರು. (ಶ್ಲೋಕ ೧೪)

* ಕೃತಯುಗದಲ್ಲಿ ಆ ಯುಗದ ೪,೦೦೦ ದಿವ್ಯವರ್ಷಗಳು ಹಾಗೆಯೇ ಸಂಧ್ಯಾಕಾಲ ಮತ್ತು ಸಂಧ್ಯಾಂಶಗಳ ೮೦೦ ವರ್ಷಗಳು–ಒಟ್ಟು ೪,೮೦೦ ದಿವ್ಯವರ್ಷಗಳಿರುತ್ತವೆ. ಹಾಗೆಯೇ ತ್ರೇತಾಯುಗದಲ್ಲಿ ೩,೬೦೦ ದಿವ್ಯವರ್ಷಗಳು (೩೦೦೦+೬೦೦),

4,800 ದಿವ್ಯವರ್ಷಗಳು. ತ್ರೇತಾಯುಗಕ್ಕೆ 3,600 ದಿವ್ಯವರ್ಷಗಳು. ದ್ವಾಪರಯುಗಕ್ಕೆ 2,400 ದಿವ್ಯವರ್ಷಗಳು ಮತ್ತು ಕಲಿಯುಗಕ್ಕೆ 1,200 ದಿವ್ಯವರ್ಷಗಳು ಕಾಲಪ್ರಮಾಣವೆಂದು ತಿಳಿಯಬೇಕು. ಪ್ರತಿಯುಗವೂ ಸಂಧ್ಯಾ, ಸಂಧ್ಯಾಂಶ ಮತ್ತು ಮಧ್ಯಭಾಗ ಎಂದು ಮೂರು ಬಗೆಯಾಗಿದೆ. ಇವುಗಳಲ್ಲಿ ಸಂಧ್ಯಾಕಾಲದಲ್ಲಿ ಜಗತ್ತಿನ ಸೃಷ್ಟಿಯೂ, ಸಂಧ್ಯಾಂಶಸಮಯದಲ್ಲಿ ಜಗತ್ತಿನ ಲಯವೂ, ಮಧ್ಯಭಾಗದ ಕಾಲದಲ್ಲಿ ಜಗತ್ತಿನ ಧರ್ಮದ ಪ್ರಚಾರವೂ ಆಗುತ್ತವೆಯೆಂದು ಹೇಳುತ್ತಾರೆ. ಈ ಗುರುತುಗಳಿಂದ ಕೂಡಿದ ಕಾಲವನ್ನು ಯುಗವೆಂದು ಕರೆಯುತ್ತಾರೆ. (ಪ್ರತಿಯೊಂದು ಯುಗಕ್ಕೂ ನಿರ್ಣಯಮಾಡಲ್ಪಟ್ಟಿರುವ ಶತಮಾನಗಳಲ್ಲಿ ಅರ್ಧಭಾಗವು ಯುಗಕ್ಕೆ ಆದಿಯ ಸಂಧ್ಯಾಂಶ. ಉಳಿದ ಅರ್ಧಭಾಗವು ಯುಗದ ಕಡೆಯ ಸಂಧ್ಯಾಂಶ ಮತ್ತು ಇವುಗಳ ಮಧ್ಯದಲ್ಲಿರುವ ಭಾಗವು ಯುಗಮಧ್ಯವೆಂದು ತಿಳಿಯಬೇಕು.)

ಧರ್ಮಶ್ಚತುಷ್ಪಾನ್ಮನುಜಾನ್ಕೃತೇ ಸಮನುವರ್ತತೇ ।
ಸ ಏವಾನ್ಯೇಷ್ವಧರ್ಮೇಣ ವ್ಯೇತಿ ಪಾದೇನ ವರ್ಧತಾ ॥೨೧॥

ಕೃತ (ಸತ್ಯ) ಯುಗದ ಮನುಷ್ಯರಲ್ಲಿ ಧರ್ಮವು ತನ್ನ ನಾಲ್ಕು ಪಾದಗಳಿಂದಲೂ ಕೂಡಿರುತ್ತದೆ. ಇತರ ಯುಗಗಳಲ್ಲಿ ಕ್ರಮವಾಗಿ ಅಧರ್ಮವು ವೃದ್ಧಿಹೊಂದುವುದರಿಂದ ಧರ್ಮದ ಒಂದೊಂದು ಚರಣವು ಕ್ಷೀಣವಾಗುತ್ತದೆ.

ತ್ರಿಲೋಕ್ಯಾ ಯುಗಸಾಹಸ್ರಂ ಬಹಿರಾಬ್ರಹ್ಮಣೋ ದಿನಮ್ ।
ತಾವತ್ಯೇವ ನಿಶಾ ತಾತ ಯನ್ನಿಮೀಲತಿ ವಿಶ್ವಸೃಕ್ ॥೨೨॥

ದ್ವಾಪರಯುಗದಲ್ಲಿ ೨,೪೦೦ ದಿವ್ಯವರ್ಷಗಳು (೨೦೦೦+೪೦೦) ಮತ್ತು ಕಲಿಯುಗದಲ್ಲಿ ೧,೨೦೦ ದಿವ್ಯವರ್ಷಗಳು (೧,೦೦೦+೨೦೦) ಇರುತ್ತವೆ. ದೇವತೆಗಳ ಒಂದು ವರ್ಷವು ಮನುಷ್ಯರ ಮಾನದಲ್ಲಿ ೩೬೦ ವರ್ಷಗಳಾಗುತ್ತದೆ. ಇದೇ ರೀತಿ ಮನುಷ್ಯಮಾನದಂತೆ ಕಲಿಯುಗದಲ್ಲಿ ೪,೩೨,೦೦೦ ವರ್ಷಗಳು. ಇದಕ್ಕೆ ಎರಡರಷ್ಟು ದ್ವಾಪರಯುಗದಲ್ಲೂ, ಮೂರರಷ್ಟು ತ್ರೇತಾಯುಗದಲ್ಲೂ ಮತ್ತು ನಾಲ್ಕರಷ್ಟು ಕೃತ (ಸತ್ಯ) ಯುಗದಲ್ಲೂ ವರ್ಷಗಳು ಆಗುತ್ತವೆಯೆಂದು ತಿಳಿಯಬೇಕು. (ಶ್ಲೋಕ ೧೯)

ಅಯ್ಯಾ ವಿದುರ! ಈ ತ್ರೈಲೋಕ್ಯದ ಹೊರಗೆ ಮಹರ್ಲೋಕದಿಂದ ಬ್ರಹ್ಮಲೋಕದವರೆಗೂ ಇರುವ ಎಲ್ಲ ಲೋಕಗಳಲ್ಲೂ ದೇವಮಾನದ ಒಂದು ಸಾವಿರ ವರ್ಷಗಳು ದಿವಸದ ಹಗಲುಭಾಗವೆಂದೂ ಮತ್ತು ಒಂದು ಸಾವಿರ ವರ್ಷಗಳು ಆ ದಿವಸದ ರಾತ್ರಿಭಾಗವೆಂದೂ ತಿಳಿಯಬೇಕು. ಆ ರಾತ್ರಿಭಾಗದಲ್ಲಿ ಸೃಷ್ಟಿಕರ್ತರಾದ ಬ್ರಹ್ಮದೇವರು ಶಯನಿಸುತ್ತಾರೆ.

ನಿಶಾವಸಾನ ಆರಬ್ಧೋ ಲೋಕಕಲ್ಪೋಽನುವರ್ತತೇ ।
ಯಾವದ್ದಿನಂ ಭಗವತೋ ಮನೂನ್ಭುಞ್ಜಂಶ್ಚತುರ್ದಶ ॥೨೩॥

ಇಂತಹ ರಾತ್ರಿಯು ಕಳೆದೊಡನೆಯೇ ಈ ಲೋಕದ ಕಲ್ಪವು ಪ್ರಾರಂಭವಾಗುತ್ತದೆ. ಅಂದರೆ ಬ್ರಹ್ಮದೇವರು ಮತ್ತೆ ಸೃಷ್ಟಿಯನ್ನು ಪ್ರಾರಂಭಿಸುವರು. ಬ್ರಹ್ಮದೇವರ ದಿನ ಇರುವವರೆಗೂ ಇದೇ ಕ್ರಮವು ನಡೆಯುತ್ತಿರುತ್ತದೆ. ಈ ಒಂದು ಕಲ್ಪದಲ್ಲಿ ಹದಿನಾಲ್ಕು ಮನುಗಳು ಆಗಿ ಹೋಗುತ್ತಾರೆ.

ಸ್ವಂ ಸ್ವಂ ಕಾಲಂ ಮನುರ್ಭುಙ್ಕ್ತೇ ಸಾಧಿಕಾಂ ಹ್ಯೇಕಸಪ್ತತಿಮ್ ।
ಮನ್ವನ್ತರೇಷು ಮನವಸ್ತದ್ವಂಶ್ಯಾ ಋಷಯಃ ಸುರಾಃ ।
ಭವನ್ತಿ ಚೈವ ಯುಗಪತ್ಸುರೇಶಾಶ್ಚಾನು ಯೇ ಚ ತಾನ್ ॥೨೪॥

ಪ್ರತಿಯೊಬ್ಬ ಮನುವೂ ದೇವಮಾನದ ಸುಮಾರು ಎಪ್ಪತ್ತೊಂದು ಯುಗಗಳವರೆಗೆ (71 $\frac{1}{11}$ ಯುಗಗಳವರೆಗೆ) ತನ್ನ ಅಧಿಕಾರವನ್ನು ನಡೆಸುತ್ತಾನೆ. ಆ ಪ್ರತಿಯೊಂದು ಮನ್ವಂತರದಲ್ಲಿಯೂ ಬೇರೆ-ಬೇರೆ ಮನು ವಂಶಗಳ ರಾಜರೂ, ಸಪ್ತರ್ಷಿಗಳೂ, ದೇವತಾಗಣಗಳೂ, ಇಂದ್ರರೂ ಮತ್ತು ಅವರ ಅನುಯಾಯಿಗಳಾದ ಗಂಧರ್ವಾದಿಗಳೂ ಒಟ್ಟಿಗೇ ಇದ್ದು ತಮ್ಮ ಅಧಿಕಾರಗಳನ್ನು ಅನುಭವಿಸುತ್ತಾರೆ.

ಏಷ ದೈನನ್ದಿನಃ ಸರ್ಗೋ ಬ್ರಾಹ್ಮಸ್ತ್ರೈಲೋಕ್ಯವರ್ತನಃ ।
ತಿರ್ಯಙ್ನೃಪತಿದೇವಾನಾಂ ಸಮ್ಭವೋ ಯತ್ರ ಕರ್ಮಭಿಃ ॥೨೫॥

ಇದು ಬ್ರಹ್ಮದೇವರ ದಿನಂಪ್ರತಿಯ ಸೃಷ್ಟಿಯ ವಿಚಾರವು. ಇದರ ಲ್ಲಿಯೇ ಮೂರು ಲೋಕಗಳ ರಚನೆಯೂ ಆಗುವುದು. ಪಶು-ಪಕ್ಷಿಗಳೂ, ಮನುಷ್ಯರೂ, ಪಿತೃಗಳೂ ಮತ್ತು ದೇವತೆಗಳೂ ತಮ್ಮ-ತಮ್ಮ ಕರ್ಮಾನುಸಾರವಾಗಿ ಜನಿಸುವುದು ಇದರಲ್ಲಿಯೇ.

ಮನ್ವನ್ತರೇಷು ಭಗವಾನ್ಬಿಭ್ರತ್ಸತ್ತ್ವಂ ಸ್ವಮೂರ್ತಿಭಿಃ ।
ಮನ್ವಾದಿಭಿರಿದಂ ವಿಶ್ವಮವತ್ಯುದಿತಪೌರುಷಃ ॥೨೬॥

ಭಗವಂತನು ಈ ಮನ್ವಂತರಗಳಲ್ಲಿ ಸತ್ತ್ವಗುಣವನ್ನಾಶ್ರಯಿಸಿ ಮನುವೇ ಮುಂತಾದ ತನ್ನ ಮೂರ್ತಿಗಳ ಮೂಲಕ ಪೌರುಷವನ್ನು ಪ್ರಕಟಿಸುತ್ತಾ ಈ ವಿಶ್ವದ ಪರಿಪಾಲನೆಯನ್ನು ಮಾಡುತ್ತಾನೆ.

ತಮೋಮಾತ್ರಾಮುಪಾದಾಯ ಪ್ರತಿಸಂರುದ್ಧವಿಕ್ರಮಃ ।
ಕಾಲೇನಾನುಗತಾಶೇಷ ಆಸ್ತೇ ತೂಷ್ಣೀಂ ದಿನಾತ್ಯಯೇ ॥೨೭॥

ಕಾಲಕ್ರಮದಲ್ಲಿ ತಮ್ಮ ಹಗಲು ಮುಗಿದೊಡನೆಯೇ ಬ್ರಹ್ಮದೇವರು ತಮೋಗುಣದ ಸಂಪರ್ಕವನ್ನು ಸ್ವೀಕರಿಸಿ ಸುಮ್ಮನಾಗುತ್ತಾರೆ. ಸೃಷ್ಟಿರಚನೆ ಯೆಂಬ ತಮ್ಮ ಪೌರುಷವನ್ನು ಮುಚ್ಚಿಕೊಂಡು ನಿಶ್ಚೇಷ್ಟರಾಗುತ್ತಾರೆ.

ತಮೇವಾನ್ವಪಿಧೀಯನ್ತೇ ಲೋಕಾ ಭೂರಾದಯಸ್ತ್ರಯಃ ।
ನಿಶಾಯಾಮನುವೃತ್ತಾಯಾಂ ನಿರ್ಮುಕ್ತಶಶಿಭಾಸ್ಕರಮ್ ॥೨೮॥

ಆಗ ಇಡೀ ವಿಶ್ವವು ಅವರಲ್ಲೇ ಲಯಹೊಂದಿಬಿಡುವುದು. ಸೂರ್ಯ ಮತ್ತು ಚಂದ್ರರೇ ಇಲ್ಲದ ಪ್ರಳಯರಾತ್ರಿಯು ಬರುವುದು. ಭೂಃ, ಭುವಃ, ಸುವಃ–ಎಂಬ ಮೂರು ಲೋಕಗಳೂ ಆ ಬ್ರಹ್ಮದೇವರ ಶರೀರದಲ್ಲಿಯೇ ಅಡಗಿಕೊಳ್ಳುವುವು.

ತ್ರಿಲೋಕ್ಯಾಂ ದಹ್ಯಮಾನಾಯಾಂ ಶಕ್ತ್ಯಾ ಸಙ್ಕರ್ಷಣಾಗ್ನಿನಾ ।
ಯಾನ್ತ್ಯೂಷ್ಮಣಾ ಮಹರ್ಲೋಕಾಜ್ಜನಂ ಭೃಗ್ವಾದಯೋಽರ್ದಿತಾಃ ॥೨೯॥

ಆಗ ಮೂರು ಲೋಕಗಳೂ ಆದಿಶೇಷದೇವರ ಬಾಯಿಂದ ಹೊರ ಬರುವ ಅಗ್ನಿಭಗವಂತನ ಶಕ್ತಿಯಿಂದ ಸುಡತೊಡಗುವುದು. ಅದರ ಬೇಗೆ ಯನ್ನು ತಾಳಲಾರದೇ ಭೃಗುವೇ ಮುಂತಾದ ಮಹರ್ಲೋಕದಲ್ಲಿರುವ ಮುನೀಶ್ವರರು ಅಲ್ಲಿಂದ ಜನೋಲೋಕಕ್ಕೆ ಹೋಗಿಬಿಡುವರು.

ತಾವತ್ತ್ರಿಭುವನಂ ಸದ್ಯಃ ಕಲ್ಪಾನ್ತೈಧಿತಸಿನ್ಧವಃ ।
ಪ್ಲಾವಯನ್ತ್ಯುತ್ಕಟಾಟೋಪಚಣ್ಡವಾತೇರಿತೋರ್ಮಯಃ ॥೩೦॥

ಅಷ್ಟರಲ್ಲಿಯೇ ಸಪ್ತಸಮುದ್ರಗಳೂ, ಪ್ರಳಯಕಾಲದ ಪ್ರಚಂಡ

ಮಾರುತದಿಂದ ಉಕ್ಕೇರಿ ಮಹಾತರಂಗಗಳಿಂದ ತ್ರೈಲೋಕ್ಯವನ್ನೂ ಮುಳು ಗಿಸಿ ಬಿಡುವುವು.

ಅನ್ತಃ ತಸ್ಮಿನ್ಸಲಿಲ ಆಸ್ತೇऽನನ್ತಾಸನೋ ಹರಿಃ ।
ಯೋಗನಿದ್ರಾನಿಮೀಲಾಕ್ಷಃ ಸ್ತೂಯಮಾನೋ ಜನಾಲಯೈಃ ॥೩೧॥

ಆಗ ಆ ಪ್ರಳಯಜಲದಲ್ಲಿ ಶ್ರೀಭಗವಂತನು ಶೇಷಶಾಯಿಯಾಗಿ ಯೋಗನಿದ್ರೆಯಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡು ಪವಡಿಸುವನು. ಆ ಸಮಯದಲ್ಲಿ ಜನೋಲೋಕದಲ್ಲಿರುವ ಮುನಿಗಣಗಳು ಆತನನ್ನು ಸ್ತುತಿಸುತ್ತಿರುವರು.

ಏವಂವಿಧೈರಹೋರಾತ್ರೈಃ ಕಾಲಗತ್ಯೋಪಲಕ್ಷಿತೈಃ ।
ಅಪಾಕ್ಷಿತಮಿವಾಸ್ಯಾಪಿ ಪರಮಾಯುರ್ವಯಃಶತಮ್ ॥೩೨॥

ಹೀಗೆ ಕಾಲಗತಿಗೆ ಒಳಪಟ್ಟಿರುವ ಇಂತಹ ಹಗಲು-ರಾತ್ರಿಗಳಿಂದಲೇ ಬ್ರಹ್ಮದೇವರ ಪೂರ್ಣಾಯುಸ್ಸಾಗಿರುವ ನೂರು ವರ್ಷಗಳೂ ಕಳೆದು ಹೋಗುವುವು.

ಯದರ್ಧಮಾಯುಷಸ್ತಸ್ಯ ಪರಾರ್ಧಮಭಿಧೀಯತೇ ।
ಪೂರ್ವಃ ಪರಾರ್ಧೋऽಪಕ್ರಾನ್ತೋ ಹ್ಯಪರೋऽದ್ಯ ಪ್ರವರ್ತತೇ ॥೩೩॥

ಪೂರ್ವಸ್ಯಾದೌ ಪರಾರ್ಧಸ್ಯ ಬ್ರಾಹ್ಮೋ ನಾಮ ಮಹಾನಭೂತ್ ।
ಕಲ್ಪೋ ಯತ್ರಾಭವದ್ಬ್ರಹ್ಮಾ ಶಬ್ದಬ್ರಹ್ಮೇತಿ ಯಂ ವಿದುಃ ॥೩೪॥

ಬ್ರಹ್ಮದೇವರ ಆಯುಸ್ಸಿನ ಅರ್ಧಭಾಗದ ಕಾಲಕ್ಕೆ (ಅಂದರೆ ಅವರ ೫೦ ವರ್ಷಗಳ ಕಾಲಕ್ಕೆ) ಒಂದು 'ಪರಾರ್ಧ'ವೆಂದು* ಹೆಸರು. ಆದುದ ರಿಂದ ಈಗ ಬ್ರಹ್ಮದೇವರ ಮೊದಲನೆಯ ಪರಾರ್ಧವು ಕಳೆದುಹೋಗಿ ಎರಡನೆಯ ಪರಾರ್ಧವು ನಡೆಯುತ್ತಿದೆ. ಮೊದಲನೆಯ ಪರಾರ್ಧದ ಪ್ರಾರಂಭದಲ್ಲಿ 'ಬ್ರಾಹ್ಮ' ವೆಂಬ ಮಹಾಕಲ್ಪವಿತ್ತು. ಬ್ರಹ್ಮದೇವರ

---

* ಸಂಖ್ಯೆಗಳಲ್ಲಿ ಯಾವುದಕ್ಕಿಂತ ಹೆಚ್ಚಾಗಿ ಮುಂದೆ ಎಣಿಕೆಯು ಸಾಧ್ಯವಿಲ್ಲವೋ ಆ ಕಡೆಯ ಸಂಖ್ಯೆಯನ್ನು 'ಪರಾರ್ಧ' ವೆಂದು ಕರೆಯುತ್ತಾರೆ.

ಉತ್ಪತ್ತಿ ಆದದ್ದು ಅದರಲ್ಲೇ. ಜ್ಞಾನಿಗಳು ಅದನ್ನು ಶಬ್ದಬ್ರಹ್ಮವೆಂದೂ ಕರೆಯುತ್ತಾರೆ.

ತಸ್ಯೈವ ಚಾನ್ತೇ ಕಲ್ಪೋಽಭೂದ್ಯಂ ಪಾದ್ಮಮಭಿಚಕ್ಷತೇ ।
ಯದ್ಧರೇರ್ನಾಭಿಸರಸ ಆಸೀಲ್ಲೋಕಸರೋರುಹಮ್ ॥೩೫॥

ಆ ಪರಾರ್ಧದ ಕಡೆಯ ಭಾಗದ ಕಲ್ಪವನ್ನು 'ಪಾದ್ಮಕಲ್ಪ' ವೆನ್ನುತ್ತಾರೆ. ಶ್ರೀಭಗವಂತನ ನಾಭಿಸರೋವರದಿಂದ ಸರ್ವಲೋಕಮಯವಾದ ಪದ್ಮವು ಪ್ರಕಟವಾದ ಕಲ್ಪವದು.

ಅಯಂ ತು ಕಥಿತಃ ಕಲ್ಪೋ ದ್ವಿತೀಯಸ್ಯಾಪಿ ಭಾರತ ।
ವಾರಾಹ ಇತಿ ವಿಖ್ಯಾತೋ ಯತ್ರಾಸೀತ್ಸೂಕರೋ ಹರಿಃ ॥೩೬॥

ಓ ಭರತರ್ಷಭನೇ! ಈಗ ನಡೆಯುತ್ತಿರುವ ಕಲ್ಪವು ಎರಡನೆಯ ಪರಾರ್ಧದ ಪ್ರಾರಂಭಕ್ಕೆ ಸೇರಿದ್ದು. ಶ್ರೀಭಗವಂತನು ಇದರಲ್ಲಿ ವರಾಹದ (ಕಾಡುಹಂದಿಯ) ರೂಪವನ್ನು ಸ್ವೀಕರಿಸಿದ್ದರಿಂದ ಇದನ್ನು 'ವಾರಾಹ' ಕಲ್ಪವೆಂದು ಕರೆಯುತ್ತಾರೆ.

ಕಾಲೋಽಯಂ ದ್ವಿಪರಾರ್ಧಾಖ್ಯೋ ನಿಮೇಷ ಉಪಚರ್ಯತೇ ।
ಅವ್ಯಾಕೃತಸ್ಯಾನನ್ತಸ್ಯ ಅನಾದೇರ್ಜಗದಾತ್ಮನಃ ॥೩೭॥

ಕಾಲೋಽಯಂ ಪರಮಾಣ್ವಾದಿರ್ದ್ವಿಪರಾರ್ಧಾನ್ತ ಈಶ್ವರಃ ।
ನೈವೇಶಿತುಂ ಪ್ರಭುರ್ಭೂಮ್ನ ಈಶ್ವರೋಧಾಮಮಾನಿನಾಮ್ ॥೩೮॥

ಈ ಎರಡು ಪರಾರ್ಧಗಳ ಕಾಲವು–ಅವ್ಯಕ್ತನೂ, ಅನಂತನೂ, ಅನಾದಿಯೂ, ವಿಶ್ವಾತ್ಮನೂ ಆಗಿರುವ ಶ್ರೀಹರಿಗೆ ಒಂದು 'ನಿಮೇಷ' ಕಾಲ ಮಾತ್ರ ಆಗುವುದು. ಪರಮಾಣುವಿನಿಂದ ಎರಡು ಪರಾರ್ಧಕಾಲಪರ್ಯಂತ ವಾದ ಈ ಮಹಾಕಾಲವು ಸರ್ವಸಮರ್ಥವಾಗಿದ್ದರೂ ಸರ್ವಾತ್ಮನಾಗಿರುವ ಶ್ರೀಹರಿಯ ಮೇಲೆ ಯಾವ ಅಧಿಕಾರವನ್ನೂ ನಡೆಸಲಾರದು. ದೇಹಾದಿಗಳಲ್ಲಿ ಅಭಿಮಾನವನ್ನಿಟ್ಟಿರುವ ಜೀವಗಳ ಮೇಲೆ ಮಾತ್ರವೇ ಅದರ ಶಾಸನವು ನಡೆಯುವುದು.

ವಿಕಾರೈಃ ಸಹಿತೋ ಯುಕ್ತೈರ್ವಿಶೇಷಾದಿಭಿರಾವೃತಃ ।
ಆಣ್ಡಕೋಶೋ ಬಹಿರಯಂ ಪಞ್ಚಾಶತ್ಕೋಟಿವಿಸ್ತೃತಃ ॥೩೯॥

ದಶೋತ್ತರಾಧಿಕೈರ್ಯತ್ರ ಪ್ರವಿಷ್ಟಃ ಪರಮಾಣುವತ್ ।
ಲಕ್ಷ್ಯತೇಽನ್ತರ್ಗತಾಶ್ಚಾನ್ಯೇ ಕೋಟಿಶೋ ಹ್ಯಣ್ಡರಾಶಯಃ ॥೪೦॥

ತದಾಹುರಕ್ಷರಂ ಬ್ರಹ್ಮ ಸರ್ವಕಾರಣಕಾರಣಮ್ ।
ವಿಷ್ಣೋರ್ಧಾಮ ಪರಂ ಸಾಕ್ಷಾತ್ಪುರುಷಸ್ಯ ಮಹಾತ್ಮನಃ ॥೪೧॥

ಪ್ರಕೃತಿ, ಮಹತ್ತತ್ತ್ವ, ಅಹಂಕಾರ ಮತ್ತು ಪಂಚತನ್ಮಾತ್ರೆಗಳು–ಈ ಎಂಟು ಪ್ರಕೃತಿಗಳಿಂದೊಡಗೂಡಿದ ಹತ್ತು ಇಂದ್ರಿಯಗಳು, ಮನಸ್ಸು ಮತ್ತು ಪಂಚಭೂತಗಳು–ಎಂಬ ಈ ಹದಿನಾರು ವಿಕಾರಗಳು ಸೇರಿ ನಿರ್ಮಿತವಾಗಿರುವ ಈ ಬ್ರಹ್ಮಾಂಡಕೋಶವು ಒಳಗಡೆಯಿಂದ ಐವತ್ತು ಕೋಟಿ ಯೋಜನಗಳಷ್ಟು ವಿಸ್ತಾರವಾಗಿದೆ ಮತ್ತು ಇದರ ಹೊರಗೆ ನಾಲ್ಕೂ ಕಡೆಗಳಲ್ಲಿಯೂ ಏಳು ಆವರಣಗಳುಂಟು. ಆ ಆವರಣಗಳು ಇದಕ್ಕಿಂತಲೂ ತುಂಬಾ ದೊಡ್ಡವು. ಅವುಗಳಲ್ಲಿ ಮುಂದು-ಮುಂದಿನದು ಹಿಂದು-ಹಿಂದಿನದಿಕ್ಕಿಂತಲೂ ಹತ್ತರಷ್ಟು ವಿಸ್ತಾರವಾಗಿದೆ. ಆದರೆ ಇಷ್ಟು ಮಹಾವಿಸ್ತಾರವಾಗಿರುವ ಇವೆಲ್ಲವೂ ಯಾವುದರಲ್ಲಿ ಪರಮಾಣುಗಳಂತೆ ಕಾಣುತ್ತಿವೆಯೋ ಮತ್ತು ಇಂತಹ ಕೋಟಿ-ಕೋಟಿ ಬ್ರಹ್ಮಾಂಡರಾಶಿಗಳು ಯಾವುದರಲ್ಲಿ ಅಡ

---

* ಈ ಅನಂತಕೋಟಿಬ್ರಹ್ಮಾಂಡಗಳನ್ನೊಳಗೊಂಡಿರುವ ಮೂಲಪ್ರಕೃತಿಯನ್ನು ಪರಮಾತ್ಮನಾದ ಮಹಾವಿಷ್ಣುವಿನ ಧಾಮ (ಶರೀರ, ದೇಹ ಅಥವಾ ವಿಭೂತಿ) ಎನ್ನುವರು–"ಗೃಹದೇಹತ್ವಿಟ್‌ಪ್ರಭಾವಾ ಧಾಮಾನಿ"–ಎಂದೂ ಅರ್ಥಮಾಡ ಬಹುದು.

ಅದ್ಭುತವಿಸ್ತಾರವುಳ್ಳ ಇವೆಲ್ಲವೂ ಮೂಲಪ್ರಕೃತಿಯಲ್ಲಿ ಪರಮಾಣುವಿನಂತೆ ಮಾತ್ರ ಕಾಣುತ್ತಿವೆ. ಇಂತಹ ಅನೇಕಕೋಟಿಬ್ರಹ್ಮಾಂಡಗಳೂ ಇದರಲ್ಲಿ ಅಡಗಿ ಪರಮಾಣುವಿನಂತೆ ಕಾಣುತ್ತಿವೆ. ಮಹತ್ತು ಮುಂತಾದ ಸರ್ವಕಾರಣಗಳಿಗೂ ಕಾರಣವಾಗಿರುವ ಈ ಮೂಲಪ್ರಕೃತಿಯು ಪರಮಾತ್ಮನೂ–ಪರಮಪುರುಷನೂ ಆಗಿರುವ ಮಹಾವಿಷ್ಣುವಿಗೆ ಧಾಮ (ಶರೀರ) ವಾಗಿದೆಯೆಂದು ಜ್ಞಾನಿಗಳು ಹೇಳುತ್ತಾರೆ. 'ಯಸ್ಯಾವ್ಯಕ್ತಂ ಶರೀರಂ' ಎಂದು ಶ್ರುತಿಯು ಮೊಳಗುವಂತೆ ಇಂತಹ ಅಚಿಂತ್ಯವಾದ ವೈಭವವುಳ್ಳ ಮೂಲಪ್ರಕೃತಿಯು ಯಾವನಿಗೆ ಶರೀರವಾಗಿದೆಯೋ–ಅಂತಹ ಪರಮಾತ್ಮನ ಮೇಲೆ ಕಾಲವು ಹೇಗೆ ತಾನೇ ಅಧಿಕಾರವನ್ನು ನಡೆಸೀತು? ಧಾಮ = ದೇಹ. (ವೀರರಾಘವೀಯ)

ಪರಮಾಣು ಮತ್ತು ಪರಮಮಹತ್ತು–ಎಂಬ ಶಬ್ದಗಳಿಗೆ ವಾಚ್ಯನಾದವನು ಸಾಕ್ಷಾ

ಗಿವೆಯೋ–ಅಂತಹ ಪ್ರಧಾನವೇ (ಪ್ರಕೃತಿಯೇ) ಮುಂತಾದ ಸಮಸ್ತ ಕಾರಣಗಳಿಗೂ ಕಾರಣವಾಗಿರುವುದೇ ಅಕ್ಷರಬ್ರಹ್ಮವೆನಿಸುವುದು ಮತ್ತು ಅದೇ ಪುರಾಣಪುರುಷನಾದ ಸಾಕ್ಷಾತ್ ಪರಮಾತ್ಮನಾದ ಶ್ರೀಮಹಾವಿಷ್ಣುವಿನ ಧಾಮವು."

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೧೧ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೧೨ನೆಯ ಅಧ್ಯಾಯ

ಮೈತ್ರೇಯರು ವರ್ಣಿಸಿದ ಸೃಷ್ಟಿಯ ವಿಸ್ತಾರ

ಮೈತ್ರೇಯರು ವಿದುರನಿಗೆ ಸೃಷ್ಟಿಯ ವಿಸ್ತಾರವನ್ನು ವರ್ಣಿಸುತ್ತಾ ಅದನ್ನು ಹೀಗೆ ಮುಂದುವರಿಸಿದರು :

ಇತಿ ತೇ ವರ್ಣಿತಃ ಕ್ಷತ್ತಃ ಕಾಲಾಖ್ಯಃ ಪರಮಾತ್ಮನಃ ।
ಮಹಿಮಾ ವೇದಗರ್ಭೋಽಥ ಯಥಾಸ್ರಾಕ್ಷೀನ್ನಿಬೋಧ ಮೇ ॥೧॥

ಎಲೈ ಮಹಾತ್ಮನಾದ ವಿದುರನೇ! ಇಲ್ಲಿಯವರೆಗೆ ನಾನು ನಿನಗೆ ಶ್ರೀಭಗವಂತನ ಕಾಲರೂಪವಾದ ಮಹಾಮಹಿಮೆಯನ್ನು ವರ್ಣಿಸಿದನು.

ನ್ನಾರಾಯಣನೇ ; ಪಾರ್ಥಿವ ಮುಂತಾದುವುಗಳಲ್ಲಿ ಅಂಡಗಳಿಗೆ ಆಧಾರವಾಗಿರುವ ಈ ಶ್ರೀಭಗವಂತನನ್ನು ಬ್ರಹ್ಮದೇವರೇ ಮುಂತಾದ ಸಕಲಕಾರಣಗಳಿಗೂ ಕಾರಣನೆನ್ನುವರು. ಆ ಮಹಾಪರಿಮಾಣವುಳ್ಳ ಪರಮಪುರುಷನಿಗೆ ಈ ಅಂಡಕೋಶವು ಕೇವಲ ಮನೆಯಂತೆ. ಅದರಲ್ಲಿರುವ ಅಂಡರಾಶಿಗಳೂ ಕೇವಲ ಮನೆಯಂತೆ. ಅಂತಹ ಅಚಿನ್ತ್ಯಮಹಿಮನೂ, ದೇಶ-ಕಾಲ-ಗುಣಗಳಲ್ಲಿ ಅನಂತನೂ ಆಗಿರುವ ಶ್ರೀಭಗವಂತನೇ ಸಾಮೀಪ್ಯಾದಿರೂಪವಾದ ಮುಕ್ತಿಗೆ ಮುಖ್ಯಸಾಧನವಾಗಿರುವುದರಿಂದ ಅವನಲ್ಲಿ ನಿರತಿಶಯಭಕ್ತಿಯನ್ನು ಹೊಂದಿ ಆತನ ಜ್ಞಾನವನ್ನು ಮುಮುಕ್ಷುವು ಸಂಪಾದಿಸಬೇಕು. ಧಾಮ=ಗೃಹ. (ವಿಜಯಧ್ವಜೀಯ)

ಸರ್ವಕಾರಣಗಳಿಗೂ ಕಾರಣನಾದ, ಮಹಾತ್ಮನಾದ, ಪರಮಪುರುಷನಾದ, ಅವಿನಾಶಿ ಯಾದ, ವಿಷ್ಣುವಿನ ಧಾಮ (ಸ್ವರೂಪ) ವಾದ ಪರಬ್ರಹ್ಮವೆನ್ನುವರು. ಧಾಮ=ಸ್ವರೂಪ. (ಶ್ರೀಧರೀಯ) (ಶ್ಲೋಕ ೩೯-೪೧)

ಬ್ರಹ್ಮದೇವರು ಜಗತ್ತಿನ ಸೃಷ್ಟಿಯನ್ನು ಹೇಗೆ ಮಾಡಿದರೆಂಬುದನ್ನು ಈಗ ಹೇಳುತ್ತೇನೆ ; ಕೇಳು :

ಸಸರ್ಜಾಗ್ರೇಽನ್ಧತಾಮಿಸ್ರಮಥ ತಾಮಿಸ್ರಮಾದಿಕೃತ್ ।
ಮಹಾಮೋಹಂ ಚ ಮೋಹಂ ಚ ತಮಶ್ಚಾಜ್ಞಾನವೃತ್ತಯಃ ॥೨॥

ಅವರು ಮೊಟ್ಟಮೊದಲಿಗೆ ಅಜ್ಞಾನದ ಐದು ವೃತ್ತಿಗಳಾದ ತಮಸ್ಸು (ಅವಿದ್ಯೆ), ಮೋಹ (ಅಸ್ಮಿತೆ), ಮಹಾಮೋಹ (ರಾಗ), ತಾಮಿಸ್ರ (ದ್ವೇಷ) ಮತ್ತು ಮಹಾ ಅಂಧತಾಮಿಸ್ರ (ಅಭಿನಿವೇಶ) ಗಳನ್ನು ಸೃಷ್ಟಿಮಾಡಿದರು.

ದೃಷ್ಟ್ವಾ ಪಾಪೀಯಸೀಂ ಸೃಷ್ಟಿಂ ನಾತ್ಮಾನಂ ಬಹ್ವಮನ್ಯತ ।
ಭಗವದ್ಧ್ಯಾನಪೂತೇನ ಮನಸಾನ್ಯಾಂ ತತೋಽಸೃಜತ್ ॥೩॥

ಆದರೆ ತಮ್ಮ ಈ ಸೃಷ್ಟಿಯು ಅತ್ಯಂತಪಾಪಮಯವಾಗಿದ್ದುದರಿಂದ ಅದನ್ನು ಕಂಡು ಅವರಿಗೆ ಅದರಲ್ಲಿ ಪ್ರಸನ್ನತೆಯುಂಟಾಗಲಿಲ್ಲ. ಆಗ ಅವರು ತಮ್ಮ ಮನಸ್ಸನ್ನು ಪರಮಾತ್ಮನ ಧ್ಯಾನದಿಂದ ಪವಿತ್ರಮಾಡಿಕೊಂಡು ಪರಿಶುದ್ಧವಾದ ಆ ಮನಸ್ಸಿನಿಂದ ಬೇರೊಂದು ಸೃಷ್ಟಿಯನ್ನು ಮಾಡಿದರು.

ಸನಕಂ ಚ ಸನನ್ದಂ ಚ ಸನಾತನಮಥಾತ್ಮಭೂಃ ।
ಸನತ್ಕುಮಾರಂ ಚ ಮುನೀನ್ನಿಷ್ಕ್ರಿಯಾನೂರ್ಧ್ವರೇತಸಃ ॥೪॥

ಅವರ ಆ ಪರಿಶುದ್ಧಮನಸ್ಸಿನ ಸೃಷ್ಟಿಯೇ ಸನಕ, ಸನಂದನ, ಸನಾತನ, ಮತ್ತು ಸನತ್ಕುಮಾರ–ಎಂಬ ನಾಲ್ಕುಮಂದಿ ನಿವೃತ್ತಿಧರ್ಮಪರಾಯಣರಾದ ಊರ್ಧ್ವರೇತಸ್ಕರಾದ ಮುನಿಶ್ರೇಷ್ಠರು.

ತಾನ್ಬಭಾಷೇ ಸ್ವಭೂಃ ಪುತ್ರಾನ್ಪ್ರಜಾಃ ಸೃಜತ ಪುತ್ರಕಾಃ ।
ತನ್ನೈಚ್ಛನ್ಮೋಕ್ಷಧರ್ಮಾಣೋ ವಾಸುದೇವಪರಾಯಣಾಃ ॥೫॥

ತಮ್ಮ ಆ ಸುಪುತ್ರರಿಗೆ ಸ್ವಯಂಭೂಬ್ರಹ್ಮದೇವರು–'ಪುತ್ರರೇ! ಸೃಷ್ಟಿಯನ್ನು ಮಾಡಿರಿ'–ಎಂದು ಹೇಳಿದರು. ಆದರೆ ಅವರು ಹುಟ್ಟಿನಿಂದಲೇ ಮೋಕ್ಷಧರ್ಮವುಳ್ಳವರು. ನಿವೃತ್ತಿಮಾರ್ಗನಿಷ್ಠರು. ವಾಸುದೇವನಲ್ಲಿ ಪರಾಯಣರಾದವರು. ಅವರು ಪ್ರವೃತ್ತಿಧರ್ಮರೂಪವಾದ ಸೃಷ್ಟಿಯನ್ನು ಮಾಡಲು ಇಷ್ಟಪಡಲಿಲ್ಲ.

ಸೋಽವಧ್ಯಾತಃ ಸುತೈರೇವಂ ಪ್ರತ್ಯಾಖ್ಯಾತಾನುಶಾಸನೈಃ ।
ಕ್ರೋಧಂ ದುರ್ವಿಷಹಂ ಜಾತಂ ನಿಯನ್ತುಮುಪಚಕ್ರಮೇ ॥೬॥

ತನ್ನ ಪುತ್ರರು ಹೀಗೆ ತನ್ನ ಅಪ್ಪಣೆಯನ್ನು ಮೀರಿ ತಿರಸ್ಕಾರಮಾಡಿದುದನ್ನು ಕಂಡು ಬ್ರಹ್ಮದೇವರಿಗೆ ಸಹಿಸಲಾರದಷ್ಟು ಕ್ರೋಧವುಂಟಾಯಿತು. ಅವರು ಅದನ್ನು ತಡೆದುಕೊಳ್ಳಲು ಬುದ್ಧಿಯಿಂದ ಪ್ರಯತ್ನವನ್ನೇನೋ ಮಾಡಿದರು. ಆದರೆ ಅದು ಸಾಧ್ಯವಾಗಲಿಲ್ಲ.

ಧಿಯಾ ನಿಗೃಹ್ಯಮಾಣೋಽಪಿ ಭ್ರುವೋರ್ಮಧ್ಯಾತ್ಪ್ರಜಾಪತೇಃ ।
ಸದ್ಯೋಽಜಾಯತ ತನ್ಮನ್ಯುಃ ಕುಮಾರೋ ನೀಲಲೋಹಿತಃ ॥೭॥

ಸ ವೈ ರುರೋದ ದೇವಾನಾಂ ಪೂರ್ವಜೋ ಭಗವಾನ್ಭವಃ ।
ನಾಮಾನಿ ಕುರು ಮೇ ಧಾತಃ ಸ್ಥಾನಾನಿ ಚ ಜಗದ್ಗುರೋ ॥೮॥

ಸಹಿಸಲು ಅಶಕ್ಯವಾಗಿದ್ದ ಪ್ರಜಾಪತಿಯ ಆ ಕೋಪವು ಅವರ ಹುಬ್ಬುಗಳ ಮಧ್ಯದಿಂದ ನೀಲಿ ಮತ್ತು ಕೆಂಪುಬಣ್ಣದ ಒಬ್ಬ ಬಾಲಕನ ರೂಪದಲ್ಲಿ ಒಡನೆಯೇ ಉದ್ಭವಿಸಿತು. ಆ ಬಾಲಕನೇ ದೇವತೆಗಳಿಗೆಲ್ಲಾ ಮೊದಲು ಹುಟ್ಟಿದ ಭಗವಂತನಾದ ಭವ (ರುದ್ರ) ದೇವರು. ಆತನು ಅಳುತ್ತಾ- ಅಳುತ್ತಾ 'ಓ ಜಗದ್ಗುರುವೇ! ಸೃಷ್ಟಿಕರ್ತನೇ! ನನಗೆ ಹೆಸರುಗಳನ್ನೂ ವಾಸಸ್ಥಾನಗಳನ್ನೂ ತಿಳಿಸುವವನಾಗು'–ಎಂದು ಬ್ರಹ್ಮದೇವರನ್ನು ಕೇಳ ತೊಡಗಿದನು.

ಇತಿ ತಸ್ಯ ವಚಃ ಪಾದ್ಮೋ ಭಗವಾನ್ಪರಿಪಾಲಯನ್ ।
ಅಭ್ಯಧಾದ್ಭದ್ರಯಾ ವಾಚಾ ಮಾ ರೋದೀಸ್ತತ್ಕರೋಮಿ ತೇ ॥೯॥

ಯದರೋದೀಃ ಸುರಶ್ರೇಷ್ಠ ಸೋದ್ವೇಗ ಇವ ಬಾಲಕಃ ।
ತತಸ್ತ್ವಾಮಭಿಧಾಸ್ಯನ್ತಿ ನಾಮ್ನಾ ರುದ್ರ ಇತಿ ಪ್ರಜಾಃ ॥೧೦॥

ಆಗ ಪದ್ಮಸಂಭವರಾದ ಭಗವಾನ್ ಬ್ರಹ್ಮದೇವರು ಆ ಬಾಲಕನ ಪ್ರಾರ್ಥನೆಯನ್ನು ಈಡೇರಿಸಲು ಮಧುರವಾದ ವಾಣಿಯಿಂದ– "ಅಳಬೇಡವಪ್ಪಾ! ನಿನ್ನ ಇಷ್ಟವನ್ನು ಈಡೇರಿಸುತ್ತೇನೆ. ಓ ದೇವಶ್ರೇಷ್ಠನೇ! ನೀನು ಹುಟ್ಟಿದೊಡನೆಯೇ ಉದ್ವೇಗಗೊಂಡ ಬಾಲಕನಂತೆ ಅಳತೊಡಗಿದೆ. ಆದ್ದರಿಂದ ಜನರು ನಿನ್ನನ್ನು 'ರುದ್ರ' ಎಂಬ ಹೆಸರಿನಿಂದ ಕರೆಯುವರು.

ನೀನು ವಾಸಮಾಡಲು ಜಾಗಗಳನ್ನು ಕೇಳಿದೆಯಲ್ಲವೇ? ಅವುಗಳನ್ನು ಈ ಮೊದಲೇ ನಾನು ನಿನಗೆ ರಚನೆಮಾಡಿಟ್ಟಿದ್ದೇನೆ. ಹೃದಯ, ಇಂದ್ರಿಯ, ಪ್ರಾಣ, ಆಕಾಶ, ವಾಯು, ಅಗ್ನಿ, ಜಲ, ಪೃಥಿವೀ, ಸೂರ್ಯ, ಚಂದ್ರ ಮತ್ತು ತಪಸ್ಸು–ಇವೇ ಆ ಸ್ಥಾನಗಳು. ಮನ್ಯು, ಮನು, ಮಹಿನಸ, ಮಹಾನ್, ಶಿವ, ಋತಧ್ವಜ, ಉಗ್ರರೇತಸ, ಭವ, ಕಾಲ, ವಾಮದೇವ ಮತ್ತು ಧೃತವ್ರತ–ಇವು ನಿನ್ನ ಹೆಸರುಗಳಾಗುವುವು. ಓ ರುದ್ರದೇವನೇ! ಧೀ, ವೃತ್ತಿ, ಉಶನಾ, ಉಮಾ, ನಿಯುತ್, ಸರ್ಪಿ, ಇಳಾ, ಅಂಬಿಕಾ, ಇರಾವತೀ, ಸುಧಾ ಮತ್ತು ದೀಕ್ಷಾ–ಎಂಬ ಹನ್ನೊಂದು ಮಂದಿ ರುದ್ರಾಣಿಯರೂ ನಿನ್ನ ಪತ್ನಿಯರು. ಈ ಹೆಸರುಗಳನ್ನೂ, ಸ್ಥಾನಗಳನ್ನೂ, ಪತ್ನಿಯರನ್ನೂ ಸ್ವೀಕರಿಸಿ ಇವರ ಮೂಲಕ ಬಹುಮಂದಿ ಪ್ರಜೆಗಳನ್ನು ಸೃಷ್ಟಿಸು. ಏಕೆಂದರೆ : ನೀನು ಒಬ್ಬ ಪ್ರಜಾಪತಿಯಾಗಿದ್ದೀಯೆ''–ಎಂದು ಆತನಿಗೆ ಹೇಳಿದರು.

ಇತ್ಯಾದಿಷ್ಟಃ ಸ ಗುರುಣಾ ಭಗವಾನ್ನೀಲಲೋಹಿತಃ ।
ಸತ್ತ್ವಾಕೃತಿಸ್ವಭಾವೇನ ಸಸರ್ಜಾತ್ಮಸಮಾಃ ಪ್ರಜಾಃ ॥೧೫॥

ಲೋಕಗುರುವಾದ ಬ್ರಹ್ಮದೇವರಿಂದ ಹೀಗೆ ಆದೇಶ ಬರಲು–ಭಗವಂತರಾದ ನೀಲಲೋಹಿತರುದ್ರದೇವರು ಬಲ, ಆಕಾರ ಮತ್ತು ಸ್ವಭಾವ ಗಳೆಲ್ಲದರಲ್ಲೂ ತನ್ನಂತೆಯೇ ಇರುವ ಪ್ರಜೆಗಳನ್ನು ಸೃಷ್ಟಿಸತೊಡಗಿದರು.

ರುದ್ರದೇವರಿಂದ ಉತ್ಪನ್ನರಾದ ಈ ಅಸಂಖ್ಯರುದ್ರರು ಗುಂಪುಗಳನ್ನು ಮಾಡಿಕೊಂಡು ಜಗತ್ತನ್ನೆಲ್ಲಾ ಭಕ್ಷಿಸತೊಡಗಿದರು. ಅದನ್ನು ನೋಡಿ ಬ್ರಹ್ಮದೇವರಿಗೆ ತುಂಬಾ ಭಯ-ಶಂಕೆಗಳುಂಟಾದುವು. ಆಗ ಅವರು ರುದ್ರದೇವರನ್ನು ಕುರಿತು–''ಓ ದೇವಶ್ರೇಷ್ಠನೇ! ನಿನ್ನ ಪ್ರಜೆಗಳಾದರೋ ತಮ್ಮ ಭಯಂಕರದೃಷ್ಟಿಗಳಿಂದ ನನ್ನನ್ನೂ ಮತ್ತು ಎಲ್ಲ ದಿಕ್ಕುಗಳನ್ನೂ ಸುಟ್ಟುಹಾಕಲು ತೊಡಗಿದ್ದಾರೆ. ಆದ್ದರಿಂದ ಇಂತಹ ಸೃಷ್ಟಿಯನ್ನು ಇನ್ನು ಮುಂದೆ ಮಾಡಬೇಡ.

ತಪ ಆತಿಷ್ಠ ಭದ್ರಂ ತೇ ಸರ್ವಭೂತಸುಖಾವಹಮ್ ।
ತಪಸೈವ ಯಥಾಪೂರ್ವಂ ಸ್ರಷ್ಟಾ ವಿಶ್ವಮಿದಂ ಭವಾನ್ ॥೧೮॥

ನಿನಗೆ ಮಂಗಳವಾಗಲಿ. ಈಗ ನೀನು ಸಮಸ್ತಪ್ರಾಣಿಗಳಿಗೂ ಸುಖವನ್ನುಂಟುಮಾಡುವುದಕ್ಕೋಸ್ಕರ ತಪಸ್ಸನ್ನಾಚರಿಸು. ಮತ್ತೆ ಆ ತಪಸ್ಸಿನ ಪ್ರಭಾವದಿಂದಲೇ ಪೂಜ್ಯನಾದ ನೀನು ಹಿಂದಿನಂತೆ ಈ ವಿಶ್ವವನ್ನು ಸೃಷ್ಟಿಸುವೆಯಂತೆ.

ತಪಸೈವ ಪರಂ ಜ್ಯೋತಿರ್ಭಗವನ್ತಮಧೋಕ್ಷಜಮ್ ।
ಸರ್ವಭೂತಗುಹಾವಾಸಮಞ್ಜಸಾ ವಿನ್ದತೇ ಪುಮಾನ್ ॥೧೯॥

ಮನುಷ್ಯನು–ಪರಂಜ್ಯೋತಿಯೂ, ಅತೀಂದ್ರಿಯನೂ, ಸಮಸ್ತ ಭೂತಗಳ ಹೃದಯಗುಹೆಗಳಲ್ಲಿ ಅಡಗಿರುವವನೂ ಆದ ಪರಮಾತ್ಮನನ್ನು ಸುಲಭವಾಗಿ ಹೊಂದುವುದೂ ತಪಸ್ಸಿನ ಮೂಲಕವೇ."

ಶ್ರೀಮೈತ್ರೇಯರು ವಿದುರನಿಗೆ ಹೇಳುತ್ತಾರೆ :

ಏವಮಾತ್ಮಭುವಾದಿಷ್ಟಃ ಪರಿಕ್ರಮ್ಯ ಗಿರಾಂ ಪತಿಮ್ ।
ಬಾಢಮಿತ್ಯಮುಮಾಮನ್ತ್ರ್ಯ ವಿವೇಶ ತಪಸೇ ವನಮ್ ॥೨೦॥

ಬ್ರಹ್ಮದೇವರು ಹೀಗೆ ಆಣತಿಯನ್ನು ನೀಡಲು ರುದ್ರದೇವರು 'ಹಾಗೆಯೇ ಆಗಲಿ'–ಎಂದು ಹೇಳಿ, ಅವರಿಗೆ ಪ್ರದಕ್ಷಿಣೆಮಾಡಿ, ಅವರ ಅನುಮತಿಯನ್ನು ಪಡೆದು ತಪಸ್ಸನ್ನಾಚರಿಸುವುದಕ್ಕಾಗಿ ಅರಣ್ಯಕ್ಕೆ ತೆರಳಿದರು.

ಅಥಾಭಿಧ್ಯಾಯತಃ ಸರ್ಗಂ ದಶ ಪುತ್ರಾಃ ಪ್ರಜಜ್ಞಿರೇ ।
ಭಗವಚ್ಛಕ್ತಿಯುಕ್ತಸ್ಯ ಲೋಕಸನ್ತಾನಹೇತವಃ ॥೨೧॥

ಅನಂತರ ಶ್ರೀಭಗವಂತನ ಶಕ್ತಿಯಿಂದ ಸಂಪನ್ನರಾದ ಬ್ರಹ್ಮದೇವರು ಸೃಷ್ಟಿಯನ್ನು ಮಾಡಲು ಸಂಕಲ್ಪಿಸಿದರು. ಆಗ ಅವರಿಗೆ ಹತ್ತು ಮಂದಿ ಪುತ್ರರು ಜನಿಸಿದರು. ಲೋಕದಲ್ಲಿ ಪ್ರಜಾವೃದ್ಧಿಯು ಬಹುಮಟ್ಟಿಗೆ ಆದದ್ದು ಆ ಪುತ್ರರಿಂದಲೇ.

ಮರೀಚಿರತ್ರ್ಯಙ್ಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ಭೃಗುರ್ವಸಿಷ್ಠೋ ದಕ್ಷಶ್ಚ ದಶಮಸ್ತತ್ರ ನಾರದಃ ॥೨೨॥

ಮರೀಚಿ, ಅತ್ರಿ, ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ಭೃಗು,

ವಸಿಷ್ಠ, ದಕ್ಷ ಮತ್ತು ಹತ್ತನೆಯವರಾಗಿ ನಾರದ–ಎಂಬ ಇವರೇ ಆ ಹತ್ತು ಮಂದಿ ಪುತ್ರಶ್ರೇಷ್ಠರು.

ಉತ್ಸಙ್ಗಾನ್ನಾರದೋ ಜಜ್ಞೇ ದಕ್ಷೋಽಙ್ಗುಷ್ಠಾತ್ಸ್ವಯಮ್ಭುವಃ ।
ಪ್ರಾಣಾದ್ವಸಿಷ್ಠಃ ಸಞ್ಜಾತೋ ಭೃಗುಸ್ತ್ವಚಿ ಕರಾತ್ಕ್ರತುಃ ॥೨೩॥

ಪುಲಹೋ ನಾಭಿತೋ ಜಜ್ಞೇ ಪುಲಸ್ತ್ಯಃ ಕರ್ಣಯೋರೃಷಿಃ ।
ಅಙ್ಗಿರಾ ಮುಖತೋಽಕ್ಷ್ಣೋಽತ್ರಿರ್ಮರೀಚಿರ್ಮನಸೋಽಭವತ್ ॥

ಆ ಹತ್ತು ಮಂದಿಯಲ್ಲಿ ಯಾರು-ಯಾರು ಬ್ರಹ್ಮದೇವರ ಯಾವ-ಯಾವ ಅಂಗಗಳಿಂದ ಹುಟ್ಟಿದರು ಎಂಬುದನ್ನು ಹೇಳುತ್ತೇನೆ ; ಕೇಳು : ನಾರದಮಹರ್ಷಿಗಳು ಬ್ರಹ್ಮದೇವರ ತೊಡೆಯಿಂದ ಜನಿಸಿದರು. ಅವರ ಅಂಗುಷ್ಠದಿಂದ ದಕ್ಷಪ್ರಜಾಪತಿಯೂ, ಪ್ರಾಣದಿಂದ ವಸಿಷ್ಠಮಹರ್ಷಿಗಳೂ, ತೊಗಲಿನಿಂದ ಭೃಗುಮಹರ್ಷಿಗಳೂ, ಹಸ್ತದಿಂದ ಕ್ರತುವೂ, ಹೊಕ್ಕಳಿನಿಂದ ಪುಲಹರೂ, ಕಿವಿಗಳಿಂದ ಮಹರ್ಷಿಪುಲಸ್ತ್ಯರೂ, ಬಾಯಿಂದ ಅಂಗೀರಸ ಮಹರ್ಷಿಗಳೂ, ಕಣ್ಣುಗಳಿಂದ ಅತ್ರಿಮಹರ್ಷಿಗಳೂ, ಮನಸ್ಸಿನಿಂದ ಮರೀಚಿ ಮಹರ್ಷಿಗಳೂ ಹುಟ್ಟಿದರು.

ಧರ್ಮಃ ಸ್ತನಾದ್ದಕ್ಷಿಣತೋ ಯತ್ರ ನಾರಾಯಣಃ ಸ್ವಯಮ್ ।
ಅಧರ್ಮಃ ಪೃಷ್ಠತೋ ಯಸ್ಮಾನ್ಮೃತ್ಯುರ್ಲೋಕಭಯಂಕರಃ ॥೨೫॥

ಬ್ರಹ್ಮದೇವರ ಬಲಗಡೆಯ ಸ್ತನದಿಂದ ಮುಂದೆ ನಾರಾಯಣನಿಗೆ ಜನಕನಾಗುವ ಭಾಗ್ಯವನ್ನು ಪಡೆದ ಧರ್ಮದೇವರು ಜನಿಸಿದರು. ಬ್ರಹ್ಮ ದೇವರ ಬೆನ್ನಿನಿಂದ ಅಧರ್ಮವು ಹುಟ್ಟಿತು. ಲೋಕಗಳಿಗೆಲ್ಲಾ ಭಯವನ್ನು ಉಂಟುಮಾಡುವ ಮೃತ್ಯುವು ಜನಿಸಿದ್ದು ಆ ಅಧರ್ಮದಿಂದಲೇ.

ಹೃದಿ ಕಾಮೋ ಭ್ರುವಃ ಕ್ರೋಧೋ ಲೋಭಶ್ಚಾಧರದಚ್ಛದಾತ್ ।
ಆಸ್ಯಾದ್ವಾಕ್ಸಿನ್ಧವೋ ಮೇಢ್ರಾನ್ನಿರ್ಋತಿಃ ಪಾಯೋರಘಾಶ್ರಯಃ ॥೨೬॥

ಹೀಗೆಯೇ ಬ್ರಹ್ಮದೇವರ ಹೃದಯದಿಂದ ಕಾಮವೂ, ಹುಬ್ಬುಗಳಿಂದ ಕ್ರೋಧವೂ, ಕೆಳದುಟಿಯಿಂದ ಲೋಭವೂ, ಬಾಯಿಂದ ಮಾತಿಗೆ ಅಧಿಷ್ಠಾತೃ ದೇವತೆಯಾದ ಸರಸ್ವತಿಯೂ, ಲಿಂಗದಿಂದ ಸಮುದ್ರಗಳೂ, ಗುದದಿಂದ

ರಾಕ್ಷಸಾಧಿಪತಿಯೂ, ಪಾಪಗಳಿಗೆ ನಿವಾಸಸ್ಥಾನವೂ ಆದ ನಿರ್ಋತಿಯೂ ಉದ್ಭವಿಸಿದರು.

ಛಾಯಾಯಾಃ ಕರ್ದಮೋ ಜಜ್ಞೇ ದೇವಹೂತ್ಯಾಃ ಪತಿಃ ಪ್ರಭುಃ ।
ಮನಸೋ ದೇಹತಶ್ಚೇದಂ ಜಜ್ಞೇ ವಿಶ್ವಕೃತೋ ಜಗತ್ ॥೨೭॥

ಬ್ರಹ್ಮದೇವರ ನೆರಳಿನಿಂದ ಮುಂದೆ ದೇವಹೂತಿಯ ಪತಿದೇವರಾದ, ಪೂಜ್ಯರಾದ ಕರ್ದಮರು ಜನಿಸಿದರು. ಹೀಗೆ ಈ ಇಡೀ ಜಗತ್ತೂ ಸೃಷ್ಟಿಕರ್ತರಾದ ಬ್ರಹ್ಮದೇವರ ಶರೀರ ಮತ್ತು ಮನಸ್ಸುಗಳಿಂದ ಉಂಟಾಗಿದೆ.

ವಾಚಂ ದುಹಿತರಂ ತನ್ವೀಂ ಸ್ವಯಮ್ಭೂರ್ಹರತೀಂ ಮನಃ ।
ಅಕಾಮಾಂ ಚಕಮೇ ಕ್ಷತ್ತಃ ಸಕಾಮ ಇತಿ ನಃ ಶ್ರುತಮ್ ॥೨೮॥

ಮಹಾತ್ಮನಾದ ವಿದುರನೇ! ಬ್ರಹ್ಮದೇವರ ಕನ್ಯೆಯಾದ ಸರಸ್ವತಿಯು ಅತ್ಯಂತಸುಕುಮಾರಿಯೂ ಸುಂದರಿಯೂ ಆಗಿದ್ದಳು. ಆಕೆಗೆ ಕಾಮವಿಲ್ಲದಿದ್ದರೂ ಬ್ರಹ್ಮದೇವರು ಆಕೆಯನ್ನು ಕಾಮಿಸಿದರು–ಎಂದು ನಾವು ಕೇಳಿದ್ದೇವೆ.

ತಮಧರ್ಮೇ ಕೃತಮತಿಂ ವಿಲೋಕ್ಯ ಪಿತರಂ ಸುತಾಃ ।
ಮರೀಚಿಮುಖ್ಯಾ ಮುನಯೋ ವಿಶ್ರಮ್ಭಾತ್ಪ್ರತ್ಯಬೋಧಯನ್ ॥೨೯॥

ನೈತತ್ಪೂರ್ವೈಃ ಕೃತಂ ತ್ವದ್ಯ ನ ಕರಿಷ್ಯನ್ತಿ ಚಾಪರೇ ।
ಯತ್ತ್ವಂ ದುಹಿತರಂ ಗಚ್ಛೇರನಿಗೃಹ್ಯಾಙ್ಗಜಂ ಪ್ರಭುಃ ॥೩೦॥

ಬ್ರಹ್ಮದೇವರು ಇಂತಹ ಅಧರ್ಮಮಯವಾದ ಸಂಕಲ್ಪಮಾಡಿದ್ದನ್ನು ಕಂಡು ಅವರ ಪುತ್ರರಾದ ಮರೀಚಿಗಳೇ ಮುಂತಾದ ಮಹರ್ಷಿಗಳು ಅವರನ್ನು ವಿಶ್ವಾಸಪೂರ್ವಕವಾಗಿ ಎಚ್ಚರಿಸುತ್ತಾ ಹೀಗೆ ಅರಿಕೆಮಾಡಿದರು– "ತೀರ್ಥರೂಪರೇ! ತಾವು ಸಮರ್ಥರು. ಮನಸ್ಸಿನಲ್ಲಿ ಉಂಟಾಗಿರುವ ಈ ಕಾಮದ ವೇಗವನ್ನು ತಡೆಯುವ ಶಕ್ತಿ ಇದ್ದರೂ ತಾವು ಅದನ್ನು ತಡೆಗಟ್ಟದೇ ಪುತ್ರೀಗಮನವನ್ನು ಮಾಡಲು ಸಂಕಲ್ಪಿಸಿದ್ದೀರಲ್ಲಾ! ಇಂತಹ ಪಾಪವನ್ನು ಹಿಂದಿನ ಯಾವ ಬ್ರಹ್ಮದೇವರೂ ಮಾಡಿಲ್ಲ; ಮುಂದಿನವರೂ ಮಾಡುವುದಿಲ್ಲ.

ತೇಜೀಯಸಾಮಪಿ ಹ್ಯೇತನ್ನ ಸುಶ್ಲೋಕ್ಯಂ ಜಗದ್ಗುರೋ ।
ಯದ್ವೃತ್ತಮನುತಿಷ್ಠನ್ವೈ ಲೋಕಃ ಕ್ಷೇಮಾಯ ಕಲ್ಪತೇ ॥೩೧॥

ಜಗತ್ತಿಗೇ ಗುರುವಾದವರೇ! ತಾವು ಅತ್ಯಂತತೇಜಸ್ವಿಗಳು. ಯಾವ ಪಾಪವೂ ಅಂಟದವರು. ಎಂತಹ ಪಾಪವನ್ನಾದರೂ ಒದರಿಹಾಕಿಬಿಡುವ ಸಾಮರ್ಥ್ಯವುಳ್ಳವರು ಎಂಬುದು ನಿಜ. ಆದರೂ ತಾವು ಇಂತಹ ಕಾರ್ಯವನ್ನು ಮಾಡುವುದು ಕೀರ್ತಿಕರವಲ್ಲ. ಏಕೆಂದರೆ : ತಮ್ಮ ಆಚರಣೆಯ ಆದರ್ಶವನ್ನೇ ಲೋಕವು ಅನುಸರಿಸಬೇಕಾಗಿದೆ. ಅದರ ಅನುಸರಣೆಯಿಂದಲೇ ಲೋಕಕ್ಕೆ ಒಳ್ಳೆಯದಾಗುವುದು.*

ತಸ್ಮೈ ನಮೋ ಭಗವತೇ ಯ ಇದಂ ಸ್ವೇನ ರೋಚಿಷಾ ।
ಆತ್ಮಸ್ಥಂ ವ್ಯಞ್ಜಯಾಮಾಸ ಸ ಧರ್ಮಂ ಪಾತುಮರ್ಹತಿ ॥೩೨॥

ಯಾವನು ತನ್ನಲ್ಲಿ ವಿಲೀನಗೊಂಡಿರುವ ಈ ಜಗತ್ತನ್ನು ಸ್ವಪ್ರಕಾಶದಿಂದಲೇ ಹೊರಹೊಮ್ಮಿಸುವನೋ–ಆ ಪರಮಾತ್ಮನಿಗೆ ನಮೋ ನಮಃ. ಈ ಸಮಯದಲ್ಲಿ ಆತನು ತಾನೇ ಧರ್ಮವನ್ನು ಸಂರಕ್ಷಿಸಬಲ್ಲನು!"

ಸ ಇತ್ಥಂ ಗೃಣತಃ ಪುತ್ರಾನ್ಪುರೋ ದೃಷ್ಟ್ವಾ ಪ್ರಜಾಪತೀನ್ ।
ಪ್ರಜಾಪತಿಪತಿಸ್ತನ್ವಂ ತತ್ಯಾಜ ವ್ರೀಡಿತಸ್ತದಾ ।
ತಾಂ ದಿಶೋ ಜಗೃಹುರ್ಘೋರಾಂ ನೀಹಾರಂ ಯದ್ವಿದುಸ್ತಮಃ ॥೩೩॥

ತನ್ನ ಪುತ್ರರಾದ ಮರೀಚಿಗಳೇ ಮುಂತಾದ ಪ್ರಜಾಪತಿಗಳು ತಮ್ಮ ಮುಂದೆ ಹೀಗೆ ಹೇಳುತ್ತಿರುವುದನ್ನು ನೋಡಿ ಪ್ರಜಾಪತಿಗಳಿಗೂ ಪತಿಯಾದ ಬ್ರಹ್ಮದೇವರಿಗೆ ತುಂಬಾ ನಾಚಿಕೆಯುಂಟಾಗಿ ಅವರು ಒಡನೆಯೇ ಆ ದೇಹವನ್ನು ತೊರೆದುಬಿಟ್ಟರು. ಹೀಗೆ ಅವರು ತೊರೆದ ಘೋರವಾದ ಶರೀರವನ್ನು ದಿಕ್ಕುಗಳು ಪರಿಗ್ರಹಿಸಿದುವು. ಅದೇ ಮಂಜು ; ಅದನ್ನು ಅಂಧಕಾರವೆಂದು ಕರೆಯುತ್ತಾರೆ.

ಕದಾಚಿದ್ಧ್ಯಾಯತಃ ಸ್ರಷ್ಟುರ್ವೇದಾ ಆಸಂಶ್ಚತುರ್ಮುಖಾತ್ ।
ಕಥಂ ಸ್ರಕ್ಷ್ಯಾಮ್ಯಹಂ ಲೋಕಾನ್ಸಮವೇತಾನ್ಯಥಾ ಪುರಾ ॥೩೪॥

---

* "ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ । ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥" (ಶ್ರೀಗೀತಾ) (ಶ್ಲೋಕ ೩೧)

ಒಮ್ಮೆ ಬ್ರಹ್ಮದೇವರು–‘ನಾನು ಎಲ್ಲ ಲೋಕಗಳನ್ನೂ ಅವು ಹಿಂದೆ ಇದ್ದಂತೆಯೇ ವ್ಯವಸ್ಥಿತವಾದ ರೂಪದಲ್ಲಿ ಸೃಷ್ಟಿಮಾಡಬೇಕು’–ಎಂದು ಯೋಚಿಸುತ್ತಿದ್ದರು. ಆಗ ಅವರ ನಾಲ್ಕು ಮುಖಗಳಿಂದ ನಾಲ್ಕು ವೇದಗಳು ಪ್ರಕಟಗೊಂಡುವು.

ಚಾತುರ್ಹೋತ್ರ ಕರ್ಮತನ್ತ್ರಮುಪವೇದನಯೈಃ ಸಹ ।
ಧರ್ಮಸ್ಯ ಪಾದಾಶ್ಚತ್ವಾರಸ್ತಥೈವಾಶ್ರಮವೃತ್ತಯಃ ॥೩೫॥

ಇವುಗಳಲ್ಲದೇ ಉಪವೇದಗಳು, ನ್ಯಾಯಶಾಸ್ತ್ರ, ಅಧ್ವರ್ಯು, ಉದ್ಗಾತ್ರ, ಹೋತೃ ಮತ್ತು ಬ್ರಹ್ಮ ಎಂಬ ನಾಲ್ಕು ಮಂದಿ ಋತ್ವಿಕ್ಕುಗಳ ಕರ್ಮಗಳು, ಯಜ್ಞಗಳ ವಿಸ್ತಾರ, ಧರ್ಮದ ನಾಲ್ಕು ಪಾದಗಳು, ನಾಲ್ಕು ಆಶ್ರಮಗಳು ಮತ್ತು ಅವುಗಳ ವೃತ್ತಿಗಳು–ಇವುಗಳು ಕೂಡ ಬ್ರಹ್ಮದೇವರ ಬಾಯಿಂದ ಉದ್ಭವಿಸಿದುವು.”

ಸ ವೈ ವಿಶ್ವಸೃಜಾಮೀಶೋ ವೇದಾದೀನ್ಮುಖತೋಽಸೃಜತ್ ।
ಯದ್ಯದ್ಯೇನಾಸೃಜದ್ದೇವಸ್ತನ್ಮೇ ಬ್ರೂಹಿ ತಪೋಧನ ॥೩೬॥

ಮೈತ್ರೇಯರ ಮಾತುಗಳನ್ನು ಕೇಳಿದ ವಿದುರನು–“ತಪೋಧರನೇ! ಸೃಷ್ಟಿಕರ್ತರಾದ ಪ್ರಜಾಪತಿಗಳಿಗೂ ಪ್ರಭುವಾದ ಬ್ರಹ್ಮದೇವರು ತಮ್ಮ ಮುಖಗಳಿಂದ ವೇದವೇ ಮುಂತಾದುವನ್ನು ಹೊರಹೊಮ್ಮಿಸಿದಾಗ ಅವರ ಯಾವ-ಯಾವ ಮುಖದಿಂದ ಯಾವ-ಯಾವ ವಸ್ತುಗಳನ್ನು ನಿರ್ಮಾಣ ಮಾಡಿದರು ಎಂಬುದನ್ನು ದಯೆಯಿಟ್ಟು ನನಗೆ ತಿಳಿಸಬೇಕು”–ಎಂದು ಅವರಲ್ಲಿ ವಿಜ್ಞಾಪಿಸಿದನು.

ಮೈತ್ರೇಯಮಹರ್ಷಿಗಳು ವಿದುರನಿಗೆ ಹೇಳುತ್ತಾರೆ :

ಋಗ್ಯಜುಃಸಾಮಾಥರ್ವಾಖ್ಯಾನ್ವೇದಾನ್ಪೂರ್ವಾದಿಭಿರ್ಮುಖೈಃ ।
ಶಸ್ತ್ರಮಿಜ್ಯಾಂ ಸ್ತುತಿಸ್ತೋಮಂ ಪ್ರಾಯಶ್ಚಿತ್ತಂ ವ್ಯಧಾತ ಮಾತ್ ॥೩೭॥

“ವಿದುರ! ಬ್ರಹ್ಮದೇವರು ತಮ್ಮ ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರದಿಕ್ಕುಗಳ ಮುಖಗಳಿಂದ ಕ್ರಮವಾಗಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳನ್ನು ಪ್ರಕಟಪಡಿಸಿದರು ಮತ್ತು

ಇದೇ ಕ್ರಮದಲ್ಲೇ ಹೋತೃವಿನ ಕರ್ಮವಾದ ಶಸ್ತ್ರವನ್ನೂ, ಅಧ್ವರ್ಯುವಿನ ಕರ್ಮವಾದ ಇಜ್ಯೆಯನ್ನೂ, ಉದ್ಗಾತೃವಿನ ಕರ್ಮವಾದ ಸ್ತುತಿ-ಸ್ತೋಮವನ್ನೂ ಮತ್ತು ಬ್ರಹ್ಮನ ಕರ್ಮವಾದ ಪ್ರಾಯಶ್ಚಿತ್ತವನ್ನೂ ಹೊರತಂದರು.*

ಆಯುರ್ವೇದಂ ಧನುರ್ವೇದಂ ಗಾನ್ಧರ್ವಂ ವೇದಮಾತ್ಮನಃ ।
ಸ್ಥಾಪತ್ಯಂ ಚಾಸೃಜದ್ವೇದಂ ಕ್ರಮಾತ್ಪೂರ್ವಾದಿಭಿರ್ಮುಖೈಃ ॥೩೮॥

ಇದೇ ಪ್ರಕಾರದಲ್ಲೇ ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಸ್ಥಾಪತ್ಯವೇದ (ಶಿಲ್ಪವಿದ್ಯೆ)–ಎಂಬ ನಾಲ್ಕು ಉಪವೇದಗಳನ್ನೂ ಕ್ರಮವಾಗಿ ಪೂರ್ವಾದಿ ದಿಕ್ಕುಗಳ ಮುಖಗಳಿಂದಲೇ ನಿರ್ಮಾಣ ಮಾಡಿದರು.

ಇತಿಹಾಸಪುರಾಣಾನಿ ಪಞ್ಚಮಂ ವೇದಮೀಶ್ವರಃ ।
ಸರ್ವೇಭ್ಯ ಏವ ವಕ್ತ್ರೇಭ್ಯಃ ಸಸೃಜೇ ಸರ್ವದರ್ಶನಃ ॥೩೯॥

ಅನಂತರ ಸರ್ವಜ್ಞರಾದ ಆ ಬ್ರಹ್ಮದೇವರು ಇತಿಹಾಸ-ಪುರಾಣರೂಪವಾದ ಐದನೇ ವೇದವನ್ನೂ ನಿರ್ಮಿಸಿದರು.

ಷೋಡಶ್ಯುಕ್ಥೌ ಪೂರ್ವವಕ್ತ್ರಾತ್ಪುರೀಷ್ಯಗ್ನಿಷ್ಟುತಾವಥ ।
ಆಪ್ತೋರ್ಯಾಮಾತಿರಾತ್ರೌ ಚ ವಾಜಪೇಯಂ ಸಗೋಸವಮ್ ॥೪೦॥

ಅದೇ ಕ್ರಮದಲ್ಲಿಯೇ ಷೋಡಶೀ ಮತ್ತು ಉಕ್ಥ್ಯ, ಚಯನ ಮತ್ತು ಅಗ್ನಿಷ್ಟೋಮ, ಆಪ್ತೋರ್ಯಾಮ ಮತ್ತು ಅತಿರಾತ್ರ, ವಾಜಪೇಯ ಮತ್ತು

---

* ಶಸ್ತ್ರಂ = ಹೋತೃವು ಸಂಗೀತವಿಲ್ಲದೇ ಹೊಗಳುವ ಋಗ್ವೇದಮಂತ್ರಗಳು ಮತ್ತು ಅವುಗಳಿಂದ ಮಾಡುವ ಕರ್ಮ. ಇಜ್ಯಾ = ಅಧ್ವರ್ಯುವು ಹೇಳುವ ಯಜುರ್ವೇದ ಮಂತ್ರಗಳು ಮತ್ತು ಅವುಗಳ ಕರ್ಮಗಳು. ಸ್ತುತಿಸ್ತೋಮಂ = ಸಾಮವೇದಿಯಾದ ಉದ್ಗಾತೃವು ಸಂಗೀತರೂಪದಲ್ಲಿ ಗಾನಮಾಡುವ ಸ್ತುತಿರೂಪವಾದ ಸಾಮಮಂತ್ರಗಳು ಮತ್ತು ಅವುಗಳಿಂದ ಮಾಡುವ ಕರ್ಮಗಳು. ಪ್ರಾಯಶ್ಚಿತ್ತಂ = ಬ್ರಹ್ಮಸ್ಥಾನದಲ್ಲಿರುವ ಋತ್ವಿಜನು ಅಥರ್ವವೇದಮಂತ್ರಗಳಿಂದ ಮಾಡುವ ಕರ್ಮಗಳು. ಈ ನಾಲ್ಕು ಮಂದಿ ಋತ್ವಿಜರೂ ಸೇರಿ ನಡೆಯಿಸುವ ಕರ್ಮಕ್ಕೆ ಚಾತುರ್ಹೋತ್ರ ಅಥವಾ ಯಜ್ಞ ಎಂದು ಹೆಸರು.

(ಶ್ಲೋಕ ೩೭)

ಗೋಸವ–ಎಂಬ ಎರಡೆರಡು ಯಾಗಗಳೂ ಪೂರ್ವವೇ ಮುಂತಾದ ದಿಕ್ಕುಗಳ ಮುಖಗಳಿಂದ ಉತ್ಪನ್ನವಾದುವು.

ವಿದ್ಯಾ ದಾನಂ ತಪಃ ಸತ್ಯಂ ಧರ್ಮಸ್ಯೇತಿ ಪದಾನಿ ಚ ।
ಆಶ್ರಮಾಂಶ್ಚ ಯಥಾಸಂಖ್ಯಮಸೃಜತ್ಸಹ ವೃತ್ತಿಭಿಃ ॥೪೧॥

ವಿದ್ಯೆ, ದಾನ, ತಪಸ್ಸು ಮತ್ತು ಸತ್ಯ–ಎಂಬ ಧರ್ಮದ ನಾಲ್ಕು ಪಾದಗಳನ್ನೂ ಮತ್ತು ವೃತ್ತಿಗಳಿಂದ ಕೂಡಿದ ನಾಲ್ಕು ಆಶ್ರಮಗಳನ್ನೂ ಇದೇ ಕ್ರಮದಲ್ಲಿ ಪ್ರಕಟಪಡಿಸಿದರು.

ಸಾವಿತ್ರಂ ಪ್ರಾಜಾಪತ್ಯಂ ಚ ಬ್ರಾಹ್ಮಂ ಚಾಥ ಬೃಹತ್ತಥಾ ।
ವಾರ್ತಾಸಞ್ಚಯಶಾಲೀನಶಿಲೋಞ್ಛ ಇತಿ ವೈ ಗೃಹೇ ॥೪೨॥

* ಸಾವಿತ್ರಿ, ಪ್ರಾಜಾಪತ್ಯ, ಬ್ರಾಹ್ಮ ಮತ್ತು ಬೃಹತ್–ಎಂಬ ನಾಲ್ಕು ವೃತ್ತಿಗಳೂ ಬ್ರಹ್ಮಚಾರಿಗಳಿಗೆ ಸಂಬಂಧಪಟ್ಟುವುಗಳು. ಹಾಗೆಯೇ ವಾರ್ತಾ, ಸಂಚಯ, ಶಾಲೀನ ಮತ್ತು ಶಿಲೋಂಛ–ಎಂಬ ನಾಲ್ಕು ವೃತ್ತಿಗಳೂ ಗೃಹಸ್ಥರಿಗೆ ಸಂಬಂಧಪಟ್ಟುವುಗಳು.

ವೈಖಾನಸಾ ವಾಲಖಿಲ್ಯೌದುಮ್ಬರಾಃ ಫೇನಪಾ ವನೇ ।
ನ್ಯಾಸೇ ಕುಟೀಚಕಃ ಪೂರ್ವಂ ಬಹ್ವೋದೋ ಹಂಸನಿಷ್ಕ್ರಿಯೌ ॥೪೩॥

ಆನ್ವೀಕ್ಷಿಕೀ ತ್ರಯೀ ವಾರ್ತಾ ದಣ್ಡನೀತಿಸ್ತಥೈವ ಚ ।
ಏವಂ ವ್ಯಾಹೃತಯಶ್ಚಾಸನ್ಪ್ರಣವೋ ಹ್ಯಸ್ಯ ದಹ್ರತಃ ॥೪೪॥

---

* ಸಾವಿತ್ರಂ = ಉಪನಯನಸಂಸ್ಕಾರದನಂತರ ಗಾಯತ್ರಿಯ ಅಧ್ಯಯನಕ್ಕಾಗಿ ಆಚರಿಸುವ ನಾಲ್ಕು ದಿನಗಳ ವ್ರತ. ಪ್ರಾಜಾಪತ್ಯಂ = ಒಂದು ವರ್ಷದ ಬ್ರಹ್ಮಚರ್ಯವ್ರತ. ಬ್ರಾಹ್ಮಂ = ವೇದಾಧ್ಯಯನವು ಮುಗಿಯುವವರೆಗೂ ನಡೆಸಲ್ಪಡುವ ಬ್ರಹ್ಮಚರ್ಯವ್ರತ. ಬೃಹತ್ = ಜೀವಮಾನಪರ್ಯಂತ ಆಚರಿಸಲ್ಪಡುವ ಬ್ರಹ್ಮಚರ್ಯವ್ರತ. ವಾರ್ತಾ = ಕೃಷಿ, ವ್ಯಾಪಾರ ಮುಂತಾದ ಶಾಸ್ತ್ರವಿಹಿತವಾದ ವೃತ್ತಿಗಳು. ಸಂಚಯ = ಯಜ್ಞ ಮುಂತಾದವುಗಳನ್ನು ಮಾಡಿಸುವುದರಿಂದ ಜೀವನ ಸಂಪಾದನೆಯ ವೃತ್ತಿ. ಶಾಲೀನ = ಅಯಾಚಿತವಾಗಿ ದೊರೆಯುವ ಪದಾರ್ಥಗಳಿಂದ ಜೀವನನಡೆಸುವ ವೃತ್ತಿ. ಶಿಲೋಂಛ = ಧಾನ್ಯದ ಕಣಗಳಲ್ಲಿ ಅಥವಾ ಧಾನ್ಯದ ಅಂಗಡಿಗಳ ಬಳಿ ಬಿದ್ದಿರುವ ಕಾಳುಗಳನ್ನು ಆರಿಸಿಕೊಂಡು ಅವುಗಳಿಂದ ಜೀವನವನ್ನು ನಿರ್ವಹಿಸುವಿಕೆ. ವೈಖಾನಸ= ಉಳುಮೆಯಿಲ್ಲದ ಭೂಮಿಯಲ್ಲಿ ಬೆಳೆದ ಧಾನ್ಯಾದಿಗಳಿಂದ ಜೀವನ

ಇದೇ ರೀತಿಯಲ್ಲಿ ವಾನಪ್ರಸ್ಥರಲ್ಲಿ ವೃತ್ತಿಭೇದಕ್ಕೆ ತತೆ ವೈಖಾನಸ, ವಾಲಖಿಲ್ಯ, ಔದುಂಬರ ಮತ್ತು ಫೇನಪ–ಎಂಬ ನಾಲ್ಕು ಭೇದಗಳೂ, ಸಂನ್ಯಾಸಿಗಳಲ್ಲಿ ಕುಟೀಚಕ, ಬಹೂದಕ, ಹಂಸ ಮತ್ತು ನಿಷಿಯ (ಪರಮಹಂಸ)–ಎಂಬ ನಾಲ್ಕು ಭೇದಗಳೂ, ಅಂತೆಯೇ ವಿದ್ಯೆಗಳಲ್ಲಿ ಆನ್ವೀಕ್ಷಿಕೀ, ತ್ರಯೀ, ವಾರ್ತಾ ಮತ್ತು ದಂಡನೀತಿ–ಎಂಬ ನಾಲ್ಕು ಭೇದ ಗಳೂ ಇವೆ. ವ್ಯಾಹೃತಿಗಳೂ ನಾಲ್ಕು. ಈ ಎಲ್ಲ ನಾಲ್ಕು-ನಾಲ್ಕು ಭೇದಗಳೂ ಕ್ರಮವಾಗಿ ಬ್ರಹ್ಮದೇವರ ನಾಲ್ಕು ಮುಖಗಳಿಂದ ಉತ್ಪನ್ನಗೊಂಡುವು ಮತ್ತು ಓಂಕಾರವು ಅವರ ಹೃದಯಾಕಾಶದಿಂದ ಪ್ರಕಟಗೊಂಡಿತು.

ತಸ್ಯೋಷ್ಣಿಗಾಸೀಲ್ಲೋಮಭ್ಯೋ ಗಾಯತ್ರೀ ಚ ತ್ವಚೋ ವಿಭೋಃ ।
ತ್ರಿಷ್ಟುಮ್ಮಾಂಸಾತ್ಸ್ನುತೋಽನುಷ್ಟುಬ್ಜಗತ್ಯಸ್ಥ್ನಃಪ್ರಜಾಪತೇಃ ॥೪೫॥

ಮಜ್ಜಾಯಾಃ ಪಙ್ಕ್ತಿರುತ್ಪನ್ನಾ ಬೃಹತೀ ಪ್ರಾಣತೋಽಭವತ್ ।
ಸ್ಪರ್ಶಸ್ತಸ್ಯಾಭವಜ್ಜೀವಃ ಸ್ವರೋ ದೇಹ ಉದಾಹೃತಃ ॥೪೬॥

ಊಷ್ಮಾಣಮಿನ್ದ್ರಿಯಾಣ್ಯಾಹುರನ್ತಃಸ್ಥಾ ಬಲಮಾತ್ಮನಃ ।
ಸ್ವರಾಃ ಸಪ್ತ ವಿಹಾರೇಣ ಭವನ್ತಿ ಸ್ಮ ಪ್ರಜಾಪತೇಃ ॥೪೭॥

ಆ ಬ್ರಹ್ಮದೇವರ ರೋಮಗಳಿಂದ ಉಷ್ಣಿಕ್ ಎಂಬ ಛಂದಸ್ಸೂ, ತೊಗಲಿನಿಂದ ಗಾಯತ್ರೀಛಂದಸ್ಸೂ, ಮಾಂಸದಿಂದ ತ್ರಿಷ್ಟುಪ್‌ಛಂದಸ್ಸೂ, ಸ್ನಾಯುವಿನಿಂದ ಅನುಷ್ಟುಪ್‌ಛಂದಸ್ಸೂ, ಅಸ್ಥಿಗಳಿಂದ ಜಗತೀಛಂದಸ್ಸೂ, ಮಜ್ಜಾಧಾತುವಿನಿಂದ ಪಂಕ್ತಿ ಎಂಬ ಛಂದಸ್ಸೂ ಮತ್ತು ಪ್ರಾಣಗಳಿಂದ

ನಿರ್ವಹಣೆ. ವಾಲಖಿಲ್ಯ = ಹೊಸ ಧಾನ್ಯವು ಸಿಕ್ಕಿದೊಡನೆಯೇ ಹಿಂದೆ ಸಂಗ್ರಹಮಾಡಿಟ್ಟಿದ್ದ ಆಹಾರವನ್ನು ದಾನಮಾಡಿಬಿಡುವಿಕೆ. ಔದುಂಬರ = ಪ್ರಾತಃಕಾಲದಲ್ಲಿ ಎದ್ದಾಗ ಮುಖವು ಯಾವ ದಿಕ್ಕಿಗೆ ಇರುತ್ತದೆಯೋ–ಅದೇ ದಿಕ್ಕಿನಿಂದ ಹಣ್ಣು ಮುಂತಾದುವು ಗಳನ್ನು ತಂದು ಜೀವನವನ್ನು ನಿರ್ವಹಿಸುವುದು. ಫೇನಪ = ತಾನಾಗಿಯೇ ಉದುರಿ ಬಿದ್ದ ಹಣ್ಣು ಮುಂತಾದುವುಗಳಿಂದ ಜೀವನನಿರ್ವಹಣೆ. ಅಥವಾ ತಾಯಿಹಸುವಿನ ಮೊಲೆಹಾಲನ್ನು ಕುಡಿಯುವ ಕರುಗಳ ಬಾಯಿಂದ ಸೋರುವ ನೊರೆಯನ್ನು ತಿಂದು ಜೀವಿಸುವುದು. ಕುಟೀಚಕ = ಪುತ್ರ-ಶಿಷ್ಯಾದಿಗಳಿಂದ ಗುಡಿಸಿಲನ್ನು ಕಟ್ಟಿಸಿಕೊಂಡು ಆ ಒಂದೇ ಜಾಗದಲ್ಲಿದ್ದು ಒಂದೇ ಕಡೆಯಲ್ಲಿ ಭಿಕ್ಷೆಯನ್ನು ಸ್ವೀಕರಿಸುತ್ತಾ ಆಶ್ರಮ ಧರ್ಮಗಳನ್ನು ನಡೆಸುವ ಸಂನ್ಯಾಸಿಭೇದ . **ಬಹೂದಕ** = ಅನೇಕಗೃಹಗಳಲ್ಲಿ ಭಿಕ್ಷೆ ಯನ್ನು ಬೇಡುವ ಸಂನ್ಯಾಸಿಭೇದ. ಹಂಸ = ಜ್ಞಾನಾಭ್ಯಾಸಮಾಡುವ ಸಂಚಾರಿ

ಬೃಹತೀಛಂದಸ್ಸೂ ಉತ್ಪನ್ನವಾದುವು. ಹಾಗೆಯೇ ಅವರ ಜೀವವು ಸ್ಪರ್ಶವರ್ಣವೆಂದೂ–ದೇಹವು ಸ್ವರವರ್ಣವೆಂದೂ ಕರೆಯಲ್ಪಟ್ಟಿತು. ಅವರ ಇಂದ್ರಿಯಗಳನ್ನು *ಊಷ್ಮವರ್ಣಗಳೆಂದೂ, ಬಲವನ್ನು [1]ಅಂತಸ್ಥವರ್ಣಗಳೆಂದೂ ಕರೆಯುತ್ತಾರೆ. ಆ ಪ್ರಜಾಪತಿದೇವರ ಕ್ರೀಡೆಯಿಂದ ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ ಮತ್ತು ಪಂಚಮ–ಎಂಬ ಏಳು ಸ್ವರಗಳೂ ಜನಿಸಿದುವು.

ಶಬ್ದಬ್ರಹ್ಮಾತ್ಮನಸ್ತಸ್ಯ ವ್ಯಕ್ತಾವ್ಯಕ್ತಾತ್ಮನಃ ಪರಃ ।
ಬ್ರಹ್ಮಾವಭಾತಿ ವಿತತೋ ನಾನಾಶಕ್ತ್ಯುಪಬೃಂಹಿತಃ ॥೪೮॥

ವತ್ಸ, ವಿದುರ! ಬ್ರಹ್ಮದೇವರು ಶಬ್ದಬ್ರಹ್ಮಸ್ವರೂಪರಾಗಿ ವೈಖರೀ ರೂಪದಿಂದ ವ್ಯಕ್ತರಾಗಿಯೂ, ಪರಾರೂಪದಿಂದ ಅವ್ಯಕ್ತರಾಗಿಯೂ ಬೆಳಗುತ್ತಿದ್ದಾರೆ ಮತ್ತು ಆ ಶಬ್ದಬ್ರಹ್ಮದ ಮೇಲಿರುವ ಮತ್ತು ಎಲ್ಲೆಡೆಗಳಲ್ಲೂ ಪರಿಪೂರ್ಣವಾಗಿರುವ ಯಾವ ಪರಬ್ರಹ್ಮವುಂಟೋ–ಅದೇ ಅನೇಕಪ್ರಕಾರದ ಶಕ್ತಿಗಳಿಂದ ಕೂಡಿ ದೇವತಾರೂಪಗಳಿಂದ ಬೆಳಗುತ್ತಿದೆ.

ತತೋಽಪರಾಮುಪಾದಾಯ ಸ ಸರ್ಗಾಯ ಮನೋ ದಧೇ ।
ಋಷೀಣಾಂ ಭೂರಿವೀರ್ಯಾಣಾಮಪಿ ಸರ್ಗಮವಿಸ್ತೃತಮ್ ॥೪೯॥

ಜ್ಞಾತ್ವಾ ತದ್ಧೃದಯೇ ಭೂಯಶ್ಚಿನ್ತಯಾಮಾಸ ಕೌರವ ।
ಅಹೋ ಅದ್ಭುತಮೇತನ್ಮೇ ವ್ಯಾಪೃತಸ್ಯಾಪಿ ನಿತ್ಯದಾ ॥೫೦॥

ನ ಹ್ಯೇಧನ್ತೇ ಪ್ರಜಾ ನೂನಂ ದೈವಮತ್ರ ವಿಘಾತಕಮ್ ।
ಏವಂ ಯುಕ್ತಕೃತಸ್ತಸ್ಯ ದೈವಂ ಚಾವೇಕ್ಷತಸ್ತದಾ ॥೫೧॥

ಸಂನ್ಯಾಸಿ. ಪರಮಹಂಸ = ಜ್ಞಾನಸಿದ್ಧನಾದ ಜೀವನ್ಮುಕ್ತ ಸಂನ್ಯಾಸಿ. ಅನ್ವೀಕ್ಷಿಕೀ = ಮೋಕ್ಷವನ್ನು ಕೊಡುವ ಆತ್ಮವಿದ್ಯೆ. ತ್ರಯೀ = ಸ್ವರ್ಗಾದಿಗಳನ್ನು ಕೊಡುವ ಕರ್ಮವಿದ್ಯೆ. ವಾರ್ತಾ = ಕೃಷಿ-ವ್ಯಾಪಾರಾದಿಗಳಿಗೆ ಸಂಬಂಧಪಟ್ಟ ವಿದ್ಯೆ. ದಂಡನೀತಿ = ರಾಜನೀತಿ. ನಾಲ್ಕು ವ್ಯಾಹೃತಿಗಳು = ಭೂಃ, ಭುವಃ, ಸುವಃ ಮತ್ತು ಮಹಃ "ಭೂರ್ಭುವಸ್ಸುವರಿತಿ ವಾ ಏತಾಸ್ತಿಸ್ರೋ ವ್ಯಾಹೃತಯಃ, ತಾಸಾಮುಹಸ್ಮೈ ತಾಂ ಚತುರ್ಥೀಂ, ಮಹಾಚಮಸ್ಯಃ ಪ್ರವೇದಯತೇ ಮಹ ಇತಿ"– (ತೈತ್ತಿರೀಯ ಉಪನಿಷತ್ತು)

* ಊಷ್ಮವರ್ಣಗಳು = ಶ-ಷ-ಸ-ಹ   1 ಅಂತಸ್ಥವರ್ಣಗಳು= ಯ-ರ-ಲ-ವ

ಬ್ರಹ್ಮದೇವರು ಕಾಮಾಸಕ್ತವಾದ ತಮ್ಮ ಮೊದಲನೆಯ ದೇಹವನ್ನು ತ್ಯಜಿಸಿದ ನಂತರ ಬೇರೊಂದು ಶರೀರವನ್ನು ಧರಿಸಿ ವಿಶ್ವವನ್ನು ವಿಸ್ತರಿಸ ಬೇಕೆಂದು ಯೋಚಿಸಿದರು. ಮರೀಚಿಗಳೇ ಮುಂತಾದ ಮಹಾಶಕ್ತಿಸಂಪನ್ನ ರಾದ ಋಷಿಗಳಿಂದಲೂ ಕೂಡ ಸೃಷ್ಟಿಯ ವಿಸ್ತಾರವು ಹೆಚ್ಚಾಗಿ ಆಗದೇ ಇದ್ದುದನ್ನು ಕಂಡು ಅವರು ತಮ್ಮ ಮನಸ್ಸಿನಲ್ಲಿ–'ಏನಿದು, ಎಂತಹ ಆಶ್ಚರ್ಯ! ನಾನು ನಿರಂತರವಾಗಿ ಪ್ರಯತ್ನಮಾಡಿದರೂ ಪ್ರಜಾವೃದ್ಧಿಯು ಆಗುತ್ತಿಲ್ಲವಲ್ಲಾ! ದೈವವೇ ಇದಕ್ಕೆ ಏನೋ ವಿಘ್ನವನ್ನು ತಂದೊಡ್ಡುತ್ತಿದೆ ಯೆಂದು ಕಾಣುತ್ತದೆ'–ಎಂದು ಚಿಂತೆಗೊಳಗಾದರು.

ಕಸ್ಯ ರೂಪಮಭೂದ್ದ್ವೇಧಾ ಯತ್ಕಾಯಮಭಿಚಕ್ಷತೇ ।
ತಾಭ್ಯಾಂ ರೂಪವಿಭಾಗಾಭ್ಯಾಂ ಮಿಥುನಂ ಸಮಪದ್ಯತ ॥೫೨॥

ಮಾಡಬೇಕಾದ ಯುಕ್ತವಾದ ಕಾರ್ಯಗಳನ್ನು ಮಾಡುತ್ತಿದ್ದ ಬ್ರಹ್ಮ ದೇವರು ಹೀಗೆ ದೈವದ ವಿಷಯದಲ್ಲಿ ವಿಚಾರಮಾಡುತ್ತಿದ್ದಾಗ ಆಕಸ್ಮಾತ್ತಾಗಿ ಅವರ ಶರೀರದಲ್ಲಿ ಎರಡು ಭಾಗಗಳು ಉಂಟಾದುವು. 'ಕ' ಎಂಬುದು ಬ್ರಹ್ಮದೇವರ ಹೆಸರು. ಅದರಿಂದ ವಿಭಾಗಗೊಂಡಿದ್ದರಿಂದ 'ಕಾಯ' ಎಂದು ಶರೀರಕ್ಕೆ ಹೆಸರಾಯಿತು. ಹೀಗೆ ಒಡೆದ ಅವರ ಶರೀರದ ಎರಡು ಭಾಗಗಳಿಂದ ಒಂದು ಸ್ತ್ರೀ-ಪುರುಷರ ಜೋಡಿ ಪ್ರಕಟವಾಯಿತು.

ಯಸ್ತು ತತ್ರ ಪುಮಾನ್ಸೋಽಭೂನ್ಮನುಃ ಸ್ವಾಯಮ್ಭುವಃ ಸ್ವರಾಟ್ ।
ಸ್ತ್ರೀ ಯಾಸೀಚ್ಛತರೂಪಾಖ್ಯಾ ಮಹಿಷ್ಯಸ್ಯ ಮಹಾತ್ಮನಃ ॥೫೩॥

ಅವುಗಳಲ್ಲಿ ಪುರುಷಭಾಗವು ಸಾಮ್ರಾಟ್ ಸ್ವಾಯಂಭುವಮನು ವಾಯಿತು ಮತ್ತು ಸ್ತ್ರೀಭಾಗವು ಅವನ ಸಾಮ್ರಾಜ್ಞೀ ಶತರೂಪಾದೇವಿ ಯಾಯಿತು.

ತದಾ ಮಿಥುನಧರ್ಮೇಣ ಪ್ರಜಾ ಹ್ಯೇಧಾಮ್ಬಭೂವಿರೇ ।
ಸ ಚಾಪಿ ಶತರೂಪಾಯಾಂ ಪಞ್ಚಾಪತ್ಯಾನ್ಯಜೀಜನತ್ ॥೫೪॥

ಈ ಇಬ್ಬರಿಂದ ಮುಂದಕ್ಕೆ ಪ್ರಜೆಗಳು ಸ್ತ್ರೀ-ಪುರುಷಸಂಯೋಗ ವೆಂಬ ಮಿಥುನಧರ್ಮದಿಂದ ವೃದ್ಧಿಹೊಂದತೊಡಗಿದರು. ಮಹಾರಾಜ

ಸ್ವಾಯಂಭುವಮನುವು ಶತರೂಪಾದೇವಿಯಲ್ಲಿ ಐದು ಸಂತಾನಗಳನ್ನು ಪಡೆದನು.

ಪ್ರಿಯವ್ರತೋತ್ತಾನಪಾದೌ ತಿಸ್ರಃ ಕನ್ಯಾಶ್ಚ ಭಾರತ ।
ಆಕೂತಿರ್ದೇವಹೂತಿಶ್ಚ ಪ್ರಸೂತಿರಿತಿ ಸತ್ತಮ ॥೫೫॥

ಸಾಧುಶಿರೋಮಣಿಯಾದ ವಿದುರನೇ! ಆ ಐದು ಮಕ್ಕಳಲ್ಲಿ ಪ್ರಿಯವ್ರತ ಮತ್ತು ಉತ್ತಾನಪಾದ–ಎಂಬ ಇಬ್ಬರು ಪುತ್ರರು ಹಾಗೂ ಆಕೂತಿ, ದೇವಹೂತಿ ಮತ್ತು ಪ್ರಸೂತಿ–ಎಂಬ ಮೂವರು ಪುತ್ರಿಯರು.

ಆಕೂತಿಂ ರುಚಯೇ ಪ್ರಾದತ್ಕರ್ದಮಾಯ ತು ಮಧ್ಯಮಾಮ್ ।
ದಕ್ಷಾಯಾದಾತ್ಪ್ರಸೂತಿಂ ಚ ಯತ ಆಪೂರಿತಂ ಜಗತ್ ॥೫೬॥

ಮನುವು ಅವರಲ್ಲಿ ಆಕೂತಿಯನ್ನು ರುಚಿಯೆಂಬ ಪ್ರಜಾಪತಿಗೂ ಮಧ್ಯದ ಮಗಳಾದ ದೇವಹೂತಿಯನ್ನು ಕರ್ದಮಪ್ರಜಾಪತಿಗೂ ಮತ್ತು ಪ್ರಸೂತಿಯನ್ನು ದಕ್ಷಪ್ರಜಾಪತಿಗೂ ಕೊಟ್ಟು ಮದುವೆಮಾಡಿದನು. ಅವನ ಆ ಮೂವರು ಪುತ್ರಿಯರ ಸಂತಾನಗಳಿಂದ ಇಡೀ ಜಗತ್ತೇ ತುಂಬಿ ಹೋಯಿತು."

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೧೨ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೧೩ನೆಯ ಅಧ್ಯಾಯ

ವರಾಹಾವತಾರತ ಕಥೆ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ನಿಶಮ್ಯ ವಾಚಂ ವದತೋ ಮುನೇಃ ಪುಣ್ಯತಮಾಂ ನೃಪ ।
ಭೂಯಃ ಪಪ್ರಚ್ಛ ಕೌರವ್ಯೋ ವಾಸುದೇವಕಥಾದೃತಃ ॥೧॥

ಓ ರಾಜೇಂದ್ರ! ವಿದುರನು ವಾಸುದೇವನ ಕಥೆಗಳಲ್ಲಿ ಬಹಳವಾಗಿ ಅನುರಾಗಹೊಂದಿದ್ದವನು. ಆದುದರಿಂದ ಆತನು ಮೈತ್ರೇಯಮುನೀಂದ್ರ ರಿಂದ ಈ ಪರಮಪವಿತ್ರವಾದ ಕಥೆಯನ್ನು ಕೇಳಿದ ಬಳಿಕ ಅಷ್ಟರಿಂದಲೇ ತೃಪ್ತನಾಗದೇ ಅವರನ್ನು ಮರಳಿ ಪ್ರಶ್ನೆಮಾಡಿದನು :

ಸ ವೈ ಸ್ವಾಯಮ್ಭುವಃ ಸಮ್ರಾಟ್ ಪ್ರಿಯಃ ಪುತ್ರಃ ಸ್ವಯಮ್ಭುವಃ ।
ಪ್ರತಿಲಭ್ಯ ಪ್ರಿಯಾಂ ಪತ್ನೀಂ ಕಿಂ ಚಕಾರ ತತೋ ಮುನೇ ॥೨॥

ಚರಿತಂ ತಸ್ಯ ರಾಜರ್ಷೇರಾದಿರಾಜಸ್ಯ ಸತ್ತಮ ।
ಬ್ರೂಹಿ ಮೇ ಶ್ರದ್ದಧಾನಾಯ ವಿಷ್ವಕ್ಸೇನಾಶ್ರಯೋ ಹ್ಯಸೌ ॥೩॥

"ಓ ಮುನೀಂದ್ರರೇ! ಬ್ರಹ್ಮದೇವರ ಪ್ರಿಯಪುತ್ರನಾದ ಆ ಚಕ್ರವರ್ತಿ ಸ್ವಾಯಂಭುವಮನುವು ಪ್ರಿಯಪತ್ನಿಯಾದ ಶತರೂಪಾದೇವಿಯನ್ನು ಪಡೆದ ಬಳಿಕ ಏನನ್ನು ಮಾಡಿದನು? ಆ ಮಹಾತ್ಮನು ಆದಿರಾಜನು. ಶ್ರೀಭಗವಂತನನ್ನು ಶರಣುಹೊಂದಿದ ಭಕ್ತಾಗ್ರೇಸರನು. ಆದುದರಿಂದ ಭಗವದ್ಭಾಗವತಕಥಾಶ್ರವಣದಲ್ಲಿ ಶ್ರದ್ಧಾವಂತನಾದ ನನಗೆ ಆತನ ಪವಿತ್ರವಾದ ಚರಿತ್ರವನ್ನು ಹೇಳಿರಿ, ಸಾಧುವರೇಣ್ಯರೇ!

ಯಾರ ಹೃದಯಪೀಠದಲ್ಲಿ ಶ್ರೀಮುಕುಂದನ ಪಾದಾರವಿಂದಗಳು ಪ್ರತಿಷ್ಠಿತವಾಗಿವೆಯೋ–ಅಂತಹ ಭಕ್ತಶ್ರೇಷ್ಠರ ಗುಣಗಳನ್ನು ಶ್ರವಣಮಾಡುವುದೇ ಬಹುಕಾಲಪರ್ಯಂತ ಶ್ರಮದಿಂದ ಮಾಡಿದ ಶಾಸ್ತ್ರಾಭ್ಯಾಸಕ್ಕೆ ಪರಮಪ್ರಯೋಜನವೆಂದು ಜ್ಞಾನಿಗಳು ಹೇಳುತ್ತಾರಲ್ಲವೇ?

ಶ್ರುತಸ್ಯ ಪುಂಸಾಂ ಸುಚಿರಶ್ರಮಸ್ಯ
ನನ್ವಞ್ಜಸಾ ಸೂರಿಭಿರೀಡಿತೋಽರ್ಥಃ ।
ಯತ್ತದ್ಗುಣಾನುಶ್ರವಣಂ ಮುಕುನ್ದ-
ಪಾದಾರವಿನ್ದಂ ಹೃದಯೇಷು ಯೇಷಾಮ್ ॥೪॥

ಶುಕರು ಹೇಳುತ್ತಾರೆ :

ಮಹಾರಾಜ! ಹೀಗೆ ಅತ್ಯಂತವಿಧೇಯನಾಗಿ ಪ್ರಾರ್ಥಿಸುತ್ತಿದ್ದ, ಸಹಸ್ರಶೀರ್ಷನಾದ ಶ್ರೀಕೃಷ್ಣನ ಪಾದಸೇವಕನಾದ ವಿದುರನಿಗೆ ಭಗವತ್ಕಥಾ ನಿರೂಪಣೆಮಾಡಲು ಪ್ರೇರಿತರಾದುದರಿಂದ ರೋಮಾಂಚಿತರಾದ ಮೈತ್ರೇಯಮಹರ್ಷಿಗಳು ಹೇಳತೊಡಗಿದರು :

"ಪತ್ನಿಯೊಡನೆ ಜನಿಸಿದ ಸ್ವಾಯಂಭುವಮನುವು ಬ್ರಹ್ಮದೇವರಿಗೆ ವಿನಯದಿಂದ ಕೈಜೋಡಿಸಿಕೊಂಡು–"ಭಗವಂತರೇ! ಸಮಸ್ತಭೂತಗಳಿಗೂ

ಜನ್ಮನೀಡುವ ಮತ್ತು ಅವುಗಳಿಗೆ ಜೀವಿಕೆಯನ್ನು ಕಲ್ಪಿಸಿಕೊಡುವ ತಂದೆ ತಾವೇ ಆಗಿದ್ದೀರಿ. ಆದರೂ ತಮ್ಮ ಸಂತಾನವಾಗಿರುವ ನಾವು ಏನು ಮಾಡಿದರೆ ತಮ್ಮ ಸೇವೆಯಾಗುವುದು–ಎಂಬುದನ್ನು ಅಪ್ಪಣೆಕೊಡಿಸಿರಿ. ಪೂಜ್ಯಪಾದರೇ! ತಮಗೆ ನಮೋ ನಮಃ. ಯಾವುದನ್ನು ಮಾಡಿದರೆ ನಮಗೆ ಈ ಲೋಕದಲ್ಲಿ ಒಳ್ಳೆಯ ಯಶಸ್ಸು ಮತ್ತು ಪರಲೋಕದಲ್ಲಿ ಸದ್ಗತಿ ಇವರೆಡೂ ಉಂಟಾಗುವುವೋ–ಅಂತಹ, ನಮಗೆ ಮಾಡಲು ಶಕ್ಯವಾಗಿರುವ ಕೆಲಸವನ್ನು ಮಾಡಲು ಆಜ್ಞೆಯನ್ನು ನೀಡಿರಿ"–ಎಂದು ಪ್ರಾರ್ಥನೆ ಮಾಡಿದರು.

(ಶ್ಲೋಕ 5-8)

ಅದಕ್ಕೆ ಬ್ರಹ್ಮದೇವರು ಹೀಗೆಂದರು :

ಪ್ರೀತಸ್ತುಭ್ಯಮಹಂ ತಾತ ಸ್ವಸ್ತಿ ಸ್ತಾದ್ವಾಂ ಕ್ಷಿತೀಶ್ವರ ।
ಯನ್ನಿರ್ವ್ಯಲೀಕೇನ ಹೃದಾ ಶಾಧಿ ಮೇತ್ಯಾತ್ಮನಾರ್ಪಿತಮ್ ॥೯॥

ಏತಾವತ್ಯಾತ್ಮಜೈರ್ವೀರ ಕಾರ್ಯಾ ಹ್ಯಪಚಿತಿರ್ಗುರೌ ।
ಶಕ್ತ್ಯಾಪ್ರಮತ್ತೈರ್ಗೃಹ್ಯೇತ ಸಾದರಂ ಗತಮತ್ಸರೈಃ ॥೧೦॥

"ಮಗು! ಭೂಮೀಶ್ವರ! ನಮ್ಮಿಬ್ಬರ ವಿಷಯದಲ್ಲೂ ನಾನು ತುಂಬಾ ಪ್ರಸನ್ನನಾಗಿದ್ದೇನೆ. ನಿಮಗೆ ಮಂಗಳವಾಗಲಿ. 'ನನಗೆ ಆಜ್ಞೆಮಾಡಿರಿ'–ಎಂದು ಕಪಟವಿಲ್ಲದ ಭಾವದಿಂದ ಅರಿಕೆಮಾಡಿಕೊಂಡು ನನಗೆ ಆತ್ಮಸಮರ್ಪಣೆ ಮಾಡಿಕೊಂಡಿದ್ದೀಯಲ್ಲಾ! ಎಂತಹ ಸತ್ಪುತ್ರನು ನೀನು! ವೀರವರನೇ! ಪುತ್ರರು ತಮ್ಮ ತಂದೆಯನ್ನು ಹೀಗೆಯೇ ಪೂಜಿಸಬೇಕು. ಮಾತ್ಸರ್ಯವನ್ನು ತೊರೆದು ತಂದೆಯ ಆಜ್ಞೆಯನ್ನು ಆದರಪೂರ್ವಕವಾಗಿ ಸ್ವೀಕರಿಸಿ ಸಾವಧಾನವಾಗಿ ಅದನ್ನು ಯಥಾಶಕ್ತಿ ನಡೆಸಿಕೊಡುವುದೇ ಅವರಿಗೆ ಉಚಿತವಾದ ಕರ್ತವ್ಯವು.

ಸ ತ್ವಮಸ್ಯಾಮಪತ್ಯಾನಿ ಸದೃಶಾನ್ಯಾತ್ಮನೋ ಗುಣೈಃ ।
ಉತ್ಪಾದ್ಯ ಶಾಸ ಧರ್ಮೇಣ ಗಾಂ ಯಜ್ಞೈಃ ಪುರುಷಂ ಯಜ ॥೧೧॥

ಪರಂ ಶುಶ್ರೂಷಣಂ ಮಹ್ಯಂ ಸ್ಯಾತ್ಪ್ರಜಾರಕ್ಷಯಾ ನೃಪ ।
ಭಗವಾಂಸ್ತೇ ಪ್ರಜಾಭರ್ತುರ್ಹೃಷೀಕೇಶೋऽನುತುಷ್ಯತಿ ॥೧೨॥

ಯೇಷಾಂ ನ ತುಷ್ಟೋ ಭಗವಾನ್ಯಜ್ಞಲಿಙ್ಗೋ ಜನಾರ್ದನಃ ।
ತೇಷಾಂ ಶ್ರಮೋಹ್ಯಪಾರ್ಥಾಯ ಯದಾತ್ಮಾ ನಾದೃತಃ ಸ್ವಯಮ್ ॥

ಸತ್ಪುತ್ರನಾಗಿರುವ ನೀನು ಈಗ ಮಾಡಬೇಕಾದುದೇನೆಂದರೆ–ನೀನು ನಿನ್ನ ಪತ್ನಿಯಾದ ಈ ಶತರೂಪೆಯಲ್ಲಿ–ಗುಣಗಳಲ್ಲಿ ನಿನಗೆ ಸಮಾನ ರಾಗಿರುವ–ಸಂತಾನಗಳನ್ನು ಪಡೆಯಬೇಕು. ಭೂಮಿಯನ್ನು ಧರ್ಮದಿಂದ ಪರಿಪಾಲಿಸುತ್ತಾ ಯಜ್ಞಗಳ ಮೂಲಕ ಪರಮಪುರುಷನನ್ನು ಆರಾಧನೆ ಮಾಡು. ನೀನು ಪ್ರಜಾಪಾಲನೆಯನ್ನು ಮಾಡಿದರೆ ಅದು ನನಗೆ ದೊಡ್ಡ ಸೇವೆಯಾಗುವುದು. ನಿನ್ನ ಪ್ರಜಾಪಾಲನೆಯನ್ನು ಕಂಡು ಭಗವಂತನಾದ ಶ್ರೀಹರಿಯೂ ನಿನ್ನಲ್ಲಿ ಪ್ರಸನ್ನನಾಗುವನು. ಯಜ್ಞಮೂರ್ತಿಯಾದ ಜನಾರ್ದನಭಗವಂತನು ಯಾರ ವಿಷಯದಲ್ಲಿ ಪ್ರಸನ್ನನಾಗುವುದಿಲ್ಲವೋ ಅವರ ಶ್ರಮವೆಲ್ಲವೂ ವ್ಯರ್ಥವೇ ಸರಿ. ಏಕೆಂದರೆ : ಅವರು ತಮ್ಮ ಆತ್ಮಕ್ಕೇ ಅನಾದರಮಾಡಿಕೊಂಡಂತೆ ಆಗುತ್ತದೆ.”

ತಂದೆಯಾದ ಬ್ರಹ್ಮದೇವರ ಆಜ್ಞೆಗೆ ತಲೆಬಾಗಿ ಮನುವು ಅವರಲ್ಲಿ ಹೀಗೆ ಪ್ರಾರ್ಥನೆಮಾಡಿದನು :

“ಪಾಪವಿನಾಶಕರೇ! ನಾನು ಪೂಜ್ಯರಾದ ತಮ್ಮ ಆಣತಿಯನ್ನು ಶಿರಸಾವಹಿಸಿ ಪಾಲಿಸುತ್ತೇನೆ. ಆದರೆ ತಾವು ಈ ಜಗತ್ತಿನಲ್ಲಿ ನನಗೂ ಮತ್ತು ನನ್ನ ಭಾವೀಪ್ರಜೆಗಳಿಗೂ ವಾಸಮಾಡಲು ಸ್ಥಾನವನ್ನು ಅನುಗ್ರಹಿಸಿ ಕೊಡಬೇಕು. ದೇವರೇ! ಸಮಸ್ತಜೀವಿಗಳಿಗೂ ನಿವಾಸಸ್ಥಾನವಾಗಿರುವ ಭೂಮಿಯೇ ಈಗ ಪ್ರಳಯದ ಜಲರಾಶಿಯಲ್ಲಿ ಮುಳುಗಿಹೋಗಿದೆ. ಆ ಭೂಮಿಯನ್ನು ಮೇಲಕ್ಕೆ ಎತ್ತಲು ತಾವು ಯತ್ನಿಸಬೇಕು”–ಎಂದು ಪ್ರಾರ್ಥಿಸಿದನು.

ಮೈತ್ರೇಯರು ವಿದುರನಿಗೆ ಹೇಳುತ್ತಾರೆ :

ವಿದುರ! ಭೂಮಿಯು ಹಾಗೆ ಆಳವಾದ ಜಲದಲ್ಲಿ ಮುಳುಗಿಹೋಗಿ ರುವುದನ್ನು ಕಂಡು ಬ್ರಹ್ಮದೇವರು ‘ಇದನ್ನು ಹೇಗೆ ಮೇಲಕ್ಕೆ ಎತ್ತುವುದು?’ ಎಂದು ಬಹಳ ಕಾಲದವರೆಗೆ ಚಿಂತಿಸತೊಡಗಿದರು. ‘ನಾನು ಲೋಕ ಸೃಷ್ಟಿಯಲ್ಲಿ ತೊಡಗಿದ್ದ ಸಮಯದಲ್ಲಿ ಭೂಮಿಯು ನೀರಿನಲ್ಲಿ ಮುಳುಗಿ

ಪಾತಾಳಕ್ಕೆ ಹೊರಟುಹೋಯಿತು. ಸೃಷ್ಟಿಯನ್ನು ಮಾಡಲು ನೇಮಕ ಗೊಂಡಿರುವ ನಾನು ಈಗ ಏನು ಮಾಡುವುದು? ಯಾರ ಸಂಕಲ್ಪದಿಂದ ನಾನು ಜನಿಸಿದೆನೋ–ಆ ಸರ್ವೇಶ್ವರನೇ ನನ್ನ ಆ ಕೆಲಸವನ್ನು ನಡೆಸಿಕೊಡ ಬೇಕು'–ಎಂದು ಅವರು ಯೋಚನೆಮಾಡಿದರು.

ಎಲೈ ಶುದ್ಧಾತ್ಮನಾದ ವಿದುರನೇ! ಬ್ರಹ್ಮದೇವರು ಹೀಗೆ ಚಿಂತಿಸು ತ್ತಿರುವಂತೆಯೇ ಅವರ ಮೂಗಿನ ಹೊಳ್ಳೆಯಿಂದ ಇದ್ದಕ್ಕಿದ್ದಂತೆ ಹೆಬ್ಬೆರಳಿನ ಗಾತ್ರದ ಹಂದಿಯ ಮರಿಯೊಂದು ಹೊರಬಂದಿತು. ಆಶ್ಚರ್ಯವೋ ಆಶ್ಚರ್ಯ! ಆಕಾಶದಲ್ಲಿ ನಿಂತುಕೊಂಡ ಆ ಹಂದಿಯ ಮರಿಯು ಬ್ರಹ್ಮ ದೇವರು ನೋಡುತ್ತಿರುವಂತೆಯೇ ಒಂದು ಕ್ಷಣಮಾತ್ರದಲ್ಲಿ ದೊಡ್ಡ ಆನೆಯ ಗಾತ್ರಕ್ಕೆ ಸಮನಾಗಿ ಬೆಳೆದುಬಿಟ್ಟಿತು. (ಶ್ಲೋಕ 14-19)

ಆ ಬೃಹದಾಕಾರದ ವರಾಹಮೂರ್ತಿಯನ್ನು ಕಂಡು ಮರೀಚಿಗಳೇ ಮುಂತಾದ ಮುನಿಗಳು, ಸನಕಾದಿಗಳು ಮತ್ತು ಸ್ವಾಯಂಭುವಮನು– ಇವರಿಂದ ಕೂಡಿದ ಬ್ರಹ್ಮದೇವರು ಬಗೆ-ಬಗೆಯಾಗಿ ತರ್ಕಿಸತೊಡಗಿದರು.

"ಅಬ್ಬಾ! ಹಂದಿಯ ರೂಪದಲ್ಲಿ ಇಲ್ಲಿ ಪ್ರಕಟವಾಗಿರುವ ಇದು ಸಾಧಾರಣವಾದ ಪ್ರಾಣಿಯಲ್ಲ. ಯಾವುದೋ ದಿವ್ಯವಾದ ಚೇತನವೇ ಆಗಿರ ಬೇಕು. ಯಾವುದು ಈ ದಿವ್ಯ ಪ್ರಾಣಿ? ಎಂತಹ ಆಶ್ಚರ್ಯ! ಇದು ಈಗ ತಾನೇ ನನ್ನ ಮೂಗಿನಿಂದ ಹೊರಬಂದಿತಲ್ಲವೇ! ಮೊದಲು ಒಂದು ಹೆಬ್ಬೆರಳಿನ ತುದಿಯಷ್ಟು ಗಾತ್ರವಿದ್ದ ಇದು ಈಗ ಬಲು ದೊಡ್ಡ ಬಂಡೆ ಯಷ್ಟು ಬೆಳೆದುಬಿಟ್ಟಿದೆಯಲ್ಲಾ! ನಿಜವಾಗಿಯೂ ಯಜ್ಞಮೂರ್ತಿಯಾದ ಶ್ರೀಭಗವಂತನು ನಮ್ಮ ಮನಸ್ಸನ್ನು ಹೀಗೆ ಮರುಳುಗೊಳಿಸುತ್ತಿರಬೇಕು"– ಎಂದು ಚಿಂತನೆಮಾಡಿದರು.

ಬ್ರಹ್ಮದೇವರೂ ಮತ್ತು ಅವರ ಪುತ್ರರೂ ಹೀಗೆ ಯೋಚಿಸುತ್ತಿರು ವಂತೆಯೇ ಭಗವಂತನಾದ ಯಜ್ಞಪುರುಷನು ಮಹಾಪರ್ವತರಾಜನ ಆಕಾರವನ್ನು ತಳೆದು ಗರ್ಜಿಸತೊಡಗಿದನು. ಸರ್ವಶಕ್ತನಾದ ಸ್ವಾಮಿಯು ತನ್ನ ದಿವ್ಯಗರ್ಜನೆಯಿಂದ ಎಲ್ಲ ದಿಕ್ಕುಗಳೂ ಪ್ರತಿಧ್ವನಿಸುವಂತೆ ಮಾಡಿ ಬ್ರಹ್ಮದೇವರನ್ನೂ ಮತ್ತು ಬ್ರಾಹ್ಮಣಶ್ರೇಷ್ಠರನ್ನೂ ಸಂತೋಷಗೊಳಿಸಿದನು.

ತಮ್ಮ ಖೇದವನ್ನು ನಿವಾರಿಸುತ್ತಿದ್ದ ಆ ಮಾಯಾವರಾಹನ ಘುರ್ಘುರ ಧ್ವನಿಯನ್ನು ಕೇಳಿ ಜನೋಲೋಕ, ತಪೋಲೋಕ ಮತ್ತು ಸತ್ಯಲೋಕ ನಿವಾಸಿಗಳಾದ ಮುನಿಗಳು ಮೂರು ವೇದಗಳ ಪರಮಪವಿತ್ರವಾದ ಮಂತ್ರಗಳಿಂದ ಅವನನ್ನು ಸ್ತುತಿಸತೊಡಗಿದರು.

ಭಗವಂತನು ವೇದಯಜ್ಞಸ್ವರೂಪನಲ್ಲವೇ! ವೇದಮಂತ್ರಸಮೂಹ ಪ್ರತಿಪಾದ್ಯನಲ್ಲವೇ! ಆದ್ದರಿಂದ ಆ ಮುನಿಗಳು ಮಾಡಿದ ಸ್ತುತಿಯು ವೇದಮಂತ್ರಗಳ ಅರ್ಥವಾಗಿರುವ ತನ್ನ ದಿವ್ಯಗುಣಗಳ ಅನುವಾದವೇ ಆಗಿದೆಯೆಂಬುದನ್ನು ಭಾವಿಸಿದ ಶ್ರೀಭಗವಂತನು ತುಂಬಾ ಪ್ರಸನ್ನನಾಗಿ, ಮತ್ತೊಮ್ಮೆ ಗರ್ಜನೆಮಾಡಿ ದೇವತೆಗಳ ಹಿತಕ್ಕಾಗಿ ಗಜರಾಜನಂತೆ ಕ್ರೀಡಿಸುತ್ತಾ ಜಲರಾಶಿಯಲ್ಲಿ ಪ್ರವೇಶಿಸಿಬಿಟ್ಟನು.

ಆ ವರಾಹರೂಪಿಯಾದ ಭಗವಂತನು ಮೊದಲು ಬಾಲವನ್ನು ಮೇಲಕ್ಕೆತ್ತಿ ಅತಿವೇಗದಿಂದ ಆಕಾಶಕ್ಕೆ ಜಿಗಿದು ಕುತ್ತಿಗೆಯ ಕೂದಲುಗಳನ್ನು ಕೆದರಿಕೊಂಡು ಗೊರಸುಗಳ ಬಡಿತಗಳಿಂದ ಮೋಡಗಳನ್ನು ಚದುರಿಸ ತೊಡಗಿದನು. ಕಠೋರವಾದ ದೇಹ, ತೊಗಲಿನ ಮೇಲೆ ಕೆದರಿದ್ದ ಒರಟಾದ ಮೈಗೂದಲುಗಳು, ಬಿಳುಪಾದ ಕೋರೆದಾಡೆ, ಕಣ್ಣುಗಳು ಕಾರುತ್ತಿದ್ದ ತೇಜಸ್ಸು–ಇವುಗಳಿಂದ ಮೆರೆಯುತ್ತಿದ್ದ ಮಹಾವರಾಹನು ಮಹಾ ಪರ್ವತದಂತೆ ಕಂಗೊಳಿಸುತ್ತಿದ್ದನು. (ಶ್ಲೋಕ 20-27)

ಆತನು ಸ್ವಯಂ ಯಜ್ಞಪುರುಷನೇ ಆಗಿದ್ದರೂ ವರಾಹರೂಪವನ್ನು ಸ್ವೀಕರಸಿದ್ದರಿಂದ ಅದರ ಸ್ವಭಾವಕ್ಕೆ ತಕ್ಕಂತೆ ಮೂಗಿನಿಂದ ಭೂಮಿಯ ಮಾರ್ಗವನ್ನು ಮೂಸಿ ನೋಡುತ್ತಿದ್ದನು. ಆತನ ಕೋರೆದಾಡೆಗಳು ತುಂಬಾ ಭೀಕರವಾಗಿದ್ದುವು ; ಕಠೋರವಾಗಿದ್ದುವು. ಆದರೂ ದೃಷ್ಟಿಯು ಮಾತ್ರ ತನ್ನನ್ನು ಸ್ತುತಿಸುತ್ತಿದ್ದ ಋಷಿಗಳ ವಿಷಯದಲ್ಲಿ ಪ್ರಸನ್ನವಾಗಿದ್ದಿತು. ತನ್ನ ಸೌಮ್ಯವಾದ ದೃಷ್ಟಿಪಾತಗಳಿಂದ ಅವರನ್ನು ದಿಟ್ಟಿಸಿ ನೋಡುತ್ತಾ ಅನುಗ್ರಹಿಸುತ್ತಾ ಆತನು ಜಲದಲ್ಲಿ ಪ್ರವೇಶಮಾಡಿಬಿಟ್ಟನು.

ವಜ್ರಮಯವಾದ ಪರ್ವತದ ಶಿಖರದಂತೆ ಕಠೋರವಾಗಿದ್ದ ಆತನ ಶ್ರೀದೇಹವು ನೀರಿನಲ್ಲಿ ಬಿದ್ದೊಡನೆಯೇ ಅದರ ರಭಸದಿಂದ ಸಮುದ್ರದ

ಹೊಟ್ಟೆಯು ಒಡೆದುಹೋದಂತಾಗಿ ಗುಡುಗು-ಸಿಡಿಲುಗಳಂತೆ ಭಯಂಕರ ವಾದ ಶಬ್ದವುಂಟಾಯಿತು. ಸಮುದ್ರವು ತನ್ನ ಉಕ್ಕೇರಿದ ತರಂಗಗಳೆಂಬ ಭುಜಗಳನ್ನು ಮೇಲಕ್ಕೆತ್ತಿಕೊಂಡು ಆರ್ತಸ್ವರದಿಂದ 'ಓ ಯಜ್ಞೇಶ್ವರನೇ! ನನ್ನನ್ನು ಕಾಪಾಡು! ಕಾಪಾಡು!'–ಎಂದು ಮೊರೆಯಿಡುತ್ತಿದೆಯೋ ಎಂಬಂತೆ ಕಾಣುತ್ತಿತ್ತು.

ಆಗ ಭಗವಂತನಾದ ಯಜ್ಞವರಾಹನು ಬಾಣಸದೃಶವಾಗಿದ್ದ ಚೂಪಾದ ತನ್ನ ಗೊರಸುಗಳಿಂದ ಜಲವನ್ನು ಸೀಳುತ್ತಾ ಆ ಜಲರಾಶಿಯ ಆಚೆಯ ದಡವನ್ನು (ತಳಭಾಗವನ್ನು) ತಲುಪಿದನು. ಅಲ್ಲಿ–ರಸಾತಲದಲ್ಲಿ ಆತನು ಪ್ರಳಯಸಮಯದಲ್ಲಿ ತಾನು ಪವಡಿಸಲು ತೊಡಗಿದಾಗ ತನ್ನ ಹೊಟ್ಟೆಯಲ್ಲಿ ಹಿಂದೆ ಲಯಗೊಳಿಸಿಕೊಂಡಿದ್ದ ಮತ್ತು ಸಮಸ್ತಜೀವಿಗಳಿಗೂ ಆಶ್ರಯವಾಗಿರುವ ಭೂಮಿಯು ಇರುವುದನ್ನು ನೋಡಿದನು.

ಅನಂತರ ಭಗವಂತನು ನೀರಿನಲ್ಲಿ ಮುಳುಗಿಹೋಗಿದ್ದ ಆ ಭೂಮಿಯನ್ನು ತನ್ನ ಕೋರೆದಾಡೆಗಳಿಂದ ಎತ್ತಿಕೊಂಡು ಪಾತಾಳದಿಂದ ಮೇಲಕ್ಕೆ ಎದ್ದು ಬಂದನು. ಆಗ ಆತನ ಕಾಂತಿಯು ಅತ್ಯಂತ ದರ್ಶನೀಯ ವಾಗಿದ್ದಿತು. ಹಾಗೆ ನೀರಿನಿಂದ ಮೇಲಕ್ಕೆ ಎದ್ದು ಬರುತ್ತಿರುವಾಗ ತನ್ನನ್ನು ಎದುರಿಸಿ ಗದೆಯಿಂದ ಆಕ್ರಮಣಮಾಡಿದ ಹಿರಣ್ಯಾಕ್ಷನ ಮೇಲೆ ಸ್ವಾಮಿಗೆ ಸುದರ್ಶನ ಚಕ್ರದಿಂದ ಉದ್ದೀಪನಗೊಂಡಂತೆ ತೀಕ್ಷ್ಣವಾದ ಕ್ರೋಧವು ಕೆರಳಿತು. ಆ ಅಸುರನು ಮಹಾಪರಾಕ್ರಮಿಯಾಗಿದ್ದರೂ–ಸಿಂಹವು ಆನೆಯನ್ನು ಹೇಗೋ ಹಾಗೆ ಸ್ವಾಮಿಯು ಆತನನ್ನು ಲೀಲಾಜಾಲವಾಗಿ ಜಲದಲ್ಲಿ ಸಂಹರಿಸಿಬಿಟ್ಟನು. ಆ ಸಮಯದಲ್ಲಿ ಭಗವಂತನ ಗಂಡಸ್ಥಳವೂ ಮತ್ತು ಮುಖವೂ ದೈತ್ಯನ ರಕ್ತದ ಕೆಸರಿನಿಂದ ನೆನೆದು ಕೆಂಪುಗುರುತುಗಳಿಂದ ಕೂಡಿದ್ದರಿಂದ ಆತನು–ಕೆಂಪುಮಣ್ಣಿನಲ್ಲಿ ಮಣ್ಣುಸೀಳುವ ಆಟವನ್ನಾಡಿ ಬಂದ ಗಜರಾಜನಂತೆ–ವಿರಾಜಿಸಿದನು.

ಗಜರಾಜನು ತನ್ನ ದಂತಗಳ ಮೇಲೆ ಕಮಲಪುಷ್ಪವನ್ನು ಎತ್ತಿ ಧರಿಸುವಂತೆ–ಸ್ವಾಮಿಯು ತನ್ನ ಬಿಳಿಯ ದಂತಗಳ ತುದಿಯಲ್ಲಿ ಭೂಮಿ ಯನ್ನು ಎತ್ತಿ ಹಿಡಿದಿದ್ದನು. ಆತನ ದಿವ್ಯದೇಹವು ಹೊಂಗೆಯ ಮರದಂತೆ ಶ್ಯಾಮಲವರ್ಣದಿಂದ ಕಂಗೊಳಿಸುತ್ತಿತ್ತು. ಆಗ ಬ್ರಹ್ಮದೇವರೂ ಮತ್ತು

ಮರೀಚಿಗಳೇ ಮುಂತಾದ ಮಹರ್ಷಿಗಳೂ ಆತನು ಭಗವಂತನೇ ಎಂದು ಗುರುತಿಸಿದವರಾಗಿ ಆತನ ಮುಂದೆ ಕೈಜೋಡಿಸಿಕೊಂಡು ವೇದಾರ್ಥಗರ್ಭಿತವಾದ ವಾಕ್ಯಗಳಿಂದ ಆತನನ್ನು ಹೀಗೆ ಸ್ತೋತ್ರಮಾಡತೊಡಗಿದರು : (ಶ್ಲೋಕ 28-33)

ಬ್ರಹ್ಮಾದಿಗಳು ಮಾಡಿದ ಯಜ್ಞವರಾಹಸ್ತುತಿ :

ಜಿತಂ ಜಿತಂ ತೇಽಜಿತ ಯಜ್ಞಭಾವನ
ತ್ರಯೀಂ ತನುಂ ಸ್ವಾಂ ಪರಿಧುನ್ವತೇ ನಮಃ ।
ಯದ್ರೋಮಗರ್ತೇಷು ನಿಲಿಲ್ಯುರಧ್ವರಾ-
ಸ್ತಸ್ಮೈ ನಮಃ ಕಾರಣಸೂಕರಾಯ ತೇ ॥೩೪॥

"ಜಯವಾಗಲಿ! ಜಯವಾಗಲಿ! ನಿನಗೆ. ಓ ಅಜಿತಮೂರ್ತಿಯೇ! ಎಲ್ಲರನ್ನೂ ಜಯಿಸಿದವನೂ, ಯಾರಿಗೂ ಸೋಲದವನೂ ನೀನು. ಓ ಯಜ್ಞಪತಿಯೇ! ಮೂರು ವೇದಗಳ ರೂಪವಾದ ದಿವ್ಯಮಂಗಳವಿಗ್ರಹವನ್ನು ಓಲಾಡಿಸುತ್ತಾ ಕಂಗೊಳಿಸುತ್ತಿರುವ ನಿನಗೆ ನಮಸ್ಕಾರವು. ಸಮಸ್ತ ಯಜ್ಞಗಳೂ ನಿನ್ನ ರೋಮಕೂಪಗಳಲ್ಲಿ ಅಡಗಿವೆ. ಇಂತಹ ವೇದಮೂರ್ತಿಯೂ, ಯಜ್ಞಮೂರ್ತಿಯೂ ಆಗಿದ್ದರೂ–ನೀನು ಕಾರಣವಿಶೇಷದಿಂದ ವರಾಹರೂಪವನ್ನು ತಳೆದಿರುವೆ. ಈ ರೂಪವನ್ನು ತಳೆದಿದ್ದರೂ ನಿಖಿಲಜಗತ್ಕಾರಣನೇ ಆಗಿದ್ದೀಯೆ. ಇಂತಹ ನಿನಗೆ ಜಯವಾಗಲಿ.

ರೂಪಂ ತವೈತನ್ನನು ದುಷ್ಕೃತಾತ್ಮನಾಂ
ದುರ್ದರ್ಶನಂ ದೇವ ಯದಧ್ವರಾತ್ಮಕಮ್ ।
ಛನ್ದಾಂಸಿ ಯಸ್ಯ ತ್ವಚಿ ಬರ್ಹಿರೋಮ-
ಸ್ವಾಜ್ಯಂ ದೃಶಿ ತ್ವಙ್ಘ್ರಿಷು ಚಾತುರ್ಹೋತ್ರಮ್ ॥೩೫॥

ಓ ಸ್ವಾಮಿಯೇ! ದುರಾಚಾರಿಗಳಿಗೆ ನಿನ್ನ ಈ ದಿವ್ಯಮೂರ್ತಿಯ ದರ್ಶನವಾಗುವುದು ಬಹಳ ಕಷ್ಟವು. ಏಕೆಂದರೆ : ಇದು ಯಜ್ಞರೂಪವೇ ಆಗಿದೆ. ಇದರ ತೊಗಲಿನಲ್ಲಿ ಗಾಯತ್ರಿಯೇ ಮುಂತಾದ ಛಂದಸ್ಸುಗಳೂ, ರೋಮಾವಳಿಯಲ್ಲಿ ದರ್ಭೆಗಳೂ, ನೇತ್ರಗಳಲ್ಲಿ (ಯಜ್ಞದ ಹವಿಸ್ಸಾಗಿರುವ) ತುಪ್ಪವೂ ಮತ್ತು ನಾಲ್ಕು ಪಾದಗಳಲ್ಲಿ ಅಧ್ವರ್ಯು, ಉದ್ಗಾತೃ, ಹೋತೃ ಮತ್ತು ಬ್ರಹ್ಮಾ–ಎಂಬ ನಾಲ್ಕು ಋತ್ವಿಜರೂ ಅಡಗಿದ್ದಾರೆ.

ಸುಕ್ತುಣ್ಡ ಆಸೀತ್ಸ್ರುವ ಈಶ ನಾಸಯೋ-
ರಿಡೋದರೇ ಚಮಸಾಃ ಕರ್ಣರನ್ಧ್ರೇ ।
ಪ್ರಾಶಿತ್ರಮಾಸ್ಯೇ ಗ್ರಸನೇ ಗ್ರಹಾಸ್ತು ತೇ
ಯಚ್ಚರ್ವಣಂ ತೇ ಭಗವನ್ನಗ್ನಿಹೋತ್ರಮ್ ॥೩೬॥

ಓ ಯಜ್ಞರೂಪಿಯಾದ ಈಶ್ವರನೇ! ನಿನ್ನ ಮುಖದ ಅಗ್ರಭಾಗದಲ್ಲಿ 'ಸ್ರುಕ್' ಎಂಬ ಯಜ್ಞೋಪಕರಣವಿದೆ. ಮೂಗಿನ ಹೊಳ್ಳೆಯಲ್ಲಿ 'ಸ್ರುವ' ಎಂಬ ಯಜ್ಞೋಪಕರಣವಿದೆ. ಉದರದಲ್ಲಿ 'ಇಡಾ' ಎಂಬ ಯಜ್ಞದ ಭಕ್ಷಣಪಾತ್ರೆಯಿದೆ. ಕಿವಿಗಳಲ್ಲಿ 'ಚಮಸ' ವಿದೆ. ಮುಖದಲ್ಲಿ 'ಪ್ರಾಶಿತ್ರ' (ಬ್ರಹ್ಮಭಾಗಪಾತ್ರೆ) ವಿದೆ. ಕಂಠದ ರಂಧ್ರದಲ್ಲಿ 'ಗ್ರಹ' (ಸೋಮಪಾತ್ರೆ) ಎಂಬ ಯಜ್ಞಪಾತ್ರೆಯಿದೆ. ಓ ಭಗವಂತನೇ! ನಿನ್ನ ಅಗಿಯುವಿಕೆಯೇ ಅಗ್ನಿಹೋತ್ರ ವಾಗಿದೆ.

ದೀಕ್ಷಾನುಜನ್ಮೋಪಸದಃ ಶಿರೋಧರಂ
ತ್ವಂ ಪ್ರಾಯಣೀಯೋದಯನೀಯದಂಷ್ಟ್ರಃ ।
ಜಿಹ್ವಾ ಪ್ರವರ್ಗ್ಯಸ್ತವ ಶೀರ್ಷಕಂ ಕ್ರತೋಃ
ಸಭ್ಯಾವಸಥ್ಯಂ ಚಿತಯೋಽಸವೋ ಹಿ ತೇ ॥೩೭॥

ಮತ್ತೆ-ಮತ್ತೆ ಅವತಾರವನ್ನು ಎತ್ತುವಿಕೆಯೇ ಯಜ್ಞರೂಪನಾದ ನಿನ್ನ 'ದೀಕ್ಷಣೀಯ' ಎಂಬ ಇಷ್ಟಿಯಾಗಿದೆ. ನಿನ್ನ ಕುತ್ತಿಗೆಯೇ, 'ಉಪಸದ' ಎಂಬ ಮೂರು ಇಷ್ಟಿಗಳ ರೂಪವಾಗಿದೆ. ಎರಡು ಕೋರೆದಾಡೆಗಳೂ 'ಪ್ರಾಯಣೀಯ' (ದೀಕ್ಷಾನಂತರದ ಇಷ್ಟಿ) ಮತ್ತು 'ಉದಯನೀಯ' (ಯಜ್ಞಸಮಾಪ್ತಿಯ) ಇಷ್ಟಿಗಳಾಗಿವೆ. ನಿನ್ನ ನಾಲಿಗೆಯು ಪ್ರವರ್ಗ್ಯವು. (ಪ್ರತಿಯೊಂದು ಉಪಸದಕ್ಕೂ ಹಿಂದೆ ಮಾಡಲ್ಪಡುವ 'ಮಹಾವೀರ' ಎಂಬ ಕರ್ಮವು.) ನಿನ್ನ ಶಿರಸ್ಸು 'ಸಭ್ಯ' (ಹೋಮರಹಿತವಾದ) ಎಂಬ ಅಗ್ನಿಯು. ಆವಸಥ್ಯ ಎಂಬ ಔಪಾಸನಾಗ್ನಿಯೂ ಮತ್ತು ಪ್ರಾಣಚಿತಿಯೂ (ಇಷ್ಟಕಾಚಯನವು) ನಿನ್ನ ಪ್ರಾಣಗಳು.

ಸೋಮಸ್ತು ರೇತಃ ಸವನಾನ್ಯವಸ್ಥಿತಿಃ
ಸಂಸ್ಥಾವಿಭೇದಾಸ್ತವ ದೇವ ಧಾತವಃ ।

ಸತ್ರಾಣಿ ಸರ್ವಾಣಿ ಶರೀರಸನ್ಧಿ-
ಸ್ತ್ವಂ ಸರ್ವಯಜ್ಞಕ್ರತುರಿಷ್ಟಿ ಬನ್ಧನಃ ॥೩೮॥

ಓ ದೇವನೇ! ನಿನ್ನ ವೀರ್ಯವೇ ಸೋಮವು. ಕೂರುವಿಕೆಯು ಪ್ರಾತಸ್ಸವನವೇ ಮುಂತಾದ ಮೂರು ಸವನಗಳು. ನಿನ್ನ ರಕ್ತ-ಮಾಂಸಾದಿ ಸಪ್ತಧಾತುಗಳೇ ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ್ಯ, ಷೋಡಶೀ, ವಾಜಪೇಯ, ಅತಿರಾತ್ರ ಮತ್ತು ಅಪ್ತೋರ್ಯಾಮಗಳೆಂಬ ಏಳು ಸಂಸ್ಥೆಗಳು ಮತ್ತು ನಿನ್ನ ಶರೀರದ ಸಂಧಿಭಾಗಗಳೇ ಸಂಪೂರ್ಣವಾದ ದ್ವಾದಶಾಹವೇ ಮುಂತಾದ ಸತ್ರಗಳು. ಹೀಗೆ ನೀನು ಸಂಪೂರ್ಣಯಜ್ಞವೂ (ಅಂದರೆ ಸೋಮರಹಿತಯಜ್ಞವೂ) ಮತ್ತು ಕ್ರತುವೂ (ಸೋಮಸಹಿತವಾದ ಯಜ್ಞವೂ)–ಎರಡೂ ಆಗಿದ್ದೀಯೆ. ಯಜ್ಞಾನುಷ್ಠಾನರೂಪವಾದ ಇಷ್ಟಿಗಳು ನಿನ್ನ ಅಂಗಗಳನ್ನು ಒಟ್ಟಿಗೆ ಸೇರಿಸಿರುವ ಮಾಂಸಬಂಧಗಳು. ಹೀಗೆ ನೀನು ಸಂಪೂರ್ಣಯಜ್ಞಸ್ವರೂಪಿಯಾಗಿದ್ದೀಯೆ. ನಿನ್ನ ದಿವ್ಯಮಂಗಳ ವಿಗ್ರಹದ ಅಂಗಗಳೆಲ್ಲವೂ ಯಜ್ಞಾಂಗಗಳಾದ ಯಜ್ಞೋಪಕರಣಗಳೇ ಆಗಿವೆ.

ನಮೋ ನಮಸ್ತೇಽಖಿಲಮನ್ತ್ರದೇವತಾ-
ದ್ರವ್ಯಾಯ ಸರ್ವಕ್ರತವೇ ಕ್ರಿಯಾತ್ಮನೇ ।
ವೈರಾಗ್ಯಭಕ್ತ್ಯಾತ್ಮಜಯಾನುಭಾವಿತ-
ಜ್ಞಾನಾಯ ವಿದ್ಯಾಗುರವೇ ನಮೋ ನಮಃ ॥೩೯॥

ಸಮಸ್ತಮಂತ್ರಸ್ವರೂಪನೂ, ದೇವತಾಸ್ವರೂಪನೂ, ದ್ರವ್ಯ ಸ್ವರೂಪನೂ, ಯಜ್ಞಸ್ವರೂಪನೂ ಮತ್ತು ಕರ್ಮಸ್ವರೂಪನೂ ಆಗಿರುವ ನಿನಗೆ ನಮೋ ನಮಃ. ವೈರಾಗ್ಯ, ಭಕ್ತಿ ಮತ್ತು ಚಿತ್ತದ ಏಕಾಗ್ರತೆಯಿಂದ ಯಾವ ಜ್ಞಾನವು ಅನುಭವಕ್ಕೆ ಬರುತ್ತದೆಯೋ–ಅದು ನಿನ್ನ ಸ್ವರೂಪವೇ ಆಗಿದೆ. ನೀನೇ ಎಲ್ಲರ ವಿದ್ಯಾಗುರುವು. ಇಂತಹ ನಿನಗೆ ಮತ್ತೆ-ಮತ್ತೆ ಪ್ರಣಾಮಗಳು.

ದಂಷ್ಟ್ರಾಗ್ರಕೋಟ್ಯಾ ಭಗವಂಸ್ತ್ವಯಾ ಧೃತಾ
ವಿರಾಜತೇ ಭೂಧರ ಭೂಃ ಸಭೂಧರಾ ।

ಯಥಾ ವನ್ನಾನ್ನಿಃಸರತೋ ದತಾ ಧೃತಾ
ಮತಙ್ಗಜೇನ್ದ್ರಸ್ಯ ಸಪತ್ರಪದ್ಮಿನೀ ॥೪೦॥

ಭೂದೇವಿಯನ್ನು ಧರಿಸಿಕೊಂಡಿರುವ ಭಗವಂತನೇ! ನೀನು ಕೋರೆ ಹಲ್ಲಿನ ತುದಿಯಲ್ಲಿ ಇರಿಸಿಕೊಂಡಿರುವ ಪರ್ವತಗಳಿಂದ ಅಲಂಕೃತವಾದ ಈ ಭೂಗೋಳವು ಜಲಾಶಯದಿಂದ ಹೊರಬರುತ್ತಿರುವ ಮದಗಜದ ದಂತಾಗ್ರದಲ್ಲಿರುವ ದಳಸಹಿತವಾದ ತಾವರೆಯಗಿಡದಂತೆ ಬೆಳಗುತ್ತಿದೆ.

ತ್ರಯೀಮಯಂ ರೂಪಮಿದಂ ಚ ಸೌಕರಂ
ಭೂಮಣ್ಡಲೇನಾಥ ದತಾ ಧೃತೇನ ತೇ ।
ಚಕಾಸ್ತಿ ಶೃಙ್ಗೋಢಘನೇನ ಭೂಯಸಾ
ಕುಲಾಚಲೇನ್ದ್ರಸ್ಯ ಯಥೈವ ವಿಭ್ರಮಃ ॥೪೧॥

ಕೋರೆಹಲ್ಲುಗಳ ಮೇಲೆ ಭೂಮಂಡಲವನ್ನು ಧರಿಸಿಕೊಂಡಿರುವ ನಿನ್ನ ಈ ವೇದಮಯವಾದ ವರಾಹಶ್ರೀಮೂರ್ತಿಯು ತನ್ನ ಶಿಖರದ ಮೇಲೆ ಮೇಘಮಾಲೆಯನ್ನು ಧರಿಸಿಕೊಂಡಿರುವ ಮಹಾಕುಲಪರ್ವತದಂತೆ ಕಂಗೊಳಿಸುತ್ತಿದೆ.

ಸಂಸ್ಥಾಪಯೈನಾಂ ಜಗತಾಂ ಸತಸ್ಥುಷಾಂ
ಲೋಕಾಯ ಪತ್ನೀಮಸಿ ಮಾತರಂ ಪಿತಾ ।
ವಿಧೇಮ ಚಾಸ್ಯೈ ನಮಸಾ ಸಹ ತ್ವಯಾ
ಯಸ್ಯಾಂ ಸ್ವತೇಜೋಽಗ್ನಿಮಿವಾರಣಾವಧಾಃ ॥೪೨॥

ಚರಾಚರಜೀವಿಗಳು ಅಲ್ಲಿ ಸುಖವಾಗಿರುವುದಕ್ಕಾಗಿ ನಿನ್ನ ಪತ್ನಿಯಾದ ಈ ಭೂಮಾತೆಯನ್ನು ಜಲದ ಮೇಲೆ ನೆಲೆಗೊಳಿಸುವವನಾಗು. ಜಗತ್ತಿನ ತಂದೆ ನೀನು. ಅರಣಿಯಲ್ಲಿ ಅಗ್ನಿಯನ್ನು ಸ್ಥಾಪಿಸುವಂತೆ–ನೀನು ಇದರಲ್ಲಿ ಧಾರಣಾಶಕ್ತಿರೂಪವಾದ ನಿನ್ನ ತೇಜಸ್ಸನ್ನು ಸ್ಥಾಪಿಸಿದ್ದೀಯೆ. ಇಂತಹ ನಿನಗೂ ಮತ್ತು ಈ ಭೂಮಾತೆಗೂ ಭೂರಿ-ಭೂರಿ ನಮಸ್ಕಾರಗಳು.

ಕಃ ಶ್ರದ್ದಧೀತಾನ್ಯತಮಸ್ತವ ಪ್ರಭೋ
ರಸಾಂ ಗತಾಯಾ ಭುವ ಉದ್ವಿಬರ್ಹಣಮ್ ।
ನ ವಿಸ್ಮಯೋಽಸೌ ತ್ವಯಿ ವಿಶ್ವವಿಸ್ಮಯೇ
ಯೋ ಮಾಯಯೇದಂ ಸಸೃಜೇಽತಿವಿಸ್ಮಯಮ್ ॥೪೩॥

ಪ್ರಭೋ! ರಸಾತಲದಲ್ಲಿ ಮುಳುಗಿಹೋಗಿದ್ದ ಈ ಪೃಥಿವಿಯನ್ನು ಮೇಲಕ್ಕೆ ಎತ್ತುವ ಸಾಹಸವನ್ನು ಮಾಡಲು ನಿನ್ನನ್ನು ಹೊರತು ಬೇರೆ ಯಾರಿಗೆ ಸಾಮರ್ಥ್ಯವಿದೆ? ಆದರೆ ನೀನು ಆಶ್ಚರ್ಯಗಳ ನಿಧಿಯು. ಇದು ನಿನಗೆ ದೊಡ್ಡ ಆಶ್ಚರ್ಯದ ಕೆಲಸವೇನೂ ಅಲ್ಲ. ಮಾಯಾಬಲದಿಂದ ಈ ಅತ್ಯಾಶ್ಚರ್ಯಮಯವಾದ ವಿಶ್ವವನ್ನು ರಚನೆಮಾಡಿರುವವನಲ್ಲವೇ ನೀನು!

ವಿಧುನ್ವತಾ ವೇದಮಯಂ ನಿಜಂ ವಪು-
ರ್ಜನಸ್ತಪಃಸತ್ಯನಿವಾಸಿನೋ ವಯಮ್ ।
ಸಟಾಶಿಖೋದ್ಧೂತಶಿವಾಮ್ಬುಬಿನ್ದುಭಿ-
ರ್ವಿಮೃಜ್ಯಮಾನಾ ಭೃಶಮೀಶ ಪಾವಿತಾಃ ॥೪೪॥

ನೀನು ನಿನ್ನ ವೇದಮಯವಾದ ದಿವ್ಯಮಂಗಳವಿಗ್ರಹವನ್ನು ಒದರಿದಾಗ ನಮ್ಮ ಮೇಲೆ ನಿನ್ನ ಕುತ್ತಿಗೆಯ ಕೂದಲುಗಳಿಂದ ಸೋರಿದ ಶೀತಲವಾದ ನೀರಿನ ಬಿಂದುಗಳು ಬೀಳುತ್ತಿವೆ. ಅದರಲ್ಲಿ ನೆನೆದ ಜನೋಲೋಕ, ತಪೋಲೋಕ ಮತ್ತು ಸತ್ಯಲೋಕಗಳ ನಿವಾಸಿಗಳಾದ ನಾವೆಲ್ಲರೂ ಪವಿತ್ರರಾಗಿಬಿಟ್ಟಿದ್ದೇವೆ, ಪ್ರಭುವೇ!

ಸ ವೈ ಬತ ಭ್ರಷ್ಟಮತಿಸ್ತವೈಷ ತೇ
ಯಃ ಕರ್ಮಣಾಂ ಪಾರಮಪಾರಕರ್ಮಣಃ ।
ಯದ್ಯೋಗಮಾಯಾಗುಣಯೋಗಮೋಹಿತಂ
ವಿಶ್ವಂ ಸಮಸ್ತಂ ಭಗವನ್ವಿಧೇಹಿ ಶಮ್ ॥೪೫॥

ಅಪಾರವಾದ ಕರ್ಮಗಳುಳ್ಳವನು ನೀನು. ಇಂತಹ ನಿನ್ನ ಕರ್ಮಗಳ ಪಾರವನ್ನು ಹೊಂದಲು ಬಯಸುವವನು ಬುದ್ಧಿಗೆಟ್ಟವನೆಂದೇ ಹೇಳಬೇಕು. ನಿನ್ನ ಯೋಗಮಾಯೆಯ ಗುಣಗಳ ಯೋಗದಿಂದಲೇ ಈ ಇಡೀ ಜಗತ್ತು ಮರುಳುಗೊಂಡಿರುವುದು! ಭಗವಂತ! ಈ ಜಗತ್ತಿಗೆ ಮಂಗಳವನ್ನುಂಟು ಮಾಡು."

ಮೈತ್ರೇಯರು ಹೇಳುತ್ತಾರೆ :

ಇತ್ಯುಪಸ್ಥೀಯಮಾನಸ್ತೈರ್ಮುನಿಭಿರ್ಬ್ರಹ್ಮವಾದಿಭಿಃ ।
ಸಲಿಲೇ ಸ್ವಖುರಾಕ್ರಾನ್ತ ಉಪಾಧತ್ತಾವಿತಾವನಿಮ್ ॥೪೬॥

ವಿದುರ! ಕೇಳು. ಬ್ರಹ್ಮಾದಿಗಳಾದ ಮುನಿಗಳು ಹೀಗೆ ಸ್ತುತಿ ಮಾಡುತ್ತಿರಲಾಗಿ–ಸರ್ವರಕ್ಷಕನಾದ ವರಾಹಮೂರ್ತಿಭಗವಂತನು ತನ್ನ ಗೊರಸುಗಳಿಂದ ನೀರನ್ನು ಸ್ತಂಭನಮಾಡಿ ಅದರ ಮೇಲೆ ಭೂದೇವಿಯನ್ನು ನೆಲೆಗೊಳಿಸಿಬಿಟ್ಟನು.

ಸ ಇತ್ಥಂ ಭಗವಾನುರ್ವೀಂ ವಿಷ್ವಕ್ಸೇನಃ ಪ್ರಜಾಪತಿಃ ।
ರಸಾಯಾ ಲೀಲಯೋನ್ನೀತಾಮಪ್ಸು ನ್ಯಸ್ಯ ಯಯೌ ಹರಿಃ ॥೪೭॥

ಈ ರೀತಿಯಲ್ಲಿ ರಸಾತಲದಿಂದ ಲೀಲಾಜಾಲವಾಗಿ ಉದ್ಧರಿಸಲ್ಪಟ್ಟ ಭೂಮಿಯನ್ನು ಜಲದ ಮೇಲೆ ಇರಿಸಿ ವಿಷ್ವಕ್ಸೇನನೂ–ಪ್ರಜಾಪತಿಯೂ ಆದ ಆ ಶ್ರೀಹರಿಯು ಅಂತರ್ಧಾನಹೊಂದಿಬಿಟ್ಟನು.

ಯ ಏವಮೇತಾಂ ಹರಿಮೇಧಸೋ ಹರೇಃ
ಕಥಾಂ ಸುಭದ್ರಾಂ ಕಥನೀಯಮಾಯಿನಃ ।
ಶೃಣ್ವೀತ ಭಕ್ತ್ಯಾ ಶ್ರವಯೇತ ವೋಶತೀಂ
ಜನಾರ್ದನೋಽಸ್ಯಾಶು ಹೃದಿ ಪ್ರಸೀದತಿ ॥೪೮॥

ವಿದುರನೇ! ಕೇಳು. ಶ್ರೀಭಗವಂತನ ಲೀಲಾಮಯವಾದ ಚರಿತ್ರಗಳು ಕೀರ್ತಿಸಲು ಅತ್ಯಂತಯೋಗ್ಯವಾದುವುಗಳು. ಅವುಗಳಲ್ಲೇ ಲಗ್ನವಾದ ಬುದ್ಧಿಯು ಎಲ್ಲ ರೀತಿಯ ಪಾಪ-ತಾಪಗಳನ್ನೂ ದೂರಮಾಡುತ್ತದೆ. ಮಂಗಳಮನೋಹರವಾದ ಈ ಕಥೆಯನ್ನು ಭಕ್ತಿಭಾವದಿಂದ ಕೇಳುವ ಅಥವಾ ಹೇಳುವ ಮನುಷ್ಯನ ವಿಷಯದಲ್ಲಿ ಭಕ್ತವತ್ಸಲನಾದ ಭಗವಂತನು ಅಂತರಂಗದಲ್ಲಿ ಬಲು ಬೇಗನೇ ಪ್ರಸನ್ನನಾಗಿಬಿಡುವನು.

ತಸ್ಮಿನ್ಪ್ರಸನ್ನೇ ಸಕಲಾಶಿಷಾಂ ಪ್ರಭೌ
ಕಿಂ ದುರ್ಲಭಂ ತಾಭಿರಲಂ ಲವಾತ್ಮಭಿಃ ।
ಅನನ್ಯದೃಷ್ಟ್ಯಾ ಭಜತಾಂ ಗುಹಾಶಯಃ
ಸ್ವಯಂ ವಿಧತ್ತೇ ಸ್ವಗತಿಂ ಪರಃ ಪರಾಮ್ ॥೪೯॥

ಶ್ರೀಭಗವಂತನಾದರೋ ಎಲ್ಲ ಕಾಮನೆಗಳನ್ನೂ ಈಡೇರಿಸುವ ಸಾಮರ್ಥ್ಯವುಳ್ಳವನು. ಅವನು ಪ್ರಸನ್ನನಾದರೆ ಪ್ರಪಂಚದಲ್ಲಿ ಯಾವುದು ತಾನೇ ದುರ್ಲಭ? ಆದರೆ ಕ್ಷುದ್ರವಾದ ಬಯಕೆಗಳಿಗಾಗಿ ಭಗವಂತನನ್ನು

ಏಕೆ ಬೇಡಬೇಕು? ಅನನ್ಯಭಾವದಿಂದ ಆತನನ್ನು ಯಾರು ಭಜಿಸುತ್ತಾರೆಯೋ–ಅವರಿಗೆ ಸ್ವಾಮಿಯು ತನ್ನ ಪರಮಪದವನ್ನೇ ಅನುಗ್ರಹಿಸುವನಲ್ಲವೇ!

ಕೋ ನಾಮ ಲೋಕೇ ಪುರುಷಾರ್ಥಸಾರವಿ-
ತ್ಪುರಾಕಥಾನಾಂ ಭಗವತ್ಕಥಾಸುಧಾಮ್ ।
ಆಪೀಯ ಕರ್ಣಾಞ್ಜಲಿಭಿರ್ಭವಾಪಹಾ-
ಮಹೋ ವಿರಜ್ಯೇತ ವಿನಾ ನರೇತರಮ್ ॥೫೦॥

ಸಂಸಾರಬಂಧವನ್ನು ಬಿಡಿಸುವ ಶ್ರೀಭಗವಂತನ ಪ್ರಾಚೀನಕಥೆಗಳಲ್ಲಿನ ಕಥಾಮೃತವನ್ನು ಒಂದು ಬಾರಿ ಕರ್ಣಪುಟಗಳಿಂದ ಪಾನಮಾಡಿದರೂ ಪುರುಷಾರ್ಥಗಳ ಸಾರವನ್ನು ಬಲ್ಲ ಮನುಷ್ಯರಿಗೆ ಅದರಲ್ಲಿ ಬೇಸರವುಂಟಾಗುವುದಿಲ್ಲ. ಹಾಗೆ ಬೇಸರವುಂಟಾದರೆ ಆತನು ಮನುಷ್ಯನೇ ಅಲ್ಲ.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೧೩ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೧೪ನೆಯ ಅಧ್ಯಾಯ

ದಿತಿ-ಕಶ್ಯಪರ ಸಂವಾದ

ಶ್ರೀಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಹೇಳುತ್ತಾರೆ :

ನಿಶಮ್ಯ ಕೌಷಾರವಿಣೋಪವರ್ಣಿತಾಂ
ಹರೇಃ ಕಥಾಂ ಕಾರಣಸೂಕರಾತ್ಮನಃ ।
ಪುನಃ ಸ ಪಪ್ರಚ್ಛ ತಮುದ್ಯತಾಞ್ಜಲಿ-
ರ್ನ ಚಾತಿತೃಪ್ತೋ ವಿದುರೋ ಧೃತವ್ರತಃ ॥೧॥

ಓ ರಾಜಶ್ರೇಷ್ಠನೇ! ಮಹಾತ್ಮನಾದ ವಿದುರನು ಮೈತ್ರೇಯಮಹರ್ಷಿಗಳು ವರ್ಣನೆಮಾಡಿದ ಶ್ರೀವರಾಹರೂಪಿಯಾದ ಭಗವಂತನ ಅಮೃತಮಯವಾದ ಕಥೆಯನ್ನು ಕೇಳಿ ಸಂತೋಷಗೊಂಡರೂ ಆತನಿಗೆ ಪೂರ್ಣವಾಗಿ ತೃಪ್ತಿಯುಂಟಾಗಲಿಲ್ಲ. ಅದನ್ನು ಮತ್ತೂ ವಿವರವಾಗಿ ಕೇಳಬೇಕೆಂಬ ಆಸೆಯಿಂದ ಆತನು ಮಹರ್ಷಿಗಳ ಮುಂದೆ ಕೈಜೋಡಿಸಿಕೊಂಡು ಹೀಗೆ ವಿನಂತಿಸಿಕೊಂಡನು :

"'ಓ ಮುನಿಶ್ರೇಷ್ಠರೇ! 'ಯಜ್ಞಮೂರ್ತಿಯಾದ, ವರಾಹರೂಪಿ ಯಾದ ಆ ಭಗವಂತನಿಂದಲೇ ಆದಿದೈತ್ಯನಾದ ಹಿರಣ್ಯಾಕ್ಷನು ಸಂಹರಿಸಲ್ಪಟ್ಟನು'–ಎಂದು ತಮ್ಮಿಂದ ಕೇಳಿದೆನು. ಆ ಭಗವಂತನು ತನ್ನ ಕೋರೆ ದಾಡೆಗಳ ಮೇಲೆ ಭೂಮಿಯನ್ನು ಇರಿಸಿಕೊಂಡು ನೀರಿನಿಂದ ಮೇಲಕ್ಕೆ ಬಂದಾಗ ಆತನಿಗೂ ದೈತ್ಯನಾದ ಹಿರಣ್ಯಾಕ್ಷನಿಗೂ ಏತಕ್ಕಾಗಿ ಯುದ್ಧವುಂಟಾಯಿತು?"–ಎಂದು ಪ್ರಶ್ನೆಮಾಡಿದನು. ಅದಕ್ಕೆ ಮೈತ್ರೇಯರು ಹೀಗೆ ಉತ್ತರ ಹೇಳಿದರು : (ಶ್ಲೋಕ 2-3)

"ವಿದುರ! ನೀನು ತುಬಾ ಒಳ್ಳೆಯ ಪ್ರಶ್ನೆಯನ್ನೇ ಕೇಳಿದೆ. ಮನುಷ್ಯರನ್ನು ಮೃತ್ಯುಪಾಶದಿಂದ ಬಿಡಿಸುವ ಶ್ರೀಹರಿಯ ಅವತಾರಕಥೆಯನ್ನೇ ಕೇಳಿರುವೆ. ಉತ್ತಾನಪಾದನ ಪುತ್ರನಾದ ಧ್ರುವನು ಪುಟ್ಟ ಬಾಲಕನಾಗಿರುವಾಗಲೇ ಶ್ರೀನಾರದಮಹರ್ಷಿಗಳು ಹೇಳಿದ ಶ್ರೀಹರಿಯ ಕಥೆಯ ಪ್ರಭಾವದಿಂದಲೇ ಅಲ್ಲವೇ ಅವನು ಮೃತ್ಯುವಿನ ತಲೆಯ ಮೇಲೆ ಪಾದವನ್ನು ಇಟ್ಟು ಪರಮಪದಕ್ಕೆ ಹತ್ತಿದ್ದು? ಹಿಂದೆ ಒಂದು ಬಾರಿ ಶ್ರೀವರಾಹರೂಪಿ ಯಾದ ಭಗವಂತನಿಗೂ–ಹಿರಣ್ಯಾಕ್ಷನಿಗೂ ನಡೆದ ಯುದ್ಧವನ್ನು ಕುರಿತಾಗಿಯೇ ದೇವತೆಗಳು ದೇವಾಧಿದೇವರಾದ ಬ್ರಹ್ಮದೇವರನ್ನು ಪ್ರಶ್ನೆಮಾಡಿದ್ದರು. ಆಗ ಬ್ರಹ್ಮದೇವರು ಅವರಿಗೆ ಈ ಇತಿಹಾಸವನ್ನು ಉತ್ತರವಾಗಿ ವರ್ಣಿಸಿದ್ದರು. ಅದೇ ಪರಂಪರೆಯಲ್ಲೇ ಬಂದ ಕಥೆಯನ್ನು ನಾನು ಕೇಳಿದ್ದೇನೆ.

ಹಿಂದೊಮ್ಮೆ ದಕ್ಷಪ್ರಜಾಪತಿಯ ಪುತ್ರಿಯಾದ ದಿತಿಯು ಪುತ್ರನನ್ನು ಪಡೆಯಬೇಕೆಂಬ ಬಯಕೆಯಿಂದ ಕಾಮಾತುರಳಾಗಿ ಪತಿಯಾದ, ಮರೀಚಿ ಪುತ್ರರಾದ ಶ್ರೀಕಶ್ಯಪಮಹರ್ಷಿಗಳ ಬಳಿಗೆ ಹೋಗಿ ಪ್ರಾರ್ಥನೆಮಾಡಿದಳು. ಆ ಸಮಯದಲ್ಲಿ ಕಶ್ಯಪರು ಅಗ್ನಿಯನ್ನು ನಾಲಗೆಯನ್ನಾಗಿ ಹೊಂದಿರುವ ಯಜ್ಞಪತಿಯಾದ ಪರಮಪುರುಷನನ್ನು ಕ್ಷೀರದ ಆಹುತಿಯಿಂದ ಆರಾಧನೆ ಮಾಡಿ ಸೂರ್ಯನ ಅಸ್ತಮಯಸಮಯವಾಗಿದ್ದುದನ್ನು ಗಮನಿಸಿ ಅಗ್ನಿಶಾಲೆಯಲ್ಲಿ ಶಾಂತಚಿತ್ತರಾಗಿ ಕುಳಿತುಕೊಂಡಿದ್ದರು.

ದಿತಿಯು ಹೇಳುತ್ತಾಳೆ :

"ಎಲೈ ಜ್ಞಾನಿಶ್ರೇಷ್ಠನೇ! ಮದಿಸಿದ ಆನೆಯು ಬಾಳೆಯ ಗಿಡವನ್ನು

ಕಿತ್ತಾಡುವಂತೆ–ಈ ಬಿಲ್ಲು ಹಿಡಿದ ಮನ್ಮಥನು ಅಬಲೆಯಾಗಿರುವ ನನ್ನನ್ನು ನಿನ್ನ ವಿಷಯದಲ್ಲಿ ಹುರಿದುಂಬಿಸಿ ಕೋಟಲೆಗೆ ಈಡುಮಾಡಿದ್ದಾನೆ. ನನ್ನ ಸವತಿಯರು ಪುತ್ರವತಿಯರಾಗಿ ಸಮೃದ್ಧರಾಗಿದ್ದಾರೆ. ಅದನ್ನು ನೋಡಿ ನನ್ನ ಮನಸ್ಸು ಅಸೂಯೆಯಿಂದ ಉರಿಯುತ್ತಿದೆ. ಆದುದರಿಂದ ನೀನು ನನ್ನಲ್ಲಿ ಕೃಪೆಮಾಡಬೇಕು. ನಿನಗೆ ಮಂಗಳವಾಗಲಿ. ನಿನ್ನಂತಹ ಪತಿಯು ನನ್ನಲ್ಲಿ ಗರ್ಭವನ್ನಿರಿಸಿ ಪುತ್ರರೂಪದಲ್ಲಿ ಜನಿಸಿದರೆ ತಾನೇ ಸ್ತ್ರೀಯರಿಗೆ ಪತಿಯು ಸನ್ಮಾನಮಾಡಿದಂತೆ ಆಗುತ್ತದೆ! (ಶ್ಲೋಕ 4-11)

ನಮ್ಮ ತಂದೆಯಾದ ಪೂಜ್ಯನಾದ ದಕ್ಷನು ಪುತ್ರಿಯರಲ್ಲಿ ವಾತ್ಸಲ್ಯ ತುಂಬಿದವನು. ಆತನು ನಮ್ಮನ್ನು ಒಬ್ಬೊಬ್ಬರನ್ನಾಗಿ ಕರೆಸಿ–'ನೀನು ಯಾರನ್ನು ಪತಿಯನ್ನಾಗಿ ವರಿಸುತ್ತೀಯೆ?"–ಎಂದು ಕೇಳಿದಾಗ ನಾವು ನಮ್ಮ ಅಭಿಪ್ರಾಯವನ್ನು ತಿಳಿಸಿದೆವು. ಅದರಂತೆ ನಿನ್ನನ್ನು ಬಯಸಿ ನಿನ್ನ ಗುಣ-ಶೀಲಗಳನ್ನು ಅನುಸರಿಸಲು ಸಮ್ಮತಿಸಿದ ಹದಿಮೂರು ಮಂದಿ ಪುತ್ರಿಯರಾದ ನಮ್ಮನ್ನು ನಿನಗೆ ಕೊಟ್ಟು ವಿವಾಹಮಾಡಿದನು. ಆದುದರಿಂದ–ಎಲೈ ಮಂಗಳಮೂರ್ತಿಯೇ! ಕಮಲನಯನನೇ! ನನ್ನ ಇಷ್ಟಾರ್ಥವನ್ನು ಈಡೇರಿಸುವವನಾಗು. ನಿನ್ನಂತಹ ಮಹಾಪುರುಷರ ಬಳಿಗೆ ಬಂದ ದೀನಜನರ ಇಷ್ಟವು ಕೈಗೂಡದೇ ಇರುವುದಿಲ್ಲ."

ಹೀಗೆ ಕಾಮದ ವೇಗದಿಂದ ಅತ್ಯಂತಪೀಡತಳಾಗಿ ತನ್ನನ್ನು ದೈನ್ಯದಿಂದ ಅಂಗಲಾಚಿ ಬಹಳವಾಗಿ ಬೇಡಿಕೊಳ್ಳುತ್ತಿದ್ದ ಪತ್ನಿಯನ್ನು ಸವಿಮಾತುಗಳಿಂದ ಸಂತೈಸುತ್ತಾ ಮಹಾತ್ಮರಾದ ಕಶ್ಯಪರು ಹೇಳಿದರು :

"ಎಲೈ ಭೀರುವೇ! ನಿನ್ನ ಬಯಕೆಯಂತೆ ನಿನಗೆ ಯಾವುದು ಪ್ರಿಯವೋ ಅದನ್ನು ಅವಶ್ಯವಾಗಿ ಮಾಡುವೆನು. ಧರ್ಮ-ಅರ್ಥ-ಕಾಮ–ಎಂಬ ಮೂರು ಪುರುಷಾರ್ಥಗಳ ಸಿದ್ಧಿಗೂ ಸಾಧನವಾಗಿರುವ ಪತ್ನಿಯ ಕಾಮವನ್ನು ಯಾವ ಪತಿಯು ತಾನೇ ಈಡೇರಿಸುವುದಿಲ್ಲ? ಮನುಷ್ಯನು ಹಡಗನ್ನು ಹತ್ತಿ ಸಮುದ್ರವನ್ನು ದಾಟುವಂತೆ–ಗೃಹಸ್ಥಾಶ್ರಮಿಯು ಇತರ ಆಶ್ರಮಗಳಿಗೂ ಆಶ್ರಯನೀಡುತ್ತಾ ತನ್ನ ಆಶ್ರಮಧರ್ಮದ ಅನುಷ್ಠಾನದ

ಮೂಲಕ ದುಃಖಸಾಗರವನ್ನು ದಾಟುವನು. ಪತ್ನಿಯ ಸಹಾಯವಿದ್ದರೆ ತಾನೇ ಆತನು ಹೀಗೆ ಮಾಡಲು ಸಾಧ್ಯವಾಗುವುದು!

ಸರ್ವಾಶ್ರಮಾನುಪಾದಾಯ ಸ್ವಾಶ್ರಮೇಣ ಕಲತ್ರವಾನ್ ।
ವ್ಯಸನಾರ್ಣವಮತ್ಯೇತಿ ಜಲಯಾನೈರ್ಯಥಾರ್ಣವಮ್ ॥೧೭॥

ಎಲೈ ಮಾನಿನಿಯೇ! ಶ್ರೇಯಸ್ಸನ್ನು ಬಯಸುವ ಗೃಹಸ್ಥನಿಗೆ ಆತನ ಪತ್ನಿಯು ಶರೀರದ ಅರ್ಧಭಾಗವೇ ಆಗಿದ್ದಾಳೆಂದು ಹೇಳುತ್ತಾರೆ. ಆಕೆಯಲ್ಲಿ ತನ್ನ ಆಶ್ರಮದ ಭಾರವನ್ನು ಇರಿಸಿ ಗೃಹಸ್ಥನು ನಿಶ್ಚಿಂತನಾಗಿ ಸಂಚರಿಸಬಹುದು. ಇತರ ಆಶ್ರಮಗಳಲ್ಲಿರುವವರಿಗೆ ಇಂದ್ರಿಯಗಳೆಂಬ ಶತ್ರುಗಳನ್ನು ಜಯಿಸುವುದು ಕಷ್ಟ. ಆದರೆ ಕೋಟೆ-ಕೊತ್ತಲುಗಳ ಆಶ್ರಯದಲ್ಲಿರುವ ದುರ್ಗಪತಿಯು ಲೂಟಿಮಾಡುವ ಕಳ್ಳ-ಕಾಕರನ್ನು ಸುಲಭವಾಗಿ ನಿಗ್ರಹಿಸಬಹುದಲ್ಲವೇ! ಹಾಗೆಯೇ ನಾವು ಪತ್ನಿಯ ಆಶ್ರಯದಿಂದ ಈ ಇಂದ್ರಿಯಗಳೆಂಬ ಕಳ್ಳರನ್ನು ಲೀಲಾಜಾಲವಾಗಿಯೇ ನಿಗ್ರಹಿಸಬಹುದು.

ಯಾಮಾಶ್ರಿತ್ಯೇನ್ದ್ರಿಯಾರಾತೀನ್ದುರ್ಜಯಾನಿತರಾಶ್ರಮೈಃ ।
ವಯಂ ಜಯೇಮ ಹೇಲಾಭಿರ್ದಸ್ಯೂನ್ದುರ್ಗಪತಿರ್ಯಥಾ ॥೧೮॥

ಎಲೈ ಗೃಹೇಶ್ವರಿಯೇ! ನಿನ್ನಂತಹ ಪತ್ನಿಯರು ಮಾಡುವ ಉಪಕಾರವನ್ನು ನಾವಾಗಲೀ ಅಥವಾ ಇತರೇ ಯಾವ ಗುಣಾಗ್ರಾಹಿಯಾದ ಪುರುಷನೇ ಆಗಲೀ ತನ್ನ ಇಡೀ ಆಯುಷ್ಯದಲ್ಲಿ ಅಥವಾ ಜನ್ಮಾಂತರದಲ್ಲೂ ಪೂರ್ಣವಾಗಿ ತೀರಿಸಲು ಆಗುವುದಿಲ್ಲ. ಆದರೂ ಸಂತಾನವನ್ನು ಪಡೆಯಬೇಕೆಂಬ ನಿನ್ನ ಬಯಕೆಯನ್ನು ನಾನು ಆವಶ್ಯಕವಾಗಿ ಈಡೇರಿಸುವೆನು. ಆದರೆ ನೀನು ಒಂದು ಮುಹೂರ್ತಕಾಲ ಕಾಯಬೇಕು. ಹೀಗಾದರೆ ನಾನು ಲೋಕನಿಂದೆಗೆ ಪಾತ್ರನಾಗುವುದಿಲ್ಲ. ಇದು ಸಂಧ್ಯಾಸಮಯ. ಅತ್ಯಂತ ಘೋರವಾದ ವೇಳೆ. ಘೋರಜೀವಿಗಳಿಗೆ ವಿಹರಿಸಲು ತಕ್ಕ ವೇಳೆ. ಅತಿಭಯಂಕರವಾದ ಕಾಲ. ಭಗವಂತನಾದ ಭೂತೇಶನ ಗುಣಗಳಾದ ಭೂತ-ಭೇತಾಳಾದಿಗಳು ಓಡಾಡುತ್ತಿರುವ ಭೀಕರವಾದ ಸಮಯವಿದು.

ಎಲೈ ಸಾಧ್ವೀಮಣಿಯೇ! ಈ ವೇಳೆಯಲ್ಲಿ ಭಗವಂತನಾದ ಭೂತಪತಿ

ಯಾದ ರುದ್ರದೇವನು ವೃಷಭವಾಹನವನ್ನೇರಿ ತನ್ನ ಗಣಗಳೊಡನೆ ಸಂಚರಿಸುತ್ತಿರುವನಲ್ಲವೇ? ಆತನ ಜಡೆಗಳು ಶ್ಮಶಾನದಲ್ಲಿ ಬೀಸುವ ಬಿರುಗಾಳಿಯಿಂದ ಕೆದರಿ ಧೂಳಿನಿಂದ ಧೂಸರಿತವಾಗಿವೆ. ಅವನು ಬಂಗಾರ ದಂತೆ ಹೊಳೆಯುತ್ತಿರುವ ದೇಹಕ್ಕೆಲ್ಲಾ ಭಸ್ಮವನ್ನು ಬಳಿದುಕೊಂಡಿದ್ದಾನೆ. ಇಂತಹ ಪೂಜ್ಯನಾದ ಸತೀರಮಣನಾದ ನಿನ್ನ ಭಾವನು ತನ್ನ ಸೂರ್ಯ- ಚಂದ್ರ ಮತ್ತು ಅಗ್ನಿರೂಪವಾದ ಮೂರು ಕಣ್ಣುಗಳಿಂದ ಎಲ್ಲವನ್ನೂ ನೋಡುತ್ತಿರುತ್ತಾನೆ. ಆತನಿಂದ ಯಾವುದನ್ನು ಮರೆಮಾಚಲಾಗುವುದಿಲ್ಲ. ಆ ಮಾಹಾತ್ಮನು ಸಮದರ್ಶಿಯು. ಆತನಿಗೆ ಲೋಕದಲ್ಲಿ ಯಾರಲ್ಲಿಯೂ ತನ್ನವರು. ಬೇರೆಯವರು, ಬೇಕಾದವರು, ಬೇಡದವರು, ಆದರಕ್ಕೆ ಯೋಗ್ಯ ರಾದವರು, ನಿಂದೆಗೆ ಯೋಗ್ಯರಾದವರು–ಎಂಬ ಭೇದವಿಲ್ಲ. ನಾವಾದರೋ ಅನೇಕ ವ್ರತಗಳನ್ನು ಆಚರಿಸುತ್ತಾ ಆತನು ಭೋಗಿಸಿ ಕಾಲಿನಿಂದ ಒದ್ದು ತಳ್ಳಿರುವ ಮಾಯೆಯನ್ನೇ ಸ್ವೀಕರಿಸಲು ಬಯಸುತ್ತಿರುವವರು.

(ಶ್ಲೋಕ 12-25)

ವಿವೇಕಿಗಳಾದ ಜನರು ಅವಿದ್ಯೆಯ ಆವರಣವನ್ನು* ಭೇದಿಸುವ ಇಚ್ಛೆಯಿಂದ ಆತನ ನಿರ್ಮಲವಾದ ಚರಿತ್ರವನ್ನು ಹಾಡುತ್ತಿರುತ್ತಾರೆ. ಅವನಿಗಿಂತಲೂ ಮಿಗಿಲಾದವರಿರಲಿ ; ಅವನಿಗೆ ಎಣೆಯಾದವರೂ ಯಾರೂ ಇಲ್ಲ. ಸತ್ಪುರುಷರು ಮಾತ್ರವೇ ಆತನನ್ನು ತಲುಪಬಲ್ಲರು. ಇಷ್ಟೆಲ್ಲ ಇದ್ದರೂ ಆತನು ಪಿಶಾಚದಂತೆ ಆಚರಣೆಯನ್ನು ತೋರುತ್ತಾನೆ. ಇದು ಲೋಕವಿಡಂಬನೆಗಾಗಿ.

ಈ ಮನುಷ್ಯಶರೀರವು ನಾಯಿ-ನರಿಗಳಿಗೆ ಆಹಾರವಾಗುವುದು.

---

* "ಆರೋಗ್ಯಂ ಭಾಸ್ಕರಾದಿಚ್ಛೇತ್ ಶ್ರೀಯಮಿಚ್ಛೇತ್ ಹುತಾಶನಾತ್ । ಶಙ್ಕರಾತ್ ಜ್ಞಾನಮನ್ವಿಚ್ಛೇತ್ ಮೋಕ್ಷಮಿಚ್ಛೇಜ್ಜನಾರ್ದನಾತ್ ॥" –ಎಂಬಂತೆ ಶಿವನು ಜ್ಞಾನಪ್ರದ ನಾದ ಮಹಾದೇವನು. ಅವಿದ್ಯೆಯ ಆವರಣವನ್ನು ಕಳಚಿಹಾಕಲು ಬಯಸುವ ಮುಮುಕ್ಷುಗಳು ಶಿವನ ಆಚರಣೆಯನ್ನು ಹೊಗಳುತ್ತಾರೆ. ಸಮಾಧಿಕರಹಿತನಾದ ಶಿವನು ಮುಮುಕ್ಷುಗಳು ಹೀಗಿರಬೇಕು–ಎಂದು ಲೋಕಕ್ಕೆ ಶಿಕ್ಷಣ ನೀಡಲು ಪಿಶಾಚ ದಂತೆ ಆಚರಿಸುವನು. ಶ್ರೀರುದ್ರದಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನ ದೃಷ್ಟಿಯಿಂದ ಇದನ್ನು ಹೇಳಿದೆ. ಹರಿಪರಮಾತ್ಮನು ಅಸದೃಶ್ಯನು. ಆತನ ಆಜ್ಞೆಗೆ

ಅವಿವೇಕಿಗಳು ಇದನ್ನೇ ಆತ್ಮವೆಂದು ಭ್ರಮಿಸಿ ಇದನ್ನು ವಸ್ತ್ರ , ಒಡವೆ, ಮಾಲೆ, ಗಂಧ–ಮುಂತಾದುವುಗಳಿಂದ ಅಲಂಕರಿಸಿ ಪೂಜಿಸುತ್ತಾರೆ. ಇಂತಹ ದುರದೃಷ್ಟಶಾಲಿಗಳು ಆತ್ಮಾರಾಮನಾಗಿರುವ ಆ ಭಗವಂತನ ಆಚರಣೆಯನ್ನು ನೋಡಿ ನಗುತ್ತಾರೆ. ನಮ್ಮ ವಿಷಯವು ಹಾಗಿರಲಿ ; ಲೋಕಪಾಲಕರಾದ ಬ್ರಹ್ಮಾದಿದೇವತೆಗಳೂ ಕೂಡ ಆತನು ಕಟ್ಟಿರುವ ಧರ್ಮಮರ್ಯಾದೆಯನ್ನೇ ಅನುಸರಿಸುತ್ತಾರೆ. ಆತನೇ ಈ ವಿಶ್ವಕ್ಕೆ ಅಧಿಷ್ಠಾನವು. ಈ ಮಾಯೆಯೂ ಆತನ ಆಜ್ಞೆಯನ್ನೇ ಪಾಲಿಸುವುದು. ಹೀಗಿದ್ದರೂ ಕೂಡ ಆತನು ಪ್ರೇತಗಳಂತೆ ನಡೆದುಕೊಳ್ಳುತ್ತಾನೆ. ಅಬ್ಬಾ! ಎಂತಹ ಅದ್ಭುತವಾದ ಲೀಲೆಯಿದು! ಜಗತ್ತನ್ನು ವ್ಯಾಪಿಸಿಕೊಂಡಿರುವ ಪ್ರಭುವು ಮಾಡುತ್ತಿರುವ ಈ ಲೀಲೆಗಳು ಸ್ವಲ್ಪವೂ ಅರ್ಥವಾಗುವುದಿಲ್ಲ." (ಶ್ಲೋಕ 26-28)

ಮೈತ್ರೇಯರು ವಿದುರನಿಗೆ ಹೇಳುತ್ತಾರೆ :

ಪತಿಯು ಹೀಗೆ ತಿಳಿವಳಿಕೆಯನ್ನು ನೀಡಿದರೂ ಕಾಮಾತುರೆಯಾಗಿದ್ದ ದಿತಿಯು ವೇಶ್ಯೆಯಂತೆ ನಾಚಿಕೆಬಿಟ್ಟು ಬ್ರಹ್ಮರ್ಷಿಕಶ್ಯಪರ ವಸ್ತ್ರವನ್ನು ಹಿಡಿದುಕೊಂಡಳು. ಭಾರ್ಯೆಯು ಆ ನಿಂದಿತವಾದ ಕರ್ಮವನ್ನು ಮಾಡುವುದರಲ್ಲಿ ಅಷ್ಟು ಆಗ್ರಹಪಡುತ್ತಿರುವುದರನ್ನು ಕಂಡು ಕಶ್ಯಪರು– 'ದೈವದ ಇಚ್ಛೆಯಿದ್ದಂತೆ ಆಗಲಿ'–ಎಂದು ದೈವಕ್ಕೆ ನಮಸ್ಕಾರಮಾಡಿ ಏಕಾಂತದಲ್ಲಿ ಆಕೆಯ ಸಮಾಗಮವನ್ನು ಮಾಡಿದರು. ಅನಂತರ ಸ್ನಾನ ಮಾಡಿ ಮೌನಿಯಾಗಿ ಪ್ರಾಣಾಯಾಮ ಮಾಡಿ ಪರಿಶುದ್ಧವೂ, ಜ್ಯೋತಿರ್ಮಯವೂ, ಸನಾತನವೂ ಆದ ಪರಬ್ರಹ್ಮವನ್ನು ಧ್ಯಾನಮಾಡುತ್ತಾ

ಅನುಸಾರವಾಗಿ ರುದ್ರದೇವರು ಪಿಶಾಚಚರ್ಯೆಯನ್ನು ಆಚರಿಸುತ್ತಾರೆ. "ಪಿಶಾಚ ಚರ್ಯಾಮಚರತ್ ರುದ್ರೋ ವಿಷ್ಣ್ವಾಜ್ಞಯೈವ ತು। ಗರ್ಭಿಣೀವಧನೋದಾರ್ಥ - ಮಹೋ ವಿಷ್ಣುರ್ವಿಡಮ್ಬಕೃತ್ ॥" –ಎಂಬ ವಚನದಂತೆ ಮಧ್ಯದಲ್ಲಿ 'ಹರಿಯ ಆಜ್ಞೆಯಿಂದ '–ಎಂಬುದನ್ನು ಸೇರಿಸಿಕೊಳ್ಳಬೇಕು. ಏಕೆಂದರೆ : ಪಶುಪತಿಯಲ್ಲಿ ಸ್ವತಃ ಮೇಲ್ಕಂಡ ಗುಣಗಳು ಇರಲು ಸಾಧ್ಯವಿಲ್ಲ. "ಅಹಂ ರುದ್ರಾಯ ಧನುರಾತ-ನೋಮಿ'– ಎಂಬ ವಚನದಂತೆ ಆತನು ಪರಾಧೀನನಾಗಿದ್ದಾನೆ. (ವೀರರಾಘವೀಯ) (ಶ್ಲೋಕ ೨೬)

ಅದನ್ನೇ ಕುರಿತು ಜಪಮಾಡತೊಡಗಿದರು. ವಿದುರ! ದಿತಿಗೂ ತಾನು ಮಾಡಿದ ನಿಂದ್ಯವಾದ ಕರ್ಮದ ಬಗೆಗೆ ತುಂಬಾ ನಾಚಿಕೆಯಾಗಿ ಆಕೆಯು ಬ್ರಹ್ಮರ್ಷಿಯ ಬಳಿಗೆ ಬಂದು ತಲೆತಗ್ಗಿಸಿಕೊಂಡು ಹೀಗೆಂದಳು :

"ಓ ಬ್ರಹ್ಮರ್ಷಿಯೇ! ಭಗವಂತನಾದ ರುದ್ರನು ಭೂತಗಳ ಸ್ವಾಮಿಯು. ಆತನಲ್ಲಿ ನಾನು ಅಪರಾಧವನ್ನೆಸಗಿದ್ದೇನೆ. ಆದರೆ ಆ ಭೂತ ಶ್ರೇಷ್ಠನಾದ ದೇವನು ನನ್ನ ಈ ಗರ್ಭವನ್ನು ನಾಶಮಾಡದಿರಲಿ. ಮಹಾದೇವನಾದ ರುದ್ರನಿಗೆ ನಮಸ್ಕಾರವು. ಉಗ್ರನಾಗಿದ್ದರೂ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಶಿವನಿಗೆ ನಮಸ್ಕಾರವು. ಸತ್ಪುರುಷರ ವಿಷಯದಲ್ಲಿ ದಂಡವನ್ನು ಬಳಸದೇ ದುಷ್ಟರ ವಿಷಯದಲ್ಲಿಯೇ ದಂಡಪಾಣಿಯಾಗಿ ದಂಡವನ್ನು ಪ್ರಯೋಗಿಸುವ ಕ್ರೋಧಮೂರ್ತಿಗೆ ನಮೋ ನಮಃ. ನಾವು ಹೆಂಗಸರಾದ್ದರಿಂದ ಪ್ರಾಣಿಹಿಂಸೆಮಾಡುವ ಬೇಡರೂ ನಮ್ಮ ಮೇಲೆ ದಯೆತೋರುವರು. ಹೀಗಿರುವಾಗ ಪರಮಕರುಣಾಳುವೂ, ಸತೀದೇವಿಗೆ ಪತಿಯಾದ್ದರಿಂದ ನನ್ನ ಭಾವನೂ ಆಗಿರುವ ಆ ಭಗವಂತನು ನನ್ನ ಮೇಲೆ ಕರುಣೆತೋರದಿರುವನೇ? ಆ ಸ್ವಾಮಿಯು ತನ್ನಲ್ಲಿ ಪ್ರಸನ್ನನಾಗಲಿ." (ಶ್ಲೋಕ 29-35)

ಮೈತ್ರೇಯರು ಹೇಳುತ್ತಾರೆ :

ವಿದುರ! ಕಶ್ಯಪಪ್ರಜಾಪತಿಗಳು ಸಾಯಂಸಂಧ್ಯವಂದನಾದಿಗಳನ್ನು ಮುಗಿಸಿಕೊಂಡು ದಿತಿಯನ್ನು ಗಮನಿಸಿದರು. ಆಕೆಯು ಗಡ-ಗಡನೆ ನಡುಗುತ್ತಾ ತನಗೆ ಹುಟ್ಟುವ ಸಂತಾನಕ್ಕೆ ಇಹಲೋಕ-ಪರಲೋಕಗಳಲ್ಲಿ ಕಲ್ಯಾಣವುಂಟಾಗಲೆಂದು ಪ್ರಾರ್ಥನೆಮಾಡುತ್ತಿದ್ದಳು. ಕಶ್ಯಪಮಹರ್ಷಿಗಳು ಆಕೆಗೆ ಹೇಳಿದರು :

"ನಿನ್ನ ಚಿತ್ತವು ದುಷ್ಟವಾದ ಕಾಮದಿಂದ ಕಲುಷಿತವಾಗಿದ್ದು, ನೀನು ಸಮಾಗಮಮಾಡಿದ ಸಮಯವೂ ಅಶುಭವಾಗಿತ್ತು. ನೀನು ನನ್ನ ಮಾತನ್ನೂ ಗೌರವಿಸಲಿಲ್ಲ. ದೇವತೆಗಳಿಗೂ ಅವಮಾನವನ್ನು ಮಾಡಿರುವೆ. ಆದ್ದರಿಂದ ಎಲೈ ಅಮಂಗಳೆಯಾದ ಚಂಡಿಯೇ! ನಿನ್ನ ಗರ್ಭದಲ್ಲಿ ಅಮಂಗಳರೂ– ಅಧಮರೂ ಆದ ಪುತ್ರರು ಹುಟ್ಟುವರು. ಅವರು ತಮ್ಮ

ಅತ್ಯಾಚಾರಗಳಿಂದ ಸಮಸ್ತಲೋಕಗಳನ್ನು ಮತ್ತು ಲೋಕಪಾಲಕರನ್ನು ಮತ್ತೆ-ಮತ್ತೆ ವ್ಯಸನದಿಂದ ಕೂಗಿಕೊಳ್ಳುವಂತೆ ಮಾಡುವರು. ಅವರ ಕೈಯಿಂದ ನೂರಾರು ಮಂದಿ ನಿರಪರಾಧಿಗಳೂ–ದೀನರೂ ಆದ ಪ್ರಾಣಿಗಳು ಕೊಲ್ಲಲ್ಪಡುವುವು. ಸ್ತ್ರೀಯರ ಮೇಲೆ ಅತ್ಯಾಚಾರ ನಡೆಯುವುದು ಮತ್ತು ಮಹಾತ್ಮರ ಮನಸ್ಸು ಕೋಪ-ಕ್ಷೋಭೆಗಳಿಗೆ ಒಳಗಾಗುವುದು. ಆಗ ಸರ್ವಲೋಕರಕ್ಷಕನಾದ ಜಗದೀಶ್ವರನು ಕ್ರುದ್ಧನಾಗಿ ಭೂಮಿಯಲ್ಲಿ ಅವತರಿಸಿ–ಇಂದ್ರನು ಪರ್ವತಗಳನ್ನು ನಿಗ್ರಹಿಸಿದಂತೆ–ಅವರನ್ನು ದಹಿಸಿ ಬಿಡುವನು".

ದಿತಿಯು ಹೇಳಿದಳು :

"ಸ್ವಾಮಿ! ನನ್ನ ಪುತ್ರರು ಕುಪಿತರಾದ ಬ್ರಹ್ಮಣರ ಶಾಪಾದಿಗಳಿಂದ ಸಾಯದೇ ಭಗವಂತನಾದ ಸಾಕ್ಷಾತ್ ಚಕ್ರಪಾಣಿ ನಾರಾಯಣನ ಕೈಯಿಂದಲೇ ಮರಣಹೊಂದುವುದಾದರೆ ಅದು ನನಗೂ ಸಮ್ಮತವೇ.

ನ ಬ್ರಹ್ಮದಣ್ಡದಗ್ಧಸ್ಯ ನ ಭೂತಭಯದಸ್ಯ ಚ ।
ನಾರಕಾಶ್ಚಾನುಗೃಹ್ಣನ್ತಿ ಯಾಂ ಯಾಂ ಯೋನಿಮಸೌ ಗತಃ ॥೪೨॥

ಬ್ರಾಹ್ಮಣರ ಶಾಪಕ್ಕೆ ಒಳಗಾಗಿ ಸಾಯುವುದು ಮತ್ತು ಪ್ರಾಣಿಗಳಿಗೆ ತೊಂದರೆಯನ್ನುಂಟುಮಾಡುವುದು ತುಂಬಾ ನೀಚವಾದ ವಿಷಯ. ಅದನ್ನು ಮಾಡುವವನು ಯಾವುದೇ ಯೋನಿಯಲ್ಲಿ ಹುಟ್ಟಿದರೂ ಯಾರೂ ಅವನ ಮೇಲೆ ಕರುಣೆತೋರುವುದಿಲ್ಲ. ಇತರರ ವಿಷಯವಿರಲಿ–ನರಕದ ಜೀವ ಗಳೂ ಕೂಡ ಅವನ ಮೇಲೆ ಕೃಪೆದೋರುವುದಿಲ್ಲ."

ದಿತಿಯ ಅಳಲನ್ನು ಕಂಡು ಕಶ್ಯಪರು ಆಕೆಗೆ ಹೀಗೆ ಸಮಾಧಾನ ಹೇಳಿದರು :

"ದೇವಿ! ನೀನು ಆಚರಿಸಿದ ಪಾಪದ ಬಗೆಗೆ ಶೋಕವನ್ನೂ– ಪಶ್ಚಾತ್ತಾಪವನ್ನೂ ತೋರಿದ್ದೀಯೇ. ಸರಿ ಮತ್ತು ತಪ್ಪುಗಳ ಬಗೆಗೆ ನಿನಗೆ ಒಡನೆಯೇ ವಿವೇಕವುಂಟಾಗಿದೆ. ಇದಲ್ಲದೇ ಭಗವಂತನಾದ ವಿಷ್ಣುವಿನಲ್ಲೂ ಮತ್ತು ಶಂಭುವಿನಲ್ಲೂ ಅದ್ಭುತವಾದ ಗೌರವವನ್ನೂ, ನನ್ನಲ್ಲಿ ಆದರವನ್ನೂ ತೋರಿದ್ದೀಯೆ. ಅದ್ದರಿಂದ ನಿನ್ನ ಪುತ್ರರಲ್ಲಿ ಒಬ್ಬನಿಗೆ ಹುಟ್ಟುವ ನಾಲ್ಕು

ಮಂದಿ ಪುತ್ರರಲ್ಲಿ ಒಬ್ಬನು ಮಾತ್ರ ಸಾಧು-ಸಜ್ಜನರ ಶಿರೋಮಣಿಯಾಗುವನು. ಸತ್ಪುರುಷರ ಮಹಾಗೌರವಕ್ಕೆ ಪಾತ್ರನಾಗುವನು. ಆತನ ಪವಿತ್ರವಾದ ಕೀರ್ತಿಯನ್ನು ಭಕ್ತಜನರು ಭಗವಂತನ ಗುಣಕೀರ್ತನೆಯೊಡನೆ ಸೇರಿಸಿ ಹಾಡುವರು. ಎಲ್ಲ ಸಜ್ಜನರಿಗೂ ಆತನು ಆದರ್ಶನಾಗುವನು. ಬಣ್ಣ ಗೆಟ್ಟಿರುವ ಚಿನ್ನವನ್ನು ಅಗ್ನಿಪುಟಗಳಿಂದ ಶುದ್ಧಗೊಳಿಸುತ್ತಾರಲ್ಲವೇ! ಹಾಗೆಯೇ ಸಜ್ಜನರು ಆತನ ಆಚರಣೆಯನ್ನು ಅನುಸರಿಸುವುದಕ್ಕಾಗಿ ಸಮದರ್ಶನವೇ ಮುಂತಾದ ಯೋಗವಿಶೇಷಗಳಿಂದ ತಮ್ಮ ಮನಸ್ಸನ್ನು ಶೋಧಿಸಿಕೊಳ್ಳುವರು. ಆತನ ಪ್ರಸನ್ನತೆಯಿಂದ ಇಡೀ ಜಗತ್ತಿಗೆ ಆನಂದ ವುಂಟಾಗುವುದು. ಜಗತ್ತೆಲ್ಲವೂ ತನ್ಮಯವಾಗುವುದು. ಸ್ವಯಂಪ್ರಕಾಶನಾದ ಶ್ರೀಭಗವಂತನೂ ಆತನ ಅನನ್ಯಭಕ್ತಿಯಿಂದ ಸಂತುಷ್ಟನಾಗುವನು.

ಸ ವೈ ಮಹಾಭಾಗವತೋ ಮಹಾತ್ಮಾ
ಮಹಾನುಭಾವೋ ಮಹತಾಂ ಮಹಿಷ್ಠಃ ।
ಪ್ರವೃದ್ಧಭಕ್ತ್ಯಾ ಹ್ಯನುಭಾವಿತಾಶಯೇ
ನಿವೇಶ್ಯ ವೈಕುಣ್ಠಮಿಮಂ ವಿಹಾಸ್ಯತಿ ॥೪೮॥

ಮಹಾತ್ಮನಾದ ಆ ಬಾಲಕನು ಪರಮಭಾಗವತೋತ್ತಮನಾಗುವನು. ಮಹಾತ್ಮರಲ್ಲಿಯೂ ಶ್ರೇಷ್ಠತಮನಾದ ಮಹಾತ್ಮನಾಗುವನು. ಉದಾರ ಹೃದಯನಾಗುವನು. ಭಕ್ತಿಯ ಪರಿಪಾಕದಿಂದ ವಿಶುದ್ಧವಾಗಿ ಭಗವದ್ಭಾವದಿಂದ ತುಂಬಿದ ಅಂತಃಕರಣದಲ್ಲಿ ಶ್ರೀಭಗವಂತನನ್ನು ನೆಲೆಗೊಳಿಸಿಕೊಂಡು ದೇಹಾಭಿಮಾನವನ್ನು ತ್ಯಜಿಸುವನು.

ಅಲಮ್ಪಟಃ ಶೀಲಧರೋ ಗುಣಾಕರೋ
ಹೃಷ್ಟಃ ಪರರ್ಧ್ಯಾ ವ್ಯಥಿತೋ ದುಃಖಿತೇಷು ।
ಅಭೂತಶತ್ರುರ್ಜಗತಃ ಶೋಕಹರ್ತಾ
ನೈದಾಘಿಕಂ ತಾಪಮಿವೋಡುರಾಜಃ ॥೪೯॥

ವಿಷಯಸುಖಗಳಲ್ಲಿ ಲಂಪಟನಾಗದೇ ಗುಣಶೀಲಸಂಪನ್ನನಾಗುವನು. ಸದ್ಗುಣಗಳಿಗೆ ಗಣಿಯಾಗುವನು. ಮತ್ತೊಬ್ಬರ ಸಂಪತ್ತನ್ನು ನೋಡಿ ಸಂತೋಷಪಡುವ ಮತ್ತು ಇತರರ ದುಃಖವನ್ನು ಕಂಡು ದುಃಖಿಸುವ

ಉದಾರಹೃದಯನಾಗುವನು. ಅವನಿಗೆ ಯಾರೂ ಶತ್ರುಗಳೇ ಇರುವುದಿಲ್ಲ. ಚಂದ್ರನು ಬೇಸಗೆಯ ತಾಪವನ್ನು ಹೋಗಲಾಡಿಸುವಂತೆ–ಆತನು ಜಗತ್ತಿನ ಶೋಕವನ್ನು ಹೋಗಲಾಡಿಸುವನು.

ಅನ್ತರ್ಬಹಿಶ್ಚಾಮಲಮಬ್ಜ ನೇತ್ರಂ
ಸ್ವಪೂರುಷೇಚ್ಛಾನುಗೃಹೀತರೂಪಮ್ ।
ಪೌತ್ರಸ್ತವ ಶ್ರೀಲಲನಾಲಲಾಮಂ
ದೃಷ್ಟ್ವಾ ಸ್ಫುರತ್ಕುಣ್ಡಲಮಣ್ಡಿತಾನನಮ್ ॥೫೦॥

ಯಾವನು ಜಗತ್ತಿನ ಒಳಗೂ-ಹೊರಗೂ ತುಂಬಿಕೊಂಡು ಬೆಳಗುತ್ತಿದ್ದಾನೆಯೋ ಮತ್ತು ತನ್ನ ಭಕ್ತರ ಬಯಕೆಗೆ ತಕ್ಕಂತೆ ಕಾಲ-ಕಾಲದಲ್ಲಿ ತನ್ನ ದಿವ್ಯಮಂಗಳವಿಗ್ರಹವನ್ನು ಪ್ರಕಟಪಡಿಸುತ್ತಾನೆಯೋ, ಥಳ-ಥಳಿಸುತ್ತಿರುವ ಕುಂಡಲಗಳಿಂದ ಶೋಭಿಸುವ ಮುಖಮಂಡಲದಿಂದ ಕಂಗೊಳಿಸುತ್ತಿದ್ದಾನೆಯೋ–ಅಂತಹ ಶ್ರೀದೇವಿಗೂ ಶ್ರೀಸಮೃದ್ಧಿಯನ್ನು ತುಂಬುತ್ತಿರುವ ಕಮಲಾಕ್ಷನಾದ ಶ್ರೀಹರಿಯನ್ನು ನಿನ್ನ ಮೊಮ್ಮಗನು ಪ್ರತ್ಯಕ್ಷವಾಗಿ ನೋಡುವನು."

ಮೈತ್ರೇಯರು ಹೇಳುತ್ತಾರೆ :

ವಿದುರ! ತನ್ನ ಪೌತ್ರನು ಪರಮಭಾಗವತನಾಗುವನು ಎಂಬುದನ್ನು ಕೇಳಿ ದಿತಿಗೆ ತುಂಬಾ ಸಂತೋಷವುಂಟಾಯಿತು ಮತ್ತು ತನ್ನ ಪುತ್ರರು ಸಾಕ್ಷಾತ್ ಶ್ರೀಹರಿಯಿಂದ ಸಂಹರಿಸಲ್ಪಡುವರು ಎಂಬುದನ್ನು ಕೇಳಿ ಆಕೆಗೆ ಮತ್ತೂ ಉತ್ಸಾಹವುಂಟಾಯಿತು. (ಶ್ಲೋಕ 36-50)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೧೪ ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೧೫ನೆಯ ಅಧ್ಯಾಯ

ಜಯ-ವಿಜಯರಿಗೆ ಸನಕಾದಿಗಳ ಶಾಪ

ಮೈತ್ರೇಯರು ವಿದುರನಿಗೆ ಹೇಳುತ್ತಾರೆ :

ಪ್ರಾಜಾಪತ್ಯಂ ತು ತತ್ತೇಜಃ ಪರತೇಜೋಹನಂ ದಿತಿಃ ।
ದಧಾರ ವರ್ಷಾಣಿ ಶತಂ ಶಙ್ಕಮಾನಾ ಸುರಾರ್ದನಾತ್ ॥೧॥

"ಓ ವಿದುರ! ದಿತಿದೇವಿಯು-ತನ್ನ ಪುತ್ರರಿಂದ ದೇವತೆಗಳಿಗೆ ಸಂಕಷ್ಟವುಂಟಾಗುವುದು ಎಂದು ಶಂಕಿಸಿ ಇತರರ ತೇಜಸ್ಸನ್ನು ಧ್ವಂಸ ಮಾಡುವ ಕಶ್ಯಪರ ಮಹಾತೇಜಸ್ಸನ್ನು ನೂರು ವರ್ಷಗಳ ಕಾಲ ತನ್ನ ಹೊಟ್ಟೆಯಲ್ಲಿಯೇ ಇಟ್ಟುಕೊಂಡಿದ್ದಳು.

ಹಾಗೆ ತೇಜಸ್ಸನ್ನು ಆಕೆಯು ಗರ್ಭದಲ್ಲಿಯೇ ಅಡಗಿಸಿಟ್ಟುಕೊಂಡಿದ್ದ ರಿಂದ ಸೂರ್ಯನೇ ಮುಂತಾದವರ ಪ್ರಕಾಶವು ಕ್ಷೀಣವಾಗತೊಡಗಿತು ಮತ್ತು ಇಂದ್ರನೇ ಮುಂತಾದ ಲೋಕಪಾಲಕರೂ ತೇಜೋಹೀನರಾದರು. ಆಗ ಅವರೆಲ್ಲರೂ ಬ್ರಹ್ಮದೇವರ ಬಳಿಗೆ ಹೋಗಿ ಎಲ್ಲ ದಿಕ್ಕುಗಳಲ್ಲಿಯೂ ಕಗ್ಗತ್ತಲು ಕವಿದು ಅವ್ಯವಸ್ಥೆಯೂ ಉಂಟಾಗಿದೆಯೆಂಬುದನ್ನು ಅವರಲ್ಲಿ ನಿವೇದಿಸುತ್ತಾ ಹೀಗೆ ಅರಿಕೆಮಾಡಿಕೊಂಡರು :

ತಮ ಏತದ್ವಿಭೋ ವೇತ್ಥ ಸಂವಿಗ್ನಾ ಯದ್ವಯಂ ಭೃಶಮ್ ।
ನ ಹ್ಯವ್ಯಕ್ತಂ ಭಗವತಃ ಕಾಲೇನಾಸ್ಪೃಷ್ಟವರ್ತ್ಮನಃ ॥೩॥

"ಪೂಜ್ಯರೇ! ತಾವು ಸರ್ವಜ್ಞರು. ಕಾಲವು ತಮ್ಮ ಜ್ಞಾನಶಕ್ತಿಯನ್ನು ಕುಂಠಿತಗೊಳಿಸಲಾರದು. ಆದ್ದರಿಂದ ತಮಗೆ ವ್ಯಕ್ತವಾಗದ ವಿಷಯವು ಯಾವುದೂ ಇಲ್ಲ. ಈ ಅಂಧಕಾರದ ವಿಷಯವೂ ತಮಗೆ ತಿಳಿದೇ ಇದೆ. ನಾವಂತೂ ಇದರಿಂದ ತುಂಬಾ ಭಯಭೀತರಾಗುತ್ತಿದ್ದೇವೆ.

ದೇವದೇವ ಜಗದ್ಧಾತರ್ಲೋಕನಾಥಶಿಖಾಮಣೇ ।
ಪರೇಷಾಮಪರೇಷಾಂ ತ್ವಂ ಭೂತಾನಾಮಸಿ ಭಾವವಿತ್ ॥೪॥

ಓ ದೇವಾಧಿದೇವನೇ! ತಾವು ಇಡೀ ಜಗತ್ತನ್ನು ಸೃಷ್ಟಿಸಿದ ತಂದೆ ಯಾಗಿದ್ದೀರಿ. ಸಮಸ್ತಲೋಕಪಾಲಕರ ಮಕುಟಮಣಿಯಾಗಿದ್ದೀರಿ. ಚಿಕ್ಕ

ಜೀವವಾಗಲೀ, ದೊಡ್ಡ ಜೀವವಾಗಲೀ–ಎಲ್ಲದರ ಭಾವವೂ ತಮಗೆ ತಿಳಿದೇ ಇದೆ.

ನಮೋ ವಿಜ್ಞಾನವೀರ್ಯಾಯ ಮಾಯಯೇದಮುಪೇಯುಷೇ ।
ಗೃಹೀತಗುಣಭೇದಾಯ ನಮಸ್ತೇಽವ್ಯಕ್ತಯೋನಯೇ ॥೫॥

ತಾವು ವಿಜ್ಞಾನಬಲಸಂಪನ್ನರು. ಮಾಯೆಯಿಂದಲೇ ಈ ಚತುರ್ಮುಖರೂಪವನ್ನೂ ಮತ್ತು ರಜೋಗುಣವನ್ನೂ, ಸ್ವೀಕಾರಮಾಡಿದ್ದೀರಿ. ತಮ್ಮ ಉತ್ಪತ್ತಿಗೆ ವಾಸ್ತವಿಕವಾದ ಕಾರಣವು ಯಾವುದು ಎಂಬುದನ್ನು ಯಾರೂ ಅರಿಯರು. ಇಂತಹ ಅಪ್ರಮೇಯಮಹಿಮರಾದ ತಮಗೆ ನಮೋ ನಮಃ.

ಯೇ ತ್ವಾನನ್ಯೇನ ಭಾವೇನ ಭಾವಯನ್ತ್ಯಾತ್ಮಭಾವನಮ್ ।
ಆತ್ಮನಿ ಪ್ರೋತಭುವನಂ ಪರಂ ಸದಸದಾತ್ಮಕಮ್ ॥೬॥

ತೇಷಾಂ ಸುಪಕ್ವಯೋಗಾನಾಂ ಜಿತಶ್ವಾಸೇನ್ದ್ರಿಯಾತ್ಮನಾಮ್ ।
ಲಬ್ಧಯುಷ್ಮತ್ಪ್ರಸಾದಾನಾಂ ನ ಕುತಶ್ಚಿತ್ಪರಾಭವಃ ॥೭॥

ಸಮಸ್ತಭುವನಗಳೂ ತಮ್ಮಲ್ಲಿ ಅಡಗಿವೆ. ಕಾರ್ಯ-ಕಾರಣರೂಪವಾದ ಸರ್ವಜಗತ್ತು ತಮ್ಮ ಶರೀರವೇ ಆಗಿದೆ. ಆದರೂ ತಾವು ವಾಸ್ತವವಾಗಿ ಈ ಜಗತ್ತನ್ನು ಮೀರಿರುವವರು. ಸಮಸ್ತಜೀವಿಗಳಿಗೂ ಉತ್ಪತ್ತಿಸ್ಥಾನವಾಗಿರುವ ತಮ್ಮನ್ನು ಅನನ್ಯಭಾವದಿಂದ ಧ್ಯಾನಮಾಡುವ ಸಿದ್ಧಯೋಗಿಗಳಿಗೆ ಯಾರಿಂದಲೂ ಪರಾಭವವುಂಟಾಗುವುದಿಲ್ಲ. ಏಕೆಂದರೆ : ಅವರು ನಿಮ್ಮ ಕರುಣಾಕಟಾಕ್ಷದಿಂದ ಕೃತಕೃತ್ಯರಾಗಿಬಿಡುವರು. ಅವರು ಪ್ರಾಣ, ಇಂದ್ರಿಯ ಮತ್ತು ಮನಸ್ಸುಗಳನ್ನು ಜಯಿಸಿಬಿಟ್ಟಿರುವುದರಿಂದ ಅವರ ಯೋಗವೂ ಪರಿಪಕ್ವವಾಗಿಬಿಟ್ಟಿರುವುದು.

ಯಸ್ಯ ವಾಚಾ ಪ್ರಜಾಃ ಸರ್ವಾ ಗಾವಸ್ತನ್ತ್ಯೇವ ಯನ್ತ್ರಿತಾಃ ।
ಹರನ್ತಿ ಬಲಿಮಾಯತ್ತಾಸ್ತಸ್ಮೈ ಮುಖ್ಯಾಯ ತೇ ನಮಃ ॥೮॥

ಎತ್ತುಗಳು ಹಗ್ಗದ ಕಟ್ಟಿಗೆ (ಮೂಗುದಾರಕ್ಕೆ) ಕಟ್ಟುಬಿದ್ದು ಕೆಲಸ ಮಾಡುವಂತೆ–ಎಲ್ಲ ಪ್ರಜೆಗಳೂ ತಮ್ಮ ವೇದವಾಣಿಯಿಂದ ಬದ್ಧರಾಗಿ, ತಮಗೆ ಅಧೀನರಾಗಿ, ನಿಯಮಪೂರ್ವಕವಾಗಿ ಕರ್ಮಾನುಷ್ಠಾನಮಾಡಿ

ತಮಗೆ ಬಲಿಯನ್ನು ಸಮರ್ಪಿಸುತ್ತಾರೆ. ಎಲ್ಲರನ್ನೂ ನಿಯಮಿಸುವ ಮುಖ್ಯ ಪ್ರಾಣವೇ ತಾವು. ಇಂತಹ ಸರ್ವನಿಯಾಮಕರಾದ ತಮಗೆ ನಮೋ ನಮಃ.

ಸ ತ್ವಂ ವಿಧತ್ಸ್ವ ಶಂ ಭೂಮಂಸ್ತಮಸಾ ಲುಪ್ತಕರ್ಮಣಾಮ್ * ।
ಅದಭ್ರದಯಯಾ ದೃಷ್ಟ್ಯಾ ಆಪನ್ನಾನರ್ಹಸೀಕ್ಷಿತುಮ್ ॥೯॥

ಬೃಹತ್ಸ್ವರೂಪರಾದ ದೇವರೇ! ಈ ಕಗ್ಗತ್ತಲೆಯಿಂದ ಹಗಲು-ರಾತ್ರಿಗಳ ವಿಭಾಗವೇ ಅಸ್ಪಷ್ಟವಾಗಿಬಿಟ್ಟು ಲೋಕದ ಎಲ್ಲ ಕರ್ಮಗಳೂ ಲುಪ್ತವಾಗುತ್ತಿವೆ. ಎಲ್ಲ ಲೋಕಗಳೂ ಇದರಿಂದ ದುಃಖಕ್ಕೆ ಒಳಗಾಗಿವೆ. ಅವುಗಳಿಗೆ ಕಲ್ಯಾಣವನ್ನುಂಟುಮಾಡಿರಿ. ಶರಣಾಗತರಾಗಿರುವ ನಮ್ಮನ್ನು ದಯಾದೃಷ್ಟಿಯಿಂದ ದಿಟ್ಟಿಸಿರಿ.

ಏಷ ದೇವ ದಿತೇರ್ಗರ್ಭ ಓಜಃ ಕಾಶ್ಯಪಮರ್ಪಿತಮ್ ।
ದಿಶಸ್ತಿಮಿರಯನ್ಸರ್ವಾ ವರ್ಧತೇಽಗ್ನಿರಿವೈಧಸಿ ॥೧೦॥

ದೇವರೇ! ಬೆಂಕಿಯು ಕಟ್ಟಿಗೆಯಲ್ಲಿ ಸೇರಿ ವೃದ್ಧಿಹೊಂದುತ್ತಿರುವಂತೆ–ಕಶ್ಯಪರ ವೀರ್ಯಸ್ಥಾಪನೆಯಿಂದ ಕೂಡಿದ ದಿತಿದೇವಿಯ ಗರ್ಭವು ಬೆಳೆಯುತ್ತಾ ಸರ್ವದಿಕ್ಕುಗಳನ್ನೂ ಅಂಧಕಾರಮಯವನ್ನಾಗಿ ಮಾಡುತ್ತಾ ಕ್ರಮವಾಗಿ ವೃದ್ಧಿಹೊಂದುತ್ತಿದೆ.”

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಮಹಾಬಾಹುವೇ! ದೇವತೆಗಳ ಪ್ರಾರ್ಥನೆಯನ್ನು ಕೇಳಿ ಬ್ರಹ್ಮದೇವರು ನಸುನಕ್ಕು ತಮ್ಮ ಮಧುರವಾದ ವಾಣಿಯಿಂದ ಅವರನ್ನು ಆನಂದಗೊಳಿಸುತ್ತಾ ಹೀಗೆ ಹೇಳಿದರು :

“ಎಲೈ ದೇವತೆಗಳೇ! ಇದಕ್ಕೆ ಕಾರಣವನ್ನು ಹೇಳುತ್ತೇನೆ ; ಕೇಳಿರಿ : ನಿಮಗಿಂತಲೂ ಹಿಂದೆ ಹುಟ್ಟಿದ, ನನ್ನ ಮಾನಸಪುತ್ರರಾದ ಸನಕಾದಿಗಳು ಪರಮವೈರಾಗ್ಯಸಂಪನ್ನರಾಗಿ, ಲೋಕಗಳಲ್ಲಿ ಆಸಕ್ತಿಯನ್ನು ತೊರೆದು, ಸಮಸ್ತಲೋಕಗಳಲ್ಲಿಯೂ ಆಕಾಶಮಾರ್ಗದಿಂದ ಸಂಚಾರಮಾಡುತ್ತಿದ್ದರು. ಆ ಸಂಚಾರದಲ್ಲಿ ಒಂದು ಬಾರಿ ಅವರು ಶುದ್ಧಸತ್ತ್ವಮಯವಾಗಿ ಸಮಸ್ತ

* ಭೂಮಾ = ಅತ್ಯಂತ ಬಹಳವಾದದ್ದು ; ಬಲು ದೊಡ್ಡದು ; ಪರಮಾತ್ಮ-ಪರಬ್ರಹ್ಮವು ‘ಯೋ ವೈ ಭೂಮಾ’ –ಛಾಂದೋಗ್ಯ ಉಪನಿಷತ್ತು.

ಲೋಕಗಳಿಗೂ ಮೇಲೆ ವಿರಾಜಿಸುತ್ತಿರುವ ಶ್ರೀಭಗವಂತನ ವೈಕುಂಠಧಾಮಕ್ಕೆ ಹೋದರು. ಅದು ದಿವ್ಯತಮವಾದ ಧಾಮವು. ಅಲ್ಲಿ ಇರುವವರೆಲ್ಲರೂ ವಿಷ್ಣುರೂಪಿಗಳೇ ಆಗಿದ್ದಾರೆ. ಇತರ ಎಲ್ಲ ಪ್ರಕಾರಗಳ ಕಾಮನೆಗಳನ್ನೂ ತೊರೆದು ಕೇವಲ ಭಗವತ್ಪಾದಗಳನ್ನು ಪಡೆಯುವ ಧ್ಯೇಯದಿಂದ* (ನಿವೃತ್ತಿ) ಧರ್ಮದ ಆಚರಣೆಯ ಮೂಲಕ ಶ್ರೀಮಹಾವಿಷ್ಣುವನ್ನು ಆರಾಧನೆಮಾಡುವವರು ಮಾತ್ರವೇ ತಲುಪಬಹುದಾದ ಲೋಕವದು. ವೇದ-ವೇದಾಂತಪ್ರತಿಪಾದ್ಯನಾಗಿರುವ, ಧರ್ಮಮೂರ್ತಿಯಾದ ಶ್ರೀ ಆದಿನಾರಾಯಣನು ಅಲ್ಲಿ ತನ್ನ ಭಕ್ತರಾದ ನಮಗೆ ಸುಖವನ್ನುಂಟುಮಾಡು ವುದಕ್ಕೋಸ್ಕರ ಶುದ್ಧಸತ್ತ್ವಮಯವಾದ ಸ್ವರೂಪವನ್ನು ಧರಿಸಿ ಸದಾ ಬಿಜಯಮಾಡಿಸಿದ್ದಾನೆ. ಅಲ್ಲಿ ಮೂರ್ತಿಮತ್ತಾದ, ಕೈವಲ್ಯದಂತೆಯೇ ಕಂಗೊಳಿಸುತ್ತಿರುವ 'ನೈಃಶ್ರೇಯಸ' ವೆಂಬ ದಿವ್ಯೋದ್ಯಾನವು ಕಂಡುಬರು

---

* ಅನಿಮಿತ್ತನಿಮಿತ್ತೇನ ಧರ್ಮೇಣ = ಕಾಮಾದಿನಿಮಿತ್ತರಹಿತವಾದ ಧರ್ಮದಿಂದ. (ವೀರರಾಘವೀಯ)

ವಿಷ್ಣುವನ್ನೇ ನಿಮಿತ್ತವನ್ನಾಗಿ ಉಳ್ಳ ಧರ್ಮದಿಂದ–ಎಂದರೆ : ಶ್ರೀಹರಿಯಲ್ಲಿ ಸಮರ್ಪಣಾಬುದ್ಧಿಯಿಂದ ಆತನನ್ನು ಯಾರು ಆರಾಧಿಸುತ್ತಾರೋ–ಅವರು ವೈಕುಂಠದಲ್ಲಿ ಸಾಮೀಪ್ಯಮುಕ್ತಿಯನ್ನು ಪಡೆಯುತ್ತಾರೆ. (ವಿಜಯಧ್ವಜೀಯ)

ಅನಿಮಿತ್ತನಿಮಿತ್ತೇನ ಧರ್ಮೇಣಾರಾಧಯನ್–ವೈಕುಂಠಲೋಕದಲ್ಲಿ ವಾಸಮಾಡುವ ಪುರುಷರಿಗೂ ಭಗವಂತನ ಉಪಾಸನೆಯು ಅವಶ್ಯಕವೆಂದು ಇಲ್ಲಿ ಸೂಚಿತವಾಗುತ್ತದೆ. ("ವಿಷ್ಣುಲೋಕವಾಸಿನಾಮಪಿ ಭಗವದುಪಾಸಕತ್ವಂ ಉಕ್ತಂ")–ಏಕೆಂದರೆ : "ಧರ್ಮ ಧ್ರುವಾದ್ಯಾಸ್ತಿಷ್ಠನ್ತಿ ಯತ್ರ ತೇ ಲೋಕಸಾಕ್ಷಿಣಃ"–ಎಂಬ ವಾಕ್ಯದೊಡನೆ ಇದು ಹೊಂದಾಣಿಕೆಯಾಗಬೇಕು. ಹಿಂದೆ ಭಗವಂತನನ್ನು ಆರಾಧಿಸಿ, ಇಲ್ಲಿ ಬಂದು ವಾಸಮಾಡುತ್ತಾರೆ–ಎಂಬ ಅರ್ಥ ಹೇಳಿದರೂ ವಿರೋಧವಿಲ್ಲ.

ಪ್ರಶ್ನೆ :- ನಿಷ್ಕಾಮಧರ್ಮದಿಂದ ಭಗವಂತನನ್ನು ಆರಾಧಿಸಿದವರಿಗೆ ನಿತ್ಯವಿಭೂತಿಯೇ (ಮೋಕ್ಷವೇ) ದೊರೆಯಬೇಕು. ಈ ಅಂಡಾಂತರ್ಗತವಾದ ವೈಕುಂಠಲೋಕದ ಪ್ರಾಪ್ತಿಯು ಅವರಿಗೆ ಹೇಗೆ ಉಚಿತವಾಗುತ್ತದೆ?

ಉತ್ತರ :- ಕೆಲವರು ಅಂತಹ ನಿಷ್ಕಾಮಧರ್ಮದಿಂದ ಭಗವಂತನನ್ನು ಆರಾಧಿಸಿದರೂ ಯಾವುದೋ ಪ್ರತಿಬಂಧಕದಿಂದ ನಿತ್ಯವಿಭೂತಿಯನ್ನು ಪಡೆಯದೇ ಈ ವೈಕುಂಠಲೋಕಕ್ಕೆ ಬಂದು ಇಲ್ಲಿ ಭಗವದನುಭವದಿಂದ ಪ್ರತಿಬಂಧಕಗಳನ್ನು ಕಳೆದುಕೊಂಡು, ಕಲ್ಪವು ಮುಗಿದನಂತರ ನಿತ್ಯವಿಭೂತಿಯನ್ನು ಪಡೆಯುತ್ತಾರೆ. ಆದ್ದರಿಂದ ವಿರೋಧವಿಲ್ಲ.

ವುದು. ಎಲ್ಲ ಕಾಮನೆಗಳನ್ನೂ ಪೂರ್ಣಗೊಳಿಸುವ ವೃಕ್ಷಗಳಿಂದ ಕಳ-ಕಳಿಸುತ್ತಾ, ಆರು ಋತುಗಳ ಶ್ರೀಸಮೃದ್ಧಿಯನ್ನು ಎಲ್ಲ ಋತುಗಳಲ್ಲಿಯೂ ಹೊಂದಿ ಬೆಳಗುತ್ತಿರುವ ದಿವ್ಯೋದ್ಯಾನವದು. (ಶ್ಲೋಕ 11-16)

ಅಲ್ಲಿ ವಿಮಾನಗಳಲ್ಲಿ ಸಂಚರಿಸುವ ಗಂಧರ್ವರು ಸರ್ವಪಾಪಗಳನ್ನೂ ಸುಟ್ಟುಹಾಕುವ ಸಾಮರ್ಥ್ಯವುಳ್ಳ ಪ್ರಭುವಿನ ಲೀಲೆಗಳನ್ನು ತಮ್ಮ ಮನದನ್ನೆಯರೊಡನೆ ಕೂಡಿ ಹಾಡುತ್ತಾ ಆನಂದಿಸುತ್ತಿರುವರು. ಆ ಸಮಯದಲ್ಲಿ ಸರೋವರಗಳಲ್ಲಿ ಅರಳಿರುವ ಮಕರಂದದಿಂದ ತುಂಬಿದ ವಸಂತಸಮಯದ ಮಾಧವೀಲತೆಗಳ ಸುಮಧುರವಾದ ಗಂಧವು ಅವರ ಚಿತ್ತವನ್ನು ತನ್ನಡೆಗೆ ಎಳೆದುಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಅವರು ಅದರ ಕಡೆಗೆ ಗಮನವನ್ನೇ ಹರಿಸುವುದಿಲ್ಲ. ಅದರ ಬದಲಿಗೆ ಆ ಕಂಪನ್ನು ಹೊತ್ತು ತರುವ ವಾಯುವನ್ನೇ ಆಕ್ಷೇಪಿಸುತ್ತಾರೆ.* ದುಂಬಿಗಳ ರಾಜನು ತಾರಸ್ವರದಿಂದ ಝೇಂಕರಿಸುತ್ತಾ ಶ್ರೀಹರಿಕಥೆಯನ್ನು ಗಾನಮಾಡುತ್ತಿರುವುದೋ–ಎಂಬಂತೆ ಕಂಡುಬಂದಾಗ–ಪರಿವಾಳ, ಕೋಗಿಲೆ, ಸಾರಸ, ಚಕ್ರವಾಕ, ಚಾತಕ, ಹಂಸ, ಗಿಳಿ, ತಿತ್ತಿರಿ ಮತ್ತು ನವಿಲುಗಳ ಕೋಲಾಹಲಶಬ್ದವು ತಾನೂ ಆ ಕೀರ್ತನೆಯ ಆನಂದದಲ್ಲಿ ಮೈಮರೆತಿವೆಯೋ–ಎಂಬಂತೆ ಕೊಂಚಕಾಲ ನಿಂತುಹೋಗುವುದು. ಆ ದಿವ್ಯವನದಲ್ಲಿರುವ ಮಂದಾರ, ಮಲ್ಲಿಗೆ, ಕುರವಕ, ನೈದಿಲೆ, ತಿಲಕ, ಸಂಪಿಗೆ, ಪುನ್ನಾಗ, ನಾಗಕೇಸರ, ಅಶೋಕ, ವಕುಳ, ಪಾರಿಜಾತ–ಮುಂತಾದ ಪುಷ್ಪಗಳು–ತುಲಸಿಗಿಂತಲೂ

"ಕುತಶ್ಚಿತ್ ಪ್ರತಿಬಂಧಾತ್ ಪ್ರಥಮಂ ನಿತ್ಯವಿಭೂತಿಂ ಅನವಾಪ್ಯ ಇಮಂ ವೈಕುಂಠಮಾಗತ್ಯ ತತ್ರ ಭಗವದನುಭವೇನ ನಿರಸ್ತಪ್ರತಿಬಂಧಾಃ ಕಲ್ಪಾನ್ತೇ ತತೋ ನಿತ್ಯವಿಭೂತಿಂ ಗಮಿಷ್ಯನ್ತಿ - ಇತ್ಯ ವಿರೋಧಃ" (ವೀರರಾಘವೀಯ) (ಶ್ಲೋಕ ೧೪)

* ವೈಕುಂಠಲೋಕದ ಪೌರರಲ್ಲಿ ಮುಕ್ತರೆಂದೂ, ಅಧಿಕಾರಿಗಳೆಂದೂ–ಎರಡೂ ಬಗೆಗಳು ಅವರಲ್ಲಿ ಮುಕ್ತರಿಗೆ ಮಾತ್ರ ವಿಷಯಗಳಿಂದ ಇಂದ್ರಿಯಗಳ ಕ್ಷೋಭೆ ಯುಂಟಾಗುವುದಿಲ್ಲ. ಅಮುಕ್ತರಿಗೆ ಒಮ್ಮೊಮ್ಮೆ ಗಂಧಾದಿವಿಷಯಗಳಿಂದ ಮನೋ ವಿಕಾರವು ಆಗುವುದುಂಟು. "ಮುಕ್ತಾಶ್ಚೈವಾಧಿಕಾರಸ್ಥಾ ದ್ವಿಧಾ ವೈಕುಣ್ಠಲೋಕಗಾಃ । ಅಮುಕ್ತಾನಾಂ ಭ್ರಮಃ ಕ್ವಾಪಿನ ಮುಕ್ತಾನಾಂ ಕ್ವಚಿದ್ಭವೇತ್॥" (ವಿಜಯಧ್ವಜೀಯ)

(ಶ್ಲೋಕ ೧೭)

ಹೆಚ್ಚು ಸುವಾಸನೆಯುಳ್ಳವು. ಆದರೂ–ಶ್ರೀಹರಿಯು ತುಳಸಿಯಿಂದ ವಿಶೇಷವಾಗಿ ತನ್ನ ಶರೀರವನ್ನು ಸಿಂಗರಿಸಿಕೊಳ್ಳುತ್ತಾನೆ ಮತ್ತು ತುಳಸಿಯ ಕಂಪನ್ನೇ ಹೆಚ್ಚಾಗಿ ಆಘ್ರಾಣಿಸಿ ಗೌರವಿಸುತ್ತಾನೆ*–ಎಂಬುದನ್ನು ಕಂಡು ಅವು ಆ ತುಳಸಿಯ ತಪಸ್ಸನ್ನು ಅತಿಶಯವಾಗಿ ಕೊಂಡಾಡುತ್ತವೆ. ಈ ದಿವ್ಯಲೋಕದಲ್ಲಿ ವೈಡೂರ್ಯ, ಮರಕತಮಣಿ ಮತ್ತು ಸುವರ್ಣಗಳಿಂದ ನಿರ್ಮಿತವಾದ ವಿಮಾನಗಳು ಎಲ್ಲೆಲ್ಲಿಯೂ ಕಂಗೊಳಿಸುತ್ತಿವೆ. ಇವು ಕರ್ಮಫಲವಾಗಿ ದೊರೆಯುವುವಲ್ಲ. ಶ್ರೀಹರಿಯ ಪಾದಪದ್ಮಗಳನ್ನು ಆರಾಧಿಸುವುದರಿಂದ ಮಾತ್ರವೇ ದೊರೆಯುವ ದಿವ್ಯವಿಮಾನಗಳು. ಇವುಗಳಲ್ಲಿ ಕುಳಿತಿರುವ ಭಗವದ್ಭಕ್ತಶಿರೋಮಣಿಗಳು ಶ್ರೀಕೃಷ್ಣನಲ್ಲಿ ನೆಲೆಸಿದ ಚಿತ್ತವುಳ್ಳವರಾಗಿ ತದ್ಗತಪ್ರಾಣರಾಗಿರುತ್ತಾರೆ. ಆದ್ದರಿಂದ ದೊಡ್ಡ ನಿತಂಬವುಳ್ಳವರಾಗಿ ಕಿರುನಗೆಯನ್ನು ಬೀರುತ್ತಿರುವ ಸುಂದರಿಯರೂ ಇವರ ಮನಸ್ಸಿನಲ್ಲಿ ಕಾಮವಿಕಾರವನ್ನುಂಟುಮಾಡಲಾರರು. ಯಾವ ಮಹಾದೇವಿಯ ಕೃಪೆಯನ್ನು ಪಡೆಯಲು ದೇವಸಮೂಹಗಳೂ ಪ್ರಯತ್ನಮಾಡುತ್ತವೆಯೋ–ಅಂತಹ ಚೆಲುವಿನ ಗಣಿಯಾದ ಸಾಕ್ಷಾತ್ ಮಹಾಲಕ್ಷ್ಮಿಯು ಶ್ರೀಹರಿ ಭವನದಲ್ಲಿ ತನ್ನ ಚಾಂಚಲ್ಯವೆಂಬ ದೋಷವನ್ನು ತೊರೆದು ನಿತ್ಯವಾಸ ಮಾಡುತ್ತಿದ್ದಾಳೆ. ಆ ದೇವದೇವಿಯು ಕಾಲಂದುಗೆಗಳ ಕಿರುಗೆಜ್ಜೆಗಳಿಂದ

---

* ಪಾರಿವಾಳವೇ ಮುಂತಾದ ಪಕ್ಷಿಗಳು ಶ್ರೀಭಗವಂತನ ಚರಿತ್ರೆಯನ್ನು ಗಾನಮಾಡತೊಡಗಲು ಶ್ರೀವೈಕುಂಠದಲ್ಲಿರುವ ಭಕ್ತರು ಭಗವಂತನ ಪೂಜೆಗೆ ಇದೇ ತಕ್ಕ ಸಮಯವೆಂದು ಭಾವಿಸಿ ಮಂದಾರಾದಿಪುಷ್ಪಗಳಿಂದಲೂ–ತುಳಸಿಯಿಂದಲೂ ಆತನನ್ನು ಆರಾಧಿಸಿದರು. ಆಗ ಸ್ವಾಮಿಯು ತುಳಸಿಯನ್ನು ಮಾತ್ರ ಮೂಸಿನೋಡಿ ಅದರಲ್ಲಿ ವಿಶೇಷವಾದ ಗೌರವವನ್ನು ತೋರಿಸಿದರು. ಆಗ ಉಳಿದ ಪುಷ್ಪಗಳೆಲ್ಲವೂ ಆ ತುಳಸಿಯ ತಪಸ್ಸನ್ನು ಕೊಂಡಾಡಿದುವು.

ಜ್ಞಾನದಿಂದ ಮುಕ್ತಿಯನ್ನು ಪಡೆದಿರುವ ಕಾರಣ ಆಯಾ ಸಮಯವನ್ನರಿತು ಅಲ್ಲಿ ಭಗವಂತನ ಗಾನ-ಪ್ರಶಂಸೆಗಳನ್ನು ಮಾಡುವ ಶಕ್ತಿಯು ದುಂಬಿಯೇ ಮುಂತಾದ ತಿರ್ಯಕ್ಪ್ರಾಣಿಗಳಿಗೂ ಮತ್ತು ಮಂದಾರವೇ ಮುಂತಾದ ಸ್ಥಾವರಜೀವಗಳಿಗೂ ಉಂಟು "ತಿರಶ್ಚೀನಾಃ ಸ್ಥಾವರಾಶ್ಚ ಸರ್ವೇ ಜ್ಞಾನಾತ್ ವಿಕುಣ್ಠಗಾಃ । ಅಮುಕ್ತಾ ಮುಕ್ತಿ ಮಾಯಾನ್ತಿ ನಿಯಮಾತ್ ಕರ್ಮಣಃ ಕ್ಷಯೇ॥" (ವಿಜಯಧ್ವಜೀಯ) (ಶ್ಲೋಕ ೧೯)

ಶಬ್ದಮಾಡುವ ಹೆಜ್ಜೆಗಳನ್ನಿಡುತ್ತಾ ನೀಳವಾದ ತೋಳುಗಳಿಂದ ಲೀಲಾ ಕಮಲಗಳನ್ನು ತಿರುಗಿಸುವಾಗ ಆ ಕನಕಭವನದ ಸ್ಫಟಿಕಮಯವಾದ ಗೋಡೆಗಳಲ್ಲಿ ಆಕೆಯ ಪ್ರತಿಬಿಂಬವು ಬಿದ್ದು, ಆಕೆಯು ಅವುಗಳನ್ನು ಗುಡಿಸು ತ್ತಿರುವಳೋ–ಎಂಬಂತೆ ಕಾಣುತ್ತದೆ. ಅಯ್ಯಾ, ದೇವತೆಗಳೇ! ಈ ದಿವ್ಯ ಲೋಕದಲ್ಲಿ ಶ್ರೀದೇವಿಯು ತನ್ನ ಕ್ರೀಡೋಪವನದಲ್ಲಿ ಹವಳದ ಮೆಟ್ಟಲು ಗಳಿಂದಲೂ, ಅಮೃತಸದೃಶವಾದ ತಿಳಿನೀರಿನಿಂದಲೂ ಕಂಗೊಳಿಸುತ್ತಿರುವ ಸರೋವರಗಳ ಬಳಿ ತನ್ನ ದಾಸಿಯರೊಡನೆ ಕೂಡಿ ಕಂಪನ್ನು ಸೂಸುತ್ತಿರುವ ತುಳಸೀದಳಗಳಿಂದ ತನ್ನ ಹೃದಯವಲ್ಲಭನಾದ ಶ್ರೀಹರಿಯನ್ನು ಪೂಜೆ ಮಾಡುತ್ತಾಳೆ. ಆಗ ಆಕೆಯು ಸುಂದರವಾದ ಮುಂಗುರುಳುಗಳಿಂದಲೂ ಉನ್ನತವಾದ ಮೂಗಿನಿಂದಲೂ ಮೆರೆಯುವ ತನ್ನ ಮುಖಕಮಲದ ಪ್ರತಿ ಬಿಂಬವನ್ನು ಆ ಜಲದಲ್ಲಿ ನೋಡಿ–'ಶ್ರೀಭಗವಂತನು ಚುಂಬನಮಾಡಿದ ಮುಖವಿದು'–ಎಂಬ ಸೌಭಾಗ್ಯದಿಂದ ಆನಂದಪರವಶಳಾಗುತ್ತಾಳೆ. ಪಾಪಗಳನ್ನು ಲೋಪಗೊಳಿಸುವ ಭಗವಂತನ ಲೀಲಾಕಥೆಗಳನ್ನು ಬಿಟ್ಟು, ಬುದ್ಧಿಯನ್ನು ನಾಶಗೊಳಿಸುವ ಇತರ ವಿಷಯವಾದ ಕೆಟ್ಟಕಥೆಗಳನ್ನು ಕೇಳುವ ದುಷ್ಕರ್ಮಿಗಳು ಈ ಲೋಕವನ್ನು ಕನಸಿನಲ್ಲೂ ಪಡೆಯಲಾರರು. ಆ ನಿಸ್ಸಾರವಾದ ಕಥೆಗಳು–ಅವುಗಳನ್ನು ಕೇಳುವ ದುರ್ಭಾಗ್ಯಶಾಲಿಗಳ ಪುಣ್ಯವನ್ನು ಕಳೆದು ಅವರನ್ನು ಆಶ್ರಯರಹಿತವಾದ ಘೋರನರಕದಲ್ಲಿ ತಳ್ಳು ತ್ತವೆಯಲ್ಲಾ–ಅಯ್ಯೋ ಪಾಪ! ಎನ್ನಿಸುತ್ತದೆ. (ಶ್ಲೋಕ 17-23)

ಆಹಾ! ಈ ನರಜನ್ಮವು ಎಷ್ಟು ಶ್ರೇಷ್ಠವಾದುದು! ದೇವತೆಗಳೂ ಬಯಸುವಂತಹ ಮಹಿಮೆಯುಳ್ಳದ್ದು! ತತ್ತ್ವಜ್ಞಾನ ಮತ್ತು ಧರ್ಮ–ಈ ಎರ ಡನ್ನೂ ಪಡೆಯುವುದು ಇದರಲ್ಲಿಯೇ. ಇಂತಹ ಜನ್ಮವನ್ನು ಪಡೆದಿದ್ದರೂ ಸಹ ಭಗವಂತನ ಅಪಾರವಾದ ಮಾಯೆಯಿಂದ ಮರುಳಾಗಿ ಶ್ರೀಹರಿಯನ್ನು ಆರಾಧನೆಮಾಡದೇ ಜನ್ಮವನ್ನು ವ್ಯರ್ಥಮಾಡಿಕೊಳ್ಳುವರಲ್ಲಾ! ಎಂತಹ ದುರದೃಷ್ಟ! ಇವರ ಗತಿಯು ಹೀಗಾದರೆ ಪರಮಸುಕೃತಿಗಳಿಗೆ ಪರಮ ಪದವೇ ದೊರೆಯುವುದು. ಅವರು ನಿರಂತರವಾಗಿ ಶ್ರೀಹರಿಯನ್ನೇ ಚಿಂತಿಸು ತ್ತಿರುವುದರಿಂದ ಯಮರಾಜನು ಅವರ ಹತ್ತಿರಕ್ಕೆ ಸುಳಿಯದೇ ದೂರ ದಲ್ಲಿಯೇ ಇರುತ್ತಾನೆ. ಅವರು ಭಗವಂತನ ದಿವ್ಯಕೀರ್ತಿಯನ್ನು ಕುರಿತು

ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿರುವಾಗ ಭಗವಂತನ ಪ್ರೇಮದಿಂದ ಪರವಶರಾದ ಅವರ ಕಣ್ಣುಗಳಿಂದ ನಿರಂತರವಾದ ಆನಂದದ ಆಶ್ರುಧಾರೆ ಹರಿಯುವುದು. ದೇಹದಲ್ಲಿ ರೋಮಾಂಚನವುಂಟಾಗುವುದು. ಅವರ ಶೀಲ-ಸ್ವಭಾವಗಳಿಗೆ ನಾವು ಆಸೆಪಡುತ್ತೇವೆ. ಅಂತಹ ಭಾಗವತೋತ್ತಮರು ಮಾತ್ರವೇ ನಮ್ಮ ಲೋಕಗಳಿಗೂ ಮೇಲೆ ಬೆಳಗುತ್ತಿರುವ ವೈಕುಂಠಧಾಮಕ್ಕೆ ಹೋಗುವರು. ವಿಶ್ವಗುರುವಾದ ಶ್ರೀಹರಿಗೆ ನಿವಾಸಸ್ಥಾನವಾಗಿ, ಸಮಸ್ತ ಲೋಕಗಳಿಗೆ ವಂದನೆಗೆ ಯೋಗ್ಯವಾಗಿ, ಶ್ರೇಷ್ಠತಮರಾದ ದೇವತೆಗಳ ವಿವಿಧ ವಿಮಾನಗಳಿಂದ ವಿಭೂಷಿತವಾದ, ಪರಮದಿವ್ಯವೂ–ಪರಮಾದ್ಭುತವೂ ಆದ ಆ ವೈಕುಂಠಧಾಮವನ್ನು ತಮ್ಮ ಯೋಗಬಲದಿಂದ ಸೇರಿ ಆ ಮುನಿ ಗಳು ಪರಮಾನಂದವನ್ನನುಭವಿಸಿದರು. ಶ್ರೀಭಗವಂತನನ್ನು ಕಾಣಬೇಕೆಂಬ ತವಕದಿಂದ ಅವರು ಬೇರೆ ಯಾವುದನ್ನೂ ಗಮನಿಸದೇ ಆ ವೈಕುಂಠಧಾಮದ ಆರು ಮಂಡಪಗಳನ್ನು ದಾಟಿ ಏಳನೆಯ ಮಂಡಪವನ್ನು ತಲುಪಿದರು. ಅದರ ಮುಂಬಾಗಿಲಿನಲ್ಲಿ ಅವರು–ಸಮವಯಸ್ಸಿನವರಾಗಿದ್ದ, ದಿವ್ಯಾಯುಧಾ ಭರಣಸಂಪನ್ನರಾಗಿದ್ದ ಇಬ್ಬರು ದಿವ್ಯಪುರುಷರನ್ನು ಕಂಡರು. ಆ ದೇವ ಶ್ರೇಷ್ಠರು ಗದಾಪಾಣಿಗಳಾಗಿದ್ದರು. ಅಮೂಲ್ಯವಾದ ಕೇಯೂರ-ಕಟಕ-ಕುಂಡಲ-ಕಿರೀಟಗಳಿಂದ ಅಲಂಕೃತರಾಗಿದ್ದರು. ಶ್ಯಾಮಲವರ್ಣದಿಂದೊಪ್ಪು ತ್ತಿದ್ದ ತಮ್ಮ ನಾಲ್ಕು ನಿಡಿದೋಳುಗಳ ನಡುವೆ ಮದವೇರಿದ ದುಂಬಿಗಳ ಹಿಂಡಿನಿಂದ ಇಂಬುಗೊಂಡ ವನಮಾಲೆಯನ್ನು ಧರಿಸಿದ್ದರು. ಅವರು ಹುಬ್ಬು ಗಳನ್ನು ಗಂಟುಹಾಕಿಕೊಂಡಿದ್ದರು. ಅವರ ಮೂಗಿನ ಹೊಳ್ಳೆಗಳು ಅರಳಿ, ಕಣ್ಣುಗಳು ಕೆಂಪೇರಿ, ಮುಖದಲ್ಲಿ ದುಗುಡದ ಗುರುತುಗಳು ಕಾಣುತ್ತಿದ್ದುವು.

ಅವರು ಹಾಗಿದ್ದರೂ–ಮಹರ್ಷಿಗಳು ಯಾವ ವಿಕಾರವೂ ಇಲ್ಲದೇ ಅವರನ್ನು ಏನೂ ವಿಚಾರಮಾಡದೇ–ಆ ಹಿಂದೆ ಸುವರ್ಣ ಮತ್ತು ವಜ್ರ ಖಚಿತವಾದ ಬಾಗಿಲುಗಳಿಂದ ಕೂಡಿದ ಆರು ಮಂಡಪಗಳನ್ನು ಹೇಗೆ ದಾಟಿಕೊಂಡು ಬಂದಿದ್ದರೋ–ಹಾಗೆಯೇ ಏಳನೆಯ ಮಂಡಪದ ಬಾಗಿಲಿ ನೊಳಗೂ ನುಗ್ಗಿದರು. ಏಕೆಂದರೆ : ಅವರು ಎಲ್ಲರಲ್ಲೂ ಸಮದೃಷ್ಟಿ ಯುಳ್ಳ ಮತ್ತು ಎಲ್ಲೆಡೆಗಳಲ್ಲಿಯೂ ಯಾವ ಶಂಕೆಯೂ ಇಲ್ಲದೇ, ಯಾವ

ಅಡೆ-ತಡೆಗಳೂ ಇಲ್ಲದೇ ಸಂಚಾರಮಾಡುವ ಪ್ರಭಾವವನ್ನು ಹೊಂದಿದ್ದವರು. ಆ ನಾಲ್ವರು ಕುಮಾರರೂ ಪೂರ್ಣತತ್ತ್ವಜ್ಞಾನಿಗಳು. ಬ್ರಹ್ಮದೇವರ ಸೃಷ್ಟಿಯಲ್ಲಿ–ವಯಸ್ಸಿನಲ್ಲಿ ಎಲ್ಲರಿಗಿಂತಲೂ ದೊಡ್ಡವರಾಗಿದ್ದರೂ–ನೋಡುವುದಕ್ಕೆ ಐದು ವರ್ಷದ ಬಾಲಕರ ಆಕಾರದಲ್ಲಿದ್ದರು. ದಿವ್ಯದಿಗಂಬರವೃತ್ತಿಯಿಂದ ಬೆತ್ತಲೆಯಾಗಿದ್ದರು. ಅವರು ಹೀಗೆ ಯಾವ ಸಂಕೋಚವೂ ಇಲ್ಲದೇ ಒಳಗೆ ಹೋಗುತ್ತಿರುವುದನ್ನು ನೋಡಿ ಆ ದ್ವಾರಪಾಲಕರು ಭಗವಂತನ ಶೀಲ-ಸ್ವಭಾವಗಳಿಗೆ ವಿರುದ್ಧವಾದ ಭಾವನೆಯಿಂದ ಆ ಮಹಾತ್ಮರ ತೇಜಸ್ಸನ್ನು ಕಡೆಗಣಿಸಿ ಹಾಸ್ಯಮಾಡುತ್ತಾ ತಮ್ಮ ಕೈಯಲ್ಲಿದ್ದ ಬೆತ್ತವನ್ನು ಮುಂದೆ ಚಾಚಿ ಅವರನ್ನು ತಡೆದುಬಿಟ್ಟರು.* ಆ ಮಹಾತ್ಮರು ಅಂತಹ ಅವಮಾನಕ್ಕೆ ಖಂಡಿತವಾಗಿಯೂ ಯೋಗ್ಯರಾದವರಲ್ಲ. ಪೂಜ್ಯತಮರಾದ ಆ ಕುಮಾರರು ಪರಮಸಂಯಮಿಗಳಾಗಿದ್ದರೂ ವೈಕುಂಠವಾಸಿಗಳಾದ ದಿವ್ಯಸೂರಿಗಳೆದುರಿನಲ್ಲಿ ತಮ್ಮನ್ನು ಆ ದ್ವಾರಪಾಲಕರು ಹಾಗೆ ತಡೆದಾಗ ಅವರ ಕಣ್ಣುಗಳು ಒಡನೆಯೇ ಕೊಂಚ ಕೆಂಪೇರಿದುವು. ಪ್ರಿಯತಮನಾದ ಪ್ರಭುವಿನ ದರ್ಶನಕ್ಕೆ ವಿಘ್ನವಾಯಿತಲ್ಲಾ ಎಂಬ ಕೋಪದಿಂದ ಕಲಕಲ್ಪಟ್ಟು ಅವರು ದ್ವಾರಪಾಲಕರಿಗೆ ಹೀಗೆಂದರು : (ಶ್ಲೋಕ 24-31)

ಕೋ ವಾಮಿಹೈತ್ಯ ಭಗವತ್ಪರಿಚರ್ಯಯೋಚ್ಚೈ-
ಸ್ತದ್ಧರ್ಮಿಣಾಂ ನಿವಸತಾಂ ವಿಷಮಃ ಸ್ವಭಾವಃ ।
ತಸ್ಮಿನ್ಪ್ರಶಾನ್ತಪುರುಷೇ ಗತವಿಗ್ರಹೇ ವಾಂ
ಕೋ ವಾತ್ಮವತ್ಕುಹಕಯೋಃ ಪರಿಶಙ್ಕನೀಯಃ ॥೩೨॥

---

* ಜಯ-ವಿಜಯರು ಭಗವಂತನಿಗೆ ಪ್ರತಿಕೂಲವಾಗಿ ಆಚರಿಸಲು ಕಾರಣವೇನು? ಎಂದರೆ : ಜಯ-ವಿಜಯರಿಗೆ ಹಿಂದೊಮ್ಮೆ ಬ್ರಹ್ಮದೇವರ ಶಾಪದಿಂದ ಕೃಷ್ಣಾವತಾರದ ವರೆಗೂ ತೊಂದರೆಯುಂಟಾಗುವುದು. ಆ ಶಾಪನಿಮಿತ್ತವಾದ ತೊಂದರೆಯು ಕೊಂಚಕಾಲ ಮಾತ್ರ ಇರುವುದು ಎಂಬ ವಿಧಾನವಿತ್ತು. ಹಾಗಿಲ್ಲದಿದ್ದರೆ ಅವರು ರಜೋಗುಣವೇ ಇಲ್ಲದೆ ವೈಕುಂಠದಲ್ಲಿ ಇರಲು ಸಾಧ್ಯವಾಗುತ್ತಿರಲಿಲ್ಲ.

"ಎಲೈ ದ್ವಾರಪಾಲಕರೇ! ಭಗವಂತನಿಗೆ ಕೈಂಕರ್ಯಮಾಡಿದ ಪುಣ್ಯದ ಪ್ರಭಾವದಿಂದ ಈ ಲೋಕಕ್ಕೆ ಬಂದು ಇಲ್ಲಿ ವಾಸಮಾಡುವವರು ಆ ಭಗವಂತನಂತೆಯೇ ಸಮದರ್ಶಿಗಳಾಗಿರಬೇಕು. ನೀವೂ ಹಾಗೆ ಇರಬೇಕಾಗಿರುವ ಇಲ್ಲಿ ನಿವಾಸಿಗಳಲ್ಲಿ ಸೇರಿದ್ದರೂ ನಿಮ್ಮಿಬ್ಬರ ಸ್ವಭಾವದಲ್ಲಿ ಮಾತ್ರ ವಿಷಯಭಾವವು ಏಕೆ ಕಂಡುಬರುತ್ತಿದೆ? ವೈಷಮ್ಯಕ್ಕೆ ಎಡೆಯಿಲ್ಲದ ಜಾಗವಿದು. ಭಗವಂತನು ಶಾಂತಮೂರ್ತಿಯು. ಆತನಿಗೆ ಯಾರಲ್ಲಿಯೂ ವಿರೋಧವಿಲ್ಲ. ಆದ್ದರಿಂದ ಇಲ್ಲಿಗೆ ಬರುವ ಅಥವಾ ಇಲ್ಲಿ ಇರುವ ಯಾರ ಮೇಲೆಯೂ ಶಂಕೆಪಡಲು ಅವಕಾಶವಿಲ್ಲ. ಇಲ್ಲಿರುವವರು ಯಾರೂ ಕಪಟಿಗಳಲ್ಲ. ನೀವೇ ಕಪಟಿಗಳಾಗಿರುವುದರಿಂದ ಇತರರನ್ನೂ ನಿಮ್ಮಂತೆಯೇ ಭಾವಿಸಿ ಶಂಕೆಪಡುತ್ತಿದ್ದೀರಿ.

ನ ಹ್ಯನ್ತರಂ ಭಗವತೀಹ ಸಮಸ್ತಕುಕ್ಷಾ-
ವಾತ್ಮಾನಮಾತ್ಮನಿ ನಭೋ ನಭಸೀವ ಧೀರಾಃ ।
ಪಶ್ಯನ್ತಿ ಯತ್ರ ಯುವಯೋಃ ಸುರಲಿಙ್ಗಿನೋಃ ಕಿಂ
ವ್ಯುತ್ಪಾದಿತಂ ಹ್ಯುದರಭೇದಿ ಭಯಂ ಯುತೋऽಸ್ಯ ॥

ಶ್ರೀಭಗವಂತನ ಉದರದಲ್ಲಿ ಸಕಲಬ್ರಹ್ಮಾಂಡವೂ ಅಡಗಿದೆ. ಇಲ್ಲಿ ವಾಸಮಾಡುವ ಧೀಮಂತರು ಆ ಸರ್ವಾತ್ಮನಾದ ಶ್ರೀಹರಿಗೂ–ತಮಗೂ ಯಾವ ಅಂತರವನ್ನೂ[1] ನೋಡುವುದಿಲ್ಲ. ಮಹಾಕಾಶದಲ್ಲಿ ಮಡಕೆ

ಜಯಸ್ಯ ವಿಜಯಸ್ಯಾಪಿ ಕದಾಚಿದ್ಬ್ರಹ್ಮಶಾಪತಃ ।
ಕೃಷ್ಣಾವತಾರಪರ್ಯನ್ತಂ ಪ್ರಾತಿಕೂಲ್ಯಂ ಚ ಜಾಯತೇ ॥ (ವಿಜಯಧ್ವಜೀಯ)

"ಜಯ-ವಿಜಯರು ಭಗವಂತನ ಏಕಾಂತಭಕ್ತರು ಮತ್ತು ಪರಮದಯಾಳುಗಳು. ರಾಕ್ಷಸರನ್ನು ಅನುಗ್ರಹಿಸುವುದಕ್ಕಾಗಿ ರಾಕ್ಷಸಭಾವದಿಂದಲೇ ಭಗವಂತನನ್ನು ಆರಾಧಿಸಬೇಕೆಂದು ಭಗವಂತನಿಗೆ ಪ್ರತಿಕೂಲವಾಗಿ ನಡೆದುಕೊಂಡರು"–ಎಂದು ಸಿದ್ಧಾಂತದೀಪಿಕಾಗ್ರಂಥವು ತಿಳಿಸುತ್ತದೆ. (ಶ್ಲೋಕ ೩೦)

೧ ಭಗವಂತನಿಗೂ–ತನಗೂ ಸ್ವಲ್ಪವಾದರೂ ಅಂತರವನ್ನು ಮಾಡಿಕೊಂಡರೆ ಆಗ ಭಯವು ಉಂಟಾಗುತ್ತದೆ–ಎಂದು ತೈತ್ತಿರೀಯೋಪನಿಷತ್ತು ಹೇಳುತ್ತದೆ.

"**ಉದರಮನ್ತರಂ ಕುರುತೇ । ಅಥ ತಸ್ಯ ಭಯಂ ಭವತಿ ।**" ತನಗೂ - ಬ್ರಹ್ಮಕ್ಕೂ ಅಲ್ಪವಾಗಿಯಾದರೂ ಅಂತರವನ್ನು (ಛಿದ್ರವನ್ನು) ಅಂದರೆ : ಭೇದದರ್ಶವನ್ನು

ಯೊಳಗಿನ ಆಕಾಶವು ಹೇಗೋ ಹಾಗೆ ಅವನಲ್ಲಿ ತಮ್ಮ ಅಂತರ್ಭಾವವನ್ನು ನೋಡುತ್ತಾರೆ. ಆದರೆ ನೀವು ದೇವರೂಪಿಗಳಾಗಿದ್ದರೂ, ದೇವತೆಗಳ ಗುರುತುಗಳನ್ನು ಹೊಂದಿದ್ದರೂ—ಈ ತಿಳಿವಳಿಕೆಯನ್ನು ಹೊಂದಿಲ್ಲ. ಭಗವಂತನಿಗೂ ನಿಮಗೂ ನೀವು ಅಂತರವನ್ನು ಭಾವಿಸುತ್ತಿರುವುದರಿಂದ ಭಯ-ಶಂಕೆಗಳು ನಿಮಗೆ ಉಂಟಾಗಿವೆ.

ತದ್ವಾಮಮುಷ್ಯ ಪರಮಸ್ಯ ವಿಕುಣ್ಠಭರ್ತುಃ
ಕರ್ತುಂ ಪ್ರಕೃಷ್ಟಮಿಹ ಧೀಮಹಿ ಮನ್ದಧೀಭ್ಯಾಮ್ ।
ಲೋಕಾನಿತೋ ವ್ರಜತಮನ್ತರಭಾವದೃಷ್ಟ್ಯಾ
ಪಾಪೀಯಸಸ್ತ್ರಯ ಇಮೇ ರಿಪವೋಽಸ್ಯ ಯತ್ರ ॥೩೪॥

ನೀವು ವೈಕುಂಠಪತಿಯಾದ ಶ್ರೀಭಗವಂತನಿಗೆ ಪಾರ್ಷದರಾಗಿರುವುದು ನಿಜ. ಆದರೂ ನಿಮ್ಮ ಬುದ್ಧಿಯು ಮಂದವಾಗಿದೆ. ಆದ್ದರಿಂದಲೇ ನಿಮಗೆ ಒಳ್ಳೆಯದಾಗಲೆಂದು ನಾವು ನಿಮ್ಮ ಅಪರಾಧಕ್ಕೆ ತಕ್ಕ ದಂಡನೆಯನ್ನು ಕೊಡಲು ಯೋಚಿಸಿದ್ದೇವೆ. ನೀವು ಭೇದದೃಷ್ಟಿಯ ದೋಷವನ್ನು ಹೊಂದಿ

ಮಾಡಿದವನಿಗೆ ಭಯವುಂಟಾಗುತ್ತದೆ. ಭೇದದರ್ಶನವೇ ಭಯಕ್ಕೆ ಕಾರಣ—ಎಂದು ಶ್ರೀಶಂಕರರ ಭಾಷ್ಯ.

ಸಾಧಕನು ಪರಮಾತ್ಮನ ಧ್ಯಾನದಲ್ಲಿ ಸ್ವಲ್ಪವಾದರೂ ಅಂತರವನ್ನು ಮಾಡಿದರೆ ಅಂದರೆ : ಧ್ಯಾನವಿಚ್ಛೇದವನ್ನು ಮಾಡಿದರೆ ಆಗ ಆತನಿಗೆ ಭಯವುಂಟಾಗುತ್ತದೆ. ಬ್ರಹ್ಮಧ್ಯಾನವಿಚ್ಛೇದವೇ ಭಯಕ್ಕೆ ಕಾರಣ—ಎಂದು ರಂಗರಾಮಾನುಜಭಾಷ್ಯ.

ಜ್ಞಾನಿಗಳೂ ಘಟಾಕಾಶ-ಮಹಾಕಾಶಗಳಿಗೆ ಭೇದವಿಲ್ಲವೆಂದು ತಿಳಿಯುವಂತೆ—ತಮ್ಮ ಜೀವನದಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನಿಗೂ—ವ್ಯಾಪಕನಾಗಿರುವ ಪರಮಾತ್ಮನಿಗೂ ಭೇದವಿಲ್ಲವೆಂದು ಅನುಸಂಧಾನಮಾಡುತ್ತಾರೆ. ಉದರಭೇದಿ—ಎಂಬಲ್ಲಿ ಉತ್ + ಅರ = ಎಂದರೆ ನಿರ್ದೋಷವಾದ ಪರಬ್ರಹ್ಮ. ಅದರಲ್ಲಿ ಭೇದವನ್ನು ಎಣಿಸಿದವನಿಗೆ ಎಂದರೆ : ಅಂತರ್ಯಾಮಿಯಾದ ಪರಮಾತ್ಮನಿಗೂ—ವ್ಯಾಪಕನಾದ ಪರಮಾತ್ಮನಿಗೂ ಭೇದವನ್ನು ಭಾವಿಸುವವನಿಗೆ ಭಯ ಮತ್ತು ನರಕಪ್ರಾಪ್ತಿ. **"ಸರ್ವೋದರಗತಂ ಬ್ರಹ್ಮ ಯೇ ಭೇದೇನ ವಿಚಕ್ಷತೇ । ಸರ್ವತ್ರಾಪಿ ಭಯಂ ತೇಷಾಂ ಮೃತಾನಾಂ ತಮ ಏವ ಚ ॥"** (ವಿಜಯಧ್ವಜೀಯ)

ಧೀರರಾದ ಮಹಾತ್ಮರು ಮಹಾಕಾಶವನ್ನು ಬಿಟ್ಟು ಘಟಾಕಾಶವು ಇರಲಾರದೆಂದು ತಿಳಿಯುತ್ತಾರೆ. ಹಾಗೆಯೇ ಪರಮಾತ್ಮನನ್ನು ಉಳಿದು ಜೀವಾತ್ಮನಿಲ್ಲವೆಂದು ತಿಳಿಯುತ್ತಾರೆ.

ರುವುದರಿಂದ ಈ ವೈಕುಂಠಧಾಮವನ್ನು ಬಿಟ್ಟು, ಕಾಮ-ಕ್ರೋಧ ಮತ್ತು ಲೋಭಗಳೆಂದು ಶತ್ರುಗಳು ವಾಸಮಾಡುತ್ತಿರುವ ಪಾಪಿಷ್ಠವಾದ ಯೋನಿಗೆ ಹೋಗಿರಿ.''

ಸನಕಾದಿಮಹರ್ಷಿಗಳು ನುಡಿದ ಆ ಘೋರವಾದ ಶಾಪವಾಕ್ಯವನ್ನು ಕೇಳಿ ಜಯ-ವಿಜಯರು ಭಗವಂತನ ಪಾರ್ಷದರೇ ಆಗಿದ್ದರೂ ಅತ್ಯಂತ ಭಯಗ್ರಸ್ತರಾದರು. ಏಕೆಂದರೆ : ಬ್ರಾಹ್ಮಣರ ಶಾಪವು ಅಮೋಘವಾದುದು. ಅಸ್ತ್ರಸಮೂಹಗಳಿಂದಲೂ ನಿವಾರಿಸಲು ಅಸಾಧ್ಯವಾದುದು. ಅವರು ಒಡನೆಯೇ ಅತಿದೈನ್ಯದಿಂದ ಆ ಮಹರ್ಷಿಗಳ ಪಾದಗಳನ್ನು ಹಿಡಿದುಕೊಂಡು ಕೆಳಕ್ಕೆ ಉರುಳಿದರು. ಮತ್ತೆ ಮೇಲಕ್ಕೆ ಎದ್ದು ಅತಿದೈನ್ಯದಿಂದ–''ಎಲೈ ಮಹಾತ್ಮರೇ! ನಾವು ನಿಜವಾಗಿಯೂ ಮಹಾಪರಾಧವನ್ನು ಮಾಡಿರುವೆವು. ಅದಕ್ಕೆ ತಾವು ದಂಡವನ್ನು ವಿಧಿಸಿರುವುದು ಉಚಿತವೇ ಆಗಿದೆ. ನಾವು ಅರಿಯದೇ ಭಗವಂತನ ಆಜ್ಞೆಯನ್ನು ಉಲ್ಲಂಘನೆಮಾಡಿದ್ದೇವೆ. ಇದರಿಂದ ನಮಗೆ ಉಂಟಾಗಿರುವ ಪಾಪವು ತಾವು ಕೊಟ್ಟಿರುವ ದಂಡನೆಯಿಂದ ಸಂಪೂರ್ಣ ವಾಗಿ ತೊಳೆದುಹೋಗುವುದು. ಆದರೆ ನಮ್ಮ ಈ ದುಃಸ್ಥಿತಿಯನ್ನು ಕಂಡು ತಮಗೆ ಕನಿಕರವುಂಟಾಗಿ ಸ್ವಲ್ಪವಾದರೂ ವಿಷಾದವುಂಟಾಗಿದ್ದರೆ. ನಾವು ಎಷ್ಟು ಅಧೋಗತಿಗೆ ಹೋದರೂ ಅಲ್ಲಿ ನಮಗೆ ಭಗವಂತನ ಸ್ಮರಣೆಯನ್ನು ತಪ್ಪಿಸುವ ಮೋಹವು ಉಂಟಾಗದಿರಲೆಂದು ಅನುಗ್ರಹ ಮಾಡಿರಿ''–ಎಂದು ಅವರಲ್ಲಿ ಮೊರೆಯಿಟ್ಟರು. ತನ್ನ ಪಾರ್ಷದರು ಸನಕಾದಿಗಳಿಗೆ ಅಪಚಾರ ಮಾಡಿದ್ದಾರೆಂಬುದನ್ನು ತಿಳಿದು ಸಾಧುಜನಹೃದಯನಿವಾಸಿಯಾದ ಸ್ವಾಮೀ

ಇಲ್ಲಿ ಆಕಾಶದೃಷ್ಟಾಂತಕ್ಕೆ ಕಾರಣ ಅವಿಭಾಗವೇ ಹೊರತು ತಾದಾತ್ಮ್ಯವಲ್ಲ. ಜೀವಾತ್ಮನು ಪರಮಾತ್ಮನಿಗೆ ಶರೀರದಂತೆ ಇದ್ದಾನೆ. ಶರೀರವು ಶರೀರದಿಂದ ಪ್ರತ್ಯೇಕವಾಗಿ ಸಿದ್ಧವಾಗುವುದಿಲ್ಲ. ಜೀವ-ಪರಮಾತ್ಮರಿಗೆ ಅವಾಂತರಭೇದವಿದ್ದರೂ ಎರಡೂ ಜ್ಞಾನೈಕರಸ ವಾಗಿರುವುದರಿಂದಲೂ, ಎರಡಕ್ಕೂ ಸಾಮ್ಯ ಮತ್ತು ಜೀವಕ್ಕೆ ಪ್ರತ್ಯೇಕ ಸಿದ್ಧಿಯಿಲ್ಲವಾದ್ದರಿಂದ ಬ್ರಹ್ಮದೊಡನೆ ಅವಿಭಾಗ. 'ಅವಿಭಾಗೇನ ದೃಷ್ಟತ್ವಾತ್' ಎಂದು ಬ್ರಹ್ಮಸೂತ್ರದಲ್ಲಿ ಇದನ್ನು ಪ್ರತಿಪಾದಿಸಿದೆ. (ವೀರರಾಘವೀಯ)

ಪಂಡಿತರು ಘಟಾಕಾಶವನ್ನು ಮಹಾಕಾಶದ ಅವಯವವೆಂದು ತಿಳಿಯುವಂತೆ– ಜೀವವನ್ನು ಪರಮಾತ್ಮನ ಅವಯವವೆಂದು ತಿಳಿಯುತ್ತಾರೆ. (ಸಿದ್ಧಾಂತದೀಪಿಕಾ)

(ಶ್ಲೋಕ ೩೩)

ಶ್ರೀಪದ್ಮನಾಭನು ಶ್ರೀದೇವೀಸಮೇತನಾಗಿ ತಾನೇ ಅಲ್ಲಿಗೆ ದಯಮಾಡಿಸಿದನು. ಪರಮಹಂಸಮಾಹಾಮುನಿಗಳು ಸಮಾಧಿಯೋಗದಲ್ಲಿ ಅರಸುವ ಪಾದಾರವಿಂದಗಳುಳ್ಳವನಾಗಿದ್ದರೂ ಆ ಪ್ರಭುವು ಕಾಲ್ನಡಿಗೆಯಿಂದಲೇ ಅಲ್ಲಿಯೇ ಬಂದನು. ತಮ್ಮ ಸಮಾಧಿಯೋಗದಲ್ಲಿ ದೊರೆಯುವ ಭಾಗ್ಯವಾಗಿರುವ, ಭಗವಂತನಾದ ವೈಕುಂಠಪತಿಯು ಕಣ್ಣುಗಳ ಮುಂದೆಯೇ ಕಾಣುತ್ತಿರುವುದನ್ನು ಸನಕಾದಿಗಳು ಕಣ್ಣಾರೆ ಕಂಡರು. ಪರಿವಾರದವರು ಛತ್ರ-ಚಾಮರಾದಿಗಳನ್ನು ಹಿಡಿದುಕೊಂಡು ದೇವ-ದೇವತಾಸಾರ್ವಭೌಮನನ್ನು ಹಿಂಬಾಲಿಸುತ್ತಿದ್ದಾರೆ. ಎರಡೂ ಕಡೆಗಳಲ್ಲಿಯೂ ರಾಜಹಂಸಗಳ ರೆಕ್ಕೆಗಳಂತಿರುವ ಬೀಸಣಿಗೆಗಳ ಸೇವೆ ಸಲ್ಲುತ್ತಿದೆ. ಅವುಗಳ ತಂಗಾಳಿಗಳಿಂದ ಬೆಳ್ಗೊಡೆಯನ್ನು ಅಲಂಕರಿಸಿರುವ ಮುತ್ತುಗಳ ಗೊಂಚಲುಗಳು ಅಲ್ಲಾಡುತ್ತಿರಲು–ಚಂದ್ರನ ಕಿರಣಗಳಿಂದ ಅಮೃತಬಿಂದುಗಳು ತೊಟ್ಟಿಕ್ಕುತ್ತಿವೆಯೋ–ಎಂಬಂತೆ ಶೋಭಾಯಮಾನವಾದ ದರ್ಶನ. ಪೂರ್ಣವಾದ ಅನುಗ್ರಹವನ್ನು ಸೂಸುತ್ತಿರುವ ಪ್ರಸನ್ನವಾದ ಮುಖಮುದ್ರೆಯಿಂದಲೂ, ಕಮನೀಯವಾದ ಕಾಂತಿಯಿಂದಲೂ, ಸ್ನೇಹದ ಮಳೆಗರೆಯುವ ಸವಿನೋಟದಿಂದಲೂ ಕಣ್ಮನಗಳನ್ನು ಸೂರೆಗೊಳ್ಳುತ್ತಾ–ತನ್ನ ವಿಶಾಲವಾದ ಶ್ಯಾಮಲವಕ್ಷಃಸ್ಥಳದಲ್ಲಿ ವಿರಾಜಿಸುತ್ತಿರುವ ಶ್ರೀದೇವಿಯೊಡನೆ ಶೋಭಿಸುತ್ತಿರುವ ಶ್ರೀಪತಿಯು ಸ್ವರ್ಗಾದಿಲೋಕಗಳಿಗೂ ಶಿರೋಭೂಷಣವಾಗಿರುವ ವೈಕುಂಠಲೋಕಕ್ಕೂ ಭೂಷಣವೋ–ಎಂಬಂತೆ ಬೆಳಗುತ್ತಿದ್ದಾನೆ. (ಶ್ಲೋಕ 35-39)

ವಿಶಾಲವಾದ ನಿತಂಬದಲ್ಲಿ ಪ್ರಕಾಶಿಸುತ್ತಿರುವ ಪೀತಾಂಬರ. ಅದರ ಮೇಲೆ ಥಳ-ಥಳಿಸುತ್ತಿರುವ ರತ್ನಖಚಿತವಾದ ಕಟಿಸೂತ್ರ, ಕಂಠದಲ್ಲಿ ಉಲಿಯುತ್ತಿರುವ ದುಂಬಿಯ ಹಿಂಡುಗಳಿಂದ ದರ್ಶನೀಯವಾದ ವನಮಾಲೆಯ ಸಿರಿ ಮತ್ತು ಮಣಿಕಟ್ಟುಗಳಲ್ಲಿ ಮನೋಹರವಾದ ಕೈಬಳೆಗಳ ಬೆಡಗು. ಒಂದು ಕರಕಮಲವನ್ನು ಗರುಡದೇವರ ಹೆಗಲಿನ ಮೇಲೆ ಇರಿಸಿ ಮತ್ತೊಂದರಿಂದ ಲೀಲಾಕಮಲವನ್ನು ತಿರುಗಿಸುತ್ತಾ ದೇವ-ದೇವನು ದರ್ಶನ ನೀಡುತ್ತಿದ್ದಾನೆ. ಮಿಂಚುಬಳ್ಳಿಯ ಪ್ರಭೆಯನ್ನು ನಾಚಿಸುವ ಆ ಚೆನ್ನಿಗನ ಕೆನ್ನೆಗಳು ಆತನು ಧರಿಸಿದ್ದ ಮಕರಕುಂಡಲಗಳ ಕಾಂತಿಯನ್ನು ಪೋಷಣೆ ಮಾಡುತ್ತಿವೆ. ಮೇಲೆದ್ದಿರುವ ಮನೋಹರವಾದ ಮೂಗು. ಪರಮಸುಂದರ

ವಾದ ಮುಖಾರವಿದು. ತಲೆಯಲ್ಲಿ ಮಣಿಮಯವಾದ ಕಿರೀಟವು ಮೆರೆಯುತ್ತಿದೆ. ನೀಳವಾದ ನಾಲ್ಕು ತೋಳುಗಳ ನಡುವೆ ಕಂಠದಲ್ಲಿ ಅಮೂಲ್ಯವಾದ ಹಾರಗಳೂ–ವಕ್ಷಃಸ್ಥಳದಲ್ಲಿ ಕೌಸ್ತುಭಮಣಿಯೂ ಜಗ-ಜಗಿಸುತ್ತಿವೆ. ಭಗವಂತನ ಶ್ರೀಮೂರ್ತಿಯು ಪರಮಸೌಂದರ್ಯದ ನೆಲೆಮನೆಯಾಗಿ ಶ್ರೀದೇವಿಯ ಸೌಂದರ್ಯದ ಅಭಿಮಾನವನ್ನು ಕರಗಿಸಿಬಿಡುತ್ತಿದೆಯೋ–ಎಂದು ಭಕ್ತರಿಗೆ ಅನ್ನಿಸುವಂತಿದೆ.

ಬ್ರಹ್ಮದೇವರು ಹೇಳುತ್ತಾರೆ :

ಎಲೈ ದೇವತೆಗಳೇ! ಹೀಗೆ ನನಗಾಗಿಯೂ, ಶಿವನಿಗಾಗಿಯೂ ಮತ್ತು ನಿಮಗೋಸ್ಕರವೂ ಅವತಾರಗಳನ್ನು ಮಾಡಿ ದಿವ್ಯರೂಪಗಳನ್ನು ತೋರುವ ಶ್ರೀಹರಿಯನ್ನು ಕಂಡು ಸನಕಾದಿಮುನೀಂದ್ರರು ಆತನಿಗೆ ತಲೆಬಾಗಿ ನಮಸ್ಕಾರಮಾಡಿದರು. ಆತನ ಸೊಬಗು-ಸೌಂದರ್ಯಗಳನ್ನು ಎಷ್ಟೆಷ್ಟು ನೋಡುತ್ತಿದ್ದರೂ ಅವರಿಗೆ ತೃಪ್ತಿಯುಂಟಾಗಲಿಲ್ಲ. ಆ ಮುನಿಗಳು ನಿರಂತರವಾಗಿ ಪರಮಾನಂದದಲ್ಲಿ ಮುಳುಗಿದ್ದ ಶಾಂತ-ಗಂಭೀರ ಮೂರ್ತಿಗಳು. ಆದರೆ ಆ ಪುಂಡರೀಕಾಕ್ಷನ ಚರಣಾವಿಂದಗಳ ಮಕರಂದದೊಡನೆ ಬೆರೆತ, ತುಳಿಸೀಮಂಜರಿಯ ಗಂಧದಿಂದ ಸುವಾಸಿತವಾದ ವಾಯುವು ಮೂಗಿನ ಹೊಳ್ಳೆಗಳ ಮೂಲಕ ಅವರ ಅಂತಃಕರಣವನ್ನು ಪ್ರವೇಶಿಸಿದೊಡನೆಯೇ ಅವರ ದೇಹ-ಮನಸ್ಸುಗಳು ಆನಂದದಿಂದ ಕಲಕಿಹೋದುವು. ಶ್ರೀಭಗವಂತನ ಮುಖವು ನೀಲಕಮಲದಂತೆ ಕಂಗೊಳಿಸುತ್ತಿತ್ತು. ಅತಿಸುಂದರವಾದ ಕೆಳದುಟಿಯಿಂದಲೂ ಮತ್ತು ಮಲ್ಲಿಗೆಯ ಮೊಗ್ಗಿನಂತೆ ಮನೋಹರವಾದ ಮಂದಹಾಸದಿಂದಲೂ ಅದರ ಕಾಂತಿಯು ಮತ್ತೂ ಹೆಚ್ಚುತ್ತಿರಲು ಮುನೀಂದ್ರರು ಅದರ ದರ್ಶನಪಡೆದು ಕೃತಕೃತ್ಯರಾಗಿಬಿಟ್ಟರು. ಅನಂತರ ಪದ್ಮರಾಗಮಣಿಯಂತೆ ಕೆಂಪಗೆ ಹೊಳೆಯುತ್ತಿದ್ದ ಉಗುರುಗಳಿಂದ ಕಂಗೊಳಿಸುತ್ತಿದ್ದ ಆತನ ಚರಣಕಮಲಗಳನ್ನು ಕಂಡು ಅವರು ಅದನ್ನೇ ಧ್ಯಾನಿಸತೊಡಗಿದರು. ಶ್ರೀಭಗವಂತನು ಮಹಾಯೋಗಿಗಳಿಗೆ ಮಾತ್ರವೇ ದರ್ಶನಭಾಗ್ಯವನ್ನು ದಯಪಾಲಿಸುವವನು. ಯೋಗಮಾರ್ಗದ ಮೂಲಕ ಮೋಕ್ಷಪದವನ್ನು ಅರಸುವ ಪುರುಷರಿಗೆ ಧ್ಯಾನಕ್ಕೆ ವಿಷಯನಾಗಿ, ಅತ್ಯಂತ ಆದರಣೀಯನಾಗಿ ಕಣ್ಣುಗಳಿಗೆ ಆನಂದಸುಧೆ

ಯನ್ನು ಉಕ್ಕಿಸುವ ತನ್ನ ದಿವ್ಯಪುರುಷರೂಪವನ್ನು ಪ್ರಕಟಪಡಿಸುವ ಪರಮಪುರುಷನು. ಅನಂತರ ಆ ಮುನೀಂದ್ರರು ಇತರ ಸಾಧನಗಳಿಂದ ಸಿದ್ಧವಾಗದೇ ಇರುವ, ಸ್ವಾಭಾವಿಕವಾದ ಅಷ್ಟಸಿದ್ಧಿಗಳಿಂದ ಸಂಪನ್ನನಾಗಿರುವ ಅಂತಹ ಶ್ರೀಹರಿಯನ್ನು ಸ್ತೋತ್ರಮಾಡತೊಡಗಿದರು :

(ಶ್ಲೋಕ 40-45)

ಯೋಽನ್ತರ್ಹಿತೋ ಹೃದಿ ಗತೋಽಪಿ ದುರಾತ್ಮನಾಂ ತ್ವಂ
ಸೋಽದ್ಯೈವ ನೋ ನಯನಮೂಲಮನನ್ತ ರಾದ್ಧಃ ।
ಯರ್ಹ್ಯೇವ ಕರ್ಣವಿವರೇಣ ಗುಹಾಂ ಗತೋ ನಃ
ಪಿತ್ರಾನುವರ್ಣಿತರಹಾ ಭವದುದ್ಭವೇನ ॥೪೬॥

"ಓ ಅನಂತನೇ! ನೀನು ಸತ್ಪುರುಷರ ಹೃದಯಗಳಲ್ಲಿರುವಂತೆಯೇ ದುಷ್ಟಚಿತ್ತವುಳ್ಳವರ ಹೃದಯಗಳಲ್ಲಿಯೂ ಇದ್ದರೂ ಆ ದುಷ್ಟಚಿತ್ತವುಳ್ಳ ಜನರಿಗೆ ಕಾಣಿಸದೇ ಮರೆಯಾಗಿಯೇ ಇರುತ್ತೀಯೆ. ಅಂತಹ ನೀನು ಈಗ ನಮ್ಮ ಕಣ್ಣೆದುರಿನಲ್ಲಿಯೇ ಪ್ರತ್ಯಕ್ಷವಾಗಿ ಬೆಳಗುತ್ತಿದ್ದೀಯೇ. ಸ್ವಾಮಿ! ನಿನ್ನ ಸುಪುತ್ರರಾದ ನಮ್ಮ ತಂದೆ ಬ್ರಹ್ಮದೇವರು ನಿನ್ನ ರಹಸ್ಯವನ್ನು ನಮಗೆ ಹೇಳಿದ ಸಮಯದಲ್ಲೇ ಕಿವಿದೆರೆಗಳ ಮೂಲಕ ನೀನು ಬುದ್ಧಿಯೊಳಗೆ ಪ್ರವೇಶಿಸಿ ಅಲ್ಲಿ ಬೆಳಗತೊಡಗಿದೆ. ಆದರೆ ನಿನ್ನನ್ನು ಕಣ್ಣೆದುರಿಗೆ ನೋಡುವ ಸೌಭಾಗ್ಯವು ಈಗ ತಾನೇ ನಮಗೆ ಒದಗಿ ಬಂದಿದೆ.

ತಂ ತ್ವಾಂ ವಿದಾಮ ಭಗವನ್ಪರಮಾತ್ಮತತ್ತ್ವಂ
ಸತ್ತ್ವೇನ ಸಮ್ಪ್ರತಿ ರತಿಂ ರಚಯನ್ತಮೇಷಾಮ್ ।
ಯತ್ತೇಽನುತಾಪವಿದಿತೈರ್ದೃಢಭಕ್ತಿಯೋಗೈ-
ರುದ್ಗ್ರನ್ಥಯೋ ಹೃದಿ ವಿದುರ್ಮುನಯೋ ವಿರಾಗಾಃ ॥

ಓ ಭಗವಂತನೇ! ನಿನ್ನನ್ನು ಸಾಕ್ಷಾತ್ ಪರತತ್ತ್ವವೆಂದೇ ನಾವು ಬಲ್ಲೆವು. ಅಂತಹ ನೀನು ಈಗ ನಿನ್ನ ವಿಶುದ್ಧಸತ್ತ್ವಮಯವಾದ ಶ್ರೀಮೂರ್ತಿಯಿಂದ ನಿನ್ನ ಈ ಭಕ್ತರನ್ನು ಆನಂದಗೊಳಿಸುತ್ತಿದ್ದೀಯೆ. ನಿನ್ನ ಈ ಸಗುಣವೂ–ಸಾಕಾರವೂ ಆದ ಮೂರ್ತಿಯನ್ನು ರಾಗ-ದ್ವೇಷರಹಿತ

ರಾದ ಮುನಿಗಳು ನಿನ್ನ ಕೃಪಾದೃಷ್ಟಿಯಿಂದ ದೊರಕಿದ ದೃಢವಾದ ಭಕ್ತಿಯೋಗದ ಮೂಲಕ ತಮ್ಮ ಹೃದಯಗಳಲ್ಲಿ ಪಡೆದುಕೊಳ್ಳುತ್ತಾರೆ.

ನಾತ್ಯನ್ತಿಕಂ ವಿಗಣಯನ್ತ್ಯಪಿ ತೇ ಪ್ರಸಾದಂ
ಕಿನ್ತ್ವನ್ಯದರ್ಪಿತಭಯಂ ಭ್ರುವ ಉನ್ನಯೈಸ್ತೇ ।
ಯೇಽಙ್ಗ ತ್ವದಙ್ಘ್ರಿಶರಣಾ ಭವತಃ ಕಥಾಯಾಃ
ಕೀರ್ತನ್ಯತೀರ್ಥಯಶಸಃ ಕುಶಲಾ ರಸಜ್ಞಾಃ ॥೪೮॥

ಪ್ರಭೋ! ನೀನು–ಕೀರ್ತನೆಮಾಡಲು ಅತ್ಯಂತಯೋಗ್ಯನಾಗಿ, ಸಾಂಸಾರಿಕದುಃಖಗಳನ್ನು ನಿವೃತ್ತಿಮಾಡಲು ನಿರ್ಮಲವಾದ ಕೀರ್ತಿಯುಳ್ಳವನು. ಇಂತಹ ನಿನ್ನ ಚರಣಾರವಿಂದಗಳಲ್ಲಿ ಶರಣಾಗತರಾಗಿ ನಿನ್ನ ಕಥೆಗಳಲ್ಲಿಯೇ ರಸಾನುಭಾವವನ್ನು ಪಡೆಯುವ ಕುಶಲರಾದ ಮಹಾತ್ಮರು ನಿನ್ನ ಪರಮಪ್ರಸಾದವಾದ ಮೋಕ್ಷಪದವಿಯನ್ನು ಕೂಡ ಪರಮವೆಂದು ಎಣಿಸುವುದಿಲ್ಲ. ಹೀಗಿರುವಾಗ ನೀನು ಸ್ವಲ್ಪ ಹುಬ್ಬುಗಂಟುಹಾಕಿಕೊಂಡರೆ ಸಾಕು. ಅದರಿಂದ ಭಯಕ್ಕೆ ಒಳಗಾಗುವ ಇಂದ್ರಪದವಿಯೇ ಮುಂತಾದ ಇತರ ಭೋಗಗಳ ವಿಷಯಗಳನ್ನು ಏಕೆ ಲೆಕ್ಕಿಸಿಯಾರು?

ಕಾಮಂ ಭವಃ ಸ್ವವೃಜಿನೈರ್ನಿರಯೇಷು ನಃಸ್ತಾ-
ಚ್ಚೇತೋಽಲಿವದ್ಯದಿ ನು ತೇ ಪದಯೋ ರಮೇತ ।
ವಾಚಶ್ಚ ನಸ್ತುಲಸಿವದ್ಯದಿ ತೇಽಙ್ಘ್ರಿಶೋಭಾಃ
ಪೂರ್ಯೇತ ತೇ ಗುಣಗಣೈರ್ಯದಿ ಕರ್ಣರನ್ಧ್ರಃ ॥೪೯॥

ಓ ಭಗವಂತ! ನಮ್ಮ ಚಿತ್ತವು ದುಂಬಿಗಳೋಪಾದಿಯಲ್ಲಿ ನಿನ್ನ ಅಡಿದಾವರೆಗಳಲ್ಲೇ ರಮಿಸುತ್ತಿದ್ದರೆ–ಅಂತೆಯೇ ನಮ್ಮ ವಾಣಿಯು ತುಳಸಿಯಂತೆ ನಿನ್ನ ಚರಣಸಂಬಂಧದಿಂದಲೇ ಶೋಭಿಸುತ್ತಿದ್ದರೆ ಮತ್ತು ಹಾಗೆಯೇ ನಮ್ಮ ಕಿವಿಗಳು ನಿನ್ನ ಪುಣ್ಯವಾದ ಕೀರ್ತಿಯ ಸುಧೆಯಿಂದಲೇ ಪರಿಪೂರ್ಣವಾಗಿರುತ್ತಿದ್ದರೆ–ನಮಗೆ ಎಲ್ಲಿದ್ದರೂ ಭಯವಿಲ್ಲ ; ನಮ್ಮ ಪಾಪಗಳ ಕಾರಣದಿಂದ ನರಕವೇ ಮುಂತಾದ ದುರ್ಗತಿಗಳಲ್ಲಿದ್ದರೂ ನಮಗೆ ಚಿಂತೆಯಿಲ್ಲ.

ಪ್ರಾದುಶ್ಚಕರ್ಥ ಯದಿದಂ ಪುರುಹೂತ ರೂಪಂ
ತೇನೇಶ ನಿರ್ವೃತಿಮವಾಪುರಲಂ ದೃಶೋ ನಃ ।

ತಸ್ಮಾ ಇದಂ ಭಗವತೇ ನಮ ಇದ್ವಿಧೇಮ
ಯೋऽನಾತ್ಮನಾಂ ದುರುದಯೋ ಭಗವಾನ್ಪ್ರತೀತಃ ॥೫೦॥

ವಿಶಾಲವಾದ ಕೀರ್ತಿಯುಳ್ಳ ಪರಮಪುರುಷನೇ! ನಮ್ಮ ಮುಂದೆ ನೀನು ಪ್ರಕಟಪಡಿಸಿದ ಈ ಸುಂದರತಮವಾದ ರೂಪವು ಕಣ್ಣುಗಳಿಗೆ ಪರಮಾನಂದವನ್ನು ನೀಡಿವೆಯಪ್ಪಾ. ನಾರಾಯಣ! ಜಿತೇಂದ್ರಿಯರಲ್ಲದೇ ಇರುವ ಜೀವಿಗಳಿಗೆ ಇದು ಪ್ರತ್ಯಕ್ಷವಾಗುವುದು ತುಂಬಾ ಕಷ್ಟ. ಅಂತಹ ದುರ್ಲಭವಾದ ರೂಪವನ್ನು ಇಷ್ಟು ಸುಲಭವಾಗಿ ಮತ್ತು ಸ್ಪಷ್ಟವಾಗಿ ನಮ್ಮ ಕಣ್ಣುಗಳ ಮುಂದೆ ಪ್ರಕಟಗೊಳಿಸಿರುವೆಯಲ್ಲಾ! ಕೃಪಾನಿಧಿಯಾದ ಭಗವಂತನೇ! ನಿನಗೆ ನಮೋ ನಮಃ ".

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ತೃತೀಯಸ್ಕಂಧದ ೧೫ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೧೬ ನೆಯ ಅಧ್ಯಾಯ

ಜಯ-ವಿಜಯರು ವೈಕುಂಠದಿಂದ ಚ್ಯುತರಾದುದು

ಬ್ರಹ್ಮದೇವರು ದೇವತೆಗಳಿಗೆ ಹೇಳುತ್ತಾರೆ :

ಇತಿ ತದ್ಗೃಣತಾಂ ತೇಷಾಂ ಮುನೀನಾಂ ಯೋಗಧರ್ಮಿಣಾಮ್ ।
ಪ್ರತಿನನ್ದ್ಯ ಜಗಾದೇದಂ ವಿಕುಣ್ಠನಿಲಯೋ ವಿಭುಃ ॥೧॥

ಯೋಗನಿಷ್ಠರಾದ ಆ ಮುನೀಂದ್ರರು ತನ್ನನ್ನು ಹೀಗೆ ಸ್ತುತಿಸಲು ವೈಕುಂಠಪತಿಯಾದ ಪರಮಾತ್ಮನು ಅವರನ್ನು ಅಭಿನಂದಿಸುತ್ತಾ ಹೇಳಿದನು:

"ಎಲೈ ಮುನಿಗಳೇ! ಈ ಜಯ-ವಿಜಯರೆಂಬುವರು ನನ್ನ ಪರಿವಾರಕ್ಕೆ ಸೇರಿದವರು. ಇವರು ನನ್ನನ್ನೂ ಅನಾದರಿಸಿ ನಿಮಗೆ ಬಹಳ ದೊಡ್ಡ ಅಪರಾಧವನ್ನೇ ಎಸಗಿದ್ದಾರೆ. ನೀವು ನನಗೆ ಏಕಾಂತಭಕ್ತರು. ಆದ್ದ ರಿಂದ ಹೀಗೆ ನನಗೇ ಅಪಚಾರವನ್ನು ಮಾಡಿದ್ದಕ್ಕಾಗಿ ಇವರಿಗೆ ನೀವು ದಂಡನೆ ಯನ್ನು ಮಾಡಿರುವುದು ನನಗೆ ಸಮ್ಮತವೇ ಆಗಿದೆ. ಬ್ರಾಹ್ಮಣರು ನನಗೆ ಪರಮಾರಾಧ್ಯರು ; ದೇವರಿಗೆ ಸಮಾನರು. ನನ್ನ ಅನುಚರರಾದ ಇವರು

ನನಗೆ ಆರಾಧ್ಯರಾಗಿರುವ ನಿಮಗೆ ಮಾಡಿರುವ ತಿರಸ್ಕಾರವನ್ನು–ನಾನು ನನಗೇ ಆಗಿರುವ ತಿರಸ್ಕಾರವೆಂದು–ತಿಳಿಯುತ್ತೇನೆ. ಆದ್ದರಿಂದ ನಾನು ನಿಮ್ಮಿಂದ ಕ್ಷಮೆಯನ್ನು ಬೇಡುತ್ತೇನೆ. ಸೇವಕರು ಅಪರಾಧವನ್ನು ಮಾಡಿದರೆ ಜನರು ಅದಕ್ಕೆ ಅವರ ಯಜಮಾನರ ಹೆಸರನ್ನೇ ಹೇಳುತ್ತಾರೆ. ಚರ್ಮರೋಗವು ತೊಗಲನ್ನು ಕೆಡಿಸುವಂತೆ–ಸೇವಕರು ಮಾಡುವ ಅಪರಾಧವು ಯಜಮಾನರ ಕೀರ್ತಿಯನ್ನು ಕಳಂಕಿತಗೊಳಿಸುತ್ತದೆ. ಜನರು ನನ್ನನ್ನು 'ವೈಕುಂಠ' ಎಂದು ಏತಕ್ಕೆ ಕರೆಯುತ್ತಾರೆ? ಎಂದರೆ : ನನ್ನ ನಿರ್ಮಲವಾದ ಕೀರ್ತಿಸುಧೆಯಲ್ಲಿ ಸ್ನಾನಮಾಡಿದರೆ ಚಂಡಾಲಪರ್ಯಂತ ವಾದ ಇಡೀ ಜಗತ್ತೂ ಪವಿತ್ರವಾಗಿಬಿಡುವುದರಿಂದ. ಈ ಪವಿತ್ರವಾದ ಕೀರ್ತಿಯು ನನಗೆ ಬಂದಿರುವುದು ನಿಮ್ಮಿಂದ. ಆದ್ದರಿಂದ ನಿಮಗೆ ಪ್ರತಿಕೂಲ ವಾಗಿ ನಡೆದುಕೊಂಡರೆ ಅದು ನನ್ನ ಭುಜವೇ ಆಗಿದ್ದರೂ ಅದನ್ನು ನಾನು ಒಡನೆಯೇ ಕತ್ತರಿಸಿಹಾಕಿಬಿಡುತ್ತೇನೆ. ನಿಮ್ಮ ಸೇವೆಯನ್ನು ಮಾಡಿದ್ದರಿಂದಲೇ ನನ್ನ ಪಾದಧೂಳಿಗೆ ಎಲ್ಲ ಪಾಪಗಳನ್ನೂ ಒಡನೆಯೇ ನಾಶಪಡಿಸುವ ಪಾವಿತ್ರ್ಯವುಂಟಾಗಿದೆ. ಯಾರ ಲೇಶಮಾತ್ರವಾದ ಕೃಪಾಕಟಾಕ್ಷಕ್ಕಾಗಿ ಬ್ರಹ್ಮಾದಿ ದೇವತೆಗಳೂ ಬಗೆ-ಬಗೆಯ ನಿಯಮಗಳನ್ನೂ ಮತ್ತು ವ್ರತಗಳನ್ನೂ ಪಾಲನೆಮಾಡುತ್ತಾರೆಯೋ–ಅಂತಹ ಲಕ್ಷ್ಮೀದೇವಿಯು, ನಾನು ಉದಾಸೀನ ಮಾಡಿದರೂ ನನ್ನನ್ನು ಒಂದು ಕ್ಷಣಕಾಲವೂ ಬಿಡದೇ ಇರುವುದಕ್ಕೂ, ಲೋಕೋತ್ತರವಾದ ಶೀಲಸ್ವಭಾವವು ನನಗೆ ಸಿಕ್ಕಿರುವುದಕ್ಕೂ ಆ ನಿಮ್ಮ ಸೇವೆಯೇ ಕಾರಣವು. ತಮ್ಮ ಇಡೀ ಕರ್ಮಫಲವನ್ನು ನನಗೆ ಸಮರ್ಪಣೆ ಮಾಡಿ ಸದಾ ಸಂತುಷ್ಟರಾಗಿರುವ ನಿಷ್ಕಾಮರಾದ ಬ್ರಾಹ್ಮಣರು ಪ್ರತಿಯೊಂದು ತುತ್ತಿನಲ್ಲಿಯೂ ತೃಪ್ತಿಯನ್ನು ಅನುಭವಿಸುತ್ತಾ, ತುಪ್ಪದಲ್ಲಿ ನೆನೆದಿರುವ ಬಗೆ-ಬಗೆಯ ಪಕ್ವಾನ್ನ-ಭಕ್ಷಣಗಳನ್ನು ತಿನ್ನುತ್ತಿರುವಾಗ ಅವರ ಬಾಯಿಯ ಮೂಲಕ ನಾನೇ ಅತ್ಯಂತ ತೃಪ್ತಿಯನ್ನು ಅನುಭವಿಸುತ್ತೇನೆ. ಯಜ್ಞದಲ್ಲಿ ಅಗ್ನಿದೇವರ ಮುಖದಲ್ಲಿ ಯಜಮಾನನು ಸಮರ್ಪಿಸುವ ಆಹುತಿಯನ್ನು ಸ್ವೀಕರಿಸುವುದರಿಂದಲೂ ನನಗೆ ಅಷ್ಟು ಹೆಚ್ಚು ತೃಪ್ತಿಯುಂಟಾಗುವುದಿಲ್ಲ. ಯೋಗಮಾಯೆಯ ಅಖಂಡವೂ–ಅನುಪಮವೂ ಆದ ಐಶ್ವರ್ಯವು ನನಗೆ ಅಧೀನವಾಗಿದೆ. ನನ್ನ ಪಾದೋದಕವಾದ ಗಂಗೆಯು ಚಂದ್ರಶೇಖರ

ನಾದ, ಭಗವಂತನಾದ ಶಿವನ ಸಹಿತವಾಗಿ ಸಮಸ್ತಲೋಕಗಳನ್ನೂ ಪವಿತ್ರಗೊಳಿಸುತ್ತದೆ. ಇಂತಹ ಪರಮಪವಿತ್ರನೂ-ಪರಮೇಶ್ವರನೂ ಆಗಿದ್ದರೂ ನಾನು ಯಾರ ಪವಿತ್ರವಾದ ಪಾದರಜಸ್ಸನ್ನು ನನ್ನ ಕಿರೀಟದಲ್ಲಿ ಧರಿಸುತ್ತೇನೆಯೋ-ಅಂತಹ ಬ್ರಾಹ್ಮಣರ ಕರ್ಮವನ್ನು ಯಾವನು ತಾನೇ ಸಹಿಸುವುದಿಲ್ಲ? ಬ್ರಾಹ್ಮಣರು, ಹಾಲುಕರೆಯುವ ಹಸುಗಳು ಮತ್ತು ಅನಾಥಪ್ರಾಣಿಗಳು-ಇವು ನನ್ನ ಶರೀಗಳೇ ಆಗಿವೆ. ಪಾಪಗಳಿಂದ ವಿವೇಕ ದೃಷ್ಟಿಯನ್ನು ಕಳೆದುಕೊಂಡು ಯಾರು ಈ ಮೂವರನ್ನೂ ನನ್ನಿಂದ ಬೇರೆ ಯೆಂದು ತಿಳಿಯುವರೋ-ಅಂತಹವರು ಯಮರಾಜನಿಗೆ ಅತಿಥಿಗಳಾಗುವರು. ಕಾಳಸರ್ಪದಂತೆ ಕ್ರೂರಿಗಳಾದ ಯಮರಾಜನ ದೂತರೆಂಬ ಹದ್ದುಗಳು ಅತ್ಯಂತಕ್ರೋಧದಿಂದ ಅಂತಹವರನ್ನು ತಮ್ಮ ಕೊಕ್ಕುಗಳಿಂದ ಕುಕ್ಕಿಹಾಕುತ್ತವೆ. ಬ್ರಾಹ್ಮಣರು ತಿರಸ್ಕಾರಪೂರ್ವಕವಾಗಿ ಕಟುವಾಗಿ ನುಡಿದರೂ ಅವರಲ್ಲಿ-'ಪರಮಾತ್ಮನಾದ ನಾನೇ ಈ ಬ್ರಾಹ್ಮಣರು' -ಎಂಬ ಭಾವನೆಯನ್ನಿಟ್ಟು, ಪ್ರಸನ್ನವಾದ ಚಿತ್ತದಿಂದ ಮತ್ತು ಅಮೃತಮಯವಾದ ಕಿರುನಗೆಯಿಂದ ಕೂಡಿದ ಪ್ರಸನ್ನವಾದ ಮುಖದಿಂದ ಯಾರು ಅವರನ್ನು ಆದರಿಸುತ್ತಾರೋ ಮತ್ತು ಮುನಿಸಿಕೊಂಡ ತಂದೆಯನ್ನು ಪುತ್ರನೂ ಮತ್ತು ನಿಮ್ಮನ್ನು ನಾನು ಭಾವಿಸುವಂತೆಯೇ ಪ್ರೇಮಪೂರ್ಣವಾದ ಮಾತುಗಳಿಂದ ಪ್ರಾರ್ಥನೆಮಾಡುತ್ತಾ ಅವರನ್ನು ಶಾಂತಗೊಳಿಸುತ್ತಾರೆಯೋ -ಅಂತಹವರು ನನ್ನನ್ನು ವಶಪಡಿಸಿಕೊಳ್ಳುವರು. ನನ್ನ ಈ ಸೇವಕರು ನನ್ನ ಅಭಿಪ್ರಾಯವನ್ನು ಅರಿಯದೆಯೇ ನಿಮಗೆ ಅವಮಾನಮಾಡಿದ್ದಾರೆ. ಆದ್ದರಿಂದ ನೀವು ನನ್ನ ಒತ್ತಾಯಪೂರ್ವಕವಾದ ಪ್ರಾರ್ಥನೆಯಂತೆ ಈ ಜಯ-ವಿಜಯರ ಲೋಕ ಭ್ರಂಶದ ಕಾಲವು ಶೀಘ್ರವೇ ಮುಗಿದುಹೋಗಿ, ಅವರು ತಮ್ಮ ಅಪರಾಧಕ್ಕೆ ಅನುರೂಪವಾಗಿ ಅಧಮಗತಿಯನ್ನು ಹೊಂದಿ ಶೀಘ್ರವೇ ನನ್ನ ಬಳಿಗೆ ಹಿಂದಿರುಗಲಿ-ಎಂದು ವಿಧಾನಮಾಡುವಷ್ಟು ಮಾತ್ರ ಕರುಣೆಯನ್ನು ತೋರಬೇಕು". (ಶ್ಲೋಕ 2-12)

ಬ್ರಹ್ಮದೇವರು ಹೇಳುತ್ತಾರೆ :

ಅಥ ತಸ್ಯೋಶತೀಂ ದೇವೀಮೃಷಿಕುಲ್ಯಾಂ ಸರಸ್ವತೀಮ್ ।
ನಾಸ್ವಾದ್ಯ ಮನ್ಯುದಷ್ಟಾನಾಂ ತೇಷಾಮಾತ್ಮಾಪ್ಯತೃಪ್ಯತ ॥೧೩॥

ಎಲೈ ದೇವತೆಗಳೇ! ಸನಕಾದಿಮುನಿಗಳು ಕ್ರೋಧವೆಂಬ ಸರ್ಪದಿಂದ ಕಚ್ಚಲ್ಪಟ್ಟಿದ್ದರು. ಆದರೂ ಅವರ ಚಿತ್ತಕ್ಕೆ ಅಂತಃಕರಣವನ್ನು ಪ್ರಕಾಶಪಡಿಸುವ ಭಗವಂತನ ಮಂತ್ರಮಯವಾದ ಮಧುರವಾದ ವಾಣಿಯನ್ನು ಎಷ್ಟು ಕೇಳಿದರೂ ತೃಪ್ತಿಯಾಗಲಿಲ್ಲ.

ಶ್ರೀಭಗವಂತನ ವಾಣಿಯು ಅತ್ಯಂತ ಸತ್ಯವೂ–ಸುಮನೋಹರವೂ ಆಗಿತ್ತು. ಕಡಿಮೆ ಅಕ್ಷರಗಳಿಂದ ಕೂಡಿತ್ತು. ಆದರೂ ಅದು ಎಷ್ಟು ಅರ್ಥ ಗರ್ಭಿತವೂ, ಸಾರಭೂತವೂ, ಅರ್ಥಮಾಡಿಕೊಳ್ಳಲು ಕಷ್ಟವೂ, ಗಂಭಿರವೂ ಆಗಿತ್ತೆಂದರೆ–ಬಹಳ ಸಾವಧಾನವಾಗಿ ಕೇಳಿ ವಿಚಾರಮಾಡಿದರೂ ಭಗ ವಂತನು ಏನು ಮಾಡಲು ಬಯಸುತ್ತಿದ್ದಾನೆ ಎಂಬುದೇ ತಿಳಿಯಬರುತ್ತಿರ ಲಿಲ್ಲ. ಶ್ರೀಭಗವಂತನ ಈ ಅದ್ಭುತವಾದ ಔದಾರ್ಯವನ್ನು ಕಂಡು ಅವರು ಬಹಳವಾಗಿ ಆನಂದಭರಿತರಾದರು. ಅವರ ಅಂಗಾಂಗಗಳೆಲ್ಲವೂ ರೋಮಾಂಚಿತವಾದುವು. ಯೋಗಮಾಯೆಯ ಪ್ರಭಾವದಿಂದ ತನ್ನ ಪರಮೈಶ್ವರ್ಯದ ಪ್ರಭಾವವನ್ನು ಪ್ರಕಟಪಡಿಸುವಂತಹ ಪ್ರಭುವಿನ ಮುಂದೆ ಮತ್ತೆ ಕೈಜೋಡಿಸಿಕೊಂಡು ಅವರು ಹೀಗೆ ವಿಜ್ಞಾಪಿಸಿದರು :

(ಶ್ಲೋಕ 13-15)

ನ ವಯಂ ಭಗವನ್ವಿದ್ಮಸ್ತವ ದೇವ ಚಿಕೀರ್ಷಿತಮ್ ।
ಕೃತೋ ಮೇಽನುಗ್ರಹಶ್ಚೇತಿ ಯದಧ್ಯಕ್ಷಃ ಪ್ರಭಾಷಸೇ ॥೧೬॥

"ಎಲೈ ಸ್ವಯಂಪ್ರಕಾಶನಾದ ಪರಮಾತ್ಮನೇ! ನೀನು ಸರ್ವೇಶ್ವರನು ; ಸಕಲಲೋಕಗಳಿಗೂ ಅಧ್ಯಕ್ಷನು. ಹಾಗಿದ್ದರೂ ನಮ್ಮನ್ನು ಕುರಿತು–'ನೀವು ನನ್ನಲ್ಲಿ ತುಂಬಾ ಅನುಗ್ರಹಮಾಡಿದಿರಿ'–ಎಂದು ಹೇಳಿದೆಯಲ್ಲಾ–ಇದರ ಅಭಿಪ್ರಾಯವೇನೋ ನಮಗೆ ತಿಳಿಯದಾಗಿದೆ.

ಬ್ರಹ್ಮಣ್ಯಸ್ಯ ಪರಂ ದೈವಂ ಬ್ರಾಹ್ಮಣಾಃ ಕಿಲ ತೇ ಪ್ರಭೋ ।
ವಿಪ್ರಾಣಾಂ ದೇವದೇವಾನಾಂ ಭಗವಾನಾತ್ಮದೈವತಮ್ ॥೧೭॥

ಎಲೈ ಪ್ರಭುವೇ! ನೀನು ಬ್ರಾಹ್ಮಣರಿಗೂ ಮತ್ತು ದೇವದೇವರಾದ ಬ್ರಹ್ಮಾದಿಗಳಿಗೂ ಆತ್ಮದೇವತೆಯಾಗಿ ಪರಮಾರಾಧ್ಯನಾಗಿರುವವನು. ಬ್ರಾಹ್ಮಣರಿಗೆ ಪರಮಹಿತವನ್ನು ಆಚರಿಸಿ ಪರಮೋಪಕಾರಮಾಡುವವನು.

ಇಂತಹ ನೀನು– 'ಬ್ರಾಹ್ಮಣರೇ ನನಗೆ ಪರದೈವ'–ಎಂದು ಹೇಳಿರುವುದು ಎಂತಹ ವಿಡಂಬನೆ! ಆದರೆ ಜನರು ಬ್ರಾಹ್ಮಣರನ್ನು ಗೌರವಿಸಬೇಕು–ಎಂಬ ಆದರ್ಶವನ್ನು ತೋರಲು ಲೋಕಮರ್ಯಾದೆಗಾಗಿ ಭಗವಂತನಾದ ನೀನು ಹಾಗೆ ಹೇಳಿದ್ದೀಯೆಂದು ಭಾವಿಸುತ್ತೇವೆ.

ತ್ವತ್ತಃ ಸನಾತನೋ ಧರ್ಮೋ ರಕ್ಷ್ಯತೇ ತನುಭಿಸ್ತವ ।
ಧರ್ಮಸ್ಯ ಪರಮೋ ಗುಹ್ಯೋ ನಿರ್ವಿಕಾರೋ ಭವಾನ್ಮತಃ ॥೧೮॥

ಸನಾತನಧರ್ಮವು ನಿನ್ನಿಂದಲೇ ಉಂಟಾದುದು. ಹಲವಾರು ಅವತಾರಗಳನ್ನೆತ್ತಿ ನಿನ್ನ ಶ್ರೀಮೂರ್ತಿಗಳ ಮೂಲಕ ಧರ್ಮಸೇತುವನ್ನು ಸಂರಕ್ಷಿಸುವವನೂ ನೀನೇ. ನಿರ್ವಿಕಾರಸ್ವರೂಪನೂ, ಆ ಧರ್ಮದ ಪರಮರಹಸ್ಯವೂ ನೀನೇ ಆಗಿದ್ದೀಯೆ–ಎಂದು ಶಾಸ್ತ್ರಗಳು ಸಾರುತ್ತವೆ.

ತರನ್ತಿ ಹ್ಯಞ್ಜಸಾ ಮೃತ್ಯುಂ ನಿವೃತ್ತಾ ಯದನುಗ್ರಹಾತ್ ।
ಯೋಗಿನಃ ಸ ಭವಾನ್ಕಿಂಸ್ವಿದನುಗೃಹ್ಯೇತ ಯತ್ಪರೈಃ ॥೧೯॥

ನಿವೃತ್ತಿಧರ್ಮವನ್ನು ಸಾಧಿಸುವ ಯೋಗಿಗಳು ನಿನ್ನ ಅನುಗ್ರಹದಿಂದಲೇ ಮೃತ್ಯುರೂಪವಾದ ಸಂಸಾರಸಾಗರವನ್ನು ಸಹಜವಾಗಿ ದಾಟಿ ದಡ ಕಾಣುತ್ತಾರೆ. ಹೀಗಿರುವಾಗ ನಿನಗೆ ಇತರರು ಕೃಪೆಮಾಡುವುದು ಎಂದರೇನು?

ಯಂ ವೈ ವಿಭೂತಿರುಪಯಾತ್ಯನುವೇಲಮನ್ಯೈ-
ರರ್ಥಾರ್ಥಿಭಿಃ ಸ್ವಶಿರಸಾ ಧೃತಪಾದರೇಣುಃ ।
ಧನ್ಯಾರ್ಪಿತಾಙ್ಘ್ರಿತುಲಸೀನವದಾಮಧಾಮ್ನೋ
ಲೋಕಂ ಮಧುವ್ರತಪತೇರಿವ ಕಾಮಯಾನಾ ॥೨೦॥

ಐಶ್ವರ್ಯವೇ ಮುಂತಾದ ಪ್ರಯೋಜನಕ್ಕಾಗಿ ಉಪಸನೆಮಾಡುವ ಅರ್ಥಾರ್ಥಿಗಳಾದ ಭಕ್ತರು ಶ್ರೀಲಕ್ಷ್ಮೀದೇವಿಯ ಪಾದಧೂಳಿಯನ್ನು ತಮ್ಮ ಶಿರಸ್ಸಿನಲ್ಲಿ ಅಲಂಕರಿಸಿಕೊಳ್ಳುತ್ತಾರೆ. ಆದರೆ ಆ ಶ್ರೀದೇವಿಯೇ ನಿರಂತವಾಗಿ ನಿನ್ನ ಸೇವೆಯಲ್ಲಿ ಆಸಕ್ತಳಾಗಿರುತ್ತಾಳೆ. ಭಾಗ್ಯಶಾಲಿಗಳಾದ ಭಕ್ತರು ನಿನ್ನ ಪಾದಾರವಿಂದಗಳಲ್ಲಿ ಸಮರ್ಪಣೆಮಾಡುವ ಹೊಸ-ಹೊಸ ತುಳಸೀಮಾಲಿಕೆಗಳ ಮೇಲೆ ಝೇಂಕರಿಸುತ್ತಿರುವ ದುಂಬಿಗಳಂತೆ–ಆಕೆಯೂ ಕೂಡ ನಿನ್ನ

ಪಾದಪದ್ಮಗಳನ್ನೇ ತನ್ನ ನಿವಾಸಸ್ಥಾನವನ್ನಾಗಿ ಮಾಡಿಕೊಳ್ಳಲು ಬಯಸು ತ್ತಾಳೆ. ಸವತಿಯಾಗಿರುವ ತುಳಸೀದೇವಿಗೆ ಒದಗಿದ ಸೌಭಾಗ್ಯವು ತನಗೂ ಬರಲಿ–ಎಂದು ಆಕೆಯಂತೆ ತಾನೂ ನಿನ್ನ ಶ್ರೀಚರಣಗಳಲ್ಲೇ ಇದ್ದು ಅವುಗಳನ್ನು ಸೇವಿಸಲು ಇಷ್ಟಪಡುತ್ತಾಳೆ.

ಯಸ್ತಾಂ ವಿವಿಕ್ತಚರಿತೈರನುವರ್ತಮಾನಾಂ
ನಾತ್ಯಾದ್ರಿಯತ್ಪರಮಭಾಗತಪ್ರಸಙ್ಗಃ ।
ಸ ತ್ವಂ ದ್ವಿಜಾನುಪಥಪುಣ್ಯರಜಃಪುನೀತಃ
ಶ್ರೀವತ್ಸಲಕ್ಷ್ಮ ಕಿಮಗಾ ಭಗಭಾಜನಸ್ತ್ವಮ್ ॥೨೦॥

ಭಜಿಸಲು ಯೋಗ್ಯವಾದ ಸಮಸ್ತಗುಣಗಳಿಗೂ ಆಶ್ರಯನು ನೀನು. ಹೀಗೆ ಏಕಾಗ್ರವಾದ ಕೃತಿಗಳಿಂದ ನಿನ್ನ ಸೇವೆಯಲ್ಲಿ ನಿರಂತರವಾಗಿ ನಿರತಳಾಗಿರುವ ಆ ಲಕ್ಷ್ಮೀದೇವಿಯನ್ನೂ ಹೆಚ್ಚಾಗಿ ಆದರಿಸದೇ ನಿನ್ನ ಭಕ್ತರ ಮೇಲೆಯೇ ವಿಶೇಷವಾದ ಪ್ರೀತಿಯನ್ನು ತೋರಿಸುತ್ತೀಯೆ. ಹೀಗಿರುವಾಗ ಎಲ್ಲೆಲ್ಲಿಯೋ ಸಂಚರಿಸುವ ಬ್ರಾಹ್ಮಣರ ಪಾದಗಳಿಗೆ ತಗುಲಿದ ಪುಣ್ಯವಾದ ಮಾರ್ಗದ ಧೂಳಿಯಾಗಲೀ, ಶ್ರೀವತ್ಸಚಿಹ್ನೆಯಾಗಲೀ ನಿನ್ನನ್ನು ಪವಿತ್ರ ಗೊಳಿಸಿಯಾವೇ? ಅವುಗಳಿಂದ ನಿನ್ನ ಕಾಂತಿಯು ಹೆಚ್ಚೀತೇ?

ಧರ್ಮಸ್ಯ ತೇ ಭಗವತಸ್ತ್ರಿಯುಗ ತ್ರಿಭಿಃ ಸ್ವೈಃ
ಪದ್ಭಿಶ್ಚರಾಚರಮಿದಂ ದ್ವಿಜದೇವತಾರ್ಥಮ್ ।
ನೂನಂ ಭೃತಂ ತದಭಿಘಾತಿ ರಜಸ್ತಮಶ್ಚ
ಸತ್ತ್ವೇನ ನೋ ವರದಯಾ ತನುವಾ ನಿರಸ್ಯ ॥೨೧॥

ಓ ಭಗವಂತನೇ! ನೀನು ಸಾಕ್ಷಾತ್ ಧರ್ಮಸ್ವರೂಪಿಯು. ತ್ರಿಯುಗೀನಾರಾಯಣನು. (ಸತ್ಯಯುಗ-ತ್ರೇತಾಯುಗ-ದ್ವಾಪರಯುಗ ಗಳೆಂಬ ಮೂರು ಯುಗಗಳಲ್ಲೂ ಪ್ರತ್ಯಕ್ಷವಾಗಿ ಇರುವವನು). ತಪಸ್ಸು, ಶೌಚ, ಮತ್ತು ದಾನಗಳೆಂಬ ಮೂರು ಚರಣಗಳಿಂದ ದೇವತೆಗಳ ಮತ್ತು ಬ್ರಾಹ್ಮಣರ ಹಿತಕ್ಕಾಗಿ ಚರಾಚರಜಗತ್ತನ್ನು ರಕ್ಷಿಸುತ್ತಿರುವವನು. ಶುದ್ಧ ಸತ್ತ್ವಮಯವೂ–ವರಪ್ರದವೂ ಆದ ನಿನ್ನ ಶ್ರೀಮೂರ್ತಿಯಿಂದ ನಮ್ಮಲ್ಲಿರುವ ಧರ್ಮ ವಿರೋಧಿಗಳಾದ ರಜೋಗುಣ-ತಮೋಗುಣಗಳನ್ನು ದೂರಮಾಡು ಸ್ವಾಮಿ!

ನ ತ್ವಂ ದ್ವಿಜೋತ್ತಮಕುಲಂ ಯದಿಹಾತ್ಮಗೋಪಂ
ಗೋಪ್ತಾ ವೃಷಃ ಸ್ವರ್ಹಣೇನ ಸಸೂನೃತೇನ ।
ತರ್ಹ್ಯೇವ ನಂಕ್ಷ್ಯತಿ ಶಿವಸ್ತವ ದೇವ ಪನ್ಥಾ
ಲೋಕೋಽಗ್ರಹೀಷ್ಯದೃಷಭಸ್ಯ ಹಿ ತತ್ಪ್ರಮಾಣಮ್ ॥

ದೇವ! ಈ ಬ್ರಾಹ್ಮಣೋತ್ತಮರ ಕುಲವನ್ನು ನೀನು ಅವಶ್ಯವಾಗಿ ರಕ್ಷಿಸಬೇಕು. ನೀನು ಸಾಕ್ಷಾತ್ ಧರ್ಮರೂಪಿಯೇ ಆಗಿದ್ದರೂ, ನಿನ್ನ ಸುಮಧುರವಾಣಿಯಿಂದಲೂ ಮತ್ತು ಪೂಜಾದಿಗಳಿಂದಲೂ ಈ ಉತ್ತಮವಾದ ಕುಲವನ್ನು ರಕ್ಷಿಸದೇ ಇದ್ದರೆ, ನೀನು ನಿಯತಮಾಡಿರುವ ಮಂಗಳಕರವಾದ ಮಾರ್ಗವು ನಷ್ಟವಾಗಿಬಿಡುವುದು. ಏಕೆಂದರೆ : ಶ್ರೇಷ್ಠವಾದ ಪುರುಷರು ಯಾವುದನ್ನು ಆಚರಿಸುತ್ತಾರೆಯೋ–ಅದನ್ನೇ ಜನರು ಪ್ರಮಾಣವೆಂದು ಭಾವಿಸಿ ಅನುಸರಿಸುತ್ತಾರೆ.*

ತತ್ತೇಽನಭೀಷ್ಟಮಿವ ಸತ್ತ್ವನಿಧೇರ್ವಿಧಿತ್ಸೋಃ
ಕ್ಷೇಮಂ ಜನಾಯ ನಿಜಶಕ್ತಿಭಿರುದ್ಧೃತಾರೇಃ ।
ನೈತಾವತಾ ತ್ರ್ಯಧಿಪತೇರ್ಬತ ವಿಶ್ವಭರ್ತು-
ಸ್ತೇಜಃ ಕ್ಷತಂ ತ್ವವನತಸ್ಯ ಸ ತೇ ವಿನೋದಃ ॥೨೪॥

ಪ್ರಭೋ! ನೀನು ಸತ್ತ್ವಗುಣದ ಗಣಿಯಾಗಿ ಸಮಸ್ತಜೀವಿಗಳಿಗೆ ಕಲ್ಯಾಣವನ್ನುಂಟುಮಾಡುವುದರಲ್ಲಿ ತತ್ಪರನಾಗಿದ್ದೀಯೆ. ಧರ್ಮಕ್ಕೆ ದ್ರೋಹಿಗಳಾದವರನ್ನು ನಿನ್ನ ಶಕ್ತಿ ಮತ್ತು ವಿಭೂತಿರೂಪಿಗಳಾಗಿರುವ ರಾಜರೇ ಮುಂತಾದವರ ಮೂಲಕ ಸಂಹಾರಮಾಡಿಸುತ್ತೀಯೆ. ವೇದಮಾರ್ಗವು ನಾಶಹೊಂದುವುದು ನಿನಗೆ ಎಳ್ಳಷ್ಟೂ ಇಷ್ಟವಿಲ್ಲ. ನೀನು

---

* ಹೋಲಿಕೆ :- "ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ । ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ ಯದಿ ಹ್ಯಹಂ ನ ವರ್ತೇಯಂ ಚಾತುಕರ್ಮಣ್ಯತಂದ್ರಿತಃ। ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ ॥ ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮಚೇದಹಮ್ । ಸಙ್ಕರಸ್ಯ ಚ ಕರ್ತಾಸ್ಯಾಮುಪಹನ್ಯಾಮಿಮಾಃಪ್ರಜಾಃ ॥ ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ । ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥"
(ಶ್ರೀಗೀತಾ) (ಶ್ಲೋಕ ೨೩)

ಮೂರು ಲೋಕಗಳ ಒಡೆಯನೂ–ಜಗದ್ರಕ್ಷಕನೂ ಆಗಿದ್ದರೂ ಬ್ರಾಹ್ಮಣರ ವಿಷಯದಲ್ಲಿ ಎಷ್ಟು ವಿನಯದಿಂದ ನಡೆದುಕೊಳ್ಳುತ್ತಿದ್ದೀಯೆ! ಆದರೆ ಇದರಿಂದ ನಿನ್ನ ತೇಜಸ್ಸಿಗೆ ಹಾನಿಯಿಲ್ಲ. ಏಕೆಂದರೆ : ಇದು ನಿನ್ನ ಲೀಲಾವಿನೋದವಷ್ಟೇ!

ಯಂ ವಾನಯೋರ್ದಮಮಧೀಶ ಭವಾನ್ವಿಧತ್ತೇ
ವೃತ್ತಿಂ ನು ವಾ ತದನುಮನ್ಮಹಿ ನಿರ್ವ್ಯಲೀಕಮ್ ।
ಅಸ್ಮಾಸು ವಾ ಯ ಉಚಿತೋ ಧ್ರಿಯತಾಂ ಸ ದಣ್ಡೋ
ಯೇಽನಾಗಸೌ ವಯಮಯುಂಕ್ಷ್ಮಹಿ ಕಿಲ್ಬಿಷೇಣ ॥೨೫॥

ಸರ್ವೇಶ್ವರನೇ! ನೀನು ಈ ಜಯ-ವಿಜಯರಿಗೆ ಉಚಿತವೆನಿಸಿದ ಶಿಕ್ಷೆಯನ್ನು ಕೊಡಬಹುದು ಅಥವಾ ಪುರಸ್ಕಾರರೂಪವಾಗಿ ಅವರ ವೃತ್ತಿಯನ್ನು ವೃದ್ಧಿಪಡಿಸಬಹುದು. ನೀನು ಏನು ಮಾಡಿದರೂ ಅದು ನಮಗೆ ಸಮ್ಮತವೇ. ಅಥವಾ ನಿನ್ನ ನಿರಾಪರಾಧಿಗಳಾದ ಅನುಚರರಿಗೆ ಶಾಪಕೊಟ್ಟಿದ್ದಕ್ಕಾಗಿ ನೀನು ನಮಗೇ ತಕ್ಕ ಶಿಕ್ಷೆಯನ್ನು ವಿಧಿಸಬಹುದು. ಅದಕ್ಕೂ ನಮ್ಮ ಸಂತೋಷಪೂರ್ವಕವಾದ ಒಪ್ಪಿಗೆಯನ್ನು ಅರಿಕೆಮಾಡಿಕೊಳ್ಳುತ್ತಿದ್ದೇವೆ."

ಏತೌ ಸುತೇತರಗತಿಂ ಪ್ರತಿಪದ್ಯ ಸದ್ಯಃ
ಸಂರಮ್ಭಸಮ್ಭೃತ ಸಮಾಧ್ಯನುಬದ್ಧಯೋಗೌ ।
ಭೂಯಃ ಸಕಾಶಮುಪಯಾಸ್ಯತ ಆಶು ಯೋ ವಃ
ಶಾಪೋ ಮಯೈವ ನಿಮಿತಸ್ತದವೈತ ವಿಪ್ರಾಃ ॥೨೬॥

ಹೀಗೆ ವಿಜ್ಞಾಪಿಸಿದ ಮುನೀಂದ್ರರಿಗೆ ಶ್ರೀಹರಿಯು–"ಎಲೈ ಬ್ರಾಹ್ಮಣೋತ್ತಮರೇ! ನೀವು ಇವರಿಗೆ ಕೊಟ್ಟಿರುವ ಶಾಪವು ನನ್ನ ಪ್ರೇರಣೆಯಿಂದಲೇ ಆಗಿದೆಯೆಂದು ತಿಳಿಯಿರಿ. ಈಗ ಇವರು ಒಡನೆಯೇ ನಿಮ್ಮ ಶಾಪಾನುಸಾರವಾಗಿ ಅಸುರಜನ್ಮವನ್ನು ಪಡೆದು ಏಕಾಗ್ರಚಿತ್ತದಿಂದ ನನ್ನನ್ನು ಅತ್ಯಂತವಾಗಿ ದ್ವೇಷಿಸುತ್ತಾ ಕ್ರೋಧರೂಪವಾದ ಸಮಾಧಿಯೋಗದಿಂದ ಶೀಘ್ರವಾಗಿಯೇ ನನ್ನ ಬಳಿಗೆ ಹಿಂದಿರುಗುವರು"–ಎಂದು ಉತ್ತರವನ್ನು ಅನುಗ್ರಹಿಸಿದನು.

ಬ್ರಹ್ಮದೇವರು ಹೇಳುತ್ತಾರೆ :

“ಎಲೈ ದೇವತಗಳೇ! ಅನಂತರ ಆ ಮುನೀಂದ್ರರು ಕಣ್ಣುಗಳಿಗೆ ಹಬ್ಬವಾಗಿದ್ದ ಶ್ರೀಹರಿಯ ಶ್ರೀಮೂರ್ತಿಯನ್ನು ಮತ್ತು ಸ್ವಯಂಪ್ರಕಾಶವಾದ ಆತನ ವೈಕುಂಠಧಾಮವನ್ನೂ ಸಂದರ್ಶಿಸಿ ಸ್ವಾಮಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿ ಆತನ ಅಪ್ಪಣೆಪಡೆದು ಆತನ ಮಹಿಮೆಯನ್ನು ಕೊಂಡಾಡುತ್ತಾ ಪರಮಾನಂದರಾಗಿ ಅಲ್ಲಿಂದ ಹಿಂದಿರುಗಿದರು.

ಅನಂತರ ಶ್ರೀಭಗವಂತನು ಜಯ-ವಿಜಯರನ್ನು ಕುರಿತು ಹೀಗೆಂದನು:

ಭಗವಾನನುಗಾವಾಹ ಯಾತಂ ಮಾ ಭೈಷ್ಟಮಸ್ತು ಶಮ್ ।
ಬ್ರಹ್ಮತೇಜಃ ಸಮರ್ಥೋಽಪಿ ಹನ್ತುಂ ನೇಚ್ಛೇ ಮತಂ ತು ಮೇ ॥೨೯॥

“ಎಲೈ ಪಾರ್ಷದರೇ! ಹೋಗಿ, ಭಯಪಡಬೇಡಿರಿ, ನಿಮಗೆ ಮಂಗಳವಾಗಲಿ, ನಾನು ಸರ್ವಸಮರ್ಥನಾಗಿದ್ದರೂ ಬ್ರಾಹ್ಮಣರ ತೇಜಸ್ಸನ್ನು ನಿರಾಕರಿಸಲು ಇಷ್ಟಪಡುವುದಿಲ್ಲ. ಇವರ ಶಾಪವನ್ನು ವ್ಯರ್ಥಗೊಳಿಸುವುದಿಲ್ಲ. ಇದೇ ನನ್ನ ನಿಜಾಭಿಪ್ರಾಯವು.

ಇಷ್ಟೇ ಅಲ್ಲದೇ ಹಿಂದೊಮ್ಮೆನಾನು ವಿಶ್ರಮಿಸುತ್ತಿದ್ದಾಗ ಒಳಗೆ ಬರುತ್ತಿದ್ದ ಲಕ್ಷ್ಮೀದೇವಿಯನ್ನೂ ಬಾಗಿಲಿನಲ್ಲಿ ನೀವು ತಡೆದಿದ್ದಿರಿ. ಆಗ ಆಕೆಯೂ ನಿಮಗೆ ಹೀಗೆಯೇ ಶಾಪವನ್ನು ಕೊಟ್ಟಿದ್ದಳು. ಈಗ ನೀವು ಅಸುರಯೋನಿಯಲ್ಲಿದ್ದೂ, ಅದರಲ್ಲಿ ನನ್ನ ಬಗೆಗೆ ಕ್ರೋಧಾಕಾರವಾದ ವೃತ್ತಿಯಿಂದ ಏಕಾಗ್ರತೆಯನ್ನು ಪಡೆದು, ಅದರಿಂದ ಈ ವಿಪ್ರಶಾಪದ ಪಾಪದಿಂದ ಬಿಡುಗಡೆಯನ್ನು ಹೊಂದಿ, ಸ್ವಲ್ಪಸಮಯದಲ್ಲೇ ನನ್ನ ಬಳಿಗೆ ಮರಳಿ ಬರುವಿರಿ.”

ಶ್ರೀಭಗವಂತನು ದ್ವಾರಪಾಲಕರಿಗೆ ಹೀಗೆ ಆಜ್ಞೆಯನ್ನಿತ್ತು ವಿಮಾನಗಳ ಸಾಲುಗಳಿಂದ ಅಲಂಕೃತವಾಗಿ ಸಾರ್ವಾತಿಶಯಶ್ರೀಸಮೃದ್ಧಿಯಿಂದ ಸಂಪನ್ನವಾಗಿದ್ದ ತನ್ನ ಧಾಮವನ್ನು ಒಳಹೊಕ್ಕನು. ದೇವಶ್ರೇಷ್ಠರಾದ ಆ ಜಯ-ವಿಜಯರಾದರೋ ನಿವಾರಿಸಲು ಅಸದಳವಾದ ಬ್ರಾಹ್ಮಣಶಾಪದ ಫಲವಾಗಿ ದೈವೀಸಂಪತ್ತನ್ನು ಕಳೆದುಕೊಂಡುಬಿಟ್ಟರು. ಅವರ ಅಹಂಕಾರ

ವೆಲ್ಲವೂ ಉಡುಗಿಹೋಯಿತು. ಅವರು ವೈಕುಂಠಲೋಕದಿಂದ ಬೀಳತೊಡಗಿದರು. ಶ್ರೇಷ್ಠವಾದ ವಿಮಾನಗಳಲ್ಲಿ ಕುಳಿತಿದ್ದ ವೈಕುಂಠವಾಸಿಗಳು ಅದನ್ನು ಕಂಡು ಹಾಹಾಕಾರಮಾಡತೊಡಗಿದರು. (ಶ್ಲೋಕ 29-34)

ಎಲೈ ದೇವತೆಗಳೇ! ಈಗ ದಿತಿಯ ಗರ್ಭದಲ್ಲಿ ಕಶ್ಯಪರ ಯಾವ ಉಗ್ರವಾದ ತೇಜಸ್ಸು ಬೆಳಗುತ್ತಿದೆಯೋ–ಅದರಲ್ಲಿ ಶ್ರೀಹರಿಯ ಶ್ರೇಷ್ಠ ಪಾರ್ಷದರಾದ ಆ ಜಯ-ವಿಜಯರೇ ಪ್ರವೇಶಮಾಡಿದ್ದಾರೆ. ಆ ಇಬ್ಬರ ತೇಜಸ್ಸಿನಿಂದಲೇ ನಿಮ್ಮೆಲ್ಲರ ತೇಜಸ್ಸೂ ಕಳೆಗುಂದಿದೆ. ಶ್ರೀಭಗವಂತನ ವಿಧಾನದಂತೆಯೇ ಹೀಗೆಲ್ಲಾ ಆಗಿದೆ. ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಸಂಹಾರಗಳಿಗೆ ಯಾವನು ಕಾರಣನಾಗಿದ್ದಾನೆಯೋ, ಯಾವನ ಯೋಗ ಮಾಯೆಯನ್ನು ದೊಡ್ಡ-ದೊಡ್ಡ ಯೋಗಿಗಳೂ ಅತಿಕಷ್ಟದಿಂದ ದಾಟಲು ಸಾಧ್ಯವಾಗುತ್ತದೆಯೋ–ತ್ರಿಗುಣಗಳಿಗೆ ನಿಯಾಮಕನಾದ ಆ ಶ್ರೀಹರಿಯೇ ನಮಗೆ ಕ್ಷೇಮವನ್ನುಂಟುಮಾಡುವನು. ಈ ವಿಷಯದಲ್ಲಿ ನಾವು ವಿಚಾರ ವಿಮರ್ಶೆಮಾಡುವುದರಿಂದ ಏನು ಪ್ರಯೋಜನ? ಆ ಪರದೇವತೆಯೇ ಶರಣನು"–ಎಂದು ಬ್ರಹ್ಮದೇವರು ದೇವತೆಗಳನ್ನು ಸಂತೈಸಿದರು.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ತೃತೀಯಸ್ಕಂಧದ ೧೬ನೆಯ ಅಧ್ಯಾಯವು* ಮುಗಿಯಿತು.

---

* ಶ್ರೀಭಗವಂತನ ಪಾರ್ಷದರಾಗಿದ್ದ ಜಯ-ವಿಜಯರು ನಿಜವಾಗಿಯೂ ವೈಕುಂಠ ದಿಂದ ಪೂರ್ಣವಾಗಿ ಪತಿತರಾದರೇ? ಅವರು ಮತ್ತೆ ಅಲ್ಲಿಗೆ ಹಿಂದಿರುಗುವವರೆಗೂ ಅಲ್ಲಿ ಅವರ ಸ್ಥಾನವು ಬರಿದಾಗಿತ್ತೇ? ಇಲ್ಲದಿದ್ದರೆ ಆ ಅಧಿಕಾರವನ್ನು ಯಾರು ನಿರ್ವಹಿಸುತ್ತಿದ್ದರು? ಅಸುರಯೋನಿಯಲ್ಲಿ ಹುಟ್ಟಿದ್ದಾಗ ಆ ದೇವಶ್ರೇಷ್ಠರು ನಿಜವಾಗಿಯೂ ದುಃಖವನ್ನು ಅನುಭವಿಸುತ್ತಿದ್ದರೇ?–ಎಂಬ ಪ್ರಶ್ನೆಗಳಿಗೆ ಶ್ರೀಗೋಸ್ವಾಮಿ ಮತ್ತು ಶ್ರೀವಿಶ್ವನಾಥಚಕ್ರವರ್ತಿಗಳು ತಮ್ಮ ಶ್ರೀಮದ್ಭಾಗವತವ್ಯಾಖ್ಯಾನದಲ್ಲಿ ಹೇಳಿರುವ ಉತ್ತರವನ್ನೂ, ವಾಮನಚರಿತ್ರೆಯ ಅರ್ಥಪೂರ್ಣವಾದ ಹೇಳಿಕೆಯನ್ನೂ ಗಮನಿಸಬಹುದು:

'ಶ್ರೀಭಗವಂತನ ವಿಯೋಗವುಂಟಾಗುವುದಲ್ಲಾ!'–ಎಂದು ಕಳವಳಗೊಂಡ ತನ್ನ ಪಾರ್ಷದರಿಗೆ ಶ್ರೀಹರಿಯು ಹೀಗೆ ಅಭಯಪ್ರದಾನಮಾಡಿದನು : " ಎಲೈ ಭಕ್ತರೇ!

ತೃತೀಯಸ್ಕಂಧ ೧೭ನೆಯ ಅಧ್ಯಾಯ

ಹಿರಣಾಕ್ಷ-ಹಿರಣ್ಯಕಶಿಪುಗಳ ಜನನ :
ಹಿರಣ್ಯಾಕ್ಷನ ದಿಗ್ವಿಜಯ

ಮೈತ್ರೇಯಮರ್ಷಿಗಳು ವಿದುರನಿಗೆ ಹೇಳುತ್ತಾರೆ :

ನಿಶಮ್ಯಾತ್ಮಭುವಾ ಗೀತಂ ಕಾರಣಂ ಶಙ್ಕಯೋಜ್ಝಿತಾಃ ।
ತತಃ ಸರ್ವೇ ನ್ಯವರ್ತನ್ತ ತ್ರಿದಿವಾಯ ದಿವೌಕಸಃ ॥೧॥

ಅಯ್ಯಾ ವಿದುರನೇ! ಕೇಳು. ಇದ್ದಕ್ಕಿದ್ದಂತೆಯೇ ಲೋಕದಲ್ಲಿ ಕಗ್ಗತ್ತಲೆ ಕವಿದಿರುವುದಕ್ಕೆ ಕಾರಣವೇನು–ಎಂಬುದು ದೇವತೆಗಳಿಗೆ ಬ್ರಹ್ಮದೇವರು ನೀಡಿದ ವಿವರಣೆಯಿಂದ ಮನವರಿಕೆಯಾಯಿತು. ತಮ್ಮ ಆ ಶಂಕೆಯನ್ನು ಕಳೆದುಕೊಂಡು ಅವರು ಸ್ವರ್ಗಕ್ಕೆ ಹಿಂದಿರುಗಿದರು.

ಇತ್ತಕಡೆ ದಿತೀದೇವಿಗೆ ತನಗೆ ಹುಟ್ಟುವ ಪುತ್ರರಿಂದ ಲೋಕಕ್ಕೆ ದೊಡ್ಡ ಉಪದ್ರವವು ಉಂಟಾಗುವುದೆಂಬ ಶಂಕೆಯು ಇದ್ದೇ ಇತ್ತು. ಆದ್ದರಿಂದ ಆ ಸಾಧ್ವಿಯು ನೂರ ವರ್ಷಗಳ ಕಾಲ ಅದರ ಜನನವನ್ನು ತಡೆ

ನೀವು ಇಲ್ಲಿಂದ ಹೋಗಬೇಡಿರಿ. ನನ್ನನ್ನು ಸೇವೆಮಾಡುತ್ತಾ ಇಲ್ಲಿಯೇ ಇರಿ. ಆದರೆ ಬ್ರಾಹ್ಮಣಶಾಪವು ಅಮೋಘವಾಗಿರುವುದೆಂಬ ನಿಯಮವನ್ನು ನಾನೇ ಮಾಡಿದ್ದೇನೆ. ಆದ್ದರಿಂದ ಆ ಶಾಪವಚನವನ್ನೂ ನೀವು ಗೌರವಿಸಬೇಕು. ವಜ್ರಾಯುಧದ ಗೌರವವನ್ನು ಉಳಿಸುವುದಕ್ಕಾಗಿ ಹಿಂದೆ ಗರುತ್ಮಂತನು ತನ್ನ ರೆಕ್ಕೆಯ ಒಂದು ಗರಿಯನ್ನು ಕೊಟ್ಟು ತಾನು ಅಕ್ಷತನಾಗಿ ಉಲಿಯಲಿಲ್ಲವೇ? ಹಾಗೆಯೇ ನೀವೂ ಬ್ರಾಹ್ಮಣಶಾಪವೆಂಬ ಅಸ್ತ್ರವನ್ನು ಗೌರವಿಸುವುದಕ್ಕಾಗಿ ಏಕಾಂಶದಿಂದ ಅಸುರರಾಗಿ ಜನಿಸಿರಿ. ನಿಜಸ್ವರೂಪದಿಂದ ಇಲ್ಲಿಯೇ ಇರಿ''–ಎಂದು ಕ್ರಮಸಂದರ್ಭವೆಂಬ ವ್ಯಾಖ್ಯಾನಗ್ರಂಥದಲ್ಲಿ ಶ್ರೀವಿಶ್ವನಾಥಚಕ್ರವರ್ತಿಗಳು ಹೇಳುತ್ತಾರೆ. ಇದರ ಪ್ರಕಾರ ಜಯ-ವಿಜಯರು ಏಕಕಾಲದಲ್ಲಿ ವೈಕುಂಠದಲ್ಲೂ ಇದ್ದರು ; ರಾಕ್ಷಸಯೋನಿಯಲ್ಲೂ ಏಕಾಂಶದಿಂದ ಕೊಂಚಕಾಲ ಇದ್ದರು. ಅಲ್ಲಿಗೆ ವೈಕುಂಠಲೋಕದಲ್ಲಿ ಜಯ-ವಿಜಯರ ಸ್ಥಾನವು ತೆರವಾಗುವ ಪ್ರಶ್ನೆಯೇ ಏಳುವುದಿಲ್ಲ. ಈ ಅಭಿಪ್ರಾಯವನ್ನು 'ವಾಮನಚರಿತ್ರೆ' ಯೂ ಸಮರ್ಥಿಸುತ್ತಿದೆ. ದೈತ್ಯಸೈನ್ಯದೊಡನೆ ವಿಷ್ಣುವಿನ ಭೃತ್ಯರು ಯುದ್ಧ ಮಾಡುತ್ತಿದ್ದಾಗ ಆ ವಿಷ್ಣುಭೃತ್ಯರ ಗುಂಪಿನಲ್ಲಿ ಜಯ-ವಿಜಯರೂ ಸೇರಿದ್ದರೆಂದು ಅಲ್ಲಿ

ಹಿಡಿದಿದ್ದು ಕಡೆಗೆ ಇಬ್ಬರೇ ಅವಳೀ ಗಂಡುಮಕ್ಕಳನ್ನು ಹಡೆದಳು. ಆ ಪುತ್ರರು ಹುಟ್ಟುವ ಸಮಯದಲ್ಲಿ ಸ್ವರ್ಗದಲ್ಲೂ, ಭೂಮಿಯಲ್ಲೂ, ಅಂತರಿಕ್ಷದಲ್ಲೂ ಅನೇಕವಾದ ಉತ್ಪಾತಗಳು ಕಾಣಿಸಿಕೊಂಡು ಲೋಕಕ್ಕೆ ಮಿತಿಮೀರಿದ ಆತಂಕವನ್ನು ಉಂಟುಮಾಡಿದುವು. ಹಲವು ಕಡೆಗಳಲ್ಲಿ ಭೂಮಿಯೂ– ಪರ್ವತಗಳೂ ನಡುಗತೊಡಗಿದುವು. ಎಲ್ಲ ದಿಕ್ಕುಗಳಲ್ಲಿಯೂ ಬೆಂಕಿಯ ಜ್ವಾಲೆಗಳು ಕಾಣಿಸಿಕೊಂಡುವು. ಅಲ್ಲಲ್ಲಿ ಉಲ್ಕೆಗಳು ಉದುರತೊಡಗಿದುವು. ಸಿಡಿಲುಗಳು ಬಡಿಯತೊಡಗಿದುವು ಮತ್ತು ಅನಿಷ್ಟವನ್ನು ಸೂಚಿಸುವ ಧೂಮಕೇತುಗಳು ಕಾಣಿಸಿಕೊಂಡುವು. ಬಾರಿ-ಬಾರಿಗೂ ಬುಸುಗುಟ್ಟು ತ್ತಿವೆಯೋ ಎಂಬಂತೆ ಸೊಯ್ಯನೇ ಶಬ್ದಮಾಡುತ್ತಾ, ಸೋಂಕಿದವರಿಗೆ ಸಹಿಸ ಲಾರದ ಕಷ್ಟವನ್ನು, ಕೊಡುತ್ತಾ, ದೊಡ್ಡ-ದೊಡ್ಡ ಮರಗಳನ್ನೂ-ಗಿರಿಗಳನ್ನೂ ಕೆಳಗೆ ಬೀಳಿಸುತ್ತಾ ಸುಂಟರಗಾಳಿಯು ಭಯಂಕರವಾಗಿ ಬೀಸತೊಡಗಿತು. ಸುಳಿಗಾಳಿಗಳು ಸೇನಾಸಮೇತವಾಗಿ ಧೂಳೀಪಟಲವೆಂಬ ಧ್ವಜವನ್ನು ತೋರುತ್ತಾ ಲೋಕಗಳ ಮೇಲೆ ಮುತ್ತಿಗೆ ಹಾಕುತ್ತಿವೆಯೋ ಎಂಬಂತಿತ್ತು. ಕೋಲ್ಮಿಂಚುಗಳ ಬಳ್ಳಿಗಳು ಮತ್ತೆ-ಮತ್ತೆ ಸುಳಿಯುತ್ತಾ ಕ್ರೂರವಾದ ನಗೆ ಯನ್ನು ಬೀರುತ್ತಿವೆಯೋ–ಎಂಬಂತೆ ಕಾಣುತ್ತಿದ್ದುವು. ಮೋಡಗಳ ಸಾಲು

ಹೇಳಿದೆ. ಆ ಸಮಯದಲ್ಲಿ ಜಯ-ವಿಜಯರು ಪೂರ್ಣವಾಗಿ ರಾಕ್ಷಸಯೋನಿಯಲ್ಲೇ ಇದ್ದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಜಯ-ವಿಜಯರು ನಿಜರೂಪದಿಂದ ವೈಕುಂಠದಲ್ಲಿ ಇದ್ದೇ ಇದ್ದರು. ಅವರ ಒಂದು ಕಲೆಯು ಮಾತ್ರ ಮುನಿಶಾಪದ ಸಂಭಾವನೆಗಾಗಿ ಕೊಂಚಸಮಯ ಅಸುರರೂಪದಲ್ಲಿತ್ತು ಎಂದು ಸಿದ್ಧವಾಗುತ್ತದೆ.

"ತಾನಭಿದ್ರವತೋ ದೃಷ್ಟ್ವಾ ದಿತಿಜಾತೀಕಪಾನ್ನೃಪ । ಪ್ರಹಸ್ಯಾನುಚರಾ ವಿಷ್ಣೋಃ ಪ್ರತ್ಯಷೇಧನ್ನುದಾಯುಧಾಃ ॥ ನಂದಸ್ಸುನಂದೋಽಥ ಜಯೋ ವಿಜಯಃ ಪ್ರಬಲೋ ಬಲಃ। ಕುಮುದಃ ಕುಮುದಾಕ್ಷಶ್ಚ ವಿಷ್ವಕ್ಸೇನಃ ಪತತ್ರಿರಾಟ್ ॥"

ಇದೂ ಕೂಡ ಕಾರ್ಯವೈಕುಂಠಕ್ಕೆ ಸಂಬಂಧಪಟ್ಟ ಜಯ-ವಿಜಯರನ್ನು ಕುರಿತ ವಿಷಯವೇ ಹೊರತು ನಿತ್ಯವಿಭೂತಿಯಾದ ಕಾರಣವೈಕುಂಠಕ್ಕೆ ಸಂಬಂಧಪಟ್ಟ ವಿಷಯವಲ್ಲ. ನಿತ್ಯವಿಭೂತಿಯಲ್ಲಿ ರಜೋಗುಣ-ತಮೋಗುಣಗಳಿಗೆ ಪ್ರಸಕ್ತಿಯೇ ಇಲ್ಲ. ಅದು ತ್ರಿಗುಣಾತೀತವಾದ ಧಾಮ. ಅಲ್ಲಿ ಶಾಪದ ಪ್ರಸ್ತಾಪವೇ ಬರುವುದಿಲ್ಲ–ಎಂಬುದು ನಮ್ಮ ಅಭಿಪ್ರಾಯ.

೨) ಅಸುರಯೋನಿಯಲ್ಲಿದ್ದಾಗ ಜಯ-ವಿಜಯರು ನಿಜವಾಗಿಯೂ ದುಃಖವನ್ನು

ಗಳು ಒತ್ತಾಗಿ ಸೇರಿದ ಪರಿಣಾಮವಾಗಿ ನಕ್ಷತ್ರ-ಗ್ರಹ-ತಾರೆಗಳೆಲ್ಲವೂ ಮುಚ್ಚಿಹೋಗಿದ್ದರಿಂದ ಆಕಾಶದಲ್ಲಿ ಎಲ್ಲೆಲ್ಲೂ ಕಗ್ಗತ್ತಲು ಕವಿಯಿತು. ಎಲ್ಲೂ ಏನು ಕಾಣಿಸದಂತಾಯಿತು. ಸಮುದ್ರವು ಗಟ್ಟಿಯಾಗಿ ಗೋಳಿಡು ತ್ತಿದೆಯೋ–ಎಂಬಂತೆ ಭೋರ್ಗರೆಯುತ್ತಿತ್ತು. ಅದರ ಜಲದೊಳಗೆ ಕ್ಷೋಭೆ ಯುಂಟಾಗಿ ತೆರಗಳು ಮೇಲೆದ್ದು ಜಲಚರಪ್ರಾಣಿಗಳು ತಳಮಳಗುಟ್ಟಿದುವು. ನದಿಗಳೂ, ಕೆರೆ-ಕುಂಟೆ-ಕೊಳಗಳೇ ಮುಂತಾದ ಜಲಾಶಯಗಳೂ ಬತ್ತಿ ಹೋಗಿ ನೀರಿನಲ್ಲಿ ಕಳ-ಕಳಿಸುತ್ತಿದ್ದ ಕಮಲಗಳೆಲ್ಲಾ ಒಣಗಿಹೋದುವು. ಸೂರ್ಯ-ಚಂದ್ರರಿಗೆ ಮತ್ತೆ-ಮತ್ತೆ ಗ್ರಹಣ ಹಿಡಿಯುತ್ತಿತ್ತು. ಅವರ ಸುತ್ತಲೂ ಅಮಂಗಳಸೂಚಕವಾದ ಪರಿವೇಷವೆಂಬ ಮಂಡಲಗಳು ಆವಿರ್ಭವಿಸಿದುವು. ಆಕಾಶದಲ್ಲಿ ಮೋಡವಿಲ್ಲದ ಗರ್ಜನೆಗಳೂ, ಪರ್ವತ-ಗುಹೆಗಳಲ್ಲಿ ರಥದ ಘರ್ಘರಧ್ವನಿಗಳೂ ಅಕಾರಣವಾಗಿ ಕೇಳಿಬರತೊಡಗಿದುವು. ಹಳ್ಳಿಗಳಲ್ಲಿ–ಊರೊಳಗೇ ನರಿಗಳೂ, ಗೂಬೆಗಳೂ ಕೂಗಿಕೊಳ್ಳುತ್ತಿರಲು–ಹೆಣ್ಣುನರಿಗಳು ಬಾಯಿಂದ ಭೀಕರವಾಗಿ ಬೆಂಕಿಯನ್ನು ಕಕ್ಕುತ್ತಾ ಅಮಂಗಳವಾಗಿ ಊಳಿಡತೊಡಗಿದುವು. ಅಲ್ಲಲ್ಲಿ ನಾಯಿಗಳು ಕುತ್ತಿಗೆಯನ್ನು ಮೇಲಕ್ಕೆ ಎತ್ತಿಕೊಂಡು ಕೆಲವೊಮ್ಮೆ ಹಾಡುವಂತೆಯೂ, ಕೆಲವೊಮ್ಮೆ ಅಳುವಂತೆಯೂ ಕೂಗಿಡುತ್ತಿದ್ದುವು. (ಶ್ಲೋಕ 2-10)

ಕತ್ತೆಗಳ ಹಿಂಡುಗಳು ತಮ್ಮ ಗೊರಸುಗಳಿಂದ ನೆಲವನ್ನು ಗೆಬರುತ್ತಾ ಕರ್ಕಶವಾಗಿ ಅರಚುತ್ತಾ ಮತ್ತೇರಿ ರಭಸದಿಂದ ಓಡತೊಡಗಿದುವು. ಹಕ್ಕಿಗಳು ಆ ಕತ್ತೆಗಳ ಶಬ್ದಕ್ಕೆ ಹೆದರಿ ಅಳುವಿನ ಧ್ವನಿಮಾಡುತ್ತಾ

ಅನುಭವಿಸುತ್ತಿದ್ದಾರೇ? ಎಂದರೆ : ಇಲ್ಲ ; (ಶ್ರೀಭಗವಂತನು ಅವತಾರದೆಶೆಯಲ್ಲಿ ಅಭಿನಯಮಾಡುವುದಿಲ್ಲವೇ? ಹಾಗೆಯೇ.) ಅವನ ಪಾರ್ಷದರು – ಅಸುರಜೀವನದ ಅನುಕರಣೆಯನ್ನು ಮಾತ್ರ ಮಾಡುತ್ತಿದ್ದರು ; ದುಃಖವನ್ನು ಅನುಭವಿಸುತ್ತಿರಲಿಲ್ಲ– ಎಂದು ಗೋಸ್ವಾಮಿಗಳು ಅಭಿಪ್ರಾಯಪಡುತ್ತಾರೆ. ಅವರ ಹೇಳಿಕೆಯಂತೆ ಶ್ರೀಭಗಂವಂತನು ಜಯ-ವಿಜಯರನ್ನು ವೈಕುಂಠದಲ್ಲಿ "ಎಲೈ ಪಾರ್ಷದರೇ! ನೀವು ಅಸುರಜನ್ಮವನ್ನು ಪಡೆದರೂ–ನಟನು ವೇಷವನ್ನು ಧರಿಸಿಕೊಳ್ಳುವಂತೆ – ಆ ಜನ್ಮವು ನಿಮಗೆ ಕೇವಲ ಅನುಕರಣವಾಗಿರುವುದು. ಅದು ಅಭಿನಯದಂತೆ ನಿಜವಾಗಿಯೂ ಅದು ನಿಮಗೆ ದುಃಖಕರವಾಗುವುದಿಲ್ಲ" –ಎಂದು ಸಂತೈಸುತ್ತಾನೆ.

ಗೂಡುಗಳಿಂದ ಹೊರಕ್ಕೆ ಹಾರಿಬರತೊಡಗಿದುವು. ದೊಡ್ಡಿಗಳಲ್ಲೂ–ಕಾಡುಗಳಲ್ಲೂ ಪಶುಗಳು ಅಂಜಿಕೆಯಿಂದ ಮಲ-ಮೂತ್ರಗಳನ್ನು ವಿಸರ್ಜನೆ ಮಾಡಿದುವು. ಆಕಳುಗಳು ತುಂಬಾ ಭಯಗೊಂಡು ಹಾಲಿನ ಬದಲಿಗೆ ರಕ್ತವನ್ನು ಕರೆಯತೊಡಗಿದುವು. ಮೋಡಗಳು ಮಲದ ಮಳೆಯನ್ನೇ ಸುರಿಸಿದುವು. ದೇವತಾವಿಗ್ರಹಗಳ ಕಣ್ಣುಗಳಿಂದ ಕಣ್ಣೀರು ಸುರಿಯತೊಡಗಿತು. ಬಿರುಗಾಳಿ ಬೀಸದೆಯೇ ಮರಗಳು ನೆಲಕ್ಕೆ ಉರುಳಿದುವು. ಕ್ರೂರಗ್ರಹಗಳು ಪ್ರಬಲವಾಗಿ–ಸೌಮ್ಯಗ್ರಹಗಳನ್ನೂ ಮತ್ತು ನಕ್ಷತ್ರಗಣಗಳನ್ನೂ ಮೀರಿ ಹೋಗಿ ವಕ್ರಗತಿಯಿಂದ ಚಲಿಸುತ್ತಾ ಪರಸ್ಪರವಾಗಿ ಯುದ್ಧಮಾಡತೊಡಗಿದುವು. ಈ ಅವಲಕ್ಷಣಗಳನ್ನೂ, ಇಂತಹ ಇನ್ನೂ ಅನೇಕ ಉತ್ಪಾತಗಳನ್ನೂ ಕಂಡು ಬ್ರಹ್ಮಪುತ್ರರಾದ ಸನಕಾದಿಗಳನ್ನು ಬಿಟ್ಟು ಉಳಿದವರೆಲ್ಲರೂ ಗಾಬರಿಗೊಂಡು ನಡುಗತೊಡಗಿದರು. ಆ ಉತ್ಪಾತಗಳ ಮರ್ಮವೇನೆಂಬುದನ್ನು ತಿಳಿಯದೇ ಪ್ರಜೆಗಳು 'ಈಗ ಇನ್ನೇನು ಜಗತ್ತಿನ ಪ್ರಳಯವೇ ಆಗಿಬಿಡುವುದು'–ಎಂದು ಭಾವಿಸಿದರು. ಹೀಗೆ ಹುಟ್ಟುತ್ತಲೇ ತಮ್ಮ ಭಯಂಕರವಾದ ಪೌರುಷವನ್ನು ಪ್ರಕಟಪಡಿಸುತ್ತಾ ಆ ಇಬ್ಬರು ಆದಿದೈತ್ಯರೂ ಉಕ್ಕಿನಂತೆ ಗಟ್ಟಿಯಾದ ತಮ್ಮ ದೇಹಗಳಿಂದ ಪರ್ವತಗಳಂತೆ ಬೆಳೆಯತೊಡಗಿದರು. ಅವರು ಎಷ್ಟು ಎತ್ತರವಾಗಿ ಬೆಳೆದರು ಎಂದರೆ : ಅವರು ಧರಿಸಿದ್ದ ಚಿನ್ನದ ಕಿರೀಟಗಳ ತುದಿಯು ಸ್ವರ್ಗವನ್ನು ಮುಟ್ಟುತ್ತಿತ್ತು. ರತ್ನಖಚಿತವಾದ ತೋಳ್ಬಳೆಗಳಿಂದ ಅಲಂಕೃತವಾಗಿದ್ದ ಅವರ ತೋಳುಗಳು ದಿಗಂತಗಳನ್ನು ತಡೆಯುತ್ತಿದ್ದವು. ಅವರು ನೆಲದ ಮೇಲೆ ಒಂದೊಂದು ಹೆಜ್ಜೆಯನ್ನಿರಿಸಿದರೂ ಭೂಮಿಯು ನಡುಗುತ್ತಿತ್ತು ಮತ್ತು ಅವರು ನಿಂತರೆಂದರೆ ಥಳ-ಥಳಿಸುವ ನಡುದಾರದಿಂದ ಹೊಳೆಯುತ್ತಿದ್ದ ಅವರ ನಡುವು ತನ್ನ ಪ್ರಕಾಶದಿಂದ ಸೂರ್ಯನನ್ನು ತಿರಸ್ಕರಿಸುತ್ತಿತ್ತು.* ಹಾಗೆ ಹುಟ್ಟಿದ ಅವಳಿಮಕ್ಕಳಿಗೆ ಕಶ್ಯಪಪ್ರಜಾಪತಿಗಳು ನಾಮಕರಣಮಾಡಿದರು. ಅವರಲ್ಲಿ ತಮ್ಮ ವೀರ್ಯದಿಂದ ದಿತಿಯ ಗರ್ಭದಲ್ಲಿ ಮೊದಲು ಸ್ಥಾಪಿಸಲ್ಪಟ್ಟ ಪುತ್ರನಿಗೆ 'ಹಿರಣ್ಯ

---

* ಅವರ ನಡುವು ಸೂರ್ಯಮಂಡಲವನ್ನೂ ಮೀರಿಸಿ, ಅದಕ್ಕಿಂತಲೂ ಎತ್ತರವಾಗಿ ಮೇಲೆ ಇರುವಂತೆ–ಬೆಳೆಯಿತು ಎಂದೂ ಅರ್ಥಮಾಡಬಹುದು. (ಶ್ಲೋಕ ೧೭)

ಕಶಿಪು' ಎಂದು ಅವರು ಹೆಸರಿಟ್ಟರು. ದಿತಿಯ ಹೊಟ್ಟೆಯಿಂದ ಮೊದಲು ಹೊರಬಂದ ಪುತ್ರನು 'ಹಿರಣ್ಯಾಕ್ಷ' ಎಂಬ ಹೆಸರಿನಿಂದ ಪ್ರಸಿದ್ಧನಾದನು.

(ಶ್ಲೋಕ 11-18)

ಹಿರಿಯನಾದ ಹಿರಣ್ಯಕಶಿಪುವು ಬ್ರಹ್ಮದೇವರ ವರದಿಂದ ತನಗೆ ಯಾರಿಂದಲೂ ಮೃತ್ಯುವಿಲ್ಲವೆಂದು ಭಾವಿಸಿ ಅಹಂಕಾರದಿಂದ ಕೊಬ್ಬಿದ್ದನು. ತನ್ನ ಭುಜಬಲದಿಂದ ಲೋಕಪಾಲರಿಂದೊಡಗೂಡಿದ ಮೂರು ಲೋಕ ಗಳನ್ನೂ ವಶಪಡಿಸಿಕೊಂಡುಬಿಟ್ಟನು. ಆತನಿಗೆ ತಮ್ಮನಾದ ಹಿರಣ್ಯಾಕ್ಷನ ಮೇಲೆ ಬಹಳವಾದ ಪ್ರೀತಿ. ಹಿರಣ್ಯಾಕ್ಷನೂ ಸಹ ಅಣ್ಣನನ್ನು ತುಂಬಾ ಪ್ರೀತಿಸುತ್ತಾ ಆತನಿಗೆ ಪ್ರಿಯವಾಗುವಂತೆಯೇ ನಡೆಯುತ್ತಿದ್ದನು. ಹೀಗೆಯೇ ಇರುವಾಗ ಒಂದು ದಿನ ಹಿರಣ್ಯಾಕ್ಷನು ಕೈಯಲ್ಲಿ ಗದೆಯನ್ನು ಹಿಡಿದು ಯುದ್ಧಕ್ಕಾಗಿ ಹಂಬಲಿಸುತ್ತಾ ಸ್ವರ್ಗಲೋಕಕ್ಕೆ ಹೋದನು. ಆತನ ರೂಪ, ಪರಾಕ್ರಮ ಮತ್ತು ವೇಗಗಳು ಎಲ್ಲರಲ್ಲೂ ಭಯವನ್ನುಂಟುಮಾಡುತ್ತಿ ದ್ದುವು. ಕಾಲುಗಳಲ್ಲಿ ಚಿನ್ನದ ಕಾಲಂದುಗೆಗಳು ಝಣ-ಝಣಿಸುತ್ತಿದ್ದುವು. ಕತ್ತಿನಲ್ಲಿ ವಿಜಯಸೂಚಕವಾದ ಮಾಲೆಯು ಕಂಗೊಳಿಸುತ್ತಿತ್ತು. ಮತ್ತು ಹೆಗಲಿನ ಮೇಲೆ ವಿಶಾಲವಾದ ಗದೆಯು ಮೆರೆಯುತ್ತಿತ್ತು. ಮನೋಬಲ, ದೇಹಬಲ ಮತ್ತು ಬ್ರಹ್ಮದೇವರು ಕೊಟ್ಟಿದ್ದ ವರದ ಬಲಗಳು ಆತನನ್ನು ಮತ್ತೇರಿಸಿದ್ದುವು. ಆದ್ದರಿಂದ ಆತನು ಯಾರ ಅಂಕುಶಕ್ಕೂ ಒಳಪಡದೇ ಯಾರಿಗೂ ಹೆದರದೇ, ಯಥೇಚ್ಛವಾಗಿ ವರ್ತಿಸುತ್ತಿದ್ದನು. ಆತನನ್ನು ಕಂಡೊಡನೆಯೇ ದೇವತೆಗಳು–ಗರುಡನನ್ನು ಕಂಡ ಸರ್ಪಗಳಂತೆ– ಭಯಗ್ರಸ್ತರಾಗಿ ಅವಿತುಕೊಂಡುಬಿಟ್ಟರು. ಮಹಾಶಕ್ತಿಶಾಲಿಗಳಾದ ಇಂದ್ರಾದಿದೇವತೆಗಳು ತನ್ನ ತೇಜಸ್ಸಿಗೆ ಅಂಜಿ ಹೇಡಿಗಳಾಗಿ ಅವಿತುಕೊಂಡು ದ್ದನ್ನು ನೋಡಿ ಆ ದೈತ್ಯರಾಜನು ಗರ್ವದಿಂದ ಮತ್ತೆ-ಮತ್ತೆ ಭೀಕರವಾಗಿ ಗರ್ಜಿಸತೊಡಗಿದನು. ಅನಂತರ ಮಹಾಸತ್ತ್ವನಾದ ಆ ಅಸುರರಾಜನು ಅಲ್ಲಿಂದ ಹಿಂದಿರುಗಿ ಜಲಕ್ರೀಡೆಯನ್ನಾಡುವ ಇಚ್ಛೆಯಿಂದ ಮದ್ದಾನೆಯೋ ಪಾದಿಯಲ್ಲಿ ತರಂಗಮಾಲೆಗಳಿಂದ ಭೀಕರವಾಗಿ ಭೋರ್ಗರೆಯುತ್ತಿದ್ದ ಗಂಭೀರವಾದ ಸಮುದ್ರದೊಳಗೆ ನುಗ್ಗಿದನು. ಆತನು ಅಲ್ಲಿ ಹೆಜ್ಜೆಹಾಕಿ ದೊಡೆಯೇ ಅಲ್ಲಿದ್ದ ವರುಣದೇವರ ಸೈನಿಕರಾದ ಜಲಚರಜೀವಿಗಳೆಲ್ಲವೂ

ತಬ್ಬಿಬ್ಬಾಗಿ ಆತನು ತಮ್ಮನ್ನು ಹೊಡೆಯದೇ ಇದ್ದರೂ ಆತನ ತೇಜಸ್ಸಿನಿಂದಲೇ ಗಾಬರಿಗೊಂಡು ದೂರ-ದೂರಕ್ಕೆ ಓಡಿಹೋಗಿಬಿಟ್ಟುವು. ಆ ಮಹಾಬಲಶಾಲಿಯಾದ ದೈತ್ಯನು ಅನೇಕವರ್ಷಗಳ ಕಾಲ ಆ ಕಡಲಿನಲ್ಲಿ ವಿಹರಿಸುತ್ತಿದ್ದನು. ಅಲ್ಲೂ ತನಗೆ ಎದುರಾಳಿಯು ಯಾರೂ ಸಿಕ್ಕದಿರಲು ಆತನು ವಾಯುವೇಗದಿಂದ ಮೇಲಕ್ಕೆ ಏಳುತ್ತಿದ್ದ ಆ ಸಮುದ್ರದ ಪ್ರಚಂಡವಾದ ತರಂಗಗಳನ್ನೇ ತನ್ನ ಉಕ್ಕಿನ ಗದಾಯುಧದಿಂದ ಅಪ್ಪಳಿಸುತ್ತಿದ್ದನು. ಹೀಗೆಯೇ ಸುತ್ತಾಡುತ್ತಾ ಆತನು ವರುಣದೇವರ ರಾಜಧಾನಿಯಾದ ವಿಭಾವರೀಪುರಿಯನ್ನು ತಲುಪಿದನು. ಅಲ್ಲಿ ಆತನು ಪಾತಾಳ ಲೋಕದ ಅಧಿಪತಿಗಳೂ ಜಲಚರಗಳ ಒಡೆಯನೂ ಆದ ವರುಣದೇವರನ್ನು ಕಂಡನು. ಒಡನೆಯೇ ಅವರನ್ನು ಕುರಿತು ಗೇಲಿ-ಕುಚೋದ್ಯಗಳನ್ನು ಮಾಡಿ, ಹುಸಿನಗೆಯಿಂದ 'ಮಹಾರಾಜರೇ! ನನಗೆ ಯುದ್ಧಭಿಕ್ಷೆಯನ್ನು ದಯಪಾಲಿಸೋಣವಾಗಲಿ'–ಎಂದು ಪ್ರಾರ್ಥಿಸಿದನು. (ಶ್ಲೋಕ 19-27)

ತ್ವಂ ಲೋಕಪಾಲೋಽಧಿಪತಿರ್ಬೃಹಚ್ಛ್ರವಾ
ವೀರ್ಯಾಪಹೋ ದುರ್ಮದವೀರಮಾನಿನಾಮ್ ।
ವಿಜಿತ್ಯ ಲೋಕೇಽಖಿಲದೈತ್ಯದಾನವಾ-
ನ್ಯದ್ರಾಜಸೂಯೇನ ಪುರಾಜಯತ್ಪ್ರಭೋ ॥೨೮॥

"ಪ್ರಭುಗಳೇ! ತಾವು ಲೋಕಪಾಲಕರು. ರಾಜಾಧಿರಾಜರು. ತಮ್ಮನ್ನು ಅಸಮಾನವೀರರೆಂದು ತಿಳಿದುಕೊಂಡಿದ್ದ ಮಹಾಕೀರ್ತಿಶಾಲಿಗಳಾದ ಅನೇಕ ವೀರರ ಪರಾಕ್ರಮದ ಮದವನ್ನು ಮರ್ದನಮಾಡಿದ್ದೀರಿ. ಒಮ್ಮೆ ಲೋಕದ ಎಲ್ಲ ದೈತ್ಯ-ದಾನವರನ್ನೂ ಸೋಲಿಸಿ ರಾಜಸೂಯಯಜ್ಞವನ್ನು ಮಾಡಿದ್ದೀರಿ. ಇಂತಹ ತಾವು ದಯವಿಟ್ಟು ದೀನನಾದ ನನಗೆ ಯುದ್ಧಭಿಕ್ಷೆಯನ್ನು ಅನುಗ್ರಹಿಸಬೇಕು"–ಎಂದು ಅಂಗಲಾಚಿದನು.

ಸ ಏವಮುತ್ಸಿಕ್ತಮದೇನ ವಿದ್ವಿಷಾ
ದೃಢಂ ಪ್ರಲಬ್ಧೋ ಭಗವಾನಪಾಂ ಪತಿಃ ।
ರೋಷಂ ಸಮುತ್ಥಂ ಶಮಯನ್ಸ್ವಯಾ ಧಿಯಾ
ವ್ಯವೋಚದಙ್ಗೋಪಶಮಂ ಗತಾ ವಯಮ್ ॥೨೯॥

ಹೀಗೆ ಮದದಿಂದ ಉಕ್ಕೇರಿದ್ದ ಆ ಶತ್ರುವಿನ ಹಾಸ್ಯವಚನದಿಂದ ಕೂಡಿದ್ದ ಹೀಯಾಳಿಕೆಯನ್ನು ಕೇಳಿ ವರುಣದೇವರಿಗೆ ಮಿತಿಮೀರಿದ ಕೋಪವೇನೋ ಉಂಟಾಯಿತು. ಆದರೆ ಅವರು ತಮ್ಮ ಬುದ್ಧಿಬಲದಿಂದ ಆ ಉಮ್ಮಳಿಸಿದ ಕ್ರೋಧವನ್ನು ತಡೆದುಕೊಂಡು ಆತನಿಗೆ ಹೀಗೆಂದರು : "ಅಯ್ಯಾ ವೀರಾಗ್ರಣಿಯೇ! ಈಗ ನಾವು ಯುದ್ಧದ ಅಭಿಲಾಷೆಯನ್ನೇ ತೊರೆದು ಶಾಂತರೂ, ವಿರಕ್ತರೂ ಆಗಿಬಿಟ್ಟಿದ್ದೇವೆ.

ಪಶ್ಯಾಮಿ ನಾನ್ಯಂ ಪುರುಷಾತ್ಪುರಾತನಾ-
ದ್ಯಃ ಸಂಯುಗೇ ತ್ವಾಂ ರಣಮಾರ್ಗಕೋವಿದಮ್ ।
ಆರಾಧಯಿಷ್ಯತ್ಯಸುರರ್ಷಭೇಹಿ ತಂ
ಮನಸ್ವಿನೋ ಯಂ ಗೃಣತೇ ಭವಾದೃಶಾಃ ॥೩೦॥

ನಿನ್ನಂತಹ ಯುದ್ಧಕುಶಲನನ್ನು ಯುದ್ಧದಲ್ಲಿ ಸಂತೋಷಪಡಿಸಲು ಪುರಾಣಪುರುಷೋತ್ತಮನಾದ ಶ್ರೀಭಗವಂತನನ್ನು ಬಿಟ್ಟು ಬೇರಾರಿಗೂ ಸಾಧ್ಯವಿಲ್ಲ. ನೀನು ಆತನ ಬಳಿಗೇ ಹೋಗು. ದೈತ್ಯರಾಜನೇ! ಆತನು ನಿನ್ನ ಇಷ್ಟಾರ್ಥಗಳನ್ನು ಈಡೇರಿಸುವನು. ನಿನ್ನಂತಹ ವೀರಾಗ್ರಣಿಗಳು ಆತನ ಪರಾಕ್ರಮವನ್ನೇ ಹಾಡಿಹೊಗಳುತ್ತಿರುತ್ತಾರೆ.

ತಂ ವೀರಮಾರಾದಭಿಪದ್ಯ ವಿಸ್ಮಯಃ
ಶಯಿಷ್ಯಸೇ ವೀರಶಯೇ ಶ್ವಭಿರ್ವೃತಃ ।
ಯಸ್ತ್ವದ್ವಿಧಾನಾಮಸತಾಂ ಪ್ರಶಾನ್ತಯೇ
ರೂಪಾಣಿ ಧತ್ತೇ ಸದನುಗ್ರಹೇಚ್ಛಯಾ ॥೩೧॥

ಆತನು ಮಹಾವೀರಾಧಿವೀರನು. ಆತನ ಬಳಿಗೆ ಹೋದೊಡನೆಯೇ ನಿನ್ನ ಗರ್ವವು ಇಳಿದುಹೋಗುವುದು. ನೀನು ನಾಯಿಗಳಿಂದ ಸುತ್ತುವರಿಯಲ್ಪಟ್ಟು, ಅವುಗಳಿಗೆ ಆಹಾರವಾಗಿ ವೀರಶಯ್ಯೆಯಲ್ಲಿ ಮಲಗುವೆ. ಆತನು ನಿನ್ನಂತಹ ದುಷ್ಟರನ್ನು ನಿಗ್ರಹಿಸಿ ಸತ್ಪುರುಷರನ್ನು ಸಲಹುವುದಕ್ಕಾಗಿ ನಾನಾರೂಪಗಳನ್ನು ಧರಿಸುತ್ತಿರುವನು."

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೧೭ನೆಯ ಅಧ್ಯಾಯವು ಮುಗಿಯಿತು.

ಹಿರಣ್ಯಾಕ್ಷ ಮತ್ತು ಶ್ರೀವರಾಹದೇವರ ದ್ವಂದ್ವಯುದ್ಧ

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ತದೇವಮಾಕರ್ಣ್ಯ ಜಲೇಶಭಾಷಿತಂ
ಮಹಾಮನಾಸ್ತದ್ವಿಗಣಯ್ಯ ದುರ್ಮದಃ ।
ಹರೇರ್ವಿದಿತ್ವಾ ಗತಿಮಙ್ಗ ನಾರದಾ-
ದ್ರಸಾತಲಂ ನಿರ್ವಿವಿಶೇ ತ್ವರಾನ್ವಿತಃ ॥೧॥

ಮಹಾತ್ಮನಾದ ವಿದುರನೇ! ಮುಂದಿನ ಕಥೆಯನ್ನು ಕೇಳು : 'ಶ್ರೀಹರಿಯು ಯುದ್ಧದಲ್ಲಿ ನಿನ್ನನ್ನು ಮಡುಹುವನು'–ಎಂಬ ವರುಣದೇವರ ಮಾತನ್ನು ಕೇಳಿ ಅಹಂಕಾರದಿಂದ ಉನ್ಮತ್ತನಾಗಿದ್ದ ಆ ಹಿರಣ್ಯಾಕ್ಷನಿಗೆ ಸ್ವಲ್ಪವೂ ಅಂಜಿಕೆಯಾಗಲಿಲ್ಲ. ಅದನ್ನು ಲೆಕ್ಕಕ್ಕೇ ತೆಗೆದುಕೊಳ್ಳದೇ ಆತನು ತನಗೆ ತಕ್ಕ ಶತ್ರುವಾದ ಹರಿಯು ಎಲ್ಲಿದ್ದಾನೆ–ಎಂಬುದನ್ನು ಕಂಡು ಹಿಡಿಯಲು ಒಡನೆಯೇ ಅಲ್ಲಿಂದ ಹೊರಟು, ನಾರದರ ಮೂಲಕ ಆ ಜಾಗವನ್ನು ತಿಳಿದುಕೊಂಡು ರಭಸದಿಂದ ರಸಾತಲವನ್ನು ಒಳಹೊಕ್ಕನು.

ಅಲ್ಲಿ ಆತನು ಕಂಡದ್ದೇನು? ವಿಶ್ವವಿಜಯಿಯಾದ ಆ ವರಾಹ ಭಗವಂತನು ಭೂಮಿಯನ್ನು ತನ್ನ ಕೋರೆಹಲ್ಲಿನ ಮೇಲೆ ಇರಿಸಿಕೊಂಡು ಮೇಲಕ್ಕೆ ಹೋಗುತ್ತಿದ್ದಾನೆ. ತನ್ನ ಕೆಂಗಣ್ಣಿನ ಕಾಂತಿಯಿಂದ ಪರರ ತೇಜಸ್ಸನ್ನು ಕಸಿದುಕೊಳ್ಳುತ್ತಾ ಮುನ್ನಡೆಯುತ್ತಿದ್ದಾನೆ. ಆತನನ್ನು ನೋಡಿದೊಡನೆಯೇ ಹಿರಣ್ಯಾಕ್ಷನು ಘೊಳ್ಳೆಂದು ನಕ್ಕು–'**ಅಹೋ ವನ ಗೋಚರೋ ಮೃಗಃ!**'– 'ಅರೇ! ಈ ಅರಣ್ಯದ ಪಶುವು ಇಲ್ಲಿಗೆ ಎಲ್ಲಿಂದ ಬಂತು?'–ಎಂದು ಪರಿಹಾಸ್ಯಮಾಡುತ್ತಾ ಹೇಳಿದನು :

ಆಹ್ಯೈನಮೇಹ್ಯಜ್ಞ ಮಹೀಂ ವಿಮುಞ್ಚ ನೋ
ರಸೌಕಸಾಂ ವಿಶ್ವಸೃಜೇಯಮರ್ಪಿತಾ ।
ನ ಸ್ವಸ್ತಿ ಯಾಸ್ಯಸ್ಯನಯಾ ಮಮೇಕ್ಷತಃ
ಸುರಾಧಮಾಸಾದಿತಸೂಕರಾಕೃತೇ ॥೨॥

"ಎಲವೋ ಮೂಢನೇ! ಇತ್ತ ಬಾ. ಈ ಭೂಮಿಯನ್ನು ಬಿಟ್ಟು ಬಿಡು. ಇದನ್ನು ವಿಶ್ವಕರ್ತನಾದ ಬ್ರಹ್ಮನು ರಸಾತಲದಲ್ಲಿ ವಾಸಮಾಡುವ ನಮ್ಮ ವಶಕ್ಕೆ ಒಪ್ಪಿಸಿದ್ದಾನೆ. ನನ್ನ ಕಣ್ಣೆದುರಿಗೇ ನೀನು ನೆಮ್ಮದಿಯಾಗಿ ಹೋಗಲಾರೆ. ಹಂದಿಯ ರೂಪವನ್ನು ಹೊಂದಿ ಬಂದಿರುವ ಸುರಾಧಮನೇ! ನಿಲ್ಲು, ನಿಲ್ಲು!

ತ್ವಂ ನಃ ಸಪತ್ನೈರಭವಾಯ ಕಿಂ ಭೃತೋ
ಯೋ ಮಾಯಯಾ ಹನ್ತ್ಯಸುರಾನ್ಪರೋಕ್ಷಜಿತ್ ।
ತ್ವಾಂ ಯೋಗಮಾಯಾಬಲಮಲ್ಪಪೌರುಷಂ
ಸಂಸ್ಥಾಪ್ಯ ಮೂಢ ಪ್ರಮೃಜೇ ಸುಹೃಚ್ಛುಚಃ ॥೪॥

ನಿಜರೂಪದಿಂದ ಯುದ್ಧಮಾಡದೇ ಮಾಯೆಯಿಂದ ಮರೆಮಾಚಿ ಕೊಂಡು ಅಸುರರನ್ನು ಕೊಂದು ಜಯಗಳಿಸುತ್ತಿರುವೆಯಲ್ಲವೇ! ಹೀಗೆ ಮೋಸದಿಂದ ನಮ್ಮನ್ನು ನಾಶಪಡಿಸಲಿಕ್ಕಾಗಿಯೇ ನಮ್ಮ ಶತ್ರುಗಳು ನಿನ್ನನ್ನು ಸಾಕಿದ್ದಾರೋ? ಮೂರ್ಖನೇ! ನಿನ್ನ ಬಲ ಯೋಗಮಾಯೆಯೊಂದೇ. ಅದನ್ನು ಬಿಟ್ಟು ನಿನ್ನಲ್ಲಿ ಬೇರೆ ಪೌರುಷ ಏನಿದೆ? ಇಂದು ನಿನ್ನ ಕತೆಯನ್ನು ಮುಗಿಸಿಬಿಟ್ಟು ನನ್ನ ಬಂಧುಗಳ ದುಃಖವನ್ನು ದೂರ ಮಾಡುತ್ತೇನೆ.

ತ್ವಯಿಂ ಸಂಸ್ಥಿತೇ ಗದಯಾ ಶೀರ್ಣಶೀರ್ಷ-
ಣ್ಯಸ್ಮದ್ಭುಜಚ್ಯುತಯಾ ಯೇ ಚ ತುಭ್ಯಮ್ ।
ಬಲಿಂ ಹರನ್ತ್ಯೃಷಯೋ ಯೇ ಚ ದೇವಾಃ
ಸ್ವಯಂ ಸರ್ವೇ ನ ಭವಿಷ್ಯನ್ತ್ಯಮೂಲಾಃ ॥೫॥

ದೇವತೆಗಳೂ, ಋಷಿಗಳೂ ಎಲ್ಲರೂ ನಿನ್ನನ್ನು ಆಧರಿಸಿ ಬದುಕಿದ್ದಾ ರಲ್ಲವೇ! ಆದರೆ ಇಂದು ನಾನು ಬೀಸುವ ಗದೆಯ ಏಟಿನಿಂದ ನಿನ್ನ ತಲೆಯು ಒಡೆದುಹೋಗಿ ಸತ್ತುಬೀಳುವೆ. ಆಗ ನಿನ್ನನ್ನು ಆರಾಧಿಸುತ್ತಿರುವ ಆ ದೇವತೆಗಳೂ–ಋಷಿಗಳೂ ಬೇರುಕಿತ್ತ ಮರದಂತೆ ತಾವಾಗಿಯೇ ಸತ್ತು ಹೋಗುವರು".

ಹೀಗೆ ಶತ್ರುವು ತನ್ನನ್ನು ಬೈಗಳಗಳೆಂಬ ಬಾಣಗಳಿಂದ ನೋಯಿಸುತ್ತಿದ್ದರೂ ಭಗವಂತನು ಅವುಗಳನ್ನು ಸಹಿಸಿಕೊಂಡನು. ಏಕೆಂದರೆ : ಕೋರೆಹಲ್ಲುಗಳ ತುದಿಯಲ್ಲಿದ್ದ ಭೂದೇವಿಯು ಆ ಘೋರರೂಪಿಯಾದ ಅಸುರನ ಬೆದರಿಕೆಯ ಮಾತನ್ನು ಕೇಳಿ ಭಯಭೀತಳಾಗಿದ್ದುದನ್ನು ಭಗವಂತನು ಗಮನಿಸಿದನು. ಆದ್ದರಿಂದ ಶತ್ರುವು ತನ್ನನ್ನು ಬೈಗುಳಗಳೆಂಬ ಬಾಣಗಳಿಂದ ನೋಯಿಸುತ್ತಿದ್ದರೂ ಸ್ವಾಮಿಯು ಅವುಗಳನ್ನು ಸಹಿಸಿಕೊಂಡು–ಮೊಸಳೆಯಿಂದ ಏಟುತಿಂದ ಗಜರಾಜನು ತನ್ನ ಹೆಣ್ಣಾನೆಯೊಡನೆ ಹೊರಬರುವಂತೆ–ಸುಮ್ಮನೇ ನೀರಿನಿಂದ ಹೊರಬರುತ್ತಿದ್ದನು. ಹೀಗೆ ತನ್ನ ಹೀಯಾಳಿಕೆಗೆ ಯಾವ ಉತ್ತರವನ್ನೂ ಕೊಡದೇ ಶ್ರೀವರಾಹಮೂರ್ತಿಯು ನೀರಿನಿಂದ ಹೊರಗೆ ಹೋಗುತ್ತಿರುವುದನ್ನು ಕಂಡು, ಹಳದಿಯ ತಲೆಗೂದಲು ಮತ್ತು ತೀಕ್ಷ್ಣವಾದ ಕೋರೆಹಲ್ಲುಗಳಿಂದ ಕೂಡಿದ್ದ ಆ ದೈತ್ಯನು–ಮೊಸಳೆಯು ಆನೆಯನ್ನು ಅಟ್ಟಿಸಿಕೊಂಡು ಹೋಗು ವಂತೆ–ಆತನನ್ನು ಹಿಂಬಾಲಿಸಿ ಸಿಡಿಲುಹೊಡೆದಂತೆ ಅಬ್ಬರಿಸುತ್ತಾ 'ಹೇಡಿ ಯಂತೆ ಓಡಿಹೋಗುತ್ತಿರುವೆಯಲ್ಲಾ! ನಿನಗೆ ನಾಚಿಕೆಯಾಗುವುದಿಲ್ಲವೇ? ಅಥವಾ ನಾಚಿಕೆಗೆಟ್ಟ ಅಸಜ್ಜನರಿಗೆ ಹೇಸಿಗೆಯ ಕೆಲಸ ಯಾವುದೂ ಇಲ್ಲವಷ್ಟೇ!' **'ಗತಹ್ರಿಯಾಂ ಕಿಂ ತ್ವಸತಾಂ ವಿಗರ್ಹಿತಮ್'**–ಎಂದು ಕಟಕಿಯನ್ನು (ಚುಚ್ಚುಮಾತನ್ನು) ನುಡಿದನು. ಶ್ರೀಭಗವಂತನು ಭೂಮಿಯನ್ನು ನೀರಿನಿಂದ ಮೇಲಕ್ಕೆ ಎತ್ತಿ ತಂದು ಯೋಗ್ಯವಾದ ಜಾಗದಲ್ಲಿ ಇರಿಸಿ ಅದರಲ್ಲಿ ತನ್ನ ಆಧಾರಶಕ್ತಿಯನ್ನು ತುಂಬಿದನು. ಆಗ ಹಿರಣ್ಯಾಕ್ಷನು ನೋಡುತ್ತಿರುವಂತೆಯೇ ಸೃಷ್ಟಿಕರ್ತರಾದ ಬ್ರಹ್ಮದೇವರು ಆತನನ್ನು ಸ್ತೋತ್ರಮಾಡಿದರು. ದೇವತೆಗಳು ಆತನ ಮೇಲೆ ಹೂಮಳೆಗರೆದರು. ಆಗ ಶ್ರೀಹರಿಯು ಚಿನ್ನದ ಆಭರಣಗಳನ್ನೂ, ಅದ್ಭುತವಾದ ಕವಚವನ್ನೂ ಧರಿಸಿ, ಕೈಯಲ್ಲಿ ದೊಡ್ಡ ಗದೆಯನ್ನು ಹಿಡಿದುಕೊಂಡು ತನ್ನನ್ನು ಕಟುವಾಕ್ಯಗಳಿಂದ ನಿರಂತರವಾಗಿ ನೋಯಿಸುತ್ತಿದ್ದ ಆ ದುಷ್ಟದೈತ್ಯನನ್ನು ಕುರಿತು ಉಕ್ಕೇರಿದ ಕೋಪದಿಂದ ನಗುತ್ತಾ ಹೀಗೆಂದನು : (ಶ್ಲೋಕ 6-9)

ಸತ್ಯಂ ವಯಂ ಭೋ ವನಗೋಚರಾ ಮೃಗಾ
ಯುಷ್ಮದ್ವಿಧಾನ್ಮೃಗಯೇ ಗ್ರಾಮಸಿಂಹಾನ್ ।
ನ ಮೃತ್ಯುಪಾಶೈಃ ಪ್ರತಿಮುಕ್ತಸ್ಯ ವೀರಾ
ವಿಕತ್ಥನಂ ತವ ಗೃಹ್ಣನ್ತ್ಯಭದ್ರ ॥೧೦॥

"ಎಲವೋ ದೈತ್ಯನೇ! ನೀನು ಹೇಳಿದಂತೆ ನಾವು ಅರಣ್ಯದ 'ಮೃಗವೇ' ಆಗಿರುವುದು ಸತ್ಯವೇ ಆಗಿದೆ. ನಿನ್ನಂತಹ ಗ್ರಾಮಸಿಂಹ (ನಾಯಿ) ಗಳನ್ನು ಮಾರ್ಗಣಮಾಡುವುದರಿಂದ (ಹುಡುಕುತ್ತಿರುವುದರಿಂದ) ನಾವು 'ಮೃಗ' ಎಂಬುದರಲ್ಲಿ ಏನೂ ಸಂಶಯವಿಲ್ಲ. ಅಮಂಗಳನೇ! ಮೃತ್ಯುಪಾಶ ದಲ್ಲಿ ಸಿಲುಕಿಕೊಂಡಿರುವ ನಿನ್ನಂತಹ ದೌರ್ಭಾಗ್ಯದ ಜೀವಿಗಳು ಆತ್ಮಪ್ರಶಂಸೆಯಿಂದ ಜಂಭಕೊಚ್ಚಿಕೊಳ್ಳುತ್ತಿದ್ದರೆ ವೀರಪುರುಷರು ಆ ಬೊಗಳಾಟಕ್ಕೆ ಗಮನವೀಯುವುದಿಲ್ಲ. ಅದಕ್ಕೆ ನಾವು ಮೌನವಾಗಿದ್ದೆವು.

ಏತೇ ವಯಂ ನ್ಯಾಸಹರಾ ರಸೌಕಸಾಂ
ಗತಹ್ರಿಯೋ ಗದಯಾ ದ್ರಾವಿತಾಸ್ತೇ ।
ತಿಷ್ಠಾಮಹೇಽಥಾಪಿ ಕಥಂಚಿದಾಜೌ
ಸ್ಥೇಯೇಂ ಕ್ವ ಯಾಮೋ ಬಲಿನೋತ್ಪಾದ್ಯ ವೈರಮ್ ॥

'ನಾವು ರಸತಲನಿವಾಸಿಗಳ ನಿಕ್ಷೇಪದ ಸಂಪತ್ತನ್ನು ಕಸಿದುಕೊಂಡು ನಾಚಿಕೆಗೆಟ್ಟು ನಿನ್ನ ಗದೆಗೆ ಭಯಪಟ್ಟು ಇಲ್ಲಿಗೆ ಓಡಿಬಂದಿದ್ದೇವೆ'–ಎಂದು ಹೇಳಿದೆಯಲ್ಲವೇ? ಅದೂ ನಿಜವೇ. ನಿನ್ನಂತಹ ಅದ್ವಿತೀಯನಾದ ವೀರನ ಮುಂದೆ ಯುದ್ಧದಲ್ಲಿ ಸೆಣಸುವ ಸಾಮರ್ಥ್ಯವು ನಮಗೆ ಎಲ್ಲಿಂದ ಬರಬೇಕು? ಆದರೂ ಹೇಗೋ ನಿನ್ನ ಮುಂದೆ ಯುದ್ಧಮಾಡಲು ನಿಂತಿದ್ದೀವಲ್ಲಾ! ನಿನ್ನಂತಹ ಬಲಶಾಲಿಗಳೊಡನೆ ವೈರವನ್ನು ಕಟ್ಟಿಕೊಂಡ ಬಳಿಕ ನಾವು ಎಲ್ಲಿಗೆ ತಾನೇ ಹೋಗಲಿಕ್ಕೆ ಸಾದ್ಯ?

ತ್ವಂ ಪದ್ರಾಥಾನಾಂ ಕಿಲ ಯುಥಪಾಧಿಪೋ
ಘಟಸ್ವ ನೋಽಸ್ವಸ್ತಯ ಆಶ್ವನೂಹಃ ।
ಸಂಸ್ಥಾಪ್ಯ ಚಾಸ್ಮಾನ್ಪ್ರಮೃಜಾಶ್ರು ಸ್ವಕಾನಾಂ
ಯಃ ಸ್ವಾಂ ಪ್ರತಿಜ್ಞಾಂ ನಾತಿಪಿಪರ್ತ್ಯಸಭ್ಯಃ ॥೧೨॥

ನೀನು ಪದಾತಿಗಳಾದ ಯೋಧವೀರರಲ್ಲಿ ಮಹಾನಾಯಕನು. ಆದ್ದರಿಂದ ಈಗ ಯಾವ ಶಂಕೆ-ಸಂಕೋಚಗಳೂ ಇಲ್ಲದೇ ನಮಗೆ ಅನಿಷ್ಟವನ್ನು ಮಾಡಲು ಪ್ರಯತ್ನಿಸು. ನಮ್ಮನ್ನು ಕೊಂದು ನಿನ್ನ ನೆಂಟರಿಷ್ಟರ ಕಣ್ಣೀರನ್ನು ಒರೆಸುವವನಾಗು. ಇನ್ನು ತಡಮಾಡಬೇಡ. ಮಾಡಿದ್ದ ಪ್ರತಿಜ್ಞೆಯನ್ನು ನೆರವೇರಿಸದೇ ಇರುವವನು ಅಸಭ್ಯನು. ಸತ್ಪುರುಷರಲ್ಲಿ ಸೇರಿ ಕುಳಿತುಕೊಳ್ಳಲು ಅವನಿಗೇ ಯೋಗ್ಯತೆಯಿಲ್ಲವಷ್ಟೇ!"

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ವಿದುರ! ಶ್ರೀಭಗವಂತನು ಕ್ರೋಧದಿಂದ ಆ ದೈತ್ಯನಿಗೆ ಹೀಗೆ ಕಟಕಿಯನ್ನು (ಚುಚ್ಚುಮಾತನ್ನು) ನುಡಿದು ತಿರಸ್ಕರಿಸಲು ಆತನು– ಕಾಲಿನಿಂದ ಮೆಟ್ಟಿ ಆಟವಾಡಿಸಲ್ಪಡುವ ಕಾಳಿಂಗನಾಗದಂತೆ–ಕೆರಳಿದ ಕ್ರೋಧದಿಂದ ತಳ-ಮಳಗೊಂಡು ಭುಗಿಲೆದ್ದನು. ಆ ಮಾತುಗಳನ್ನು ತಾಳಲಾರದೇ ಕ್ರೋಧದಿಂದ ಸಿಡಿ-ಮಿಡಿಗೊಂಡು ನಿಟ್ಟುಸಿರುಬಿಡತೊಡಗಿದನು. ಆತನ ಇಂದ್ರಿಯಗಳು ಕ್ಷೋಭೆಗೊಂಡವು. ಒಡನೆಯೇ ಆತನು ಹೌಹಾರಿ ಹರಿಯ ಮೇಲೆ ಗದೆಯನ್ನು ಪ್ರಯೋಗಿಸಿದನು. ಆದರೆ ಭಗವಂತನು ತನ್ನ ಎದೆಯ ಮೇಲೆ ಬೀಳಲು ಪ್ರಯೋಗಿಸಿದ ಆ ಗದೆಯ ಏಟನ್ನು ದಿಢೀರನೆ ಓರೆಯಾಗಿ ತಿರುಗಿ ತಪ್ಪಿಸಿಕೊಂಡುಬಿಟ್ಟನು. ಯೋಗಸಿದ್ಧಿಯನ್ನು ಪಡೆದ ಪುರುಷನು ಮೃತ್ಯುವಿನ ಆಕ್ರಮಣದಿಂದ ತನ್ನನ್ನು ರಕ್ಷಸಿಕೊಳ್ಳುವುದಿಲ್ಲವೇ? ಹಾಗೆಯೇ ಸ್ವಾಮಿಯು ಆ ಗದೆಯ ಆಘಾತವು ತನ್ನ ಮೇಲೆ ಬೀಳದಂತೆ ತಪ್ಪಿಸಿಕೊಂಡು ಅದನ್ನು ವ್ಯರ್ಥಗೊಳಿಸಿದನು. ಮತ್ತೆ ದೈತ್ಯನು ಕ್ರೋಧದಿಂದ ತುಟಿಯನ್ನು ಕಚ್ಚಿಕೊಳ್ಳುತ್ತಾ ತನ್ನ ಗದೆಯನ್ನು ಎತ್ತಿಕೊಂಡು ಮತ್ತೆ-ಮತ್ತೆ ತಿರುಗಿಸ ತೊಡಗಲು–ಶ್ರೀಹರಿಯೂ ಕೂಡ ಕೋಪಗೊಂಡು ಆತನ ಮೇಲೆ ಛಂಗನೆ ಹಾರಿದನು. ಸಾಧುಶ್ರೇಷ್ಠನೇ! ಕೇಳು. ಆಗ ಪ್ರಭುವು ಶತ್ರುವಿನ ಬಲಹುಬ್ಬಿನ ಮೇಲೆ ಗದೆಯನ್ನು ವೇಗವಾಗಿ ಬೀಸಿದನು. ಆದರೆ ಗದಾಯುದ್ಧದಲ್ಲಿ ಕುಶಲನಾದ ಹಿರಣ್ಯಾಕ್ಷನು ಅದನ್ನು ಮಧ್ಯದಲ್ಲಿಯೇ ತನ್ನ ಗದೆಯಿಂದ ತಡೆಹಿಡಿದನು. ಈ ರೀತಿಯಲ್ಲಿ ಶ್ರೀಹರಿಯೂ ಮತ್ತು ಹಿರಣ್ಯಾಕ್ಷನೂ ಒಬ್ಬರನೊಬ್ಬರು ಜಯಿಸುವ ಇಚ್ಛೆಯಿಂದ

ಅತ್ಯಂತಕ್ರುದ್ಧರಾಗಿ ಪರಸ್ಪರವಾಗಿ ತಮ್ಮ ಭಾರವಾದ ಗದೆಗಳಿಂದ ಪ್ರಹರಿಸತೊಡಗಿದರು. ಇಬ್ಬರಿಗೂ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬ ಸ್ಪರ್ಧೆಯುಂಟಾಯಿತು. ಇಬ್ಬರ ಅಂಗಗಳೂ ಗದೆಗಳ ಏಟುಗಳಿಂದ ಗಾಯ ಗೊಂಡು ಅವುಗಳಿಂದ ರಕ್ತವು ಸುರಿಯುತ್ತಾ ಅದರ ವಾಸನೆಯು ಇಬ್ಬರಿಗೂ ಕ್ರೋಧವನ್ನು ಉಕ್ಕೇರಿಸುತ್ತಿತ್ತು. ಇಬ್ಬರೂ ಬಗೆ-ಬಗೆಯ ವರಸೆಗಳನ್ನು ತೋರಿಸತೊಡಗಿದರು. ಹಸುವಿಗೋಸ್ಕರ ಪರಸ್ಪರವಾಗಿ ಸೆಣಸುವ ಎರಡು ಹೋರಿಗಳಂತೆ–ಭೂಮಿಗೋಸ್ಕರವಾಗಿ ಇಬ್ಬರೂ ಭಯಂಕರವಾಗಿ ಯುದ್ಧ ಮಾಡತೊಡಗಿದರು. ಹೀಗೆ ಹಿರಣ್ಯಾಕ್ಷನಿಗೂ–ಮಾಯೆಯಿಂದ ವರಾಹ ರೂಪವನ್ನು ಕೈಗೊಂಡಿದ್ದ ಯಜ್ಞಮೂರ್ತಿಯಾದ ಭಗವಂತನಿಗೂ ಭೂದೇವಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೋಸ್ಕರ ಹಗೆತನದಿಂದ ಯುದ್ಧವಾಗುತ್ತಿರಲು ಅದನ್ನು ನೋಡಲು ಋಷಿಗಳೊಡನೆ ಬ್ರಹ್ಮದೇವರು ಅಲ್ಲಿಗೆ ಆಗಮಿಸಿದರು. ಅವರ ಸುತ್ತಲೂ ಸಾವಿರಾರು ಮಂದಿ ಋಷಿಗಳು ನೆರೆದಿದ್ದರು. 'ಈ ದೈತ್ಯನು ಮಹಾಶೂರವೀರನಾಗಿದ್ದಾನೆ. ಅತ್ಯಂತ ನಿರ್ಭಯನಾಗಿದ್ದಾನೆ. ಶತ್ರುವನ್ನು ಎದುರಿಸಿ ಆಕ್ರಮಣಮಾಡುವು ದರಲ್ಲಿಯೂ ಅತ್ಯಂತಸಮರ್ಥನಾಗಿದ್ದಾನೆ ಮತ್ತು ಈತನ ಪರಾಕ್ರಮವನ್ನು ಧ್ವಂಸಮಾಡುವುದು ಅತಿಕಠಿಣವಾದ ಕಾರ್ಯ'–ಎಂಬುದೆಲ್ಲವನ್ನೂ ಅವರು ಗಮನಿಸಿ ಆದಿವರಾಹರೂಪಿಯಾದ ನಾರಾಯಣನಲ್ಲಿ ಹೀಗೆ ಬಿನ್ನವಿ ಸಿದರು: (ಶ್ಲೋಕ 13-21)

ಏಷ ತೇ ಧೇವ ದೇವಾನಾಮಙ್ಘ್ರಿಮೂಲಮುಪೇಯುಷಾಮ್ ।
ವಿಪ್ರಾಣಾಂ ಸೌರಭೇಯೀಣಾಂ ಭೂತಾನಾಮಪ್ಯನಾಗಸಾಮ್ ॥೨೨॥

ಆಗಸ್ಕೃದ್ಭಯಕೃದ್ದುಷ್ಕೃದಸ್ಮದ್ರಾದ್ಧವರೋಽಸುರಃ ।
ಅನ್ವೇಷನ್ನಪ್ರತಿರಥೋ ಲೋಕಾನಟತಿ ಕಣ್ಟಕಃ ॥೨೩॥

"ಸ್ವಾಮಿಯೇ! ಈ ದುಷ್ಟದೈತ್ಯನು ನನ್ನಿಂದ ವರವನ್ನು ಪಡೆದು ತುಂಬಾ ಪ್ರಬಲನಾಗಿಬಿಟ್ಟಿದ್ದಾನೆ. ಈಗ ಈತನು ನಿನ್ನಲ್ಲಿ ಶರಣಾಗತರಾಗಿರುವ ಗೋವುಗಳಿಗೂ ಮತ್ತು ಇತರ ನಿರಪರಾಧಿಜೀವಿಗಳಿಗೂ ಬಹಳ ತೊಂದರೆಯನ್ನುಂಟುಮಾಡುತ್ತಾ ದುಃಖವನ್ನೂ–ಭಯವನ್ನೂ ಅವರಲ್ಲಿ

ತುಂಬುತ್ತಿದ್ದಾನೆ. ತನಗೆ ಸಾಟಿಯಾದ ಬೇರೊಬ್ಬ ಯೋಧನಿಲ್ಲವಾದ್ದರಿಂದ ಈ ಲೋಕಕಂಟಕನು ತನ್ನನ್ನು ಎದುರಿಸಿ ಯುದ್ಧಮಾಡುವ ವೀರನನ್ನು ಹುಡುಕುತ್ತಾ ಮೂರು ಲೋಕಗಳಲ್ಲೂ ಸಂಚಾರಮಾಡುತ್ತಿದ್ದಾನೆ.

ಮೈನಂ ಮಾಯಾವಿನಂ ದೃಪ್ತಂ ನಿರಙ್ಕುಶಮಸತ್ತಮಮ್ ।
ಆಕ್ರೀಡ ಬಾಲವದ್ದೇವ ಯಥಾಶೀವಿಷಮುತ್ಥಿತಮ್ ॥೨೪॥

ಇದಲ್ಲದೇ ಈ ದುಷ್ಟನು ಅತಿಮಾಯಾವಿಯೂ, ದುರಹಂಕಾರಿಯೂ ಮತ್ತು ಯಾರ ಶಾಸನಕ್ಕೂ ಒಳಪಡದೇ ಸ್ವೇಚ್ಛಾಚಾರದಲ್ಲಿ ತೊಡಗಿರುವವನೂ ಆಗಿದ್ದಾನೆ. ಮಗುವು ಕೋಪಗೊಂಡ ಸರ್ಪದೊಡನೆ ಆಟವಾಡುವ ಪರಿಯಲ್ಲಿ–ನೀನು ಈತನೊಡನೆ ಕ್ರೀಡಿಸಬಾರದು.

ನ ಯಾವ ದೇವ ವರ್ಧೇತ ಸ್ವಾಂ ವೇಲಾಂ ಪ್ರಾಪ್ಯ ಧಾರುಣಃ ।
ಸ್ವಾಂ ದೇವ ಮಾಯಾಮಾಸ್ಥಾಮ ತಾವಜ್ಜಹ್ಯಘಮಚ್ಯುತ ॥೨೫॥

ಓ ದೇವದೇವನೇ! ಅಚ್ಯುತನೇ! ದೈತ್ಯನಿಗೆ ಬಲವನ್ನು ವೃದ್ಧಿಪಡಿಸುವ ಸಮಯವು ಬಂದು ಈತನು ಹೆಚ್ಚು ಬಲಶಾಲಿಯಾಗುವಷ್ಟರೊಳಗೇ ನೀನು ನಿನ್ನ ಯೋಗಮಾಯೆನ್ನು ಸ್ವೀಕರಿಸಿ ಪಾಪಿಯಾದ ಈತನನ್ನು ಸಂಹರಿಸಿಬಿಡಬೇಕು.

ಏಷಾ ಘೋರತಮಾ ಸನ್ಧ್ಯಾ ಲೋಕಚ್ಛಮ್ಬಟ್ಕರೀ ಪ್ರಭೋ ।
ಉಪಸರ್ಪತಿ ಸರ್ವಾತ್ಮನ್ಸುರಾಣಾಂ ಜಯಮಾವಹ ॥೨೬॥

ಪ್ರಭುವೇ! ಇದೋ ನೋಡು. ಲೋಕವನ್ನು ಸಂಹಾರಮಾಡುವ ಭಯಂಕರವಾದ ಸಂಧ್ಯಾಕಾಲವು ಬರುವುದರಲ್ಲಿದೆ. ಅಷ್ಟರೊಳಗೇ ಈತನನ್ನು ಸಂಹಾರಮಾಡಿ ದೇವತೆಗಳಿಗೆ ವಿಜಯವನ್ನು ದಯಪಾಲಿಸು. ಸ್ವಾಮಿ!

ಅಧುನೈಷೋಽಭಿಜಿನ್ನಾಮ ಯೋಗೋ ಮೌಹೂರ್ತಿಕೋ ಹ್ಯಗಾತ್ ।
ಶಿವಾಯ ನಸ್ತ್ವಂ ಸುಹೃದಾಮಾಶು ನಿಸ್ತರ ದುಸ್ತರಮ್ ॥೨೭॥

ಈಗ ಅಭಿಜಿತ್ ಎಂಬ ಮಂಗಳಮಯವಾದ ಮುಹೂರ್ತದ ಯೋಗವೂ ಬಂದಿದೆ. ಆದ್ದರಿಂದ ನಿನ್ನ ಗೆಳೆಯರಾಗಿರುವ ನಮ್ಮ ಕಲ್ಯಾಣಕ್ಕಾಗಿ ಈ ದುರ್ಜಯನಾದ ದೈತ್ಯನನ್ನು ಶೀಘ್ರವಾಗಿಯೇ ಸಂಹರಿಸಿಬಿಡು.

ದಿಷ್ಟ್ಯಾ ತ್ವಾಂ ವಿಹಿತಂ ಮೃತ್ಯುಮಯಮಾಸಾದಿತಃ ಸ್ವಯಮ್ ।
ವಿಕ್ರಮ್ಯೈನಂ ಮೃಧೇ ಹತ್ವಾ ಲೋಕಾನಾಧೇಹಿ ಶರ್ಮಣಿ ॥೨೮॥

ಪ್ರಭುವೇ! ತನಗೆ ಮೃತ್ಯುವಾಗಿ ವಿಧಾಯಕನಾಗಿರುವ ನಿನ್ನ ಬಳಿಗೆ ಅದೃಷ್ಟವಶದಿಂದ ಈತನೇ ಬಂದು ಸೇರಿದ್ದಾನೆ. ಈಗ ನೀನು ಯುದ್ಧದಲ್ಲಿ ಪರಾಕ್ರಮದಿಂದ ಈತನನ್ನು ಮಡುಹಿ ಲೋಕಗಳಿಗೆ ಶಾಂತಿಯನ್ನು ಉಂಟು ಮಾಡು."

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೧೮ ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೧೯ನೆಯ ಅಧ್ಯಾಯ

ಹಿರಣಾಕ್ಷನ ವಧೆ

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಅವಧಾರ್ಯ ವಿರಿಞ್ಚಸ್ಯ ನಿರ್ವ್ಯಲೀಕಾಮೃತಂ ವಚಃ ।
ಪ್ರಹಸ್ಯ ಪ್ರೇಮಗರ್ಭೇಣ ತದಾಪಾಙ್ಗೇನ ಸೋಽಗ್ರಹೀತ್ ॥೧॥

ವಿದುರನೇ! ಬ್ರಹ್ಮದೇವರು ನುಡಿದ ನಿಷ್ಕಪಟವೂ–ಅಮೃತಮಯವೂ ಆದ ವಿಜ್ಞಾಪನೆಯನ್ನು ಕೇಳಿ ಭಗವಂತನು ಅವರ ಮುಗ್ಧತನಕ್ಕಾಗಿ ನಸುನಗುತ್ತಾ ತನ್ನ ಪ್ರೇಮಪೂರಿತವಾದ ಕಡೆಗಣ್ಣಿನ ನೋಟದಿಂದ ಅವರ ಪ್ರಾರ್ಥನೆಯನ್ನು ಸ್ವೀಕಾರಮಾಡಿದನು.

ಅನಂತರ ಆತನು ತನ್ನ ಮುಂದೆ ನಿರ್ಭಯವಾಗಿ ಸಂಚರಿಸುತ್ತಿದ್ದ ಶತ್ರುವಿನ ಮೇಲೆ ಧಿಡೀರನೆ ಎರಗಿ ಆತನ ದವಡೆಯ ಮೇಲೆ ಗದೆಯನ್ನು ಬೀಸಿದನು. ಆದರೆ ಹಿರಣ್ಯಾಕ್ಷನ ಗದೆಗೆ ಢಿಕ್ಕಿಹೊಡೆದು ಆ ಗದೆಯು ಶ್ರೀಭಗವಂತನ ಕೈಯಿಂದ ಜಾರಿ, ಸುತ್ತುಹೊಡೆಯುತ್ತಾ ನೆಲದಲ್ಲಿ ಉರುಳಿ ಕಂಗೊಳಿಸಿತು. ಅದು ತುಂಬಾ ಅದ್ಭುತವಾದ ಘಟನೆಯೆಂದು ಎಲ್ಲರಿಗೂ ಅನಿಸಿತು. ಆಗ ಶತ್ರುವಿನ ಮೇಲೆ ಆಕ್ರಮಣಮಾಡಲು ಅನುಕೂಲವಾದ

ಅವಕಾಶವಾಗಿದ್ದರೂ—ಶತ್ರುವು ಆಯುಧರಹಿತನಾಗಿರುವುದನ್ನು ಕಂಡು—ಹಿರಣ್ಯಾಕ್ಷನು ಯುದ್ಧಧರ್ಮವನ್ನು ಪಾಲನೆಮಾಡುತ್ತಾ ಆತನ ಮೇಲೆ ಆಕ್ರಮಣನಡೆಸಲಿಲ್ಲ. ಭಗವಂತನ ಕ್ರೋಧವನ್ನು ಹೆಚ್ಚಿಸುವುದಕ್ಕಾಗಿಯೇ ಆತನು ಹೀಗೆ ಮಾಡಿದನು. ತನ್ನ ಗದೆಯು ಕೆಳಗೆ ಉರುಳಿ ಜನರು ಅದಕ್ಕಾಗಿ ಹಾಹಾಕಾರಮಾಡಿ ಸುಮ್ಮನಾಗಲು, ಪ್ರಭುವು ಆತನ ಧರ್ಮಬುದ್ಧಿಯನ್ನು ಪ್ರಶಂಸೆಮಾಡಿ ತನ್ನ ಸುದರ್ಶನಚಕ್ರವನ್ನು ಸ್ಮರಣೆಮಾಡಿದನು. ಸುದರ್ಶನ ಚಕ್ರವು ಒಡನೆಯೇ ಅಲ್ಲಿ ಕಾಣಿಸಿಕೊಂಡು ಭಗವಂತನ ಹಸ್ತದಲ್ಲಿ ತಿರುಗತೊಡಗಿತು. ಆಗಲೂ ಶ್ರೀಭಗವಂತನು ತನ್ನ ಮುಖ್ಯಪಾರ್ಷದನಾಗಿದ್ದ ದೈತ್ಯಾಧಮನಾದ ಹಿರಣ್ಯಾಕ್ಷನೊಡನೆ ವಿಶೇಷವಾಗಿ ಕ್ರೀಡಿಸತೊಡಗಿದನು. ಆಗ ಆತನ ಪ್ರಭಾವವನ್ನರಿಯದ ದೇವತೆಗಳು—'ಪ್ರಭೋ! ನಿನಗೆ ಜಯವಾಗಲಿ. ಈತನನ್ನು ಇನ್ನು ಆಟವಾಡಿಸಬೇಡ. ಶೀಘ್ರವಾಗಿ ಸಂಹರಿಸಿಬಿಡು"—ಎಂದು ವಿಚಿತ್ರವಾಗಿ ಪ್ರಾರ್ಥಿಸುತ್ತಿರುವುದು ಸ್ವಾಮಿಗೆ ಕೇಳಿಸಿತು. ಕಮಲಾಕ್ಷನಾದ ಶ್ರೀಹರಿಯು ತನ್ನೆದುರಿಗೆ ಸುದರ್ಶನಚಕ್ರಧಾರಿಯಾಗಿ ನಿಂತಿರುವುದನ್ನು ನೋಡಿ ಆ ದೈತ್ಯರಾಜನ ಸಕಲೇಂದ್ರಿಯಗಳೂ ತಳಮಳಗೊಂಡುವು. ಆತನು ನಿಟ್ಟುಸಿರುಬಿಡುತ್ತಾ ಹಲ್ಲುಗಳಿಂದ ತುಟಿಯನ್ನು ಕಚ್ಚಿಕೊಳ್ಳತೊಡಗಿದನು. ಆಗ ತೀಕ್ಷ್ಣವಾದ ಕೋರೆಹಲ್ಲುಗಳುಳ್ಳ ದೈತ್ಯನು ಶ್ರೀಭಗವಂತನನ್ನು ಭಸ್ಮಮಾಡಿಬಿಡುವನೋ—ಎಂಬಂತೆ ಕಣ್ಣುಗಳಿಂದ ದುರುಗುಟ್ಟಿಕೊಂಡು ನೋಡತೊಡಗಿದನು. ಆತನು ಥಟ್ಟನೆ ಜಿಗಿದು 'ಎಲವೋ! ಈಗ ನೀನು ಉಳಿಯಲಾರೆ'—ಎಂದು ಗರ್ಜಿಸುತ್ತಾ ಶ್ರೀಹರಿಯ ಮೇಲೆ ಬಲವಾಗಿ ಗದೆಯನ್ನು ಪ್ರಯೋಗಿಸಿದನು. ಆಗ ಯಜ್ಞಮೂರ್ತಿಯಾದ ಶ್ರೀಭಗವಂತನು ಶತ್ರುವು ನೋಡುತ್ತಿರುವಂತೆಯೇ ತನ್ನ ಎಡಗಾಲಿನಿಂದ ಆ ಗದೆಯನ್ನು ಲೀಲಾಜಾಲವಾಗಿ ಕೆಳಕ್ಕೆ ಉರುಳಿಸಿ 'ಎಲೈ ದೈತ್ಯನೇ! ನೀನು ನನ್ನನ್ನು ಗೆಲ್ಲಲು ಬಯಸುತ್ತಿದ್ದೀಯೆ. ಆದ್ದರಿಂದ ನಿನ್ನ ಶಸ್ತ್ರವನ್ನು ಎತ್ತಿಕೊಂಡು ಮತ್ತೊಂದು ಬಾರಿ ಆಕ್ರಮಣಮಾಡುವವನಾಗು'—ಎಂದು ಆತನಿಗೆ ಹೇಳಿದನು. ಶ್ರೀಭಗವಂತನ ಆ ಹೇಳಿಕೆಯನ್ನು ಕೇಳಿ ಆತನು ಮತ್ತೆ ಗದೆಯನ್ನು ಪ್ರಯೋಗಿಸಿ ಭಯಂಕರವಾಗಿ ಗರ್ಜನೆ ಮಾಡತೊಡಗಿದನು. ಗದೆಯು ತನ್ನ ಕಡೆಗೇ ಬರುತ್ತಿರುವುದನ್ನು ಕಂಡು

ಭಗವಂತನು–ಗರುಡನು ಹೆಣ್ಣುಸರ್ಪವನ್ನು ಹಿಡಿಯುವಂತೆ–ನಿಂತಲ್ಲಿಯೇ ನಿಂತಿದ್ದು ಅದನ್ನು ಅನಾಯಾಸವಾಗಿ ಹಿಡಿದುಕೊಂಡುಬಿಟ್ಟನು.

(ಶ್ಲೋಕ 1-11)

ತನ್ನ ಪ್ರಯತ್ನವು ವ್ಯರ್ಥವಾದುದನ್ನು ಕಂಡು ಆ ಮಹಾದೈತ್ಯನ ಗರ್ವವು ಇಳಿದು ತೇಜಸ್ಸು ನಷ್ಟವಾಗಿಬಿಟ್ಟಿತು. ಈ ಬಾರಿ ಭಗವಂತನು ಗದೆಯನ್ನು ಕೊಡಲು ಬಂದಾಗ ಆತನು ಅದನ್ನು ತೆಗೆದುಕೊಳ್ಳಲು ಇಷ್ಟಪಡಲಿಲ್ಲ. ಜ್ಞಾನಿಯಾದ ಬ್ರಾಹ್ಮಣನ ಮೇಲೆ* ಶೂನ್ಯವನ್ನು ಪ್ರಯೋಗಿಸುವಂತೆ–ಆ ದೈತ್ಯನು ಭಗವಂತನ ಮೇಲೆ ಪ್ರಯೋಗಿಸುವುದಕ್ಕಾಗಿ ಉರಿಯುವ ಬೆಂಕಿಯಂತಿದ್ದ ತ್ರಿಶೂಲವನ್ನು ಕೈಯಲ್ಲಿ ಎತ್ತಿಕೊಂಡನು. ಮಹಾಬಲಶಾಲಿಯಾದ ಹಿರಣ್ಯಾಕ್ಷನು ಬಲಪೂರ್ವಕವಾಗಿ ರಭಸದಿಂದ ಪ್ರಯೋಗಿಸಿದ ತೇಜಸ್ವಿಯಾದ ಆ ತ್ರಿಶೂಲವು ಆಕಾಶದಲ್ಲಿ ಥಳ-ಥಳಿಸ ತೊಡಗಿತು. ಭಗವಂತನು ಅದನ್ನು–ಇಂದ್ರನು ಗರುಡದೇವರು ಬಿಟ್ಟುಕೊಟ್ಟ ತೇಜಸ್ವಿಯಾದ ಗರಿಯನ್ನು ಕತ್ತರಿಸಿಹಾಕಿದಂತೆ[1]–ತೀಕ್ಷ್ಣವಾದ ಅಲುಗಿನಿಂದ ತೊಳಗಿ ಬೆಳಗುತ್ತಿದ್ದ ಸುದರ್ಶನಚಕ್ರದಿಂದ ಕತ್ತರಿಸಿಹಾಕಿದನು. ತನ್ನ ತ್ರಿಶೂಲವು ಭಗವಂತನು ಸುದರ್ಶನಚಕ್ರದಿಂದ ಛಿನ್ನ-ಭಿನ್ನವಾಗಿಬಿಟ್ಟುದನ್ನು ಕಂಡು ದೈತ್ಯನಿಗೆ ಮಿತಿಮೀರಿದ ಕ್ರೋಧವುಂಟಾಯಿತು. ಆಗ ಆತನು ಭಗವಂತನ ಬಳಿಗೆ ಬಂದು ತನ್ನ ಕಠೋರವಾದ ಮುಷ್ಟಿಯಿಂದ ಶ್ರೀವತ್ಸಚಿಹ್ನೆಯಿಂದ ಬೆಳಗುತ್ತಿದ್ದ ಆತನ ಎದೆಗೆ ಬಲವಾಗಿ ಹೊಡೆದು ಗಟ್ಟಿಯಾಗಿ ಗರ್ಜನೆಮಾಡಿ ಕಣ್ಮರೆಯಾಗಿಬಿಟ್ಟನು. ಆದರೆ ದೈತ್ಯರಾಜನ ಮುಷ್ಟಿಯ ಏಟು ಶ್ರೀಭಗವಂತನ ಮೇಲೆ ಯಾವ ಪರಿಣಾಮ

---

* ಶೂನ್ಯ = ಅಭಿಚಾರ, ಮದ್ದು-ಮಾಟ ಇತ್ಯಾದಿ.

1 ತನ್ನ ತಾಯಿಯ ದಾಸ್ಯವನ್ನು ಹೋಗಲಾಡಿಸುವುದಕ್ಕಾಗಿ ಗರುಡದೇವರು ಸ್ವರ್ಗದಿಂದ ಅಮೃತವನ್ನು ತರಲು ಹೋದಾಗ ಇಂದ್ರನಿಗೂ–ಗರುಡದೇವರಿಗೂ ಯುದ್ಧವು ಏರ್ಪಟ್ಟಿತು. ಕಡೆಗೆ ಇಂದ್ರನು ಗರುಡದೇವರ ಮೇಲೆ ವಜ್ರಾಯುಧವನ್ನು ಪ್ರಯೋಗಿಸಲು, ಆ ದಿವ್ಯಾಯುಧಕ್ಕೆ ಗೌರವವನ್ನು ತೋರುವುದಕ್ಕಾಗಿ ಗರುಡದೇವರು ತನ್ನ ರೆಕ್ಕೆಯ ಒಂದು ಗರಿಯನ್ನು ಅದಕ್ಕೆ ಲಕ್ಷ್ಯವನ್ನಾಗಿ ಕೊಟ್ಟರು. ಇಂದ್ರನ ವಜ್ರಾಯುಧವು ಅದನ್ನು ಮಾತ್ರ ಕತ್ತರಿಸಿಹಾಕಿ ಶಾಂತವಾಯಿತು. (ಶ್ಲೋಕ ೧೪)

ವನ್ನೂ ಉಂಟುಮಾಡಲಿಲ್ಲ. ಗಜರಾಜನ ಮೇಲೆ ಪುಷ್ಪಮಾಲೆಯು ಹೇಗೋ ಹಾಗೆ–ಅದು ಆತನ ವಕ್ಷಃಸ್ಥಳದ ಮೇಲೆ ಬಿದ್ದಿತು. ಆದಿವರಾಹಸ್ವಾಮಿಯು ಅದರಿಂದ ಸ್ವಲ್ಪವೂ ಕಂಪಿತನಾಗಲಿಲ್ಲ. ಆಗ ಆ ಮಹಾಮಾಯಾವಿಯಾದ ದೈತ್ಯನು ಮಾಯೆಗೆ ಅಧಿಪತಿಯಾದ ಮಹಾವಿಷ್ಣುವಿನ ಮೇಲೆ ತನ್ನ ಮಾಯೆಗಳನ್ನು ಪ್ರಯೋಗಿಸತೊಡಗಿದನು. ಆ ಭಯಂಕರವಾದ ಮಾಯಾ ಪ್ರಯೋಗಗಳನ್ನು ಕಂಡು ಎಲ್ಲ ಪ್ರಜೆಗಳೂ ಭಯಗೊಂಡು ಪ್ರಪಂಚದ ವಿನಾಶಸಮಯವೇ ಬಂದುಬಿಟ್ಟಿತೋ–ಎಂದು ಭಾವಿಸತೊಡಗಿದರು. ಆಗ ಭಯಂಕರವಾದ ಬಿರುಗಾಳಿಯು ಬೀಸಿ, ಧೂಳು ಮೇಲೆದ್ದು ಎಲ್ಲೆಲ್ಲೂ ಅಂಧಕಾರವು ತುಂಬಿಕೊಂಡಿತು. ಕವಣೆಯ ಯಂತ್ರದಿಂದ ಎಸೆಯಲ್ಪಡು ತ್ತಿವೆಯೋ–ಎಂಬಂತೆ ಎಲ್ಲ ಕಡೆಗಳಿಂದಲೂ ಕಲ್ಲುಗಳ ಸುರಿಮಳೆಯು ಬೀಳ ತೊಡಗಿತು. ಸುಳಿಮಿಂಚುಗಳೊಡನೆ ಸಿಡಿಲುಗಳಿಂದ ಕೂಡಿದ ಮೋಡಗಳು ಎಲ್ಲೆಡೆಗಳಲ್ಲೂ ಕವಿಯುತ್ತಿರಲು, ಆಕಾಶದಲ್ಲಿ ಸೂರ್ಯ-ಚಂದ್ರ-ಗ್ರಹ-ನಕ್ಷತ್ರಗಳೆಲ್ಲಾ ಮುಚ್ಚಿಹೋಗಿ, ಕೂದಲುಗಳೂ, ಮಲ-ಮೂತ್ರಗಳೂ, ರಕ್ತ-ಮೂಳೆಗಳೂ–ನಿರಂತರವಾಗಿ ಸುರಿಯತೊಡಗಿದುವು. ಬಗೆ-ಬಗೆಯ ಅಸ್ತ್ರ-ಶಸ್ತ್ರಗಳ ಮಳೆಯನ್ನು ಕರೆಯುವ ಪರ್ವತಗಳೇ ಕಾಣಿಸತೊಡಗಿದುವು. ಕೈಯಲ್ಲಿ ತ್ರಿಶೂಲವನ್ನು ಹಿಡಿದು ತಲೆಗೆದರಿಕೊಂಡಿದ್ದ, ಬೆತ್ತಲೆಯಾಗಿದ್ದ ರಾಕ್ಷಸಿಯರು ಕಾಣಿಸತೊಡಗಿದರು. ಬಹುಸಂಖ್ಯೆಯಲ್ಲಿದ್ದ ಕಾಲಾಳುಗಳು, ಕುದುರೆಸವಾರರು, ರಥಿಕರು, ಮದ್ದಾನೆಗಳ ಮೇಲೇರಿದ್ದ ಮಾವುತರು ಮತ್ತು ಕೊಲ್ಲುವುದಕ್ಕೆ ಸಿದ್ಧರಾಗಿದ್ದ ಯಕ್ಷ-ರಾಕ್ಷಸರು 'ಕೊಲ್ಲಿ-ಕೊಲ್ಲಿ ; ಕತ್ತರಿಸಿ-ಕತ್ತರಿಸಿ'–ಎಂದು ಕೂಗಿಡುತ್ತಿರಲು ಅವರ ಅತ್ಯಂತಕ್ರೂರವೂ–ಹಿಂಸಮಯವೂ ಆದ ಕೋಲಾಹಲಶಬ್ದವು ಎಲ್ಲೆಲ್ಲೂ ತುಂಬಿಕೊಂಡಿತು.

ಹೀಗೆ ಪ್ರಕಟಗೊಂಡ ಆ ಆಸುರೀಮಾಯೆಯನ್ನು ಧ್ವಂಸಮಾಡಲು ಯಜ್ಞಮೂರ್ತಿಯಾದ ಶ್ರೀವರಾಹಭಗವಂತನು ತನ್ನ ಪ್ರಿಯವಾದ, ಆಯುಧರಾಜನಾದ ಸುದರ್ಶನಚಕ್ರವನ್ನು ಆ ರಾಕ್ಷಸನ ಮೇಲೆ ಬಿಟ್ಟನು. ಆಗ ದಿತಿದೇವಿಗೆ ತನ್ನ ಪತಿಯು ಹಿಂದೆ ಹೇಳಿದ್ದ ಮಾತು ನೆನಪಿಗೆ ಬಂದು ಆಕೆಯ ಹೃದಯವು ಇದ್ದಕ್ಕಿದ್ದಂತೆ ಡವ-ಡವಗುಟ್ಟುತ್ತಿರಲು, ಆಕೆಯ ಸ್ತನ ಗಳಿಂದ ರಕ್ತವು ಸುರಿಯತೊಡಗಿತು. ತನ್ನ ಮಾಯಾಜಾಲವು ಸುದರ್ಶನ

ಚಕ್ರದಿಂದ ಧ್ವಂಸವಾಗಿಬಿಡಲು ಆ ದೈತ್ಯನು ಮತ್ತೆ ಭಗವಂತನ ಬಳಿಗೆ ಬಂದು ನಿಂತನು. ಕೆರಳಿದ ಕೋಪದಿಂದ ಭಗವಂತನನ್ನು ಛಿನ್ನ-ಭಿನ್ನ ಮಾಡಿಬಿಡ ಬೇಕೆಂಬ ಇಚ್ಛೆಯಿಂದ ಆತನನ್ನು ತನ್ನ ತೋಳುಗಳ ತೆಕ್ಕೆಯಲ್ಲಿ ಸೇರಿಸಿ ಕೊಂಡನು. ಆದರೆ ಆಗ ಭಗವಂತನು ಅದರ ಹೊರಗೇ ನಿಂತುಕೊಂಡಿರು ವಂತೆ ಆತನಿಗೆ ಕಾಣಿಸಿತು. ಆಗ ಆತನು ಮತ್ತೂ ಕ್ರುದ್ಧನಾಗಿ ತನ್ನ ವಜ್ರ ದಂತಹ ಮುಷ್ಟಿಗಳಿಂದ ಭಗವಂತನನ್ನು ಥಳಿಸತೊಡಗಿದನು. ಒಡನೆಯೇ ಭಗವಂತನು ಆ ದೈತ್ಯಪತಿಯನ್ನು ಹಿಡಿದು–ದೇವೇಂದ್ರನು ವೃತ್ರಾಸುರನನ್ನು ಬಡಿದಂತೆ–ಕೈಯಿಂದ ಆತನ ಕೆನ್ನೆಯ ಮೇಲೆ ಪೆಟ್ಟುಕೊಟ್ಟನು. ವಿಶ್ವವಿಜಯಿ ಯಾದ ಭಗವಂತನೇನೋ ಆತನ ಮೇಲೆ ಆಟಕ್ಕೆಂದು ಉಪೇಕ್ಷೆಯಿಂದಲೇ ಏಟುಹಾಕಿದನು. ಆದರೆ ಆ ಏಟಿನಿಂದ ಹಿರಣ್ಯಾಕ್ಷನ ದೇಹವು ತಿರುಗತೊಡ ಗಿತು. ಕಣ್ಣಾಲೆಗಳು ಕಳಚಿಕೊಂಡು ಹೊರಬಂದುವು. ಕೈ-ಕಾಲು-ಕೂದಲು ಗಳು ಕಿತ್ತುಹೋಗಿ ಆತನು ಪ್ರಾಣಕಳೆದುಕೊಂಡು ಬಿರುಗಾಳಿಯಿಂದ ಬುಡ ಸಹಿತ ಬಿದ್ದ ಮಹಾವೃಕ್ಷದಂತೆ–ನೆಲಕ್ಕೆ ಉರುಳಿದನು. ಹಾಗೆ ಶವವಾಗಿ ಬಿದ್ದರೂ ಆತನ ತೇಜಸ್ಸು ಕುಂದಲಿಲ್ಲ. ಕರಾಳವಾದ ಕೋರೆಹಲ್ಲುಗಳಿಂದ ಕೂಡಿದ್ದ ಆ ದೈತ್ಯನು ಹಲ್ಲುಗಳಿಂದ ತುಟಿಗಳನ್ನು ಕಚ್ಚಿಕೊಂಡು ಭೂಮಿಯ ಮೇಲೆ ಬಿದ್ದಿರುವುದನ್ನು ಕಂಡು ಬ್ರಹ್ಮಾದಿದೇವತೆಗಳು ಆತನನ್ನು ಹೀಗೆ ಪ್ರಶಂಸೆಮಾಡತೊಡಗಿದರು :

ಯಂ ಯೋಗಿನೋ ಯೋಗಸಮಾಧಿನಾ ರಹೋ
ಧ್ಯಾಯನ್ತಿ ಲಿಙ್ಗಾದಸತೋ ಮುಮುಕ್ಷಯಾ ।
ತಸ್ಯೈಷ ದೈತ್ಯಋಷಭಃ ಪದಾಹತೋ
ಮುಖಂ ಪ್ರಪಶ್ಯಂಸ್ತನುಮುತ್ಸಸರ್ಜ ಹ ॥೨೮॥

“ಅಬ್ಬಾ! ಇಂತಹ ಅಲಭ್ಯವಾದ ಮೃತ್ಯುವು ಬೇರಾರಿಗೆ ತಾನೇ ದೂರಕೀತು? ತಮ್ಮ ಉಪಾಧಿಯನ್ನು ಬಿಡಿಸಿಕೊಳ್ಳುವುದಕ್ಕಾಗಿ ಯೋಗಿ ಜನರು ಯಾವನನ್ನು ಏಕಾಂತದಲ್ಲಿ ಸಮಾಧಿಯೋಗದಿಂದ ಧ್ಯಾನಮಾಡು ತ್ತಾರೆಯೋ–ಅಂತಹ ಭಗವಂತನ ಚರಣಗಳಿಂದಲೇ ಬಾಧಿಸಲ್ಪಡುತ್ತಾ ಆತನ ಮುಖಾರವಿಂದವನ್ನೇ ದಿಟ್ಟಿಸುತ್ತಾ ದೇಹತ್ಯಾಗಮಾಡಿದನಲ್ಲವೇ ಈ ದೈತ್ಯರಾಜ!

ಏತೌ ತೌ ಪಾರ್ಷದಾವಸ್ಯ ಶಾಪಾದ್ಯಾತಾವಸದ್ಗತಿಮ್ ।
ಪುನಃ ಕತಿಪಯೈಃ ಸ್ಥಾನಂ ಪ್ರಪತ್ಸ್ಯೇತೇ ಹ ಜನ್ಮಭಿಃ ॥೨೯॥

ವಾಸ್ತವವಾಗಿ ಈ ಹಿರಣ್ಯಾಕ್ಷ-ಹಿರಣ್ಯಕಶಿಪುಗಳು ಭಗವಂತನ ಪಾರ್ಷದರೇ ಆಗಿದ್ದಾರೆ. ಶಾಪವಶದಿಂದ ಅವರಿಗೆ ಈ ಅಧೋಗತಿಯುಂಟಾಗಿದೆ. ಇನ್ನು ಒಂದೆರಡು ಜನ್ಮಗಳಲ್ಲೇ ಇವರು ಮತ್ತೆ ಸ್ವಸ್ಥಾನಕ್ಕೆ ಹಿಂದಿರುಗಿ ಬರುವರು"–ಎಂದು ಆತನ ಧನ್ಯತೆಯನ್ನು ಕೊಂಡಾಡಿದರು.

ಬಳಿಕ ಭಗವಂತನನ್ನು ಹೀಗೆ ಸ್ತುತಿಸತೊಡಗಿದರು :

ನಮೋ ನಮಸ್ತೇಽಖಿಲಯಜ್ಞತನ್ತವೇ
ಸ್ಥಿತೌ ಗೃಹೀತಾಮಲಸತ್ತ್ವಮೂರ್ತಯೇ ।
ದಿಷ್ಟ್ಯಾ ಹತೋಽಯಂ ಜಗತಾಮರುನ್ತುದ-
ಸ್ತ್ವತ್ಪಾದಭಕ್ತ್ಯಾ ವಯಮೀಶ ನಿರ್ವೃತಾಃ ॥೩೦॥

"ಪ್ರಭುವೇ! ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ಸಮಸ್ತಯಜ್ಞಗಳನ್ನೂ ವಿಸ್ತರಿಸುವ ವಿಭುವು ನೀನು. ಜಗತ್ತಿನ ಸ್ಥಿತಿಗೋಸ್ಕರ ಶುದ್ಧ-ಸತ್ತ್ವಮಯವಾದ ದಿವ್ಯಮಂಗಳವಿಗ್ರಹವನ್ನು ಪ್ರಕಟಪಡಿಸುತ್ತೀಯೆ. ಜಗತ್ತಿಗೇ ಕಷ್ಟಕೊಡುತ್ತಿದ್ದ ಈ ದುಷ್ಟದೈತನು ನಾಶಹೊಂದಿರುವುದು ಬಹಳ ಸಂತಸದ ಸುದ್ದಿ. ನಿನ್ನ ಚರಣಗಳ ಮೇಲೆ ಭಕ್ತಿಯ ಪ್ರಭಾವದಿಂದ ನಮಗೂ ಸುಖ-ಶಾಂತಿಗಳು ದೊರಕುವುವು."

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಸಾಧುಶ್ರೇಷ್ಠನಾದ ವಿದುರನೇ! ಆ ಆದಿವರಾಹಸ್ವಾಮಿಯು ಹೀಗೆ ಸಹಿಸಲಸದಳವಾದ ಪರಾಕ್ರಮವನ್ನು ಹೊಂದಿದ್ದ ಹಿರಣ್ಯಾಕ್ಷನನ್ನು ಸಂಹಾರ ಮಾಡಿ ಬ್ರಹ್ಮಾದಿಗಳಿಂದ ಸ್ತುತಿಸಲ್ಪಡುತ್ತಾ ಅಖಂಡಾನಂದಮಯವಾದ ತನ್ನ ಲೋಕಕ್ಕೆ ಬಿಜಯಮಾಡಿಸಿದನು. ಗುರುಮುಖದಿಂದ ನಾನು ಕೇಳಿದಂತೆಯೇ ನಿನಗೆ–ಉದಾರಪರಾಕ್ರಮವುಳ್ಳ ಭಗವಂತನು ಹೇಗೆ ಅವತಾರ ಮಾಡಿ ಲೀಲೆಗಳನ್ನು ಮಾಡುತ್ತಾನೆ ; ಮಹಾಪರಾಕ್ರಮಿಯಾದ ಹಿರಣ್ಯಾಕ್ಷ

ನನ್ನು ಯುದ್ಧದಲ್ಲಿ ಹೇಗೆ ಆಟದಬೊಂಬೆಯಂತೆ ಮುರಿದುಹಾಕಿದನು?– ಎಂಬುದನ್ನು ತಿಳಿಸಿಯಾಯಿತಪ್ಪಾ."

ಸೂತಪುರಾಣಿಕರು ಶೌನಕಾದಿಮುನಿಗಳಿಗೆ ಹೇಳುತ್ತಾರೆ :

"ಶೌನಕರೇ! ಮೈತ್ರೇಯಮಹರ್ಷಿಗಳ ಬಾಯಿಂದ ಭಗವಂತನ ವಿಷಯವಾದ ಈ ಕಥೆಯನ್ನು ಕೇಳಿ ಪರಮಭಾಗವತೋತ್ತಮನಾದ ವಿದುರನಿಗೆ ಪರಮಾನಂದವುಂಟಾಯಿತು. ಪವಿತ್ರವಾದ ಕೀರ್ತಿಯುಳ್ಳ ಮಹಾಯಶಸ್ವಿಗಳಾದ ಮಹಾಪುರುಷರ ಚರಿತೆಯನ್ನು ಕೇಳಿದರೂ ಪರಮಾನಂದವುಂಟಾಗುವುದು. ಹೀಗಿರುವಾಗ ಶ್ರೀವತ್ಸಚಿಹ್ನೆಯಿಂದ ಭೂಷಿತನಾದ ಸಾಕ್ಷಾತ್ ಭಗವಂತನ ಲೀಲೆಗಳನ್ನು ಕೇಳಿದಾಗ ಆಗುವ ಆನಂದದ ಬಗೆಗೆ ಹೇಳತಕ್ಕದ್ದೇನಿದೆ? (ಶ್ಲೋಕ 12-34)

ಯೋ ಗಜೇನ್ದ್ರಂ ಝಷಗ್ರಸ್ತಂ
ಧ್ಯಾಯನ್ತಂ ಚರಣಾಮ್ಬುಜಮ್ ।
ಕ್ರೋಶನ್ತೀನಾಂ ಕರೇಣೂನಾಂ ।
ಕೃಚ್ಛ್ರತೋಽಮೋಚಯದ್ದ್ರುತಮ್ ॥೩೫॥

ತಂ ಸುಖಾರಾಧ್ಯಮೃಜುಭಿರನನ್ಯಶರಣೈರ್ನೃಭಿಃ ।
ಕೃತಜ್ಞಃ ಕೋ ನ ಸೇವೇತ ದುರಾರಾಧ್ಯಮಸಾಧುಭಿಃ ॥೩೬॥

ಘೋರವಾದ ಮೊಸಳೆಯು ಗಜರಾಜನ ಕಾಲನ್ನು ಕಚ್ಚಿ ಹಿಡಿದುಕೊಂಡಾಗ ಗಜರಾಜನು ಪ್ರಭುವಿನ ಪಾದಗಳನ್ನು ಧ್ಯಾನಿಸತೊಡಗಿದನು. ಅವನ ಪರಿವಾರದ ಹೆಣ್ಣಾನೆಗಳೂ ದುಃಖದಿಂದ ಕೂಗಿಕೊಳ್ಳತೊಡಗಿದುವು. ಅಂತಹ ಕಷ್ಟಸಮಯದಲ್ಲಿ ಒಡನೆಯೇ ಮೈದೋರಿ ಭಕ್ತಗಜೇಂದ್ರನನ್ನು ದುಃಖದ ದೆಸೆಯಿಂದ ಬಿಡಿಸಿದ ಪರಮಕರುಣಾಳುವು ಆತನು. ಶರಣುಬಂದ ಸರಳಹೃದಯರಾದ ಭಕ್ತರಲ್ಲಿ ಸಹಜವಾಗಿಯೇ ಪ್ರಸನ್ನನಾಗುವನು. ಆದರೆ ದುಷ್ಟಪುರುಷರಿಗೆ ಆರಾಧಿಸಲು ಕಷ್ಟವಾಗುವವನು ; ಅವರಿಗೆ ಆತನ ಒಲುಮೆ ದೊರೆಯದು. ಉಪಕಾರಗಳನ್ನು ಗುರುತಿಸುವ ಕೃತಜ್ಞನಾದ ಯಾವನು ತಾನೇ ಆ ಭಕ್ತಪ್ರಿಯನನ್ನು ಸೇವಿಸುವುದಿಲ್ಲ?

ಯೋ ವೈ ಹಿರಣ್ಯಾಕ್ಷವಧಂ ಮಹಾದ್ಭುತಂ
ವಿಕ್ರೀಡಿತಂ ಕಾರಣಸೂಕರಾತ್ಮನಃ ।
ಶೃಣೋತಿ ಗಾಯತ್ಯನುಮೋದತೇಽಞ್ಜಸಾ
ವಿಮುಚ್ಯತೇ ಬ್ರಹ್ಮವಧಾದಪಿ ದ್ವಿಜಾಃ ॥೩೭॥

ಮಹರ್ಷಿಗಳೇ! ಭೂಮಿಯನ್ನು ಉದ್ಧರಿಸುವುದಕ್ಕೋಸ್ಕರ ವರಾಹ ರೂಪವನ್ನು ಧರಿಸಿದ ಶ್ರೀಹರಿಯು ಮಾಡಿದ ಹಿರಣ್ಯಾಕ್ಷವಧೆಯೆಂಬ ಅದ್ಭುತ ವಾದ ಈ ಅವತಾರಲೀಲೆಯನ್ನು ಕೇಳುವವನೂ–ಗಾನಮಾಡುವವನೂ ಮತ್ತು ಅನುಮೋದನೆಮಾಡುವವನೂ ಬ್ರಹ್ಮಹತ್ಯೆಯೇ ಮುಂತಾದ ಘೋರಪಾತಕಗಳಿಂದಲೂ ಸಹಜವಾಗಿಯೇ ಬಿಡುಗಡೆಹೊಂದುತ್ತಾನೆ.

ಏತನ್ಮಹಾಪುಣ್ಯಮಲಂ ಪವಿತ್ರಂ
ಧನ್ಯಂ ಯಶಸ್ಯಂ ಪದಮಾಯುರಾಶಿಷಾಮ್ ।
ಪ್ರಾಣೇನ್ದ್ರಿಯಾಣಾಂ ಯುಧಿ ಶೌರ್ಯವರ್ಧನಂ
ನಾರಾಯಣೋಽನ್ತೇ ಗತಿರಙ್ಗ ಶೃಣ್ವತಾಮ್ ॥೩೮॥

ಈ ಚರಿತ್ರೆಯು ಅತ್ಯಂತಪುಣ್ಯಪ್ರದವಾದುದು. ಪರಮಪವಿತ್ರ ವಾದುದು. ಧನ್ಯವಾದುದು. ಕೇಳುವ ಸುಕೃತಿಗಳಿಗೆ ಧನವನ್ನೂ–ಯಶಸ್ಸನ್ನೂ ದಯಪಾಲಿಸುವುದು. ಆಯುಸ್ಸನ್ನು ವೃದ್ಧಿಪಡಿಸುವುದು. ಕಾಮನೆಗಳನ್ನು ಈಡೇರಿಸುವುದು ಮತ್ತು ಯುದ್ಧದಲ್ಲಿ ಪ್ರಾಣಶಕ್ತಿಯನ್ನೂ–ಇಂದ್ರಿಯಶಕ್ತಿ ಯನ್ನೂ ವೃದ್ಧಿಪಡಿಸುವುದು. ಇದನ್ನು ಕೇಳಿದವರಿಗೆ ಕೊನೆಗೆ ಶ್ರೀಮನ್ನಾರಾಯಣನ ಆಶ್ರಯವೇ ದೊರೆಯುವುದು.”

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ತೃತೀಯಸ್ಕಂಧದ ೧೯ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೨೦ನೆಯ ಅಧ್ಯಾಯ

ಬ್ರಹ್ಮದೇವರು ಮಾಡಿದ ನಾನಾಪ್ರಕಾರವಾದ ಸೃಷ್ಟಿಗಳ ವರ್ಣನೆ

ಶ್ರೀವರಾಹೋಪಾಖ್ಯಾನವನ್ನು ಕೇಳಿದ ಬಳಿಕ ಶೌನಕಮಹರ್ಷಿಗಳು ಸೂತಪುರಾಣಿಕರನ್ನು ಹೀಗೆ ಪ್ರಶ್ನೆಮಾಡಿದರು :

ಮಹೀಂ ಪ್ರತಿಷ್ಠಾಮಧ್ಯಸ್ಯ ಸೌತೇ ಸ್ವಾಯಮ್ಭುವೋ ಮನುಃ ।
ಕಾನ್ಯನ್ವತಿಷ್ಠದ್ದ್ವಾರಾಣಿ ಮಾರ್ಗಾಯಾವರಜನ್ಮನಾಮ್ ॥೧॥

"ಎಲೈ ಮಹಾತ್ಮನಾದ ಸೂತಪುರಾಣಿಕನೇ! ಜೀವಿಗಳಿಗೆ ಆಧಾರ ಸ್ಥಾನವಾಗಿರುವ ಭೂಮಿಯನ್ನು ಪಡೆದುಕೊಂಡ ಬಳಿಕ ಸ್ವಾಯಂಭುವ ಮನುವು ಮುಂದೆ ಹುಟ್ಟುವ ಸಂತಾನಗಳನ್ನು ಉತ್ಪಾದನೆಮಾಡಲು ಯಾವ-ಯಾವ ದಾರಿಗಳನ್ನು ಅವಲಂಬಿಸಿದನು?

ಮೈತ್ರೇಯಮಹರ್ಷಿಗಳನ್ನು ಪ್ರಶ್ನೆಮಾಡಿ ಸೃಷ್ಟಿರಹಸ್ಯವನ್ನೂ, ಪ್ರಾಸಂಗಿಕವಾಗಿ ಶ್ರೀವರಾಹಾವತಾರದ ವೃತ್ತಾಂತವನ್ನೂ ಕೇಳಿಸಿಕೊಂಡ ವಿದುರನಾದರೋ ಪರಮಭಾಗವತೋತ್ತಮನು. ಆತನು ಶ್ರೀಕೃಷ್ಣ ಪರಮಾತ್ಮನ ಏಕಾಂತಭಕ್ತನೂ ಮತ್ತು ಸ್ನೇಹಿತನೂ ಆಗಿದ್ದನು. ಆದ್ದ ರಿಂದಲೇ ಆತನು–ತನ್ನ ಅಣ್ಣನಾದ ಧೃತರಾಷ್ಟ್ರನೂ ಮತ್ತು ಆತನ ಪುತ್ರರೂ ಶ್ರೀಕೃಷ್ಣನನ್ನು ತಿರಸ್ಕಾರಮಾಡಿದ ಅಪರಾಧಿಗಳೆಂದು ತಿಳಿದು, ಅವರನ್ನು ಪರಿತ್ಯಾಗಮಾಡಿಬಿಟ್ಟನು. ಮಹಾತ್ಮನಾದ ವಿದರನು ದ್ವೈಪಾಯನಮಹರ್ಷಿ ಗಳ ಸುಪುತ್ರನು. ಮಹಿಮೆಯಲ್ಲಿ ಆತನು ತನ್ನ ತೀರ್ಥರೂಪರಿಗಿಂತಲೂ ಯಾವ ವಿಷಯದಲ್ಲೂ ಕಡಿಮೆಯಾಗಿರಲಿಲ್ಲ. ಎಲ್ಲ ಪ್ರಕಾರಗಳಿಂದಲೂ ಶ್ರೀಕೃಷ್ಣಪರಮಾತ್ಮನನ್ನೂ ಮತ್ತು ಆತನ ಭಕ್ತರನ್ನೂ ಅನುಸರಿಸಿ ನಿಷ್ಠೆಯಿಂದ ಕೂಡಿದ್ದನು. ತೀರ್ಥಯಾತ್ರೆಯನ್ನು ಮಾಡಿದ್ದರಿಂದ ಆತನ ಅಂತಃಕರಣವು ಮತ್ತೂ ಪರಿಶುದ್ಧವಾಗಿತ್ತು. ಆ ಮಹಾತ್ಮನು ಕುಶಾವರ್ತ (ಹರಿದ್ವಾರ) ಕ್ಷೇತ್ರದಲ್ಲಿ ಕುಳಿತಿದ್ದ ಜ್ಞಾನಿಶ್ರೇಷ್ಠರಾದ ಮೈತ್ರೇಯ ಮಹರ್ಷಿಗಳ ಬಳಿಗೆ ಹೋಗಿ ಅವರಲ್ಲಿ ಮತ್ತೆ ಯಾವ-ಯಾವ ವಿಷಯಗಳನ್ನು ಕುರಿತು ಪ್ರಶ್ನೆಮಾಡಿದನು? ಶ್ರೀಹರಿಯ ಕಥೆಗಳು ಆತನ

ಶ್ರೀಪಾದತೀರ್ಥವಾದ ಗಂಗಾಜಲದಂತೆಯೇ ಸಮಸ್ತಪಾಪಗಳನ್ನೂ ನಾಶ ಮಾಡುವುವು. ಶ್ರೀಮೈತ್ರೇಯರಿಗೂ–ವಿದುರನಿಗೂ ನಡೆದ ಸಂಭಾಷಣೆಯಲ್ಲಿ ಶ್ರೀಹರಿಯ ಚರಣಗಳಿಗೆ ಸಂಬಂಧಪಟ್ಟ ಯಾವ ಪರಮಪವಿತ್ರವಾದ ಕಥೆಗಳು ಹೇಳಲ್ಪಟ್ಟುವೋ–ಅವುಗಳನ್ನು ನಮಗೂ ಹೇಳುವವನಾಗು. ನಿನಗೆ ಮಂಗಳವಾಗಲಿ. ಸಂಕೀರ್ತನೆಮಾಡಲು ಯೋಗ್ಯವಾದ, ಉದಾರಚಾರಿತ್ರ್ಯವುಳ್ಳ ಸ್ವಾಮಿಯ ಅವತಾರಲೀಲೆಗಳು ಅಮೃತರೂಪವೇ ಆಗಿವೆ. ಅವುಗಳನ್ನು ಎಷ್ಟೇ ಪಾನಮಾಡಿದರೂ ಯಾವ ರಸಿಕನಿಗಾದರೂ ತೃಪ್ತಿಯು ಹೇಗೆ ಉಂಟಾದೀತು?" (ಶ್ಲೋಕ 1-6)

ನೈಮಿಷಾರಣ್ಯನಿವಾಸಿಗಳಾದ ಮುನಿಗಳು ಹೀಗೆ ಪ್ರಶ್ನೆಮಾಡಲು ಉಗ್ರಶ್ರವನೆಂಬ ನಾಮಧೇಯದಿಂದ ಅಲಂಕೃತನಾಗಿದ್ದ, ಮಹಾತ್ಮನಾದ ಸೂತಪುರಾಣಿಕನು ಅವರಿಗೆ ಉತ್ತರಿಸುತ್ತಾ ಹೀಗೆಂದನು :

"ಮುನಿಗಳೇ! ಮಾಯಾವರಾಹರೂಪಿಯಾದ ಶ್ರೀಹರಿಯು ಪೃಥಿವಿಯನ್ನು ರಸಾತಲದಿಂದ ಮೇಲಕ್ಕೆತ್ತಿದ ಮತ್ತು ಹಿರಣ್ಯಾಕ್ಷನನ್ನು ಕಡೆಗಣಿಸಿ, ಆಟವಾಡುವಂತೆ ಅನಾಯಾಸವಾಗಿ ಸಂಹಾರಮಾಡಿದ ಅವತಾರ ಲೀಲೆಯನ್ನು ಕೇಳಿ ಪರಮಾನಂದಭರಿತನಾದ ವಿದುರನು ಮೈತ್ರೇಯ ಮಹರ್ಷಿಗಳಲ್ಲಿ ಹೀಗೆ ವಿನಂತಿಸಿದನು :

"ಬ್ರಾಹ್ಮಣಶ್ರೇಷ್ಠರೇ! ತಾವು ಅಪರೋಕ್ಷಜ್ಞಾನಿಗಳು. ಆದುದರಿಂದ ಪ್ರಜಾಪತಿಗಳಿಗೂ ಪತಿಯಾದ ಬ್ರಹ್ಮದೇವರು ಮರೀಚಿಯೇ ಮುಂತಾದ ಪ್ರಜಾಪತಿಗಳನ್ನು ಹುಟ್ಟಿಸಿದ ಬಳಿಕ ಸೃಷ್ಟಿಯನ್ನು ಮುಂದುವರಿಸಲು ಏನೇನು ಮಾಡಿದರು? ಮರೀಚಿಯೇ ಮುಂತಾದ ಮುನೀಶ್ವರರೂ ಮತ್ತು ಸ್ವಾಯಂಭುವಮನುವೂ ಬ್ರಹ್ಮದೇವರ ಆಣತಿಯಂತೆ ಯಾವ ರೀತಿಯಲ್ಲಿ ಪ್ರಜಾವೃದ್ಧಿಯನ್ನು ಮಾಡಿದರು? ಅವರು ತಮ್ಮ-ತಮ್ಮ ಪತ್ನಿಯರ ಸಹಯೋಗದಿಂದ ಈ ಜಗತ್ತನ್ನು ಸೃಷ್ಟಿಮಾಡಿದರೇ? ಅಥವಾ ತಮ್ಮ-ತಮ್ಮ ಕಾರ್ಯಗಳಲ್ಲಿ ಸ್ವತಂತ್ರರಾಗಿಯೇ ಇದ್ದು ಈ ಜಗತ್ತನ್ನು ರಚಿಸಿದರೆ? ಅಥವಾ ಎಲ್ಲರೂ ಒಟ್ಟಿಗೆ ಸೇರಿ ಇದನ್ನು ರಚನೆಮಾಡಿದರೇ?–ಎಂಬುದನ್ನು ಹೇಳೋಣವಾಗಲಿ." (ಶ್ಲೋಕ 7-11)

ಮೈತ್ರೇಯರು ವಿದುರನಿಗೆ ಹೀಗೆ ಉತ್ತರನೀಡಿದರು :

"ಎಲೈ ವಿದುರನೇ! ಕೇಳು. ಪ್ರಕೃತಿಯು ಹಿಂದೆ ತ್ರಿಗುಣಗಳ ಸಾಮ್ಯಾವಸ್ಥೆಯಿಂದ ನಿರ್ವಿಕಾರವಾಗಿತ್ತು. ಅನಂತರ ಚಿಂತಿಸಲು ಅಸಾಧ್ಯ ವಾಗಿರುವ ಜೀವದ ಅದೃಷ್ಟದಿಂದಲೂ, ಕಾಲದಿಂದಲೂ, ಶ್ರೀಭಗವಂತನ ಸಂಕಲ್ಪದಿಂದಲೂ ಆ ಗುಣಸಾಮ್ಯವು ತಪ್ಪಿ ಕ್ಷೋಭೆಯುಂಟಾಗಿ ಅದರಿಂದ ಮಹತ್ತತ್ತ್ವವು ಜನಿಸಿತು.* ರಜಸ್ಸನ್ನು ಪ್ರಧಾನವನ್ನಾಗಿ ಹೊಂದಿರುವ ಆ ಮಹತ್ತತ್ತ್ವದಿಂದ ದೈವದ ಪ್ರೇರಣೆಯಂತೆ ವೈಕಾರಿಕ (ಸಾತ್ತ್ವಿಕ), ರಾಜಸ ಮತ್ತು ತಾಮಸ–ಎಂಬ ಮುಬ್ಬಗೆಯಾದ ಅಹಂಕಾರಗಳು ಉತ್ಪನ್ನವಾದುವು. ಆ ಅಹಂಕಾರಗಳು ಆಕಾಶವೇ ಮುಂತಾದ ಐದೈದು ತತ್ತ್ವಗಳ ಅನೇಕ ವರ್ಗಗಳನ್ನು ಪ್ರಕಟಪಡಿಸಿದುವು. (ಪಂಚತನ್ಮಾತ್ರೆಗಳು, ಪಂಚಮಹಾ ಭೂತಗಳು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಮತ್ತು ಅವುಗಳು ಐದೈದು ದೇವತೆಗಳು–ಎಂಬ ಇವೇ ಆ ಐದೈದರ ವರ್ಗಗಳು.) ಅವೆಲ್ಲವೂ ಪ್ರತ್ಯೇಕ-ಪ್ರತ್ಯೇಕವಾಗಿ ಇದ್ದಾಗ ಭೂತಗಳ ಕಾರ್ಯರೂಪ ವಾಗಿರುವ ಬ್ರಹ್ಮಾಂಡವನ್ನು ರಚಿಸಲು ಅಸಮರ್ಥವಾದುವು. ಆದ್ದರಿಂದ ಅವು ಭಗವಂತನ ಶಕ್ತಿಯಿಂದ ಪರಸ್ಪರವಾಗಿ ಕಲೆತವು. ಆಗ ಅವು ಗಳಿಂದ ಸುವರ್ಣವರ್ಣದಿಂದ ಪ್ರಕಾಶಮಾನವಾದ ಒಂದು ಅಂಡವು (ಬ್ರಹ್ಮಾಂಡವು) ನಿರ್ಮಿತವಾಯಿತು. ಆ ಅಂಡವು ಚೇತನಾಶೂನ್ಯವಾದ ಸ್ಥಿತಿಯಲ್ಲಿ ಬಹಳ ಕಾಲದವರೆಗೆ ಆವರಣಜಲದ ಮಧ್ಯದಲ್ಲಿ ಮುಳುಗಿದ್ದಿತು. (ಅನಿರುದ್ಧರೂಪಿಯಾದ) ಭಗವಂತನು ಆ ಅಂಡಕೋಶದಲ್ಲಿ ಒಂದು ಸಹಸ್ರ

---

* ಭಗವಂತನು ಅಚಿಂತನೀಯವಾದ ಮಹಿಮೆಯುಳ್ಳವನು. ಆತನು ತನಗೆ ಶರೀರವಾಗಿರುವ ಪ್ರಕೃತಿರೂಪದಿಂದ ಉಪಾದಾನಕಾರಣವೂ, ಕೇವಲ ಬ್ರಹ್ಮರೂಪದಿಂದ ನಿಮಿತ್ತಕಾರಣವೂ ಆಗಿದ್ದಾನೆ. ಕಾಲವೂ ಪರಮಾತ್ಮಾತ್ಮಕವೆಂದು ಹೇಳಿರುವುದರಿಂದ ಆತನು ಯಾವ ಸಲಕರಣೆಗಳ ಸಹಾಯವೂ ಇಲ್ಲದೇ ಜಗತ್ತನ್ನು ನಿರ್ಮಾಣಮಾಡಿದನು.–ಎಂದು ಸೂಚಿತವಾಗುತ್ತದೆ. (ವೀರರಾಘವೀಯ)

ಶ್ರೀಭಗವಂತನ ಪ್ರೇರಣೆಯಿಂದ ಗುಣವೈಷಮ್ಯವನ್ನು ಪಡೆದು ಪ್ರಕೃತಿಯಿಂದ ಮಹತ್ತತ್ತ್ವವೂ, ಅದಕ್ಕೆ ಅಭಿಮಾನಿಗಳಾಗಿರುವ ಬ್ರಹ್ಮ, ವಾಯು, ಸರಸ್ವತಿ, ಭಾರತೀ ದೇವಿಯರೂ ಉಂಟಾದರು. "ಮಹತೋ ಬ್ರಹ್ಮವಾಯೂ ಚ ತದ್ಭಾರ್ಯೇ ಚಾಭಿಮಾನಃ।" (ವಿಜಯಧ್ವಜೀಯ) (ಶ್ಲೋಕ ೧೨)

ಸಂವತ್ಸರಗಳವರೆಗೆ ಅಡಗಿದ್ದನು.* ಆಗ ಆತನ ನಾಭಿಯಿಂದ ಸಾವಿರಾರು ಸೂರ್ಯರಿಗಿಂತಲೂ ಅಧಿಕವಾದ ಪ್ರಕಾಶದಿಂದ ದೇದೀಪ್ಯಮಾನವಾದ ಒಂದು ಕಮಲವು ಪ್ರಕಟಗೊಂಡಿತು. ಸಮಸ್ತಜೀವಸಮುದಾಯಕ್ಕೂ ಆಲಯವಾದ ಕಮಲವದು. ಅದರಿಂದ ಸ್ವಪ್ರಕಾಶವಾದ ಸಾಕ್ಷಾತ್ ಬ್ರಹ್ಮದೇವರೇ ಆವಿರ್ಭವಿಸಿದರು. (ಶ್ಲೋಕ 12-16)

ಅನಂತರ ಸಾಗರಜಲಶಾಯಿಯಾದ ಶ್ರೀಮನ್ನಾರಾಯಣನು ತನ್ನ ಸಂಕಲ್ಪದಿಂದ ಆ ಬ್ರಹ್ಮದೇವರಲ್ಲಿ ಪ್ರವೇಶಮಾಡಿದನು. ಆಗ ಬ್ರಹ್ಮದೇವರು ಹಿಂದಿನ ಕಲ್ಪಗಳಲ್ಲಿ ತಾವೇ ನಿಶ್ಚಯಿಸಿದ್ದ ನಾಮ-ರೂಪವ್ಯವಸ್ಥೆಗಳಿಗೆ ಅನುಸಾರವಾಗಿ ಲೋಕಗಳನ್ನು ನಿರ್ಮಿಸತೊಡಗಿದರು. ಎಲ್ಲಕ್ಕಿಂತಲೂ ಮೊದಲು ಅವರು ತಮ್ಮ ಛಾಯೆಯಿಂದ ತಾಮಿಸ್ರ, ಅಂಧತಾಮಿಸ್ರ, ತಮಸ್ಸು, ಮೋಹ ಮತ್ತು ಮಹಾತಮಸ್ಸು–ಎಂಬ ಐದು ಬಗೆಯ ಅವಿದ್ಯೆಗಳನ್ನು ಸೃಷ್ಟಿಮಾಡಿದರು. ಬ್ರಹ್ಮದೇವರಿಗೆ ತಮ್ಮ ಆ ತಮೋಮಯವಾದ ಶರೀರವು ಮನಸ್ಸಿಗೆ ಒಪ್ಪದಿರಲು ಅವರು ಅದನ್ನು ತೊರೆದುಬಿಟ್ಟರು. ಆ ಶರೀರದಿಂದ ಜನಿಸಿದ ಯಕ್ಷ-ರಾಕ್ಷಸರು ಹಸಿವು-ಬಾಯಾರಿಕೆಗಳಿಗೆ ಕಾರಣವಾದ, ಆ ರಾತ್ರಿರೂಪವಾದ ದೇಹವನ್ನು ಪರಿಗ್ರಹಿಸಿದರು.[1] ಆದರೆ ಹಸಿವು-ನೀರಡಿಕೆಗಳಿಂದ ಪೀಡಿತರಾದ ಅವರು ಬ್ರಹ್ಮದೇವರನ್ನೇ ತಿಂದುಹಾಕಲು ಓಡಿಬಂದರು. **'ಜಕ್ಷಧ್ವಂ'–'ತಿಂದುಹಾಕಿ ಈತನನ್ನು', 'ಮಾ ರಕ್ಷತ' 'ರಕ್ಷಿಸಬೇಡಿ, ಬಿಡಬೇಡಿ ಇವನನ್ನು''–ಎಂದೇ ಕೂಗುತ್ತಾ ಅವರು ಆತನನ್ನು**

---

* ಮಹತ್ತತ್ತ್ವವನ್ನು ನಿರ್ಮಾಣಮಾಡಿದ ಶ್ರೀಭಗವದ್ರೂಪಕ್ಕೆ ಸಂಕರ್ಷಣನೆಂದೂ, ಭಗವಂತನ ಜಲಾಶಾಯಿರೂಪಕ್ಕೆ ಪ್ರದ್ಯುಮ್ನನೆಂದೂ, ಸರ್ವಾಂತರ್ಯಾಮಿಯಾಗಿರುವ ಆತನ ರೂಪಕ್ಕೆ ಅನಿರುದ್ಧನೆಂದೂ ಹೆಸರು. ಇವುಗಳನ್ನು ಅರಿತು ಉಪಾಸನೆಮಾಡುವವನು ಮುಕ್ತನಾಗುತ್ತಾನೆ. **"ವಿಷ್ಣೋಸ್ತು ತ್ರೀಣಿ ರೂಪಾಣಿ ಪುರುಷಾಖ್ಯಾನ್ಯಥೋ ವಿದುಃ । ಪ್ರಥಮಂ ಮಹತಃ ಸ್ರಷ್ಟಾ ದ್ವಿತೀಯಂ ತ್ವಣ್ಡ ಸಂಸ್ಥಿತಮ್ । ತೃತೀಯಂ ಸರ್ವಭೂತಸ್ಥಂ ತಾನಿ ಜ್ಞಾತ್ವಾ ವಿಮುಚ್ಯತೇ ॥"** ಎಂದು ದೀಪಿನೀವ್ಯಾಖ್ಯಾನವು ತಿಳಿಸುತ್ತದೆ.

(ಶ್ಲೋಕ ೧೫)

[1] ಬ್ರಹ್ಮದೇವರು ಆಯಾ ಶರೀರವನ್ನು ಬಿಟ್ಟರು ಎಂದು ಎಲ್ಲಿ ಹೇಳಿದೆಯೋ–ಅಲ್ಲಿ ಅವರು ಆಯಾ ಮನೋಭಾವಗಳನ್ನು ತ್ಯಜಿಸಿದರು. ಎಂಬ ಅಭಿಪ್ರಾಯವನ್ನು ಗ್ರಹಿಸಬೇಕು–ಎಂದು ಶ್ರೀಧರೀಯ ವ್ಯಾಖ್ಯಾನವು ತಿಳಿಸುತ್ತದೆ. (ಶ್ಲೋಕ ೧೯)

ಅಟ್ಟಿಸಿಕೊಂಡು ಬಂದರು. ಅವರ ಹಸಿವು-ಬಾಯಾರಿಕೆಗಳು ಅಷ್ಟು ಉತ್ಕಟವಾಗಿದ್ದುವು.

ದೇವಸ್ತಾನಹ ಸಂವಿಗ್ನೋ ಮಾ ಮಾಂ ಜಕ್ಷತ ರಕ್ಷತ ।
ಅಹೋ ಮೇ ಯಕ್ಷರಕ್ಷಾಂಸಿ ಪ್ರಜಾ ಯೂಯಂ ಬಭೂವಿಥ ॥೨೧॥

ಆಗ ಚತುರ್ಮುಖದೇವರು ಗಾಬರಿಗೊಂಡು–"ಎಲೈ! ನೀವು ನನ್ನ ಸಂತಾನಗಳು. ನೀವೇ ನನ್ನನ್ನು ತಿನ್ನಲು ಬರುವುದೇ? ಇದು ಸರಿಯಲ್ಲ ; **'ಮಾ ಜಕ್ಷತ'**– 'ನನ್ನನ್ನು ತಿಂದುಹಾಕಬೇಡಿರಿ'–**'ರಕ್ಷತ'** 'ರಕ್ಷಿಸಿರಿ' ಎಂದು ಆದೇಶನೀಡಿದರು. ಅವರಲ್ಲಿ 'ಜಕ್ಷತ'–'ತಿಂದುಹಾಕಿ'–ಎಂದು ಕೂಗಿಟ್ಟವರು ಯಕ್ಷರೆಂದೂ, **'ಮಾ ರಕ್ಷತ'**–'ರಕ್ಷಿಸಬೇಡಿರಿ'–ಎಂದು ಕೂಗಿಕೊಂಡವರು ರಾಕ್ಷಸರೆಂದೂ ಹೆಸರಿಸಲ್ಪಟ್ಟರು.

ಅನಂತರ ಬ್ರಹ್ಮದೇವರು ಸಾತ್ತ್ವಿಕವಾದ ಪ್ರಭೆಯಿಂದ ಬೆಳಗುತ್ತಾ ಆ ಪ್ರಭೆಯಿಂದ ಕೂಡಿ ಆಡುತ್ತಿದ್ದ ಮುಖ್ಯರಾದ ದೇವತೆಗಳನ್ನು ಸೃಷ್ಟಿಮಾಡಿದರು. ಅವರು ಹಾಗೆ ಆಟವಾಡುತ್ತಾ ಇರುವವರಾಗಿ, ಬ್ರಹ್ಮದೇವರು ತ್ಯಾಗಮಾಡಿದ ಹಗಲಿನ ರೂಪವಾದ ಪ್ರಕಾಶಮಯವಾದ ಶರೀರವನ್ನು ಪರಿಗ್ರಹಿಸಿದರು. ಅದಾದನಂತರ ಬ್ರಹ್ಮದೇವರು ತಮ್ಮ ಜಘನಪ್ರದೇಶದಿಂದ ಅತಿಯಾಗಿ ಸ್ತ್ರೀಲಂಪಟರಾಗಿರುವ ಅಸುರರನ್ನು ಸೃಷ್ಟಿಸಿದರು. ಅಸುರರು ಅತ್ಯಂತಕಾಮಾಸಕ್ತಪ್ರಕೃತಿಯವರಾದ್ದರಿಂದ ಹುಟ್ಟಿದೊಡನೆಯೇ ಮೈಥುನಕ್ಕಾಗಿ ಬ್ರಹ್ಮದೇವರ ಕಡೆಗೆ ಓಡಿಬಂದರು. ಅದನ್ನು ಕಂಡು ಬ್ರಹ್ಮದೇವರಿಗೆ ಮೊದಲು ನಗೆ ಬಂದಿತು. ಆದರೆ ಅವರು ನಾಚಿಕೆಗೆಟ್ಟು ತನ್ನನ್ನು ಹಿಂಬಾಲಿಸುತ್ತಿರುವುದನ್ನು ಕಂಡು ಕೋಪಗೊಂಡು ಭಯಭೀತರಾಗಿ ವೇಗವಾಗಿ ಪಲಾಯನಮಾಡಿದರು. ಬಳಿಕ ಬ್ರಹ್ಮದೇವರು, ಶರಣಾಗತರ ಪೀಡೆಯನ್ನು ಪರಿಹರಿಸುವವನೂ, ವರಪ್ರದನೂ, ಭಕ್ತರನ್ನು ಅನುಗ್ರಹಿಸಲು ಅನುರೂಪವಾದ ರೂಪಗಳನ್ನು ತಾಳಿ ದರ್ಶನ ನೀಡುವವನೂ ಆದ ಪರಮಾತ್ಮನಾದ ಶ್ರೀಹರಿಯ ಬಳಿಗೆ ಹೋಗಿ–"ಪ್ರಭೋ! ಪರಮಾತ್ಮ! ನನ್ನನ್ನು ಸಂರಕ್ಷಿಸು ; ನಾನು ನಿನ್ನ ಆಜ್ಞೆಯಿಂದಲೇ ಪ್ರಜೆಗಳನ್ನು ಸೃಷ್ಟಿಮಾಡಿದೆನು. ಆದರೆ ಈ ದುಷ್ಟ

ಪ್ರಜೆಗಳು ಪಾಪದಲ್ಲಿ ತೊಡಗಿ ನನ್ನನ್ನೇ ಅಸಹ್ಯವಾದ ರೀತಿಯಲ್ಲಿ ಪೀಡಿಸಲು ಬಂದಿದ್ದಾರೆ. ಸ್ವಾಮಿ! ದುಃಖದಿಂದ ತಲ್ಲಣಿಸುವ ಜೀವಿಗಳ ದುಃಖವನ್ನು ಹೋಗಲಾಡಿಸುವವನೂ ನೀನೊಬ್ಬನೇ. ನಿನ್ನ ಪಾದಗಳನ್ನು ಆಶ್ರಯಿಸದೇ ಇರುವ ಜೀವಿಗಳಿಗೆ ದುಃಖವನ್ನು ಕೊಡುವವನೂ ನೀನೊಬ್ಬನೇ. ನಿನ್ನ ಪಾದಗಳನ್ನು ಆಶ್ರಯಿಸಿರುವ ನನ್ನನ್ನು ಪೊರೆಯುವವನಾಗು"–ಎಂದು ಮೊರೆಯಿಟ್ಟನು. (ಶ್ಲೋಕ 17-27)

ಸೋಽವಧಾರ್ಯಾಸ್ಯ ಕಾರ್ಪಣ್ಯಂ ವಿವಿಕ್ತಾಧ್ಯಾತ್ಮದರ್ಶನಃ ।
ವಿಮುಞ್ಚಾತ್ಮತನುಂ ಘೋರಾಮಿತ್ಯುಕ್ತೋ ವಿಮುಮೋಚ ಹ ॥

ಭಗವಂತನು ಎಲ್ಲರ ಹೃದಯಭಾವನೆಗಳನ್ನೂ ಪ್ರತ್ಯಕ್ಷವಾಗಿ ನೋಡುತ್ತಿರುವವನು. ಆತನು ಬ್ರಹ್ಮದೇವರ ಆ ದೈನ್ಯಪರಿಸ್ಥಿತಿಯನ್ನು ನೋಡಿ ಕನಿಕರಗೊಂಡು–'ವತ್ಸ! ನೀನು ನಿನ್ನ ಈ ಕಾಮಕಲುಷಿತವಾದ ಘೋರವಾದ ದೇಹವನ್ನು ತೊರೆದುಬಿಡು'–ಎಂದು ಆದೇಶನೀಡಲು, ಅದರಂತೆ ಬ್ರಹ್ಮದೇವರು ಆ ದೇಹವನ್ನೂ ತೊರೆದುಬಿಟ್ಟರು.

ಬ್ರಹ್ಮದೇವರು ತೊರೆದ ಆ ಶರೀರವು ಒಂದು ಸುಂದರವಾದ ಸ್ತ್ರೀ ರೂಪವನ್ನು ತಾಳಿತು. ಅದೇ ಸಾಯಂಸಂಧ್ಯೆ. ಆ ರಮಣಿಯ ಕಾಲ್ಗಡಗಗಳು ಝಣ-ಝಣಶಬ್ದಮಾಡುತ್ತಿದ್ದುವು. ಕಣ್ಣುಗಳು ಮದದಿಂದ ಕುಣಿಯುತ್ತಿದ್ದುವು. ನಡುವು ಒಡ್ಯಾಣದಿಂದ ಶೋಭಿಸುತ್ತಿರುವ ಸುಂದರವಾದ ಸೀರೆಯಿಂದ ಅಲಂಕೃತವಾಗಿತ್ತು. ಉನ್ನತವಾದ ಸ್ತನಗಳು ನಿರಂತರವಾಗಿ ಒಂದಕ್ಕೊಂದು ಸೇರಿಕೊಂಡಿದ್ದುವು. ಆಕೆಯ ಮೂಗು ಮತ್ತು ದಂತ ಪಂಕ್ತಿಗಳು ಅತ್ಯಂತ ಆಕರ್ಷಣೀಯವಾಗಿದ್ದುವು. ಇಂತಹ ಆ ಸುಂದರಿಯು ಮಧುರವಾದ ಕಿರುನಗೆಯಿಂದ ಆ ಅಸುರರ ಕಡೆ ಹಾವ-ಭಾವ ಪೂರ್ಣವಾದ ದೃಷ್ಟಿಯಿಂದ ನೋಡುತ್ತಿದ್ದಳು. ತನ್ನ ಕಪ್ಪು ಮುಂಗುರುಳುಗಳಿಂದ ಶೋಭಿಸುತ್ತಿದ್ದ ಆ ಸುಕುಮಾರಿಯು ಲಜ್ಜೆಯಿಂದ ತನ್ನ ಸೀರೆಯ ಸೆರಗಿನಲ್ಲಿಯೇ ತಾನು ಮುಚ್ಚಿಕೊಳ್ಳುವಂತೆ ಕಾಣುತ್ತಿದ್ದಳು. ಆಕೆಯನ್ನು ಕಂಡು ಅಸುರರೆಲ್ಲರೂ ಆಕೆಯಲ್ಲಿ ಮೋಹಪರವಶರಾದರು. 'ಆಹಾ! ಈಕೆಯದು ಎಂತಹ ಅದ್ಭುತವಾದ ರೂಪ! ಎಂತಹ ಅಲೌಕಿಕವಾದ

ಧೈರ್ಯ ಮತ್ತು ಎಂತಹ ಹೊಸ ಯೌವನ! ಕಾಮಪೀಡಿತರಾದ ನಮ್ಮ ನಡುವೆ ಈ ವೈಯ್ಯಾರಿಯು ನಮ್ಮನ್ನು ಗಮನಿಸದೇ ಕಾಮರಹಿತಳೋ– ಎಂಬಂತೆ ಓಡಾಡುತ್ತಿರುವಳಲ್ಲಾ!' (ಶ್ಲೋಕ 28-32)

ಈ ರೀತಿಯಲ್ಲಿ ಆ ದುಷ್ಟಬುದ್ಧಿಯ ದೈತ್ಯರು ಸ್ತ್ರೀರೂಪಿಣಿಯಾದ ಸಂಧ್ಯೆಯ ವಿಷಯದಲ್ಲಿ ಬಗೆ-ಬಗೆಯ ತರ್ಕಗಳನ್ನು ಮಾಡುತ್ತಾ ಆದರ ದಿಂದ ಆಕೆಯ ಬಳಿಗೆ ಹೋಗಿ ಪ್ರೀತಿ-ವಿಶ್ವಾಸಗಳಿಂದ ಆಕೆಯನ್ನು ಕುರಿತು– "ನೀನಾರು ಸುಂದರಿ? ಯಾರ ಮಗಳು? ನೀನು ಇಲ್ಲಿ ಏಕೆ ಬಂದೆ? ನಿನ್ನ ಅನುಪಮವಾದ ಸೌಂದರ್ಯವೆಂಬ ಅಮೂಲ್ಯವಾದ ಮಾರಾಟದ ವಸ್ತು ವನ್ನು ತೋರಿಸಿ ದುರದೃಷ್ಟಶಾಲಿಗಳಾದ ನಮ್ಮನ್ನು ಏಕೆ ಪೀಡಿಸುತ್ತಿದ್ದೀಯೆ? ಅಬಲೆಯೇ! ನೀನಾರಾಗಿದ್ದರೇನು? ನಿನ್ನ ದರ್ಶನವಾಗಿರುವುದೇ ನಮ್ಮ ದೊಡ್ಡ ಭಾಗ್ಯವು. ಚೆಂಡನ್ನು ಮೇಲಕ್ಕೆಸೆದಾಡುತ್ತಾ ನೀನು ದರ್ಶಕರಾಗಿರುವ ನಮ್ಮ ಮನಸ್ಸನ್ನು ಕಲಕುತ್ತಿದ್ದೀಯೆ. ಆಹಾ, ಸುಂದರಿ! ಪುಟಿದು ಹಾರುತ್ತಿರುವ ಚೆಂಡನ್ನು ಅಂಗೈಯಿಂದ ನೀನು ಹೊಡೆಯುತ್ತಿರುವಾಗ ನಿನ್ನ ಪಾದಕಮಲಗಳು ಒಂದು ಕಡೆ ನಿಲ್ಲದೆ ಚಲಿಸುತ್ತಿವೆ. ನಿನ್ನ ಕಟಿಪ್ರದೇಶವು ಸ್ಥೂಲವಾದ ಸ್ತನಗಳ ಭಾರದಿಂದ ಆಯಾಸಗೊಂಡಂತಿದೆ. ನಿನ್ನ ನಿರ್ಮಲ ವಾದ ದೃಷ್ಟಿಯಿಂದಲೂ ಆಯಾಸವು ತೋರಿಬರುತ್ತಿದೆ. ಆಹಾ! ನಿನ್ನ ಕೇಶಪಾಶವು ಎಷ್ಟು ಸುಂದರವಾಗಿದೆ!"–ಎಂದು ಆಕೆಯನ್ನು ಪ್ರಶ್ನೆ ಮಾಡಿದರು. ಈ ರೀತಿಯಲ್ಲಿ ಸ್ತ್ರೀರೂಪದಲ್ಲಿ ಪ್ರಕಟಗೊಂಡ ಸಾಯಂ ಸಂಧ್ಯೆಯು ಅವರನ್ನು ಅತ್ಯಂತಕಾಮಾಸಕ್ತರನ್ನಾಗಿ ಮಾಡಿತು. ಆ ಮೂರ್ಖರು ಆಕೆಯನ್ನು ರಮಣೀರತ್ನವೆಂದು ಭಾವಿಸಿ ಪರಿಗ್ರಹಿಸಿದರು. (ಶ್ಲೋಕ 33-37)

ಅನಂತರ ಬ್ರಹ್ಮದೇವರು ಗಂಭೀರಭಾವದಿಂದ ನಗುತ್ತಾ ತನ್ನ ಸೌಂದರ್ಯವನ್ನು ತಾನೇ ಸವಿಯುತ್ತಿರುವಂತೆ ಕಂಗೊಳಿಸುತ್ತಿದ್ದ ತನ್ನ ಕಾಂತಿಮಯವಾದ ಮೂರ್ತಿಯಿಂದ ಗಂಧರ್ವರನ್ನೂ ಮತ್ತು ಅಪ್ಸರೆಯ ರನ್ನೂ ಸೃಷ್ಟಿಮಾಡಿದರು. ಆಗ ಅವರು ಚಂದ್ರಿಕಾರೂಪವಾದ ತಮ್ಮ ಆ ಕಾಂತಿಮಯವಾದ ಪ್ರಿಯಶರೀರವನ್ನು ತೊರೆದುಬಿಟ್ಟರು. ಆ ದೇಹವನ್ನು ವಿಶ್ವಾವಸುವೇ ಮುಂತಾದ ಗಂಧರ್ವರು ಪ್ರೀತಿಯಿಂದ ಪರಿಗ್ರಹಿಸಿದರು.

(ಆ ದೇಹವನ್ನು ಪ್ರಾತಃಸ್ಸಂಧ್ಯೆಯೆಂದು ಕರೆಯುತ್ತಾರೆ.) ಆದಾದ ಮೇಲೆ ಬ್ರಹ್ಮದೇವರು ತನ್ನ *ಆಲಸ್ಯದಿಂದ ಭೂತಗಳನ್ನೂ-ಪಿಶಾಚಗಳನ್ನೂ ಸೃಷ್ಟಿಸಿದರು. ಅವು ದಿಗಂಬರವಾಗಿ ತಲೆಗೆದರಿಕೊಂಡಿರುವುದನ್ನು ಕಂಡು ಅವರು ಕಣ್ಣುಗಳನ್ನು ಮುಚ್ಚಿಕೊಂಡುಬಿಟ್ಟರು. ಬ್ರಹ್ಮದೇವರು ತ್ಯಜಿಸಿದ ಆ ಆಕಳಿಕೆಯ ರೂಪವಾದ ದೇಹವನ್ನು ಭೂತ-ಪಿಶಾಚಗಳು ಪರಿಗ್ರಹಿಸಿದುವು. ಅದನ್ನೇ ನಿದ್ರೆಯೆಂದು ಕರೆಯುತ್ತಾರೆ. ಅದು ಜೀವಿಗಳಿಗೆ ಇಂದ್ರಿಯಗಳಲ್ಲಿ ಶೈಥಿಲ್ಯವನ್ನುಂಟುಮಾಡುತ್ತದೆ. ಮನುಷ್ಯನು ಎಂಜಲುದೇಹದಿಂದ ಕೂಡಿ ನಿದ್ರಿಸಿದರೆ ಆತನನ್ನು ಭೂತ-ಪಿಶಾಚಾದಿಗಳು ಆಕ್ರಮಿಸುತ್ತವೆ. ಇದನ್ನೇ ಉನ್ಮಾದವೆಂದು ಕರೆಯುತ್ತಾರೆ. (ಶ್ಲೋಕ 38-41)

ಅನಂತರ ಬ್ರಹ್ಮದೇವರು- 'ನಾನು ತೇಜೋಮಯನಾಗಿದ್ದೇನೆ'- ಎಂದು ಭಾವಿಸಿಕೊಂಡು ತಮ್ಮ ಅದೃಶ್ಯವಾದ ರೂಪದಿಂದ ಸಾಧ್ಯಗಣಗಳನ್ನೂ ಮತ್ತು ಪಿತೃಗಣಗಳನ್ನೂ ಸೃಷ್ಟಿಮಾಡಿದರು. ತಮ್ಮ ಉತ್ಪತ್ತಿಯ ಸ್ಥಾನವಾದ ಆ ಅದೃಶ್ಯವಾದ ಶರೀರವನ್ನು ಪಿತೃದೇವತೆಗಳು ಪರಿಗ್ರಹಿಸಿದರು. ಅದನ್ನೇ ಗುರಿಯನ್ನಾಗಿಟ್ಟುಕೊಂಡು ಜ್ಞಾನಿಗಳು ಶ್ರಾದ್ಧವೇ ಮುಂತಾದ ರೂಪಗಳಲ್ಲಿ ಪಿತೃದೇವತೆಗಳಿಗೂ ಮತ್ತು ಸಾಧ್ಯಗಣಗಳಿಗೂ ಕ್ರಮವಾಗಿ ಕವ್ಯಗಳನ್ನೂ ಮತ್ತು ಹವ್ಯಗಳನ್ನೂ ಸಮರ್ಪಣೆಮಾಡುತ್ತಾರೆ. ಬ್ರಹ್ಮದೇವರು ತಮ್ಮ ತಿರೋಧಾನಶಕ್ತಿಯಿಂದ ಸಿದ್ಧರನ್ನೂ-ವಿದ್ಯಾಧರರನ್ನೂ ಸೃಷ್ಟಿಮಾಡಿ ಅವರಿಗೆ ತಮ್ಮ ಅಂತರ್ಧಾನವೆಂಬ ಹೆಸರಿನ ಅದ್ಭುತವಾದ ಶರೀರವನ್ನು ಅನುಗ್ರಹಿಸಿಕೊಟ್ಟರು. ಒಮ್ಮೆ ಬ್ರಹ್ಮದೇವರು ತಮ್ಮ ಪ್ರತಿಬಿಂಬವನ್ನು ಕಂಡು ಸಂತೋಷಗೊಂಡರು. ತಮ್ಮನ್ನು ಅತಿಸುಂದರರೆಂದು ಭಾವಿಸಿಕೊಂಡು ತಮ್ಮ ಆ ಪ್ರತಿಬಿಂಬದಿಂದ ಕಿನ್ನರರನ್ನೂ ಮತ್ತು ಕಿಂಪುರುಷರನ್ನೂ ಸೃಷ್ಟಿಮಾಡಿದರು. ಅನಂತರ ಬ್ರಹ್ಮದೇವರು ತಮ್ಮ ಆ ಪ್ರತಿಬಿಂಬಶರೀರವನ್ನು ತ್ಯಜಿಸಲು-ಕಿನ್ನರರೂ ಮತ್ತು ಕಿಂಪುರುಷರೆಲ್ಲರೂ ಉಷಃಕಾಲದಲ್ಲಿ ತಮ್ಮ ಪತ್ನಿಯರಿಂದೊಡಗೂಡಿ ಬ್ರಹ್ಮದೇವರನ್ನು-

---

* ಆಲಸ್ಯದಲ್ಲಿ ನಿದ್ರಾ, ತಂದ್ರಾ, ಜೃಂಭಿಕೆ, ಉನ್ಮಾದ-ಎಂಬ ನಾಲ್ಕು ವಿಧಗಳು. ಅವುಗಳಿಂದ ಹುಟ್ಟಿದ ಭೂತ-ಪಿಶಾಚಗಳಿಗೂ ಇದೇ ಹೆಸರು.

ಅವರ ಗುಣಗಳೇನು, ಕರ್ಮಗಳೇನು–ಈ ಎಲ್ಲವನ್ನೂ ವರ್ಣಿಸುತ್ತಾ ಹಾಡಿಹೊಗಳುತ್ತಾರೆ. (ಶ್ಲೋಕ 42-46)

ಒಮ್ಮೆ ಬ್ರಹ್ಮದೇವರು–ಸೃಷ್ಟಿಯು ವೃದ್ಧಿಹೊಂದಲೇ ಇಲ್ಲವಲ್ಲಾ–ಎಂದು ಅತ್ಯಂತ ಚಿಂತಾವಶರಾಗಿ ಕೈ-ಕಾಲು ಮುಂತಾದ ಅವಯವಗಳನ್ನು ಚಾಚಿಕೊಂಡು ಮಲಗಿಕೊಂಡುಬಿಟ್ಟರು. ಮತ್ತೆ ಕ್ರೋಧವಶರಾಗಿ ತಮ್ಮ ಭೋಗಮಯಶರೀರವನ್ನು ತ್ಯಜಿಸಿಬಿಟ್ಟರು. ಆ ದೇಹದಿಂದ ಕೆಳಗೆ ಬಿದ್ದ ಕೂದಲುಗಳಿಂದ ಅಹಿಗಳೆಂಬ ಹಾವುಗಳು ಉಂಟಾದುವು. ಅವರು ಆ ದೇಹ ದಿಂದ ಚಲಿಸಿದಾಗ ಕ್ರೂರಸ್ವಭಾವವುಳ್ಳ ಸರ್ಪಗಳೂ ಮತ್ತು ನಾಗಗಳೆಂಬ ಹಾವುಗಳೂ ಜನಿಸಿದುವು. ಅವುಗಳ ದೇಹಗಳು ಹೆಡೆಗಳು ರೂಪದಲ್ಲಿ ಹೆಗಲಿನ ಹತ್ತಿರ ವಿಸ್ತಾರವಾಗಿ ಅತಿದೊಡ್ಡದಾಗಿ ಹರಡಿಕೊಂಡಿವೆ. ಒಂದು ಬಾರಿ ಬ್ರಹ್ಮದೇವರಿಗೆ ತಾವು ಕೃತಕೃತ್ಯರೋ–ಎಂಬ ಅನುಭವವುಂಟಾಯಿತು. ಆಗ ಅವರು ಸೃಷ್ಟಿಯ ಕೊನೆಯಲ್ಲಿ ತಮ್ಮ ಮನಸ್ಸಿನಿಂದ ಮನುಷ್ಯರನ್ನು ಸೃಷ್ಟಿಸಿದರು. ಈ ಮನುಷ್ಯರು ಪ್ರಜೆಗಳನ್ನು ಬೆಳೆಸುವವರಾಗಿರುತ್ತಾರೆ. ಪ್ರಶಸ್ತವಾದ ಮನಸ್ಸುಳ್ಳ ಬ್ರಹ್ಮದೇವರು ಆ ಮನುಷ್ಯಜಾತಿಗಾಗಿ ಪುರುಷಾಕಾರವಾದ ಶರೀರವನ್ನು ತ್ಯಜಿಸಿ ಅವರಿಗೆ ಅದನ್ನು ಅನುಗ್ರಹಿಸಿ ಕೊಟ್ಟರು. ಆ ಮನುಷ್ಯರನ್ನು ನೋಡಿ ಅವರಿಗಿಂತಲೂ ಮೊದಲು ಸೃಷ್ಟಿಸ ಲ್ಪಟ್ಟಿದ್ದ ದೇವತೆಗಳು, ಗಂಧರ್ವರು–ಮುಂತಾದವರು ಬ್ರಹ್ಮದೇವರನ್ನು ಸ್ತುತಿಸತೊಡಗಿದರು. "ಎಲೈ ವಿಶ್ವಸೃಷ್ಟಿಯನ್ನು ಮಾಡಿದ ದೇವರೇ! ನಿಮ್ಮ ಈ ಮನುಷ್ಯನೆಂಬ ಸೃಷ್ಟಿಯು ಎಷ್ಟು ಸುಂದರವಾಗಿದೆ! ಇದು ಸುಕೃತವಾದ ಸೃಷ್ಟಿ. ಇದರಲ್ಲಿ ಅಗ್ನಿಹೋತ್ರವೇ ಮುಂತಾದ ಎಲ್ಲ ಕರ್ಮಗಳೂ ನೆಲೆಗೊಂಡಿವೆ. ಇದರ ಸಹಾಯದಿಂದ ನಾವು ನಮ್ಮ ಹವಿರ್ಭಾಗವೆಂಬ ಅನ್ನವನ್ನು ಸ್ವೀಕರಿಸಲು ಸಾಧ್ಯವಾಗುತ್ತದೆ."

ಅನಂತರ ಆದಿಋಷಿಯಾದ ಬ್ರಹ್ಮದೇವರು ಇಂದ್ರಿಯಸಂಯಮ ಪೂರ್ವಕವಾಗಿ ತಪಸ್ಸು, ವಿದ್ಯೆ, ಯೋಗ, ಸಮಾಧಿ–ಇವುಗಳಿಂದ ಸಂಪನ್ನ ರಾಗಿ ತಮ್ಮ ಪ್ರಿಯಸಂತಾನವಾದ ಋಷಿಗಣವನ್ನು ಸೃಷ್ಟಿಸಿದರು ಮತ್ತು ಅವರಲ್ಲಿ ಪ್ರತಿಯೊಬ್ಬರಿಗೂ ತಮ್ಮ ಸಮಾಧಿ, ಯೋಗ, ಐಶ್ವರ್ಯ, ತಪಸ್ಸು,

ವಿದ್ಯೆ, ಮತ್ತು ವೈರಾಗ್ಯಮಯವಾದ ಶರೀರದ ಭಾಗಗಳನ್ನು ದಯಪಾಲಿಸಿದರು. (ಶ್ಲೋಕ 47-53)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೨೦ನೆಯ ಅಧ್ಯಾಯವು ಮುಗಿಯಿತು.

ಕರ್ದಮರ ತಪಸ್ಸು ಮತ್ತು ಶ್ರೀಭಗವಂತನ ವರಪ್ರದಾನ

ಸೃಷ್ಟಿವಿಷಯವಾದ ಪ್ರಶ್ನೆಗಳನ್ನು ಮುಂದುವರಿಸುತ್ತಾ ಮಹಾತ್ಮನಾದ ವಿದುರನು ಮೈತ್ರೇಯಮಹರ್ಷಿಗಳಲ್ಲಿ ಹೀಗೆ ವಿನಂತಿಸಿಕೊಂಡನು :

ಸ್ವಾಯಮ್ಭುವಸ್ಯ ಚ ಮನೋರ್ವಂಶಃ ಪರಮಸಮ್ಮತ ।
ಕಥ್ಯತಾಂ ಭಗವನ್ಯತ್ರ ಮೈಥುನೇನೈಧಿರೇ ಪ್ರಜಾಃ ॥೧॥

"ಪೂಜ್ಯರೇ! ಸ್ವಾಯಂಭುವಮನುವಿನ ವಂಶವು ಅತ್ಯಂತ ಆದರಣೀಯವಾದುದೆಂದು ಕೇಳಿದ್ದೇವೆ. ಮೈಥುನಧರ್ಮದ ಮೂಲಕ ಪ್ರಜಾವೃದ್ಧಿಯನ್ನು ಹೇರಳವಾಗಿ ಮಾಡಿದ ವಂಶವಿದು. ಇಂತಹ ಶ್ರೇಷ್ಠವಾದ ವಂಶವನ್ನು ಕುರಿತು ನನಗೆ ತಿಳಿಸೋಣವಾಗಲಿ.

'ಸ್ವಾಯಂಭುವಮನುವಿನ ಪುತ್ರರಾದ ಪ್ರಿಯವ್ರತ ಮತ್ತು ಉತ್ತಾನಪಾದರು ಸಪ್ತದ್ವೀಪಗಳಿಂದ ಪರಿವೃತವಾದ ಪೃಥಿವಿಯನ್ನು ಧರ್ಮದಿಂದ ಆಳಿದರು ಮತ್ತು ಪುತ್ರಿಯಾದ ದೇವಹೂತಿಯೆಂಬುವಳು ಕರ್ದಮಪ್ರಜಾಪತಿಯನ್ನು ವಿವಾಹವಾದಳು'–ಎಂದು ತಾವು ಅಪ್ಪಣೆಕೊಡಿಸಿದಿರಿ. ದೇವಹೂತಿಯು ಯಮ-ನಿಯಮಗಳೇ ಮುಂತಾದ ಯೋಗಲಕ್ಷಣಗಳಿಂದ ಸಂಪನ್ನಳಾಗಿದ್ದಳು. ಆ ಸಾಧ್ವಿಯು ಕರ್ದಮಪ್ರಜಾಪತಿಯಿಂದ ಎಷ್ಟು ಸಂತಾನಗಳನ್ನು ಪಡೆದಳು?–ಎಂಬುದನ್ನು ತಿಳಿಯಲು ಇಚ್ಛೆಪಡುತ್ತಿದ್ದೇನೆ. ಈ ಎಲ್ಲ ಪ್ರಸಂಗಗಳನ್ನೂ ನನಗೆ ತಿಳಿಸಿರಿ. ಹಾಗೆಯೇ ಭಗವಂತನಾದ ರುಚಿಯೂ ಮತ್ತು ಬ್ರಹ್ಮಪುತ್ರನಾದ ದಕ್ಷಪ್ರಜಾಪತಿಯೂ ಸ್ವಾಯಂಭುವಮನುವಿನ ಪುತ್ರಿಯರನ್ನು ಮದುವೆಯಾಗಿ ಅವರಿಂದ ಎಷ್ಟು ಮಂದಿ

ಮಕ್ಕಳನ್ನು ಪಡೆದರು? ಯಾವ-ಯಾವ ರೀತಿಗಳಲ್ಲಿ ಅವುಗಳನ್ನು ಪಡೆದರು?–ಮುಂತಾದ ಚರಿತ್ರವೆಲ್ಲವನ್ನೂ ನನಗೆ ಸ್ಪಷ್ಟವಾಗಿ ತಿಳಿಸೋಣವಾಗಿಲಿ." (ಶ್ಲೋಕ 1-5)

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

"ಅಯ್ಯಾ ವಿದುರ! ಬ್ರಹ್ಮದೇವರು ಪೂಜ್ಯರಾದ ಕರ್ದಮರಿಗೆ ಸಂತಾನವನ್ನು ಪಡೆಯಪ್ಪಾ–ಎಂದು ಆಜ್ಞಾಪಿಸಲು ಕರ್ದಮರು ಸರಸ್ವತೀ ನದೀತೀರಕ್ಕೆ ಹೋಗಿ, ಅಲ್ಲಿ ಹತ್ತು ಸಾವಿರ ವರ್ಷಗಳ ಕಾಲ ತಪಸ್ಸನ್ನಾಚರಿಸಿದರು. ಕರ್ದಮಪ್ರಜಾಪತಿಗಳು ಏಕಾಗ್ರವಾದ ಮನಸ್ಸಿನಿಂದ, ಭಕ್ತಿಪೂರ್ವಕವಾದ ಪೂಜೋಪಚಾರಾದಿಗಳಿಂದ ಕೂಡಿದ ಕ್ರಿಯಾಯೋಗದಿಂದ–ಶರಣಾಗತರಿಗೆ ವರಗಳನ್ನು ದಯಪಾಲಿಸುವ ಶ್ರೀಹರಿಯನ್ನು ಆರಾಧಿಸತೊಡಗಿದರು. ಆಗ ಕೃತ (ಸತ್ಯ) ಯುಗದ ಪ್ರಾರಂಭಕಾಲದಲ್ಲಿ ಪುಂಡರೀಕಾಕ್ಷನಾದ ಶ್ರೀಮನ್ನಾರಾಯಣನು ಅವರ ತಪಸ್ಸಿನಿಂದ ಸಂತುಷ್ಟನಾಗಿ ತನ್ನ ಶಬ್ದಬ್ರಹ್ಮಮಯವಾದ ಸ್ವರೂಪದಿಂದ ಆಕಾರವನ್ನು ತಳೆದು ಅವರಿಗೆ ದರ್ಶನವನ್ನು ಕರುಣಿಸಿದನು. (ಶ್ಲೋಕ 6-8)

ಕರ್ದಮರಿಗೆ ದರ್ಶನವನ್ನು ದಯಪಾಲಿಸಿದ ಆ ಶ್ರೀಮೂರ್ತಿಯ ಸೌಂದರ್ಯ-ತೇಜಸ್ಸುಗಳನ್ನು ಕೇಳಬೇಕೇ! ಪರಿಶುದ್ಧವಾದ ಆ ಮೂರ್ತಿಯು ಸೂರ್ಯನಂತೆ ತೇಜೋರಾಶಿಯಾಗಿ ರಾರಾಜಿಸುತ್ತಿತ್ತು. ಅದರ ಕಂಠದಲ್ಲಿ ಕಮಲ ಮತ್ತು ಕುಮುದಪುಷ್ಪಗಳ ಮಾಲೆಯು ಶೋಭಿಸುತ್ತಿತ್ತು. ಅದರ ಮುಖಕಮಲವು ನುಣುಪಾದ ನೀಲಿಬಣ್ಣದ ಮುಂಗುರುಳುಗಳಿಂದ ಕಂಗೊಳಿಸುತ್ತಿತ್ತು. ಸ್ವಾಮಿಯು ನಿರ್ಮಲವಾದ ವಸ್ತ್ರಗಳನ್ನು ಧರಿಸಿದ್ದನು. ಆತನ ತಲೆಯಲ್ಲಿ ಥಳ-ಥಳಿಸುವ ಸ್ವರ್ಣಕಿರೀಟವೂ, ಕಿವಿಯಲ್ಲಿ ಕಳ-ಕಳಿಸುವ ಕುಂಡಲಗಳೂ, ಕೈಯಲ್ಲಿ ಹೊಳೆ-ಹೊಳೆಯುವ ಶಂಖ-ಚಕ್ರ-ಗದೆಗಳೇ–ಮುಂತಾದ ಆಯುಧಗಳೂ ಬೆಳಗುತ್ತಿದ್ದುವು. ಒಂದು ಕೈಯಲ್ಲಿ ಬಿಳಿಯ ಲೀಲಾಕಮಲವು ಆಡುತ್ತಿತ್ತು. ಪ್ರಭುವಿನ ಮಧುರವಾದ ಮಂದಹಾಸದಿಂದ ಶೋಭಿಸುತ್ತಿದ್ದ ದೃಷ್ಟಿಯು ಚಿತ್ತವನ್ನು ಅಪಹರಿಸುತ್ತಿತ್ತು. ಪಾದಾರವಿಂದಗಳು ಗರುಡದೇವರ ಹೆಗಲಮೇಲೆ ವಿರಾಜಿಸುತ್ತಿದ್ದುವು. ವಕ್ಷಃಸ್ಥಳದಲ್ಲಿ ಶ್ರೀಲಕ್ಷ್ಮೀದೇವಿಯೂ–ಕಂಠದಲ್ಲಿ ಕೌಸ್ತುಭ

ಮಣಿಯೂ ಕಣ್ಮನಗಳಿಗೆ ಹಬ್ಬವಾಗಿ ಮೆರೆಯುತ್ತಿದ್ದುವು. ಆಕಾಶದಲ್ಲಿ ಬೆಳಗುತ್ತಿದ್ದ ಶ್ರೀಮೂರ್ತಿಯನ್ನು ಸಂದರ್ಶಿಸಿ ಕರ್ದಮರು ಪರಮಾನಂದದಲ್ಲಿ ಮುಳುಗಿದರು. ಆ ದರ್ಶನಮಾತ್ರದಿಂದಲೇ ಸಕಲ ಕಾಮನೆಗಳೂ ಈಡೇರಿದಂತೆ ಭಾವಿಸಿದರು. ಅವರು ಆನಂದಪೂರ್ವಕವಾಗಿ ಹೃದಯವನ್ನು ನೆಲಕ್ಕೆ ಸೋಕಿಸುತ್ತಾ ನಾರಾಯಣನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತಾ ಮತ್ತು ಪ್ರೇಮಪೂರ್ಣವಾದ ಚಿತ್ತದಿಂದ ಕೈಜೋಡಿಸಿಕೊಂಡು ಸವಿಮಾತುಗಳಿಂದ ಸ್ವಾಮಿಯನ್ನು ಹೀಗೆ ಸ್ತುತಿಸ ತೊಡಗಿದರು :

(ಶ್ಲೋಕ 9-12)

ಜುಷ್ಟಂ ಬತಾದ್ಯಾಖಿಲಸತ್ತ್ವರಾಶೇಃ
ಸಾಂಸಿಧ್ಯಮಕ್ಷ್ಣೋಸ್ತವ ದರ್ಶನಾನ್ನಃ ।
ಯದ್ದರ್ಶನಂ ಜನ್ಮಭಿರೀಡ್ಯ ಸದ್ಭಿ-
ರಾಶಾಸತೇ ಯೋಗಿನೋ ರೂಢಯೋಗಾಃ ॥೧೩॥

"ಸ್ತುತಿಗೆ ಯೋಗ್ಯತಮನಾಗಿರುವ ಸ್ವಾಮಿಯೇ! ಶುದ್ಧಸತ್ತ್ವಗುಣ ರಾಶಿಯೇ! ಯೋಗಿಗಳು ಮುಂದು-ಮುಂದಿನ ಶ್ರೇಷ್ಠಯೋನಿಗಳಲ್ಲಿ ಜನಿಸಿ, ಕೊನೆಗೆ ಯೋಗಾರೂಢರಾಗಿ ಯಾವನನ್ನು ಸಂದರ್ಶಿಸಲು ಬಯಸುತ್ತಾರೆಯೋ–ಅಂತಹ ಅಲಭ್ಯಲಾಭವಾಗಿರುವ ನೀನು ನನಗೆ ಈಗಲೇ ದರ್ಶನವನ್ನು ದಯಪಾಲಿಸಿ ಕಣ್ಣುಗಳಿಗೆ ಸಫಲತೆಯನ್ನು ತಂದುಕೊಟ್ಟಿರುವೆ.

ಯೇ ಮಾಯಯಾ ತೇ ಹತಮೇಧಸಸ್ತ್ವ-
ತ್ಪಾದಾರವಿನ್ದಂ ಭವಸಿನ್ಧುಪೋತಮ್ ।
ಉಪಾಸತೇ ಕಾಮಲವಾಯ ತೇಷಾಂ
ರಾಸೀಶ ಕಾಮಾನ್ನಿರಯೇಽಪಿ ಯೇ ಸ್ಯುಃ ॥೧೪॥

ನಿನ್ನ ಚರಣಕಮಲಗಳು ಸಂಸಾರಸಾಗರವನ್ನು ದಾಟಿಹೋಗುವ ನಾವೆಯಾಗಿವೆ. ಅಂತಹ ಪಾದಾರವಿಂದಗಳನ್ನು–ನಿನ್ನ ಮಾಯೆಯಿಂದ ವಿವೇಕವನ್ನು ಕಳೆದುಕೊಂಡವರು ತಾನೇ ತುಚ್ಛವೂ–ಕ್ಷಣಿಕವೂ ಆದ ವಿಷಯಸುಖಗಳಿಗಾಗಿ ಆಶ್ರಯಿಸುತ್ತಾರೆ? ಆ ಸುಖಗಳು ನರಕದಲ್ಲಿ ದೊರೆ

ಯಲು ಬರುವುವು. ಆದರೆ ಕೃಪಾನಿಧಿಯಾದ ನೀನು ಅಂತಹ ವಿಷಯ ಭೋಗಗಳನ್ನೂ ಬಯಸಿದವರಿಗೆ ಅದನ್ನೇ ಕೊಡುತ್ತೀಯೆ.

ತಥಾ ಸ ಚಾಹಂ ಪರಿವೋಢುಕಾಮಃ
ಸಮಾನಶೀಲಾಂ ಗೃಹಮೇಧಧೇನುಮ್ ।
ಉಪೇಯಿವಾನ್ಮೂಲಮಶೇಷಮೂಲಂ
ದುರಾಶಯಃ ಕಾಮದುಘಾಙ್ಘ್ರಿಪಸ್ಯ ॥೧೫॥

ಪ್ರಭುವೇ! ನೀನು ಕಲ್ಪವೃಕ್ಷಕ್ಕೆ ಎಣೆಯಾಗಿ ಸಕಲಮನೋರಥ ಗಳನ್ನೂ ಕೈಗೂಡಿಸುವ ಶ್ರೀಪಾದಪದ್ಮಗಳುಳ್ಳವನು. ನನ್ನ ಹೃದಯವು ಕಾಮದಿಂದ ಕಲುಷಿತವಾಗಿರುವುದರಿಂದ ನಾನು–ನನಗೆ ಅನುರೂಪಳಾಗಿ, ಗೃಹಸ್ಥಧರ್ಮವನ್ನು ಪಾಲನೆಮಾಡಲು ಸಹಾಯಮಾಡುವ ಶೀಲವತಿಯಾದ ಕನ್ಯೆಯನ್ನು ಪತ್ನಿಯನ್ನಾಗಿ ಪಡೆಯುವುದಕ್ಕಾಗಿಯೇ ನಿನ್ನ ಅಡಿದಾವರೆಗಳಲ್ಲಿ ಶರಣುಹೊಂದಿದ್ದೇನೆ.

ಪ್ರಜಾಪತೇಸ್ತೇ ವಚನಾಧೀಶ ತನ್ತ್ಯಾ
ಲೋಕಃ ಕಿಲಾಯಂ ಕಾಮಹತೋಽನುಬದ್ಧಃ ।
ಅಹಂ ಚ ಲೋಕಾನುಗತೋ ವಹಾಮಿ
ಬಲಿಂ ಚ ಶುಕ್ಲಾನಿಮಿಷಾಯ ತುಭ್ಯಮ್ ॥೧೬॥

ಓ ಸರ್ವೇಶ್ವರನೇ! ನೀನು ಸಮಸ್ತಲೋಕಗಳ ಅಧಿಪತಿಯು. ಬಗೆ-ಬಗೆಯ ಕಾಮನೆಗಳಿಗೆ ಸಿಲುಕಿಕೊಂಡ ಈ ಲೋಕವು ನಿನ್ನ ವೇದ ವಾಣೀರೂಪವಾದ ನೂಲಿನಿಂದ ಕಟ್ಟಿಹಾಕಲ್ಪಟ್ಟಿದೆ. ಸಗುಣ-ಸಾಕಾರವಾದ ಧರ್ಮವೇ ಆಗಿರುವ ಪ್ರಭುವೇ! ಆ ಕಾಮನಾಪೂರ್ಣವಾದ ವೈದಿಕಮಾರ್ಗ ವನ್ನನುಸರಿಸಿ ನಾನು, ಕಾಲಸ್ವರೂಪಿಯಾದ ನಿನಗೆ ಆಜ್ಞಾಪಾಲನೆಯ ರೂಪವಾದ ಪೂಜೆ-ಉಪಹಾರಾದಿಗಳನ್ನು ಸಮರ್ಪಿಸುತ್ತಿದ್ದೇನೆ.

ಲೋಕಾಂಶ್ಚ ಲೋಕಾನುಗತಾನ್ಪಶೂಂಶ್ಚ
ಹಿತ್ವಾ ಶ್ರಿತಾಸ್ತೇ ಚರಣಾತಪತ್ರಮ್ ।
ಪರಸ್ಪರಂ ತ್ವದ್ಗುಣವಾದಸೀಧು-
ಪೀಯೂಷನಿರ್ಯಾಪಿತದೇಹಧರ್ಮಾಃ ॥೧೭॥

ಮಹಾಪ್ರಭುವೇ! ನಿನ್ನ ಏಕಾಂತಭಕ್ತರಾದರೋ–ವಿಷಯಸುಖಗಳಲ್ಲಿ ಆಸಕ್ತರಾಗಿರುವ ಜನರನ್ನೂ, ಅವರ ಮಾರ್ಗಗಳನ್ನೂ ಅನುಸರಿಸುತ್ತಿರುವ ನನ್ನಂತಹ ಕರ್ಮಜಡರಾದ ಪಶುಗಳನ್ನು ಸ್ವಲ್ಪವೂ ಲೆಕ್ಕಿಸದೇ ನಿನ್ನ ಪಾದಾರವಿಂದಗಳ ನೆರಳನ್ನೇ ಆಶ್ರಯಿಸುತ್ತಾರೆ. ನಿನ್ನ ಗುಣ-ಕೀರ್ತನರೂಪ ವಾದ ದಿವ್ಯೋನ್ಮಾದವನ್ನುಂಟುಮಾಡುವ ಸುಧೆಯನ್ನೇ ಪಾನಮಾಡುತ್ತಾ ಹಸಿವು-ಬಾಯಾರಿಕೆಗಳೇ ಮುಂತಾದ ದೇಹಧರ್ಮಗಳನ್ನು ಶಮನಗೊಳಿಸಿ ಕೊಳ್ಳುತ್ತಾರೆ.

ನ ತೇಽಜರಾಕ್ಷಭ್ರಮಿರಾಯುರೇಷಾಂ
ತ್ರಯೋದಶಾರಂ ತ್ರಿಶತಂ ಷಷ್ಟಿಪರ್ವ ।
ಷಣ್ನೇಮ್ಯನನ್ತಚ್ಛದಿ ಯತ್ತ್ರಿಣಾಭಿ
ಕರಾಲಸ್ರೋತೋ ಜಗದಾಚ್ಛಿದ್ಯ ಧಾವತ್ ॥೧೮॥

ಸ್ವಾಮಿ! ಈ ಕಾಲಚಕ್ರವು ತುಂಬಾ ಬಲಶಾಲಿಯಾದುದು. ಅಕ್ಷರ ವಾದ ಪರಬ್ರಹ್ಮವೇ ಇದರ ಅಚ್ಚು. ಅದರ ಮೇಲೆ ಹಸಿವು-ಬಾಯಾರಿಕೆಗಳ ರೂಪದಲ್ಲಿ ನಿಲುಗಡೆಯಿಲ್ಲದೆ ಇದು ಸುತ್ತುತ್ತಿದೆ. ಅಧಿಕಮಾಸದಿಂದ ಕೂಡಿದ ಹದಿಮೂರು ತಿಂಗಳುಗಳು ಇದರ ಅರೆಕಾಲುಗಳು. ಮುನ್ನೂ ರರವತ್ತು ದಿವಸಗಳು ಇದರ ಗಿಣ್ಣುಗಳು. ಇದು ಆರು ಋತುಗಳೆಂಬ ಅಂಚುಪಟ್ಟಿಗಳಿಂದಲೂ,ಅನಂತವಾದ ಕಲಾ-ಕಾಷ್ಠಾ ಮುಂತಾದ ಪತ್ರಾಕಾರ ವಾದ ಧಾರೆಗಳಿಂದಲೂ, ಭೂತ-ಭವಿಷ್ಯದ್ವರ್ತಮಾನಗಳೆಂಬ ಕಾಲ ತ್ರಯರೂಪವಾದ ಹೊಟ್ಟೆಯ ಮರಗಳಿಂದಲೂ ಕೂಡಿದೆ. ಅತ್ಯಧಿಕವೇಗ ವುಳ್ಳ ಸಂವತ್ಸರರೂಪವಾದ ಈ ಕಾಲಚಕ್ರವು ಚರಾಚರರೂಪವಾದ ಜಗತ್ತಿನ ಆಯುಸ್ಸನ್ನು ಕತ್ತರಿಸುತ್ತಾ ಸುತ್ತುತ್ತಿದೆ. ಆದರೆ ಇಂತಹ ಪ್ರಚಂಡವಾದ ಕಾಲಚಕ್ರವೂ ನಿನ್ನ ಏಕಾಂತಭಕ್ತರ ಆಯುಸ್ಸನ್ನು ಲೋಪಗೊಳಿಸಲಾರದು.

ಏಕಃ ಸ್ವಯಂ ಸಞ್ಜಗತಃ ಸಿಸೃಕ್ಷಯಾ–
ದ್ವಿತೀಯಯಾತ್ಮನ್ನಧಿಯೋಗಮಾಯಯಾ ।
ಸೃಜಸ್ಯದಃ ಪಾಸಿ ಪುನರ್ಗ್ರಸಿಷ್ಯಸೇ
ಯಥೋರ್ಣನಾಭಿರ್ಭಗವನ್ಸ್ವಶಕ್ತಿಭಿಃ ॥೧೯॥

ಓ ಭಗವಂತನೇ! ಜೇಡರಹುಳುವು ತನ್ನ ಬಲೆಯನ್ನು ತಾನೇ ಹೊರಹೊಮ್ಮಿಸುತ್ತಿದೆ ; ರಕ್ಷಿಸುತ್ತದೆ ಮತ್ತು ನುಂಗಿಹಾಕುತ್ತದೆ. ಅದಕ್ಕೆ ಬೇರಾವುದರ ಸಹಾಯವೂ ಬೇಕಿಲ್ಲ. ಹಾಗೆಯೇ ನೀನೂ ಇತರರ ಸಹಾಯ ವನ್ನು ಅಪೇಕ್ಷಿಸದೆಯೇ ನಿನ್ನ ಯೋಗಮಾಯೆನ್ನು ಅವಲಂಬಿಸಿ ಅದರಿಂದ ವ್ಯಕ್ತವಾದ ಶಕ್ತಿಗಳಿಂದ ಈ ಜಗತ್ತನ್ನು ಸೃಷ್ಟಿಸಿ, ರಕ್ಷಿಸಿ, ಲಯಗೊಳಿಸುತ್ತೀಯೆ. ಈ ಸೃಷ್ಟಿಯೇ ಮುಂತಾದುವುಗಳೆಲ್ಲಾ ನಿನ್ನ ವಿಲಾಸಗಳೇ ಆಗಿರುವುದರಿಂದ ಆಶ್ರಯಿಸಲು ಯೋಗ್ಯನಾಗಿರುವವನು ನೀನೊಬ್ಬನೇ.

ನೈತದ್ಬತಾಧೀಶ ಪದಂ ತವೇಪ್ಸಿತಂ
ಯನ್ಮಾಯಯಾ ನಸ್ತನುಷೇ ಭೂತಸೂಕ್ಷ್ಮಮ್ ।
ಅನುಗ್ರಹಾಯಾಸ್ತ್ವಪಿ ಯರ್ಹಿ ಮಾಯಯಾ
ಲಸತ್ತುಲಸ್ಯಾ ತನುವಾ ವಿಲಕ್ಷಿತಃ ॥೨೦॥

ಮಯಾಮಯವಾಗಿ ಶಬ್ದ-ಸ್ಪರ್ಶಾದಿವಿಷಯಗಳಿಂದ ಕೂಡಿರುವ ನಶ್ವರವಾದ ಸುಖವನ್ನು ನಿನ್ನ ಏಕಾಂತಭಕ್ತರಿಗೆ ಕೊಡುವುದು ನಿನಗೆ ಇಷ್ಟವಿಲ್ಲ. ಆದರೂ ಅಂಚಿತ್ಯವೂ–ಅದ್ಭುತವೂ ಆದ ಮಹಿಮೆಯುಳ್ಳ ನೀನೇ ಈಗ ನಿನ್ನ ಇಚ್ಛಾರೂಪವಾದ ಮಾಯೆಯಿಂದ ದಿವ್ಯ ತುಳಸೀಮಾಲೆಯಿಂದ ಮಂಡಿತವಾದ ಈ ಮನೋಹರವಾದ ದಿವ್ಯರೂಪದಿಂದ ನನಗೆ ದರ್ಶನವನ್ನು ನೀಡುತ್ತಿದ್ದೀಯಲ್ಲವೇ! ಆದ್ದರಿಂದ ಇದಕ್ಕನುಗುಣವಾಗಿ ನನ್ನನ್ನು ಅನುಗ್ರಹಿಸಲು ನನಗೆ ಈಗ ಐಹಿಕಸುಖಗಳನ್ನು ಕೊಡುವವನಾಗು.

ತಂ ತ್ವಾನುಭೂತ್ಯೋಪರತಕ್ರಿಯಾರ್ಥಂ
ಸ್ವಮಾಯಯಾ ವರ್ತಿತಲೋಕತನ್ತ್ರಮ್ ।
ನಮಾಮ್ಯಭೀಕ್ಷ್ಣಂ ನಮನೀಯಪಾದ-
ಸರೋಜಮಲ್ಪೀಯಸಿ ಕಾಮವರ್ಷಮ್ ॥೨೧॥

ನೀನು ಆಪ್ತಕಾಮನೂ–ಪರಿಪೂರ್ಣನೂ ಆದ್ದರಿಂದ ಯಾವ ಕರ್ಮ ಗಳಿಂದಲೂ ನಿನಗೆ ಯಾವ ಪ್ರಯೋಜನವೂ ಇಲ್ಲ. ಆದರೂ ನೀನು ನಿನ್ನ ಮಾಯಾಶಕ್ತಿಯಿಂದ ಜಗತ್ತಿನ ವ್ಯವಹಾರವನ್ನು ನಡೆಸುತ್ತಿದ್ದೀಯೆ. ಸ್ವಲ್ಪ ಉಪಾಸನೆಮಾಡುವವರಿಗೂ ಸಮಸ್ತವಾದ ಇಷ್ಟಾರ್ಥಗಳ ಮಳೆಗರೆಯು

ತ್ತೀಯೆ. ಭುಕ್ತಿ-ಮುಕ್ತಿಗಳೆರಡನ್ನೂ ದಯಪಾಲಿಸುವ ನೀನು ಸಕಾಮ ಭಕ್ತರಿಗೂ–ನಿಷ್ಕಾಮಭಕ್ತರಿಗೂ ಆಶ್ರಯಿಸಲು ಯೋಗ್ಯನಾಗಿದ್ದೀಯೆ. ಹೀಗೆ ಸರ್ವರಿಗೂ ವಂದಿಸಲು ಯೋಗ್ಯವಾದ ಚರಣಾರವಿಂದಗಳುಳ್ಳ ನಿನಗೆ ಮತ್ತೆ-ಮತ್ತೆ ನಮಸ್ಕರಿಸುತ್ತೇನೆ.''

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಕರ್ದಮಮಹರ್ಷಿಗಳು ಹೀಗೆ ನಿಷ್ಕಪಟಭಾವದಿಂದ ಭಗವಂತನನ್ನು ಕುರಿತು ಸ್ತೋತ್ರಮಾಡಲು ಸ್ವಾಮಿಯು ಅವರಲ್ಲಿ ಅತ್ಯಂತಪ್ರಸನ್ನನಾದನು. ಗರುಡದೇವರ ಹೆಗಲಿನ ಮೇಲೆ ಬೆಳುಗುತ್ತಿದ್ದ ಆ ಭಗವಂತನು ಪ್ರೇಮ ಪೂರ್ಣವಾದ ಕಿರುನಗೆಯನ್ನು ಸೂಸುತ್ತಾ, ಪ್ರೇಮಪೂರ್ಣವಾದ ದೃಷ್ಟಿಯನ್ನು ಬೀರುತ್ತಾ ಅಮೃತಮಯವಾದ ವಚನಗಳಿಂದ ಕರ್ದಮರಿಗೆ ಹೇಳಿದನು :

``ಮಹರ್ಷಿಯೇ! ನಿನ್ನ ಹೃದಯದ ಭಾವವು ನನಗೆ ತಿಳಿದಿದೆ. ನೀನು ಯಾವ ಪ್ರಯೋಜನಕ್ಕಾಗಿ ಆತ್ಮಸಂಯಮಾದಿಗಳಿಂದ ನನ್ನನ್ನು ಆರಾಧನೆಮಾಡಿದ್ದೀಯೋ–ಅದು ಈಡೇರುವುದಕ್ಕೆ ನಾನು ಈ ಮೊದಲೇ ವ್ಯವಸ್ಥೆಯನ್ನು ಮಾಡಿದ್ದೇನೆ. ನನ್ನನ್ನು ಕುರಿತು ಮಾಡಿದ ಪೂಜೆಯು ಎಂದಿಗೂ ವಿಫಲವಾಗುವುದಿಲ್ಲ. ಪ್ರಜಾಪತಿಯೇ! ಏಕಾಂತಭಕ್ತಿಯಿಂದ ನನ್ನಲ್ಲಿ ನಿರಂತರವಾಗಿ ಸೇರಿಕೊಂಡಿರುವ ನಿನ್ನಂತಹ ಮಹಾತ್ಮರು ಮಾಡಿದ ಉಪಾಸನೆಗಾದರೋ ಅತ್ಯಧಿಕವಾದ ಫಲವು ಸಿಕ್ಕಿಯೇ ಸಿಕ್ಕುವುದು. ಪ್ರಸಿದ್ಧವಾದ * ಮಂಗಳಗುಣಶೀಲನಾಗಿ ಸದಾಚಾರಿಯಾಗಿರುವ ಬ್ರಹ್ಮದೇವರು ಸುಪುತ್ರನಾದ ಮನುಸಾರ್ವಭೌಮನು [1]ಬ್ರಹ್ಮಾವರ್ತದಲ್ಲಿದ್ದುಕೊಂಡು ಸಪ್ತಸಮುದ್ರಗಳಿಂದ ಕೂಡಿರುವ ಇಡೀ ಭೂಮಂಡಲವನ್ನು ಈಗ ಆಳುತ್ತಿದ್ದಾನೆ. ಎಲೈ ವಿಪ್ರಶ್ರೇಷ್ಠನೇ! ಆ ಪರಮಧರ್ಮಜ್ಞನಾದ

---

* ಮಂಗಳಂ = ನಿಷಿದ್ಧವಾದ ಕರ್ಮಗಳನ್ನು ತೊರೆದು ಪ್ರಶಸ್ತವಾದ ಕರ್ಮಗಳನ್ನು ಮಾಡುತ್ತಾ ನಡೆಸುವ ಸದಾಚಾರಕ್ಕೆ 'ಮಂಗಳ'–ಎಂದು ಹೆಸರು. ``ಪ್ರಶಸ್ತಾ ಚರಣಂ ಯಸ್ಮಾತ್ ಅಪ್ರಶಸ್ತಸ್ಯ ವರ್ಜನಮ್ । ಏತದ್ಧಿ ಮಙ್ಗಳಂ ಪ್ರೋಕ್ತಂ ಮುನಿಭಿಸ್ತತ್ತ್ವದರ್ಶಿಭಿಃ॥''

[1]ಬ್ರಹ್ಮಾವರ್ತ = ಸರಸ್ವತೀ ಮತ್ತು ದೃಷದ್ವತೀ–ಎಂಬ ಎರಡು ನದಿಗಳ ನಡುವೆ

ಮಹಾರಾಜನು ತನ್ನ ರಾಣಿಯಾದ ಶತರೂಪಾದೇವಿಯೊಡನೆ ನಾಳಿದ್ದು ಇಲ್ಲಿಗೆ ಬರುವನು. ಆತನಿಗೆ ರೂಪ, ಯೌವನ, ಗುಣ ಮತ್ತು ಶೀಲಗಳಿಂದ ಸಂಪನ್ನಳಾಗಿರುವ ಶ್ಯಾಮಲಲೋಚನೆಯಾದ ಕನ್ಯೆಯೊಬ್ಬಳಿದ್ದಾಳೆ. ವಿವಾಹಕ್ಕೆ ಯೋಗ್ಯವಾದ ಸ್ಥಿತಿಯಲ್ಲಿದ್ದು, ಪತಿಯನ್ನು ಹುಡುಕುತ್ತಿರುವ ಆಕೆಗೆ ನೀನೇ ಯೋಗ್ಯನಾದ ವರನಾಗಿದ್ದೀಯೆ. ಆಕೆಯನ್ನು ಆ ರಾಜನು ನಿನಗೇ ವಿವಾಹಮಾಡಿಕೊಡುವನು. ಬ್ರಾಹ್ಮಣೋತ್ತಮನೇ! ಕಳೆದ ಅನೇಕ ವರ್ಷಗಳಿಂದ ನಿನ್ನ ಮನಸ್ಸು ಎಂತಹ ಪತ್ನಿಯನ್ನು ಪಡೆಯಬೇಕಂಬುದರಲ್ಲಿ ನೆಲೆಗೊಂಡಿದೆಯೋ–ಅಂತಹ ಪತ್ನಿಯಾಗಿ ಆ ರಾಜಕುಮಾರಿಯು ಶೀಘ್ರ ವಾಗಿಯೇ ನಿನಗೆ ದೊರೆತು ಯಥೇಷ್ಟವಾಗಿ ನಿನ್ನ ಸೇವೆಯನ್ನು ಮಾಡು ವಳಪ್ಪಾ. ಆಕೆಯು ನಿನ್ನ ವೀರ್ಯವನ್ನು ತನ್ನ ಗರ್ಭದಲ್ಲಿ ಧರಿಸಿ ಅದರಿಂದ ಒಂಬತ್ತು ಮಂದಿ ಪುತ್ರಿಯರನ್ನು ಹಡೆಯುವಳು. ಅನಂತರ ಮರೀಚಿಗಳೇ ಮುಂತಾದ ಮಹಾತ್ಮರು ಅವರನ್ನು ವಿವಾಹಮಾಡಿಕೊಂಡು ಅವರಿಂದ ಸಂತಾನಗಳನ್ನು ಪಡೆಯುವರು. ನೀನೂ ಕೂಡ ನನ್ನ ಆಜ್ಞೆಯನ್ನು ಚೆನ್ನಾಗಿ ಪಾಲನೆಮಾಡುವುದರಿಂದ ಶುದ್ಧಚಿತ್ತನಾಗುವೆ. ನೀನು ಆಚರಿಸುವ ಸಮಸ್ತ ಕರ್ಮಗಳ ಫಲಗಳನ್ನೂ ನನಗೆ ಸಮರ್ಪಣೆಮಾಡಿ ನನ್ನನ್ನೇ ಹೊಂದುವೆ. ಸಮಸ್ತಜೀವಗಳಲ್ಲೂ ದಯೆಯನ್ನು ತೋರಿ, ಅವುಗಳಿಗೆ ಅಭಯದಾನ ಮಾಡಿ ಆತ್ಮಜ್ಞಾನವನ್ನು ಹೊಂದುವೆ. ನಿನ್ನೊಡಗೂಡಿದ ಇಡೀ ಜಗತ್ತನ್ನು ನನ್ನಲ್ಲಿಯೂ ಮತ್ತು ನನ್ನನ್ನು ನಿನ್ನಲ್ಲಿಯೂ ಇರುವಂತೆ ಕಾಣುವೆ.*

(ಶ್ಲೋಕ 22-31)

ಇರುವ ದೇವನಿರ್ಮಿತವಾದ ದೇಶ–"ಸರಸ್ವತೀದೃಷದ್ವತ್ಯೋ ರ್ದೇವನದ್ಯೋರ್ಯ ದನ್ತರಮ್ । ತಂ ದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ ॥"

(ಶ್ಲೋಕ ೨೫)

* ಬಿಂದುಸರೋವರವು ಕರ್ದಮಮಹರ್ಷಿಗಳು ತಪಸ್ಸುಮಾಡುತ್ತಿದ್ದ ಸ್ಥಾನ. ಚಿತ್ತಶುದ್ಧಿಯನ್ನು ಹೊಂದಿದ ನೀನು ನನ್ನೊಳಗೆ ಪ್ರವೇಶಿಸಿ, ನನ್ನಲ್ಲಿ ನಿನ್ನನ್ನೂ ಮತ್ತು ಜಗತ್ತನ್ನೂ ಏಕಕಾಲದಲ್ಲೇ ನೋಡುವೆ. ನಾನು ಧಾರಕನು ಮತ್ತು ನೀನು ಧಾರ್ಯನು– ಎಂಬುದನ್ನು ಅರಿಯುವೆ. (ವೀರರಾಘವೀಯ)

ನೀನೂ ಮತ್ತು ಜಗತ್ತೂ ನನ್ನಲ್ಲಿರುವುದೆಂದೂ ಮತ್ತು ನಾನು ನಿಮಗೆ ಆಧಾರ ನಾಗಿರುವೆನೆಂದೂ ನೀನು ಕಾಣುವೆ. (ಇಲ್ಲಿ ಭೇದಜ್ಞಾನವೇ ಪುರುಷಾರ್ಥಸಾಧನವೆಂದು ಸೂಚಿತವಾಗಿದೆ.) (ವಿಜಯಧ್ವಜೀಯ) (ಶ್ಲೋಕ ೩೧)

ಸಹಾಹಂ ಸ್ವಾಂಶಕಲಯಾ ತ್ವದ್ವೀರ್ಯೇಣ ಮಹಾಮುನೇ ।
ತವ ಕ್ಷೇತ್ರೇ ದೇವಹೂತ್ಯಾಂ ಪ್ರಣೇಷ್ಯೇ ತತ್ತ್ವಸಂಹಿತಾಮ್ ॥೩೨॥

ಅಷ್ಟೇ ಅಲ್ಲ, ಮಹಾಮುನಿಯೇ! ನಾನೇ ನನ್ನ ಅಂಶಕಲೆಯಿಂದ ನಿನ್ನ ವೀರ್ಯದ ಮೂಲಕ ನಿನ್ನ ಪತ್ನಿಯಾದ ದೇವಹೂತಿಯ ಗರ್ಭದಲ್ಲಿ ಅವತರಿಸಿ ಸಾಂಖ್ಯಶಾಸ್ತ್ರದ ಪ್ರವರ್ತಕನಾಗುವೆನು".

ಮೈತ್ರೇಯರು ಹೇಳುತ್ತಾರೆ :

ಸಾಧುಶ್ರೇಷ್ಠನಾದ ವಿದುರನೇ! ಕೇಳು. ಅಂತರ್ಮುಖವಾದ ಇಂದ್ರಿಯಗಳಿಗೆ ಗೋಚರನಾಗುವ ಶ್ರೀಹರಿಯು ಕರ್ದಮಮಹರ್ಷಿಯೊಡನೆ ಹೀಗೆ ಸಂಭಾಷಣೆಮಾಡಿ ಸರಸ್ವತೀನದಿಯಿಂದ ಸುತ್ತುವರಿಯಲ್ಪಟ್ಟಿರುವ ಬಿಂದುಸರೋವರದಿಂದ, ಮಹಾಮಹಿಮರಾದ ಕರ್ದಮರು ನೋಡುತ್ತಿರುವಂತೆಯೇ-ಗರುಡದೇವರನ್ನೇರಿ ಅವರ ರೆಕ್ಕೆಗಳಿಂದ ಬರುತ್ತಿದ್ದ ಸಾಮಗಾನವನ್ನೂ, ಸ್ತೋಮವೆಂಬ ಋಕ್ಕುಗಳ ಸ್ತುತಿಗಳನ್ನೂ ಕೇಳುತ್ತಾ ಜ್ಞಾನಸಿದ್ಧರಾದ ಮಹಾಯೋಗಿಗಳಿಂದ ಶ್ಲಾಘಿಸಲ್ಪಟ್ಟ ಸಿದ್ಧಮಾರ್ಗದಿಂದ ಸ್ವಧಾಮಕ್ಕೆ ತೆರಳಿದನು. ಭಗವಂತನು ಹಾಗೆ ತೆರಳಿದ ಬಳಿಕ ಪೂಜ್ಯರಾದ ಕರ್ದಮರು ಆತನು ಹೇಳಿದ್ದ ಕಾಲವನ್ನು ಎದುರುನೋಡುತ್ತಾ ಬಿಂದುಸರೋವರದ ಬಳಿಯೇ ಇದ್ದರು. ಇತ್ತಕಡೆಯಿಂದ ಸ್ವಾಯಂಭುವಮನುವು ಮಹಾರಾಣಿ ಶತರೂಪೆಯೊಡನೆ ಚಿನ್ನದ ಅಲಂಕಾರಗಳಿಂದ ಸಿಂಗರಿಸಲ್ಪಟ್ಟಿದ್ದ ರಥದಲ್ಲಿ ತನ್ನ ಮಗಳನ್ನು ಕುಳ್ಳಿರಿಸಿಕೊಂಡು ಭೂಮಿಯಲ್ಲಿ ಸಂಚಾರ ಮಾಡುತ್ತಾ ಶ್ರೀಭಗವಂತನು ಹೇಳಿದ್ದ ದಿವಸದಲ್ಲಿ ಶಾಂತವಾದ ವ್ರತನಿಷ್ಠೆಯನ್ನು ಹೊಂದಿದ್ದ ಮಹರ್ಷಿ ಕರ್ದಮರ ಆಶ್ರಮವನ್ನು ತಲುಪಿದನು.

(ಶ್ಲೋಕ 32-37)

ಯಸ್ಮಿನ್ಭಗವತೋ ನೇತ್ರಾನ್ನ್ಯಪತನ್ನಶ್ರುಬಿನ್ದವಃ ।
ಕೃಪಯಾ ಸಮ್ಪರೀತಸ್ಯ ಪ್ರಪನ್ನೇಽರ್ಪಿತಯಾ ಭೃಶಮ್ ॥೩೮॥

ಆ ಸ್ಥಾನಕ್ಕೆ 'ಬಿಂದುಸರೋವರ'-ಎಂದು ಹೆಸರು ಬರುವುದಕ್ಕೆ ಕಾರಣವೇನೆಂದರೆ : ಅಲ್ಲಿ ಶರಣಾಗತರಾಗಿದ್ದ ಭಕ್ತಶ್ರೇಷ್ಠರಾದ ಕರ್ದಮರ ವಿಷಯದಲ್ಲಿ ಪರಮಕರುಣೆತುಂಬಿದ ಭಗವಂತನ ಕಣ್ಣುಗಳಿಂದ ಕಣ್ಣೀರಿನ ಬಿಂದುಗಳು ಸುರಿದಿದ್ದುವು.

ಅದು ಅತ್ಯಂತ ಪವಿತ್ರವಾದ ತೀರ್ಥವು. ಅದರ ಜಲವು ಮಂಗಳ ಮಯವಾಗಿ ಅಮೃತದಂತೆ ಮಧುರವಾಗಿದೆ. ಮಹರ್ಷಿಗಣಗಳು ಅದನ್ನು ಸದಾ ಸೇವಿಸುತ್ತಿರುತ್ತಾರೆ. ಆ ಸರೋವರವು ಬಗೆ-ಬಗೆಯಾಗಿ ಶಬ್ದಮಾಡು ತ್ತಿದ್ದ ಪವಿತ್ರವಾದ ಮೃಗಗಳಿಂದಲೂ, ಪಕ್ಷಿಗಳಿಂದಲೂ ಕೂಡಿದ್ದ ಪುಣ್ಯ ವೃಕ್ಷಗಳಿಂದಲೂ, ಬಳ್ಳಿಗಳಿಂದಲೂ ಸುತ್ತುವರಿಯಲ್ಪಟ್ಟಿದ್ದಿತು. ಎಲ್ಲ ಋತು ಗಳಲ್ಲಿಯೂ ಬಿಡುವ ಹೂವು-ಹಣ್ಣುಗಳಿಂದ ಸಂಪನ್ನವಾಗಿ ಸುಂದರವಾದ ವನಶ್ರೇಣಿಯಿಂದ ಅಲಂಕೃತವಾಗಿದ್ದ ರಮಣೀಯವಾದ ಸ್ಥಾನವದು. ಅಲ್ಲಿ ಮದಿಸಿದ ಹಕ್ಕಿಗಳ ಹಿಂಡುಗಳು ಚಿಲಿ-ಪಿಲಿಗುಟ್ಟುತ್ತಿದ್ದುವು. ಮದಿಸಿದ ದುಂಬಿಗಳು ಝೇಂಕರಿಸುತ್ತಿದ್ದುವು. ಮದಿಸಿದ ನವಿಲುಗಳು ತಮ್ಮ ಗರಿ ಗಳನ್ನು ಕೆದರಿಕೊಂಡು ನಟನಂತೆ ಕುಣಿದಾಡುತ್ತಿದ್ದುವು. ಅಂತೆಯೇ ಮದಿಸಿದ ಕೋಗಿಲೆಗಳು 'ಕುಹೂ-ಕುಹೂ' ಎಂದು ಶಬ್ದಮಾಡುತ್ತಾ ಒಂದನ್ನೊಂದು ಕರೆಯುವಂತೆ ಕಾಣುತ್ತಿದ್ದುವು. ಆ ಆಶ್ರಮವು ಕದಂಬ, ಚಂಪಕ, ಅಶೋಕ, ಕರಂಜ (ಹೊಂಗೆ), ವಕುಳ (ಪಗಡೆ), ಆಸನ, ಕುಂದ (ಮಾಘಮೊಲ್ಲೆ), ಮಂದಾರ, ಕುಟಜ, ಚೂತ–ಮುಂತಾದ ವೃಕ್ಷಗಳಿಂದ ತುಂಬಿಕೊಂಡು ರಮಣೀಯವಾಗಿತ್ತು. ಹಾಗೆಯೇ ಅಲ್ಲಿ ಕಾರಂಡವ, ಪ್ಲವ, ಹಂಸ, ಕುರರ, ನೀರುಕೋಳಿ, ಸಾರಸ, ಚಕ್ರವಾಕ, ಚಕೋರ–ಮುಂತಾದ ಹಕ್ಕಿಗಳು ಇಂಪಾಗಿ ಕಲ-ಕಲಶಬ್ದಮಾಡುತ್ತಿದ್ದುವು. ಜಿಂಕೆ, ಹಂದಿ, ಶಲ್ಯಕ, ಗವಯ, ಗಜ, ಗೋಪುಚ್ಛ, ಸಿಂಹ, ವಾನರ, ಮುಂಗುಸಿ, ಕಸ್ತೂರಿ ಮೃಗಗಳೇ ಮುಂತಾದ ವನ್ಯಮೃಗಗಳೂ ಅಲ್ಲಿ ನೆರೆದಿದ್ದುವು. ಅಂತಹ ಆಶ್ರಮಕ್ಕೆ ಮಹಾರಾಜ ಸ್ವಾಯಂಭುವಮನುವು ದಯಮಾಡಿಸಿದನು. ಆದಿರಾಜನಾದ ಮನುಸಾರ್ವಭೌಮನು ತನ್ನ ಕನ್ಯೆಯೊಡನೆ ಆ ತೀರ್ಥ ವನ್ನು ತಲುಪಿದಾಗ ಕರ್ದಮಮುನಿಗಳು ಅಗ್ನಿಹೋತ್ರವನ್ನು ಮುಗಿಸಿಕೊಂಡು ಸುಖಾಸೀನರಾಗಿದ್ದುದನ್ನು ಕಂಡನು. ಬಹಳ ದಿವಸಗಳ ಕಾಲ ಉಗ್ರವಾದ ತಪಸ್ಸನ್ನು ಆಚರಿಸಿದ್ದರಿಂದ ಅವರ ಶರೀರವು ಮಹಾತೇಜಸ್ಸಿನಿಂದ ತೊಳ-ತೊಳಗಿ ಬೆಳಗುತ್ತಿತ್ತು. ದೀರ್ಘಕಾಲ ತಪಸ್ಸು ಮಾಡಿದ್ದರೂ ಅವರ ಶರೀರವು ತುಂಬಾ ಕೃಶವಾಗಿ ಕಾಣುತ್ತಿರಲಿಲ್ಲ. ಏಕೆಂದರೆ : ಭಗವಂತನ ಸ್ನೇಹಪೂರ್ಣವಾದ ದೃಷ್ಟಿಯಿಂದಲೂ ಮತ್ತು

ಕರ್ಣಾಮೃತವಾದ ವಚನಗಳಿಂದಲೂ ಅದಕ್ಕೆ ಅನುಗ್ರಹವಾಗಿತ್ತು. ಅವರ ದೇಹವು ನೀಳವಾಗಿತ್ತು. ಕಣ್ಣುಗಳು ಕಮಲದ ದಳದಂತೆ ಕಮನೀಯವಾಗಿದ್ದುವು. ತಲೆಯಲ್ಲಿ ಜಟಾಜೂಟಗಳೂ, ನಡುವಿನಲ್ಲಿ ನಾರುಮಡಿಯೂ ಶೋಭಾಯಮಾನವಾಗಿದ್ದುವು. ಹತ್ತಿರದಲ್ಲಿ ಹೋಗಿ ನೋಡಿದಾಗ ಅವರು ಸಾಣೆಗೆ ಹಾಕದೇ ಇರುವ ಅಮೂಲ್ಯವಾದ ರತ್ನದಂತೆ ಮಲಿನರಾಗಿ ಕಾಣುತ್ತಿದ್ದರು. ಸ್ವಾಯಂಭುವಮನುವು ತಮ್ಮ ಗುಡಿಸಿಲಿಗೆ ಬಂದು ತಮಗೆ ನಮಸ್ಕಾರಮಾಡಿದುದನ್ನು ಕಂಡು ಅವರು ಆತನನ್ನು ಆಶೀರ್ವಾದದಿಂದ ಸಂತೋಷಗೊಳಿಸಿ ಯಥೋಚಿತವಾದ ಆತಿಥ್ಯದಿಂದ ಸತ್ಕರಿಸಿದರು.

(ಶ್ಲೋಕ ೩೮-೪೮)

ಮನುವು ಅವರ ಸತ್ಕಾರವನ್ನು ಸ್ವೀಕರಿಸಿ, ಶಾಂತವಾದ ಮನಸ್ಸಿನಿಂದ ಆಸನದಲ್ಲಿ ಸುಖವಾಗಿ ಕುಳಿತುಕೊಳ್ಳಲು–ಮುನಿವರ್ಯರು ಭಗವಂತನ ಆಜ್ಞೆಯನ್ನು ಸ್ಮರಿಸಿಕೊಂಡು ಆತನನ್ನು ಮಧುರವಾದ ವಾಣಿಯಿಂದ ಸಂತೋಷಪಡಿಸುತ್ತಾ ಹೀಗೆಂದರು :

“ದೇವ! ಪೂಜ್ಯನಾದ ನೀನು ಭಗವಂತನಾದ ಮಹಾವಿಷ್ಣುವಿನ ಪಾಲನಶಕ್ತಿರೂಪನು. ಆದ್ದರಿಂದ ನಿನ್ನ ಸಂಚಾರದ ಉದ್ದೇಶ ನಿಸ್ಸಂಶಯವಾಗಿಯೂ ಸಜ್ಜನರ ರಕ್ಷಣೆ ಮತ್ತು ದುಷ್ಟರ ಸಂಹಾರವೇ ಆಗಿರಬೇಕು. ನೀನು ಸಾಕ್ಷಾತ್ತಾಗಿ ಪರಿಶುದ್ಧವಾದ ವಿಷ್ಣುರೂಪಿಯೇ ಆಗಿದ್ದು, ಬೇರೆ-ಬೇರೆ ಕರ್ಮಗಳಿಗೋಸ್ಕರ ಸೂರ್ಯ, ಚಂದ್ರ, ಅಗ್ನಿ, ಇಂದ್ರ, ವಾಯು, ಯಮ, ಧರ್ಮ ಮತ್ತು ವರುಣರೇ–ಮುಂತಾದ ರೂಪಗಳನ್ನೂ ಧರಿಸುವೆ. ಇಂತಹ ನಿನಗೆ ನಮಸ್ಕಾರವು. ನೀನು ರತ್ನಘಟಿತವಾದ ವಿಜಯರಥದಲ್ಲಿ ಕುಳಿತು ಪ್ರಚಂಡವಾದ ಧನುಸ್ಸನ್ನು ಟಂಕಾರಮಾಡುತ್ತಾ ರಥದ ಘುರ್ಘರಧ್ವನಿಯಿಂದಲೇ ಪಾಪಿಗಳು ಭಯಗ್ರಸ್ತರಾಗುವಂತೆ ಮಾಡುವೆ. ಸೈನ್ಯದ ಪಾದಗಳಿಂದ ತುಳಿಯಲ್ಪಟ್ಟ ಭೂಮಿಯನ್ನು ನಡುಗಿಸುತ್ತಾ ವಿಶಾಲವಾದ ಸೇನೆಯೊಡನೆ ಭೂಮಿಯ ಮೇಲೆ ಸೂರ್ಯನಂತೆ ಸಂಚರಿಸುವೆ. ನೀನೇನಾದರೂ ಹೀಗೆ ಮಾಡದೇ ಇದ್ದರೆ ದಸ್ಯುಗಳು, ಭಗವಂತನು ಮಾಡಿರುವ ವರ್ಣಾಶ್ರಮಧರ್ಮಗಳ ಮರ್ಯಾದೆಯನ್ನು ಒಡನೆಯೇ ಧ್ವಂಸ ಮಾಡಿಬಿಡುವರು ಮತ್ತು ವಿಷಯಾಸಕ್ತರಾದ ಮನುಷ್ಯರು ಅಡೆ-ತಡೆ

ಗಳಿಲ್ಲದೇ ಎಲ್ಲೆಲ್ಲಿಯೂ ಅಧರ್ಮವನ್ನು ಹರಡಿಬಿಡುವರು. ನೀನೇನಾದರೂ ಲೋಕದ ಕಡೆಗೆ ಗಮನಕೊಡದೇ ನಿಶ್ಚಿಂತನಾಗಿದ್ದೆಯೆಂದರೆ–ಈ ಲೋಕವು ದುರಾಚಾರಿಗಳ ತೆಕ್ಕೆಯಲ್ಲಿ ಸಿಕ್ಕಿ ನಾಶವಾಗಿಬಿಡುವುದು. ಎಲೈ ಮಹಾ ವೀರನೇ! ಇಷ್ಟೆಲ್ಲಾ ಇದ್ದರೂ ನಾನು ನಿನ್ನನ್ನು–'ನೀನು ಇಲ್ಲಿಗೆ ಬಂದಿರುವುದು ಏತಕ್ಕೆ?'–ಎಂದು ಕೇಳುತ್ತೇನೆ. ನೀನು ಯಾವುದೇ ಅಪ್ಪಣೆ ಮಾಡಿದರು ಅದನ್ನು ನಾನು ನಿಷ್ಕಪಟಭಾವದಿಂದ ಸಂತೋಷವಾಗಿ ಸ್ವೀಕರಿಸುವೆನು."

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೨೧ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೨೨ನೆಯ ಅಧ್ಯಾಯ

ದೇವಹೂತಿ-ಕರ್ದಮರ ವಿವಾಹಮಂಗಳ

ಮೈತ್ರೇಯರು ಹೇಳುತ್ತಾರೆ :

ಏವಮಾವಿಷ್ಕೃತಾಶೇಷಗುಣಕರ್ಮೋದಯೋ ಮುನಿಮ್ ।
ಸವ್ರೀಡ ಇವ ತಂ ಸಮ್ರಾಡುಪಾರತಮುವಾಚ ಹ ॥೧॥

ಹೀಗೆ ಕರ್ದಮರು ತನ್ನ ಸಮಸ್ತಗುಣ-ಕರ್ಮಗಳ ಅಗ್ಗಳಿಕೆಯನ್ನು ಎತ್ತಿ ಹೇಳಿ ಸ್ತುತಿಸಲು ಮನುಸಾರ್ವಭೌಮನಿಗೆ ಸಂಕೋಚವಾಯಿತು. ಆ ಮಹಾತ್ಮನು ಅದರಿಂದ ನಾಚಿಕೆಗೊಂಡವನಂತಾಗಿ ಮುನಿಕರ್ದಮರನ್ನು ಕುರಿತು ಹೀಗೆಂದನು :

"ಎಲೈ ಮುನಿಗಳೇ! ವೇದಮೂರ್ತಿಗಳಾದ ಬ್ರಹ್ಮದೇವರು ತಮ್ಮ ವೇದಮಯವಾದ ದಿವ್ಯವಿಗ್ರಹದ ರಕ್ಷಣೆಗಾಗಿ ತಪಸ್ಸು, ವಿದ್ಯೆ ಮತ್ತು ಯೋಗಗಳಿಂದ ಸಂಪನ್ನರಾಗಿ ವಿಷಯಪಟತೆಯಿಲ್ಲದ ಬ್ರಾಹ್ಮಣರಾದ ನಿಮ್ಮನ್ನು ಪ್ರಕಟಪಡಿಸಿದ್ದು ತಮ್ಮ ಬಾಯಿಂದ. ಅನಂತರ ಆ ಸಹಸ್ರ ಪಾದನಾದ ವಿರಾಟ್ಪುರುಷನು ನಿಮ್ಮ ರಕ್ಷಣೆಗೋಸ್ಕರವೇ ತನ್ನ ಸಾವಿರ ಭುಜಗಳಿಂದ ಕ್ಷತ್ರಿಯರಾದ ನಮ್ಮನ್ನು ಸೃಷ್ಟಿಮಾಡಿದನು. ಹೀಗೆ ಆತನಿಗೆ ಬ್ರಾಹ್ಮಣರು ಹೃದಯವೆಂದೂ, ಕ್ಷತ್ರಿಯಲೂ ಶರೀರವೆಂದೂ ಕರೆಯಲ್ಪಡು

ತ್ತಾರೆ. ಹೀಗೆ ಒಂದೇ ಶರೀರಕ್ಕೆ ಸಂಬಂಧಪಟ್ಟಿರುವುದರಿಂದ ಬ್ರಾಹ್ಮಣರೂ ಮತ್ತು ಕ್ಷತ್ರಿಯರೂ ತಮ್ಮನ್ನೂ, ಹಾಗೆಯೇ ತಮ್ಮಲ್ಲಿ ಒಬ್ಬರು ಮತ್ತೊಬ್ಬರನ್ನೂ ಸಂರಕ್ಷಿಸುತ್ತಿದ್ದಾರೆ. ಆದರೆ ವಾಸ್ತವವಾಗಿ ಇಬ್ಬರನ್ನೂ ಆ ಶ್ರೀಹರಿಯೇ ಸಂರಕ್ಷಿಸುತ್ತಿದ್ದಾನೆ. ಸಮಸ್ತಕಾರಣರೂಪನಾಗಿದ್ದರೂ ವಾಸ್ತವವಾಗಿ ಯಾವ ವಿಕಾರವೇ ಇಲ್ಲದವನು ಆ ಪರಮಾತ್ಮ. ತಮ್ಮ ದರ್ಶನಮಾತ್ರದಿಂದಲೇ ನನ್ನ ಸಮಸ್ತಸಂಶಯಗಳೂ ದೂರವಾದುವು. ಏಕೆಂದರೆ : ತಾವು ನನ್ನನ್ನು ಪ್ರಶಂಸೆಮಾಡುವ ನೆಪದಲ್ಲಿ ಪ್ರಜಾಪಾಲನೆ ಯನ್ನು ಮಾಡುವ ಇಚ್ಛೆಯುಳ್ಳ ರಾಜನ ಧರ್ಮವೇನೆಂಬುದನ್ನೇ ಪರಮ ಪ್ರೇಮದಿಂದ ನಿರೂಪಣೆಮಾಡಿದ್ದೀರಿ. ಜೀತೇಂದ್ರಿಯರಲ್ಲವರಿಗೆ ತಮ್ಮ ದರ್ಶನವು ದೊರಕುವುದೇ ಕಷ್ಟ. ಇಂತಹ ತಮ್ಮ ದರ್ಶನವನ್ನು ಪಡೆದು ತಮ್ಮ ಚರಣಗಳ ಮಂಗಳಮಯವಾದ ಧೂಳಿಯನ್ನು ತಲೆಯಲ್ಲಿ ಧರಿಸಿ ಕೊಳ್ಳುವ ಯೋಗವನ್ನೂ ಪಡೆದ ನಾನು ಎಂತಹ ಭಾಗ್ಯಶಾಲಿ! ನನಗೆ ತಾವು ರಾಜಧರ್ಮಗಳ ಬಗೆಗೆ ತಿಳಿವಳಿಕೆಯನ್ನು ನೀಡಿ ದೊಡ್ಡ ಅನುಗ್ರಹ ಮಾಡಿದಿರಿ. ಇದು ನನ್ನ ಭಾಗ್ಯೋದಯವೇ ಸರಿ. ತಮ್ಮ ಪವಿತ್ರವಾದ ವಾಣಿಯನ್ನು ನಾನು ಕಿವಿದೆರೆದು ಕೇಳಿರುವುದಕ್ಕೂ ನನ್ನ ಪ್ರಾರಬ್ಧ ಶುಭಕರ್ಮಗಳೇ ಕಾರಣ. (ಶ್ಲೋಕ 1-7)

ಮುನಿಗಳೇ! ಈ ಕನ್ಯೆಯ ಮೇಲಿನ ಪ್ರೇಮದಿಂದ ನನ್ನ ಮನಸ್ಸು ತುಂಬಾ ಚಿಂತಾಕುಲವಾಗಿದೆ. ಆದುದರಿಂದ ದೀನನಾದ ನನ್ನ ಈ ಪ್ರಾರ್ಥನೆ ಯನ್ನು ತಾವು ಕೃಪಾಪೂರ್ವಕವಾಗಿ ಕೇಳಬೇಕು. ಪ್ರಿಯವ್ರತ ಮತ್ತು ಉತ್ತಾನಪಾದ–ಇವರ ಸೋದರಿಯಾಗಿರುವ ಈ ನನ್ನ ಮಗಳು–ವಯಸ್ಸು, ಶೀಲ ಮತ್ತು ಗುಣಗಳಿಂದ ತನಗೆ ಅನುರೂಪನಾದ ಪತಿಯನ್ನು ಪಡೆಯಲು ಬಯಸುತ್ತಿದ್ದಾಳೆ. ಈಕೆಯು ನಾರದಮಹರ್ಷಿಗಳ ಬಾಯಿಂದ ತಮ್ಮ ಶೀಲ, ವಿದ್ಯೆ, ರೂಪ, ಆಯುಸ್ಸು ಮತ್ತು ಗುಣಗಳ ವರ್ಣನೆಯನ್ನು ಕೇಳಿ, ಅಂದಿನಿಂದಲೇ ತಮ್ಮನ್ನು ತನ್ನ ಪತಿಯನ್ನಾಗಿ ಮಾಡಿಕೊಳ್ಳಲು ನಿಶ್ಚಯಿಸಿ ಬಿಟ್ಟಿದ್ದಾಳೆ. ಬ್ರಾಹ್ಮಣಶ್ರೇಷ್ಠರೇ! ನಾನು ಅತ್ಯಂತಶ್ರದ್ಧೆಯಿಂದ ಈ ಕನ್ಯೆ ಯನ್ನು ತಮಗೆ ಸಮರ್ಪಣೆಮಾಡುತ್ತಿದ್ದೇನೆ. ತಾವು ಈಕೆಯನ್ನು ಸ್ವೀಕರಿಸ

ಬೇಕು. ಈಕೆಯು ಗೃಹಸ್ಥರಿಗೆ ಯೋಗ್ಯವಾದ ಕಾರ್ಯಗಳಲ್ಲಿ ಎಲ್ಲ ರೀತಿಗಳಲ್ಲಿಯೂ ತಮಗೆ ಯೋಗ್ಯಳಾಗಿದ್ದಾಳೆ.

ಉದ್ಯತಸ್ಯ ಹಿ ಕಾಮಸ್ಯ ಪ್ರತಿವಾದೋ ನ ಶಸ್ಯತೇ ।
ಅಪಿ ನಿರ್ಮುಕ್ತಸಙ್ಗಸ್ಯ ಕಾಮರಕ್ತಸ್ಯ ಕಿಂ ಪುನಃ ॥೧೨॥

ತಾನಾಗಿಯೇ ಬಂದೊದಗಿದ ಭೋಗವನ್ನು ತಿರಸ್ಕಾರಮಾಡುವುದು ವಿರಕ್ತನಿಗೂ ಉಚಿತವಲ್ಲ. ಹಾಗೆಂದ ಮೇಲೆ ವಿಷಯಾಸಕ್ತನಾದವನ ವಿಷಯದಲ್ಲಿ ಹೇಳತಕ್ಕದ್ದೇನಿದೆ?

ಯ ಉದ್ಯತಮನಾದೃತ್ಯ ಕೀನಾಶಮಭಿಯಾಚತೇ ।
ಕ್ಷೀಯತೇ ತದ್ಯಶಃ ಸ್ಫೀತಂ ಮಾನಶ್ಚಾವಜ್ಞಯಾ ಹತಃ ॥೧೩॥

ಯಾವನು ತಾನಾಗಿಯೇ ಒದಗಿಬಂದ ಭೋಗವನ್ನು ಕಡೆಗಣಿಸಿ ಅನಂತರ ಬೇರೆ ಯಾವನೋ ಕೃಪಣನ ಮುಂದೆ ಕೈಚಾಚುತ್ತಾನೆಯೋ– ಆತನು ಅಪಕೀರ್ತಿಗೆ ಒಳಗಾಗುವನು. ವಿಸ್ತಾರವಾಗಿ ಹರಡಿರುವ ಆತನ ಕೀರ್ತಿಯೂ ನಾಶಹೊಂದುವುದು ಮತ್ತು ಮತ್ತೊಬ್ಬರ ತಿರಸ್ಕಾರದಿಂದ ಆತನಿಗೆ ಮಾನಭಂಗವೂ ಆಗುವುದು.

ಅಹಂ ತ್ವಾಶೃಣವಂ ವಿದ್ವನ್ವಿವಾಹಾರ್ಥಂ ಸಮುದ್ಯತಮ್ ।
ಅತಸ್ತ್ವಮುಪಕುರ್ವಾಣಃ ಪ್ರತ್ತಾಂ ಪ್ರತಿಗೃಹಾಣ ಮೇ* ॥೧೪॥

ಜ್ಞಾನಿಶ್ರೇಷ್ಠರೇ! ತಾವು ವಿವಾಹಮಾಡಿಕೊಳ್ಳಲು ಸಿದ್ಧವಾಗಿದ್ದೀರೆಂದು ನಾನು ಕೇಳಿದ್ದೇನೆ. ತಮ್ಮ ಬ್ರಹ್ಮಚರ್ಯಕ್ಕೆ ಒಂದು ಎಲ್ಲೆಯುಂಟು. ತಾವು ನೈಷ್ಠಿಕಬ್ರಹ್ಮಚಾರಿಗಳೇನೂ ಅಲ್ಲವಷ್ಟೇ! ಆದ್ದರಿಂದ ತಾವು ಈ ಕನ್ಯೆಯನ್ನು ಸ್ವೀಕಾರಮಾಡಿರಿ. ನಾನು ಈಕೆಯನ್ನು ತಮಗೆ ಸಮರ್ಪಿಸುತ್ತಿದ್ದೇನೆ."

---

* 'ಉಪಕುರ್ವಾಣ' ಎಂದರೆ : ವೇದಾಧ್ಯಯನಮಾಡಿ ವಿವಾಹಮಾಡಿಕೊಳ್ಳುವುದಕ್ಕೆ ಆಚಾರ್ಯನಿಂದ ಅಪ್ಪಣೆಪಡೆದುಕೊಂಡು ಬಂದಿರುವ ಬ್ರಹ್ಮಚಾರಿ. "ವೇದಾ ನಧೀತ್ಯ ಯೋ ವರ್ಣೀ ವಿವಾಹಾರ್ಥಂ ಗುರೋಃ ಕುಲಾತ್ । ಕೃತಾನುಜ್ಞೋ ನಿವರ್ತೇತ ಉಪಕುರ್ವಾಣ ಉಚ್ಯತೇ ॥" (ಶ್ಲೋಕ ೧೪)

ಹೀಗೆ ಪ್ರಾರ್ಥನೆಮಾಡಿದ ಮನುಸಾರ್ವಭೌಮನಿಗೆ ಕರ್ದಮರು ಹೀಗೆಂದರು :

"ಮಹಾರಾಜ! ನೀನು ಹೇಳಿದ್ದು ಸರಿಯಾಗಿದೆ. ನಾನು ವಿವಾಹ ಮಾಡಿಕೊಳ್ಳಲು ಬಯಸುತ್ತಿದ್ದೇನೆ. ನೀನು ನಿನ್ನ ಕನ್ಯೆಯನ್ನು ಬೇರೆ ಯಾರಿಗೂ ವಾಗ್ದಾನಮಾಡಿಲ್ಲ. ಆದ್ದರಿಂದ ನಿನ್ನ ಈ ಕನ್ಯೆಗೂ ಮತ್ತು ನನಗೂ–ವಿವಾಹವು*–ವಿವಾಹಗಳಲ್ಲಿ ಸರ್ವಶ್ರೇಷ್ಠವಾದ ಬ್ರಾಹ್ಮವಿಧಿ ಯಿಂದಲೇ–ನಡೆಯುವುದು ಉಚಿತವೇ ಆಗಿದೆ. ಎಲೈ ರಾಜನೇ! ವೇದ ಗಳಲ್ಲಿ ಹೇಳಿರುವ ವಿವಾಹವಿಧಿಯಲ್ಲಿ **'ಗೃಭ್ಣಾಮಿ ತೇ ಸುಪ್ರಜಾಸ್ತ್ವಾಯ'**– 'ಒಳ್ಳೆಯ ಸಂತಾನವನ್ನು ಪಡೆಯುವುದಕ್ಕಾಗಿ ನಿನ್ನ ಕೈಯನ್ನು ಹಿಡಿದುಕೊಳ್ಳು ತ್ತೇನೆ'–ಎಂಬ ಇವೇ ಮುಂತಾದ ಮಂತ್ರಗಳಲ್ಲಿ ಶ್ರೇಷ್ಠವಾದ ಸಂತಾನ ಕಾಮನೆಯನ್ನು ಹೇಳಿದೆಯಲ್ಲವೇ? ನಿನ್ನ ಈ ಕನ್ಯೆಯ ಜೊತೆಯಲ್ಲಿ ನಾನು ಸಂಬಂಧಬೆಳೆಸಿದರೆ ಆ ಕಾಮವು ಸಫಲವಾಗುವುದು. ನಿನ್ನ ಈ ಕನ್ಯಾ ಮಣಿಯು ತನ್ನ ಶರೀರದ ಕಾಂತಿಯಿಂದ ಅಲಂಕಾರದ ಆಭರಣಗಳ ಕಾಂತಿ ಯನ್ನು ನಾಚಿಸುವಂತಿದ್ದಾಳೆ. ಇಂತಹವಳನ್ನು ಯಾವನು ತಾನೇ ಆದರಿಸು ವುದಿಲ್ಲ? ಈಕೆಯು ಒಮ್ಮೆ ತನ್ನ ಅರಮನೆಯ ಮೇಲ್ಮಾಡದಲ್ಲಿ ಚೆಂಡಾಟ ವನ್ನು ಆಡುತ್ತಿದ್ದಳು. ಚೆಂಡನ್ನು ಅನುಸರಿಸಿ ಅಲ್ಲಲ್ಲಿ ಓಡುತ್ತಿದ್ದುದರಿಂದ ಆಕೆಯ ಕಣ್ಣುಗಳು ಚಂಚಲವಾಗಿದ್ದುವು. ಕಾಲಿನ ಬಳೆಗಳು ಮಧುರವಾಗಿ ಝಣ-ಝಣ ಶಬ್ದಮಾಡುತ್ತಿದ್ದುವು. ಆಗ ಈಕೆಯನ್ನು ಕಂಡು ಮೋಹಪರ ವಶನಾದ ವಿಶ್ವಾವಸುಗಂಧರ್ವನು ಪ್ರಜ್ಞೆಯಿಲ್ಲದೇ ವಿಮಾನದಿಂದ ಕೆಳಗೆ ಉರುಳಿದನಲ್ಲವೇ? ಅಂತಹ ಸೌಂದರ್ಯರಾಶಿಯಾದ ಈಕೆಯು ತಾನಾ ಗಿಯೇ ಬಂದು ಪ್ರಾರ್ಥನೆಮಾಡುತ್ತಿರುವಾಗ ಯಾವ ವಿವೇಕಿಯು ತಾನೇ ಈಕೆಯನ್ನು ಸ್ವೀಕರಿಸದೇ ಹೋದಾನು? ಈಕೆಯು ಸಾರ್ವಭೌಮನಾದ ಸ್ವಾಯಂಭುವಮನುವಿನ ಕಣ್ಮಣಿಯಾದ ಸುಪುತ್ರಿಯು. ಉತ್ತಾನಪಾದ

---

* ಮನುಸ್ಮೃತಿಯಲ್ಲಿ ಎಂಟು ಬಗೆಯ ವಿವಾಹಗಳನ್ನು ಉಲ್ಲೇಖಿಸಿದೆ : ೧) ಬ್ರಾಹ್ಮ ೨) ದೈವ ೩) ಆರ್ಷ ೪) ಪ್ರಾಜಾಪತ್ಯ ೫) ಆಸುರ ೬) ಗಾಂಧರ್ವ ೭) ರಾಕ್ಷಸ ೮) ಪೈಶಾಚ ಇವುಗಳಲ್ಲಿ ಮೊದಲನೆಯದಾದ 'ಬ್ರಾಹ್ಮ' ವಿವಾಹವು ಶ್ರೇಷ್ಠತಮ ಎನ್ನಿಸುತ್ತದೆ. ಇದರಲ್ಲಿ ತಂದೆಯೇ ಯೋಗ್ಯನಾದ ವರನನ್ನು ಆರಿಸಿ ಆತನಿಗೆ ತನ್ನ ಕನ್ಯೆಯನ್ನು ದಾನಮಾಡುತ್ತಾನೆ.

(ಶ್ಲೋಕ ೧೫)

ರಾಜನ ಪ್ರೀತಿಯಸೋದರಿ ಮತ್ತು ರಮಣೀರತ್ನವು. ಶ್ರೀಲಕ್ಷ್ಮೀದೇವಿಯ ಶ್ರೀಚರಣಗಳನ್ನು ಯಾರು ಉಪಾಸನೆ ಮಾಡುವುದಿಲ್ಲವೋ–ಅಂತಹವರಿಗೆ ಈಕೆಯ ದರ್ಶನವೂ ಆಗಲಾರದು. ಆದ್ದರಿಂದ ನಾನು ನಿನ್ನ ಈ ಸಾಧ್ವಿಯಾದ ಕನ್ಯೆಯನ್ನು ಅವಶ್ಯವಾಗಿ ಸ್ವೀಕರಿಸುವೆನು. ಆದರೆ ಒಂದು ನಿಬಂಧನೆ ಯುಂಟು. ಈಕೆಯು ಸಂತಾನವನ್ನು ಎಲ್ಲಿಯವರೆಗೆ ಪಡೆಯುವುದಿಲ್ಲವೋ– ಅಲ್ಲಿಯವರೆಗೆ ಮಾತ್ರ (ಈಕೆಯಲ್ಲಿ ಸಂತಾನೋತ್ಪತ್ತಿಯಾಗುವವರೆಗೂ) ನಾನು ಗೃಹಸ್ಥಧರ್ಮಾನುಸಾರವಾಗಿ ಈಕೆಯ ಜೊತೆಯಲ್ಲಿರುವೆನು. ಅನಂತರ ಶ್ರೀಭಗವಂತನು ಹೇಳಿರುವ ಸಂನ್ಯಾಸಪ್ರಧಾನವಾದ, ಹಿಂಸಾರಹಿತವಾದ ಶಮ-ದಮಾದಿ ಧರ್ಮಗಳಿಗೇ ಪ್ರಾಶಸ್ತ್ಯನೀಡುವೆನು. ಈ ವಿಚಿತ್ರವಾದ ಜಗತ್ತಿನ ಉತ್ಪತ್ತಿಗೆ ಯಾವನು ಕಾರಣನಾಗಿದ್ದಾನೆಯೋ, ಯಾವನಲ್ಲಿ ಜಗತ್ತು ಲಯಹೊಂದುವುದೋ ಮತ್ತು ಯಾವನ ಆಸರೆಯಲ್ಲಿ ಇದು ನಡೆಯುತ್ತಿದೆಯೋ–ಅಂತಹ ಪ್ರಜಾಪತಿಗಳಿಗೂ ಪತಿಯಾಗಿರುವ ಭಗವಂತನಾದ ಶ್ರೀಅನಂತನೇ ನನಗೆ ಅತ್ಯಂತ ಅಧಿಕವಾಗಿ ಮಾನ್ಯನಾಗಿ ದ್ದಾನೆ.” (ಶ್ಲೋಕ 8-20)

ಮೈತ್ರೇಯರು ಹೇಳುತ್ತಾರೆ :

ಪ್ರಚಂಡಧನುರ್ಧಾರಿಯಾದ ಓ ವಿದುರನೇ! ಕರ್ದಮರು ಇಷ್ಟನ್ನು ಮಾತ್ರ ಹೇಳಿ ಹೃದಯದಲ್ಲಿ ಭಗವಂತನಾದ ಪದ್ಮನಾಭನನ್ನು ಧ್ಯಾನಿಸುತ್ತಾ ಮೌನವಾಗಿಬಿಟ್ಟರು. ಆ ಸಮಯದಲ್ಲಿ ಅವರ ಮಂದಹಾಸಯುಕ್ತವಾದ ಮುಖಕಮಲವನ್ನು ನೋಡಿ ದೇವಹೂತಿಯ ಮನಸ್ಸು ಅವರಲ್ಲಿ ನೆಲೆ ಗೊಂಡುಬಿಟ್ಟಿತು. ಈ ಸಂಬಂಧಮಾಡುವ ವಿಷಯದಲ್ಲಿ ಮಹಾರಾಣಿ ಶತರೂಪೆಯ ಮತ್ತು ದೇವಹೂತಿಯ ಸ್ಪಷ್ಟವಾದ ಅನುಮತಿಯಿದೆಯೆಂಬು ದನ್ನು ಮನುವು ಗಮನಿಸಿದನು. ಆದ್ದರಿಂದ ಆತನು ಅನೇಕಕಲ್ಯಾಣ ಗುಣಗಳಿಂದ ಸಂಪನ್ನರಾದ ಕರ್ದಮರಿಗೆ, ಅವರಷ್ಟೇ ಗುಣಸಂಪನ್ನೆಯಾದ ತನ್ನ ಕನ್ಯೆಯನ್ನು ಪ್ರಸನ್ನತೆಯಿಂದ ದಾನಮಾಡಿದನು. ಮಹಾರಾಣಿ ಶತರೂಪೆಯೂ ಕೂಡ ಮಗಳಿಗೂ–ಅಳಿಯನಿಗೂ ಅತ್ಯಂತಪ್ರೇಮದಿಂದ ಬಹುಮೂಲ್ಯವಾದ ಅನೇಕವಸ್ತ್ರಗಳನ್ನೂ, ಒಡವೆಗಳನ್ನೂ ಮತ್ತು ಗೃಹಸ್ಥ

ಜೀವನಕ್ಕೆ ಬೇಕಾದ ಪಾತ್ರೆ–ಮುಂತಾದುವುಗಳನ್ನೂ ಬಳುವಳಿಯನ್ನಾಗಿ ಕೊಟ್ಟಳು. ಹೀಗೆ ಸುಯೋಗ್ಯನಾದ ವರನಿಗೆ ಕನ್ಯೆಯನ್ನು ಕೊಟ್ಟು ಮನು ಸಾರ್ವಭೌಮನು ನಿಶ್ಚಿಂತನಾದನು. ಅಲ್ಲಿಂದ ಹೊರಡುವ ಸಮಯದಲ್ಲಿ ಮಗಳ ಅಗಲಿಕೆಯನ್ನು ಸಹಿಸಲಾರದೇ ದುಃಖದಿಂದ ಆಕೆಯನ್ನು ಎದೆಗೆ ಅಪ್ಪಿಕೊಂಡು–'ಮಗಳೇ! ವತ್ಸೇ!'–ಎಂದು ಹೇಳಿ ರೋದಿಸತೊಡಗಿದನು. ಕಣ್ಣುಗಳಿಂದ ಹರಿದು ಬರುತ್ತಿದ್ದ ಕಣ್ಣೀರಿನ ಪ್ರವಾಹದಿಂದ ಆತನು ದೇವಹೂತಿಯ ತಲೆಯ ಕೂದಲುಗಳನ್ನು ನೆನೆಸಿಬಿಟ್ಟನು. ಅನಂತರ ಮನುವು ಮುನಿವರ್ಯರಾದ ಕರ್ದಮರಿಗೆ ಹೋಗಿಬರುವೆನೆಂದು ಹೇಳಿ ಅವರ ಅನುಮತಿಯನ್ನು ಪಡೆದು ಮಹಾರಾಣಿಯೊಡನೆ ರಥದಲ್ಲಿ ಕುಳಿತು ತನ್ನ ಸೇವಕರೊಡನೆ ಋಷಿಗಣಗಳಿಂದ ಸೇವಿತವಾದ ಸರಸ್ವತೀನದಿಯ ಎರಡೂ ದಡಗಳಲ್ಲಿದ್ದ ಋಷ್ಯಾಶ್ರಮಗಳ ಸೊಬಗನ್ನು ನೋಡುತ್ತಾ ತನ್ನ ರಾಜಧಾನಿಗೆ ಹೊರಟುಹೋದನು. (ಶ್ಲೋಕ 21-27)

ತಮ್ಮ ಪ್ರಭುವು ಬರುತ್ತಿರುವ ಸಮಾಚಾರವು ತಿಳಿದೊಡನೆಯೇ ಬ್ರಹ್ಮಾವರ್ತದ ಪ್ರಜೆಗಳು ಪರಮಾನಂದಪುಳಕಿತರಾಗಿ ಸ್ತೋತ್ರ, ಗೀತ ಮತ್ತು ವಾದ್ಯಧ್ವನಿಗಳೊಡನೆ ಆತನನ್ನು ಸ್ವಾಗತಿಸಲು ರಾಜಧಾನಿಯಿಂದ ಹೊರಗೆ ಬಂದರು. ಸಮಸ್ತಸಂಪತ್ತುಗಳಿಂದಲೂ ಸಂಪನ್ನವಾಗಿದ್ದ ಆ ಸ್ವಾಯಂಭುವಮನುವಿನ ರಾಜಧಾನಿಗೆ 'ಬರ್ಹಿಷ್ಮತೀನಗರ' ಎಂದು ಹೆಸರು. ಭಗವಂತನಾದ ಶ್ರೀವರಾಹಸ್ವಾಮಿಯು ರಸಾತಲದಿಂದ ಭೂಮಿಯನ್ನು ಮೇಲಕ್ಕೆ ಎತ್ತಿಕೊಂಡು ಬಂದಾಗ ತನ್ನ ದೇಹವನ್ನು ಕೊಡುಹಲು ಅದರಿಂದ ಆತನ ಪವಿತ್ರವಾದ ರೋಮಗಳು ಉದುರಿದ ಜಾಗವದು. ಆ ರೋಮಗಳೇ ಸದಾ ಹಸಿರುಪಚ್ಚೆಯಿಂದಲೇ ಶೋಭಿಸುವ 'ಕುಶ' ಮತ್ತು 'ಕಾಶ' ಗಳೆಂಬ ಪವಿತ್ರವಾದ ಹುಲ್ಲುಗಳಾದುವು. ಅವುಗಳ ಮೂಲಕ ಮುನಿಗಳು ಯಜ್ಞಕ್ಕೆ ವಿಘ್ನವನ್ನುಂಟುಮಾಡುತ್ತಿದ್ದ ದೈತ್ಯರನ್ನು ತಿರಸ್ಕರಿಸಿ ಯಜ್ಞಪುರುಷನನ್ನು ಯಜ್ಞಗಳ ಮೂಲಕ ಆರಾಧನೆಮಾಡಿದರು. ಮನುಸಾರ್ವಭೌಮನೂ ಕೂಡ ಶ್ರೀವರಾಹದೇವರ ಅನುಗ್ರಹದಿಂದ ಭೂಮಿಯೆಂಬ ನಿವಾಸಸ್ಥಾನವು ದೊರೆತ ಬಳಿಕ ಅದೇ ಜಾಗದಲ್ಲಿಯೇ ಕುಶ ಮತ್ತು ಕಾಶಗಳ ಆಸನವನ್ನು ಹರಡಿ ಅದರಲ್ಲಿ ಯಜ್ಞಪುರುಷನನ್ನು ಪೂಜೆಮಾಡಿದನು.

ಮನುವು ತನ್ನ ನಿವಾಸಸ್ಥಾನವಾದ ಬರ್ಹಿಷ್ಮತೀನಗರಿಯನ್ನು ತಲುಪಿ ಅಲ್ಲಿ ತಾಪತ್ರಯಗಳನ್ನು ಹೋಗಲಾಡಿಸುವ ತನ್ನ ಅರಮನೆಯನ್ನು ಪ್ರವೇಶಮಾಡಿದನು. ಅಲ್ಲಿ ಅವನು ತನ್ನ ಭಾರ್ಯೆ ಮತ್ತು ಸಂತಾನಗಳೊಡನೆ ಧರ್ಮ, ಅರ್ಥ ಮತ್ತು ಮೋಕ್ಷಗಳಿಗೆ ವಿರೋಧವಾಗದೇ ಇರುವ ಭೋಗಗಳನ್ನು ಅನುಭವಿಸತೊಡಗಿದನು. ಪ್ರಾತಃಕಾಲವಾದೊಡನೆಯೇ ಗಂಧರ್ವರು ತಮ್ಮ ಹೆಂಡಿರೊಡನೆ ಆತನ ಕೀರ್ತಿಯನ್ನು ಗಾನಮಾಡುತ್ತಿದ್ದರು. ಆದರೆ ಆತನು ಅದರಲ್ಲಿ ಆಸಕ್ತಿತೋರದೇ ಪ್ರೇಮಪೂರ್ಣವಾದ ಹೃದಯದಿಂದ ಶ್ರೀಹರಿಯ ಕಥೆಗಳನ್ನೇ ಕೇಳುತ್ತಾ ಸವಿಯುತ್ತಿದ್ದನು. ಮಹಾತ್ಮನಾದ ಆ ಸ್ವಾಯಂಭುವಮನುವು ಯೋಗಸಿದ್ಧಿಗಳಲ್ಲಿ ನಿಷ್ಣಾತನಾಗಿದ್ದನು. ಇಷ್ಟ ಬಂದ ಭೋಗಗಳನ್ನು ನಿರ್ಮಿಸುವ ಸಾಮರ್ಥ್ಯವನ್ನು ಹೊಂದಿದ್ದನು. ಆದರೆ ಮನನಶೀಲನೂ–ಭಗವತ್ಪರಾಯಣನೂ ಆದ ಆ ಯೋಗಿಯನ್ನು ಆ ಭೋಗಗಳು ಸ್ವಲ್ಪವೂ ಕದಲಿಸಲಾರದೇ ಹೋದುವು. ತನ್ನ ಮನ್ವಂತರವೆಂಬ ಕಾಲದಲ್ಲಿ ಒಂದು ಕ್ಷಣಕಾಲವನ್ನೂ ಆತನು ವ್ಯರ್ಥಮಾಡುತ್ತಿರಲಿಲ್ಲ. ಏಕೆಂದರೆ : ಶ್ರೀಮಹಾವಿಷ್ಣುವಿನ ಕಥೆಗಳನ್ನು ಕೇಳುವುದರಲ್ಲಿಯೂ ಆತನ ಎಲ್ಲ ಕಾಲವೂ ಸದುಪಯೋಗಹೊಂದುತ್ತಿತ್ತು. ಈ ರೀತಿಯಲ್ಲಿ ಆತನು ತನ್ನ ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನೂ ಮತ್ತು ಸತ್ತ್ವ, ರಜಸ್ಸು, ತಮಸ್ಸುಗಳೆಂಬ ತ್ರಿಗುಣಗಳನ್ನೂ ತಿರಸ್ಕರಿಸಿ ತ್ರಿಗುಣಾತೀತವಾದ ತುರೀಯದಲ್ಲಿ ನೆಲೆಯನ್ನು ಪಡೆದು ಶ್ರೀವಾಸು ದೇವನ ಪ್ರಸಂಗದಲ್ಲಿಯೇ ಇರುತ್ತಾ ತನ್ನ ಮನ್ವಂತರದ ಎಪ್ಪತ್ತೊಂದು ಚತುರ್ಯುಗಗಳನ್ನೂ ಸಫಲವಾಗಿ ಕಳೆದನು. ವ್ಯಾಸಪುತ್ರನಾದ ವಿದುರನೇ! ಕೇಳು. ಶ್ರೀಹರಿಯನ್ನು ಆಶ್ರಯಿಸಿರುವ ಸುಕೃತಿಯನ್ನು ಶಾರೀರಿಕ-ಮಾನಸಿಕ-ದೈವಿಕ ಅಥವಾ ಭೌತಿಕಗಳಾದ ದುಃಖಗಳು ಹೇಗೆ ತಾನೇ ಕಾಡಿಸಿಯಾವು ? ಮಹಾಪುರುಷನಾದ ಆ ಮನುವು ಸಮಸ್ತಪ್ರಾಣಿಗಳಿಗೂ ಹಿತವನ್ನುಂಟು ಮಾಡುವುದರಲ್ಲಿಯೇ ಆಸಕ್ತನಾಗಿದ್ದನು. ಮುನಿಗಳು ಆತನನ್ನು ಪ್ರಶ್ನಿಸಿದಾಗ ಆ ಧರ್ಮಜ್ಞನಾದ ಪ್ರಭುವು ಅವರಿಗೆ–ಎಲ್ಲ ಮನುಷ್ಯರಿಗೂ ಮತ್ತು ಅವರ ಎಲ್ಲ ವರ್ಣಗಳಿಗೂ, ಆಶ್ರಮಗಳಿಗೂ ಸಂಬಂಧಪಟ್ಟ ಶುಭಕರವಾದ ಅನೇಕ

ಪ್ರಕಾರವಾದ ಧರ್ಮಗಳನ್ನು ಬೋಧಿಸಿದನು. (ಅದನ್ನೇ 'ಮನುಸಂಹಿತಾ' ಎಂಬ ಗ್ರಂಥದ ರೂಪದಲ್ಲಿ ನೋಡುತ್ತೇವೆ.)

ಹೀಗೆ ನಾನು ನಿನಗೆ ಜಗತ್ತಿನ ಮೊಟ್ಟಮೊದಲನೆಯ ಚಕ್ರವರ್ತಿ ಯಾದ ಸ್ವಾಯಂಭುವಮನುವಿನ ಅದ್ಭುತವಾದ ಚರಿತ್ರೆಯನ್ನು ತಿಳಿಸಿದೆನು. ಪುಣ್ಯಶ್ಲೋಕನಾದ ಪುರುಷಶ್ರೇಷ್ಠನವನು. ಈಗ ಆತನ ಕನ್ಯಾರತ್ನವಾದ ದೇವಹೂತಿಯ ಚರಿತ್ರೆಯನ್ನು ಹೇಳುವೆನು ; ಕೇಳು. (ಶ್ಲೋಕ 28-39)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ತೃತೀಯಸ್ಕಂಧದ ೨೨ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೨೩ನೆಯ ಅಧ್ಯಾಯ

ದೇವಹೂತಿಯ ಪತಿಸೇವೆ : ಕರ್ದಮರಿಂದ ದಿವ್ಯವಿಮಾನದ ನಿರ್ಮಾಣ : ದಂಪತಿಗಳ ವಿಹಾರ : ಕನ್ಯೆಯರ ಜನನ

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಪಿತೃಭ್ಯಾಂ ಪ್ರಸ್ಥಿತೇ ಸಾಧ್ವೀ ಪತಿಮಿಙ್ಗಿತಕೋವಿದಾ ।
ನಿತ್ಯಂ ಪರ್ಯಚರತ್ಪ್ರೀತ್ಯಾ ಭವಾನೀವ ಭವಂ ಪ್ರಭುಮ್ ॥೧॥

ಅಯ್ಯಾ ವಿದುರ! ತಂದೆ-ತಾಯಿಗಳು ಹೊರಟುಹೋದನಂತರ, ಪತಿಯ ಇಂಗಿತವನ್ನು ತಿಳಿಯುವುದರಲ್ಲಿ ಕುಶಲೆಯಾದ, ಸಾಧ್ವೀಮಣಿಯಾದ ದೇವಹೂತಿಯು–ಶ್ರೀಪಾರ್ವತೀದೇವಿಯು ಪ್ರಭುವಾದ ಪರಶಿವನನ್ನು ಪೂಜಿಸುವಂತೆ–ಪ್ರತಿದಿನವೂ ಪ್ರೇಮಪೂರ್ವಕವಾಗಿ ಪತಿಯ ಸೇವೆ-ಶುಶ್ರೂಷೆಗಳನ್ನು ಮಾಡತೊಡಗಿದಳು.

ಆಕೆಯು–ದುಷ್ಟವಾದ ಕಾಮವಾಸನೆಯನ್ನೂ, ದಂಭವನ್ನೂ, ದ್ವೇಷ ವನ್ನೂ, ಲೋಭವನ್ನೂ, ಪಾಪವನ್ನೂ, ಮದವನ್ನೂ ಪರಿತ್ಯಜಿಸಿ ಅತ್ಯಂತ ಸಾವದಾನತೆಯಿಂದಲೂ–ಆಸಕ್ತಿಯಿಂದಲೂ ಪತಿಯ ಸೇವೆಯನ್ನು ಮಾಡುತ್ತಾ ತನ್ನ ವಿಶ್ವಾಸ ಪರಿಶುದ್ಧಿ, ಪಾವಿತ್ರ್ಯ, ಗೌರವ, ಸಂಯಮ, ಶುಶ್ರೂಷೆ, ಒಲವು, ಸವಿಮಾತು,–ಮುಂತಾದ ಸದ್ಗುಣ-ಸದಾಚಾರಗಳಿಂದ

ತೇಜಸ್ವಿಯಾದ ಪತಿದೇವನನ್ನು ಸಂತೋಷಪಡಿಸಿದಳು. ಆಕೆಯು ಪತಿಯನ್ನು ದೇವರಿಗಿಂತಲೂ ಹೆಚ್ಚೆಂದು ಭಾವಿಸಿ ಆತನ ಮಹಾಶೀರ್ವಾದಗಳನ್ನು ಬಯಸುತ್ತಾ ಆತನ ಸೇವೆಯಲ್ಲಿಯೇ ತತ್ಪರಳಾಗಿರುತ್ತಿದ್ದಳು. ಈ ರೀತಿಯಲ್ಲಿ ಬಹಳ ದಿನಗಳವರೆಗೂ ತನ್ನನ್ನು ಅನುರ್ವತಿಸುತ್ತಾ ವ್ರತಾದಿಗಳನ್ನು ಆಚರಿಸಿದ್ದರಿಂದ ಆ ರಾಜಪುತ್ರಿಯು ದುರ್ಬಲಳಾಗಿದ್ದುದನ್ನು ಕಂಡು, ಕರ್ದಮರು ಕನಿಕರದಿಂದ ಕೂಡಿ ನೊಂದುಕೊಂಡು ಪ್ರೇಮದಿಂದ ಗದ್ಗದವಾದ ವಾಣಿಯಿಂದ ಆಕೆಗೆ ಹೇಳಿದರು : (ಶ್ಲೋಕ 1-5)

“ಮನುನಂದಿನಿ! ನನ್ನಲ್ಲಿ ನೀನು ತೋರಿರುವ ಪ್ರೀತ್ಯಾದರಗಳಿಂದ ನಾನು ತುಂಬಾ ಸಂತುಷ್ಟನಾದೆನು. ನೀನು ಮಾಡಿದ ಪರಮಶುಶ್ರೂಷೆ ಮತ್ತು ನಿನ್ನ ಪರಮಭಕ್ತಿಗಳು ನನ್ನಲ್ಲಿ ಪರಮಸಂತೋಷವನ್ನು ತುಂಬಿವೆ. ದೇಹಿಗಳೆಲ್ಲರಿಗೂ ತಮ್ಮ ಶರೀರದಲ್ಲಿ ತುಂಬಾ ಪ್ರೀತಿ ಇರುತ್ತದೆ ; ಆದರವಿರುತ್ತದೆ. ಆದರೆ ನೀನು ಅಂತಹ ಶರೀರವು ಕ್ಷೀಣಿಸುತ್ತಿರುವುದನ್ನೂ ಲೆಕ್ಕಿಸದೇ ನನ್ನ ಸೇವೆಮಾಡುತ್ತಿರುವೆಯಲ್ಲವೇ? ಇದಕ್ಕೆ ತಕ್ಕ ಫಲಾತಿಶಯವೂ ನಿನಗೆ ದೊರೆಯುವುದು. ನಾನು ಸ್ವಧರ್ಮಪರಿಪಾಲನೆಯಿಂದ ತಪಸ್ಸು, ಸಮಾಧಿ, ಉಪಾಸನೆ ಮತ್ತು ಯೋಗಗಳ ಮೂಲಕ ಭಯರಹಿತವೂ–ಶೋಕರಹಿತವೂ ಆದ ಯಾವ ವಿಭೂತಿ (ಸಿದ್ಧಿ)ಗಳನ್ನು ಭಗವದನುಗ್ರಹದಿಂದ ಸಂಪಾದಿಸಿರುವೆನೋ–ಅವುಗಳ ಮೇಲೂ ನೀನು ನಿನ್ನ ಸೇವಾಯೋಗದಿಂದ ಅಧಿಕಾರವನ್ನು ಗಳಿಸಿದ್ದೀಯೆ. ನಾನು ನಿನಗೆ ದಿವ್ಯದೃಷ್ಟಿಯನ್ನು ಕೊಡುತ್ತೇನೆ. ಅದರ ಮೂಲಕ ನೀನು ಅವುಗಳನ್ನು ನೋಡುವವಳಾಗು. ಇತರ ಭೋಗಗಳಾದರೋ ಭಗವಂತನಾದ ಶ್ರೀಹರಿಯ ಹುಬ್ಬಿನಾಟದ ವಿಲಾಸಮಾತ್ರದಿಂದಲೇ ನಷ್ಟವಾಗಿಬಿಡುವುವು. ಅವುಗಳಿಗೆ ನಾನು ತೋರಿಸುವ ಈ ವಿಭೂತಿಗಳ ಮುಂದೆ ಯಾವ ಬೆಲೆಯೂ ಇಲ್ಲ. ನೀನು ನನ್ನ ಸೇವೆಯಿಂದಲೂ ಕೃತಕೃತ್ಯಳಾಗಿದ್ದೀಯೆ. ನೀನು ನಿನ್ನ ಪಾತಿವ್ರತ್ಯಧರ್ಮವನ್ನು ಪರಿಪಾಲನೆಮಾಡಿ ಆ ದಿವ್ಯಭೋಗಗಳನ್ನು ಗಳಿಸಿದ್ದೀಯೆ. ಅವುಗಳನ್ನು ನೀನು ಈಗ ಅನುಭವಿಸಬಹುದು. ಆ ದಿವ್ಯಸಿದ್ಧಿಗಳು ದುರಹಂಕಾರಿಗಳಿಗೆ ದುರ್ಲಭವಾದುವು. ‘ನಾವು ರಾಜರು ; ನಮಗೆ ಎಲ್ಲವೂ ಸುಲಭವಾಗಿ ದೊರೆಯು

ವುದು'–ಎಂಬ ದುರಭಿಮಾನವೇ ಮುಂತಾದ ವಿಕಾರಗಳು ಇದ್ದರೆ, ಮನುಷ್ಯರಿಗೆ ಈ ಭೋಗಗಳು ಸಿಕ್ಕುವುದು ತುಂಬಾ ಕಷ್ಟ." (ಶ್ಲೋಕ 6-8)

ಕರ್ದಮರು ಹೀಗೆ ಹೇಳಲು, ತನ್ನ ಪತಿಯು ಸಂಪೂರ್ಣವಾದ ಯೋಗಮಾಯೆಗಳಲ್ಲೂ, ವಿದ್ಯೆಗಳಲ್ಲೂ ನಿಷ್ಣಾತನು–ಎಂಬುದನ್ನರಿತು ಆ ಅಬಲೆಯ ಸರ್ವಚಿಂತೆಗಳೂ ದೂರವಾದುವು. ಆಕೆಯ ಮುಖವು ಸ್ವಲ್ಪ ಸಂಕೋಚದಿಂದ ತುಂಬಿದ ದೃಷ್ಟಿಯಿಂದಲೂ–ಮಧುರವಾದ ಮುಗುಳ್ನಗೆಯಿಂದಲೂ ಅರಳಿತು. ವಿನಯ ಮತ್ತು ಪ್ರೀತಿಗಳಿಂದ ಗದ್ಗದವಾದ ವಾಣಿಯಿಂದ ಆಕೆಯು ಪತಿದೇವರಿಗೆ ಹೀಗೆಂದಳು :

"ಬ್ರಾಹ್ಮಣಶ್ರೇಷ್ಠರೇ! ಪತಿದೇವರೇ! ಎಂದಿಗೂ ವಿಫಲವಾಗದಿರುವ ಯೋಗಶಕ್ತಿ ಮತ್ತು ತ್ರಿಗುಣಾತ್ಮಕವಾದ ಮಾಯೆಗಳ ಮೇಲೆ ಅಧಿಕಾರವನ್ನು ಹೊಂದಿರುವ ನಿಮಗೆ ಈ ಐಶ್ವರ್ಯಗಳೆಲ್ಲವೂ ಇವೆಯೆಂದು ನಾನು ಬಲ್ಲೆನು. ಆದರೆ ವಿವಾಹಸಮಯದಲ್ಲಿ ಮಾಡಿದ್ದ ಪ್ರತಿಜ್ಞೆಯನ್ನು ನೀವು ಈಡೇರಿಸಬೇಕು. 'ಗರ್ಭಾಧಾನವಾಗುವವರೆಗೂ ನಾನು ನಿನ್ನೊಡನೆ ಗೃಹಸ್ಥ ಸುಖಗಳನ್ನು ಅನುಭವಿಸುವೆನು'–ಎಂದು ಹೇಳಿದ್ದೀರಲ್ಲವೇ? ಅದು ನೆರವೇರಲಿ. ಏಕೆಂದರೆ : ಶ್ರೇಷ್ಠನಾದ ಪತಿಯಿಂದ ಸಂತಾನವನ್ನು ಪಡೆಯುವುದೇ ಪತಿವ್ರತಾಸ್ತ್ರೀಯು ಗಳಿಸಬೇಕಾದ ಪರಮಲಾಭವು. ನಮ್ಮಿಬ್ಬರ ಸಮಾಗಮಕ್ಕೆ ಶಾಸ್ತ್ರಾನುಸಾರವಾಗಿ ಮಾಡಬೇಕಾದ ಕರ್ತವ್ಯಗಳಾವುವೆಂಬುದನ್ನು ಈಗ ಉಪದೇಶಮಾಡಿರಿ. ಗಂಧ, ಮಾಲ್ಯ, ಲೇಪನ, ಭೋಜನ–ಮುಂತಾದ ಉಪಯುಕ್ತಸಾಮಗ್ರಿಗಳನ್ನು ಸೇರಿಸಿರಿ. ನಿಮ್ಮ ಸಂಗವನ್ನು ಬಯಸುವ ನನ್ನ ಈ ದುರ್ಬಲವಾದ ಶರೀರವು ನಿಮ್ಮ ಅಂಗಸಂಗಕ್ಕೆ ಯೋಗ್ಯವಾಗಬೇಕಲ್ಲವೇ? ನೀವೇ ಹೆಚ್ಚಿಸಿರುವ ಕಾಮವು ನನ್ನನ್ನು ಪೀಡೆಗೆ ಒಳಗಾಗಿಸಿದೆ ಸ್ವಾಮಿ! ಇದಕ್ಕೆ ಯೋಗ್ಯವಾಗಿರುವ ಒಂದು ಭವ್ಯಭವನವೂ ನಿರ್ಮಾಣವಾಗಬೇಕಾಗಿದೆಯೆಂಬುದನ್ನೂ ನೀವು ವಿಚಾರಮಾಡಬೇಕು."

(ಶ್ಲೋಕ 9-11)

ಮೈತ್ರೇಯರು ಹೇಳುತ್ತಾರೆ :

ವಿದುರ! ಕೇಳು. ಕರ್ದಮಮಹರ್ಷಿಗಳು ತನ್ನ ಇನಿಯಳ ಇಚ್ಛೆ

ಯನ್ನು ಈಡೇರಿಸಲು ಒಡನೆಯೇ ಯೋಗಸಿದ್ಧಿಯನ್ನು ಆಶ್ರಯಿಸಿ ಯಥೇಷ್ಟ ವಾಗಿ ಎಲ್ಲೆಡೆಗಳಲ್ಲೂ ಸಂಚರಿಸುವ ಸಾಮರ್ಥ್ಯವುಳ್ಳ ಒಂದು ದಿವ್ಯವಿಮಾನ ವನ್ನು ನಿರ್ಮಿಸಿದರು. ಆ ದಿವ್ಯವಿಮಾನವು ಎಲ್ಲ ಇಷ್ಟಾರ್ಥಭೋಗಗಳನ್ನೂ ಈಡೇರಿಸುತ್ತಿತ್ತು. ಎಲ್ಲ ಬಗೆಯ ರತ್ನಗಳಿಂದಲೂ ಕೂಡಿ, ಎಲ್ಲ ಸಂಪತ್ತು ಗಳೂ ಮುಂದೆ-ಮುಂದೆಯೂ ವೃದ್ಧಿಹೊಂದುವ ಸಾಮರ್ಥ್ಯವನ್ನು ಹೊಂದಿ, ರತ್ನಮಯವಾದ ಕಂಬಗಳಿಂದ ಕಂಗೊಳಿಸುತ್ತಾ ಅತ್ಯಂತ ಶೋಭಾಯಮಾನವಾಗಿತ್ತು. ಅದು ಎಲ್ಲ ಋತುಗಳಲ್ಲಿಯೂ ಸುಖ ವನ್ನುಂಟುಮಾಡುವ ಅದ್ಭುತವಿಮಾನ. ಎಲ್ಲೆಡೆಗಳಲ್ಲೂ ಬಗೆ-ಬಗೆಯ ದಿವ್ಯ ಸಾಮಗ್ರಿಗಳಿಂದ ಕೂಡಿ ಚಿತ್ರ-ವಿಚಿತ್ರವಾದ ರೇಷ್ಮೆಯ ಪಟ್ಟಿಗಳಿಂದಲೂ, ಪತಾಕೆಗಳಿಂದಲೂ ಸಿಂಗರಿಸಲ್ಪಟ್ಟಿತ್ತು. ಮಧುರವಾಗಿ ಝೇಂಕರಿಸುತ್ತಿರುವ ದುಂಬಿಗಳ ಹಿಂಡಿನಿಂದ ಕೂಡಿದ ಬಣ್ಣ-ಬಣ್ಣದ ಪುಷ್ಪಗಳ ಮಾಲೆಗಳಿಂದಲೂ ಮತ್ತು ನಾನಾಪ್ರಕಾರವಾದ ರೇಷ್ಮೆ, ನಾರು ಮತ್ತು ನೂಲುಗಳ ಪಟ್ಟೆಮಡಿವಸ್ತ್ರಗಳಿಂದಲೂ ಅಲಂಕೃತವಾಗಿ ಕಣ್ಣುಗಳಿಗೆ ಹಬ್ಬವಾಗಿತ್ತು. ಒಂದರ ಮೇಲೊಂದು ನಿರ್ಮಿತವಾಗಿದ್ದ ಕೊಠಡಿಗಳಲ್ಲಿ ಬೇರೆ-ಬೇರೆಯಾಗಿ ಹಾಸಲ್ಪಟ್ಟಿದ್ದ ಹಾಸಿಗೆಗಳು, ಮಂಚಗಳು, ಬೀಸಣಿಗೆಗಳು ಮತ್ತು ಆಸನ ಗಳಿಂದ ಕೂಡಿ ಅತ್ಯಂತ ರಮಣೀಯವಾಗಿತ್ತು. ಅಲ್ಲಲ್ಲಿ ಗೋಡೆಗಳಲ್ಲಿ ರಚಿಸ ಲ್ಪಟ್ಟ ಸುಂದರವಾದ ಶಿಲ್ಪಗಳೂ ಅದಕ್ಕೆ ಅಪೂರ್ವವಾದ ಸೊಬಗನ್ನು ಕೊಟ್ಟಿ ದ್ದುವು. ನೆಲದಲ್ಲಿ ಮರಕತಮಣಿಯ ಇಟ್ಟಿಗೆಗಳೂ, ಕುಳಿತುಕೊಳ್ಳಲು ಯೋಗ್ಯವಾದ ಹವಳದ ವೇದಿಕೆಗಳೂ ಉಪಭೋಗಕ್ಕಾಗಿ ಅಲಂಕೃತವಾಗಿ ದ್ದುವು. ಬಾಗಿಲುಗಳು ಹವಳದ ಹೊಸ್ತಿಲುಗಳಿಂದಲೂ, ವಜ್ರದ ಕಪಾಟು ಗಳಿಂದಲೂ ವಿರಾಜಿಸುತ್ತಿದ್ದುವು. ಇಂದ್ರನೀಲಮಣಿಗಳ ಶಿಖರಗಳ ಮೇಲೆ ಚಿನ್ನದ ಕಲಶಗಳು ಹೊಳೆಯುತ್ತಿದ್ದುವು. ಅದು ವಜ್ರಮಣಿಯ ಗೋಡೆಗಳಲ್ಲಿ ಪ್ರತಿಬಿಂಬಿಸಿ ಥಳ-ಥಳಿಸುವ ಪದ್ಮರಾಗಮಣಿಗಳು ವಿಮಾನದ ಕಣ್ಣುಗಳಂತೆ ಬೆಳಗುತ್ತಿದ್ದುವು. ಬಹುಮೂಲ್ಯವಾದ ಚಿತ್ರ-ವಿಚಿತ್ರವಾದ ತೋರಣ ಗಳಿಂದಲೂ, ಚಿನ್ನದ ಮೇಲ್ಕಟ್ಟುಗಳಿಂದಲೂ ವಿಮಾನವು ಮನೋಹರ ವಾಗಿತ್ತು. ಆ ವಿಮಾನಗಳಲ್ಲಿ ಅಲ್ಲಲ್ಲಿ ಅತಿಸುಂದರವಾಗಿದ್ದ ಕೃತ್ರಿಮವಾದ ಹಂಸ-ಪಾರಿವಾಳಗಳು ಶೋಭಿಸುತ್ತಿದ್ದುವು. ಅವುಗಳನ್ನು ಸಜೀವಪಕ್ಷಿ

ಗಳಿಂದೇ ಭ್ರಮಿಸಿ ಬಹುಸಂಖ್ಯೆಯ ಹಂಸಗಳೂ–ಪಾರಿವಾಳಗಳೂ ಅವುಗಳ ಬಳಿ ಕುಳಿತು ತಮ್ಮ ಧ್ವನಿಗಳಿಂದ ಕೂಗಿಡುತ್ತಿದ್ದುವು. ಅದ್ಭುತರಮಣೀಯತೆ ಯಿಂದ ಕೂಡಿದ ಆಟದ ಉದ್ಯಾನಗಳ ಬಯಲುಗಳಿಂದಲೂ, ವಿಶ್ರಮಿಸುವ ಜಾಗಗಳಿಂದಲೂ, ಕುಳಿತುಕೊಳ್ಳುವ ಸ್ಥಾನಗಳಿಂದಲೂ, ಅಂಗಳ ಗಳಿಂದಲೂ, ಹಜಾರಗಳಿಂದಲೂ ರಾರಾಜಿಸುತ್ತಾ–ಅವುಗಳನ್ನು ತನ್ನ ಸಿದ್ಧಿಯಿಂದ ನಿರ್ಮಿಸಿದ ಕರ್ದಮರನ್ನೂ ಆಶ್ಚರ್ಯದಿಂದ ಬೆರಗುಗೊಳಿಸುತ್ತಿತ್ತು. ಆ ದಿವ್ಯವಿಮಾನ.

ಅಂತಹ ಸುಂದರತಮವಾದ ಭವನವನ್ನು (ವಿಮಾನವನ್ನು) ನೋಡಿ ದರೂ ದೇವಹೂತಿಗೆ ಮನಸ್ಸಿನಲ್ಲಿ ತುಂಬಾ ಪ್ರಸನ್ನತೆಯುಂಟಾಗಿಲ್ಲವೆಂಬು ದನ್ನು, ಎಲ್ಲ ಭೂತಗಳ ಭಾವನೆಗಳನ್ನೂ ಅರಿತ ಜ್ಞಾನಿಗಳಾದ ಕರ್ದಮರು ಮನಗಂಡು, ತನ್ನ ಇನಿಯಳನ್ನು ಕುರಿತು–'ಪ್ರಿಯೇ! ನೀನು ಈ ಬಿಂದು ಸರೋವರದಲ್ಲಿ ಸ್ನಾನಮಾಡಿ ವಿಮಾನವನ್ನು ಹತ್ತು. ಭಗವಂತನಾದ ಮಹಾ ವಿಷ್ಣುವಿನಿಂದ ನಿರ್ಮಿತವಾಗಿರುವ ಈ ತೀರ್ಥಕ್ಕೆ ಮನುಷ್ಯರ ಸರ್ವಕಾಮನೆ ಗಳನ್ನೂ ಈಡೇರಿಸುವ ಶಕ್ತಿಯಿದೆ'–ಎಂದರು.

ಕನ್ನೈದಿಲೆಯಂತೆ ಕಮನೀಯವಾದ ಕಣ್ಣುಗಳನ್ನು ಹೊಂದಿದ್ದ ಆ ರಮಣಿಯು ಪತಿಯ ಮಾತಿನಂತೆ ಸರಸ್ವತಿಯ ಪವಿತ್ರವಾದ ಜಲದಿಂದ ತುಂಬಿದ್ದ ಆ ಸರೋವರವನ್ನು ಪ್ರವೇಶಿಸಿದಳು. ಅದಕ್ಕೆ ಮೊದಲು ಆಕೆಯ ಬಟ್ಟೆಗಳು ಮಲಿನವಾಗಿದ್ದುವು. ತಲೆಗೂದಲುಗಳು ಅಂಟಿಕೊಂಡು ಜಡೆ ಯಂತೆ ಆಗಿಬಿಟ್ಟಿದ್ದುವು. ದೇಹದಲ್ಲಿ ಕೊಳೆ ಸೇರಿಕೊಂಡಿತ್ತು ಮತ್ತು ಸ್ತನಗಳು ಕಾಂತಿರಹಿತವಾಗಿಬಿಟ್ಟಿದ್ದುವು. ಆದರೆ ಸರೋವರದಲ್ಲಿ ಮುಳುಗುಹಾಕಿ ದೊಡನೆಯೇ ಅದರೊಳಗೆ ಆಕೆಯು ಕಂಡಿದ್ದೇನು? ಕನ್ನೈದಿಲೆಯ ಕಂಪಿನಿಂದ ಘಮ-ಘಮಿಸುತ್ತಿದ್ದ ದೇಹವುಳ್ಳ ಸಾವಿರ ಕನ್ಯೆಯರು ಕಂಗೊಳಿಸುತ್ತಿದ್ದಾರೆ. ಎಲ್ಲರೂ ಎಳೆಯ ವಯಸ್ಸಿನವರು. ದೇವಹೂತಿಯನ್ನು ಕಂಡೊಡ ನೆಯೇ ಅವರು ಎದ್ದುನಿಂತು ಕೈಜೋಡಿಸಿಕೊಂಡು–'ನಾವು ತಮ್ಮ ಊಳಿಗ ದವರು ; ಏನು ಸೇವೆಮಾಡೋಣ? ಅಪ್ಪಣೆಯಾಗಲಿ'–ಎಂದು ಅರಿಕೆಮಾಡಿ ಕೊಂಡರು. ಸ್ವಾಮಿನಿಗೆ ಮರ್ಯಾದೆಮಾಡುವುದರಲ್ಲಿ ಕುಶಲೆಯರಾದ ಆ ರಮಣಿಯರು ಅಮೂಲ್ಯವಾದ ಕಂಪು-ತಂಪುಗಳಿಂದ ಕೂಡಿ, ಮೃದುವಾಗಿ

ಹಿತಕರವಾದ ಚೂರ್ಣ ಮುಂತಾದುವುಗಳಿಂದಲೂ–ಶುಭವಾದ ತೀರ್ಥ ದಿಂದಲೂ ಆಕೆಗೆ ಸ್ನಾನಮಾಡಿಸಿ ನಿರ್ಮಲವಾದ ಹೊಸ ಪಟ್ಟೆಮಡಿಗಳನ್ನು ಉಡಲುಕೊಟ್ಟರು. ಹಾಗೆಯೇ ಕಾಂತಿಯುತವೂ–ಕಮನೀಯವೂ ಆದ ಅಮೂಲ್ಯವಾದ ಒಡವೆಗಳನ್ನು ತೊಡಲು ಅರ್ಪಿಸಿದರು. ಸರ್ವಗುಣ ಗಳಿಂದಲೂ ಸಂಪನ್ನವಾದ ಅನ್ನಾಹಾರಗಳನ್ನೂ, ಅಮೃತಕ್ಕೆ ಎಣೆಯಾದ ಪಾನೀಯಗಳನ್ನೂ ನೀಡಿದರು. ದೇವಹೂತಿಯು ತಾನು ಬಗೆ-ಬಗೆಯ ಸುಗಂಧಪುಷ್ಪಗಳ ಹಾರಗಳಿಂದಲೂ, ಸ್ವಚ್ಛವಾದ ವಸ್ತ್ರಗಳಿಂದಲೂ ಅಲಂಕೃತ ಳಾಗಿರುವುದನ್ನೂ, ಅಂತೆಯೇ ತನ್ನ ದೇಹವು ನಿರ್ಮಲವಾಗಿ ಕಾಂತಿಯಿಂದ ಶೋಭಿಸುತ್ತಿರುವುದನ್ನೂ, ಆ ಕನ್ಯೆಯರು ಅತ್ಯಂತ ಆದರದಿಂದ ತನಗೆ ಮಾಂಗಲಿಕವಾದ ಶೃಂಗಾರಮಾಡಿರುವುದನ್ನೂ ಕನ್ನಡಿಯಲ್ಲಿ ಕಂಡು ಕೊಂಡಳು. ಅವರು ತನ್ನ ತಲೆಗೆ ಸ್ನಾನಮಾಡಿಸಿ ಅಂಗಾಂಗಗಳನ್ನು ಎಲ್ಲ ಆಭರಣಗಳಿಂದ ಅಲಂಕರಿಸಿರುವುದನ್ನು ಗಮನಿಸಿದಳು. ಕಂಠಕ್ಕೆ ಒಪ್ಪುವ ಸ್ವರ್ಣನಾಣ್ಯ-ರತ್ನಗಳ ಹಾರ, ಕೈಗಳಿಗೆ ಬಳೆಗಳು-ಉಂಗುರಗಳು, ಕಾಲುಗಳಿಗೆ ಝಣ-ಝಣಿಸುವ ಚಿನ್ನದ ಕಾಲಂದುಗೆಗಳು, ನಡುವಿನಲ್ಲಿ ಚಿನ್ನ- ರನ್ನಗಳ ಒಡ್ಯಾಣ, ಅಂಗಾಂಗಗಳಲ್ಲಿಯೂ ಕುಂಕುಮ-ಕೇಸರಿ ಮುಂತಾದ ಮಂಗಳದ್ರವ್ಯಗಳಿಂದ ಲೇಪನ–ಇವುಗಳಿಂದ ತಾನು ಅಪೂರ್ವಕಾಂತಿಯಿಂದ ಶೋಭಿಸುತ್ತಿರುವುದನ್ನು ಕಂಡಳು. ಹೊಳೆಯುತ್ತಿರುವ ಸುಲಿಪಲ್ಲು ಗಳಿಂದಲೂ, ಸುಂದರವಾದ ಹುಬ್ಬುಗಳಿಂದಲೂ, ಕಮಲದ ಮೊಗ್ಗಿನೊಡನೆ ಸ್ಪರ್ಧಿಸುತ್ತಾ ಪ್ರೀತಿಯ ನೋಟಗಳಿಂದ ಸುಂದರವಾಗಿದ್ದ ಕಣ್ಣುಗಳಿಂದಲೂ, ಮೋಹಕವಾದ ಕಪ್ಪುಮುಂಗುರುಳುಗಳಿಂದಲೂ ಮೆರೆಯುತ್ತಿದ್ದ ತನ್ನ ಮುಖದ ಸೊಬಗನ್ನು ಸಂದರ್ಶಿಸಿದಳು. ಆಗ ಆಕೆಯು ತನ್ನ ಪ್ರಿಯನನ್ನು ಸ್ಮರಿಸಲು, ಒಡನೆಯೇ ತಾನು ತನ್ನ ಗೆಳತಿಯರೊಡನೆ ಆ ಪ್ರಜಾಪತಿಯ ಬಳಿಯೇ ಬೆಳಗುತ್ತಿರುವುದನ್ನು ನೋಡಿ ನಲಿದಳು. ಆಗ ತಾನು ಸಾವಿರಾರು ಸ್ತ್ರೀಯರೊಡನೆ ತನ್ನ ಪ್ರಾಣನಾಥನ ಮುಂದೆಯೇ ಇರುವುದನ್ನು ಕಂಡು ಇದೆಲ್ಲಾ ಆತನ ಯೋಗದ ಪ್ರಭಾವವೇ ಎಂದು ತಿಳಿದು ಆಕೆಗೆ ತುಂಬಾ ಅಚ್ಚರಿಯಾಯಿತು. (ಶ್ಲೋಕ 12-35)

ವಿದುರನೇ! ಕೇಳು. ದೇವಹೂತಿಯ ದೇಹವು ಎಲ್ಲ ಕೊಳೆಯನ್ನೂ

ತೊಳೆದುಕೊಂಡು ಅತ್ಯಂತನಿರ್ಮಲವಾಗಿದೆ. ವಿವಾಹಕ್ಕೆ ಮೊದಲು ಆಕೆಗೆ ಯಾವ ರೂಪವಿತ್ತೋ–ಅದೇ ರೂಪವೇ ಆಕೆಗೆ ಮತ್ತೆ ಬಂದು, ಆಕೆಗೆ ಅಪೂರ್ವವಾದ ಲಾವಣ್ಯವುಂಟಾಗಿದೆ. ಆಕೆಯು ಶುಭ್ರವಾದ ವಸ್ತ್ರಗಳನ್ನು ಧರಿಸಿದ್ದಾಳೆ. ಆಕೆಯ ಸುಂದರವಾದ ವಕ್ಷಃಸ್ಥಳವು ಕುಪ್ಪಸದಿಂದ ಮುಚ್ಚಲ್ಪಟ್ಟಿದೆ. ಸಾವಿರಾರು ಮಂದಿ ವಿದ್ಯಾಧರಸ್ತ್ರೀಯರು ಆಕೆಯ ಸೇವೆಯನ್ನು ಮಾಡುತ್ತಿದ್ದಾರೆ–ಎಂಬುದನ್ನು ನೋಡಿ ಸಂತಸಗೊಂಡು ಕರ್ದಮಪ್ರಜಾಪತಿಗಳು ಆಕೆಯನ್ನು ಅತ್ಯಂತಪ್ರೇಮದಿಂದ ವಿಮಾನಕ್ಕೆ ಹತ್ತಿಸಿದರು. ಆಗ ಕರ್ದಮರು ತನ್ನ ಪ್ರಿಯೆಯ ವಿಷಯದಲ್ಲಿ ಅನುರಕ್ತರಾಗಿದ್ದುದೇನೋ ನಿಜವೇ. ಆದರೂ ಅವರ ಮಹಿಮೆಯು ಅದರಿಂದ ಕುಂದಲಿಲ್ಲ. ಅವರ ಸಿದ್ಧಿಬಲವು ಕಡಿಮೆಯಾಗಲಿಲ್ಲ. ಅವರ ಇಂದ್ರಿಯಗಳ ಮೇಲಿನ ಹತೋಟಿಯೂ ಹೋಗಲಿಲ್ಲ. ವಿದ್ಯಾಧರಸ್ತ್ರೀಯರು ಅವರ ಸೇವೆಯನ್ನು ಮಾಡುತ್ತಿದ್ದರು. ಅರಳಿದ ಕುಮುದಪುಷ್ಪಗಳಿಂದ ತಮ್ಮನ್ನು ಸಿಂಗರಿಸಿಕೊಂಡು ರಾರಾಜಿಸುತ್ತಿದ್ದ ಅವರು ಆಕಾಶದಲ್ಲಿ ನಕ್ಷತ್ರಗಣದಿಂದ ಸುತ್ತಲ್ಪಟ್ಟ ಚಂದ್ರ ನಂತೆ ಬೆಳಗುತ್ತಿದ್ದರು. ಆ ವಿಮಾನದಲ್ಲಿ ವಾಸಮಾಡುತ್ತಾ ಅವರು ಕುಬೇರ ನಂತೆ ಮೇರುಪರ್ವತದ ತಪ್ಪಲು-ಗವಿಗಳಲ್ಲಿ ದೀರ್ಘಕಾಲದವರೆಗೆ ವಿಹರಿಸುತ್ತಿದ್ದರು. ಆ ಪರ್ವತದ ತಪ್ಪಲು ಮತ್ತು ಗವಿಪ್ರದೇಶಗಳ ಸೊಬಗು-ಸೌಂದರ್ಯ ಮತ್ತು ಸುಖಮಯಸನ್ನಿವೇಶಗಳನ್ನು ಹೇಗೆ ವರ್ಣಿಸೋಣ? ಏಕೆಂದರೆ : ಅವು ಅಷ್ಟದಿಕ್ಪಾಲಕರಿಗೂ ಕ್ರೀಡಾಪ್ರದೇಶವಾಗಿದ್ದುವು. ಕಾಮವನ್ನು ಹೆಚ್ಚಿಸುವ ತಂಪು-ಕಂಪುಗಳಿಂದ ಕೂಡಿದ ಮಂದಮಾರುತವು ಬೀಸುತ್ತಾ ಅಲ್ಲಿ ಸುಖ-ಸೌಂದರ್ಯಗಳನ್ನು ವಿಸ್ತರಿಸುತ್ತಿತ್ತು. ಶ್ರೀಗಂಗೆಯು ಸ್ವರ್ಗದಿಂದ ಧುಮುಕುತ್ತಿರುವುದರಿಂದ ಬರುವ ಮಂಗಳಧ್ವನಿಯು ನಿರಂತರವಾಗಿ ಪ್ರತಿಧ್ವನಿಸುತ್ತಿತ್ತು. ಆಗಲೂ ಕೂಡ ದಿವ್ಯವಿದ್ಯಾಧರಿಯರು ಅವರ ಸೇವೆಗಾಗಿ ಸಿದ್ಧರಾಗಿದ್ದರು. ಸಿದ್ಧರ ಸಮುದಾಯವು ಅವರಿಗೆ ವಂದನೆಮಾಡುತ್ತಿತ್ತು.

ಹೀಗೆ ತನ್ನ ಪ್ರಾಣವಲ್ಲಭೆಯೊಡನೆ ಕರ್ದಮರು ವೈಶ್ರಂಭಕ, ಸುರಸನ, ನಂದನ, ಪುಷ್ಪಭದ್ರ ಮತ್ತು ಚೈತ್ರರಥವೇ–ಮುಂತಾದ ಅನೇಕ ದೇವತೋದ್ಯಾನಗಳಲ್ಲಿಯೂ ಮತ್ತು ಮಾನಸಸರೋವರದಲ್ಲಿಯೂ ಪರಮಾನು

ರಾಗದಿಂದ ವಿಹರಿಸುತ್ತಿದ್ದರು. ಕಾಂತಿಯಿಂದ ಬೆಳಗುತ್ತಿದ್ದ, ಯಥೇಷ್ಟವಾಗಿ ಸಂಚರಿಸುತ್ತಿದ್ದ ಆ ಶ್ರೇಷ್ಠವಾದ ಕಾಮಯಾನವಿಮಾನದಲ್ಲಿ ಕುಳಿತು ವಾಯುವಿನಂತೆ ಎಲ್ಲ ಲೋಕಗಳಲ್ಲೂ ಸಂಚರಿಸುತ್ತಾ ವಿಮಾನವಿಹಾರಿ ಗಳಾದ ದೇವತೆಗಳಿಗಿಂತಲೂ ಹೆಚ್ಚು ಸುಖ-ಸಂಪತ್ತುಗಳನ್ನು ಅವರು ಅನುಭವಿಸಿದರು. ಶ್ರೀಭಗವಂತನ ಭವಭಯಾಪಹಾರಕವಾದ ಪಾದಪದ್ಮ ಗಳನ್ನು ಆಶ್ರಯಿಸಿರುವ ಸುಕೃತಿಗಳಿಗೆ ಯಾವ ವಸ್ತುವು ಅಥವಾ ಶಕ್ತಿಯು ತಾನೇ ದುರ್ಲಭವಾದೀತು?

ಹೀಗೆ ಮಹಾಯೋಗಿಗಳಾದ ಕರ್ದಮರು ತಮ್ಮ ಪ್ರಿಯೆಗೆ ಜಂಬೂ ದ್ವೀಪವೇ ಮುಂತಾದ ಬಗೆ-ಬಗೆಯ ದ್ವೀಪಗಳು ಮತ್ತು ಭಾರತ-ಕಿಂಪುರುಷ ವರ್ಷಗಳೇ ಮುಂತಾದ ಬಗೆ-ಬಗೆಯ ವರ್ಷಗಳು–ಇವೇ ಮುಂತಾದ ವಿಚಿತ್ರವಾದ ರಚನೆಯಿಂದ ಅತ್ಯಂತ ಆಶ್ಚರ್ಯಕರವಾಗಿ ಕಾಣುತ್ತಿರುವ ಇಡೀ ಭೂಮಂಡಲವನ್ನು ತೋರಿಸಿ ತಮ್ಮ ಆಶ್ರಮಕ್ಕೆ ಹಿಂದಿರುಗಿದರು. ಅನಂತರ ಅವರು ತಮ್ಮ ವೀರ್ಯವನ್ನು ಒಂಬತ್ತು ರೂಪಗಳಲ್ಲಿ ವಿಭಾಗಿಸಿಕೊಂಡು ರತಿಸುಖಕ್ಕಾಗಿ ಅತ್ಯಂತ ಉತ್ಸುಕಳಾಗಿದ್ದ ಮನುಕುಮಾರಿ ದೇವಹೂತಿಯನ್ನು ಆನಂದಪಡಿಸುತ್ತಾ ಆಕೆಯ ಜೊತೆಯಲ್ಲಿ ಅನೇಕವರ್ಷಗಳ ಕಾಲ ಕಳೆದರು. ಆದರೆ ಆ ಅತಿದೀರ್ಘಕಾಲವೂ ಅವರಿಗೆ ಮುಹೂರ್ತದಂತೆ ಕಳೆದುಹೋಯಿತು. ಆ ವಿಮಾನದಲ್ಲಿ ರತಿಸುಖವನ್ನು ಹೆಚ್ಚಿಸುವ ಅತಿ ಸುಂದರವಾದ ಶಯ್ಯೆಯನ್ನು ಆಶ್ರಯಿಸಿ ಪರಮಸೌಂದರ್ಯನಿಧಿಯಾದ ತನ್ನ ಪ್ರಿಯತಮನೊಡನೆ ಇರುತ್ತಿದ್ದ ದೇವಹೂತಿಗೆ ಕಾಲದ ಪರಿವೆ ಸ್ವಲ್ಪವೂ ಉಂಟಾಗಲಿಲ್ಲ. ಕಾಮಾಸಕ್ತರಾಗಿದ್ದ ಆ ದಂಪತಿಗಳು ತಮ್ಮ ಯೋಗಬಲ ದಿಂದ ನೂರಾರು ವರ್ಷಗಳ ಕಾಲ ವಿಹರಿಸುತ್ತಿದ್ದರೂ–ಅವರಿಗೆ ಆ ಮಹಾ ಕಾಲವು ಅತಿಸ್ವಲ್ಪಸಮಯದಂತೆ ಕಳೆದುಹೋಯಿತು.

ಆತ್ಮಜ್ಞಾನಿಗಳಾದ ಕರ್ದಮರು ಎಲ್ಲ ಸಂಕಲ್ಪಗಳನ್ನೂ ಬಲ್ಲವರಾಗಿ ದ್ದರು. ದೇವಹೂತಿಯು ಸಂತಾನವನ್ನು ಪಡೆಯಲು ಉತ್ಸುಕಳಾಗಿರುವು ದನ್ನು ಅವರು ಗಮನಿಸಿದ್ದರು. ಹಾಗೆಯೇ ಶ್ರೀಭಗವಂತನು ತಮಗೆ ನೀಡಿದ್ದ ಆದೇಶವನ್ನೂ ನೆನಪಿಸಿಕೊಂಡರು. ಆದ್ದರಿಂದ ಅವರು ತಮ್ಮ ರೂಪ ವನ್ನೂ–ತೇಜಸ್ಸನ್ನೂ ಒಂಬತ್ತು ಬಗೆಯಾಗಿ ವಿಭಾಗಿಸಿಕೊಂಡು ಕನ್ಯೆಯರನ್ನು

ಪಡೆಯುವುದಕ್ಕೋಸ್ಕರ ಏಕಾಗ್ರವಾದ ಚಿತ್ತದಿಂದ ಅರ್ಧಾಂಗರೂಪದಲ್ಲಿ ತಮ್ಮ ಪತ್ನಿಯನ್ನು ಭಾವಿಸುತ್ತಾ ಆಕೆಯ ಗರ್ಭದಲ್ಲಿ ವೀರ್ಯವನ್ನು ಸ್ಥಾಪನೆಮಾಡಿದರು. ಅದರ ಫಲವಾಗಿ ದೇವಹೂತಿಯು ಒಟ್ಟಿಗೇ ಒಂಬತ್ತು ಮಂದಿ ಕನ್ಯೆಯರಿಗೆ ಜನ್ಮವನ್ನಿತ್ತಳು. ಅವರೆಲ್ಲರೂ ಸರ್ವಾಂಗಸುಂದರಿಯ ರಾಗಿದ್ದರು. ಅವರ ದೇಹದಿಂದ ಕೆಂದಾವರೆಯ ಸುವಾಸನೆಯು ಸೂಸುತ್ತಿತ್ತು. ಅದೇ ಸಮಯದಲ್ಲಿ ಶುದ್ಧಪ್ರಕೃತಿಯಾದ ದೇವಹೂತಿಯು ತನ್ನ ಪತಿಯಾದ ಕರ್ದಮರು ತಮ್ಮ ಹಿಂದಿನ ಪ್ರತಿಜ್ಞೆಯಂತೆ ಸಂನ್ಯಾಸವನ್ನು ಸ್ವೀಕರಿಸಲು ಬಯಸುತ್ತಿದ್ದಾರೆ–ಎಂಬುದನ್ನು ಗಮನಿಸಿದಳು. ಆಗ ಅವಳು ತನ್ನ ಉಕ್ಕಿಬರುತ್ತಿದ್ದ ದುಃಖದ ಕಣ್ಣೀರನ್ನು ತಡೆದುಕೊಂಡು, ಮೇಲೆ-ಮೇಲೆ ಮಾತ್ರ ಮುಗುಳ್ನಗೆ ನಗುತ್ತಾ, ಕಡುವಾಗಿ ಕಳವಳಗೊಂಡ ಮನಸ್ಸಿನಿಂದ ಸವಿಮಾತಿನಲ್ಲಿ ತನ್ನ ಪತಿಯನ್ನು ಕುರಿತು ಮೆಲ್ಲ-ಮೆಲ್ಲಗೆ ಮಾತನಾಡಿದಳು. ಆಗ ಆಕೆಯು ತಲೆಯನ್ನು ತಗ್ಗಿಸಿಕೊಂಡು ನಖಮಣಿಗಳಿಂದ ಬೆಳಗುತ್ತಿದ್ದ ಅಡಿದಾವರೆಯಿಂದ ನೆಲವನ್ನು ಕೆರೆಯುತ್ತಿದ್ದಳು. (ಶ್ಲೋಕ 36-50)

ದೇವಹೂತಿಯು ತನ್ನ ಪತಿದೇವರಿಗೆ ಹೀಗೆಂದಳು :

"ಪೂಜ್ಯಪಾದರೇ! ತಾವೇನೋ ತಾವು ಮಾಡಿದ್ದ ಪ್ರತಿಜ್ಞೆಯನ್ನು ಪೂರ್ಣವಾಗಿ ನಿಭಾಯಿಸಿಬಿಟ್ಟಿರಿ. ಆದರೂ ನಾನು ತಮ್ಮಲ್ಲಿ ಶರಣಾಗತ ಳಾಗಿದ್ದೇನೆ. ಆದ್ದರಿಂದ ನನಗೆ ತಾವು ಮತ್ತೊಂದು ಅಭಯಪ್ರದಾನವನ್ನು ಮಾಡಬೇಕು. ಬ್ರಾಹ್ಮಣೋತ್ತಮರೇ! ಈ ಕನ್ಯೆಯರಿಗೆ ಯೋಗ್ಯರಾದ ಪತಿಗಳನ್ನು ಹುಡುಕಬೇಕಾಗಿದೆ. ಇದಲ್ಲದೇ ತಾವು ಅರಣ್ಯಕ್ಕೆ ಹೊರಟು ಹೋದಬಳಿಕ ನನ್ನ ಜನನ-ಮರಣರೂಪವಾದ ಶೋಕವನ್ನು ದೂರ ಮಾಡುವುದಕ್ಕೆ ಒಬ್ಬರು ಜೊತೆಯಲ್ಲಿ ಇರಲೇಬೇಕಲ್ಲವೇ? ಪ್ರಭುವೇ! ಇಲ್ಲಿಯವರೆಗೂ ಪರಮಾತ್ಮನಿಗೆ ವಿಮುಖಳಾಗಿ ನಾನು ಇಂದ್ರಿಯವಿಷಯ ಗಳಲ್ಲಿಯೇ ಕಾಲವನ್ನು ಕಳೆದುಬಿಟ್ಟೆನು. ಅದೆಲ್ಲವೂ ವ್ಯರ್ಥಕಾಲಕ್ಷೇಪವೇ ಆಯಿತು. ತಮ್ಮ ಪರಮಪ್ರಭಾವವನ್ನು ನಾನು ಅರಿತಿರಲಿಲ್ಲ. ಅದಕ್ಕಾಗಿಯೇ ನಾನು ಇಂದ್ರಿಯವಿಷಗಳಲ್ಲೇ ಆಸಕ್ತಳಾಗಿದ್ದು ತಮ್ಮಲ್ಲಿ ಅನುರಾಗವನ್ನು ತೋರಿಸುತ್ತಿದ್ದೆನು. ಆದರೆ ಅದೂ ನನ್ನ ಸಂಸಾರಭಯವನ್ನು ನೀಗಿಸುವ ಸಾಮರ್ಥ್ಯವನ್ನು ಹೊಂದಿರಲಿಕ್ಕೇ ಬೇಕು.

ಸಙ್ಗೋ ಯಃ ಸಂಸೃತೇರ್ಹೇತುರಸತ್ಸು ವಿಹಿತೋಽಧಿಯಾ ।
ಸ ಏವ ಸಾಧುಷು ಕೃತೋ ನಿಃಸಙ್ಗತ್ವಾಯ ಕಲ್ಪತೇ ॥೫೫॥

ಅಜ್ಞಾನವಶದಿಂದ ಅಸಜ್ಜನರೊಡನೆ ಮಾಡಿದ ಸಹವಾಸವು ಸಂಸಾರ ಬಂಧನಕ್ಕೆ ಕಾರಣವಾಗುತ್ತದೆ. ಆ ಸಹವಾಸವನ್ನೇ ಸಜ್ಜನರ ಜೊತೆಯಲ್ಲಿ ಮಾಡಿದ್ದೇ ಆದರೆ ಅದರಿಂದ ನಿಸ್ಸಂಗತೆಯು ಉಂಟಾಗುವುದು.

ನೇಹ ಯತ್ಕರ್ಮ ಧರ್ಮಾಯ ನ ವಿರಾಗಾಯ ಕಲ್ಪತೇ ।
ನ ತೀರ್ಥಪದಸೇವಾಯೈ ಜೀವನ್ನಪಿ ಮೃತೋ ಹಿ ಸಃ ॥೫೬॥

ಈ ಸಂಸಾರದಲ್ಲಿ ಯಾವ ಒಬ್ಬ ಮನುಷ್ಯನು ಮಾಡುವ ಕರ್ಮಗಳಿಂದ ಧರ್ಮದ ಸಂಪಾದನೆಯಾಗುವುದಿಲ್ಲವೋ, ವೈರಾಗ್ಯವೂ ಉಂಟಾಗುವುದಿಲ್ಲವೋ, ಮತ್ತು ಭಗವಂತನ ಸೇವೆಯೂ ಆಗುವುದಿಲ್ಲವೋ– ಅಂತಹವನು ಬದುಕಿದ್ದರೂ ಸತ್ತಿರುವಂತೆಯೇ ಸರಿ. ಸ್ವಾಮೀ! ನಾನು ನಿಜವಾಗಿಯೂ ಭಗವಂತನ ಮಾಯೆಯಿಂದ ಮೋಸಹೋದೆನು. ಏಕೆಂದರೆ : ತಮ್ಮಂತಹ ಮುಕ್ತಿಪ್ರದರಾದ ಪತಿದೇವರನ್ನು ಪಡೆದರೂ ಸಂಸಾರ ಬಂಧನದಿಂದ ಬಿಡುಗಡೆಹೊಂದುವಿಕೆಯನ್ನು ಬಯಸದೇ ಹೋದೆನು.”

(ಶ್ಲೋಕ 51-57)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೨೩ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೨೪ನೆಯ ಅಧ್ಯಾಯ

ಶ್ರೀಕಪಿಲಭಗವಂತನ ಅವತಾರ

ಶ್ರೀಮೈತ್ರೇಯರು ಹೇಳುತ್ತಾರೆ :

ನಿರ್ವೇದವಾದಿನೀಮೇವಂ ಮನೋರ್ದುಹಿತರಂ ಮುನಿಃ ।
ದಯಾಲುಃ ಶಾಲಿನೀಮಾಹ ಶುಕ್ಲಾಭಿವ್ಯಾಹೃತಂ ಸ್ಮರನ್ ॥೧॥

ಗುಣಶಾಲಿನಿಯಾದ ಮನುಕುಮಾರಿಯು ಹೀಗೆ ಅನುತಾಪದ

ಮಾತುಗಳನ್ನಾಡಲು, ಕರುಣಾಳುಗಳಾದ ಕರ್ದಮರು, ಶ್ರೀಭಗವಂತನು ತಮಗೆ ಹಿಂದೆ ಹೇಳಿದ್ದ ಮಾತುಗಳನ್ನು ಸ್ಮರಿಸಿಕೊಂಡು ಆಕೆಗೆ ಹೇಳಿದರು :

"ನಿರ್ದೋಷಳಾದ ರಾಜಕುಮಾರಿಯೇ! ನಿನ್ನ ಬಗೆಗೆ ವಿಷಾದಪಟ್ಟು ಕೊಳ್ಳಬೇಡ! ಅವಿನಾಶಿಯಾದ ಭಗವಾನ್ ಶ್ರೀಹರಿಯು ಶೀಘ್ರದಲ್ಲಿಯೇ ನಿನ್ನ ಗರ್ಭಕ್ಕೆ ದಯಮಾಡಿಸುವನು. ಪ್ರಿಯೇ! ನೀನು ಅನೇಕಪ್ರಕಾರವಾದ ವ್ರತಗಳನ್ನು ಪಾಲನೆಮಾಡಿದ್ದೀಯೇ. ಅದರಿಂದ ನಿನಗೆ ಒಳಿತೇ ಆಗುವುದು. ಈಗ ನೀನು ಸಂಯಮ, ನಿಯಮ, ತಪಸ್ಸು ಮತ್ತು ದಾನಾದಿಗಳನ್ನು ಮಾಡುತ್ತಾ ಶ್ರದ್ಧೆಯಿಂದ ಭಗವಂತನನ್ನು ಭಜಿಸುತ್ತಿರು.

ಸ ತ್ವಯಾರಾಧಿತಃ ಶುಕ್ಲೋ ವಿತನ್ವನ್ಮಾಮಕಂ ಯಶಃ ।
ಛೇತ್ತಾ ತೇ ಹೃದಯಗ್ರನ್ಥಿಮೌದರ್ಯೋ ಬ್ರಹ್ಮಭಾವನಃ ॥೪॥

ನೀನು ಹೀಗೆಯೇ ಆರಾಧಿಸುತ್ತಿದ್ದರೆ ಶ್ರೀಹರಿಯು ನಿನ್ನ ಗರ್ಭದಲ್ಲಿ ಅವತಾರಮಾಡಿ ನನ್ನ ಕೀರ್ತಿಯನ್ನು ಹೆಚ್ಚಿಸುವನು ಮತ್ತು ಬ್ರಹ್ಮಜ್ಞಾನವನ್ನು ಉಪದೇಶಮಾಡಿ ನಿನ್ನ ಅಜ್ಞಾನದ ಗಂಟನ್ನು ಕತ್ತರಿಸಿಹಾಕುವನು."

ಶ್ರೀಮೈತ್ರೇಯರು ಹೇಳುತ್ತಾರೆ :

ಎಲೈ ಸಾಧುಶ್ರೇಷ್ಠನಾದ ವಿದುರನೇ! ಕೇಳು. ದೇವಹೂತಿಯು ಪ್ರಜಾಪತಿ ಕರ್ದಮರ ಆದೇಶದಲ್ಲಿ ಗೌರವಬುದ್ಧಿಯನ್ನು ತೋರಿ ಪೂರ್ಣ ವಾದ ನಂಬಿಕೆಯಿಂದ ಜಗದ್ಗುರುವಾದ, ಆದಿಪುರುಷನಾದ ಶ್ರೀಹರಿಯನ್ನು ಚೆನ್ನಾಗಿ ಆರಾಧಿಸತೊಡಗಿದಳು. ಹೀಗೆ ಬಹುಕಾಲವು ಕಳೆಯಲು ಶ್ರೀಭಗವಂತನಾದ ಮಧುಸೂಧನನು ಕರ್ದಮರ ವೀರ್ಯವನ್ನು ಆಶ್ರ ಯಿಸಿ–ಕಟ್ಟಿಗೆಯಿಂದ ಅಗ್ನಿಯು ಉದ್ಭವಿಸುವಂತೆ-ದೇವಹೂತಿಯ ಗರ್ಭ ದಿಂದ ಪ್ರಕಟಗೊಂಡನು. ಆಗ ಆಕಾಶದಲ್ಲಿ ದೇವದುಂದುಭಿಗಳು ಮೊಳಗಿ ದುವು. ಮೋಡಗಳು ಗುಡುಗುತ್ತಾ ಅಮೃತದ ಮಳೆಯನ್ನು ಕರೆದುವು. ಗಂಧರ್ವರು ಗಾನಮಾಡತೊಡಗಿದರು. ಅಪ್ಸರಸ್ತ್ರೀಯರು ನೃತ್ಯಮಾಡತೊಡ ಗಿದರು. ಆಕಾಶದಿಂದ ದೇವತೆಗಳು ಸುರಿಸಿದ ದಿವ್ಯಪುಷ್ಪಗಳ ಮಳೆಯು ಬೀಳತೊಡಗಿತು. ಎಲ್ಲ ದಿಕ್ಕುಗಳಲ್ಲಿಯೂ ಆನಂದವು ಹರಡಿತು. ಜಲಾಶಯ ಗಳ ಜಲಗಳು ನಿರ್ಮಲವಾದುವು. ಎಲ್ಲ ಜೀವಿಗಳ ಮನಸ್ಸುಗಳೂ ಪ್ರಸನ್ನ

ವಾದುವು. ಅದೇ ಸಮಯಕ್ಕೆ ಸರಸ್ವತೀನದಿಯಿಂದ ಸುತ್ತುವರಿಯಲ್ಪಟ್ಟಿದ್ದ ಕರ್ದಮರ ಆಶ್ರಮಕ್ಕೆ ಮರೀಚಿಗಳೇ ಮುಂತಾದ ಮುನಿಗಳ ಸಹಿತ ಶ್ರೀಬ್ರಹ್ಮದೇವರು ದಯಮಾಡಿಸಿದರು.

* ಎಲೈ ಶತ್ರುಸಂಹಾರಕನಾದ ವಿದುರನೇ! ಸಾಕ್ಷಾತ್ ಪರಬ್ರಹ್ಮನಾದ ಭಗವಾನ್ ನಾರಾಯಣನೇ ಸಾಂಖ್ಯಶಾಸ್ತ್ರವನ್ನು ಪ್ರವರ್ತನೆಮಾಡಲು ತನ್ನ ಪರಿಶುದ್ಧಸತ್ತ್ವಮಯವಾದ ಅಂಶದಿಂದ ಅಲ್ಲಿ ಅವತಾರಮಾಡಿದ್ದಾನೆ–ಎಂಬುದು ಸ್ವಯಂಪ್ರಕಾಶರೂ, ಜನ್ಮರಹಿತರೂ ಆದ ಶ್ರೀಬ್ರಹ್ಮದೇವರಿಗೆ ತಿಳಿದುಬಂದಿತ್ತು. ಆದ್ದರಿಂದ ಶ್ರೀಭಗವಂತನು ಮಾಡಬೇಕೆಂದಿದ್ದ ಕಾರ್ಯವನ್ನು ಅವರು ತಮ್ಮ ವಿಶುದ್ಧವಾದ ಚಿತ್ತದಿಂದ ಅಭಿನಂದನೆಮಾಡಿ ಆದರಿಸುತ್ತಾ ತಮ್ಮ ಎಲ್ಲ ಇಂದ್ರಿಯಗಳಿಂದಲೂ ಪ್ರಸನ್ನತೆಯನ್ನು ಪ್ರಕಟಪಡಿಸುತ್ತಾ ಕರ್ದಮರನ್ನು ಕುರಿತು ಹೀಗೆ ಹೇಳಿದರು :

ತ್ವಯಾ ಮೇಽಪಚಿತಿಸ್ತಾತ ಕಲ್ಪಿತಾ ನಿರ್ವ್ಯಲೀಕತಃ ।
ಯನ್ಮೇ ಸಙ್ಗೃಹೇ ವಾಕ್ಯಂ ಭವಾನ್ಮಾನದ ಮಾನಯನ್ ॥೧೨॥

"ವತ್ಸ, ಕರ್ದಮ! ಮಾನ-ಮರ್ಯಾದೆಗಳನ್ನು ಕೊಡುವ ಸಾಧುಶ್ರೇಷ್ಠನಾದ ಪ್ರಿಯಪುತ್ರನೇ! ನನ್ನ ಮಾನವನ್ನು ಕಾಪಾಡುತ್ತಾ ನೀನು

---

* ಸಾಧುಶಿರೋಮಣಿಯಾದ ವಿದುರನು ಒಳಗಿನ ಶತ್ರುಗಳಾದ ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಗಳನ್ನು ದಮನಮಾಡಿದ್ದರಿಂದ ಆತನನ್ನು 'ಶತ್ರುಹನ್'–'ಎಲೈ ಶತ್ರುಸಂಹಾರಿಯೇ!'–ಎಂದು ಸಂಬೋಧನೆಮಾಡಿದೆ.

1 ಇಲ್ಲಿ ಕಪಿಲಾವತಾರವನ್ನು ಹೇಳಿದೆ. ಶ್ರೀಗೀತೆಯ ವಿಭೂತಿಯೋಗದ ಅಧ್ಯಾಯದಲ್ಲಿ ಭಗವಂತನು–'ಸಿದ್ಧರಲ್ಲಿ ತಾನೇ ಕಪಿಲಮುನಿ' 'ಸಿದ್ಧಾನಾಂ ಕಪಿಲೋ ಮುನಿಃ'–ಎಂದು ಸಾರುತ್ತಾನೆ. ಆ ಕಪಿಲರನ್ನೇ ಸಾಂಖ್ಯಶಾಸ್ತ್ರಪ್ರವರ್ತಕರೆಂದು ಇಲ್ಲಿ ಹೇಳಿದೆ. ಸಾಂಖ್ಯದಲ್ಲಿ ನಿರೀಶ್ವರಸಾಂಖ್ಯ ಮತ್ತು ಸೇಶ್ವರಸಾಂಖ್ಯ–ಎಂದು ಎರಡು ಪ್ರಕಾರಗಳಿವೆ. ಇಲ್ಲಿ ಹೇಳಿರುವುದು ಸೇಶ್ವರಸಾಂಖ್ಯವನ್ನು ತೊಡಗಿಸಿದ ಶ್ರೀವಾಸುದೇವನ ಅವತಾರವಾದ ಕಪಿಲಮುನಿಯನ್ನು. 'ಋಷಿಂ ಪ್ರಸೂತಂ ಕಪಿಲಂ'–ಎಂದು ಶ್ವೇತಾಶ್ವತರೋಪನಿಷತ್ತು ಈತನನ್ನೇ ಕೊಂಡಾಡುತ್ತದೆ. 'ಮಹರ್ಷಿಃ ಕಪಿಲಾಚಾರ್ಯಃ' ಎಂದು ಶ್ರೀವಿಷ್ಣುಸಹಸ್ರನಾಮಸ್ತುತಿಯೂ ಈತನನ್ನೇ ಸ್ತುತಿಸುತ್ತದೆ. 'ದದೃಶುಃ ಕಪಿಲಂ ತತ್ರ ವಾಸುದೇವಂ ಸನಾತನಮ್'–ಎಂದು ವಾಲ್ಮೀಕಿರಾಮಾಯಣದ ಬಾಲ

ನನ್ನ ಆಜ್ಞೆಯನ್ನು ಪಾಲಿಸಿದೆ. ಆ ಮೂಲಕ ಕಪಟವಿಲ್ಲದ ಭಾವದಿಂದ ನನ್ನ ಪೂಜೆಯನ್ನು ಸಲ್ಲಿಸಿರುವೆ.

ಏತಾವತ್ಯೇವ ಶುಶ್ರೂಷಾ ಕಾರ್ಯಾ ಪಿತರಿ ಪುತ್ರಕೈಃ ।
ಬಾಢಮಿತ್ಯನುಮನ್ಯೇತ ಗೌರವೇಣ ಗುರೋರ್ವಚಃ ॥೧೩॥

ಮಕ್ಕಳು ತಮ್ಮ ತಂದೆಗೆ ಸಲ್ಲಿಸಬೇಕಾಗಿರುವ ಅತ್ಯಂತ ಶ್ರೇಷ್ಠವಾದ ಸೇವೆಯೇನೆಂದರೆ : 'ಅಪ್ಪಣೆ, ಅಪ್ಪಾ!'–ಎಂದು ಹೇಳಿ ಅತ್ಯಂತ ಆದರದಿಂದ ಆತನ ಆಣತಿಯನ್ನು ಸ್ವೀಕರಿಸುವುದು.

ಮಗು! ನೀನು ಸಭ್ಯನು. ನಿನ್ನ ಈ ಸುಂದರಿಯಾದ ಕನ್ಯೆಯರು ತಮ್ಮ ವಂಶಸಂತತಿಗಳ ಮೂಲಕ ಹಲವಾರು ಬಗೆಯ ಸೃಷ್ಟಿಗಳನ್ನು ವಿಸ್ತಾರಗೊಳಿಸುವರು. ಈಗ ನೀನು ಈ ಮರೀಚಿಗಳೇ ಮುಂತಾದ ಮುನಿವರ್ಯರಿಗೆ ಇವರ ಸ್ವಭಾವ ಮತ್ತು ರುಚಿಗಳಿಗೆ ತಕ್ಕಂತೆ ನಿನ್ನ ಕನ್ಯೆಯರನ್ನು ವಿವಾಹಮಾಡಿಕೊಟ್ಟು ಪ್ರಪಂಚದಲ್ಲಿ ನಿನ್ನ ಸತ್ಕೀರ್ತಿಯನ್ನು ಹರಡುವವನಾಗು. ಮುನಿವರ್ಯನೇ! ಸಮಸ್ತಪ್ರಾಣಿಗಳಿಗೂ ನಿಧಿಯಾಗಿ ಅವರ ಅಭೀಷ್ಟಗಳನ್ನು ಈಡೇರಿಸುವ ಆ ಆದಿಪುರುಷನಾದ ಶ್ರೀಮನ್ನಾರಾಯಣನೇ ಈಗ ತನ್ನ ಮಾಯಾಜ್ಞಾನಶಕ್ತಿಯಿಂದ ಕಪಿಲನೆಂಬ ಹೆಸರಿನಿಂದ ಅವತಾರಮಾಡಿರುತ್ತಾನೆ–ಎಂಬುದನ್ನು ನಾನು ಬಲ್ಲೆನು."

ಅನಂತರ ಬ್ರಹ್ಮದೇವರು ದೇವಹೂತಿಯನ್ನು ಹೀಗೆ ಅಭಿನಂದನೆ ಮಾಡಿದರು :

"ರಾಜಕುವರಿಯೇ! ಹೊನ್ನಿನಂತೆ ಹೊಳೆಯುವ ಕೇಶಗಳಿಂದಲೂ,

ಕಾಂಡದಲ್ಲಿ ಸಗರಪುತ್ರರನ್ನು ಭಸ್ಮಮಾಡಿದುದಾಗಿ ಹೇಳಿರುವ ಶ್ರೀಭಗವಂತನೂ ಇವನೇ. ವೇದಾಂತಕ್ಕೆ ಕೆಲವು ವಿಷಯಗಳಲ್ಲಿ ವಿರುದ್ಧವಾಗಿರುವ ನಿರೀಶ್ವರಸಾಂಖ್ಯವೆಂಬ ದರ್ಶನವನ್ನು ಉಪದೇಶಮಾಡಿದ ಕಪಿಲರು ಬೇರೆ. ಅವರು ಅಗ್ನಿಯ ಅವತಾರ. 'ಅಗ್ನಿಃ ಸ ಕಪಿಲೋ ನಾಮ ಸಾಂಖ್ಯಶಾಸ್ತ್ರಪ್ರವರ್ತಕಃ'–ಎಂದು ಮಹಾಭಾರತವು (III-22-21) ಅವರನ್ನು ನಿರ್ದೇಶಿಸುತ್ತದೆ. ಇಲ್ಲಿ ಕಪಿಲಮಹರ್ಷಿಗಳು ತನ್ನ ತಾಯಿಗೆ ಬೋಧಿಸುವುದು ಸೇಶ್ವರಸಾಂಖ್ಯ. ಭಗವದ್ಭಕ್ತಿಯನ್ನು ಸ್ಪಷ್ಟವಾಗಿಯೇ ಹೇಳಿರುವ ದರ್ಶನ ಇದು–ಎಂಬುದು ಮುಂದಿನ ಅಧ್ಯಾಯದಲ್ಲೇ ಸ್ಪಷ್ಟಪಡುತ್ತದೆ. (ಶ್ಲೋಕ ೧೦)

ತಾವರೆಹೂವಿನಂತೆ ಕಂಗೊಳಿಸುವ ಕಣ್ಣುಗಳಿಂದಲೂ, ಪದ್ಮಾಂಕಿತವಾದ ಪಾದಾರವಿಂದಗಳಿಂದಲೂ ಪ್ರಕಾಶಮಾನನಾಗಿರುವ ಕೈಟಭಮರ್ದನನಾದ ಶ್ರೀಮಹಾವಿಷ್ಣುವೇ ಜ್ಞಾನ-ವಿಜ್ಞಾನಗಳ ಮೂಲಕ ಕರ್ಮಗಳ ವಾಸನೆ ಗಳನ್ನು ನಿರ್ಮೂಲಗೊಳಿಸುವುದಕ್ಕೋಸ್ಕರ ಶಿಶುವಾಗಿ ನಿನ್ನ ಗರ್ಭವನ್ನು ಪ್ರವೇಶಿಸಿದ್ದಾನಮ್ಮಾ. ಈತನು ಅವಿದ್ಯೆಯಿಂದ ಉಂಟಾದ ಮೋಹದ ಗಂಟುಗಳನ್ನು ಕತ್ತರಿಸಿಹಾಕಿ ಭೂಮಿಯಲ್ಲಿ ಯಥೇಚ್ಛವಾಗಿ ಸಂಚಾರಮಾಡು ವನು. ಈತನು ಸಿದ್ಧರ ಗಣಗಳಿಗೆ ಸ್ವಾಮಿಯಾಗುವನು. ಸಾಂಖ್ಯಾಚಾರ್ಯ ರಿಗೂ ಸಮ್ಮಾನ್ಯಯೋಗ್ಯನಾಗುವನು. 'ಕಪಿಲ'–ಎಂಬ ಹೆಸರಿನಿಂದ ಪ್ರಸಿದ್ಧ ನಾಗಿ ಲೋಕದಲ್ಲಿ ನಿನ್ನ ಕೀರ್ತಿಯನ್ನು ಹರಡುವನು."

(ಶ್ಲೋಕ 1-19)

ಶ್ರೀಮೈತ್ರೇಯರು ಹೇಳುತ್ತಾರೆ :

ಜಗತ್ತನ್ನೇ ಸೃಷ್ಟಿಮಾಡಿದ ಶ್ರೀಬ್ರಹ್ಮದೇವರು ಹೀಗೆ ಕರ್ದಮ-ದೇವಹೂತಿಯರನ್ನು ಸಂತೈಸಿ ಸನಕಾದಿಕುಮಾರರನ್ನೂ–ನಾರದರನ್ನೂ ಜೊತೆಯಲ್ಲಿ ಕರೆದುಕೊಂಡು ಹಂಸಾರೂಢರಾಗಿ ದಿವ್ಯವಾದ ತಮ್ಮ ಸತ್ಯ ಲೋಕಧಾಮಕ್ಕೆ ತೆರಳಿದರು. ಹಾಗೆ ಅವರು ಹೋಗಿಬಂದನಂತರ ಕರ್ದಮರು ಅವರ ಆಜ್ಞಾನುಸಾರವಾಗಿ ಮರೀಚಿಗಳೇ ಮುಂತಾದ ಪ್ರಜಾಪತಿಗಳಿಗೆ ತನ್ನ ಕನ್ಯೆಯರನ್ನು ಕೊಟ್ಟು ವಿಧಿಪೂರ್ವಕವಾಗಿ ವಿವಾಹ ಮಾಡಿದರು. ಅವರು ತಮ್ಮ ಕನ್ಯಾಮಣಿಗಳಲ್ಲಿ 'ಕಲಾ' ಎಂಬಾಕೆಯನ್ನು ಮರೀಚಿಮಹರ್ಷಿಗಳಿಗೂ, 'ಅನಸೂಯೆ'ಯನ್ನು ಅತ್ರಿಮಹರ್ಷಿಗಳಿಗೂ, 'ಶ್ರದ್ಧೆ'ಯನ್ನು ಮಹರ್ಷೀ ಅಂಗಿರಸರಿಗೂ, 'ಹವಿರ್ಭೂ' ಎಂಬಾಕೆ ಯನ್ನು ಪುಲಸ್ತ್ಯ ಮಹರ್ಷಿಗಳಿಗೂ ಕೊಟ್ಟು ವಿವಾಹಮಾಡಿದರು. ಮಹರ್ಷೀ ಪುಲಹರಿಗೆ–ಅವರಿಗೆ ಅನುರೂಪೆಯಾದ 'ಗತಿ' ಎಂಬ ಕನ್ಯಾ ರತ್ನವನ್ನೂ, ಕ್ರತುಮಹರ್ಷಿಗಳಿಗೆ ಸಾಧ್ವೀಮಣಿಯಾದ 'ಕ್ರಿಯಾ' ಎಂಬ ಕನ್ಯೆಯನ್ನೂ, ಭೃಗುಮಹರ್ಷಿಗಳಿಗೆ 'ಖ್ಯಾತಿ' ಎಂಬ ಕನ್ಯಾಮಣಿಯನ್ನೂ, ಮಹರ್ಷೀ ವಸಿಷ್ಠರಿಗೆ 'ಅರುಂಧತೀ' ಎಂಬ ಕನ್ಯಾರತ್ನವನ್ನೂ, ಅಥರ್ವಾ

ಮಹರ್ಷಿಗಳಿಗೆ ಯಜ್ಞಕರ್ಮವನ್ನು ವಿಸ್ತರಿಸುವ 'ಶಾಂತಿ' ಎಂಬ ಕನ್ಯಾ ರತ್ನವನ್ನೂ ಕೊಟ್ಟು ವಿವಾಹಮಾಡಿದರು. ಹಾಗೆ ಮದುವೆಮಾಡಿಕೊಂಡ ಮಹರ್ಷಿಗಳಿಗೂ ಮತ್ತು ಅವರ ಪತ್ನಿಯರಿಗೂ ಕರ್ದಮರು ಪ್ರೀತಿಯಿಂದ ಸತ್ಕಾರಮಾಡಿದರು. ಹೀಗೆ ವಿವಾಹಮಾಡಿಕೊಂಡ ಆ ಮಹರ್ಷಿಗಳೆಲ್ಲರೂ ಕರ್ದಮರ ಅನುಮತಿಯನ್ನು ಪಡೆದು ಪರಮಾನಂದದಿಂದ ತಮ್ಮ-ತಮ್ಮ ಆಶ್ರಮಗಳಿಗೆ ತೆರಳಿದರು.

ದೇವಾಧಿದೇವನಾದ ಸಾಕ್ಷಾತ್ ಶ್ರೀಹರಿಯೇ ತಮ್ಮ ಮನೆಯಲ್ಲಿ ಅವತರಿಸಿರುವುದನ್ನು ಗಮನಿಸಿದ ಕರ್ದಮರು ಏಕಾಂತದಲ್ಲಿ ಆ ಪುತ್ರನ ಬಳಿಗೆ ಹೋಗಿ ಆತನಿಗೆ ನಮಸ್ಕಾರಮಾಡಿ ಹೀಗೆ ವಿಜ್ಞಾಪಿಸಿದರು :

(ಶ್ಲೋಕ 20-26)

ಅಹೋ ಪಾಪಚ್ಯಮಾನಾನಾಂ ನಿರಯೇ ಸ್ವೈರಮಜ್ಗಲೈಃ ।
ಕಾಲೇನ ಭೂಯಸಾ ನೂನಂ ಪ್ರಸೀದನ್ತೀಹ ದೇವತಾಃ ॥೨೭॥

"ಅಹಾ! ನನ್ನದು ಎಂತಹ ಪುಣ್ಯ! ತಮ್ಮ ಪಾಪಕರ್ಮಗಳ ಫಲವಾಗಿ ಈ ದುಃಖಮಯವಾದ ಸಂಸಾರದಲ್ಲಿ ಬಗೆ-ಬಗೆಯಾಗಿ ಪೀಡೆಗಳನ್ನು ಅನುಭವಿಸುತ್ತಿರುವ ಮನುಷ್ಯರ ಮೇಲೆ ದೇವತಾಗಣಗಳು ಪ್ರಸನ್ನರಾಗ ಬೇಕಾದರೆ ಬಹಳ ಕಾಲ ಬೇಕು. ಆದರೆ ಯೋಗಿಜನರಿಗೂ ದುರ್ಲಭನಾದ ಪರಮಪುರುಷನೇ ಇಷ್ಟು ಶೀಘ್ರವಾಗಿ ಮತ್ತು ಸುಲಭವಾಗಿ ನನ್ನ ಮನೆಯಲ್ಲಿ ಅವತಾರಮಾಡಿರುವನಲ್ಲಾ!

ಬಹುಜನ್ಮವಿಪಕ್ವೇನ ಸಮ್ಯಗ್ಯೋಗಸಮಾಧಿನಾ ।
ದ್ರಷ್ಟುಂ ಯತನ್ತೇ ಯತಯಃ ಶೂನ್ಯಾಗಾರೇಷು ಯತ್ಪದಮ್ ॥೨೮॥

ಸ ಏವ ಭಗವಾನದ್ಯ ಹೇಲನಂ ನಗಣಯ್ಯ ನಃ ।
ಗೃಹೇಷು ಜಾತೋ ಗ್ರಾಮ್ಯಾಣಾಂ ಯಃ ಸ್ವಾನಾಂ ಪಕ್ಷಪೋಷಣಃ ॥

ಆತನ ಸ್ವರೂಪವನ್ನು ಯೋಗಿಗಳು ಅನೇಕಜನ್ಮಗಳಿಂದ ಸಿದ್ಧವಾದ ಸಮಾಧಿಯ ಮೂಲಕ ಏಕಾಂತದಲ್ಲಿ ಸಾಕ್ಷಾತ್ಕರಿಸಲು ಪ್ರಯತ್ನಪಡು ತ್ತಾರೆ. ಆದರೆ ಭಕ್ತರಕ್ಷಕನಾದ ಅದೇ ಭಗವಂತನು ವಿಷಯಾಸಕ್ತರಾದ ನಮ್ಮಿಂದ ಒದಗಬಹುದಾದ ಅಪಚಾರಗಳನ್ನೂ ಲೆಕ್ಕಿಸದೇ ಇಂದು ನಮ್ಮ

ಮನೆಯಲ್ಲಿ ಆವಿರ್ಭವಿಸುವ ಅನುಕಂಪೆಯನ್ನು ತೋರಿದ್ದಾನಲ್ಲವೇ? ಇದು ಎಂತಹ ಭಾಗ್ಯ!

ಸ್ವೀಯಂ ವಾಕ್ಯಮೃತಂ ಕರ್ತುಮವತೀರ್ಣೋಽಸಿ ಮೇ ಗೃಹೇ ।
ಚಿಕೀರ್ಷುರ್ಭಗವಾನ್ ಜ್ಞಾನಂ ಭಕ್ತಾನಾಂ ಮಾನವರ್ಧನಃ ॥೩೦॥

ಸ್ವಾಮಿಯೇ! ವಾಸ್ತವವಾಗಿ ನೀನು ನಿನ್ನ ಭಕ್ತರ ಗೌರವವನ್ನು ಬೆಳೆಸುವವನೇ ಆಗಿದ್ದೀಯೆ. ಆಡಿದ ಮಾತನ್ನು ಸತ್ಯಗೊಳಿಸುವುದಕ್ಕಾಗಿ ಮತ್ತು ಸಾಂಖ್ಯಯೋಗವನ್ನು ಉಪದೇಶಮಾಡುವುದಕ್ಕಾಗಿ ನೀನು ಇಂದು ಇಲ್ಲಿ ಅವತರಿಸಿದ್ದೀಯೆ.

ತಾನ್ಯೇವ ತೇಽಭಿರೂಪಾಣಿ ರೂಪಾಣಿ ಭಗವಂಸ್ತವ ।
ಯಾನಿ ಯಾನಿ ಚ ರೋಚನ್ತೇ ಸ್ವಜನಾನಾಮರೂಪಿಣಃ ॥೩೧॥

ಭಗವಂತನೇ! ನೀನು ಅರೂಪನು. ಆದರೆ ನಿನ್ನ ಸ್ವಜನರಾದ ಭಕ್ತರಿಗೆ ಯಾವ-ಯಾವ ರೂಪಗಳು ರುಚಿಸುತ್ತವೆಯೋ–ಆಯಾ ರೂಪಗಳನ್ನೇ ಅಭಿರೂಪವಾದ ರೂಪಗಳನ್ನಾಗಿ ಸ್ವೀಕರಿಸುತ್ತೀಯೆ.

ತ್ವಾಂ ಸೂರಿಭಿಸ್ತತ್ತ್ವಬುಭುತ್ಸಯಾದ್ಧಾ
ಸದಾಭಿವಾದಾರ್ಹಣಪಾದಪೀಠಮ್ ।
ಐಶ್ವರ್ಯವೈರಾಗ್ಯಯಶೋಽವಬೋಧ-
ವೀರ್ಯಶ್ರಿಯಾ ಪೂರ್ತಮಹಂ ಪ್ರಪದ್ಯೇ ॥೩೨॥

ತತ್ತ್ವಜ್ಞಾನವನ್ನು ಬಯಸುವ ವಿದ್ವಾಂಸರು ಸದಾ ವಂದಿಸುವ ಪಾದಪೀಠವುಳ್ಳವನು ನೀನು. ಐಶ್ವರ್ಯ, ವೈರಾಗ್ಯ, ಯಶಸ್ಸು, ಜ್ಞಾನ, ವೀರ್ಯ ಮತ್ತು ಶ್ರೀ–ಎಂಬ ಆರು ಐಶ್ವರ್ಯಗಳಿಂದ ಪರಿಪೂರ್ಣನಾಗಿರುವವನು. ಇಂತಹ ನಿನ್ನನ್ನು ಶರಣುಹೊಂದುತ್ತೇನೆ.

ಪರಂ ಪ್ರಧಾನಂ ಪುರುಷಂ ಮಹಾನ್ತಂ
ಕಾಲಂ ಕವಿಂ ತ್ರಿವೃತಂ ಲೋಕಪಾಲಮ್ ।
ಆತ್ಮಾನುಭೂತ್ಯಾನುಗತಪ್ರಪಞ್ಚಂ
ಸ್ವಚ್ಛನ್ದಶಕ್ತಿಂ ಕಪಿಲಂ ಪ್ರಪದ್ಯೇ ॥೩೩॥

ಓ ಭಗವಂತನೇ! ನೀನು ಸಾಕ್ಷಾತ್ ಪರಬ್ರಹ್ಮಪುರುಷೋತ್ತಮನು. ಎಲ್ಲ ಶಕ್ತಿಗಳೂ ನಿನಗೆ ಅಧೀನವಾಗಿವೆ. ಪ್ರಕೃತಿ, ಪುರುಷ, ಮಹತ್ತತ್ತ್ವ, ಕಾಲ, ವಿವಿಧವಾದ ಅಹಂಕಾರಗಳು, ಸಮಸ್ತಲೋಕಗಳು ಮತ್ತು ಲೋಕ ಪಾಲಕರು–ಈ ಎಲ್ಲವುದರ ರೂಪನೂ, ಇವುಗಳ ಪಾಲಕನೂ ನೀನೇ ಆಗಿರುವೆ. ಮಹಾಪ್ರಳಯಕಾಲದಲ್ಲಿ ಚೈತನ್ಯಶಕ್ತಿಯಿಂದ ಇವೆಲ್ಲವನ್ನೂ ನಿನ್ನಲ್ಲಿ ಅಡಗಿಸಿಕೊಂಡು, ಎಲ್ಲವನ್ನೂ ಮೀರಿರುವವನೂ ಆಗಿದ್ದೀಯೆ. ಇಂತಹ ನಿನ್ನನ್ನು ಶರಣುಹೊಂದುತ್ತೇನೆ. ಸ್ವಾಮೀ, ಕಪಿಲದೇವನೇ!

ಆ ಸ್ಮಾಭಿಪೃಚ್ಛೇಽದ್ಯ ಪತಿಂ ಪ್ರಜಾನಾಂ
ತ್ವಯಾವತೀರ್ಣರ್ಣ ಉತಾಪ್ತಕಾಮಃ ।
ಪರಿವ್ರಜತ್ಪದವೀಮಾಸ್ಥಿತೋಽಹಂ
ಚರಿಷ್ಯೇ ತ್ವಾಂ ಹೃದಿ ಯುಞ್ಜನ್ವಿಶೋಕಃ ॥೩೪॥

“ಪ್ರಭೋ! ನಿನ್ನ ಕೃಪೆಯಿಂದ ನಾನು ದೇವಋಣ, ಋಷಿಋಣ ಮತ್ತು ಪಿತೃಋಣ–ಎಂಬ ಮೂರು ಋಣಗಳಿಂದಲೂ ಮುಕ್ತನಾದೆನು. ನನ್ನ ಎಲ್ಲ ಮನೋರಥಗಳೂ ಪೂರ್ಣವಾದುವು. ಈಗ ನಾನು ಸಂನ್ಯಾಸ ಮಾರ್ಗವನ್ನು ಹಿಡಿದು, ನಿನ್ನನ್ನೇ ಧ್ಯಾನಿಸುತ್ತಾ ಶೋಕರಹಿತನಾಗಿ ಸಂಚರಿಸೋಣವೆಂದಿದ್ದೇನೆ. ಎಲ್ಲ ಪ್ರಜೆಗಳಿಗೂ ನೀನು ಸ್ವಾಮಿಯಾಗಿದ್ದೀಯೆ. ಆದ್ದರಿಂದ ಇದಕ್ಕೆ ನಿನ್ನ ಆಜ್ಞೆ-ಅನುಮತಿಗಳನ್ನು ಪ್ರಾರ್ಥಿಸುತ್ತೇನೆ.”

ಭಗವಂತರಾದ ಕಪಿಲರು ಶ್ರೀಕರ್ದಮರಿಗೆ ಹೀಗೆ ಉತ್ತರಿಸಿದರು :

“ಎಲೈ ಮುನೀಂದ್ರನೇ! ವೈದಿಕವಾದ ಮತ್ತು ಲೌಕಿಕವಾದ ಯಾವುದೇ ಕರ್ಮವಾದರೂ ಅವೆಲ್ಲಕ್ಕೂ ನನ್ನ ಹೇಳಿಕೆಯೇ ಪ್ರಮಾಣವು. ‘ನಿನ್ನ ಮನೆಯಲ್ಲಿಯೇ ನಾನು ಜನ್ಮವನ್ನೆತ್ತುವೆನು’–ಎಂದು ನಿನಗೆ ವಾಗ್ದಾನ ಮಾಡಿದ್ದೆನಲ್ಲವೇ? ಅದನ್ನು ಸತ್ಯಗೊಳಿಸುವುದಕ್ಕಾಗಿಯೇ ಈ ಅವತಾರವನ್ನು ಮಾಡಿದ್ದೇನೆ. ಅಂತೆಯೇ ಲಿಂಗಶರೀರದಿಂದ ಬಿಡುಗಡೆಹೊಂದುವ ಬಯಕೆಯುಳ್ಳ ಮುನಿಗಳಿಗೆ ಆತ್ಮದರ್ಶನಕ್ಕೆ ಉಪಯೋಗವಾಗುವ ಪ್ರಕೃತಿಯೇ ಮುಂತಾದ ತತ್ತ್ವಗಳನ್ನು ವಿವೇಚನೆಮಾಡುವುದಕ್ಕಾಗಿಯೂ ನನ್ನ ಈ ಅವತಾರವಾಗಿದೆ. ಆತ್ಮಜ್ಞಾನದ ಈ ಸೂಕ್ಷ್ಮವಾದ ಮಾರ್ಗವು

ಬಹಳ ಕಾಲದಿಂದಲೂ ಲುಪ್ತವಾಗಿಬಿಟ್ಟಿದೆ. ಇದನ್ನು ಮತ್ತೆ ಪ್ರವರ್ತನೆ ಮಾಡುವುದಕ್ಕಾಗಿಯೇ ನಾನು ಈ ದೇಹವನ್ನು ಕೈಗೊಂಡಿದ್ದೇನೆ–ಎಂದು ತಿಳಿ. ಮುನಿವರ್ಯನೇ! ನಾನು ಅನುಮತಿ ಕೊಟ್ಟಿದ್ದೇನೆ. ಇನ್ನು ನೀನು ನಿನ್ನ ಇಷ್ಟಾನುಸಾರವಾಗಿ ಹೋಗಬಹುದು. ಸಮಸ್ತಕರ್ಮಗಳನ್ನೂ ನನಗೆ ಸಮರ್ಪಣೆಮಾಡುತ್ತಾ, ದುರ್ಜಯವಾಗಿರುವ ಮೃತ್ಯುವನ್ನು ಗೆದ್ದು ಮೋಕ್ಷ ಪದವನ್ನು ಪಡೆಯುವುದಕ್ಕಾಗಿ ನನ್ನನ್ನು ಭಜಿಸುತ್ತಿರು. ನಾನು ಸ್ವಯಂಜ್ಯೋತಿಯು ; ಸಮಸ್ತಜೀವಗಳ ಹೃದಯಗುಹೆಗಳಲ್ಲಿ ಅಡಗಿರುವ ಪರಮಾತ್ಮನು. ಇಂತಹ ನನ್ನನ್ನು ನೀನು ನಿನ್ನ ಶುದ್ಧವಾದ ಬುದ್ಧಿಯಿಂದ ನಿನ್ನೊಳಗೇ ಯಾವಾಗ ಸಾಕ್ಷಾತ್ಕರಿಸಿಕೊಳ್ಳುವೆಯೋ–ಆಗ ನೀನು ಎಲ್ಲ ಶೋಕಗಳನ್ನೂ ಕಳೆದುಕೊಂಡು ನಿರ್ಭಯದಿಂದ ಮೋಕ್ಷಪದವನ್ನು ಪಡೆಯುವೆ. ತಾಯಿಯಾದ ದೇವಹೂತಿಗೂ ನಾನು ಸಮಸ್ತಕರ್ಮಗಳನ್ನೂ ಶಮನಗೊಳಿಸುವ ಆತ್ಮಜ್ಞಾನವನ್ನು ಕೊಡುವೆನು. ಅದರಿಂದ ಆಕೆಯು ಈ ಸಂಸಾರರೂಪವಾದ ಭಯದಿಂದ ಬಿಡುಗಡೆಹೊಂದುವಳು.”

(ಶ್ಲೋಕ 35-40)

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ವಿದುರನೇ! ಭಗವಂತನಾದ ಕಪಿಲನು ಹೀಗೆ ಹೇಳಿದೊಡನೆಯೇ ಪ್ರಜಾಪತಿಕರ್ದಮರು ಅವನನ್ನು ಪ್ರದಕ್ಷಿಣೆಮಾಡಿ ಪ್ರಸನ್ನವಾದ ಮನಸ್ಸಿನಿಂದ ಅರಣ್ಯಕ್ಕೆ ಹೊರಟುಹೋದರು. ಅಲ್ಲಿ ಅಹಿಂಸಾಮಯವಾದ ಸಂನ್ಯಾಸಧರ್ಮವನ್ನು ಸ್ವೀಕರಿಸಿ, ಮೌನವನ್ನವಲಂಬಿಸಿ, ಪರಮಾತ್ಮನೊಬ್ಬನನ್ನೇ ಶರಣುಹೊಂದಿ, ಅಗ್ನಿಯನ್ನೂ–ಆಶ್ರಮವನ್ನೂ ತ್ಯಾಗಮಾಡಿ ಸಂಗರಹಿತರಾಗಿ ಭೂಮಿಯಲ್ಲಿ ಸಂಚರಿಸತೊಡಗಿದರು. ವ್ಯಕ್ತ-ಅವ್ಯಕ್ತಗಳೆರಡನ್ನೂ ಮೀರಿ, ತ್ರಿಗುಣಾತೀತವಾಗಿ–ತ್ರಿಗುಣಗಳನ್ನೂ ಪ್ರಕಾಶಪಡಿಸುತ್ತಿರುವ ಯಾವ ಪರಬ್ರಹ್ಮವುಂಟೋ–ಅದರಲ್ಲಿಯೇ ತಮ್ಮ ಮನಸ್ಸನ್ನು ಲಯಗೊಳಿಸಿದರು. ಅಹಂಕಾರ, ಮಮಕಾರ ಮತ್ತು ಸುಖ-ದುಃಖಗಳೇ ಮುಂತಾದ ದ್ವಂದ್ವಗಳಿಂದ ಬಿಡುಗಡೆಹೊಂದಿ, ಸಮದರ್ಶಿಗಳಾಗಿ ಎಲ್ಲದರಲ್ಲಿಯೂ ತಮ್ಮ ಆತ್ಮವನ್ನೇ ಸಂದರ್ಶಿಸತೊಡಗಿದರು. ಅವರ ಬುದ್ಧಿಯು ಒಳಮುಖವಾಯಿತು ; ಶಾಂತವಾಯಿತು. ಆ ಸ್ಥಿತಿಯಲ್ಲಿ ಅವರು ಅಲೆ

ಗಳಿಲ್ಲದೇ ಇರುವ ಪ್ರಶಾಂತವೂ, ಗಂಭೀರವೂ ಆದ ಸಾಗರದಂತೆ ಕಂಡು ಬರುತ್ತಿದ್ದರು. ಪರಮಭಕ್ತಿಭಾವದಿಂದ ಸರ್ವಾಂತರ್ಯಾಮಿಯೂ-ಸರ್ವಜ್ಞನೂ ಆಗಿರುವ ಶ್ರೀವಾಸುದೇವನಲ್ಲಿ ಚಿತ್ತದ ಸ್ಥೈರ್ಯವುಂಟಾಗಲು, ಅವರು ಎಲ್ಲ ಕಟ್ಟುಗಳಿಂದಲೂ ಬಿಡುಗಡೆಹೊಂದಿದರು. ಅವರು ಸಮಸ್ತ ಭೂತಗಳಲ್ಲಿಯೂ ತಮ್ಮ ಆತ್ಮವಾದ ಶ್ರೀಹರಿಯೂ ಮತ್ತು ಆತ್ಮಸ್ವರೂಪನಾದ ಆ ಶ್ರೀಹರಿಯಲ್ಲಿ ಸಮಸ್ತಭೂತಗಳೂ ಇರುವುದನ್ನು ನೋಡತೊಡಗಿದರು.

(ಶ್ಲೋಕ 41-46)

ಇಚ್ಛಾದ್ವೇಷವಿಹೀನೇನ ಸರ್ವತ್ರ ಸಮಚೇತಸಾ ।
ಭಗವದ್ಭಕ್ತಿಯುಕ್ತೇನ ಪ್ರಾಪ್ತಾ ಭಾಗವತೀ ಗತಿಃ ॥೪೭॥

ಈ ರೀತಿ ಕರ್ದಮಮುನಿಗಳು ಇಚ್ಛೆ-ದ್ವೇಷಗಳನ್ನು ತೊರೆದು ಎಲ್ಲೆಲ್ಲಿಯೂ ಸಮಬುದ್ಧಿಯುಳ್ಳವರಾಗಿ ಭಗವದ್ಭಕ್ತಿಯಿಂದ ಸಂಪನ್ನರಾಗಿ ಪರಮಪದವನ್ನು ಪಡೆದರು.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೨೪ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೨೫ನೆಯ ಅಧ್ಯಾಯ

ದೇವಹೂತಿಯ ಪ್ರಶ್ನೆಗೆ ಕಪಿಲರಿಂದ ಭಕ್ತಿಯೋಗದ ಹಿರಿಮೆಯ ವರ್ಣನೆ

ಶೌನಕರು ಹೇಳುತ್ತಾರೆ :

ಕಪಿಲಸ್ತತ್ತ್ವಸಂಖ್ಯಾತಾ ಭಗವಾನಾತ್ಮಮಾಯಯಾ ।
ಜಾತಃ ಸ್ವಯಮಜಃ ಸಾಕ್ಷಾದಾತ್ಮಪ್ರಜ್ಞಪ್ತಯೇ ನೃಣಾಮ್ ॥೧॥

"ಸೂತಪುರಾಣಿಕರೇ! ಭಗವಂತನಾದ ನಾರಾಯಣನು ಜನ್ಮರಹಿತನಾಗಿದ್ದರೂ ಜನರಿಗೆ ಆತ್ಮಜ್ಞಾನವನ್ನು ಉಪದೇಶಮಾಡುವುದಕ್ಕಾಗಿ ತನ್ನ ಮಾಯೆಯಿಂದ ತತ್ತ್ವಗಳನ್ನು ಲೆಕ್ಕಿಸುವ ಸಾಂಖ್ಯದರ್ಶನಪ್ರವರ್ತಕರಾದ ಕಪಿಲಮುನಿಗಳ ರೂಪದಲ್ಲಿ ತಾನೇ ಅವತಾರಮಾಡಿದನೆಂದು ತಿಳಿದು ಬಂದಿದೆ.

ಭಗವಂತನ ನಾನಾಚರಿತ್ರೆಗಳನ್ನು ಕೇಳಿರುವ ನನ್ನ ಇಂದ್ರಿಯಗಳಿಗೆ ಯೋಗಿಪುಂಗವರೂ—ಪುರುಷಶ್ರೇಷ್ಠರೂ ಆಗಿರುವ ಆ ಕಪಿಲದೇವರ ಕೀರ್ತಿಯನ್ನು ಎಷ್ಟೆಷ್ಟು ಕೇಳಿದರೂ ತೃಪ್ತಿಯಾಗಿಲ್ಲ. ಸಂಪೂರ್ಣವಾಗಿ ಸ್ವತಂತ್ರನಾಗಿರುವ ಶ್ರೀಹರಿಯು ತನ್ನ ಯೋಗಮಾಯೆಯಿಂದ ಭಕ್ತರ ಇಷ್ಟಕ್ಕೆ ಅನುಗುಣವಾಗಿ ಶರೀರಗಳನ್ನು ಧರಿಸಿ ಯಾವ-ಯಾವ ಲೀಲೆಗಳನ್ನು ತೋರಿಸಿರುವನೋ—ಅವೆಲ್ಲವೂ ಕೀರ್ತನೆಗೆ ಯೋಗ್ಯವೇ ಆಗಿವೆ. ಆದ್ದರಿಂದ ಅವುಗಳನ್ನು ನನಗೆ ತಿಳಿಸಿರಿ. ನನಗೆ ಆ ವಿಷಯದಲ್ಲಿ ಬಹಳವಾದ ಶ್ರದ್ಧೆಯಿದೆ."

ಸೂತಪುರಾಣಿಕರು ಹೇಳುತ್ತಾರೆ :

"ಮುನಿಗಳೇ! ತಮ್ಮಂತೆಯೇ ವಿದುರನೂ ಈ ಆತ್ಮಜ್ಞಾನಸಂಬಂಧವಾದ ವಿಷಯಗಳ ಬಗೆಗೆ ಮೈತ್ರೇಯಮಹರ್ಷಿಗಳಲ್ಲಿ ಪ್ರಶ್ನೆಮಾಡಿದಾಗ—ವ್ಯಾಸರ ಗೆಳೆಯರಾದ, ಪೂಜ್ಯರಾದ ಮೈತ್ರೇಯಮಹರ್ಷಿಗಳು ಪ್ರಸನ್ನರಾಗಿ ವಿದುರನಿಗೆ ಹೀಗೆ ಹೇಳಿದರು :

ವಿದುರನೇ! ಕೇಳು. ತಂದೆಯು ಅರಣ್ಯಕ್ಕೆ ತೆರಳಿದನಂತರ ಕಪಿಲರು ತನ್ನ ತಾಯಿಗೆ ಪ್ರಿಯವನ್ನುಂಟುಮಾಡುವುದಕ್ಕೋಸ್ಕರ ಆ ಬಿಂದುಸರೋವರ ತೀರ್ಥಕ್ಷೇತ್ರದಲ್ಲೇ ಇರತೊಡಗಿದರು. ಒಂದು ದಿನ ತತ್ತ್ವಜ್ಞಾನದಲ್ಲಿ ಪಾರಂಗತರಾಗಿ ಕರ್ಮಾತೀತರಾಗಿರುವ ಆ ಮುನಿವರ್ಯರು ಆಸನದಲ್ಲಿ ವಿರಾಜಿಸುತ್ತಿದ್ದಾಗ, ದೇವಹೂತಿಯು ಬ್ರಹ್ಮದೇವರು ಹಿಂದೆ ತನಗೆ ಹೇಳಿದ್ದ ಮಾತನ್ನು ಜ್ಞಾಪಿಸಿಕೊಂಡು ತನ್ನ ಆ ಪುತ್ರನಿಗೆ ಹೇಳಿದಳು :

"ಪ್ರಭುವೇ! ಈ ದುಷ್ಟಇಂದ್ರಿಯಗಳ ವಿಷಯಲಾಲಸೆಯಿಂದ ನನಗೆ ತುಂಬಾ ಬೇಸರವಾಗಿದೆ. ಅವುಗಳ ಇಷ್ಟವನ್ನು ಈಡೇರಿಸುತ್ತಿರುವುದರಿಂದಲೇ ನಾನು ಈ ಘೋರವಾದ ಅಜ್ಞಾನದ ಇರುಳಿನಲ್ಲಿ ಬಿದ್ದು ತೊಳಲುತ್ತಿದ್ದೇನೆ. ಈಗ ನಿನ್ನ ಅನುಗ್ರಹದಿಂದ ನನಗೆ ಜನ್ಮಪರಂಪರೆಯು ಕೊನೆಗೊಂಡಿದೆ. ಅದಕ್ಕೇ—ದಾಟಲು ಅಸದಳವಾದ ಅಜ್ಞಾನದ ಈ ಕತ್ತಲೆಯನ್ನು ದಾಟಿ ಸತ್ಯಾರ್ಥವನ್ನು ನೋಡಲು ಒಳ್ಳೆಯ ಕಣ್ಣುಗಳಂತಿರುವ—ನೀನು ನನಗೆ ದೊರೆತಿರುವೆ. ನೀನು ಸಮಸ್ತಜೀವಿಗಳಿಗೂ ಪ್ರಭುವಾದ ಭಗವಂತನಾದ

ಆದಿಪುರುಷನು. ಅಜ್ಞಾನದ ಕತ್ತಲೆಯಿಂದ ಕುರುಡಾಗಿರುವ ಮನುಷ್ಯರಿಗೆ ಕಣ್ಣಾಗಿರುವ ಸೂರ್ಯನಂತೆ ಉದಯಹೊಂದಿದ್ದೀಯೆ. ದೇವನೇ! ಈ ಒಡಲು-ಮನೆ ಮುಂತಾದವುಗಳಲ್ಲಿ–'ನಾನು' 'ನನ್ನದು'–ಎಂಬ ಯಾವ ಕೆಟ್ಟ ಅವಗ್ರಹವುಂಟಾಗುತ್ತದೆಯೋ–ಅದನ್ನು ಉಂಟುಮಾಡುವವನೂ ನೀನೇ ಆಗಿದ್ದೀಯೆ. ಆದುದರಿಂದ ನೀನೇ ಈಗ ನನ್ನ ಈ ಮಹಾಮೋಹವನ್ನು ದೂರಮಾಡು. ನೀನು ಭಕ್ತರ ಸಂಸಾರವೃಕ್ಷವನ್ನು ಕಡಿದುಹಾಕುವ ಕೊಡಲಿಯಾಗಿದ್ದೀಯೆ. ಇಂತಹ ಧರ್ಮಜ್ಞರಲ್ಲಿ ಶ್ರೇಷ್ಠನಾದ ನಿನ್ನಲ್ಲಿ ನಾನು ಪ್ರಕೃತಿ-ಪುರುಷರ ಜ್ಞಾನವನ್ನು ಕರುಣಿಸಬೇಕೆಂದು ಶರಣುಹೊಂದುತ್ತೇನೆ."

(ಶ್ಲೋಕ ೧-೧೧)

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಹೀಗೆ ತನ್ನ ತಾಯಿಯ–ಎಲ್ಲ ಪುರುಷರಿಗೂ ಮೋಕ್ಷದಲ್ಲಿ ಅಭಿ ಲಾಷೆಯು ವೃದ್ಧಿಯಾಗುವಂತೆ ಮಾಡುವ ಪರಮಪವಿತ್ರವೂ, ನಿರ್ದುಷ್ಟವೂ ಆದ ಇಷ್ಟಾರ್ಥವನ್ನು ಮನಸ್ಸಿನಲ್ಲಿ ಶ್ಲಾಘಿಸಿ ಸತ್ಪುರುಷರಿಗೆಲ್ಲಾ ಶರಣ್ಯ ರಾಗಿರುವ ಶ್ರೀಕಪಿಲಮಹಾಮುನಿಗಳು ಮೃದುವಾದ ಮಂದಹಾಸದಿಂದ ಶೋಭಿಸುವ ಮುಖಾರವಿಂದದಿಂದ ಹೀಗೆ ಅಪ್ಪಣೆಕೊಡಿಸಿದರು :

"ಅಮ್ಮಾ! ಅಧ್ಯಾತ್ಮಯೋಗವೇ ಮನುಷ್ಯರಿಗೆ ಅತ್ಯಂತಕಲ್ಯಾಣ ವನ್ನುಂಟುಮಾಡುವ ಸಾಧನವಾಗಿದೆ. ಅದು ಸಮಸ್ತದುಃಖ ಮತ್ತು ಸುಖ ಗಳನ್ನು ನಿವೃತ್ತಿಮಾಡುವ ಪರಮಕಲ್ಯಾಣಕರವಾದ ಮುಖ್ಯಸಾಧನ ವಾಗಿದೆ–ಎಂಬುದು ನನ್ನ ನಿಶ್ಚಯವಮ್ಮಾ. ಸರ್ವಾಂಗಸಂಪನ್ನವಾಗಿರುವ ಅಂತಹ ಯೋಗವನ್ನು ನಾನು–ಆ ಬಗೆಗೆ ಕೇಳಲು ಇಷ್ಟಪಟ್ಟ ನಾರದರೇ ಮುಂತಾದ ಮುನಿಗಳ ಮುಂದೆ ವರ್ಣಿಸಿದ್ದೆನು. ಅದನ್ನೇ ಈಗ ನಿನಗೂ ಹೇಳುತ್ತೇನೆ.

ಚೇತಃ ಕಲ್ವಸ್ಯ ಬನ್ಧಾಯ ಮುಕ್ತಯೇ ಚಾತ್ಮನೋ ಮತಮ್ ।
ಗುಣೇಷು ಸಕ್ತಂ ಬನ್ಧಾಯ ರತಂ ವಾ ಪುಂಸಿ ಮುಕ್ತಯೇ ॥೧೫॥

ಈ ಜೀವಕ್ಕೆ ಬಂಧ ಮತ್ತು ಮೋಕ್ಷಗಳೆರಡಕ್ಕೂ ಮನಸ್ಸೇ ಕಾರಣವೆಂಬುದು ಬಲ್ಲವರ ಅಭಿಪ್ರಾಯವಾಗಿದೆ. ಆ ಮನಸ್ಸು ವಿಷಯಗಳಲ್ಲಿ

ಆಸಕ್ತವಾದರೆ ಬಂಧನಕ್ಕೆ ಕಾರಣವಾಗುತ್ತದೆ ಮತ್ತು ಪರಮಾತ್ಮನಲ್ಲಿ ಅನುರಕ್ತವಾದರೆ ಅದೇ ಮೋಕ್ಷಕ್ಕೆ ಕಾರಣವಾಗುತ್ತದೆ.

ಅದು ಯಾವಾಗ 'ನಾನು' 'ನನ್ನದು'–ಎಂಬ ಭಾವನೆಯಿಂದ ಉಂಟಾಗುವ ಕಾಮ-ಲೋಭಗಳೇ ಮುಂತಾದ ವಿಕಾರಗಳಿಂದ ಬಿಡುಗಡೆ ಹೊಂದಿ ಶುದ್ಧವಾಗುತ್ತದೆಯೋ–ಆಗ ಅದು ಸುಖ-ದುಃಖಗಳಿಂದ ಬಿಡುಗಡೆ ಹೊಂದಿ ಸಾಮ್ಯಾವಸ್ಥೆಯನ್ನು ಪಡೆಯುತ್ತದೆ. ಆಗ ಜೀವಕ್ಕೆ ತನ್ನ ಜ್ಞಾನ-ವೈರಾಗ್ಯ ಮತ್ತು ಭಕ್ತಿಗಳಿಂದ ಕೂಡಿದ ಹೃದಯದಲ್ಲಿ 'ಆತ್ಮವು ಪ್ರಕೃತಿಯಿಂದ ಅತಿರಿಕ್ತವಾಗಿ ಅದನ್ನು ಮೀರಿರುವುದು, ಅದ್ವಿತೀಯವಾದುದು, ಭೇದರಹಿತವಾದುದು, ಸ್ವಯಂಪ್ರಕಾಶವಾದುದು, ಸೂಕ್ಷ್ಮವಾದುದು, ಅಖಂಡವಾದುದು ಮತ್ತು ಉದಾಸೀನವಾದುದು, ಹಾಗೆಯೇ ಪ್ರಕೃತಿಯು ಶಕ್ತಿಹೀನವಾದುದು'–ಎಂಬ ಅನುಭವವು ಉಂಟಾಗುವುದು. ಯೋಗಿಗಳಿಗೆ ಪರಬ್ರಹ್ಮಸಿದ್ಧಿಯಾಗುವುದಕ್ಕೆ ಅಖಿಲಾತ್ಮಕನಾಗಿರುವ ಶ್ರೀಹರಿಯನ್ನು ಕುರಿತ ಭಕ್ತಿಗೆ ಸಾಟಿಯಾದ ಮಂಗಳಮಯವಾದ ಮಾರ್ಗವು ಬೇರೊಂದಿಲ್ಲ.

ಪ್ರಸಙ್ಗಮಜರಂ ಪಾಶಮಾತ್ಮನಃ ಕವಯೋ ವಿದುಃ ।
ಸ ಏವ ಸಾಧುಷು ಕೃತೋ ಮೋಕ್ಷದ್ವಾರಮಪಾವೃತಮ್ ॥೨೦॥

ಸಂಗ ಅಥವಾ ಆಸಕ್ತಿಯೇ ಆತ್ಮನಿಗೆ–ಕತ್ತರಿಸಲು ಅಸಾಧ್ಯವಾದ ದೃಢ ವಾದ ಕಟ್ಟು–ಎಂದು ವಿವೇಕಿಗಳು ತಿಳಿಯುತ್ತಾರೆ. ಆದರೆ ಅದೇ ಸಂಗ ಅಥವಾ ಆಸಕ್ತಿಯು ಆತ್ಮಾನುಭವವುಳ್ಳ ಸತ್ಪುರುಷರ ವಿಷಯದಲ್ಲಿ ಉಂಟಾದರೆ ಅದು ಮೋಕ್ಷಕ್ಕೆ ತೆರೆದ ಬಾಗಿಲಾಗುವುದು.

ಯಾವ ಭಕ್ತಶ್ರೇಷ್ಠರು ಸಹನಶೀಲರಾಗಿ, ದಯಾಳುಗಳಾಗಿ, ಸಮಸ್ತ ಜೀವಿಗಳಿಗೂ ಅಕಾರಣವಾಗಿ ಹಿತವನ್ನುಂಟುಮಾಡುವ ಮಿತ್ರರಾಗಿ, ಯಾರಲ್ಲಿಯೂ ಶತ್ರುಭಾವವನ್ನಿಡದೇ ಶಾಂತರಾಗಿ, ಸರಳಸ್ವಭಾವವುಳ್ಳವ ರಾಗಿ, ಸತ್ಪುರುಷರಿಗೆ ಸಮ್ಮಾನಮಾಡುವವರಾಗಿ, ನನ್ನಲ್ಲಿ ಅನನ್ಯಭಾವ ದಿಂದ ಕೂಡಿದ ದೃಢಭಕ್ತಿಯುಳ್ಳವರಾಗಿ, ಸಮಸ್ತಕರ್ಮಗಳನ್ನೂ ಮತ್ತು ತಮ್ಮ ನೆಂಟರಿಷ್ಟರನ್ನೂ ನನಗೋಸ್ಕರ ತ್ಯಾಗಮಾಡಿ, ನನ್ನಲ್ಲಿ ಪರಾಯಣ ರಾಗಿದ್ದು, ನನ್ನ ಪವಿತ್ರವಾದ ಕಥೆಗಳ ಶ್ರವಣ-ಕೀರ್ತನೆಗಳನ್ನು

ಮಾಡುತ್ತಾ ನನ್ನಲ್ಲಿಯೇ ಚಿತ್ತವನ್ನು ನೆಟ್ಟಿರುತ್ತಾರೆಯೋ–ಅವರಿಗೆ ಸಂಸಾರದ ಬಗೆ-ಬಗೆಯ ಸಂತಾಪಗಳು ಯಾವ ಕಷ್ಟವನ್ನೂ ಉಂಟು ಮಾಡುವುದಿಲ್ಲ. ಎಲೈ ಸಾಧ್ವಿಯೇ! ಇಂತಹ ಸರ್ವಸಂಗಪರಿತ್ಯಾಗಿಗಳಾದ ಮಹಾಪುರುಷರೇ ಸಾಧುಗಳೆನಿಸುವರು. ನೀನು ಅಂತಹವರ ಸಹವಾಸವನ್ನೇ ಬಯಸಬೇಕು. ಏಕೆಂದರೆ : ಅವರು ಆಸಕ್ತಿಯಿಂದ ಉಂಟಾಗುವ ಎಲ್ಲ ದೋಷಗಳನ್ನೂ ನಿವಾರಿಸುತ್ತಾರೆ. ಸತ್ಸಂಗದಿಂದ ನನ್ನ ಪರಾಕ್ರಮದ ಯಥಾರ್ಥವಾದ ಅರಿವನ್ನುಂಟುಮಾಡುವ ಮತ್ತು ಮನಸ್ಸಿಗೂ–ಕಿವಿಗಳಿಗೂ ರಸಾಯನ ವಾಗಿರುವ ಕಥೆಗಳು ತಿಳಿದುಬರುತ್ತವೆ. ಅವುಗಳನ್ನು ಸೇವಿಸುವುದರಿಂದ ಶೀಘ್ರವಾಗಿಯೇ ಮೋಕ್ಷಮಾರ್ಗದಲ್ಲಿ ಶ್ರದ್ಧೆ, ಪ್ರೇಮ ಮತ್ತು ಭಕ್ತಿಗಳು ಕ್ರಮವಾಗಿ ವಿಕಾಸಗೊಳ್ಳುವುವು. ಅನಂತರ ನನ್ನ ಸೃಷ್ಟಿಯೇ ಮುಂತಾದ ಲೀಲೆಗಳನ್ನು ಚಿಂತನೆಮಾಡುವುದರಿಂದ ಉಂಟಾಗುವ ಭಕ್ತಿಯ ಮೂಲಕ ಇಹಲೋಕ ಮತ್ತು ಪರಲೋಕಗಳ ಸುಖಗಳಲ್ಲಿ ವೈರಾಗ್ಯವುಂಟಾಗುವುದು. ಆಗ ಮನುಷ್ಯನು ಸಾವಧಾನವಾಗಿ ಭಕ್ತಿ ಪ್ರಧಾನವಾದ, ಸರಳವಾದ ಯೋಗದ ಉಪಾಯಗಳಿಂದ ಸಮಾಹಿತನಾಗಿ ಮನಸ್ಸನ್ನು ನಿಗ್ರಹಿಸಲು ಪ್ರಯತ್ನಪಡುವನು. ಹೀಗೆ ಪ್ರಕೃತಿಯ ಗುಣಗಳಿಂದ ಉತ್ಪನ್ನವಾದ ಶಬ್ದಾದಿ ವಿಷಯಗಳನ್ನು ತ್ಯಾಗಮಾಡುವುದರಿಂದ, ವೈರಾಗ್ಯದಿಂದ ಕೂಡಿದ ಭಕ್ತಿಯಿಂದ, ಯೋಗದಿಂದ ಮತ್ತು ನನ್ನ ವಿಷಯವಾದ ದೃಢವಾದ ಭಕ್ತಿಯೋಗದಿಂದ–ಮನುಷ್ಯನು ತನ್ನ ಅಂತರಾತ್ಮನಾಗಿರುವ ನನ್ನನ್ನು ಇಲ್ಲಿಯೇ–ಈ ದೇಹದಲ್ಲಿಯೇ ಸಾಕ್ಷಾತ್ಕರಿಸಿಕೊಳ್ಳುವನು.”

(ಶ್ಲೋಕ 21-27)

ಕಪಿಲದೇವರ ಆ ಮಾತುಗಳನ್ನು ಕೇಳಿ ತಾಯಿ ದೇವಹೂತಿಯು ಅವರನ್ನು ಹೀಗೆ ಪ್ರಶ್ನಿಸಿದಳು :

“ಭಗವಂತನೇ! ನಿನಗೆ ಉಚಿತವಾಗಿರುವ ಭಕ್ತಿಯ ಸ್ವರೂಪವೇನು? ನನ್ನಂತಹವರಿಗೆ ಎಂತಹ ಭಕ್ತಿಯ ಆಚರಣೆ ಸರಿಯಾಗುವುದು? ಎಂತಹ ಭಕ್ತಿಯಿಂದ ನಾನು ಸಹಜವಾಗಿಯೇ ನಿನ್ನ ನಿರ್ವಾಣಪದವನ್ನು ಪಡೆಯ ಬಹುದು? ಮೋಕ್ಷಸ್ವರೂಪನಾಗಿರುವ ಪ್ರಭುವೇ! ಯಾವುದು ತತ್ತ್ವಜ್ಞಾನ ವನ್ನುಂಟುಮಾಡುವುದೋ ಮತ್ತು ಗುರಿಯನ್ನು ಮುಟ್ಟಿ ಹೊಡೆಯುವ

ಬಾಣದಂತೆ ಭಗವಂತನನ್ನು ಮುಟ್ಟಿ ಆತನಲ್ಲಿ ಲಗ್ನವಾಗುವುದೋ–ಅಂತಹ ನೀನು ಹೇಳುವ ಯೋಗವಾವುದು? ಅದಕ್ಕೆ ಎಷ್ಟು ಅಂಗಗಳು? ಹೇಳು, ಹರಿಯೇ! ತಿಳಿಯಲು ಕಷ್ಟವಾಗಿರುವ ಈ ವಿಷಯಗಳನ್ನು–ಮಂದಮತಿ ಯಾದ ನನ್ನಂತಹ ಹೆಂಗಸರೂ ಸುಲಭವಾಗಿ ಅರಿಯಲು ಸಾಧ್ಯವಾಗುವ ರೀತಿಯಲ್ಲಿ–ಇದೆಲ್ಲವನ್ನೂ ತಿಳಿಸು."

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ವಿದುರನೇ! ಕೇಳು. ತನ್ನ ಜನ್ಮಕ್ಕೆ ಕಾರಣಳಾಗಿದ್ದ ಮಹಾತಾಯಿಯ ಆ ಅಭಿಪ್ರಾಯವನ್ನು ತಿಳಿದು ಕಪಿಲದೇವರ ಹೃದಯದಲ್ಲಿ ಸ್ನೇಹವು ಉಕ್ಕಿಬಂದಿತು. ಆಗ ಅವರು ಆಕೆಗೆ ಪ್ರಕೃತಿಯೇ ಮುಂತಾದ ತತ್ತ್ವಗಳನ್ನು ನಿರೂಪಣೆಮಾಡುವ 'ಸಾಂಖ್ಯ'ವೆಂಬ ಜ್ಞಾನವನ್ನು ಉಪದೇಶಮಾಡಿದರು. ಜೊತೆಯಲ್ಲಿಯೇ ಭಕ್ತಿಯ ವಿಸ್ತಾರವನ್ನೂ ಮತ್ತು ಯೋಗವನ್ನೂ ಉಪದೇಶಿಸಿದರು. (ಶ್ಲೋಕ 28-31)

ದೇವಾನಾಂ ಗುಣಲಿಙ್ಗಾನಾಮಾನುಶ್ರವಿಕಕರ್ಮಣಾಮ್ ।
ಸತ್ತ್ವ ಏವೈಕಮನಸೋ ವೃತ್ತಿಃ ಸ್ವಾಭಾವಿಕೀ ತು ಯಾ ॥೩೨॥

ಅನಿಮಿತ್ತಾ ಭಾಗವತೀ ಭಕ್ತಿಃ ಸಿದ್ಧೇರ್ಗರೀಯಸೀ ।
ಜರಯತ್ಯಾಶು ಯಾ ಕೋಶಂ ನಿಗೀರ್ಣಮನಲೋ ಯಥಾ ॥೩೩॥

"ಅಮ್ಮಾ! ನಿರ್ವ್ಯಾಜಭಕ್ತಿಯೆಂದರೆ ಏನು?–ಎಂಬುದನ್ನು ಹೇಳುವೆನು ; ಕೇಳು. ಸಾಮಾನ್ಯವಾಗಿ ಮನುಷ್ಯನ ಇಂದ್ರಿಯಗಳಿಗೆ ತಮ್ಮ-ತಮ್ಮ ವಿಷಯಗಳಲ್ಲಾಗಲೀ ಅಥವಾ ಫಲಾಭಿಸಂಧಿಯಿಂದ ಕೂಡಿದ ವೇದೋಕ್ತವಾದ ಕರ್ಮಕಾಂಡದಲ್ಲಾಗಲೀ ಸಹಜವಾದ ವೃತ್ತಿಯು* ಇರುತ್ತದೆಯಲ್ಲವೇ? ಅದನ್ನೇ ಯಾವ ಫಲಾಪೇಕ್ಷೆಯೂ ಇಲ್ಲದೇ ಸಹಜ ಭಾವದಿಂದ ಕೂಡಿದ ಅನನ್ಯಚಿತ್ತದಿಂದ ಶುದ್ಧಸತ್ತ್ವಮಯನಾದ ಭಗವಂತ

---

* ಎಲ್ಲ ಇಂದ್ರಿಯಗಳ ವೃತ್ತಿಯೂ ಭಗವಂತನ ಆರಾಧನೆಗೆ ಹೇಗೆ ಸಾಧನವಾಗು ತ್ತದೆ? ವಾಯು ಮತ್ತು ಉಪಸ್ಥ ಎಂಬ ಇಂದ್ರಿಯಗಳು ಮಲ-ಮೂತ್ರವಿಸರ್ಜನೆಗೆ ಮಾತ್ರವೇ ಸಹಾಯಕವಲ್ಲವೇ? ಎಂದರೆ : ಮಲ-ಮೂತ್ರವಿಸರ್ಜನೆಯಿಂದ ದೇಹಕ್ಕೆ ನೆಮ್ಮದಿ, ಚಿತ್ತಕ್ಕೂ ಸ್ವಾಸ್ಥ್ಯ ಉಂಟಾಗುವುದು. ಏಕಾಗ್ರತೆಯುಂಟಾಗುವುದು.

ನಲ್ಲಿ ತೊಡಗಿಸಿದರೆ ಆ ವೃತ್ತಿಗೆ 'ನಿರ್ವ್ಯಾಜಭಕ್ತಿ' ಎಂದು ಹೆಸರು. ಈ ನಿರ್ವ್ಯಾಜಭಕ್ತಿಯು ಸಿದ್ಧಿರೂಪವಾದ ಮುಕ್ತಿಗಿಂತಲೂ ಶ್ರೇಷ್ಠವಾದುದು. ಏಕೆಂದರೆ : ಇದು–ಜಠರಾಗ್ನಿಯು ಉಂಡ ಆಹಾರವನ್ನು ಜೀರ್ಣಮಾಡಿ ಬಿಡುವಂತೆ–ಕರ್ಮವಾಸನೆಗಳ ಕೋಶವಾಗಿರುವ ಲಿಂಗಶರೀರವನ್ನು ಶೀಘ್ರವಾಗಿಯೇ ನಾಶಪಡಿಸಿಬಿಡುವುದು.* ಹಾಗೆ ನನ್ನ ಪಾದಸೇವೆ ಯಲ್ಲೇ ನಿರತರಾಗಿ, ನನ್ನ ಪ್ರಸನ್ನತೆಗೋಸ್ಕರವೇ ಸಕಲಕರ್ಮಗಳನ್ನೂ ಮಾಡುತ್ತಾ ಒಬ್ಬರಿಗೊಬ್ಬರು ಸೇರಿದಾಗ ಪರಮಪ್ರೇಮದಿಂದ ನನ್ನ ಶೌರ್ಯವೇ ಮುಂತಾದ ಗುಣಗಳಿಂದ ಕೂಡಿದ ಚರಿತ್ರೆಯನ್ನೇ ಮಾತನಾಡಿಕೊಳ್ಳುತ್ತಿರುವ ಧನ್ಯತಮರಾದ ಕೆಲವು ಭಕ್ತರೂ ಇರುವರು. ಅವರು ನನ್ನೊಡನೆ ಏಕಾತ್ಮತೆಯ ರೂಪವಾದ ಮೋಕ್ಷವನ್ನೂ ಬಯಸುವುದಿಲ್ಲ. ಅಮ್ಮಾ! ಆ ಮಹಾತ್ಮರು ಕೆಂದಾವರೆಯನ್ನು ಹೋಲುವ ಕಣ್ಣುಗಳಿಂದಲೂ, ಪ್ರಸನ್ನವಾದ ಮುಖದಿಂದಲೂ ಕಂಗೊಳಿಸುತ್ತಿರುವ ಪರಮಸುಂದರವೂ–ವರಪ್ರದವೂ ಆಗಿರುವ ನನ್ನ ದಿವ್ಯಮಂಗಳವಿಗ್ರಹ ವನ್ನು ಸಂದರ್ಶಿಸುತ್ತಾ ನನ್ನೊಡನೆ ಸವಿಮಾತಿನಿಂದ ಸಂಭಾಷಣೆ ಮಾಡುತ್ತಿರುವರು. ದೊಡ್ಡ-ದೊಡ್ಡ ತಪಸ್ವಿಗಳೂ ಆಸೆಪಡುವ ಯೋಗವಲ್ಲವೇ ಅದು! ಕಮನೀಯವಾದ ಅಂಗೋಪಾಂಗಗಳಿಂದಲೂ,

---

ಧ್ಯಾನಕ್ಕೆ ಸಹಾಯವಾಗುವುದು. ಆದ್ದರಿಂದ ಅವೂ ಕೂಡ ಭಗವಂತನ ಆರಾಧನೆಗೆ ಸಹಾಯಕವೇ ಆಗಿವೆಯೆಂದು ವಿಷ್ಣುರಹಸ್ಯಗ್ರಂಥವು ಹೇಳುತ್ತದೆ.

"ಮಲಮೂತ್ರಪರಿತ್ಯಾಗಾತ್ ಚಿತ್ತಸ್ವಾಸ್ಥ್ಯಂ ಯತೋ ಭವೇತ್ ।
ಅತಃ ಪಾಯುರುಪಸ್ಥಶ್ಚ ತದಾರಾಧನಸಾಧನಮ್ ॥" (ಶ್ಲೋಕ ೩.೨)

* ಸಮಸ್ತಇಂದ್ರಿಯಗಳ ಮತ್ತು ಮನಸ್ಸಿನ ವ್ಯಾಪಾರಗಳನ್ನು ಬೇರಾವ ಅಪೇಕ್ಷೆಯೂ ಇಲ್ಲದೇ ಪರಮಾತ್ಮನಲ್ಲಿ ನೆಲೆಗೊಳಿಸುವುದೇ ಅಹೈತುಕ (ಅನಿಮಿತ್ತ, ನಿರ್ವ್ಯಾಜ) ಭಕ್ತಿ ಎನಿಸುವುದು. ಈ ಭಕ್ತಿಯಲ್ಲಿ ಫಲಾಭಿಸಂಧಿ ಇಲ್ಲದಿದ್ದರೂ ಅದು ಅಪ್ರಾರ್ಥಿತವಾಗಿಯೇ ಮೋಕ್ಷವನ್ನು ಕೊಡುತ್ತದೆ. ಮೋಕ್ಷವು ಬೇಕು ಎಂಬ ಆಸೆಯನ್ನೂ ಇಟ್ಟುಕೊಳ್ಳದೇ ಭಗವಂತನಲ್ಲಿ ಇಂತಹ ಭಕ್ತಿಯನ್ನು ಇಟ್ಟುಕೊಳ್ಳಬೇಕು. ಜಠರಾಗ್ನಿಯು ಉಂಡವನಿಗೆ ತಿಳಿಯದ ಹಾಗೆಯೇ ಆಹಾರವನ್ನು ಶೀಘ್ರವಾಗಿ ಜೀರ್ಣಮಾಡುವಂತೆ– ಈ ಭಕ್ತಿಯು ಭಕ್ತನ ಅರಿವಿಲ್ಲದಿದ್ದರೂ ಶೀಘ್ರವಾಗಿ ಆತನಿಗೆ ಮುಕ್ತಿಯನ್ನು ತರುತ್ತದೆ. ಜಠರಾಗ್ನಿಯು ಅಸಾರವಾದ ಅಂಶವನ್ನು ಮಾತ್ರವೇ ಹೊರಗೆ

ಉದಾರವಾದ ಮಂದಹಾಸವಿಲಾಸಗಳಿಂದಲೂ, ಮನೋಹರವಾದ ನೋಟಗಳಿಂದಲೂ, ಮಧುರವಾದ ಮಾತುಗಳಿಂದಲೂ ಕೂಡಿದ ನನ್ನ ಆ ರೂಪಗಳ ಮಾಧುರ್ಯದಲ್ಲಿ ಅವರ ಆ ಮನಸ್ಸು ಮತ್ತು ಇಂದ್ರಿಯ ಗಳು ಮುಳುಗಿಹೋಗುತ್ತವೆ. ನನ್ನ ವಿಷಯದಲ್ಲಿ ಇಂತಹ ಭಕ್ತಿಯು ಇದ್ದರೆ ಅದು ಬಯಸದಿದ್ದರೂ ಅವರಿಗೆ ಪರಮಪದವನ್ನು ಕೊಟ್ಟುಬಿಡು ವುದು. ಹೀಗೆ ಅವಿದ್ಯೆಯು ಕಳೆದುಹೋದ ಬಳಿಕ ಅವರು ಮಾಯೆಗೆ ಅಧಿಪತಿಯಾದ ನನ್ನ ವಿಭೂತಿಗಳಾಗಿರುವ ಸತ್ಯಲೋಕ ಮುಂತಾದುವುಗಳ ಭೋಗಸಂಪತ್ತನ್ನಾಗಲೀ, ತಾನಾಗಿಯೇ ದೊರೆಯುವ ಅಣಿಮಾದಿ ಅಷ್ಟ ಸಿದ್ಧಿಗಳನ್ನಾಗಲೀ ಅಥವಾ ಶ್ರೀವೈಕುಂಠಲೋಕದ ಭೋಗಗಳನ್ನಾಗಲೀ ಯಾವುದನ್ನೂ ಬಯಸದೇ ಹೋದರೂ–ನನ್ನ ಧಾಮವನ್ನು ತಲುಪಿದಾಗ ಅವರಿಗೆ ಆ ಎಲ್ಲ ವಿಭೂತಿಗಳೂ ತಾವಾಗಿಯೇ ದೊರೆಯುವುವು. ಅಮ್ಮಾ! ಯಾವ ಭಕ್ತಶ್ರೇಷ್ಠರು ನನ್ನನ್ನೇ ಪ್ರಿಯತಮವಸ್ತುಗಳಾದ ತಮ್ಮ ದೇಹ ವೆಂದೂ, ಪುತ್ರನೆಂದೂ, ಮಿತ್ರನೆಂದೂ, ಗುರುವೆಂದೂ ಹಿತಕಾರಿ ಯೆಂದೂ ಮತ್ತು ಇಷ್ಟದೇವತೆಯೆಂದೂ ತಿಳಿದುಕೊಂಡಿರುವರೋ– ಅಂತಹ ನನ್ನ ಆಸರೆಯಲ್ಲೇ ಇರುವ ಸುಕೃತಿಗಳು. ಶಾಂತಿಪೂರ್ಣವಾದ ನನ್ನ

ಹಾಕಿ ಸಾರವಾದ ಅಂಶದಿಂದ ಶರೀರವನ್ನು ಪೋಷಿಸುವಂತೆ–ಭಕ್ತಿಯು ವಾಸನಾಮಯವಾದ ಲಿಂಗಶರೀರವೆಂಬ ನಿಸ್ಸಾರವಾದ ಭಾಗವನ್ನು ತಳ್ಳಿಹಾಕಿ, ಭಗವಂತನ ವಿಷಯವೇ ಆದ ಶ್ರವಣ-ಕೀರ್ತನಾದಿಗಳನ್ನು ವೃದ್ಧಿಪಡಿಸುತ್ತಾ, ಭಕ್ತನಲ್ಲಿ ಆನಂದವನ್ನು ತುಂಬುತ್ತಾ ತಾನಾಗಿಯೇ ಆತನಿಗೆ ಮೋಕ್ಷವನ್ನು ತರುವುದು. ಇದು ಸಾಧನಾಸ್ಥಿತಿಯಲ್ಲೂ ಮತ್ತು ಆನಂದಮಯಸಿದ್ಧಿಯನಂತರವೂ ಆನಂದಮಯ. ಮೋಕ್ಷಸಿದ್ಧಿಯನ್ನು ಹೊಂದಿಬಿಟ್ಟರೆ ಆತನಿಗೆ ಸಂಸಾರಬಂಧನವು ಪೂರ್ಣವಾಗಿ ತೊಲಗಿ ಆತನು ಪರಿಪೂರ್ಣಜ್ಞಾನ ಮತ್ತು ಆನಂದಮಯಸ್ಥಿತಿಯಲ್ಲಿ ಎಂದೆಂದೂ ಇದ್ದುಬಿಡುತ್ತಾನೆ. ಆದರೆ ಆತನು ಒಡನೆಯೇ ಆ ಮೋಕ್ಷಸಿದ್ಧಿಯನ್ನು ಅಪೇಕ್ಷಿಸದೇ ಭಕ್ತನಾಗಿಯೇ ಜೀವನವನ್ನು ಇಲ್ಲಿ ನಡೆಸುತ್ತಿದ್ದರೂ ಆತನಿಗೆ ಆನಂದಕ್ಕೆ ಕೊರತೆಯಿಲ್ಲ. ಸಂಸಾರದ ಕರ್ಮಗಳು ಆತನಿಗೆ ಅಂಟುವುದಿಲ್ಲ. ಇಷ್ಟಲ್ಲದೇ ಆತನ ಸಾನ್ನಿಧ್ಯದಿಂದ ಲೋಕದ ಜನರೂ ಪವಿತ್ರರಾಗುವರು. ಆದುದರಿಂದ ಅಂತಹ ನಿರ್ವ್ಯಾಜವಾದ ಭಕ್ತಿಯನ್ನು ಸಿದ್ಧಿಯಾದ ಮೋಕ್ಷಕ್ಕಿಂತಲೂ ಶ್ರೇಷ್ಠವೆಂದು ಹೇಳಿದೆ. ಇಲ್ಲಿ ಮುಕ್ತಿಯ ನಿಂದೆಯಿಲ್ಲ. ಭಕ್ತಿಯ ಸ್ತುತಿಯಿದೆ ಅಷ್ಟೇ. (ಶ್ಲೋಕ ೩೩)

ವೈಕುಂಠಧಾಮವನ್ನು ತಲುಪುವರು. ಅಲ್ಲಿ ಅವರಿಗೆ ಯಾವ ದಿವ್ಯಭೋಗಗಳ ಕೊರತೆಯೂ ಇರುವುದಿಲ್ಲ. ನನ್ನ ಕಾಲಚಕ್ರವೂ ಅವರನ್ನು ಕಬಳಿಸಲಾರದು. ಯಾರು ಇಹಲೋಕ-ಪರಲೋಕಗಳನ್ನೂ, ಈ ಎರಡು ಲೋಕಗಳಲ್ಲೂ ಜೊತೆಯಲ್ಲಿ ಬರುವ ಲಿಂಗದೇಹವನ್ನೂ ಮತ್ತು ಶರೀರಸಂಬಂಧದಿಂದ ಬಂದ ಹಣವೇನು, ಪಶುಗಳೇನು ಮತ್ತು ಮನೆ-ಮಠಗಳೇನು–ಇವೇ ಮುಂತಾದುವುಗಳೆಲ್ಲವನ್ನೂ ಮತ್ತು ಇತರ ಬೇರೆ-ಬೇರೆ ಸಂಗ್ರಹಗಳನ್ನೂ ತೊರೆದು ಅನನ್ಯಭಕ್ತಿಯಿಂದ ಎಲ್ಲ ಪ್ರಕಾರಗಳಿಂದಲೂ ನನ್ನನ್ನೇ ಭಜಿಸುತ್ತಾರೆಯೋ–ಅಂತಹವರನ್ನು. ನಾನು ಮೃತ್ಯುರೂಪವಾದ ಸಂಸಾರಸಾಗರದಿಂದ ದಾಟಿಸಿಬಿಡುವೆನಮ್ಮಾ! ನಾನು ಸಾಕ್ಷಾತ್ ಭಗವಂತನೇ ಆಗಿದ್ದೇನೆ. ಪ್ರಕೃತಿ ಮತ್ತು ಪುರುಷರಿಗೆಲ್ಲಾ ಪ್ರಭುವೂ ಆಗಿದ್ದೇನೆ. ಸಮಸ್ತಪ್ರಾಣಿಗಳ ಆತ್ಮವೂ ನಾನೇ. ನನ್ನನ್ನು ಬಿಟ್ಟು ಬೇರೆ ಯಾರನ್ನು ಆಶ್ರಯಿಸಿದರೂ ಮೃತ್ಯುರೂಪವಾದ ಮಹಾಭಯದಿಂದ ಬಿಡುಗಡೆಯಾಗುವುದಿಲ್ಲ.

(ಶ್ಲೋಕ 32-41)

ಮದ್ಭಯಾದ್ವಾತಿ ವಾತೋಽಯಂ ಸೂರ್ಯಸ್ತಪತಿ ಮದ್ಭಯಾತ್ ।
ವರ್ಷತೀನ್ದ್ರೋ ದಹತ್ಯಗ್ನಿರ್ಮೃತ್ಯುಶ್ಚರತಿ ಮದ್ಭಯಾತ್ ॥೪೨॥

ನನ್ನ ಭಯದಿಂದಲೇ ಈ ವಾಯುವು ಬೀಸುತ್ತಿದೆ. ಸೂರ್ಯನು ಪ್ರಕಾಶಿಸುತ್ತಿರುವುದೂ ನನ್ನ ಭಯದಿಂದಲೇ. ನನ್ನ ಭಯದ ಕಾರಣದಿಂದಲೇ ಇಂದ್ರನು ಮಳೆಗರೆಯುತ್ತಾನೆ ಮತ್ತು ಅಗ್ನಿಯು ಉರಿಯುತ್ತದೆ. ನನ್ನ ಭಯಕ್ಕೆ ಒಳಗಾಗಿಯೇ ಮೃತ್ಯುವು ತನ್ನ ಕಾರ್ಯದಲ್ಲಿ ತೊಡಗಿರುತ್ತದೆ.

ಯೋಗಿಗಳು ಜ್ಞಾನ-ವೈರಾಗ್ಯಗಳಿಂದ ಕೂಡಿದ ಭಕ್ತಿಯೋಗದ ಮೂಲಕ ಶಾಂತಿಯನ್ನು ಪಡೆಯುವುದಕ್ಕಾಗಿ ನನ್ನ ನಿರ್ಭಯವಾದ ಚರಣ ಕಮಲಗಳನ್ನೇ ಆಶ್ರಯಿಸುತ್ತಾರೆ.

ಏತಾವಾನೇವ ಲೋಕೇಽಸ್ಮಿನ್ಪುಂಸಾಂ ನಿಃಶ್ರೇಯಸೋದಯಃ ।
ತೀವ್ರೇಣ ಭಕ್ತಿಯೋಗೇನ ಮನೋ ಮಯ್ಯರ್ಪಿತಂ ಸ್ಥಿರಮ್ ॥೪೪॥

ಚಿತ್ತವು ತೀವ್ರವಾದ ಭಕ್ತಿಯೋಗದಿಂದ ನನ್ನಲ್ಲಿ ಲಗ್ನವಾಗಿ ಸ್ಥಿರವಾಗಿ

ರುವುದರಿಂದಲೇ ಮನುಷ್ಯನಿಗೆ ಪ್ರಪಂಚದಲ್ಲಿ ಅತ್ಯಂತ ಉತ್ತಮವಾದ ಮತ್ತು ಅತ್ಯಧಿಕವಾದ ಕಲ್ಯಾಣವುಂಟಾಗವುದು."

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ತೃತೀಯಸ್ಕಂಧದ ೨೫ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೨೬ನೆಯ ಅಧ್ಯಾಯ

ಮಹತ್ತೇ ಮುಂತಾದ ಬೇರೆ-ಬೇರೆ ತತ್ತ್ವಗಳ ಉತ್ಪತ್ತಿಯ ವರ್ಣನೆ

ಕಪಿಲಭಗವಂತರು ಹೇಳುತ್ತಾರೆ :

ಅಥ ತೇ ಸಮ್ಪ್ರವಕ್ಷ್ಯಾಮಿ ತತ್ತ್ವಾನಾಂ ಲಕ್ಷಣಂ ಪೃಥಕ್ ।
ಯದ್ವಿದಿತ್ವಾ ವಿಮುಚ್ಯೇತ ಪುರುಷಃ ಪ್ರಾಕೃತೈರ್ಗುಣೈಃ ॥೧॥

"ಅಮ್ಮಾ! ಈಗ ನಾನು ನಿನಗೆ ಪ್ರಕೃತಿಯೇ ಮುಂತಾದ ಎಲ್ಲ ತತ್ತ್ವಗಳಲ್ಲಿ ಒಂದೊಂದರ ಲಕ್ಷಣವನ್ನೂ ಹೇಳುವೆನು ; ಕೇಳು. ಇದನ್ನು ತಿಳಿದು ಕೊಂಡರೆ ಮನುಷ್ಯನು ಪ್ರಕೃತಿಯ ಗುಣಗಳಿಂದ ಬಿಡುಗಡೆಹೊಂದಬಹುದು.

ಆತ್ಮದರ್ಶನರೂಪವಾದ ಜ್ಞಾನವೇ ಪುರುಷನು ಮೋಕ್ಷವನ್ನು ಹೊಂದುವುದಕ್ಕೆ ಕಾರಣವಾಗುವುದು. ಪುರುಷನ ಅಹಂಕಾರವೆಂಬ ಹೃದ ಯದ ಗಂಟನ್ನು ಕತ್ತರಿಸಿಹಾಕುವುದೂ ಆ ಆತ್ಮಜ್ಞಾನವೇ ಎಂದು ಪಂಡಿತರು ಹೇಳುತ್ತಾರೆ. ಆ ಜ್ಞಾನವನ್ನು ಮುಂದೆ ನಾನು ನಿನಗೆ ವರ್ಣಿಸುವೆನು. ಈ ಇಡೀ ಜಗತ್ತೆಲ್ಲವೂ ಯಾವನಿಂದ ವ್ಯಾಪಿಸಲ್ಪಟ್ಟು ಪ್ರಕಾಶಿತವಾಗುತ್ತಿ ದೆಯೋ-ಆ ಆತ್ಮವೇ ಪುರುಷನು. ಆ ಪುರುಷನು ಅನಾದಿಯೂ, ತ್ರಿಗುಣಾ ತೀತನೂ, ಪ್ರಕೃತಿಯಿಂದ ಹೊರಗೆ ಇರುವವನೂ, ಅಂತಃಕರಣದಲ್ಲಿ ಸ್ಫುರಿತ ನಾಗುವ ಸ್ವಯಂಪ್ರಕಾಶನೂ ಆಗಿದ್ದಾನೆ. ಆ ಸರ್ವವ್ಯಾಪಕನಾದ ಪುರುಷನು ತನ್ನ ಬಳಿಗೆ ಲೀಲಾವಿಲಾಸಪೂರ್ವಕವಾಗಿ ಬರುವ ಅವ್ಯಕ್ತವೂ-ತ್ರಿಗುಣಾತ್ಮ ಕವೂ ಆದ ವೈಷ್ಣವೀಮಾಯೆಯನ್ನು ತನ್ನ ಇಷ್ಟಬಂದಂತೆ ಸ್ವೀಕಾರಮಾಡಿ ದನು. ಲೀಲಾಪರಾಯಣವಾಗಿರುವ ಪ್ರಕೃತಿಯು ತನ್ನ ಸತ್ತ್ವವೇ ಮುಂತಾದ ಗುಣಗಳ ಮೂಲಕ ಅವುಗಳಿಗೆ ಅನುರೂಪವಾದ ಪ್ರಜೆಗಳನ್ನು ಸೃಷ್ಟಿಮಾಡ ತೊಡಗಿತು. ಅದನ್ನು ಕಂಡು ಪುರುಷನು ಜ್ಞಾನವನ್ನು ಮುಚ್ಚಿಹಾಕುವ

ಅದರ ಆವರಣಶಕ್ತಿಯಿಂದ ಮೋಹಗೊಂಡುಬಿಟ್ಟನು ; ತನ್ನ ಸ್ವರೂಪವನ್ನೂ ಮರೆತುಬಿಟ್ಟನು. ಹೀಗೆ ಪುರುಷನು ತನಗಿಂತಲೂ ಭಿನ್ನವಾಗಿರುವ ಪ್ರಕೃತಿಯನ್ನೇ ತನ್ನ ಸ್ವರೂಪವೆಂದು ತಿಳಿದುಕೊಂಡಿದ್ದರಿಂದ ಪುರುಷನು ಪ್ರಕೃತಿಯ ಗುಣಗಳಿಂದ ಮಾಡಲ್ಪಡುವ ಕರ್ಮಗಳಲ್ಲಿ ತಾನೇ ಆ ಕರ್ಮಗಳ ಕರ್ತೃವೆಂದು ತಿಳಿಯಲು ತೊಡಗುತ್ತಾನೆ. ಹೀಗೆ ತಾನೇ ಕರ್ತೃ ಎಂದು ಭಾವಿಸಿಕೊಳ್ಳುವ ಅಭಿಮಾನದಿಂದಲೇ ವಾಸ್ತವವಾಗಿ ಅಕರ್ತೃವೂ, ಸ್ವಾಧೀನನೂ, ಸಾಕ್ಷಿಯೂ, ಆನಂದಸ್ವರೂಪನೂ ಆಗಿರುವ ಪುರುಷನು ಜನನ-ಮರಣ ರೂಪವಾದ ಬಂಧನಕ್ಕೂ ಪರತಂತ್ರತೆಗೂ ತುತ್ತಾಗುವನು. ಕಾರ್ಯರೂಪವಾದ ಶರೀರದಲ್ಲೂ, ಕಾರಣರೂಪವಾದ ಇಂದ್ರಿಯಗಳಲ್ಲೂ ಮತ್ತು ಕರ್ತೃಗಳಾಗಿರುವ ಇಂದ್ರಿಯಾಧಿಷ್ಠಾತೃಗಳಾದ ದೇವತೆಗಳಲ್ಲೂ ಪುರುಷನು 'ಅವು ತನ್ನವುಗಳು'–ಎಂದು ಆರೋಪಣೆಯನ್ನು ಮಾಡುವುದಕ್ಕೆ ಪ್ರಕೃತಿಯೇ ಕಾರಣವೆಂದು ಪಂಡಿತರು ಹೇಳುತ್ತಾರೆ ಮತ್ತು ವಾಸ್ತವವಾಗಿ ಪ್ರಕೃತಿಯಿಂದ ಬೇರೆಯಾಗಿದ್ದರೂ ಯಾವನು ಪ್ರಕೃತಿಸ್ಥನಾಗುತ್ತಾನೆಯೋ–ಅಂತಹ ಪುರುಷನನ್ನೇ ಸುಖ-ದುಃಖಗಳನ್ನೂ ಭೋಗಿಸಲು ಕಾರಣನೆಂದು ತಿಳಿಯುತ್ತಾರೆ."

ಕಪಿಲರ ಉತ್ತರವನ್ನು ಕೇಳಿದ ದೇವಹೂತಿಯು ಅವರಲ್ಲಿ ಮತ್ತೆ ಹೀಗೆ ಪ್ರಶ್ನೆಮಾಡಿದಳು :

"ಎಲೈ ಪುರುಷೋತ್ತಮನೇ! ಈ ವಿಶ್ವದ ಸ್ಥೂಲ ಮತ್ತು ಸೂಕ್ಷ್ಮ ಕಾರ್ಯಗಳೆಲ್ಲವೂ ಯಾವುದರ ಸ್ವರೂಪವಾಗಿದೆಯೋ ಮತ್ತು ಯಾವನು ಇದಕ್ಕೆಲ್ಲಾ ಕಾರಣನಾಗಿದ್ದಾನೆಯೋ–ಅಂತಹ ಪ್ರಕೃತಿಯ ಮತ್ತು ಪುರುಷನ ಲಕ್ಷಣಗಳನ್ನೂ ನನಗೆ ಕೃಪೆಯಿಟ್ಟು ತಿಳಿಸುವವನಾಗು." (ಶ್ಲೋಕ 1-9)

ಕಪಿಲರು ಹೇಳುತ್ತಾರೆ :

"ಅಮ್ಮ! ಪ್ರಕೃತಿ ಎಂದರೆ ಏನು? ಅಂದರೆ : ಯಾವುದು ತ್ರಿಗುಣಾತ್ಮಕವೂ, ಅವ್ಯಕ್ತವೂ, ನಿತ್ಯವೂ ಆಗಿ ಕಾರ್ಯ-ಕಾರಣರೂಪವಾಗಿದೆಯೋ ಮತ್ತು ನಿರ್ವಿಶೇಷವಾಗಿದ್ದರೂ ಸಂಪೂರ್ಣವಾದ ವಿಶೇಷಧರ್ಮಗಳಿಗೆ ಆಶ್ರಯವಾಗಿರುವುದೋ–ಆ ಪ್ರಧಾನವೆಂಬ ತತ್ತ್ವವನ್ನೇ ಪ್ರಕೃತಿ ಎನ್ನು

ತ್ತಾರೆ. ಪಂಚಮಹಾಭೂತಗಳು, ಪಂಚತನ್ಮಾತ್ರೆಗಳು, ನಾಲ್ಕು ಅಂತಃಕರಣ ವಿಶೇಷಗಳು ಮತ್ತು ಹತ್ತು ಇಂದ್ರಿಯಗಳು–ಈ ಇಪ್ಪತ್ತನಾಲ್ಕು ತತ್ತ್ವಗಳ ಸಮೂಹವನ್ನೇ ವಿದ್ವಾಂಸರು ಪ್ರಕೃತಿಯ ಕಾರ್ಯವೆಂದು ತಿಳಿಯುತ್ತಾರೆ. ಪೃಥಿವೀ, ಜಲ, ತೇಜಸ್ಸು, ವಾಯು ಮತ್ತು ಆಕಾಶ–ಎಂಬ ಈ ಐದೂ ಪಂಚಮಹಾಭೂತಗಳು. ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದ–ಎಂಬ ಈ ಐದೂ ಪಂಚತನ್ಮಾತ್ರೆಗಳೆಂದು ತಿಳಿಯಲ್ಪಟ್ಟಿವೆ. ಕೇಳುವ ಕಿವಿ, ಸ್ಪರ್ಶಿಸುವ ತೊಗಲು, ನೋಡುವ ಕಣ್ಣು, ರಸವನ್ನು ಗ್ರಹಿಸುವ ರಸನೇಂದ್ರಿಯವಾದ ನಾಲಿಗೆ, ಘ್ರಾಣೇಂದ್ರಿಯವಾದ ಮೂಗು, ಮಾತನಾಡುವ ವಾಗಿಂದ್ರಿಯ, ಕೈಗಳು, ಕಾಲುಗಳು, ಉಪಸ್ಥ ಮತ್ತು ವಾಯು–ಎಂಬ ಇವೇ ಹತ್ತು ಇಂದ್ರಿಯಗಳು. ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರ–ಎಂಬ ಇವೇ ನಾಲ್ಕು ಅಂತಃಕರಣದ ರೂಪಗಳು. ಇವುಗಳಿಗೆ ಕ್ರಮವಾಗಿ ಸಂಕಲ್ಪ, ನಿಶ್ಚಯ, ಚಿಂತೆ ಮತ್ತು ಅಭಿಮಾನ–ಎಂಬ ನಾಲ್ಕು ವೃತ್ತಿಗಳು. ತತ್ತ್ವಜ್ಞಾನಿಗಳು ಹೀಗೆ ಸಗುಣವಾದ ಬ್ರಹ್ಮಕ್ಕೆ ಸನ್ನಿವೇಶಸ್ಥಾನಗಳನ್ನಾಗಿ ಇಪ್ಪತ್ತನಾಲ್ಕು ತತ್ತ್ವಗಳನ್ನು ಲೆಕ್ಕಿಸುತ್ತಾರೆ. ಇವುಗಳಲ್ಲದೇ ಕಾಲ ಎಂಬುದು ಇಪ್ಪತ್ತೈದನೆಯ ತತ್ತ್ವವೆನಿಸುತ್ತದೆ. ಕೆಲವು ಜ್ಞಾನಿಗಳು ಕಾಲವನ್ನು ಪುರುಷನಿಂದ ಬೇರೆಯಾದ ಒಂದು ತತ್ತ್ವವನ್ನಾಗಿ ಭಾವಿಸದೇ ಅದನ್ನು ಪುರುಷನ ಪ್ರಭಾವವನ್ನಾಗಿ ಅಂದರೆ : ಈಶ್ವರನ ಸಂಹಾರಕಾರಕಶಕ್ತಿಯನ್ನಾಗಿ ತಿಳಿಯುತ್ತಾರೆ. ಪ್ರಕೃತಿಯಲ್ಲಿ ಸಿಲುಕಿ ಅದರ ಕಾರ್ಯವಾಗಿರುವ ದೇಹಾದಿಗಳನ್ನು ಆತ್ಮವೆಂದು ಅಭಿಮಾನಿಸಿ ಅಹಂಕಾರಗ್ರಸ್ತನಾಗಿ ತನ್ನನ್ನು ಕರ್ತನೆಂದು ತಿಳಿದುಕೊಳ್ಳುವ ಜೀವನಿಗೆ ಈ ಕಾಲದ ವಿಷಯದಲ್ಲಿ ನಿರಂತರವಾಗಿ ಭಯವು ಇದ್ದೇ ಇರುತ್ತದೆ. ಅಮ್ಮಾ! ಮನುಪುತ್ರಿಯೇ! ಯಾವನ ಪ್ರೇರಣೆಯಿಂದ ತ್ರಿಗುಣಗಳ ಸಾಮ್ಯಾವಸ್ಥೆಯ ರೂಪದಲ್ಲಿರುವ ನಿರ್ವಿಶೇಷವಾದ ಪ್ರಕೃತಿಯಲ್ಲಿ ಗತಿಯು ಉಂಟಾಗುತ್ತದೆಯೋ–ಆ ಪುರುಷರೂಪಿಯಾದ ಭಗವಂತನೇ ವಾಸ್ತವವಾಗಿ 'ಕಾಲ'–ಎಂದು ಕರೆಯಲ್ಪಡುತ್ತಾನೆ. ಹೀಗೆ ತನ್ನ ಮಾಯೆಯ ಮೂಲಕ ಎಲ್ಲ ಪ್ರಾಣಿಗಳ ಒಳಗಡೆಯಲ್ಲಿ ಚೈತನ್ಯರೂಪ

ದಲ್ಲಿಯೂ ಮತ್ತು ಹೊರಗೆ ಕಾಲರೂಪದಲ್ಲಿಯೂ ವ್ಯಾಪಿಸಿಕೊಂಡಿರುವ ಭಗವಂತನೇ ಇಪ್ಪತ್ತೈದನೆಯ ತತ್ತ್ವವು.

ಪರಮಪುರುಷನಾದ ಪರಮಾತ್ಮನು ಜೀವಗಳ ಅದೃಷ್ಟವಶದಿಂದ ಕ್ಷೋಭೆಗೊಂಡ ಸರ್ವಜೀವಗಳ ಉತ್ಪತ್ತಿಸ್ಥಾನರೂಪವಾದ ತನ್ನ ಮಾಯಾ ಶಕ್ತಿಯಲ್ಲಿ ತನ್ನ ವೀರ್ಯವನ್ನು ಸ್ಥಾಪಿಸಿದಾಗ ಅದರಿಂದ ತೇಜೋಮಯ ವಾದ ಮಹತ್ತತ್ತ್ವವು ಉತ್ಪನ್ನವಾಯಿತು. ಮುಂದಿನ ತತ್ತ್ವಗಳಿಗೆಲ್ಲಾ ಮೂಲರಾಶಿಸ್ಥಾನದಲ್ಲಿದ್ದು (ಕೂಟಸ್ಥವಾಗಿ) ಜಗತ್ತಿಗೆಲ್ಲಾ ಅಂಕುರದಂತೆ ಇದೆ ಈ ಮಹತ್ತತ್ತ್ವ. ಇದು ತನ್ನಲ್ಲಿರುವ ವಿಶ್ವವನ್ನು ಪ್ರಕಟಪಡಿಸುವುದಕ್ಕಾಗಿ ತನ್ನ ಸ್ವರೂಪವನ್ನು ಮುಚ್ಚಿಕೊಂಡಿದ್ದ ಪ್ರಳಯಕಾಲದ ಕಗ್ಗತ್ತಲೆಯನ್ನು ತನ್ನದೇ ಆದ ತೇಜಸ್ಸಿನಿಂದ ಕುಡಿದುಬಿಟ್ಟಿತು. (ಶ್ಲೋಕ 10-20)

ಸತ್ತ್ವಗುಣಮಯವಾಗಿ, ಸ್ವಚ್ಛವಾಗಿ, ಶಾಂತವಾಗಿ, ಶ್ರೀಭಗವಂತನ ಉಪಲಬ್ಧಿಸ್ಥಾನವಾಗಿರುವ ಯಾವ ಚಿತ್ತವುಂಟೋ–ಅದೇ ಮಹತ್ತತ್ತ್ವವು. ಅದನ್ನೇ 'ವಾಸುದೇವ' ಎಂದು ಕರೆಯುತ್ತಾರೆ. (ಅಧ್ಯಾತ್ಮದಲ್ಲಿ ಯಾವುದನ್ನು ಚಿತ್ತವೆಂದು ಕರೆಯುತ್ತಾರೆಯೋ–ಅದೇ ಅಧಿಭೂತದಲ್ಲಿ ಮಹತ್ತತ್ತ್ವವೆನಿಸುತ್ತದೆ). ಆ ಚಿತ್ತದಲ್ಲಿ ಅಧಿಷ್ಠಾತೃವಾಗಿರುವವನು ಕ್ಷೇತ್ರಜ್ಞನು ಮತ್ತು ಉಪಾಸ್ಯದೇವನು, ಉಪಾಸನೆಗೆ ಯೋಗ್ಯನಾಗಿರುವ ವಾಸುದೇವನು. ಹೀಗೆಯೇ ಅಹಂಕಾರದಲ್ಲಿ ಅಧಿಷ್ಠಾತೃವಾಗಿರುವವನು 'ರುದ್ರ'ನು ಮತ್ತು ಉಪಾಸ್ಯದೇವನು 'ಸಂಕರ್ಷಣನು'. ಬುದ್ಧಿಯಲ್ಲಿ ಅಧಿಷ್ಠಾತೃವಾಗಿರುವವನು 'ಬ್ರಹ್ಮ'ನು ಮತ್ತು ಉಪಾಸ್ಯದೇವನು 'ಪ್ರದ್ಯುಮ್ನನು'. ಮನಸ್ಸಿನಲ್ಲಿ ಅಧಿಷ್ಠಾತೃವಾಗಿರುವವನು 'ಚಂದ್ರ'ನು ಮತ್ತು ಉಪಾಸ್ಯದೇವನು 'ಅನಿರುದ್ಧ' ನಾಗಿದ್ದಾನೆ–ಎಂದು ತಿಳಿಯಬೇಕು. ಜಲವು ಪೃಥಿವಿಯೇ ಮುಂತಾದ ಪದಾರ್ಥಗಳೊಡನೆ ಸಂಬಂಧಿಸುವುದಕ್ಕೆ ಮೊದಲು, ನೊರೆ-ಗುಳ್ಳೆಗಳೇ ಮುಂತಾದುವುಗಳಿಲ್ಲದೇ ಸಹಜಸ್ಥಿತಿ ಯಲ್ಲಿರುವಾಗ ಅತ್ಯಂತನಿರ್ಮಲವಾಗಿರುತ್ತದೆ. ವಿಕಾರರಹಿತವಾಗಿರುತ್ತದೆ ಮತ್ತು ಶಾಂತವಾಗಿರುತ್ತದೆ. ನಿರ್ಮಲತ್ವ, ನಿರ್ವಿಕಾರತ್ವ ಮತ್ತು ಶಾಂತತ್ವಗಳು ಆಗ ಅದರ ಗುರುತುಗಳಾಗಿರುತ್ತವೆಯಲ್ಲವೇ? ಹಾಗೆಯೇ

ವೃತ್ತಿಸಹಿತವಾದ ಚಿತ್ತಕ್ಕೆ ಅದರ ಸ್ವಾಭಾವಿಕವಾದ ಅವಸ್ಥೆಯಾಗಿ ನಿರ್ಮಲತ್ವ, ನಿರ್ವಿಕಾರತ್ವ ಮತ್ತು ಶಾಂತತ್ವಗಳು ಗುರುತುಗಳಾಗಿರುತ್ತವೆ. (ಆಗ ಭಗವಂತನ ಬಿಂಬವನ್ನು ಗ್ರಹಿಸುವ ಸ್ವಚ್ಛತೆಯನ್ನೂ, ರಾಗಾದಿಗಳ ಅಭಾವವೆಂಬ ನಿರ್ವಿಕಾರತೆಯನ್ನೂ, ಲಯ-ವಿಕ್ಷೇಪಗಳಿಲ್ಲದಿರುವಿಕೆ ಯೆಂಬ ಪ್ರಶಾಂತತೆಯನ್ನೂ ಚಿತ್ತವು ಹೊಂದಿರುವುದು.) ಅನಂತರ ಭಗವಂತನ ಸಂಕಲ್ಪರೂಪವಾದ ಪ್ರೇರಣೆಯಿಂದ ಆ ಮಹತ್ತತ್ತ್ವದಲ್ಲಿ ವಿಕಾರ ವುಂಟಾಯಿತು. ಆಗ ಅದರಿಂದ ಕ್ರಿಯಾಶಕ್ತಿಪ್ರಧಾನವಾದ ಅಹಂಕಾರವು ಉತ್ಪನ್ನವಾಯಿತು. ಆ ಅಹಂಕಾರವು ವೈಕಾರಿಕ, ತೈಜಸ ಮತ್ತು ತಾಮಸ–ಎಂಬ ಮೂರು ಪ್ರಕಾರಗಳಿಂದ ಕೂಡಿದೆ. ಈ ಮೂರು ಪ್ರಕಾರ ಗಳಿಂದ ಕ್ರಮವಾಗಿ ಮನಸ್ಸು, ಇಂದ್ರಿಯಗಳು ಮತ್ತು ಪಂಚಮಹಾ ಭೂತಗಳು–ಇವುಗಳ ಉತ್ಪತ್ತಿಯಾಯಿತು. ಈ ಭೂತ, ಇಂದ್ರಿಯ ಮತ್ತು ಮನೋರೂಪವಾದ ಅಹಂಕಾರವನ್ನೇ ಪಂಡಿತರು ಸಾಕ್ಷಾತ್ 'ಸಂಕರ್ಷಣ'–ಸಹಸ್ರಶಿರಸ್ಸುಗಳುಳ್ಳ ಅನಂತ-ನಾಗರಾಜ–ಎಂದು ಕರೆಯು ತ್ತಾರೆ. ಈ ಅಹಂಕಾರತತ್ತ್ವಾಭಿಮಾನಿಯಾದ ಸಂಕರ್ಷಣದೇವರಿಗೆ ದೇವತಾರೂಪದಿಂದ ಕರ್ತೃತ್ವವೂ, ಇದ್ರಿಯರೂಪದಿಂದ ಕಾರಣತ್ವವೂ ಮತ್ತು ಪಂಚಭೂತರೂಪದಿಂದ ಕಾರ್ಯತ್ವವೂ ಲಕ್ಷಣಗಳಾಗಿರುತ್ತವೆ. ಸತ್ತ್ವರೂಪದಿಂದ ಶಾಂತತ್ವವೂ, ರಜೋಗುಣರೂಪದಿಂದ ಘೋರತ್ವವೂ ಮತ್ತು ತಮೋಗುಣರೂಪದಿಂದ ಮೂಢತ್ವವೂ ಲಕ್ಷಣಗಳಾಗುತ್ತವೆ. ಈ ಮೂರು ಬಗೆಯ ಅಹಂಕಾರಗಳಲ್ಲಿ ವೈಕಾರಿಕ ಅಹಂಕಾರವು ವಿಕಾರ ಗೊಳ್ಳಲು ಅದರಿಂದ 'ಮನಸ್ಸು' ಜನಿಸಿತು. ಈ ಮನಸ್ಸಿನ ಸಂಕಲ್ಪ-ವಿಕಲ್ಪಗಳಿಂದಲೇ ಕಾಮನೆಗಳು ಉತ್ಪತ್ತಿಯಾದುವು. ಈ ಮನಸ್ತತ್ತ್ವವೇ ಇಂದ್ರಿಯಗಳಿಗೆ ಅಧಿಷ್ಠಾತೃವಾಗಿರುವ 'ಅನಿರುದ್ಧ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಯೋಗಿಗಳು ಶರತ್ಕಾಲದ ನೀಲಕಮಲದಂತೆ ಶ್ಯಾಮಲವರ್ಣದಿಂದ ಕಂಗೊಳಿಸುವ ಈ ಅನಿರುದ್ಧನನ್ನು ಮೆಲ್ಲ-ಮೆಲ್ಲಗೆ ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಆರಾಧಿಸುತ್ತಾರೆ. ಎಲೈ ಸಾಧ್ವಿಯೇ! ಆ ಬಳಿಕ ತೈಜಸ ಅಹಂಕಾರವು ವಿಕಾರಗೊಳ್ಳಲು ಅದರಿಂದ ಬುದ್ಧಿ ತತ್ತ್ವವು ಉತ್ಪನ್ನವಾಯಿತು. ವಸ್ತುವಿನ ಸ್ಫೂರ್ತಿರೂಪವಾದ ವಿಜ್ಞಾನ

ಮತ್ತು ಇಂದ್ರಿಯಗಳ ವ್ಯಾಪಾರಗಳಲ್ಲಿ ಸಹಾಯಕವಾಗುವಿಕೆ–ಪದಾರ್ಥಗಳ ವಿಶೇಷಜ್ಞಾನವನ್ನು ಮಾಡುವಿಕೆ–ಇವು ಬುದ್ಧಿಯ ಕಾರ್ಯಗಳು. ಆ ಬುದ್ಧಿಯಲ್ಲಿ ವೃತ್ತಿಭೇದದಿಂದ ಸಂಶಯ, ವಿಪರ್ಯಯ (ವಿಪರೀತ ಜ್ಞಾನ), ನಿಶ್ಚಯ, ಸ್ಮೃತಿ ಮತ್ತು ನಿದ್ರೆ–ಎಂದು ಐದು ಭೇದಗಳುಂಟು. ಈ ಬುದ್ಧಿತತ್ತ್ವವೇ ಪ್ರದ್ಯುಮ್ನನೆನಿಸುತ್ತದೆ. ಇಂದ್ರಿಯಗಳೂ ಕೂಡ ತೈಜಸಾಹಂಕಾರದ ಕಾರ್ಯಗಳೇ ಆಗಿವೆ. ಇವುಗಳಲ್ಲಿ ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಯಗಳೆಂಬ ಎರಡು ಭೇದಗಳುಂಟು. ಕಣ್ಣು ಮುಂತಾದುವು ಜ್ಞಾನೇಂದ್ರಿಯಗಳು ಮತ್ತು ವಾಕ್ಕು ಮುಂತಾದುವು ಕರ್ಮೇಂದ್ರಿಯಗಳು. ಇವುಗಳಲ್ಲಿ ಕರ್ಮಗಳು ಪ್ರಾಣದ ಶಕ್ತಿಯೆಂದೂ–ಜ್ಞಾನವು ಬುದ್ಧಿಯ ಶಕ್ತಿಯೆಂದೂ ತಿಳಿಯಬೇಕು. ಇನ್ನು ತನ್ಮಾತ್ರೆಗಳು ಮತ್ತು ಅವುಗಳ ಇಂದ್ರಿಯಗಳ ಉತ್ಪತ್ತಿಯನ್ನೂ, ಲಕ್ಷಣಗಳನ್ನೂ, ಕಾರ್ಯಗಳನ್ನೂ ಹೇಳುತ್ತೇನೆ, ಕೇಳಮ್ಮಾ! ಭಗವಂತನ ಸಂಕಲ್ಪಶಕ್ತಿಯ ಪ್ರೇರಣೆಯಿಂದ ತಾಮಸಾಹಂಕಾರವು ವಿಕೃತಗೊಳ್ಳಲು ಅದರಿಂದ ಶಬ್ದ ತನ್ಮಾತ್ರೆಯು ಉದ್ಭವಿಸಿತು. ಶಬ್ದತನ್ಮಾತ್ರೆಯಿಂದ ಆಕಾಶವೂ ಮತ್ತು ಶಬ್ದದ ಜ್ಞಾನವನ್ನುಂಟುಮಾಡುವ ಶ್ರೋತ್ರೇಂದ್ರಿಯವೂ ಉತ್ಪನ್ನವಾದುವು. ಪದಾರ್ಥಗಳನ್ನು ಪ್ರಕಾಶಪಡಿಸುವುದು, ಪರೋಕ್ಷದಲ್ಲಿ ಮಾತನಾಡುವವನ ಜ್ಞಾನವನ್ನು* ಉಂಟುಮಾಡುವುದು ಮತ್ತು ಆಕಾಶದಂತೆ ಸೂಕ್ಷ್ಮರೂಪವಾಗುವಿಕೆ–ಇವೇ ಶಬ್ದದ ಕುರುಹುಗಳೆಂದು ವಿದ್ವಾಂಸರು ಹೇಳುತ್ತಾರೆ. ಭೂತಗಳಿಗೆ ಅವಕಾಶವನ್ನು ಕೊಡುವಿಕೆ, ಎಲ್ಲದರ ಹೊರಗೂ-ಒಳಗೂ ಇರುವಿಕೆ ಮತ್ತು ಪ್ರಾಣ, ಇಂದ್ರಿಯ, ಮನಸ್ಸುಗಳಿಗೆ ಆಶ್ರಯವಾಗಿರುವಿಕೆ–ಇವಿಷ್ಟೂ ಆಕಾಶದ ವೃತ್ತಿ (ಕಾರ್ಯ) ಲಕ್ಷಣಗಳು.

(ಶ್ಲೋಕ 21-34)

---

* ಜ್ಞಾನದಲ್ಲಿ ಸವಿಕಲ್ಪಕ ಮತ್ತು ನಿರ್ವಿಕಲ್ಪಕ–ಎಂಬ ಎರಡು ಬಗೆಗಳು. ಯಾವುದಾದರೂ ವಸ್ತುವನ್ನು ನೋಡಿದಾಗ ಅದರ ಹೆಸರು, ಜಾತಿ, ಗುಣ, ಕ್ರಿಯೆ–ಇವುಗಳೊಡನೆ ಆ ವಸ್ತುವಿನ ತಿಳಿವಳಿಕೆಯುಂಟಾದರೆ ಅದಕ್ಕೆ 'ಸವಿಕಲ್ಪಕ' ಜ್ಞಾನವೆಂದು ಹೆಸರು. ಆ ಹೆಸರು, ಜಾತಿ–ಇತ್ಯಾದಿಗಳು ಯಾವುವೂ ಇಲ್ಲದೇ ಮನಸ್ಸಿನಲ್ಲಿ ಮೊದಲು ಉಂಟಾಗುವ ಆಲೋಚನೆಗೆ 'ನಿರ್ವಿಕಲ್ಪಕ' ಜ್ಞಾನವೆಂದು ಹೆಸರು. ಇವುಗಳಲ್ಲಿ

ಅನಂತರ ಶಬ್ದತನ್ಮಾತ್ರೆಯ ಕಾರ್ಯವಾದ ಆಕಾಶದಲ್ಲಿ ಕಾಲಗತಿಯಿಂದ ವಿಕಾರವುಂಟಾಗಲು ಸ್ಪರ್ಶತನ್ಮಾತ್ರೆಯು ಉತ್ಪನ್ನವಾಯಿತು. ಅದರಿಂದ ವಾಯುವೂ ಮತ್ತು ಸ್ಪರ್ಶಗ್ರಹಣವನ್ನು ಮಾಡಿಸುವ ಚರ್ಮ- ಎನ್ನುವ ಇಂದ್ರಿಯವೂ ಉಂಟಾದುವು. ಮಾರ್ದವ, ಕಠೋರತ್ವ, ಶೀತಲತ್ವ, ಉಷ್ಣತೆ ಮತ್ತು ವಾಯುವಿನಂತೆ ಸೂಕ್ಷ್ಮರೂಪವಾಗುವಿಕೆ–ಇವು ಸ್ಪರ್ಶದ ಲಕ್ಷಣಗಳು. ಮರದ ಕೊಂಬೆಯೇ ಮುಂತಾದುವುಗಳನ್ನು ಅಲ್ಲಾಡಿಸುವುದು, ಹುಲ್ಲು ಮುಂತಾದವುಗಳನ್ನು ಒಟ್ಟಿಗೆ ಸಂಗ್ರಹಿಸುವುದು, ಎಲ್ಲೆಡೆಗೂ ತಲುಪಿಸುವುದು, ವಾಸನೆ ಮುಂತಾದುವುಗಳಿಂದ ಕೂಡಿದ ದ್ರವ್ಯವನ್ನು ಮೂಗು ಮುಂತಾದ ಇಂದ್ರಿಯದ ಬಳಿಗೂ ಮತ್ತು ಕಿವಿಯು ಶಬ್ದವನ್ನು ಕೇಳುವ ಇಂದ್ರಿಯದ ಬಳಿಗೂ ಮತ್ತು ಕಿವಿಯು ಶಬ್ದವನ್ನು ಕೇಳುವ ಇಂದ್ರಿಯದ ಬಳಿಗೂ ಒಯ್ಯುವುದು ಮತ್ತು ಸಮಸ್ತ ಇಂದ್ರಿಯಗಳಿಗೂ (ಆತ್ಮವಾಗಿ) ಕಾರ್ಯಶಕ್ತಿಯನ್ನು ಕೊಡುವುದು–ಇವು ವಾಯುವಿನ ವೃತ್ತಿ (ಕಾರ್ಯ) ಲಕ್ಷಣಗಳು.

ಇಂದಾದನಂತರ ದೈವದ ಪ್ರೇರಣೆಯಿಂದ ಸ್ಪರ್ಶತನ್ಮಾತ್ರೆಯಿಂದ ಕೂಡಿದ ವಾಯುವು ವಿಕಾರಗೊಳ್ಳಲು ಅದರಿಂದ ರೂಪತನ್ಮಾತ್ರೆಯು ಉತ್ಪನ್ನವಾಯಿತು. ಅದರಿಂದ ತೇಜಸ್ಸೂ ಮತ್ತು ರೂಪವನ್ನು ಅರಿವಿಗೆ ತರುವ ನೇತ್ರೇಂದ್ರಿಯವೂ ಆವಿರ್ಭವಿಸಿದುವು. ಎಲೈ ಸಾಧ್ವಿಯೇ! ವಸ್ತುವಿನ ಆಕಾರದ ಅರಿವನ್ನು ಉಂಟುಮಾಡುವುದು, ಗೌಣವಾಗುವುದು ಅಂದರೆ ದ್ರವ್ಯದ ಅಂಗರೂಪವಾಗಿ ಭಾಸವಾಗುವುದು. ದ್ರವ್ಯಕ್ಕೆ ಯಾವ ಆಕಾರ ಪ್ರಕಾರಗಳುಂಟೋ ಮತ್ತು ಪರಿಮಾಣ ಇತ್ಯಾದಿಗಳುಂಟೋ–ಅದೇ ರೂಪದಲ್ಲಿ ಉಪಲಕ್ಷಿತವಾಗುವುದು ಮತ್ತು ತೇಜಸ್ಸಿಗೆ ಸ್ವರೂಪಭೂತವಾಗುವುದು–ಇವೆಲ್ಲಾ ರೂಪತನ್ಮಾತ್ರೆಯ ವೃತ್ತಿಗಳು. ಹೊಳೆಯುವುದು, ಬೇಯಿಸುವುದು, ಚಳಿಯನ್ನು ಹೋಗಲಾಡಿಸುವುದು, ಒಣಗಿಸುವುದು,

---

ಸವಿಕಲ್ಪಕಜ್ಞಾನವು ಬುದ್ಧಿಯ ಧರ್ಮವೆಂದೂ, ನಿರ್ವಿಕಲ್ಪಕಜ್ಞಾನವು ಮನೋಧರ್ಮ ವೆಂದೂ ತಿಳಿಯಬೇಕು. "ಅಸ್ತಿ ಹ್ಯಾಲೋಚಿತಂ ಜ್ಞಾನಂ ಪ್ರಥಮಂ ನಿರ್ವಿಕಲ್ಪಕಮ್ । ಬಾಲಮೂಕಾದಿ ವಿಜ್ಞಾನಸದೃಶಂ ಶುದ್ಧವಸ್ತುಜಮ್ । ತತಃ ಪರಂ ಪುನರ್ವಸ್ತು ಧರ್ಮಜಾತ್ಯಾದಿಭಿರ್ಯಥಾ । ಬುದ್ಧ್ಯಾವಸೀಯತೇ ಸಾಪಿ ಪ್ರತ್ಯಕ್ಷತ್ವೇನ ಸಮ್ಮತಾ ॥"

ಹಸಿವು-ಬಾಯಾರಿಕೆಗಳನ್ನು ಉಂಟುಮಾಡುವುದು ಮತ್ತು ಅವುಗಳನ್ನು ಕಳೆದುಕೊಳ್ಳಲು ಆಹಾರ-ಪಾನೀಯಗಳನ್ನು ಸೇವಿಸುವಂತೆ ಮಾಡುವುದು– ಇವಿಷ್ಟೂ ತೇಜಸ್ಸಿನ ವೃತ್ತಿಗಳು. (ಶ್ಲೋಕ 35-40)

ಆಮೇಲೆ ದೈವದ ಪ್ರೇರಣೆಯಂತೆ ರೂಪತನ್ಮಾತ್ರಮಯವಾದ ತೇಜಸ್ಸು ವಿಕಾರಗೊಳ್ಳಲು, ಅದರಿಂದ ಜಲವೂ ಮತ್ತು ರಸವನ್ನು ಗ್ರಹಣ ಮಾಡುವ ಇಂದ್ರಿಯವಾದ ನಾಲಿಗೆಯೂ ಉಂಟಾದುವು. ರಸ ಎನ್ನುವುದು ತನ್ನ ಸ್ವರೂಪದಿಂದ ಒಂದೇ ಆದರೂ ಇತರ ಭೌತಿಕಪದಾರ್ಥಗಳ ಸಂಯೋಗದಿಂದ ಒಗರು, ಸಿಹಿ, ಕಾರ, ಕಹಿ, ಹುಳಿ, ಉಪ್ಪು ಮುಂತಾಗಿ ನಾನಾಪ್ರಕಾರವಾಗುವುದು. ಪದಾರ್ಥಗಳನ್ನು ನೆನೆಸಿ ಒದ್ದೆಯನ್ನಾಗಿಸುವುದು, ಮಣ್ಣು ಮುಂತಾದುವುಗಳನ್ನು ಮುದ್ದೆಯನ್ನಾಗಿಸುವುದು, ತೃಪ್ತಿ ಯನ್ನುಂಟುಮಾಡುವುದು, ಜೀವಂತನನ್ನಾಗಿ ಇರಿಸುವುದು, ಬಾಯಾರಿಕೆ ಯನ್ನು ಹೋಗಲಾಡಿಸುವುದು, ಪದಾರ್ಥಗಳನ್ನು ಮೃದುವಾಗಿಸುವುದು, ತಾಪವನ್ನು ಶಮನಗೊಳಿಸುವುದು, ಬಾವಿಯೇ ಮುಂತಾದುವುಗಳಿಂದ ಉಪಯೋಗಿಸಲ್ಪಡುತ್ತಿದ್ದರೂ ಅಲ್ಲಿ ಮತ್ತೆ-ಮತ್ತೆ ಪ್ರಕಟವಾಗುವುದು–ಇವು ಜಲದ ವೃತ್ತಿಗಳು. (ಲಕ್ಷಣಗಳು).

ಇದಾದನಂತರ ಭಗವಂತನ ಪ್ರೇರಣೆಯಂತೆ ರಸಸ್ವರೂಪವಾದ ಜಲವು ವಿಕಾರಗೊಳ್ಳಲು, ಅದರಿಂದ ಗಂಧತನ್ಮಾತ್ರೆಯು ಉಂಟಾಯಿತು. ಅದರಿಂದ ಪೃಥಿವಿಯೂ ಮತ್ತು ಗಂಧವನ್ನು ಗ್ರಹಿಸುವಂತೆ ಮಾಡುವ ಮೂಗು ಎಂಬ ಇಂದ್ರಿಯವೂ ಪ್ರಕಟಗೊಂಡುವು. ಗಂಧ ಎಂಬುದು ಒಂದೇ ಆದರೂ ಪರಸ್ಪರವಾಗಿ ದ್ರವ್ಯಗಳು ಹೆಚ್ಚು ಅಥವಾ ಕಡಿಮೆ ಪ್ರಮಾಣದಲ್ಲಿ ಮಿಶ್ರವಾಗುವುದರಿಂದ ಆ ಬೆರಕೆಯ ಗಂಧವು ಸುಗಂಧ, ದುರ್ಗಂಧ, ಮೃದು, ತೀವ್ರ, ಹುಳಿ–ಮುಂತಾಗಿ ನಾನಾಪ್ರಕಾರಗಳಾಗುವುವು. ದೇವತಾಪ್ರತಿಮೆಯೇ ಮುಂತಾದ ರೂಪದಲ್ಲಿ ಬ್ರಹ್ಮದಸಾಕಾರ ಭಾವನೆಗೆ ಆಶ್ರಯವಾಗುವಿಕೆ, ಜಲವೇ ಮುಂತಾದ ಕಾರಣತತ್ತ್ವಗಳಿಂದ ಭಿನ್ನವಾದ ಬೇರಾವುದೋ ಆಶ್ರಯದ ಅಪೇಕ್ಷೆ ಇಲ್ಲದೆಯೇ ಇರುವುದು, ಜಲವೇ ಮುಂತಾದ ಇತರ ಪದಾರ್ಥಗಳನ್ನು ಧರಿಸುವುದು, ಆಕಾಶವೇ ಮುಂತಾದುವುಗಳಿಗೆ ಅವಚ್ಛೇದಕವಾಗುವುದು ಅಂದರೆ : ಘಟಾಕಾಶ,

ಮಹಾಕಾಶ ಮುಂತಾದ ಭೇದಗಳಿಗೆ ಸಾಧಕವಾಗುವುದು ಮತ್ತು ಪರಿಣಾಮ ವಿಶೇಷದಿಂದ ಸರ್ವಪ್ರಾಣಿಗಳ ಸ್ತ್ರೀತ್ವ-ಪುರುಷತ್ವ ಮುಂತಾದ ಗುಣಗಳನ್ನು ಪ್ರಕಟಪಡಿಸುವುದು–ಇವು ಪೃಥಿವಿಯ ಕಾರ್ಯರೂಪವಾದ ಕುರುಹುಗಳು.

ಇನ್ನು ಆಯಾ ಇಂದ್ರಿಯಗಳ ವಿಷಯಗಳಿಗೆ ಅನುಗುಣವಾಗಿ ಇಂದ್ರಿಯಗಳ ಲಕ್ಷಣವನ್ನು ಹೇಳುವೆನು, ಕೇಳಮ್ಮಾ! ಆಕಾಶದ ವಿಶೇಷ ಗುಣವಾದ ಶಬ್ದವನ್ನು ಗ್ರಹಿಸುವುದೇ ಶ್ರೋತ್ರೇಂದ್ರಿಯವೆನಿಸುವುದು. ವಾಯುವಿನ ವಿಶೇಷಗುಣವಾದ ಸ್ಪರ್ಶವು ಯಾವುದಕ್ಕೆ ವಿಷಯವಾಗಿ ದೆಯೋ–ಅದು ತ್ವಕ್ (ತೊಗಲು) ಎಂಬ ಇಂದ್ರಿಯವು. ತೇಜಸ್ಸಿನ ವಿಶೇಷ ಗುಣವಾದ ರೂಪವು ಯಾವುದಕ್ಕೆ ವಿಷಯವಾಗಿದೆಯೋ–ಅದು ನೇತ್ರ– ಎಂಬ ಇಂದ್ರಿಯವಾಗಿದೆ. ಜಲದ ವಿಶೇಷಗುಣವಾದ ರಸವನ್ನೇ ವಿಷಯ ವನ್ನಾಗಿ ಹೊಂದಿರುವ ಇಂದ್ರಿಯವು ರಸನೇಂದ್ರಿಯ (ನಾಲಿಗೆ) ಎನಿಸುತ್ತದೆ ಮತ್ತು ಪೃಥ್ವಿಯ ವಿಶೇಷಗುಣವಾದ ಗಂಧವನ್ನೇ ವಿಷಯವನ್ನಾಗಿ ಹೊಂದಿ ರುವ ಇಂದ್ರಿಯವು ಘ್ರಾಣೇಂದ್ರಿಯ (ಮೂಗು)–ಎಂದು ತಿಳಿಯಬೇಕು. ವಾಯುವೇ ಮುಂತಾದ ಕಾರ್ಯತತ್ತ್ವಗಳಲ್ಲಿ ಆಕಾಶವೇ ಮುಂತಾದ ಕಾರಣತತ್ತ್ವಗಳು ಇರುವುದರಿಂದ ಆ ಕಾರಣತತ್ತ್ವಗಳ ಗುಣಗಳೂ ಕಾರ್ಯ ತತ್ತ್ವಗಳಲ್ಲಿ ಅನುಸರಿಸಿ ಬರುತ್ತವೆ. ಇದರಂತೆ ಕಡೆಯ ಕಾರ್ಯತತ್ತ್ವವಾದ ಪೃಥಿವಿಯಲ್ಲಿ ಸಮಸ್ತಭೂತಗಳ ಗುಣಗಳೂ ಅಂದರೆ : ಶಬ್ದ-ಸ್ಪರ್ಶ-ರೂಪ- ರಸ-ಗಂಧಗಳೂ ಕಂಡುಬರುತ್ತವೆ. ಮಹತ್ತತ್ತ್ವ, ಅಹಂಕಾರತತ್ತ್ವ ಮತ್ತು ಪಂಚಭೂತತತ್ತ್ವ–ಎಂಬ ಈ ಏಳು ತತ್ತ್ವಗಳು ಒಂದರೊಡನೊಂದು ಸೇರಿ ಕೊಳ್ಳದೇ ಇರಲು ಅಂದರೆ ಪ್ರತ್ಯೇಕ-ಪ್ರತ್ಯೇಕವಾಗಿ ಇರಲು–ಅವು ಮುಂದಿನ ಸೃಷ್ಟಿಯನ್ನು ಮಾಡಲು ಅಶಕ್ತವಾದುವು. ಅದನ್ನು ಕಂಡು ಜಗತ್ತಿಗೆ ಆದಿಕಾರಣನಾದ ಶ್ರೀಮನ್ನಾರಾಯಣನು ಕಾಲ, ಅದೃಷ್ಟ ಮತ್ತು ಸತ್ತ್ವವೇ ಮುಂತಾದ ಗುಣಗಳೊಡನೆ ತಾನು ಅವುಗಳಲ್ಲಿ ಪ್ರವೇಶಮಾಡಿದನು.

(ಶ್ಲೋಕ 40-50)

ಅನಂತರ ಪರಮಾತ್ಮನ ಆ ಅನುಪ್ರವೇಶದಿಂದ ಕ್ಷೋಭೆಗೊಂಡು ಒಂದರೊಡನೊಂದು ಬೆರೆತುಕೊಂಡ ಆ ತತ್ತ್ವಗಳಿಂದ ಒಂದು ಜಡವಾದ ಅಂಡವು ಉತ್ಪನ್ನವಾಯಿತು. ಆ ಅಂಡದಿಂದಲೇ ಈ ವಿರಾಟ್‌ಪುರುಷನು

ಅಭಿವ್ಯಕ್ತಗೊಂಡನು. ಆ ಅಂಡಕ್ಕೆ 'ವಿಶೇಷ' ಎಂದು ಹೆಸರು. ಅದರ ಒಳಗಡೆ ಇದ್ದ ಶ್ರೀಹರಿಯ ರೂಪವಾಗಿ (ಶರೀರಭೂತವಾಗಿ) ಹದಿನಾಲ್ಕು ಲೋಕಗಳ ವಿಸ್ತಾರವೂ ಇದೆ. ಇದು ನಾಲ್ಕು ಕಡೆಗಳಲ್ಲೂ ಕ್ರಮವಾಗಿ ಒಂದು ಮತ್ತೊಂದಕ್ಕೆ ಹತ್ತರಷ್ಟು ಇರುವ ಜಲ, ಅಗ್ನಿ, ವಾಯು, ಆಕಾಶ, ಅಹಂಕಾರ ಮತ್ತು ಮಹತ್ತತ್ತ್ವ-ಎಂಬಿವುಗಳ ಆರು ಆವರಣಗಳಿಂದ ಕೂಡಿದೆ. ಇವೆಲ್ಲದರ ಹೊರಗೂ ಏಳನೆಯ ಆವರಣವಾದ ಪ್ರಕೃತಿಯು ಇರುವುದಮ್ಮಾ! ಅನಂತರ ಕಾರಣಮಯವಾದ ನೀರಿನಲ್ಲಿದ್ದ ಆ ತೇಜೋ ಮಯವಾದ ಅಂಡದಿಂದ ಮೇಲೆದ್ದು ಆ ವಿರಾಟ್‌ಪುರುಷನು ಪುನಃ ಅದರಲ್ಲಿ ಪ್ರವೇಶಮಾಡಿ ಅದರಲ್ಲಿ ಮತ್ತೂ ಹಲವು ಬಗೆಯ ಛಿದ್ರಗಳನ್ನು ಮಾಡಿದನು. ಎಲ್ಲಕ್ಕೂ ಮೊದಲು ಅದರಲ್ಲಿ ಬಾಯಿಯು ಪ್ರಕಟಗೊಂಡಿತು. ಅದರಿಂದ ವಾಗಿಂದ್ರಿಯವಾದ ನಾಲಿಗೆಯೂ ಮತ್ತು ಅನಂತರ ಅದರ ಅಧಿಷ್ಠಾತೃದೇವತೆಯಾದ ಅಗ್ನಿಯೂ ಉತ್ಪನ್ನರಾದರು. ಆಮೇಲೆ ಮೂಗುಹೊಳ್ಳೆಗಳು ಪ್ರಕಟಗೊಂಡುವು. ಮತ್ತು ಅವುಗಳಿಂದ ಪ್ರಾಣಸಹಿತವಾದ ಘ್ರಾಣೇಂದ್ರಿಯದ ಉತ್ಪತ್ತಿಯಾಯಿತು. ಘ್ರಾಣೇಂದ್ರಿಯದನಂತರ- ಅದರ ಅಧಿಷ್ಠಾತೃವಾದ ವಾಯುದೇವರು ಉತ್ಪನ್ನರಾದರು. ಆಮೇಲೆ ಕಣ್ಣಿನ ಗೋಳಗಳು ಪ್ರಕಟಗೊಂಡು ಅವುಗಳಿಂದ ಕಣ್ಣು ಎಂಬ ಇಂದ್ರಿಯವು ಆವಿರ್ಭವಿಸಿದನಂತರ-ಅದರ ಅಧಿಷ್ಠಾತೃವಾದ ಸೂರ್ಯದೇವರು ಉತ್ಪನ್ನರಾದರು. ಅದರನಂತರ ಕಿವಿದೆರೆಗಳು ಪ್ರಕಟಗೊಂಡುವು. ಅವುಗಳಿಂದ ಅವುಗಳ ಇಂದ್ರಿಯವಾದ ಕಿವಿ ಎಂಬ ಇಂದ್ರಿಯವೂ ಮತ್ತು ಅದರ ಅಭಿಮಾನಿದೇವತೆಯಾದ ದಿಗ್ದೇವತೆಯೂ ಪ್ರಕಟಗೊಂಡುವು. ಇದಾದ ನಂತರ ಆ ವಿರಾಟ್‌ಪುರುಷನಲ್ಲಿ ತೊಗಲು ಎಂಬ ಇಂದ್ರಿಯವು ಕಾಣಿಸಿಕೊಂಡಿತು. ಅದರಿಂದ ಮೈಗೂದಲು, ಗಡ್ಡ-ಮೀಸೆಗಳು ಮತ್ತು ತಲೆಗೂದಲುಗಳು ಆವಿರ್ಭವಿಸಿದುವು. ಅನಂತರ ಆ ತೊಗಲು ಎಂಬ ಇಂದ್ರಿಯದ ದೇವತೆಗಳಾದ ಓಷಧಿಗಳು (ಅನ್ನ ಮುಂತಾದುವು) ಪ್ರಕಟಗೊಂಡುವು. ಆಮೇಲೆ ಲಿಂಗವು ಉದ್ಭವವಾಯಿತು. ಅದರಿಂದ ವೀರ್ಯವೂ ಮತ್ತು ವೀರ್ಯದಿಂದ ಲಿಂಗದ ಅಭಿಮಾನಿದೇವತೆಯಾದ ಆಪೋ (ಜಲ) ದೇವತೆಯೂ ಪ್ರಕಟಗೊಂಡರು. ಆಮೇಲೆ ಗುದವು

ಪ್ರಕಟವಾಯಿತು. ಅದರಿಂದ ಅಪಾನವಾಯುವೂ ಮತ್ತು ಅಪಾನದನಂತರ ಅದರ ಅಭಿಮಾನಿದೇವತೆಯಾಗಿ ಲೋಕಗಳಲ್ಲಿ ಭಯವನ್ನು ತುಂಬಿಸುವ ಮೃತ್ಯುದೇವತೆಯೂ ಕಾಣಿಸಿಕೊಂಡರು. ಅದಾದಮೇಲೆ ಹಸ್ತ (ಕೈ) ಎಂಬ ಇಂದ್ರಿಯವು ಪ್ರಕಟಗೊಂಡಿತು. ಅದರಿಂದ ಬಲವೂ ಮತ್ತು ಬಲದ ಅಭಿಮಾನಿದೇವತೆಯಾದ ಇಂದ್ರನೂ ಪ್ರಕಟವಾದರು. ಅನಂತರ ಚರಣ (ಕಾಲು) ಎಂಬ ಇಂದ್ರಿಯವು ಪ್ರಕಟಗೊಂಡಿತು. ಅದರಿಂದ ನಡೆಯೆಂಬ ಕ್ರಿಯೆಯೂ ಮತ್ತು ಪಾದೇಂದ್ರಿಯದ ಅಭಿಮಾನಿಯಾದ ವಿಷ್ಣುದೇವರೂ ಪ್ರಕಟಗೊಂಡರು. ಹಾಗೆಯೇ ವಿರಾಟ್‌ಪುರುಷನ ನಾಡಿಗಳು ಪ್ರಕಟಗೊಂಡಾಗ ಅವುಗಳಿಂದ ರಕ್ತವು ಉತ್ಪನ್ನವಾಯಿತು ಮತ್ತು ಅದರಿಂದ ನದಿಗಳು ಆವಿರ್ಭವಿಸಿದುವು. ಆಮೇಲೆ ಆತನ ಹೊಟ್ಟೆಯು ಪ್ರಕಟ ಗೊಂಡಿತು. ಅದರಿಂದ ಹಸಿವು-ಬಾಯಾರಿಕೆಗಳು ಪ್ರಕಟಗೊಂಡುವು ಮತ್ತು ಹೊಟ್ಟೆಯ ಅಭಿಮಾನೀದೇವತೆಯಾದ ಸಮುದ್ರರಾಜನು ಉತ್ಪನ್ನನಾದನು. ಅದಾದನಂತರ ಆತನ ಹೃದಯವು ಪ್ರಕಟಗೊಂಡಿತು. ಹೃದಯದಿಂದ ಮನಸ್ಸು ಪ್ರಕಟವಾಯಿತು. ಮನಸ್ಸಿನ ಅನಂತರ ಅದರ ಅಭಿಮಾನಿದೇವತೆ ಯಾದ ಚಂದ್ರನು ಕಾಣಿಸಿಕೊಂಡನು. ಅನಂತರ ಬುದ್ಧಿಯೂ ಬುದ್ಧಿಗೆ ಅಭಿಮಾನಿದೇವತೆಯಾದ ಬ್ರಹ್ಮನೂ ಕಾಣಿಸಿಕೊಂಡರು. ಅದಾದನಂತರ ಅಹಂಕಾರವೂ ಅದರ ಅಭಿಮಾನಿದೇವತೆಯಾದ ರುದ್ರದೇವರೂ ಉತ್ಪನ್ನ ರಾದರು. ಅದಾದ ಮೇಲೆ ಚಿತ್ತವೂ ಮತ್ತು ಅದರ ಅಭಿಮಾನೀದೇವತೆಯಾದ ಕ್ಷೇತ್ರಜ್ಞನೂ ಕಾಣಿಸಿಕೊಂಡರು. (ಶ್ಲೋಕ 51-61)

ಈ ಕ್ಷೇತ್ರಜ್ಞನೂ ಮತ್ತು ಉಳಿದ ಎಲ್ಲ ದೇವತೆಗಳೂ ಉತ್ಪನ್ನರಾದರೂ ಕೂಡ ವಿರಾಟ್‌ಪುರುಷನನ್ನು ಎಬ್ಬಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆಗ ಅವರು ಆತನನ್ನು ಎಬ್ಬಿಸಲು ಕ್ರಮವಾಗಿ ತಮ್ಮ-ತಮ್ಮ ಉತ್ಪತ್ತಿ ಸ್ಥಾನಗಳಲ್ಲಿ ಪ್ರವೇಶಮಾಡಿದರು. ಹೇಗೆಂದರೆ : ಅಗ್ನಿಯು ವಾಣಿಯೊಡಗೂಡಿ ಬಾಯೊಳಗೆ ಪ್ರವೇಶಿಸಿದನು. ಆದರೆ ವಿರಾಟ್‌ಪುರುಷನು ಏಳಲಿಲ್ಲ. ವಾಯುವು ಘ್ರಾಣೇಂದ್ರಿಯದೊಡನೆ ಮೂಗುಹೊಳ್ಳೆಗಳಲ್ಲಿ ಪ್ರವೇಶಿಸಿದನು. ಆದರೂ ಪುರುಷನು ಏಳಲಿಲ್ಲ. ಸೂರ್ಯದೇವನು ಕಣ್ಣು ಎಂಬ ಇಂದ್ರಿಯದೊಡನೆ ನೇತ್ರಗಳಲ್ಲಿ ಪ್ರವೇಶಮಾಡಿದನು. ಆದರೂ ಪುರುಷನು

ಏಳಲಿಲ್ಲ. ದಿಕ್ಕುಗಳು ಶ್ರವಣೇಂದ್ರಿಯದೊಡನೆ ಕಿವಿದೆರೆಗಳೊಳಗೆ ಪ್ರವೇಶ ಮಾಡಿದುವು. ಆದರೂ ವಿರಾಟ್‌ಪುರುಷನು ಏಳಲಿಲ್ಲ. ಆಗ ಓಷಧಿಗಳು ರೋಮ (ಮೈಗೂದಲು) ಗಳೊಡನೆ ತೊಗಲು ಎಂಬ ತನ್ನ ಇಂದ್ರಿಯದಲ್ಲಿ ಹೊಕ್ಕುವು. ಆದರೂ ವಿರಾಟ್‌ಪುರುಷನು ಏಳಲಿಲ್ಲ. ಜಲವು ವೀರ್ಯ ದೊಡನೆ ಲಿಂಗದೊಳಗೆ ಪ್ರವೇಶಮಾಡಿತು. ಆಗಲೂ ಪುರುಷನನ್ನು ಏಳಿಸಲಾಗಲಿಲ್ಲ. ಮೃತ್ಯುದೇವತೆಯು ಅಪಾನದೊಡನೆ ಗುದದೊಳಗೆ ಪ್ರವೇಶಿಸಿತು. ಆದರೂ ಪುರುಷನನ್ನು ಏಳಿಸುವುದರಲ್ಲಿ ಅದು ಸಮರ್ಥ ವಾಗಲಿಲ್ಲ. ಇಂದ್ರನು ಬಲದೊಡನೆ ಕೈಗಳಲ್ಲಿ ಪ್ರವೇಶಮಾಡಿದರೂ ವಿರಾಟ್‌ಪುರುಷನನ್ನು ಏಳಿಸಲಾಗಲಿಲ್ಲ. ವಿಷ್ಣುದೇವರು ಗತಿಯೊಡನೆ ಚರಣಗಳಲ್ಲಿ ಹೊಕ್ಕರೂ ಪುರುಷನು ಏಳಲಿಲ್ಲ. ನದಿಗಳು ರಕ್ತದೊಡನೆ ನಾಡಿಗಳಲ್ಲಿ ಪ್ರವೇಶಮಾಡಿದರೂ ವಿರಾಟ್‌ಪುರುಷನನ್ನು ಎಬ್ಬಿಸಲಾಗಲಿಲ್ಲ. ಸಮುದ್ರವು ಹಸಿವು-ಬಾಯಾರಿಕೆಗಳೊಡನೆ ಉದರದಲ್ಲಿ ಹೊಕ್ಕರೂ ವಿರಾಟ್‌ಪುರುಷನನ್ನು ಎಬ್ಬಿಸಲಾಗಲಿಲ್ಲ. ಚಂದ್ರನು ಮನಸ್ಸಿನೊಡಗೂಡಿ ಹೃದಯದಲ್ಲಿ ಪ್ರವೇಶಮಾಡಿದನು. ಆದರೂ ವಿರಾಟ್‌ಪುರುಷನು ಏಳಲೇ ಇಲ್ಲ. ಬ್ರಹ್ಮದೇವರು ಬುದ್ಧಿಯೊಡನೆ ಹೃದಯದಲ್ಲಿ ಹೊಕ್ಕರೂ ವಿರಾಟ್ ಪುರುಷನು ಏಳಲಿಲ್ಲ. ರುದ್ರದೇವರು ಅಹಂಕಾರತತ್ತ್ವದೊಡನೆ ಅದೇ ಹೃದಯದಲ್ಲಿ ಪ್ರವೇಶಮಾಡಿದರೂ ವಿರಾಟ್‌ಪುರುಷನನ್ನು ಎಬ್ಬಿಸಲಾಗಲಿಲ್ಲ. ಆದರೆ ಚಿತ್ತದ ಅಧಿಷ್ಠಾತೃವಾದ ಕ್ಷೇತ್ರಜ್ಞನು ಚಿತ್ತಸಹಿತನಾಗಿ ಹೃದಯದಲ್ಲಿ ಪ್ರವೇಶಮಾಡಲು–ಒಡನೆಯೇ ವಿರಾಟ್‌ಪುರುಷನು ಜಲ ದಿಂದ ಮೇಲೆದ್ದು ನಿಂತುಕೊಂಡನು. ಲೋಕದಲ್ಲಿ ನಿದ್ರಿಸುತ್ತಿರುವ ಪ್ರಾಣಿಯನ್ನು ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ–ಮುಂತಾದುವುಗಳೂ ಚಿತ್ತದ ಅಧಿಷ್ಠಾತೃವಾಗಿರುವ ಕ್ಷೇತ್ರಜ್ಞನ ಸಹಾಯವಿಲ್ಲದೇ ತಮ್ಮ ಬಲದಿಂದ ಏಳಿಸಲಾರವಲ್ಲವೇ? ಹಾಗೆಯೇ ವಿರಾಟ್‌ಪುರುಷನನ್ನೂ ಕೂಡ ಅವರು ಕ್ಷೇತ್ರಜ್ಞನಾದ ಆತ್ಮನ ಸಹಾಯವಿಲ್ಲದೇ ಏಳಿಸಲು ಅಸಮರ್ಥರಾದರು.

(ಶ್ಲೋಕ 62-71)

ತಮಸ್ಮಿನ್ಪ್ರತ್ಯಗಾತ್ಮಾನಂ ಧಿಯಾ ಯೋಗಪ್ರವೃತ್ತಯಾ ।
ಭಕ್ತ್ಯಾ ವಿರಕ್ತ್ಯಾ ಜ್ಞಾನೇನ ವಿವಿಚ್ಯಾತ್ಮನಿ ಚಿನ್ತಯೇತ್ ॥೭೨॥

ಆದ್ದರಿಂದ ಭಕ್ತಿ, ವೈರಾಗ್ಯ ಮತ್ತು ಚಿತ್ತದ ಏಕಾಗ್ರತೆಯ ಮೂಲಕ ಪ್ರಕಟವಾಗುವ ಜ್ಞಾನದ ಮೂಲಕ, ಆ ಅಂತರಾತ್ಮಸ್ವರೂಪನಾದ ಕ್ಷೇತ್ರಜ್ಞನು ಈ ಶರೀರದಲ್ಲಿ ಇದ್ದಾನೆ–ಎಂದು ವಿವೇಕದಿಂದ ತಿಳಿದು ಆತನನ್ನು ಧ್ಯಾನಿಸುತ್ತಿರಬೇಕು.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೨೬ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೨೭ನೆಯ ಅಧ್ಯಾಯ

ಪ್ರಕೃತಿ–ಪುರುಷರ ವಿವೇಕದಿಂದ ಮೋಕ್ಷಪ್ರಾಪ್ತಿಯ ವರ್ಣನೆ

ಶ್ರೀಕಪಿಲಭಗವಂತನು ದೇವಹೂತಿಗೆ ಉಪದೇಶಮಾಡುತ್ತಾನೆ :

ಪ್ರಕೃತಿಸ್ಥೋಽಪಿ ಪುರುಷೋ ನಾಜ್ಯತೇ ಪ್ರಾಕೃತೈರ್ಗುಣೈಃ ।
ಅವಿಕಾರಾದಕರ್ತೃತ್ವಾನ್ನಿರ್ಗುಣತ್ವಾಜ್ಜಲಾರ್ಕವತ್ ॥೧॥

"ಅಮ್ಮಾ! ಸೂರ್ಯನು ನೀರಿನಲ್ಲಿ ಪ್ರತಿಬಿಂಬಿಸಿದ್ದಾಗ ಆ ಪ್ರತಿಬಿಂಬದಲ್ಲಿ ನೀರಿನಲ್ಲಿರುವ ಶೈತ್ಯ-ಸಂಚಲನೆಗಳೇ ಮುಂತಾದ ಗುಣಗಳು ಅಂಟಿಕೊಳ್ಳುವುದಿಲ್ಲವಷ್ಟೇ! ಹಾಗೆಯೇ ಆತ್ಮನು ಪ್ರಕೃತಿಯ ಕಾರ್ಯವಾಗಿರುವ ಶರೀರದಲ್ಲಿ ಇದ್ದರೂ ಅದರ ಗುಣಗಳಾದ ಸುಖ-ದುಃಖಾದಿಗಳಿಂದ ವಾಸ್ತವವಾಗಿ ಆತನು ಲಿಪ್ತನಾಗುವುದಿಲ್ಲ. ಅವು ಆತನಿಗೆ ಅಂಟುವುದಿಲ್ಲ. ಏಕೆಂದರೆ : ಆತನು ಸ್ವಭಾವದಿಂದಲೇ ನಿರ್ವಿಕಾರನು. ಕರ್ತೃತ್ವವಿಲ್ಲದವನು ಮತ್ತು ನಿರ್ಗುಣನು.

ಆದರೆ ಅದೇ ಪುರುಷನೇ ಪ್ರಕೃತಿಯ ಗುಣಗಳೊಡನೆ ತನ್ನ ಸಂಬಂಧವನ್ನು ಸ್ಥಾಪಿಸಿಕೊಂಡರೆ–ಆಗ ಆತನು ಅಹಂಕಾರದಿಂದ ಮೋಹಗೊಂಡು 'ನಾನು ಕರ್ತೃವಾಗಿದ್ದೇನೆ' ಎಂದು ಭಾವಿಸತೊಡಗುತ್ತಾನೆ. ಈ ಅಭಿಮಾನದ ಕಾರಣ ಆತನು ದೇಹದ ಸಂಬಂಧದಿಂದ ಆಚರಿಸಲ್ಪಟ್ಟ ಪುಣ್ಯ-ಪಾಪರೂಪವಾದ ಕರ್ಮಗಳ ದೋಷದಿಂದ ತನ್ನ ಸ್ವಾತಂತ್ರ್ಯವನ್ನೂ ಮತ್ತು ಶಾಂತಿಯನ್ನೂ ಕಳೆದುಕೊಂಡು ಉತ್ತಮ, ಮಧ್ಯಮ ಅಥವಾ ನೀಚವಾದ ಯೋನಿಗಳಲ್ಲಿ ಜನ್ಮತಳೆದು ಸಂಸಾರಚಕ್ರದಲ್ಲಿ ಸುತ್ತುತ್ತಿರುವನು.

ಸ್ವಪ್ನದಲ್ಲಿ ಭಯ-ಶೋಕಾದಿಗಳಿಗೆ ವಾಸ್ತವವಾದ ಕಾರಣವಾವುದೂ ಇಲ್ಲ. ಆದರೂ ಸ್ವಪ್ನದ ಪದಾರ್ಥಗಳಲ್ಲಿ ಆಸ್ಥೆಯನ್ನು ಇಟ್ಟುಕೊಂಡರೆ ದುಃಖವನ್ನು ಅನುಭವಿಸಬೇಕಾಗಿ ಬರುತ್ತದೆಯಲ್ಲವೇ? ಹಾಗೆಯೇ ಭಯ-ಶೋಕಗಳು, ಅಹಂಕಾರ-ಮಮಕಾರಗಳು ಮತ್ತು ಜನ್ಮ-ಮರಣಗಳೇ ಮುಂತಾದ ಸಾಂಸಾರಿಕಬಂಧನಗಳಿಗೆ ಯಾವ ಅಸ್ತಿತ್ವವೂ ಇಲ್ಲದಿದ್ದರೂ ಅವಿದ್ಯೆಗೆ ವಶನಾಗಿ ವಿಷಯಗಳನ್ನೇ ಚಿಂತಿಸುತ್ತಿರುವುದರಿಂದ ಜೀವನ ಸಂಸಾರಚಕ್ರವು ಎಂದಿಗೂ ತೊಲಗುವುದಿಲ್ಲ. ಆದ್ದರಿಂದಲೇ ಬುದ್ಧಿವಂತನಾದ ಮನುಷ್ಯನು ವಿಷಯಚಿಂತನೆಯೆಂಬ ಅಸನ್ಮಾರ್ಗದಲ್ಲಿ ಸಿಕ್ಕಿಹಾಕಿಕೊಂಡಿರುವ ಚಿತ್ತವನ್ನು ತೀವ್ರವಾದ ಭಕ್ತಿಯೋಗ ಮತ್ತು ವೈರಾಗ್ಯಗಳ ಮೂಲಕ ನಿಧಾನವಾಗಿ ವಶಪಡಿಸಿಕೊಳ್ಳಬೇಕು. ಬ್ರಹ್ಮಪದವು ಯಾವನಿಗೆ ದೊರಕುತ್ತದೆ? ಎಂದರೆ : ಯಾವನು ಯಮ-ನಿಯಮಾದಿ ಯೋಗಸಾಧನಗಳನ್ನು ಅಭ್ಯಾಸಮಾಡುತ್ತಾ ನೆಯೋ–ಚಿತ್ತವನ್ನು ಮತ್ತೆ-ಮತ್ತೆ ಏಕಾಗ್ರಗೊಳಿಸುತ್ತಾ, ನನ್ನಲ್ಲಿ ಸತ್ಯವಾದ ಭಾವನೆಯನ್ನಿಟ್ಟು, ನನ್ನ ಕಥೆಗಳನ್ನು ಕೇಳುತ್ತಾ, ಸಮಸ್ತಪ್ರಾಣಿಗಳಲ್ಲಿಯೂ ಸಮಭಾವನೆಯನ್ನು ಇರಿಸಿ, ಯಾರಲ್ಲಿಯೂ ವೈರವನ್ನು ತಾಳದೇ, ದುಷ್ಟ ವಾದ ಆಸಕ್ತಿಗಳನ್ನು ತೊರೆದು, ಬ್ರಹ್ಮಚರ್ಯವನ್ನೂ ಮೌನವ್ರತವನ್ನೂ ಪಾಲಿಸುತ್ತಾ, ಬಲಿಷ್ಠವಾದ ಸ್ವಧರ್ಮದ ಆಚರಣೆಯಿಂದ ಶ್ರೇಷ್ಠವಾದ ಮನೋಧರ್ಮವನ್ನು ಹೊಂದಿ, ಪ್ರಾರಬ್ಧಕರ್ಮಕ್ಕೆ ಅನುಗುಣವಾಗಿ ಸಿಕ್ಕಿ ದಷ್ಟರಲ್ಲಿ ಸಂತೋಷಪಟ್ಟುಕೊಳ್ಳುತ್ತಾ, ಮಿತವಾಗಿ ಆಹಾರವನ್ನು ಸೇವಿ ಸುತ್ತಾ, ಏಕಾಂತದಲ್ಲಿ ವಾಸಮಾಡುತ್ತಾ, ಶಾಂತಸ್ವಭಾವವುಳ್ಳವನಾಗಿ, ಎಲ್ಲರಿಗೂ ಮಿತ್ರನಾಗಿ, ದಯಾಳುವಾಗಿ, ಧೈರ್ಯಶಾಲಿಯಾಗಿ, ಪ್ರಕೃತಿ ಮತ್ತು ಪುರುಷರ ವಾಸ್ತವಿಕಸ್ವರೂಪದ ಅನುಭವದಿಂದ ದೊರೆತ ತತ್ತ್ವಜ್ಞಾನದಿಂದ ಪತ್ನೀ-ಪುತ್ರಾದಿಗಳಿಂದ ಕೂಡಿದ ಈ ದೇಹದಲ್ಲಿ 'ನಾನು', 'ನನ್ನದು' ಎಂಬ ಸುಳ್ಳು-ಸುಳ್ಳಾದ ಅಭಿಮಾನವನ್ನು ತೊರೆಯು ತ್ತಾನೆಯೋ–ಬುದ್ಧಿಯ ಜಾಗ್ರದವಸ್ಥೆ ಮುಂತಾದುವುಗಳಿಂದಲೂ ತನ್ನನ್ನು ಬೇರ್ಪಡಿಸಿಕೊಂಡು ಪರಮಾತ್ಮನನ್ನು ಬಿಟ್ಟು ಬೇರೆ ಯಾವ ಪದಾರ್ಥ ವನ್ನೂ ಕಾಣುವುದಿಲ್ಲವೋ–ಅಂತಹ ಆತ್ಮದರ್ಶಿಯಾದ ಮುನಿಗೇ ಆ ಬ್ರಹ್ಮಪದವು ದೊರೆಯುವುದು. ಆತನು ಕಣ್ಣುಗಳಿಂದ ಸೂರ್ಯನನ್ನು

ನೋಡುವಂತೆ–ತನ್ನ ಶುದ್ಧವಾದ ಅಂತಃಕರಣದ ಮೂಲಕ ಪರಮಾತ್ಮನನ್ನು ಸಾಕ್ಷಾತ್ಕರಿಸಿ, ಯಾವುದು ದೇಹವೇ ಮುಂತಾದ ಎಲ್ಲ ಉಪಾಧಿಗಳಿಂದಲೂ ಬೇರೆಯಾಗಿ, ಅಸತ್ತುಗಳಲ್ಲಿ ಸದ್ವಸ್ತುವಾಗಿ ಬೆಳಗುತ್ತಾ ಜಗತ್ತಿಗೆ ಕಾರಣ ವಾಗಿರುವ ಪ್ರಕೃತಿಗೆ ಅಧಿಷ್ಠಾನವಾಗಿ, ಮಹತ್ತೇ ಮುಂತಾದ ಕಾರ್ಯ ವರ್ಗವನ್ನೆಲ್ಲಾ ಪ್ರಕಾಶಪಡಿಸುವುದಾಗಿ ಕಾರ್ಯ-ಕಾರಣರೂಪವಾದ ಸಮಸ್ತಪದಾರ್ಥಗಳಲ್ಲೂ ಸಂಪೂರ್ಣವಾಗಿ ವ್ಯಾಪಿಸಿಕೊಂಡಿದೆಯೋ ಆ ಅದ್ವಿತೀಯವಾದ ಪರಬ್ರಹ್ಮದ ಪದವನ್ನು ಪಡೆಯುವನು.*

(ಶ್ಲೋಕ ೧-೧೧)

ಭೂತ-ಇಂದ್ರಿಯ-ಮನಸ್ಸುಗಳಲ್ಲಿ ಮೊದಲು ಪ್ರಕಾಶವನ್ನು ಕಂಡರೂ, ಅದರ ಮೂಲವನ್ನು ವಿಚಾರಿಸುತ್ತಾ ಕೊನೆಗೆ ಪರಮಾತ್ಮ ಪ್ರಕಾ ಶವೇ ಇವೆಲ್ಲದರಲ್ಲೂ ಬೆಳಗುತ್ತಿದೆಯೆಂದು ತಿಳಿಯುವನು. ಹೇಗೆಂದರೆ : ನೀರಿನಲ್ಲಿ ಪ್ರತಿಬಿಂಬಿಸಿರುವ ಸೂರ್ಯನ ಪ್ರಕಾಶವು ಕಿಟಕಿಯ ಮೂಲಕ ಮನೆಯೊಳಗೆ ಹೊಕ್ಕು ಗೋಡೆಯೇ ಮುಂತಾದ ಸ್ಥಳಗಳಲ್ಲಿ ಬಿದ್ದಾಗ ಅಲ್ಲಿ ರುವ ಜನರು ಈ ಬಿಸಿಲು ಎಲ್ಲಿಂದ ಬಂದಿತು?–ಎಂದು ವಿಚಾರ ಮಾಡುತ್ತಾ, ಅದಕ್ಕೆ ಆಧಾರವಾಗಿ ನೀರಿನಲ್ಲಿರುವ ಸೂರ್ಯಪ್ರತಿಬಿಂಬವನ್ನು ಕಾಣುತ್ತಾರೆ. ಅನಂತರ ಆ ಪ್ರತಿಬಿಂಬಕ್ಕೆ ಮೂಲ ಯಾವುದು?–ಎಂದು

---

* ಅಸತ್ತಾಗಿರುವ ದೇಹದಲ್ಲಿ ಕಣ್ಣು ಎಂಬ ಇಂದ್ರಿಯದಿಂದ ಅದಕ್ಕೆ ಅಧಿಷ್ಠಾತೃವಾಗಿರುವ ಸೂರ್ಯನನ್ನು ಕಾಣುವಂತೆ–ಪರಮಾತ್ಮನಿಂದ ಅಧಿಷ್ಠಿತವಾಗಿರುವ ಜೀವಾತ್ಮನಿಂದ ಪರಮಾತ್ಮನನ್ನು ಸಾಕ್ಷಾತ್ಕರಿಸಿ, ಅನಂತರ ಪ್ರಾರಬ್ಧಕರ್ಮವು ಮುಗಿದ ಬಳಿಕ ಲಿಂಗಶರೀರದಿಂದ ಬಿಡುಗಡೆಹೊಂದಿ ಸರ್ವಾಂತರ್ಯಾಮಿಯಾದ ಪರಮಪುರುಷನನ್ನು ಹೊಂದುವನು. (ವೀರರಾಘವೀಯ)

ಪ್ರಾರಬ್ಧಕರ್ಮವು ಮುಗಿಯಲು ಲಿಂಗಶರೀರರಹಿತನಾಗಿ ದೇವಯಾನಮಾರ್ಗದಿಂದ ಬ್ರಹ್ಮಲೋಕವನ್ನು ಸೇರಿ, ಬ್ರಹ್ಮದೇವರ ಪ್ರಳಯದಲ್ಲಿಯೇ ಅನಿರುದ್ಧದೇವರ ದ್ವಾರದಿಂದ ಬ್ರಹ್ಮದೇವರನ್ನು ಹೊಕ್ಕವನಾಗಿ ಆತನೊಡನೆ ಪ್ರಾಣಪ್ರತಿಬಿಂಬನಾದ ಪರಮಾತ್ಮನನ್ನು ಹೊಂದುವನು. "ಶೇಷಸ್ಯ ಪ್ರತಿಬಿಂಬಸ್ತು ದೇವಾಃ ಶೇಷಸ್ತು ಬ್ರಹ್ಮಣಃ । ಸ ಪರಬ್ರಹ್ಮಣಶ್ಚೈವ ತೇ ಸ್ವಬಿಂಬಪ್ರದರ್ಶಕಾಃ । ತತಃ ಸ್ವಬಿಂಬದ್ವಾರೇಣ ಪರಮಾತ್ಮ ಪ್ರದರ್ಶನಮ್ ॥"–ಎಂಬಂತೆ ಬ್ರಹ್ಮದೇವರೂ ಪರಬ್ರಹ್ಮದ ಪ್ರತಿಬಿಂಬವೇ. (ವಿಜಯಧ್ವಜೀಯ) (ಶ್ಲೋಕ ೧೦)

ವಿಚಾರಮಾಡುತ್ತಾ ಆಕಾಶದಲ್ಲಿರುವ ಸರ್ವಮೂಲವಾದ ಸೂರ್ಯಬಿಂಬ ವನ್ನು ಕಾಣುವರು. ಹಾಗೆಯೇ ವಿವೇಕಿಗಳು ಮೊದಲು ಭೂತ-ಇಂದ್ರಿಯ-ಮನಸ್ಸುಗಳಲ್ಲಿ ಪ್ರಕಾಶವನ್ನು ಗಮನಿಸಿ, ಈ ಪ್ರಕಾಶವು ಎಲ್ಲಿಂದ ಬಂದಿತು?–ಎಂದು ವಿಚಾರಮಾಡುತ್ತಾ ಅದು ಅಹಂಕಾರದ ಉಪಾಧಿಯಲ್ಲಿ ರುವ, ಜೀವಾತ್ಮನಲ್ಲಿರುವ, ಪ್ರಕಾಶದ ಪ್ರತಿಬಿಂಬವೆಂದು ತಿಳಿಯುವರು. ಆ ಜೀವಾತ್ಮನಲ್ಲಿ ಈ ಪ್ರತಿಬಿಂಬವು ಹೇಗೆ ಉಂಟಾಯಿತೆಂದು ವಿಚಾರಿಸಿ ಎಲ್ಲ ಪ್ರಕಾಶಕ್ಕೂ ಮೂಲವಾಗಿರುವ ಪರಮಾತ್ಮನೇ ಇವುಗಳಿಗೆ ಬಿಂಬರೂಪ ನೆಂದು ತಿಳಿಯುವರು. ಆತ್ಮನು ಜಾಗ್ರದವಸ್ಥೆಯೇ ಮುಂತಾದ ಎಲ್ಲ ಅವಸ್ಥೆಗಳಲ್ಲೂ ಇದ್ದೇ ಇರುತ್ತಾನೆ. ಇಲ್ಲಿ ಒಂದು ಪ್ರಶ್ನೆ ಏಳಬಹುದು ; ಜಾಗ್ರದವಸ್ಥೆಯಲ್ಲೇನೋ "ನಾವು ಭೂತಸೂಕ್ಷ್ಮಾದಿಗಳನ್ನು ನೋಡುತ್ತೇವೆ. 'ಇವು ದೃಶ್ಯಗಳು' ಇವುಗಳಿಗೆಲ್ಲ ದ್ರಷ್ಟಾ–(ನೋಡುವವನು) ಆಗಿರುವವನೇ ಆತ್ಮ"–ಎಂಬುದಾಗಿ ಆತ್ಮನ ಅನುಭವವು ಸ್ಪಷ್ಟವಾಗಿ ಆಗುತ್ತದೆ. ಸುಷುಪ್ತಿ (ಗಾಢನಿದ್ರೆ) ಯಲ್ಲಿ ಆತ್ಮನು ಏಕೆ ಸ್ಪಷ್ಟವಾಗಿ ಪ್ರಕಾಶಿಸುವುದಿಲ್ಲ?–ಎಂದರೆ : ಸುಷುಪ್ತಿಯಲ್ಲಿ ಅಹಂಕಾರವಿಷಯಗಳಾದ ಭೂತಸೂಕ್ಷ್ಮಾದಿಗಳು ಲಯವನ್ನು ಹೊಂದಿರುತ್ತವೆ. ಅಷ್ಟೇ ಅಲ್ಲದೇ ಅವುಗಳಿಗೆ ಉಪಾಧಿಯಾದ ಅಹಂಕಾರವೂ ನಾಶಹೊಂದಿರುತ್ತದೆ. ಆಗ ಭ್ರಮೆಯಿಂದ, ತಾನೇ ನಾಶಹೊಂದಿದ್ದೇನೋ–ಎಂಬಂತೆ ಅನ್ನಿಸುತ್ತದೆ. ಲೋಭಿಯು ತನ್ನ ಹಣವು ನಾಶಹೊಂದಿದಾಗ ತಾನೇ ನಾಶಹೊಂದಿದೆನೆಂದು ಭಾವಿಸುವಂತೆ– ಅಹಂಕಾರವು ನಷ್ಟವಾದಾಗ ತಾನೇ ನಾಶಹೊಂದಿದನೆಂದು ಭ್ರಮಿಸುತ್ತಾನೆ. ವಾಸ್ತವವಾಗಿ ಎಲ್ಲಕ್ಕೂ ಸಾಕ್ಷಿಯಾಗಿರುವ ಆತ್ಮನು ಆಗಲೂ ಇದ್ದೇ ಇರುತ್ತಾನೆ. ಹೀಗೆ ಅನುಸಂಧಾನಮಾಡಿದರೆ ಯಾವ ಆತ್ಮನು ಅಹಂಕಾರದಿಂದ ಕೂಡಿದ ಶರೀರಾದಿಗಳಿಗೆ ಅನುಗ್ರಹ ಮಾಡುವವನೂ ಆಧಾರವೂ ಆಗಿರುವನೋ–ಅಂತಹ ಪರಮಾತ್ಮನನ್ನು ಹೊಂದುತ್ತಾನೆ. (ಶ್ಲೋಕ 12-16)

ಭಗವಂತನ ಈ ಉಪದೇಶವನ್ನು ಕೇಳಿದ ದೇವಹೂತಿಯು ಆತನನ್ನು ಹೀಗೆ ಪ್ರಶ್ನಿಸಿದಳು :

"ಎಲೈ ಮುನೀಂದ್ರನೇ! ಪ್ರಕೃತಿ ಮತ್ತು ಪುರುಷ–ಇವೆರಡೂ ನಿತ್ಯ

ವಾಗಿರುವ ತತ್ತ್ವಗಳು ಮತ್ತು ಒಂದನ್ನೊಂದು ಸದಾ ಆಶ್ರಯಿಸಿಕೊಂಡಿವೆ. ಆದುದರಿಂದ ಅವುಗಳಿಗೆ ಪರಸ್ಪರವಾಗಿ ಅಗಲಿಕೆಯು ಸಾಧ್ಯವೇ ಇಲ್ಲ. ಪ್ರಕೃತಿಯು ಪುರುಷನನ್ನು ಎಂದಿಗೂ ಬಿಡುವಂತಿಲ್ಲ. ಪೃಥಿವಿಯ ನಿತ್ಯವಾದ ಗುಣವು ಗಂಧವಾದುದರಿಂದ ಪೃಥಿವಿ ಮತ್ತು ಗಂಧಗಳು ಒಂದನ್ನು ಬಿಟ್ಟು ಮತ್ತೊಂದು ಇರುವಂತಿಲ್ಲ. ರಸವು ನೀರಿನ ನಿತ್ಯವಾದ ಗುಣವಾಗಿರುವುದರಿಂದ ಅವೆರಡಕ್ಕೂ ಬೇರೆ-ಬೇರೆ ಸ್ಥಿತಿಯು ಇರಲು ಸಾಧ್ಯವೇ ಇಲ್ಲ. ಹಾಗೆಯೇ ಪುರುಷ ಮತ್ತು ಪ್ರಕೃತಿಗಳು ಒಂದನ್ನು ಬಿಟ್ಟು ಮತ್ತೊಂದು ಇರಲಾರವಲ್ಲವೇ? ವಾಸ್ತವವಾಗಿ ಕರ್ತೃತ್ವರಹಿತನಾದ ಪುರುಷನಿಗೆ ಪ್ರಕೃತಿಯ ಆಶ್ರಯದಿಂದ ಕರ್ತೃತ್ವವು ತೋರಿ ಬಂದು, ಈ ಸಂಸಾರಬಂಧನ ವುಂಟಾಗಿದೆಯೆಂದು ನೀನು ಹೇಳಿದೆ. ಆ ಪ್ರಕೃತಿಯ ಗುಣಗಳು ಇದ್ದೇ ಇರುವುದರಿಂದ ಅವುಗಳ ದೆಸೆಯಿಂದ ಪುರುಷನಿಗೆ ಬಿಡುಗಡೆಯು ಸಾಧ್ಯವೇ ಇಲ್ಲ. ಹೀಗಿರುವಾಗ ಆತನಿಗೆ 'ತನಗೆ ಪ್ರಕೃತಿಯ ಸಂಬಂಧವಿಲ್ಲ. ತಾನು ಕೇವಲನು'–ಎಂಬ ಅನುಭವದ ಕೈವಲ್ಯಪದವು ಹೇಗೆ ತಾನೇ ಲಭಿಸೀತು?

(ಶ್ಲೋಕ 17-19)

ಕ್ವಚಿತ್ತತ್ತ್ವಾವಮರ್ಶೇನ ನಿವೃತ್ತಂ ಭಯಮುಲ್ಬಣಮ್ ।
ಅನಿವೃತ್ತನಿವೃತ್ತತ್ವಾತ್ಪುನಃ ಪ್ರತ್ಯವತಿಷ್ಠತೇ ॥೨೦॥

ತತ್ತ್ವಗಳನ್ನು ಚೆನ್ನಾಗಿ ವಿಚಾರಮಾಡಿದರೆ ಈ ಸಂಸಾರಬಂಧನದ ತೀವ್ರವಾದ ಭಯವು ಹೊರಟುಹೋಗುವುದು–ಎಂದರೆ, ಹಾಗಿದ್ದರೂ ಆ ಬಂಧನಕ್ಕೆ ನಿಮಿತ್ತವಾದ ಪ್ರಾಕೃತಗುಣಗಳು ಸದಾ ಇದ್ದೇ ಇರುವುದರಿಂದ ಆ ಭಯವೂ ಮತ್ತೆ ಬಂದು ಒದಗಬಹುದಲ್ಲವೇ?"

ದೇವಹೂತಿಯ ಪ್ರಶ್ನೆಗೆ ಉತ್ತರಿಸುತ್ತಾ ಶ್ರೀಕಪಿಲಭಗವಂತನು ಹೇಳಿದನು :

"ಅಮ್ಮಾ! ಅರಣಿಯಿಂದಲೇ ಉತ್ಪನ್ನವಾದ ಅಗ್ನಿಯಿಂದ ಅದರ ಉತ್ಪತ್ತಿಸ್ಥಾನವಾದ ಆ ಅರಣಿಯೂ ಸುಟ್ಟು ಬೂದಿಯಾಗುವುದಿಲ್ಲವೇ? ಹಾಗೆಯೇ ನಿಷ್ಕಾಮಭಾವದಿಂದ ಸ್ವಧರ್ಮವನ್ನು ಪಾಲನೆಮಾಡುವುದರಿಂದ ಅಂತಃಕರಣವು ಶುದ್ಧವಾಗಿ ಬಹಳ ಕಾಲ ಭಗವಂತನ ಕಥೆಗಳನ್ನು ಕೇಳುತ್ತಿರುವುದರಿಂದ ಪುಷ್ಟಿಹೊಂದಿದ ನನ್ನ ವಿಷಯವಾದ ಭಕ್ತಿಯೋಗದಿಂದಲೂ,

ತತ್ತ್ವಸಾಕ್ಷಾತ್ಕಾರವನ್ನುಂಟುಮಾಡುವ ಜ್ಞಾನದಿಂದಲೂ, ಪ್ರಬಲವಾದ ವೈರಾಗ್ಯದಿಂದಲೂ, ವ್ರತ-ನಿಯಮಾದಿಗಳೊಡನೆ ಆಚರಿಸಿದ ಧ್ಯಾನಾಭ್ಯಾಸಗಳಿಂದಲೂ ಮತ್ತು ಚಿತ್ತದ ದೃಢವಾದ ಏಕಾಗ್ರತೆಯಿಂದಲೂ–ಪುರುಷನ ಪ್ರಕೃತಿಯು (ಅವಿದ್ಯೆಯು) ಹಗಲೂ-ರಾತ್ರಿಯೂ ಕ್ಷೀಣಿಸುತ್ತಾ ಮೆಲ್ಲ-ಮೆಲ್ಲಗೆ ಲಯಹೊಂದಿಬಿಡುವುದು. ಅಗ್ನಿಯು ತನಗೆ ಆಶ್ರಯವಾಗಿದ್ದ ಅರಣಿಯನ್ನು ಸುಟ್ಟುಹಾಕುವಂತೆ–ಭಕ್ತಿ-ಜ್ಞಾನಾದಿಗಳು ಪ್ರಕೃತಿಯನ್ನು ಸುಟ್ಟುಹಾಕಿಬಿಡುವುವು. (ಶ್ಲೋಕ 21-23)

ಇದೂ ಅಲ್ಲದೇ ಪುರುಷನು ತಾನು ಹಿಂದೆ ಅನುಭವಿಸಿದ್ದ ಪ್ರಕೃತಿಯ ಭೋಗಗಳನ್ನು ಅನುಭವಿಸಿ ಆಕೆಯನ್ನು ತ್ಯಾಗಮಾಡಿಬಿಟ್ಟಿದ್ದಾಗಿದೆ. ಆಕೆಯ ದೋಷಗಳು ಆತನಿಗೆ ಸದಾ ಪರಿಚಿತವೂ ಆಗಿರುತ್ತವೆ. ಹೀಗೆ ದಾಂಪತ್ಯ ವಿಚ್ಛೇದನವನ್ನು ಹೊಂದಿ ದೋಷಗಳಿಂದ ಕೂಡಿರುವವಳೂ ಆಗಿರುವ ಪ್ರಕೃತಿಯು ಪುರುಷನಿಗೆ ಏನೇನೂ ತೊಂದರೆಮಾಡಲಾರಳು. ನಿದ್ರೆಯಲ್ಲಿರುವ ಮನುಷ್ಯನಿಗೆ ಕನಸಿನಲ್ಲಿ ಎಷ್ಟೇ ಅನಿಷ್ಟ-ಅನರ್ಥಗಳ ಅನುಭವಗಳಾಗಿದ್ದರೂ ಎಚ್ಚರವಾದ ಬಳಿಕ ಆತನಿಗೆ ಆ ಅನುಭವಗಳಿಂದ ಯಾವ ಮೋಹವೂ ಉಂಟಾಗುವುದಿಲ್ಲ. ಹಾಗೆಯೇ ಯಾವನು ತತ್ತ್ವಜ್ಞಾನವನ್ನು ಹೊಂದಿ ತನ್ನ ಮನಸ್ಸನ್ನು ಸದಾ ನನ್ನಲ್ಲೇ ನೆಲೆಗೊಳಿಸಿರುತ್ತಾನೆಯೋ–ಅಂತಹ ಆತ್ಮಾರಾಮನಾದ ಮುನಿಗೆ ಪ್ರಕೃತಿಯು ಏನೂ ತೊಂದರೆ ಮಾಡಲಾರದು. ಮನುಷ್ಯನು ಅನೇಕಜನ್ಮಗಳಲ್ಲಿ ಬಹಳ ಕಾಲದವರೆಗೆ ಈ ರೀತಿಯಲ್ಲಿ ಆತ್ಮಚಿಂತನೆಯಲ್ಲಿಯೇ ಮುಳುಗಿದ್ದರೆ–ಆತನಿಗೆ ಬ್ರಹ್ಮಲೋಕ ಪರ್ಯಂತವಾದ ಎಲ್ಲ ಬಗೆಯ ಭೋಗಗಳಲ್ಲೂ ವೈರಾಗ್ಯವುಂಟಾಗಿಬಿಡುವುದು. ನನ್ನ ಆ ಧೀರನಾದ ಭಕ್ತನು ನನ್ನ ಮಹಾಕೃಪೆಯಿಂದಲೇ ತತ್ತ್ವಜ್ಞಾನವನ್ನು ಪಡೆದು ಆತ್ಮಾನುಭವದಿಂದ ಎಲ್ಲ ಸಂಶಯಗಳಿಂದಲೂ ಬಿಡುಗಡೆಹೊಂದುವನು ಮತ್ತು ಲಿಂಗದೇಹವು ನಾಶವಾದನಂತರ ನನ್ನೊಬ್ಬನನ್ನೇ ಆಶ್ರಯಿಸಿರುವ ತನ್ನ ಸ್ವರೂಪಭೂತವಾದ ಕೈವಲ್ಯವೆಂಬ ಮಂಗಳಮಯವಾದ ಸ್ಥಾನವನ್ನು ಸಹಜವಾಗಿಯೇ ಪಡೆಯುವನು. ಅದನ್ನು ತಲುಪಿದ ಬಳಿಕ ಯೋಗಿಯು ಸಂಸಾರಕ್ಕೆ ಮರಳುವುದಿಲ್ಲ.

(ಶ್ಲೋಕ 24-29)

ಯದಾ ನ ಯೋಗೋಪಚಿತಾಸು ಚೇತೋ
ಮಾಯಾಸು ಸಿದ್ಧಸ್ಯ ವಿಷಜ್ಜತೇಽಙ್ಗ ।
ಅನನ್ಯಹೇತುಷ್ವಥ ಮೇ ಗತಿಃ ಸ್ಯಾ-
ದಾತ್ಯನ್ತಿಕೀ ಯತ್ರ ನ ಮೃತ್ಯುಹಾಸಃ ॥೩೦॥

ಅಮ್ಮಾ! ಅಣಿಮಾದಿ ಅಷ್ಟಸಿದ್ಧಿಗಳನ್ನು ಪಡೆಯುವುದಕ್ಕೂ ಯೋಗವೊಂದೇ ಸಾಧನವು. ಆದರೆ ಅವು ಮಾಯಾಮಯವಾದುವು ; ಮೋಹಕವಾದುವು. ಯೋಗಿಯ ಚಿತ್ತವು–ಸಾಧನಾಮಾರ್ಗದಲ್ಲಿ ಮುತ್ತಿಗೆಹಾಕುವ ಆ ಸಿದ್ಧಿಗಳಿಗೆ ಸಿಕ್ಕಿಹಾಕಿಕೊಳ್ಳದೇ ಇದ್ದ ಪಕ್ಷದಲ್ಲಿ–ಆತನು ಮೃತ್ಯುವಿನ ವಿಲಾಸಕ್ಕೆ ಕೊಂಚವೂ ಎಡೆಯೇ ಇಲ್ಲದಿರುವ ನನ್ನ ಅವಿನಾಶಿಯಾದ ಪರಮಪದವನ್ನು ಹೊಂದುವನು.

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೨೭ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೨೮ನೆಯ ಅಧ್ಯಾಯ

ಅಷ್ಟಾಂಗಯೋಗದ ವಿಧಿ

ಶ್ರೀಕಪಿಲಭಗವಂತನು ಹೇಳುತ್ತಾನೆ :

ಯೋಗಸ್ಯ ಲಕ್ಷಣಂ ವಕ್ಷ್ಯೇ ಸಬೀಜಸ್ಯ ನೃಪಾತ್ಮಜೇ ।
ಮನೋ ಯೇನೈವ ವಿಧಿನಾ ಪ್ರಸನ್ನಂ ಯಾತಿ ಸತ್ಪಥಮ್ ॥೧॥

"ಅಮ್ಮಾ! ರಾಜಪುತ್ರಿಯೇ! ಈಗ ನಾನು ನಿನಗೆ ಸಬೀಜ (ಸಾಲಂಬನ) ಯೋಗದ ಲಕ್ಷಣವನ್ನು ಹೇಳುವೆನು ; ಕೇಳು. ಇದರಿಂದ ಚಿತ್ತವು ಶುದ್ಧವೂ ಪ್ರಸನ್ನವೂ ಆಗಿ ಪರಮಾತ್ಮನ ಮಾರ್ಗವನ್ನೇ ಹಿಡಿಯುವುದು.

ಈ ಯೋಗವನ್ನು ಸಾಧನೆಮಾಡುವವನು ಏನು ಮಾಡಬೇಕು? ಏನನ್ನು ಬಿಡಬೇಕು?–ಇತ್ಯಾದಿಗಳನ್ನು ಹೇಳುತ್ತೇನೆ. ಈತನು ಶಾಸ್ತ್ರವಿಹಿತವಾದ ಸ್ವಧರ್ಮವನ್ನು ಯಥಾಶಕ್ತಿ ಆಚರಿಸಬೇಕು. ಶಾಸ್ತ್ರವಿರುದ್ಧವಾದ ವಿಧರ್ಮದ ಆಚರಣೆಯನ್ನು ತ್ಯಜಿಸಿಬಿಡಬೇಕು. ದೈವಯೋಗದಿಂದ ಏನು

ದೊರೆಯುತ್ತದೆಯೋ ಅಷ್ಟರಲ್ಲೇ ಸಂತೋಷಪಟ್ಟುಕೊಳ್ಳಬೇಕು. ಆತ್ಮ ಜ್ಞಾನಿಗಳ ಚರಣಾರವಿಂದಗಳನ್ನು ಪೂಜಿಸಬೇಕು. ವಿಷಯವಾಸನೆಗಳನ್ನು ಹೆಚ್ಚಿಸುವ ಗ್ರಾಮ್ಯಧರ್ಮಗಳಿಂದ ದೂರವಾಗಿರಬೇಕು. ಸಂಸಾರಬಂಧನ ವನ್ನು ಬಿಡಿಸುವ ಮೋಕ್ಷಧರ್ಮದಲ್ಲಿ ರತಿಯನ್ನು ಹೊಂದಿರಬೇಕು. ಶುದ್ಧ ವಾದ ಆಹಾರವನ್ನು ಸೇವಿಸಬೇಕು. ಮಿತಾಹಾರಿಯಾಗಿರಬೇಕು. ಸದಾ ಏಕಾಂತವಾಗಿ ಕ್ಷೇಮವಾಗಿರುವ ಜಾಗದದಲ್ಲಿ ವಾಸಮಾಡಬೇಕು. ಯಾವ ಪ್ರಾಣಿಗಳನ್ನೇ ಆಗಲಿ-ತ್ರಿಕರಣಗಳಿಂದಲೂ ಹಿಂಸಿಸಬಾರದು. ಭೂತ ಹಿತವೂ, ಯಥಾರ್ಥವೂ ಆದ ಸತ್ಯವನ್ನೇ ನುಡಿಯಬೇಕು. ಕಳ್ಳತನಮಾಡ ಬಾರದು. ಆವಶ್ಯಕತೆಗಳಿಗಿಂತಲೂ ಹೆಚ್ಚು ಪದಾರ್ಥಗಳನ್ನು ಸಂಗ್ರಹಮಾಡ ಬಾರದು. ಸದಾ ಬ್ರಹ್ಮಚರ್ಯವನ್ನು ಪಾಲಿಸಬೇಕು. ತಪಸ್ಸನ್ನಾಚರಿಸಬೇಕು. ಒಳಗೂ-ಹೊರಗೂ ಶುಚಿಯಾಗಿರಬೇಕು. ಒಳ್ಳೆಯ ಅಧ್ಯಯನಮಾಡಬೇಕು ಮತ್ತು ಭಗವಂತನನ್ನು ಆರಾಧಿಸಬೇಕು. ಮಾತನ್ನು ಹತೋಟಿಯಲ್ಲಿಟ್ಟು ಕೊಳ್ಳಬೇಕು. ಒಳ್ಳೆಯ ಯೋಗಾಸನಗಳನ್ನು ಅಭ್ಯಾಸಮಾಡಿ ಸ್ಥಿರವಾಗಿ ಕುಳಿತುಕೊಳ್ಳಬೇಕು. ಮೆಲ್ಲ-ಮೆಲ್ಲನೆ ಪ್ರಾಣಾಯಾಮದ ಮೂಲಕ ಪ್ರಾಣ ವಾಯುಗಳನ್ನು ವಶಪಡಿಸಿಕೊಳ್ಳಬೇಕು. ಇಂದ್ರಿಯಗಳನ್ನು ಮನಸ್ಸಿನ ಮೂಲಕ ಅವುಗಳ ವಿಷಯಗಳಿಂದ ಸೆಳೆದು ಹೃದಯದಲ್ಲಿ ಇರಿಸಬೇಕು. ಮೂಲಾಧಾರವೇ ಮುಂತಾದ ಕೇಂದ್ರಗಳಲ್ಲಿ ಮನಸ್ಸು-ಪ್ರಾಣಗಳನ್ನು ಸ್ಥಿರಪಡಿಸಬೇಕು. ನಿರಂತರವಾಗಿ ಶ್ರೀವೈಕುಂಠನಾಥನ ಲೀಲೆಗಳನ್ನು ಚಿಂತಿ ಸುತ್ತಾ ಚಿತ್ತವನ್ನು ಸಮಾಧಾನಪಡಿಸಿಕೊಳ್ಳಬೇಕು. ಇವುಗಳಿಂದಲೂ ಮತ್ತು ವ್ರತ-ದಾನಗಳೇ ಮುಂತಾದ ಇತರ ಸಾಧನಗಳಿಂದಲೂ ಸಾವಧಾನವಾಗಿ ಪ್ರಾಣಗಳನ್ನು ಜಯಿಸಿ, ಕುಮಾರ್ಗದಲ್ಲಿ ಸಂಚರಿಸುವ ದುಷ್ಟವಾದ ಚಿತ್ತ ವನ್ನು ಬುದ್ಧಿಯ ಮೂಲಕ ಮೆಲ್ಲ-ಮೆಲ್ಲನೆ ಏಕಾಗ್ರವಾಗಿಸಿ ಅದನ್ನು ಪರಮಾತ್ಮನ ಧ್ಯಾನದಲ್ಲಿ ತೊಡಗಿಸಬೇಕು. (ಶ್ಲೋಕ -)

ಮೊದಲು ಆಸನಜಯವನ್ನು ಪಡೆದು ಪ್ರಾಣಾಯಾಮದ ಅಭ್ಯಾಸ ಕ್ಕಾಗಿ ಶುಚಿಯಾದ ಜಾಗದಲ್ಲಿ ಶುದ್ಧವಾದ ಕುಶವೇ ಮುಂತಾದುವುಗಳಿಂದ ರಚಿತವಾದ ಆಸನವನ್ನು ಹಾಸಿಕೊಳ್ಳಬೇಕು. ಅದರ ಮೇಲೆ ದೇಹವನ್ನು ನೆಟ್ಟಗೆ ಸ್ಥಿರವಾಗಿ ಇರಿಸಿಕೊಂಡು ಸುಖವಾಗಿ ಕುಳಿತು ಅಭ್ಯಾಸಮಾಡ

ಬೇಕು. ಆರಂಭದಲ್ಲಿ ಪೂರಕ, ಕುಂಭಕ ಮತ್ತು ರೇಚಕಗಳ ಕ್ರಮದಲ್ಲಿ ಅಥವಾ ಇದಕ್ಕೆ ವಿಪರೀತವಾಗಿ ಅಂದರೆ : ರೇಚಕ, ಕುಂಭಕ ಮತ್ತು ಪೂರಕಗಳ ಕ್ರಮದಲ್ಲಿ ಪ್ರಾಣಾಯಾಮಮಾಡಿ ಪ್ರಾಣದ ಮಾರ್ಗವನ್ನು ಶುದ್ಧಿಪಡಿಸಿಕೊಳ್ಳಬೇಕು. ಇದರಿಂದ ಚಿತ್ತವು ಸ್ಥಿರವೂ–ನಿಶ್ಚಲವೂ ಆಗುವುದು. ಗಾಳಿ ಮತ್ತು ಬೆಂಕಿಗಳಲ್ಲಿ ಶೋಧಿಸಲ್ಪಟ್ಟ ಚಿನ್ನವು ತನ್ನ ಕೊಳೆಯನ್ನು ಕಳೆದುಕೊಳ್ಳುವಂತೆ–ಪ್ರಾಣವಾಯುವನ್ನು ಜಯಿಸಿದ ಯೋಗಿಯ ಚಿತ್ತವು ಶೀಘ್ರವಾಗಿಯೇ ದೋಷಗಳನ್ನು ಕಳೆದುಕೊಂಡು ಶುದ್ಧವಾಗುವುದು. ಆದುದರಿಂದ ಯೋಗಿಯು–ಪ್ರಾಣಾಯಾಮದಿಂದ ವಾತ-ಪಿತ್ತಾದಿಗಳಿಂದ ಉಂಟಾದ ದೋಷಗಳನ್ನೂ, ಧಾರಣೆಯಿಂದ ಪಾಪಗಳನ್ನೂ, ಪ್ರತ್ಯಾಹಾರದಿಂದ ವಿಷಯಗಳ ಸಂಬಂಧವನ್ನೂ ಮತ್ತು ಧ್ಯಾನದಿಂದ ಶ್ರೀಭಗವಂತನಿಗೆ ವಿಮುಖವಾಗಿರುವ ರಾಗ-ದ್ವೇಷಾದಿ ದುರ್ಗುಣಗಳನ್ನೂ ದೂರಮಾಡಿಕೊಳ್ಳಬೇಕು. ಯೋಗದ ಅಭ್ಯಾಸವನ್ನು ಮಾಡುತ್ತಾ ಚಿತ್ತವು ನಿರ್ಮಲವು–ಏಕಾಗ್ರವೂ ಆದ ಬಳಿಕ ಮೂಗಿನ ತುದಿಯಲ್ಲಿ ದೃಷ್ಟಿಯನ್ನಿರಿಸಿ ಶ್ರೀಭಗವಂತನ ಮೂರ್ತಿಯನ್ನು ಈ ರೀತಿಯಲ್ಲಿ ಧ್ಯಾನಮಾಡಬೇಕು.

(ಶ್ಲೋಕ 8-12)

ಶ್ರೀಭಗವಂತನ ಮುಖಕಮಲವು ಪ್ರಸನ್ನವಾಗಿ ಆನಂದದಿಂದ ಅರಳಿದೆ. ಕಣ್ಣುಗಳು ಕಮಲಕೋಶದಂತೆ ಹೊಳೆಯುತ್ತಿವೆ. ಶ್ರೀಮೂರ್ತಿಯು ನೀಲವರ್ಣದ ಕನ್ನೈದಿಲೆಯ ದಳದಂತೆ ಶ್ಯಾಮಲವರ್ಣದಿಂದ ಶೋಭಿಸುತ್ತಿದೆ. ಕೈಗಳಲ್ಲಿ ಶಂಖ, ಚಕ್ರ ಮತ್ತು ಗದೆಗಳು ಅಲಂಕೃತವಾಗಿವೆ. ಕಮಲದ ಕೇಸರಗಳಂತೆ ಕಂಗೊಳಿಸುವ ಪೀತಾಂಬರವು ಸ್ವಾಮಿಯ ಉಡುಗೆಯಲ್ಲಿ ಕಳ-ಕಳಿಸುತ್ತಿದೆ. ವಕ್ಷಃಸ್ಥಳದಲ್ಲಿ ಶ್ರೀವತ್ಸವೆಂಬ ಚಿಹ್ನೆಯು ಬೆಳಗುತ್ತಿದೆ. ಕೊರಳಿನಲ್ಲಿ ಕೌಸ್ತುಭಮಣಿಯು ಥಳ-ಥಳಿಸುತ್ತಿದೆ. ವನಮಾಲೆಯು ಚರಣಗಳವರೆಗೂ ಅವಲಂಬಿಸಿ ಝುಗ-ಝುಗಿಸುತ್ತಿರಲು ಅದರ ಸುತ್ತಲೂ ದುಂಬಿಗಳು ಸುಗಂಧದಿಂದ ಮದವೇರಿ ಕಿವಿಗಿಂಪಾಗಿ ಝೇಂಕರಿಸುತ್ತಿವೆ. ಸ್ವಾಮಿಯ ಅಂಗ-ಉಂಪಾಂಗಗಳಲ್ಲಿ ಅಮೂಲ್ಯವಾದ ಹಾರಗಳೂ, ಕಂಕಣ-ಕಿರೀಟಗಳೂ, ಭುಜಕೀರ್ತಿ, ಕಾಲಂದುಗೆಗಳೇ ಮುಂತಾದ ಆಭರಣಗಳೂ ಆಯಾ ಸ್ಥಾನಗಳಲ್ಲಿ ಶೋಭಿಸುತ್ತಾ ನೋಡುವವರ ಕಣ್ಣುಗಳಿಗೆ ಹಬ್ಬವಾ

ಗಿವೆ. ನಡುವಿನಲ್ಲಿ ಧರಿಸಿರುವ ಒಡ್ಯಾಣದ ಎಳೆಗಳು ಅದರ ಕಾಂತಿಯನ್ನು ಹೆಚ್ಚಿಸುತ್ತಿವೆ. ಭಕ್ತರ ಹೃದಯಕಮಲವೇ ಆ ಭಗವಂತನಿಗೆ ಆಸನವಾಗಿದೆ. ಶ್ಯಾಮಸುಂದರನ ಆ ಪ್ರಶಾಂತವಾದ ಶ್ರೀಮೂರ್ತಿಯು ಎಲ್ಲರ ಕಣ್ಮನ ಗಳನ್ನೂ ಸೂರೆಗೊಳ್ಳುತ್ತಿದೆ. ಎಳೆವಯಸ್ಸಿನಲ್ಲಿರುವ ಆ ಮನೋಹರ ಮೂರ್ತಿಯು ಭಕ್ತರ ಮೇಲೆ ಕರುಣೆಯನ್ನು ಹರಿಸಲು ತವಕಪಡುತ್ತಿದೆ. ಚೆಲುವಿನ ನೆಲೆಯಾಗಿ, ಶಾಂತಿಗೆ ಆಗರವಾಗಿ, ಎಷ್ಟೆಷ್ಟು ನೋಡಿದರೂ ನೋಡುತ್ತಲೇ ಇರಬೇಕೆನ್ನಿಸುವ ಅಪೂರ್ವವಾದ ದರ್ಶನವದು. ಆತನು ಸಮಸ್ತಲೋಕಗಳಿಂದಲೂ ಸದಾ ನಮಸ್ಕರಿಸಲ್ಪಡುತ್ತಿರುವ ಸರ್ವೋತ್ತಮ ನಾದ ಸ್ವಾಮಿಯು. ಸಂಕೀರ್ತನೆಗೆ ಯೋಗ್ಯವಾದ ಪವಿತ್ರಕೀರ್ತಿಯುಳ್ಳ ತೀರ್ಥರೂಪನು. ಪವಿತ್ರವಾದ ಕೀರ್ತಿಯುಳ್ಳ ಭಕ್ತರ ಕೀರ್ತಿಯನ್ನು ಹೆಚ್ಚಿಸುವ ಹರಿನಾರಾಯಣನು. ಹೀಗೆ ದೇವದೇವನ ದಿವ್ಯಮಂಗಳವಿಗ್ರಹದ ಸರ್ವಾಂಗಗಳನ್ನೂ–ಚಿತ್ತವು ಆ ಶ್ರೀಮೂರ್ತಿಯಿಂದ ಜಾರದೆ ಸ್ಥಿರವಾಗುವ ವರೆಗೂ–ಧ್ಯಾನಿಸುತ್ತಿರಬೇಕು. ಶ್ರೀಭಗವಂತನು ಎಲ್ಲ ಭಂಗಿಗಳಲ್ಲೂ, ಎಲ್ಲ ಭಾವಗಳಲ್ಲೂ ಪರಿಶುದ್ಧತಮನೂ–ರಮಣೀಯತಮನೂ ಆಗಿರುವುದರಿಂದ ತನ್ನ ರುಚಿಗೆ ಅನುಗುಣವಾಗಿ ನಿಂತಿರುವ ಭಂಗಿಯಲ್ಲಾಗಲೀ, ನಡೆಯುವ ಭಂಗಿಯಲ್ಲಾಗಲೀ, ಕುಳಿತಿರುವ ಭಂಗಿಯಲ್ಲಾಗಲೀ, ಮಲಗಿರುವ ಭಂಗಿಯಲ್ಲಾಗಲೀ–ಹೃದಯಗುಹೆಯಲ್ಲಿ ವಿರಾಜಿಸುತ್ತಿರುವ ಆ ಪರಮಾತ್ಮ ನನ್ನು ಶುದ್ಧಭಾವದಿಂದ ಕೂಡಿದ ಚಿತ್ತದಿಂದ ಚಿಂತನೆಮಾಡಬೇಕು. ಹೀಗೆ ಸ್ವಾಮಿಯ ಸರ್ವಾಂಗಗಳಲ್ಲಿಯೂ ನೆಲೆಪಡೆದು ರಮಿಸುತ್ತಿರುವ ಚಿತ್ತವನ್ನು ಒಂದೊಂದೇ ಅವಯವದಲ್ಲಿ ನಿಲ್ಲಿಸುತ್ತಾ ಅಡಿಯಿಂದ ಮುಡಿಯವರೆಗೂ ಧ್ಯಾನಮಾಡಬೇಕು. (ಶ್ಲೋಕ 13-20)

ಮೊದಲಿಗೆ ಪರಮಾತ್ಮನ ಪಾದಾರವಿಂದಗಳನ್ನು ಧ್ಯಾನಿಸಬೇಕು. ಅವು–ವಜ್ರ, ಅಂಕುಶ, ಧ್ವಜ ಮತ್ತು ಕಮಲಗಳ ಮಂಗಳರೇಖೆಗಳಿಂದ ರಾರಾಜಿಸುತ್ತಿವೆ. ನಸುಗೆಂಪಿನಿಂದ ಕಂಗೊಳಿಸುತ್ತಿರುವ ಉಗುರುಗಳೆಂಬ ತಿಂಗಳಬೆಳಕು ತನ್ನ ಕಾಂತಿಕಿರಣಗಳಿಂದ ಧ್ಯಾನಿಸುತ್ತಿರುವ ಭಕ್ತರ ಹೃದಯದ ಕತ್ತಲೆಯನ್ನು ಹೊಡೆದೋಡಿಸುತ್ತಿವೆ. ಆ ತೀರ್ಥಪಾದಗಳನ್ನು ಬ್ರಹ್ಮದೇವರು ತೊಳೆದಾಗಲೇ ಅಲ್ಲವೇ–ನದಿಗಳಲ್ಲಿ ಉತ್ತಮೋತ್ತಮವಾದ

ಗಂಗೆಯು ತೀರ್ಥರೂಪದಲ್ಲಿ ಪ್ರಕಟಗೊಂಡು ಶಿವನ ಶಿರಸ್ಸನ್ನಲಂಕರಿಸಿ, ಸ್ವಯಂ ಶಿವನೇ (ಮಂಗಳಸ್ವರೂಪನೇ) ಆಗಿರುವ ಆತನನ್ನು ಶಿವತರನನ್ನಾಗಿಸಿತು! ಧ್ಯಾನಿಸುವ ಸುಕೃತಿಗಳ ಪಾಪರಾಶಿಯೆಂಬ ಪರ್ವತವನ್ನು ಧ್ವಂಸಮಾಡುವ, ವಜ್ರಾಯುಧಕ್ಕೆ ಸಮಾನವಾದ ಆ ಪವಿತ್ರಪಾದಗಳನ್ನು ಭಕ್ತನು ಚಿರಕಾಲದವರೆಗೂ ಚಿಂತಿಸುತ್ತಿರಬೇಕು. ಆಮೇಲೆ ಜನ್ಮರಹಿತನಾದ ಆ ಜಗನ್ನಾಥನ ಮೊಣಕಾಲು–ಮಂಡಿಗಳನ್ನು ಧ್ಯಾನಿಸಬೇಕು. ವಿಶ್ವವಿಧಾತೃಗಳಾದ ಬ್ರಹ್ಮದೇವರಿಗೂ ಜನನಿಯಾಗಿ, ಸರ್ವದೇವವಂದಿತೆಯಾದ, ಪದ್ಮನಯನೆಯಾದ ಪದ್ಮಾದೇವಿಯು ತನ್ನ ತೊಡೆಗಳ ಮೇಲೆ ಇರಿಸಿಕೊಂಡು, ಸುಕುಮಾರವಾದ ಚಿಗುರುಗಳನ್ನು ಹೋಲುವ ಚೆಲುವಾದ ಕೈಗಳ ಕಾಂತಿಯನ್ನು ಚೆಲ್ಲುತ್ತಾ ಸೇವಿಸುವ ಅಗ್ಗಳಿಕೆಯುಳ್ಳ ದಿವ್ಯಾವಯವವಲ್ಲವೇ ಅದು! ಅನಂತರ ಮಹಾಬಲಶಾಲಿಗಳಾಗಿ, ವೇದಮೂರ್ತಿಯಾದ ಗರುಡದೇವರ ಹೆಗಲನ್ನು ಅಲಂಕರಿಸಿರುವ, ಅಗಸೆಯ ಹೂವಿನಂತೆ ನೀಲಿಯ ಬಣ್ಣದ ಕಾಂತಿಯಿಂದ ಕಂಗೊಳಿಸುತ್ತಿರುವ ಸ್ವಾಮಿಯ ತೊಡೆಗಳನ್ನು ಧ್ಯಾನಿಸಬೇಕು. ತರುವಾಯ ಕಣಕಾಲಿನವರೆಗೂ ಲಂಬಿಸಿರುವ, ಪೀತಾಂಬರ ದಿಂದ ಮುಚ್ಚಲ್ಪಟ್ಟು ಅವುಗಳ ಮೇಲೆ ಧರಿಸಿರುವ ರತ್ನಖಚಿತವಾದ ನಡುದಾರ-ಒಡ್ಯಾಣಗಳ ಎಳೆಗಳನ್ನು ಆಲಿಂಗಿಸುತ್ತಿರುವ ಶ್ರೀಭಗವಂತನ ನಿತಂಬವನ್ನು ಧ್ಯಾನಮಾಡಬೇಕು. ಅನಂತರ ದೇವದೇವನ ಉದರದಲ್ಲಿ ಬೆಳಗುತ್ತಿರುವ ಸುಳಿನಾಭಿಯ ಸರೋವರವನ್ನು ಧ್ಯಾನಿಸಬೇಕು. ಇದು ಸಮಸ್ತಲೋಕಗಳಿಗೂ ಆಶ್ರಯವಾದ ಸ್ಥಾನವು. ಸೃಷ್ಟಿಕರ್ತರಾದ ಬ್ರಹ್ಮದೇವರಿಗೆ ಆಧಾರವಾದ, ಸರ್ವಲೋಕಮಯವಾದ ಕಮಲವು ಇಲ್ಲಿಯೇ ಪ್ರಕಟಗೊಂಡಿತಲ್ಲವೇ? ಇದನ್ನು ಧ್ಯಾನಿಸಿದನಂತರ ಮರಕತಮಣಿಗಳಂತೆ ಕಂಗೊಳಿಸುತ್ತಾ ವಕ್ಷಃಸ್ಥಳದಲ್ಲಿ ಅಲಂಕೃತವಾಗಿರುವ, ಧವಳವಾದ ಹಾರಗಳ ಕಿರಣಗಳಿಂದ ಬಿಳಿಬಣ್ಣವನ್ನು ಪಡೆದಿರುವಂತೆ ಪ್ರಕಾಶಿಸುತ್ತಿರುವ ಎರಡು ಸ್ತನಗಳನ್ನು ಧ್ಯಾನಮಾಡಬೇಕು. ಆಮೇಲೆ ಮಹಾಲಕ್ಷ್ಮಿಗೆ ನೆಲೆಯಾಗಿ, ಎಲ್ಲ ಪುರುಷರ ಕಣ್ಮನಗಳನ್ನೂ ಸೂರೆಗೊಂಡು ಆನಂದವನ್ನು ತುಂಬುತ್ತಿರುವ ಪುರುಷೋತ್ತಮನ ವಕ್ಷಃಸ್ಥಳವನ್ನು ಚಿಂತಿಸಬೇಕು. ಅನಂತರ ಮಣಿಗಳಿಗೇ ಭೂಷಣವಾಗಿರುವ ಕೌಸ್ತುಭಮಣಿಯನ್ನೂ ಭೂಷಿಸುವುದಕ್ಕಾಗಿ ಅದನ್ನು

ಧರಿಸಿಕೊಂಡಿರುವ ಸರ್ವಲೋಕನಮಸ್ಕೃತನಾದ ನಾರಾಯಣನ ಕೊರಳನ್ನೂ ಧ್ಯಾನಿಸಬೇಕು. (ಶ್ಲೋಕ 21-26)

ತರುವಾಯ ಲೋಕಪಾಲಕರಿಗೆ ಆಶ್ರಯವಾಗಿರುವ ಭಗವಂತನ ನಾಲ್ಕು ಭುಜಗಳನ್ನು ಧ್ಯಾನಮಾಡಬೇಕು. ಅವುಗಳಲ್ಲಿ ಸ್ವಾಮಿಯು ಧರಿಸಿರುವ ಕಂಕಣವೇ ಮುಂತಾದ ಉಜ್ಜ್ವಲವಾದ ಆಭರಣಗಳು–ಹಾಲ್ಗಡಲನ್ನು ಕಡೆಯುತ್ತಿರುವಾಗ ಮಂದರಪರ್ವತದೊಡನೆ ಉಜ್ಜಿ ಸಾಣೆಹಿಡಿಯಲ್ಪಟ್ಟುವೋ–ಎಂಬಂತೆ ಝುಗ-ಝುಗಿಸುತ್ತಿವೆ. ಸಹಿಲಸದಳವಾದ ತೇಜಸ್ಸಿನಿಂದ ತೊಳ-ತೊಳಗಿ ಬೆಳಗುತ್ತಿರುವ, ಸಾವಿರ ಅಲಗುಗಳಿಂದ ಕೋರೈಸುತ್ತಿರುವ ಸುದರ್ಶನಚಕ್ರವನ್ನೂ ಮತ್ತು ಆತನ ಕರಕಮಲದಲ್ಲಿ ರಾಜಹಂಸದಂತೆ ವಿರಾಜಿಸುತ್ತಿರುವ ಶ್ರೀಪಾಂಚಜನ್ಯಶಂಖವನ್ನೂ ಚಿಂತಿಸಬೇಕು. ಬಳಿಕ ಶತ್ರುವೀರರ ರಕ್ತದಿಂದ ನೆನೆದಿರುವ, ಪ್ರಭುವಿಗೆ ಪ್ರಿಯವಾದ ಕೌಮೋದಕೀಗದೆಯನ್ನೂ, ದುಂಬಿಗಳ ಝೇಂಕಾರದಿಂದ ಕೂಡಿದ ವನಮಾಲೆಯನ್ನೂ ಮತ್ತು ಆತನ ಕೊರಳಿನಲ್ಲಿ ಅತ್ಯಂತ ಶೋಭಾಯಮಾನವಾಗಿರುವ ಹಾಗೂ ಸಮಸ್ತಜೀವಗಳ ಪರಿಶುದ್ಧತತ್ತ್ವ ರೂಪವಾಗಿರುವ ಕೌಸ್ತುಭಮಣಿಯನ್ನೂ ಧ್ಯಾನಮಾಡಬೇಕು.* ತರುವಾಯ ಭಕ್ತರಾದ ಭೃತ್ಯರಲ್ಲಿ ದಯೆಯನ್ನು ತೋರುವುದಕ್ಕೋಸ್ಕರವೇ ಇಲ್ಲಿ

---

* "ಆತ್ಮಾನಮಸ್ಯ ಜಗತೋ ನಿರ್ಲೇಪಮಗುಣಾಮಲಮ್ । ಬಿಭರ್ತಿ ಕೌಸ್ತುಭಮಣಿಂ ಸ್ವರೂಪಂ ಭಗವಾನ್ ಹರಿಃ ॥"–ಎಂಬಂತೆ–ಈ ಜಗತ್ತಿನ ನಿರ್ಲಿಪ್ತವೂ, ನಿರ್ಮಲವೂ, ಗುಣಾತೀತವೂ ಆದ ಆತ್ಮಸ್ವರೂಪವನ್ನೇ ಶ್ರೀಹರಿಯು ತನ್ನ ಕೌಸ್ತುಭ ಮಣಿಯ ರೂಪದಲ್ಲಿ ಧರಿಸಿದ್ದಾನೆ. (ವಿಷ್ಣುಪುರಾಣ)

"ಕೌಸ್ತುಭಮಣಿರ್ಜೀವಃ ಪ್ರಧಾನಂ ಪುನಃ ಶ್ರೀವತ್ಸಂ ಕಮಲಾಪತೇ । ತವಗದಾಮಾಹುರ್ಮಹಾನ್ತಂ ಬುಧಾಃ ॥"–ಎಂಬಂತೆ ಕೌಸ್ತುಭಮಣಿಯು ಶುದ್ಧವಾದ ಜೀವತತ್ತ್ವ ರೂಪವಾಗಿದೆ. (ಯತೀಂದ್ರಮತದೀಪಿಕಾ)

ಕೌಸ್ತುಭಮಣಿಗೆ ಜೀವತತ್ತ್ವವು ಅಧಿಷ್ಠಾತೃದೇವತೆ ಎಂಬ ವಿರಣೆಯೂ ಇದೆ.

ಚಿತ್ತಾಭಿಮಾನಿಯಾಗಿ ಚೈತ್ಯರೆಂದು ಹೆಸರಾದ ಬ್ರಹ್ಮದೇವರೇ ಭಗವಂತನ ಕಂಠದಲ್ಲಿ ಕೌಸ್ತುಭಮಣಿಯ ರೂಪದಲ್ಲಿ ಹೊಳೆಯುತ್ತಿದ್ದಾರೆ. "ಬ್ರಹ್ಮಾ ಚಿತ್ತಾಭಿಮಾನೇನ ಚೈತ್ಯಸ್ಸನ್ನಿಯಮಾದ್ಧರೀಃ। ಸ ಚ ಬ್ರಹ್ಮಾ ಹರೇಃ ಕಣ್ಠೇ ಕೌಸ್ತುಭತ್ವೇನ ಭಾಸತೇ॥"

(ವಿಜಯಧ್ವಜೀಯ) (ಶ್ಲೋಕ ೨೮)

ಸಾಕಾರರೂಪವನ್ನು ತಾಳಿರುವ ಶ್ರೀಹರಿಯ ಮುಖಕಮಲವನ್ನು ಧ್ಯಾನ ಮಾಡಬೇಕು. ಈ ಸುಂದರವಾದ ವದನಾರವಿಂದವು–ಉದಾರವಾದ ಮೂಗಿ ನಿಂದಲೂ ಮತ್ತು ಹೊಳೆಯುತ್ತಿರುವ ಮಕರಕುಂಡಲಗಳು ಚಲಿಸುತ್ತಿರು ವುದರಿಂದ ಅತಿಶಯಕಾಂತಿಯಿಂದ ಬೆಳಗುತ್ತಿರುವ ಸ್ವಚ್ಛವಾದ ಕಪೋಲ ಗಳಿಂದಲೂ ವಿಶೇಷವಾಗಿ ಕಂಗೊಳಿಸುತ್ತಿದೆ. ಕಪ್ಪು-ಕಪ್ಪಾದ ಗುಂಗುರು ಕೂದಲುಗಳುಳ್ಳ ಮುಂಗುರುಳುಗಳಿಂದ ಶೋಭಿಸುವ ಭಗವಂತನ ಮುಖ ಮಂಡಲವು ತನ್ನ ಕಾಂತಿಯಿಂದ–ದುಂಬಿಗಳಿಂದ ಸೇವಿತವಾದ ಕಮಲ ಕೋಶವನ್ನೂ–ನಾಚಿಸುತ್ತಿದೆ ಮತ್ತು ಕಮಲದಂತೆ ವಿಶಾಲವಾಗಿ ಚಂಚಲ ವಾಗಿ ಹೊಳೆಯುತ್ತಿರುವ ಆತನ ಕಣ್ಣುಗಳು ತನ್ನ ಕಾಂತಿಯಿಂದ ಕಮಲ ಕೋಶದ ಮೇಲೆ ಜಿಗಿಯುತ್ತಾ ಮಿನುಗುತ್ತಿರುವ ಮೀನುಗಳ ಜೋಡಿ ಯನ್ನು ಸೋಲಿಸುತ್ತಿವೆ. ಹಾಗೆಯೇ ಉನ್ನತವಾದ ಹುಬ್ಬಿನ ಬಳ್ಳಿಯಿಂದಲೂ ಕೂಡಿ ವಿರಾಜಿಸುತ್ತಿರುವ ಭಗವಂತನ ಮನೋಹರವಾದ ಮುಖಾರವಿಂದ ವನ್ನು ಮನಸ್ಸಿನಲ್ಲಿ ಧರಿಸಿ ಆಲಸ್ಯವನ್ನು ತೊರೆದು ಧ್ಯಾನಿಸುತ್ತಿರಬೇಕು. ಹೃದಯಗುಹೆಯಲ್ಲಿ ಬಹಳ ಕಾಲದವರೆಗೂ ಭಕ್ತಿಭಾವದಿಂದ ಭಗವಂತನ ನೇತ್ರಗಳ ನೋಟವನ್ನು ಧ್ಯಾನಮಾಡಬೇಕು. ಆ ನೋಟವು ಕೃಪೆಯಿಂದಲೂ ಮತ್ತು ಪ್ರೇಮಪೂರ್ಣವಾದ ಮಂದಹಾಸದಿಂದಲೂ ಕ್ಷಣ-ಕ್ಷಣದಲ್ಲಿಯೂ ವೃದ್ಧಿಹೊಂದುತ್ತಿರುತ್ತದೆ ; ಅನುಗ್ರಹದ ಮಳೆಯನ್ನೇ ಕರೆಯುತ್ತಿರುತ್ತದೆ ಮತ್ತು ಭಕ್ತಜನರ ಅತಿಘೋರವಾದ ಮುಬ್ಬಗೆಯ ತಾಪಗಳನ್ನೂ ಪರಿಹರಿಸುವುದಕ್ಕಾಗೀಯೇ ಪ್ರಕಟಗೊಂಡಿದೆ. ಅನಂತರ ನಮಸ್ಕರಿಸುವ ಭಕ್ತರ ಅತಿತೀವ್ರವಾದ ಶೋಕದ ಕಣ್ಣೀರಿನ ಕಡಲನ್ನೇ ಬತ್ತಿಸುವುದಾಗಿ ಅತ್ಯಂತ ಉದಾರವಾಗಿರುವ ಶ್ರೀಹರಿಯ ಹಾಸ್ಯದ ಹೊನಲನ್ನು ಧ್ಯಾನಿಸ ಬೇಕು. ಶ್ರೀಹರಿಯು ಮುನಿಗಳ ಹಿತಕ್ಕಾಗಿ ಮನ್ಮಥನಿಗೆ ಮೋಹವನ್ನುಂಟು ಮಾಡುವುದ್ಕಕಾಗಿಯೇ ತನ್ನ ಮಾಯೆಯಿಂದ ರಚಿಸಿದಂತೆ ರಾರಾಜಿ ಸುತ್ತಿರುವ ಆತನ ಹುಬ್ಬುಬಳ್ಳಿಯನ್ನು ಧ್ಯಾನಮಾಡಬೇಕು. ಆಮೇಲೆ ಎಣೆಯಿಲ್ಲದ ಪ್ರೇಮಾತಿಶಯದ ಭಾವದಿಂದ ನೆನೆದಿರುವ ರೂಪದಲ್ಲಿ, ಹೃದಯದಲ್ಲಿ ವಿರಾಜಿಸುತ್ತಿರುವ ಶ್ರೀಹರಿಯ ನಗುವನ್ನು ಧ್ಯಾನಮಾಡ ಬೇಕು. ಇದು ಧ್ಯಾನಕ್ಕೆ ಅತ್ಯಂತ ಯೋಗ್ಯವಾದ ವಿಷಯವು. ಭಗವಂತನು

ಹಾಗೆ ನಗುತ್ತಿರುವಾಗ ಮೇಲ್ದುಟಿ ಮತ್ತು ಕೆಳದುಟಿಗಳ ಬಲು ಕೆಂಪಾದ ಕಾಂತಿಯಿಂದ ಬಾಯೊಳಗೆ ಶುದ್ಧ ಬಿಳಿಯ ಬಣ್ಣದ ಕುಂದಪುಷ್ಪದ ಮೊಗ್ಗಿನಂತೆ ಮೆರೆಯುತ್ತಿರುವ ಪುಟ್ಟ ಹಲ್ಲುಗಳ ಮೇಲೆ ಕೆಂಪುಬಣ್ಣವು ಬಿದ್ದು ಬೆಳಗುತ್ತಿರುವಂತೆ ಕಾಣುವುದನ್ನೂ ನೆನೆಯಬೇಕು. ಈ ರೀತಿ ಧ್ಯಾನದಲ್ಲಿ ತನ್ಮಯನಾಗಿ ಶ್ರೀಭಗವಂತನನ್ನು ಬಿಟ್ಟು ಬೇರಾವ ಪದಾರ್ಥ ವನ್ನೂ ನೋಡಲು ಬಯಸಬಾರದು.

ಹೀಗೆ ಧ್ಯಾನವನ್ನು ಅಭ್ಯಾಸಮಾಡುವುದರಿಂದ ಸಾಧಕನಿಗೆ ಶ್ರೀಹರಿಯಲ್ಲಿ ಪ್ರೇಮವು ತುಂಬಿಬರುವುದು. ಆತನ ಹೃದಯವು ಭಕ್ತಿಯಿಂದ ಕರಗಿಹೋಗುವುದು. ದೇಹವು ಆನಂದಾತಿಶಯದಿಂದ ನವಿರೇಳುವುದು. ಉತ್ಕಂಠತೆಯಿಂದ ಉಂಟಾದ ಪ್ರೇಮದ ಕಣ್ಣೀರಿನ ಧಾರೆಯಲ್ಲಿ ಆತನು ಮತ್ತೆ-ಮತ್ತೆ ತನ್ನ ದೇಹಕ್ಕೆ ಸ್ನಾನಮಾಡಿಸುವನು ಮತ್ತು ಅನಂತರ ಮೀನಿನ ಗಾಳವು ಮೀನನ್ನು ಹೇಗೋ ಹಾಗೆ–ಶ್ರೀಹರಿಯನ್ನು ತನ್ನೆಡೆಗೆ ಸೆಳೆದುಕೊಳ್ಳಲು ಸಾಧನವಾಗಿದ್ದ ಚಿತ್ತವನ್ನೂ ಮೆಲ್ಲ-ಮೆಲ್ಲಗೆ ಧ್ಯೇಯವಸ್ತುವಿನಿಂದ ಅಗಲಿಸಿಬಿಡುತ್ತಾನೆ. ಎಣ್ಣೆಯೇ ಮುಂತಾದುವುಗಳು ಮುಗಿದುಹೋದನಂತರ ದೀಪಶಿಖೆಯು ತನಗೆ ಕಾರಣವಾದ ತೇಜಸ್ತತ್ತ್ವದಲ್ಲಿ ಲಯಹೊಂದಿಬಿಡುವಂತೆ–ಆಶ್ರಯ, ವಿಷಯ ಮತ್ತು ರಾಗಗಳೂ ಹೋಗಿಬಿಡಲಾಗಿ ಮನಸ್ಸು ಶಾಂತವಾಗಿ ಬ್ರಹ್ಮಾಕಾರವಾಗಿಬಿಡುವುದು. ಈ ಸ್ಥಿತಿಯು ಬಂದುಬಿಟ್ಟರೆ ಜೀವನು ಗುಣಪ್ರವಾಹರೂಪವಾದ ದೇಹವೇ ಮುಂತಾದ ಉಪಾಧಿಗಳು ನಿವೃತ್ತಿಹೊಂದಿಬಿಡುವುದರಿಂದ ಅಖಂಡನಾದ ಪರಮಾತ್ಮನೇ ಎಲ್ಲೆಲ್ಲೂ ವ್ಯಾಪಿಸಿ ತುಂಬಿರುವುದನ್ನೂ ನೋಡುವನು. ಹೀಗೆ ಯೋಗಾಭ್ಯಾಸದಿಂದುಂಟಾದ ಚಿತ್ತದ ಕೊನೆಯ ನಿವೃತ್ತಿಯಿಂದ ಸುಖ-ದುಃಖರಹಿತವಾದ ಆ ಪರಬ್ರಹ್ಮದ ಮಹಿಮೆಯಲ್ಲಿ ನೆಲೆಗೊಂಡು ಪರಮಾತ್ಮ-ತತ್ತ್ವವನ್ನು ಯೋಗಿಯು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಈ ಹಿಂದೆ ಅಜ್ಞಾನವಶದಿಂದ ಸುಖ-ದುಃಖಗಳ ಕರ್ತೃತ್ವವು ತನ್ನ ಸ್ವರೂಪದಲ್ಲೇ ಇದೆಯೆಂದು ತಿಳಿದುಕೊಂಡಿದ್ದ ಆತನು–ಆ ಕರ್ತೃತ್ವವು ಅವಿದ್ಯೆಯಿಂದ ಉಂಟಾದ ಅಹಂಕಾರದಲ್ಲೇ ಇದೆಯೆಂದು–ಅರಿತುಕೊಳ್ಳುವನು. ಹೆಂಡದ ಅಮಲಿನಲ್ಲಿರುವ ಮನುಷ್ಯನಿಗೆ ತನ್ನ ಸೊಂಟದಲ್ಲಿ ಸುತ್ತಿಕೊಂಡಿದ್ದ ಬಟ್ಟೆಯು

ಇರುವುದಾಗಲೀ, ಬಿದ್ದುಹೋದುದಾಗಲೀ ಯಾವುದೂ ತಿಳಿಯುವುದಿಲ್ಲ ವಲ್ಲವೇ? ಹಾಗೆಯೇ ಮೇಲೆ ಹೇಳಿದ ಪರಿಪಕ್ವಾವಸ್ಥೆಯೆಂಬ ಕೊನೆಯ ಸ್ಥಿತಿ ಯನ್ನು ಪಡೆದ ಸಿದ್ಧಪುರುಷನಿಗೂ ತನ್ನ ದೇಹವು ಕುಳಿತಿರುವುದಾಗಲೀ, ಏಳುವುದಾಗಲೀ ಅಥವಾ ದೈವವಶದಿಂದ ಎಲ್ಲಿಗಾದರೂ ಹೋಗುವು ದಾಗಲೀ, ಅಲ್ಲಿಂದ ಹಿಂದಿರುಗುವುದಾಗಲೀ ಯಾವುದೇ ವಿಷಯದ ಅರಿವೂ ಇರುವುದಿಲ್ಲ. ಏಕೆಂದರೆ : ಆತನು ತನ್ನ ಪರಮಾನಂದಮಯಸ್ವರೂಪದಲ್ಲಿ ನೆಲೆಗೊಂಡುಬಿಟ್ಟಿರುತ್ತಾನೆ. ಆತನ ಶರೀರವಾದರೋ ಹಿಂದಿನ ಜನ್ಮದ ಸಂಸ್ಕಾರಗಳಿಗೆ ಅಧೀನವಾದುದು. ಆದುದರಿಂದ ಅದನ್ನು ಆರಂಭಮಾಡಿದ ಪ್ರಾರಬ್ಧಕರ್ಮವು ಉಳಿದಿರುವವರೆಗೂ ಆತನು ಇಂದ್ರಿಯಗಳ ಸಹಿತ ಜೀವಂತನಾಗಿರುತ್ತಾನೆ. ಆದರೆ ಸಮಾಧಿಪರ್ಯಂತವಾದ ಯೋಗಾವಸ್ಥೆ ಯನ್ನು ಪಡೆದು ಪರಮಾತ್ಮತತ್ತ್ವವನ್ನೂ ಚೆನ್ನಾಗಿ ತಿಳಿದುಕೊಂಡಿರುವ ಸಿದ್ಧ ಪುರುಷನು ಪತ್ನೀ-ಪುತ್ರಾದಿಸಹಿತವಾದ ಈ ದೇಹವನ್ನು–ಕನಸಿನಲ್ಲಿ ಕಾಣುವ ಶರೀರಗಳನ್ನು ಹೇಗೋ ಹಾಗೆ ಭಾವಿಸುತ್ತಾನೆ ; ಅದನ್ನು ಮತ್ತೆ ಸ್ವೀಕರಿಸುವುದಿಲ್ಲ. ಮತ್ತೆ ಅದರಲ್ಲಿ ಅಹಂಕಾರ-ಮಮಕಾರಗಳನ್ನು ಹೊಂದು ವುದಿಲ್ಲ. ಸಾಧಾರಣವಾದ ಮನುಷ್ಯರಿಗೆ ಅತ್ಯಂತಸ್ನೇಹದ ಕಾರಣ ಮಕ್ಕಳು-ಮರಿಗಳು, ಹಣ-ಕಾಸು ಮುಂತಾದುವುಗಳಲ್ಲಿ 'ಅವೇ ತಾನು' ಎಂಬ ಆತ್ಮ ಬುದ್ಧಿಯು ಇರುತ್ತದೆ. ಆದರೆ ಸ್ವಲ್ಪ ವಿಚಾರಮಾಡಿದರೂ ಅವರಿಗೆ ಅವೆಲ್ಲಾ 'ತಮ್ಮಿಂದ ಬೇರೆ' ಎಂದು ತಿಳಿದುಬರುತ್ತದೆಯಲ್ಲವೇ? ಹಾಗೆಯೇ ತನ್ನ ಆತ್ಮಾ ಎಂದು ಭಾವಿಸಲ್ಪಟ್ಟಿದ್ದ ದೇಹವೇ ಮುಂತಾದುವುಗಳಲ್ಲಿಯೂ 'ಅವು ತಾನಲ್ಲ; ಅವುಗಳಿಂದ ಬೇರೆಯಾಗಿ, ಅವುಗಳಿಗೆ ಸಾಕ್ಷಿಯಾದ ಪುರುಷನು ಇದ್ದಾನೆ'–ಎಂದು ತಿಳಿದುಬರುತ್ತದೆ. ಅಗ್ನಿಯು–ಉರಿಯುತ್ತಿರುವ ಸೌದೆ ಗಳಿಂದಲೂ, ಬೆಂಕಿಯ ಕಿಡಿಗಳಿಂದಲೂ ಮತ್ತು ತನ್ನಿಂದಲೇ ಉಂಟಾದ ಹೊಗೆಯಿಂದಲೂ ಹಾಗೂ ಅಗ್ನಿರೂಪದಲ್ಲಿ ತಿಳಿಯಲ್ಪಡುತ್ತಿದ್ದ ಉರಿಯುವ ಕಟ್ಟಿಗೆಗಳಿಂದಲೂ ವಾಸ್ತವವಾಗಿ ಬೇರೆಯೇ ಆಗಿಲ್ಲವೇ? ಹಾಗೆಯೇ–ಭೂತ ಗಳು, ಇಂದ್ರಿಯಗಳು ಮತ್ತು ಅಂತಃಕರಣಗಳಿಂದ ಅವುಗಳಿಗೆಲ್ಲಾ ಸಾಕ್ಷಿ ಯಾಗಿರುವ ಆತ್ಮನು ಬೇರೆಯೇ ಆಗಿದ್ದಾನೆ ಮತ್ತು ಜೀವವೆಂದು ಕರೆಯಲ್ಪ ಡುತ್ತಿರುವ ಆ ಆತ್ಮನಿಗಿಂತಲೂ ಬ್ರಹ್ಮವು ಭಿನ್ನವಾದುದು ಮತ್ತು ಪ್ರಕೃತಿಗೆ

ಸಂಚಾಲಕನಾಗಿರುವ ಪುರುಷೋತ್ತಮನು ಪ್ರಕೃತಿಗಿಂತಲೂ ಬೇರೆಯಾದವನು. ದೇಹದ ದೃಷ್ಟಿಯಿಂದ ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜ–ಎಂದು ಕರೆಯಲ್ಪಡುವ ನಾಲ್ಕು ಬಗೆಯ ಪ್ರಾಣಿಗಳೂ ವಾಸ್ತವವಾಗಿ ಕೇವಲ ಪಂಚಭೂತಗಳೇ ಆಗಿವೆಯಲ್ಲವೇ? ಹಾಗೆಯೇ ಸಂಪೂರ್ಣಜೀವಗಳಲ್ಲಿ ಆತ್ಮನನ್ನೂ ಮತ್ತು ಆತ್ಮನಲ್ಲಿ ಸಂಪೂರ್ಣಜೀವಗಳನ್ನೂ ಅನನ್ಯಭಾವದಿಂದ ನೋಡಬೇಕು. ಪರಮಾತ್ಮನೇ ಎಲ್ಲದರಲ್ಲಿಯೂ ಅನುಗತನಾಗಿದ್ದಾನೆ ಎಂದು ತಿಳಿಯಬೇಕು. ಒಂದೇ ಅಗ್ನಿಯು ಬೇರೆ-ಬೇರೆ ಆಶ್ರಯದಲ್ಲಿರುವಾಗ ಆ ಆಶ್ರಯಗಳ ಭೇದದ ಕಾರಣ ತಾನೂ ಬೇರೆ-ಬೇರೆ ಆಕಾರದಲ್ಲಿರುವ ಹಾಗೆ ಕಾಣುವಂತೆ–ದೇವ-ಮನುಷ್ಯಾದಿ ಶರೀರಗಳಲ್ಲಿ ಇರುವ ಆತ್ಮನೂ ತನ್ನ ಆಶ್ರಯಗಳ ಗುಣಭೇದಕ್ಕೆ ತಕ್ಕಂತೆ ಬೇರೆ-ಬೇರೆಯೆಂದು ಕಾಣಿಸಿಕೊಳ್ಳುತ್ತಾನೆ. ಆದುದರಿಂದ ಭಗವಂತನ ಭಕ್ತನು ಜೀವದ ಸ್ವರೂಪವನ್ನು ಮರೆಸುವ ಮತ್ತು ಕಾರ್ಯ-ಕಾರಣರೂಪದಿಂದ ಪರಿಣಾಮವನ್ನು ಹೊಂದಿರುವ ಭಗವಂತನ ಈ ಅಚಿನ್ತ್ಯವಾದ ಶಕ್ತಿರೂಪವಾದ ಮಾಯೆ ಯನ್ನು ಆತನ ಕೃಪೆಯಿಂದಲೇ ಗೆದ್ದು ತನ್ನ ವಾಸ್ತವಿಕವಾದ ಸ್ವರೂಪದಲ್ಲಿ ನೆಲೆಗೊಳ್ಳುವನು.” (ಶ್ಲೋಕ 27-44)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೨೮ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೨೯ನೆಯ ಅಧ್ಯಾಯ

ಭಕ್ತಿಯೋಗದ ಮಾರ್ಗ ಮತ್ತು ಕಾಲದ ಮಹಿಮೆ

ಭಗವಂತನು ವಿಸ್ತಾರವಾಗಿ ತಿಳಿಸಿದ ಉಪಾಸನಾವಿಧಿಯನ್ನು ಕೇಳಿದ ದೇವಹೂತಿಯು ಆತನನ್ನು ಪುನಃ ಹೀಗೆ ಪ್ರಾರ್ಥಿಸಿದಳು :

ಲಕ್ಷಣಂ ಮಹದಾದೀನಾಂ ಪ್ರಕೃತೇ ಪುರುಷಸ್ಯ ಚ ।
ಸ್ವರೂಪಂ ಲಕ್ಷ್ಯತೇಽಮೀಷಾಂ ಯೇನ ತತ್ಪಾರಮಾರ್ಥಿಕಮ್ ॥೧॥

“ಎಲೈ ಪ್ರಭುವೇ! ನೀನು ನನಗೆ ಸಾಂಖ್ಯಶಾಸ್ತ್ರವು ನಿರೂಪಣೆಮಾಡಿರುವಂತೆ–ಪ್ರಕೃತಿ, ಪುರುಷ ಮತ್ತು ಮಹತ್ತತ್ತ್ವ–ಇವುಗಳ ವಾಸ್ತವಿಕವಾದ

ಸ್ವರೂಪವು ಅರಿವಿಗೆ ಬರುವಂತೆ ಅವುಗಳ ಲಕ್ಷಣಗಳನ್ನು ಬೇರೆ-ಬೇರೆಯಾಗಿ ತಿಳಿಸಿದೆ.

ಅವುಗಳ ಆ ಲಕ್ಷಣಗಳನ್ನು ಅರಿತರೆ ಅದು ಭಕ್ತಿಯೋಗದ ಸಿದ್ಧಿಗೆ ಕಾರಣವಾಗುವುದೆಂದು ಹೇಳುತ್ತಾರಲ್ಲವೇ? ಆದುದರಿಂದ ನೀನು ಈಗ ನನಗೆ ಭಕ್ತಿಯೋಗದ ಮಾರ್ಗವನ್ನು ವಿಸ್ತಾರವಾಗಿ ಹೇಳುವವನಾಗು. ಹಾಗೆಯೇ ಜೀವಗಳು ಹೊಂದುವ ಜನನ-ಮರಣರೂಪವಾದ ವಿವಿಧ ಗತಿಗಳು ಯಾವುವು?–ಎಂಬುದನ್ನೂ ವರ್ಣಿಸು. ಇದನ್ನು ಕೇಳಿ ತಿಳಿದುಕೊಂಡರೆ ಜೀವನಿಗೆ ಎಲ್ಲ ಪದಾರ್ಥಗಳ ವಿಷಯದಲ್ಲಿಯೂ ವೈರಾಗ್ಯವುಂಟಾಗುವುದು. ಕಾಲವೆಂಬುದು ಪರಕ್ಕೂ ಪರವಾದುದು. ಈಶ್ವರಸ್ವರೂಪವಾದುದು. ಬ್ರಹ್ಮಾದಿದೇವತೆಗಳಿಗೂ ನಿಯಾಮಕವಾಗಿ ಸರ್ವಸಮರ್ಥವಾಗಿರುವುದು. ಆ ಕಾಲಗತಿಯಿಂದ ಉಂಟಾಗುವ ಸಂಸಾರಕ್ಕೆ ಹೆದರಿ ಅದರಿಂದ ಬಿಡುಗಡೆಹೊಂದುವುದಕ್ಕಾಗಿಯೇ ಜನರು ಪುಣ್ಯಕರ್ಮಗಳ ಆಚರಣೆಯಲ್ಲಿ ತೊಡಗುತ್ತಾರೆ. ಇಂತಹ ಪ್ರಭುವಾದ ಕಾಲದ ಸ್ವರೂಪವನ್ನು ವರ್ಣಿಸಿ ಹೇಳು.

ಲೋಕಸ್ಯ ಮಿಥ್ಯಾಭಿಮತೇರಚಕ್ಷುಷ
ಶ್ಚಿರಂ ಪ್ರಸುಪ್ತಸ್ಯ ತಮಸ್ಯನಾಶ್ರಯೇ ।
ಶ್ರಾನ್ತಸ್ಯ ಕರ್ಮಸ್ವನುವಿದ್ಧಯಾ ಧಿಯಾ
ತ್ವಮಾವಿರಾಸೀಃ ಕಿಲ ಯೋಗಭಾಸ್ಕರಃ ॥೫॥

ಎಲೈ ಮಹಾತ್ಮನೇ! ಜ್ಞಾನದೃಷ್ಟಿಯು ಲುಪ್ತವಾಗಿರುವುದರಿಂದ ಜನರು ಮಿಥ್ಯಾಜ್ಞಾನವುಳ್ಳವರಾಗಿ ದೇಹಾದಿಗಳಲ್ಲಿ 'ನಾನು', 'ನನ್ನದು' ಎಂಬ ಅಭಿಮಾನವನ್ನು ಹೊಂದಿರುತ್ತಾರೆ. ಅವರ ಬುದ್ಧಿಯು ಕಾಮ್ಯ ಕರ್ಮಗಳಲ್ಲಿ ಆಸಕ್ತವಾಗಿ ಆಯಾಸಗೊಂಡಿದೆ. ಇದರಿಂದ ಅವರು ಬಹು ಕಾಲದಿಂದಲೂ ಅಪಾರವಾದ ಸಂಸಾರವೆಂಬ ಇರುಳಿನಲ್ಲಿ ಮಲಗಿ ನಿದ್ರಿಸುತ್ತಿದ್ದಾರೆ. ಇಂತಹವರನ್ನು ಎಬ್ಬಿಸುವುದಕ್ಕಾಗಿ ಯೋಗಭಾಸ್ಕರ ನಂತೆ ನೀನು ಅವತಾರಮಾಡಿದ್ದೀಯಲ್ಲವೇ? ನನಗೆ ತಿಳಿವಳಿಕೆಯನ್ನು ನೀಡು."

ಮೈತ್ರೇಯರು ಹೇಳುತ್ತಾರೆ :

ಎಲೈ ವಿದುರನೇ! ಕೇಳು. ತಾಯಿಯು ಆಡಿದ ಆ ಚೆನ್ನುಡಿಯನ್ನು ಕೇಳಿ ಸಂತುಷ್ಟರಾದ ಕಪಿಲಮಹಾಮುನಿಗಳು ಆಕೆಯನ್ನು ಅಭಿನಂದನೆ ಮಾಡಿ ದಯೆಯಿಂದ ಕರಗಿದ ಹೃದಯದಿಂದ ಕೂಡಿದವರಾಗಿ ಆಕೆಗೆ ಹೀಗೆಂದರು :

ಭಕ್ತಿಯೋಗೋ ಬಹುವಿಧೋ ಮಾರ್ಗೈರ್ಭಾಮಿನಿ ಭಾವ್ಯತೇ ।
ಸ್ವಭಾವಗುಣಮಾರ್ಗೇಣ ಪುಂಸಾಂ ಭಾವೋ ವಿಭಿದ್ಯತೇ ॥೭॥

"ಅಮ್ಮಾ! ಸಾಧಕರ ಭಾವಕ್ಕೆ ತಕ್ಕಂತೆ ಭಕ್ತಿಯೋಗವು ಅನೇಕ ಪ್ರಕಾರವಾಗಿ ಪ್ರಕಾಶಿತವಾಗುತ್ತದೆ. ಏಕೆಂದರೆ : ಮನುಷ್ಯರ ಮನೋವೃತ್ತಿಗಳ ಮತ್ತು ಸತ್ತ್ವಾದಿಗುಣಗಳ ಭೇದಕ್ಕೆ ಅನುಗುಣವಾಗಿ ಅವರ ಭಾವಗಳಲ್ಲೂ ಅನೇಕಭೇದಗಳಿರುತ್ತವೆ.

ಅಭಿಸಂಧಾಯ ಯೋ ಹಿಂಸಾಂ ದಮ್ಭಂ ಮಾತ್ಸರ್ಯಮೇವ ವಾ ।
ಸಂರಮ್ಭೀ ಭಿನ್ನದೃಗ್ಭಾವಂ ಮಯಿ ಕುರ್ಯಾತ್ಸ ತಾಮಸಃ ॥೮॥

ಭಕ್ತರಲ್ಲಿ ನಾಲ್ಕು ಬಗೆಗಳು. ಯಾವನು ಭೇದಬುದ್ಧಿಯಿಂದ ಕೂಡಿ ಕ್ರೋಧಾವೇಶವನ್ನು ಹೊಂದಿ ಯಾರಿಗಾದರೂ ಹಿಂಸೆಮಾಡಬೇಕೆಂಬ ಆಶಯದಿಂದಾಗಲೀ, ದಂಭಕ್ಕಾಗಲೀ, ಇತರರ ಮೇಲೆ ಹೊಟ್ಟೆಕಿಚ್ಚಿನಿಂದಾಗಲೀ–ಪ್ರೇರಿತನಾಗಿ ತನ್ನ ಆ ಇಷ್ಟಾರ್ಥಗಳ ಸಿದ್ಧಿಗಾಗಿ ನನ್ನಲ್ಲಿ ಭಕ್ತಿಯಿಡುವನೋ–ಆತನು 'ತಾಮಸ' ಭಕ್ತನೆನಿಸುತ್ತಾನೆ.

ವಿಷಯಾನಭಿಸಂಧಾಯ ಯಶ ಐಶ್ವರ್ಯಮೇವ ವಾ ।
ಅರ್ಚಾದಾವರ್ಚಯೇದ್ಯೋ ಮಾಂ ಪೃಥಗ್ಭಾವಃ ಸ ರಾಜಸಃ ॥೯॥

ಶಬ್ದವೇ ಮುಂತಾದ ವಿಷಯಸುಖಗಳಿಗಾಗಿಯೋ, ಕೀರ್ತಿಗಾಗಿಯೋ, ಐಶ್ವರ್ಯಕ್ಕಾಗಿಯೋ–ಭೇದಬುದ್ಧಿಯಿಂದ ಕೂಡಿ ನನ್ನನ್ನು ಪ್ರತಿಮೆಯೇ ಮುಂತಾದುವುಗಳಲ್ಲಿ ಪೂಜಿಸುವವನು 'ರಾಜಸ' ಭಕ್ತನೆನಿಸುತ್ತಾನೆ.

ಕರ್ಮನಿರ್ಹಾರಮುದ್ದಿಶ್ಯ ಪರಸ್ಮಿನ್ವಾ ತದರ್ಪಣಮ್ ।
ಯಜೇದ್ಯಷ್ಟವ್ಯಮಿತಿ ವಾ ಪೃಥಗ್ಭಾವಃ ಸ ಸಾತ್ತ್ವಿಕಃ* ॥೧೦॥

* 'ತಾನು ಪರಮಾತ್ಮನಿಗೆ ಶರೀರಭೂತನೇ ಹೊರತು ಆತನಿಂದ ಬೇರೆಯಲ್ಲ'–ಎಂದು

ಪಾಪಗಳು ನಾಶಹೊಂದಲಿ–ಎನ್ನುವ ಇಷ್ಟದಿಂದಲೋ, ಪರಮಾತ್ಮನಿಗೆ ಅರ್ಪಣೆಮಾಡಬೇಕು–ಎಂಬ ಆಶಯದಿಂದಲೋ ಅಥವಾ ಪೂಜೆ ಮಾಡುವುದು ನನ್ನ ಕರ್ತವ್ಯ–ಎಂಬ ಭಾವನೆಯಿಂದಲೋ–ಯಾವನು ಭೇದದೃಷ್ಟಿಯಿಂದ ಕೂಡಿ ನನ್ನನ್ನು ಪೂಜೆಮಾಡುವನೋ–ಅವನು 'ಸಾತ್ತ್ವಿಕ' ಭಕ್ತನೆನಿಸುತ್ತಾನೆ.

ಮದ್ಗುಣಶ್ರುತಿಮಾತ್ರೇಣ ಮಯಿ ಸರ್ವಗುಹಾಶಯೇ ।
ಮನೋಗತಿರವಿಚ್ಛಿನ್ನಾ ಯಥಾ ಗಙ್ಗಾಮ್ಭಸೋಽಮ್ಬುಧೌ* ॥೧೧॥

ಲಕ್ಷಣಂ ಭಕ್ತಿಯೋಗಸ್ಯ ನಿರ್ಗುಣಸ್ಯ ಹ್ಯುದಾಹೃತಮ್ ।
ಅಹೈತುಕ್ಯವ್ಯವಹಿತಾ ಯಾ ಭಕ್ತಿಃ ಪುರುಷೋತ್ತಮೇ ॥೧೨॥

ತಿಳಿದು ಧ್ಯಾನಿಸುವವನು ಸಾತ್ತ್ವಿಕಭಕ್ತನು. ಸಾತ್ತ್ವಿಕಭಕ್ತಿಯಲ್ಲೂ ಭೇದಬುದ್ಧಿಯಿದೆ ಯೆಂದು ವ್ಯಾಖ್ಯಾನಿಸುವುದು ಸರಿಯಲ್ಲ. ಏಕೆಂದರೆ : ಸತ್ತ್ವಗುಣವು ವಸ್ತುವಿನ ಯಥಾರ್ಥಸ್ಥಿತಿಯನ್ನೇ ಪ್ರಕಾಶಪಡಿಸುವುದು ; ಭೇದಬುದ್ಧಿಯನ್ನುಂಟುಮಾಡು ವುದಿಲ್ಲ. 'ಸತ್ತ್ವಾತ್ಸಂಜಾಯತೇ ಜ್ಞಾನಂ', 'ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಂ'–ಎಂದು ಶ್ರೀಗೀತಾಚಾರ್ಯರ ವಾಕ್ಯಗಳನ್ನು ಇಲ್ಲಿ ಪ್ರಮಾಣಿಸಬಹುದು.

(ವೀರರಾಘವೀಯ)

ಭಗವಂತನ ರೂಪಗಳಲ್ಲಿ ಭೇದಬುದ್ಧಿಯನ್ನಿಡದೇ ಧ್ಯಾನಿಸುವವನು ಸಾತ್ತ್ವಿಕಭಕ್ತನು. (ವಿಜಯಧ್ವಜೀಯ) (ಶ್ಲೋಕ ೧೦)

* ಭಕ್ತಿಯಲ್ಲಿ ಸಾಮಾನ್ಯವಾಗಿ ಸಾತ್ತ್ವಿಕ, ರಾಜಸ ಮತ್ತು ತಾಮಸ–ಎಂದು ಮೂರು ವಿಧಗಳು. ಸಾತ್ತ್ವಿಕಭಕ್ತಿಯಲ್ಲಿಯೂ–ಸಾತ್ತ್ವಿಕ-ಸಾತ್ತ್ವಿಕ, ಸಾತ್ತ್ವಿಕ-ರಾಜಸ ಮತ್ತು ಸಾತ್ತ್ವಿಕ-ತಾಮಸ–ಎಂದು ಮೂರು ಪ್ರಕಾರಗಳು. ರಾಜಸಭಕ್ತಿಯಲ್ಲಿಯೂ, ರಾಜಸ- ಸಾತ್ತ್ವಿಕ, ರಾಜಸ ರಾಜಸ ಮತ್ತು ರಾಜಸ-ತಾಮಸ–ಎಂದು ಮೂರು ವಿಧವಾಗಿದೆ. ತಾಮಸಭಕ್ತಿಯಲ್ಲಿಯೂ ತಾಮಸ-ಸಾತ್ತ್ವಿಕ, ತಾಮಸ-ರಾಜಸ ಮತ್ತು ತಾಮಸ-ತಾಮಸ–ಎಂದು ಮೂರು ಭೇದಗಳು. ಉದಾಹರಣೆಗೆ : ಪರರ ಹಿಂಸೆಗಾಗಿ ಮಾಡುವ ಭಕ್ತಿಯು ತಾಮಸ-ತಾಮಸ ಅಥವಾ ತಾಮಸಾಧಮವೆನಿಸುತ್ತದೆ. ಇತರರನ್ನು ಮೆಚ್ಚಿಸಲು ಮಾಡುವ ಭಕ್ತಿಯು ತಾಮಸ-ಮಧ್ಯಮ ಅಥವಾ ತಾಮಸ-ರಾಜಸವು. ಇತರರ ಮೇಲಿನ ಸ್ಪರ್ಧೆಗಾಗಿ ಮಾಡಲ್ಪಡುವ ಭಕ್ತಿಯು ತಾಮಸ ಸಾತ್ತ್ವಿಕ. ಅಥವಾ ತಾಮಸೋತ್ತಮವೆನಿಸುತ್ತದೆ. ಬೃಹನ್ನಾರದೀಯಪುರಾಣವು ಇದನ್ನುಹೀಗೆ ಲಕ್ಷಿಸುತ್ತದೆ.

"ಯಶ್ಚಾನ್ಯಸ್ಯ ವಿನಾಶಾರ್ಥಂ ಭಜತೇ ಶ್ರದ್ಧಯಾ ಹರಿಮ್ । ಫಲವತ್ಪೃಥಿವೀಪಾಲ

ಇವು ಮೂರೂ ಫಲಾಭಿಸಂಧಿಯಿಂದ ಕೂಡಿದ ಭಕ್ತಿಯೋಗಗಳು. ಆದರೆ ಗಂಗೆಯ ಪ್ರವಾಹವು ಸಹಜವಾಗಿ ಅಖಂಡರೂಪದಿಂದ ಸಮುದ್ರದ ಕಡೆಗೇ ಹರಿಯುತ್ತಿರುವಂತೆ–ನನ್ನ ಗುಣಗಳನ್ನು ಕೇಳಿದ ಮಾತ್ರದಿಂದಲೇ ಮನೋಧಾರೆಯು–ಎಣ್ಣೆಯ ನಿರಂತರವಾದ ಧಾರೆಯಂತೆ–ನಿರಂತರವಾಗಿ ಸರ್ವಾಂತರ್ಯಾಮಿಯಾದ, ಪುರುಷೋತ್ತಮನಾದ ನನ್ನ ಕಡೆಗೇ ಯಾವ ಕಾಮನೆಯೂ ಇಲ್ಲದೇ ಅನನ್ಯಭಾವದಿಂದ ಹರಿಯುತ್ತಿರುವುದು ನಿರ್ಗುಣ ಭಕ್ತಿಯ ಲಕ್ಷಣವಮ್ಮಾ!*

ಸಾಲೋಕ್ಯಸಾರ್ಷ್ಟಿಸಾಮೀಪ್ಯಸಾರೂಪ್ಯೈಕತ್ವಮಪ್ಯುತ ।[1]
ದೀಯಮಾನಂ ನ ಗೃಹ್ಣನ್ತಿ ವಿನಾ ಮತ್ಸೇವನಂ ಜನಾಃ ॥೧೩॥

ಸಾ ಭಕ್ತಿಸ್ತಾಮಸಾಧಮಾ ॥೧॥ ಯೋಽರ್ಚಯೇತ್ಕೈತವಧಿಯಾ ಸ್ವೈರಿಣೀ ಸ್ವಪತಿಂ ಯಥಾ। ನಾರಾಯಣಂ ಜಗನ್ನಾಥಂ ಸಾ ತು ತಾಮಸಮಧ್ಯಮಾ ॥೨॥ ದೇವಪೂಜಾಪರಾನ್ ದೃಷ್ಟ್ವಾ ಸ್ಪರ್ಧಯಾ ಯೋಽರ್ಚಯೇದ್ಧರಿಮ್ । ಶೃಣುಷ್ವ ಪೃಥಿವೀಪಾಲ ಸಾ ಭಕ್ತಿಸ್ತಾಮಸೋತ್ತಮಾ ॥೩॥"

ಮತ್ತೊಬ್ಬನು ನಾಶವಾಗಲೆಂದು ಫಲಾಭಿಸಂಧಿಯಿಂದ ಹರಿಯನ್ನು ಶ್ರದ್ಧೆಯಿಂದ ಭಜಿಸುವುದು ತಾಮಸಾಧಮ ಭಕ್ತಿಯು. ವ್ಯಭಿಚಾರಿಣಿಯು ತನ್ನ ಪತಿಯನ್ನು ಹೇಗೋ ಹಾಗೆ–ಕಾಪಟ್ಯದಿಂದ ಕೂಡಿ ಫಲಾಭಿಸಂಧಿಯಿಂದ ನಾರಾಯಣನನ್ನು ಭಜಿಸುವುದು ತಾಮಸಮಧ್ಯಮ ಭಕ್ತಿಯು. ಮತ್ತೊಬ್ಬನು ದೇವನ ಪೂಜೆಯಲ್ಲಿ ತೊಡಗಿರುವುದನ್ನು ಕಂಡು ತಾನು ಅವನಂತೆ ಬಾಳಬೇಕು–ಎಂಬ ಹುರುಪಿನಿಂದ ಹರಿಯನ್ನು ಅರ್ಚಿಸುವ ಸಕಾಮಭಕ್ತಿಯು ತಾಮಸೋತ್ತಮ–ಎಂದು ಕರೆಯಲ್ಪಡುತ್ತದೆ. ಭಕ್ತಿಯಲ್ಲಿ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ–ಎಂಬ ಒಂಬತ್ತು ಪ್ರಕಾರಗಳು ಇವುಗಳಲ್ಲಿ ಒಂದೊಂದೂ ಮೇಲೆ ಹೇಳಿರುವ ಪ್ರಕಾರ ಒಂಬತ್ತು ಬಗೆಯಾಗಿರುವುದರಿಂದ ಭಕ್ತಿಯಲ್ಲಿ ಒಟ್ಟು ಎಂಬತ್ತೊಂದು ಭೇದಗಳೆಂದೂ ಹೇಳುವುದುಂಟು. (ಶ್ಲೋಕ ೮-೧೧)

---

* ಹಿಂದೆ ವಿವರಿಸಲ್ಪಟ್ಟಿರುವ ಭಕ್ತಿಗಳಲ್ಲಿ ಕೊನೆಯದಾದ ಸಾತ್ವಿಕ-ಸಾತ್ವಿಕ ಭಕ್ತಿಯು ಸತ್ವಾದಿ ತ್ರಿಗುಣಗಳನ್ನೂ ಹೋಗಲಾಡಿಸಿ ಮುಕ್ತಿಗೆ ಒಯ್ಯುವುದರಿಂದ ಅದನ್ನು ನಿರ್ಗುಣಭಕ್ತಿಯೆಂದು ಕರೆದಿದೆ. (ವೀರರಾಘವೀಯ) (ಶ್ಲೋಕ ೧೨)

---

1 ಸಾಲೋಕ್ಯ = ಭಗವಂತನ ಲೋಕದಲ್ಲಿ ನಿವಾಸಮಾಡುವಿಕೆ. ಸಾರ್ಷ್ಟಿ = ಭಗವಂತನನೊಡನೆ ಸಮಾನವಾದ ಐಶ್ವರ್ಯವನ್ನು ಹೊಂದಿರುವಿಕೆ. ಸಾಮೀಪ್ಯ = ಸದಾ ಭಗವಂತನ ಬಳಿಯಲ್ಲಿ ಇರುವಿಕೆ. ಸಾರೂಪ್ಯ = ಭಗವಂತನ ರೂಪದಂತೆ ರೂಪವನ್ನು

ಇಂತಹ ನಿರ್ಗುಣಭಕ್ತಿನಿಷ್ಠರು ನನ್ನ ಸೇವೆಯನ್ನು ಬಿಟ್ಟು, ನಾನು ದಯಪಾಲಿಸಬಹುದಾದ ಸಾಲೋಕ್ಯ, ಸಾರ್ಷ್ಟಿ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ–ಎಂಬ ಮುಕ್ತಿಗಳನ್ನೂ ಕೂಡ ಸ್ವೀಕರಿಸುವುದಿಲ್ಲ.

ಸ ಏವ ಭಕ್ತಿಯೋಗಾಖ್ಯ ಆತ್ಯನ್ತಿಕ ಉದಾಹೃತಃ ।
ಯೇನಾತಿವ್ರಜ್ಯ ತ್ರಿಗುಣಂ ಮದ್ಭಾವಾಯೋಪಪದ್ಯತೇ* ॥೧೪॥

ಭಗವಂತನ ಕೈಂಕರ್ಯಕ್ಕೋಸ್ಕರ ಮುಕ್ತಿಯನ್ನೂ ತಿರಸ್ಕರಿಸುವಂತಹ ಈ ಭಕ್ತಿಯೋಗವೇ ಪರಮಯೋಗ–ಇದು ಆತ್ಯಂತಿಕಯೋಗ. ಇದರಿಂದ ಮನುಷ್ಯನು ತ್ರಿಗುಣಗಳನ್ನೂ ದಾಟಿ ನನ್ನ ಭಾವವನ್ನು ಪಡೆದುಬಿಡುತ್ತಾನಮ್ಮಾ!

ನನ್ನ ಗುಣಗಳನ್ನು ಕೇಳಿದ ಮಾತ್ರದಿಂದಲೇ ಕೆಲವು ಭಕ್ತರ ಮನಸ್ಸು ನನ್ನಲ್ಲಿ ನೆಟ್ಟುಹೋಗುತ್ತದೆ–ಎಂದು ಹೇಳಿದೆನಲ್ಲವೇ! ಅಂತಹ ಭಕ್ತರ ಆಚರಣೆಯು ಹೇಗಿರುತ್ತದೆಯೆಂಬುದನ್ನು ಹೇಳುವೆನು ; ಕೇಳು. ಅವರು ನಿಷ್ಕಾಮಭಾವದಿಂದ ಶ್ರದ್ಧೆಯಿಂದ ತಮ್ಮ ನಿತ್ಯ-ನೈಮಿತ್ತಿಕಕರ್ತವ್ಯಗಳನ್ನು ಪಾಲನೆಮಾಡುತ್ತಾರೆ. ಪ್ರತಿದಿನವೂ ಹಿಂಸಾರಹಿತವಾದ ಉತ್ತಮವಾದ ಕರ್ಮಯೋಗವನ್ನು ಅನುಷ್ಠಾನಮಾಡುತ್ತಾರೆ. ನನ್ನ ಪ್ರತಿಮೆಗಳ ದರ್ಶನ ಮಾಡುತ್ತಾರೆ. ಅವುಗಳನ್ನು ಮುಟ್ಟುತ್ತಾರೆ. ಪೂಜಿಸುತ್ತಾರೆ. ಸ್ತುತಿಸುತ್ತಾರೆ ಮತ್ತು ವಂದಿಸುತ್ತಾರೆ. ಸಮಸ್ತಪ್ರಾಣಿಗಳಲ್ಲೂ ನನ್ನ ಭಾವನೆಯನ್ನು ಹೊಂದಿರುತ್ತಾರೆ. ಧೈರ್ಯವನ್ನೂ–ವೈರಾಗ್ಯವನ್ನೂ ಅವಲಂಬಿಸಿರುತ್ತಾರೆ. ಮಹಾಪುರುಷರನ್ನು ಗೌರವಿಸುತ್ತಾರೆ. ದೀನರಲ್ಲಿ ದಯೆಯನ್ನೂ,

---

ಹೊಂದುವಿಕೆ ಏಕತ್ವ= ಸಾಯುಜ್ಯಮುಕ್ತಿ ಈ ಐದೂ ಮುಕ್ತಿಗಳಲ್ಲಿ ಸಾಯುಜ್ಯಮುಕ್ತಿಯೇ ಪೂರ್ಣವಾದ ಮುಕ್ತಿಯು. ಆದರಲ್ಲಿ–ನೂರರಲ್ಲಿ ಐವತ್ತು ಸೇರಿರುವಂತೆ ಉಳಿದ ಮುಕ್ತಿಗಳೆಲ್ಲಾ ಸೇರಿರುತ್ತವೆಯೆಂದು ಶ್ರೀವೇದಾಂತದೇಶಿಕರು ತತ್ತ್ವಮುಕ್ತಾಕಲಾಪದಲ್ಲಿ ಹೇಳಿರುತ್ತಾರೆ. (ಶ್ಲೋಕ ೧೩)

* ನಿರ್ಗುಣಭಕ್ತರು (ತ್ರಿಗುಣಾತೀತಮುಕ್ತಿಯನ್ನು ಬಯಸುವ ಭಕ್ತರು) ಸಾಲೋಕ್ಯವೇ ಮುಂತಾದ ಮುಕ್ತಿಗಳನ್ನೂ ಬಯಸುವುದಿಲ್ಲ–ಎಂದರೆ : ತಮ್ಮ ಸುಖಕ್ಕಾಗಿ ಬಯಸು ವುದಿಲ್ಲ ; ಭಗವತ್ಸೇವೆಗಾಗಿಯೇ ಬಯಸುತ್ತಾರೆ.

(ವೀರರಾಘವೀಯ) (ಶ್ಲೋಕ ೧೪)

ಸರಿಸಮಾನರಾದವರಲ್ಲಿ ಸ್ನೇಹ-ವ್ಯವಹಾರಗಳನ್ನೂ ಹೊಂದಿರುತ್ತಾರೆ. ಯೋಗಶಾಸ್ತ್ರವು ಹೇಳುವ ಯಮ-ನಿಯಮಗಳನ್ನು ಪಾಲಿಸುತ್ತಾರೆ. ಅಧ್ಯಾತ್ಮಶಾಸ್ತ್ರಗಳನ್ನು ಶ್ರವಣಮಾಡುತ್ತಾರೆ. ನನ್ನ ನಾಮಗಳನ್ನು ಸಂಕೀರ್ತನೆ ಮಾಡುತ್ತಾರೆ. ಋಜುವಾದ ಬುದ್ಧಿಯನ್ನು ಹೊಂದಿರುತ್ತಾರೆ. ಸತ್ಪುರುಷರ ಸಹವಾಸಮಾಡುತ್ತಾರೆ ಮತ್ತು ಅಹಂಕಾರವನ್ನು ತ್ಯಜಿಸಿ ಭಾಗವತಧರ್ಮ ಗಳನ್ನು ಅನುಷ್ಠಾನಮಾಡುತ್ತಾರೆ.

ಮದ್ಧರ್ಮಣೋ ಗುಣೈರೇತೈಃ ಪರಿಸಂಶುದ್ಧ ಆಶಯಃ ।
ಪುರುಷಸ್ಯಾಂಜಸಾಭ್ಯೇತಿ ಶ್ರುತಮಾತ್ರಗುಣಂ ಹಿ ಮಾಮ್ ॥೧೯॥

ಇಂತಹ ಆಚರಣೆಯಲ್ಲಿರುವ ಭಕ್ತರ ಚಿತ್ತವು ಅತ್ಯಂತಶುದ್ಧವಾಗಿ ನನ್ನ ಗುಣಗಳನ್ನು ಶ್ರವಣಮಾಡುವುದಷ್ಟರಿಂದಲೇ ಶೀಘ್ರದಲ್ಲೇ ನನ್ನಲ್ಲಿ ಆಸಕ್ತವಾಗಿಬಿಡುವುದಮ್ಮಾ!

ಸುಗಂಧವು ತನಗೆ ಆಶ್ರಯವಾದ ಪುಷ್ಪದಿಂದ ಗಾಳಿಯೆಂಬ ಯಾನದ ಮೂಲಕ ಮೂಗನ್ನು ತಲುಪುವುದಲ್ಲವೇ? ಹಾಗೆಯೇ ನಿರ್ವಿಕಾರವಾದ ಚಿತ್ತವು ಭಕ್ತಿಯೋಗದಲ್ಲಿ ತತ್ಪರವಾಗಿ ಪರಮಾತ್ಮನನ್ನು ಹೋಗಿ ಸೇರುತ್ತದೆ.

ಅಹಂ ಸರ್ವೇಷು ಭೂತೇಷು ಭೂತಾತ್ಮಾವಸ್ಥಿತಃ ಸದಾ ।
ತಮವಜ್ಞಾಯ ಮಾಂ ಮರ್ತ್ಯಃ ಕುರುತೇಽರ್ಚಾವಿಡಮ್ಬನಮ್ ॥

ಸರ್ವಭೂತಗಳಲ್ಲಿಯೂ ನನ್ನನ್ನು ನೋಡಬೇಕು. ಹಾಗೆ ಮಾಡದೇ ಕೇವಲ ಪ್ರತಿಮೆಗಳನ್ನು ಪೂಜಿಸುವುದು ನನಗೆ ಸಮ್ಮತವಲ್ಲ. ನಾನು ಎಲ್ಲ ಭೂತಗಳಲ್ಲಿಯೂ ಅವುಗಳ ಆತ್ಮನಾಗಿ ವಿರಾಜಮಾನನಾಗಿದ್ದೇನೆ. ಅಂತಹ ನನ್ನನ್ನು ಅನಾದರಿಸಿ ಕೇವಲ ವಿಗ್ರಹಗಳಲ್ಲಿ ನನ್ನನ್ನು ಪೂಜಿಸುವುದು ತೋರಿಕೆಯ ಪೂಜೆಯಾಗುತ್ತದೆ. ಪೂಜೆಯ ವಿಡಂಬನೆಯಾಗುತ್ತದೆ.

ಯೋ ಮಾಂ ಸರ್ವೇಷು ಭೂತೇಷು ಸನ್ತಮಾತ್ಮಾನಮೀಶ್ವರಮ್ ।
ಹಿತ್ವಾರ್ಚಾಂ ಭಜತೇ ಮೌಢ್ಯಾದ್ಭಸ್ಮನ್ಯೇವ ಜುಹೋತಿ ಸಃ ॥೨೨॥

ಎಲ್ಲಕ್ಕೂ ಆತ್ಮವಾಗಿ ಪರಮೇಶ್ವರನಾಗಿರುವ ನಾನು ಎಲ್ಲ ಭೂತ ಗಳಲ್ಲಿಯೂ ಇರುವೆನು. ಹೀಗಿದ್ದರೂ ಮೋಹವಶನಾಗಿ ನನ್ನ ಈ ಆತ್ಮ ವನ್ನು ಉಪೇಕ್ಷೆಮಾಡಿ ಕೇವಲ ಪ್ರತಿಮೆಗಳ ಪೂಜೆಯಲ್ಲಿಯೇ ತತ್ಪರನಾಗಿರು

ವವನು ಮಾಡುವ ಆರಾಧನೆಯು ಬೂದಿಯಲ್ಲಿ ಹೋಮಮಾಡಿದಂತೆ ಆಗುವುದು.

ದ್ವಿಷತಃ ಪರಕಾಯೇ ಮಾಂ ಮಾನಿನೋ ಭಿನ್ನದರ್ಶಿನಃ ।
ಭೂತೇಷು ಬದ್ಧವೈರಸ್ಯ ನ ಮನಃ ಶಾನ್ತಿಮೃಚ್ಛತಿ ॥೨೩॥

ಭೇದದೃಷ್ಟಿಯುಳ್ಳವನಾಗಿ, ಅಭಿಮಾನದಿಂದ ಕೂಡಿ ಇತರ ಜೀವಗಳಲ್ಲಿ ವೈರವನ್ನು ಕಟ್ಟಿಕೊಳ್ಳುವವನು–ಅವುಗಳ ದೇಹಗಳಲ್ಲಿ ಇರುವ ಆತ್ಮನಾದ ನನ್ನನ್ನು–ದ್ವೇಷಿಸಿದಂತೆಯೇ ಆಗುತ್ತದೆ. ಅಂತಹವರ ಮನಸ್ಸಿಗೆ ಎಂದೆಂದಿಗೂ ಶಾಂತಿಯು ದೊರೆಯುವುದಿಲ್ಲ.

ಅಹಮುಚ್ಚಾವಚೈರ್ದ್ರವ್ಯೈಃ ಕ್ರಿಯಯೋತ್ಪನ್ನಯಾನಘೇ ।
ನೈವ ತುಷ್ಯೇಽರ್ಚಿತೋಽರ್ಚಾಯಾಂ ಭೂತಗ್ರಾಮಾವಮಾನಿನಃ ॥೨೪॥

ಅಮ್ಮಾ! ಯಾವನು ಇತರಜೀವಗಳಿಗೆ ಅವಮಾನಮಾಡುತ್ತಾನೆಯೋ–ಆತನು ಸಾಮಾನ್ಯವಾದ ಮತ್ತು ಶ್ರೇಷ್ಠವಾದ ಹಲವು ಬಗೆಯ ಸಾಮಗ್ರಿಗಳಿಂದ ಅನೇಕ ಪ್ರಕಾರವಾದ ವಿಧಿ-ವಿಧಾನಗಳೊಡನೆ ನನ್ನ ಮೂರ್ತಿಯನ್ನು ಪೂಜೆಮಾಡಿದರೂ–ನಾನು ಆತನಲ್ಲಿ ಪ್ರಸನ್ನನಾಗುವುದಿಲ್ಲ.

ಅರ್ಚಾದಾವರ್ಚಯೇತ್ತಾವದೀಶ್ವರಂ ಮಾಂ ಸ್ವಕರ್ಮಕೃತ್ ।
ಯಾವನ್ನ ವೇದ ಸ್ವಹೃದಿ ಸರ್ವಭೂತೇಷ್ವವಸ್ಥಿತಮ್ ॥೨೫॥

ತನ್ನ ಹೃದಯದಲ್ಲಿಯೂ ಮತ್ತು ಸಂಪೂರ್ಣಪ್ರಾಣಿಗಳಲ್ಲಿಯೂ ಇರುವ ಪರಮಾತ್ಮನ ಅನುಭವವು ಆಗುವವರೆಗೆ ಮನುಷ್ಯನು ತನ್ನ ಧರ್ಮಕ್ಕೆ ತಕ್ಕ ಕರ್ಮಗಳನ್ನು ಅನುಷ್ಠಾನಮಾಡುತ್ತಾ ಈಶ್ವರನಾದ ನನ್ನನ್ನು ಪ್ರತಿಮೆಯೇ ಮುಂತಾದುವುಗಳಲ್ಲಿ ಆರಾಧಿಸಬೇಕು.

ಆತ್ಮನಶ್ಚ ಪರಸ್ಯಾಪಿ ಯಃ ಕರೋತ್ಯನ್ತರೋದರಮ್ ।
ತಸ್ಯ ಭಿನ್ನದೃಶೋ ಮೃತ್ಯುರ್ವಿದಧೇ ಭಯಮುಲ್ಬಣಮ್ ॥೨೬॥

ಯಾವನು ಭೇದದೃಷ್ಟಿಯುಳ್ಳವನಾಗಿ ತನಗೂ ಮತ್ತು ಪರಮಾತ್ಮನಿಗೂ ಸ್ವಲ್ಪವಾದರೂ ವಿಚ್ಛಿತಿಯನ್ನು ಮಾಡಿಕೊಳ್ಳುತ್ತಾನೆಯೋ–ಅಂತಹವನಿಗೆ ಮೃತ್ಯುವು ಮಹಾಭಯವನ್ನು ತಂದು ಒಡ್ಡುತ್ತದೆ.

ಆದುದರಿಂದ ಎಲ್ಲ ಪ್ರಾಣಿಗಳ ಒಳಗೂ ಮನೆಯನ್ನು ಮಾಡಿಕೊಂಡು ಅವುಗಳಿಗೆ ಆತ್ಮನಾಗಿರುವ ಪರಮಾತ್ಮನಾದ ನನ್ನನ್ನು ಯಥೋಚಿತವಾದ ದಾನ, ಸನ್ಮಾನ, ಸ್ನೇಹ, ವ್ಯವಹಾರ ಮತ್ತು ಸಮಷ್ಟಿಗಳ ಮೂಲಕ ಪೂಜಿಸಬೇಕು.೭

ಅಮ್ಮಾ! ಕಲ್ಲೇ ಮುಂತಾದ ಅಚೇತನದ್ರವ್ಯಗಳಿಗಿಂತಲೂ ವೃಕ್ಷವೇ ಮುಂತಾದ ಜೀವಗಳು ಶ್ರೇಷ್ಠವೆನಿಸುವುವು. ಆ ವೃಕ್ಷಾದಿಗಳಿಗಿಂತಲೂ ಸ್ಪಷ್ಟವಾಗಿ ಉಸಿರಾಡುವ ಪ್ರಾಣಿಗಳು ಶ್ರೇಷ್ಠವೆನಿಸುತ್ತವೆ. ಅವುಗಳಿಗಿಂತಲೂ ಮನಸ್ಸುಳ್ಳ ಪ್ರಾಣಿಗಳು ಉತ್ತಮವೆನಿಸುತ್ತವೆ. ಆ ಮನಸ್ಸನ್ನು ಮಾತ್ರ ಉಳ್ಳ ಪ್ರಾಣಿಗಳಿಗಿಂತಲೂ ಇಂದ್ರಿಯವೃತ್ತಿಗಳುಳ್ಳ ಪ್ರಾಣಿಗಳು ಶ್ರೇಷ್ಠ ವೆನಿಸುತ್ತವೆ. ಅಂತಹ ಪ್ರಾಣಿಗಳಲ್ಲೂ ಸ್ಪರ್ಶವನ್ನು ಮಾತ್ರ ಅನುಭವಿಸುವ ಪ್ರಾಣಿಗಳಿಗಿಂತಲೂ ರಸವನ್ನು ಗ್ರಹಿಸುವ ಮತ್ಸ್ಯವೇ ಮುಂತಾದ ಪ್ರಾಣಿ ಗಳು ಉತ್ಕೃಷ್ಟವೆನಿಸುತ್ತವೆ. ಆ ರಸಗ್ರಾಹಿಗಳಿಗಿಂತಲೂ ಗಂಧದ ಜ್ಞಾನ ವುಳ್ಳ ದುಂಬಿಯೇ ಮುಂತಾದುವೂ, ಅವುಗಳಿಗಿಂತಲೂ ಶಬ್ದವನ್ನು ಗ್ರಹಣಮಾಡುವ ಸರ್ಪಾದಿ ಪ್ರಾಣಿಗಳೂ ಶ್ರೇಷ್ಠವೆನಿಸುತ್ತವೆ. ಅವುಗಳಿ ಗಿಂತಲೂ ರೂಪದ ಜ್ಞಾನವುಳ್ಳ ಕಾಗೆಯೇ ಮುಂತಾದುವು ಉತ್ತಮ. ಆ ರೂಪಾನುಭವಿಗಳಿಗಿಂತಲೂ ಎರಡು ಸಾಲು ಹಲ್ಲುಗಳುಳ್ಳ ಪ್ರಾಣಿಗಳೂ, ಅವುಗಳಲ್ಲೂ ಕಾಲುಗಳಿಲ್ಲದ ಜೀವಿಗಳಿಗಿಂತಲೂ ಕಾಲುಗಳುಳ್ಳ ಜೀವಿಗಳು ಉತ್ತಮ. ಬಹಳ ಕಾಲುಗಳುಳ್ಳ ಜೀವಿಗಳಿಗಿಂತಲೂ ನಾಲ್ಕು ಕಾಲುಗಳುಳ್ಳ ಜೀವಿಗಳು ಶ್ರೇಷ್ಠ. ಆ ಚತುಷ್ಪಾದಿಗಳಿಗಿಂತಲೂ ಎರಡು ಕಾಲುಗಳುಳ್ಳ ಜೀವಿಗಳು ಅಂದರೆ–ಮನುಷ್ಯರು ಶ್ರೇಷ್ಠ. ಮನುಷ್ಯರಲ್ಲೂ ನಾಲ್ಕು ವರ್ಣ ಗಳು ಉತ್ತಮ. ಆ ನಾಲ್ಕು ವರ್ಣಗಳಲ್ಲೂ ಬ್ರಾಹ್ಮಣರು ಶ್ರೇಷ್ಠರು. ಬ್ರಾಹ್ಮಣ ರಲ್ಲೂ ವೇದವನ್ನು ಬಲ್ಲವರೂ, ವೇದಜ್ಞರಲ್ಲೂ ವೇದಗಳ ತಾತ್ಪರ್ಯ ವನ್ನು ತಿಳಿದವರೂ ಶ್ರೇಷ್ಠರು. ಆ ತಾತ್ಪರ್ಯವನ್ನು ತಿಳಿದವರಿಗಿಂತಲೂ ಸಂಶಯಗಳನ್ನು ನಿವಾರಣೆಮಾಡಬಲ್ಲವರು ಉತ್ತಮರು. ಅವರಲ್ಲೂ ತಮ್ಮ ವರ್ಣಾಶ್ರಮೋಚಿತವಾದ ಧರ್ಮವನ್ನು ಪಾಲಿಸುವವರು ಶ್ರೇಷ್ಠರೆನಿಸು ವರು. ಅಂತಹವರಲ್ಲೂ ಆಸಕ್ತಿಯನ್ನು ತೊರೆದು ನಿಷ್ಕಾಮಭಾವದಿಂದ ತಮ್ಮ ಧರ್ಮವನ್ನು ಅನುಷ್ಠಾನಮಾಡುವವರು ಉತ್ತಮರೆನಿಸುವರು. ಹಾಗೆ

ಅನುಷ್ಠಾನಮಾಡುವವರಿಗಿಂತಲೂ ತಮ್ಮ ಸಮಸ್ತಕರ್ಮಗಳನ್ನೂ, ಅವುಗಳ ಫಲಗಳನ್ನೂ ಮತ್ತು ತಮ್ಮ ಶರೀರವನ್ನೂ ನನಗೇ ಸಮರ್ಪಣೆಮಾಡಿ, ಭೇದ ಭಾವವನ್ನು ಬಿಟ್ಟು ನನ್ನನ್ನು ಉಪಾಸನೆಮಾಡುವವರು ಉತ್ತಮರೆನಿಸುವರು. ಈ ರೀತಿಯಲ್ಲಿ ನನಗೇ ಚಿತ್ತವನ್ನೂ ಕರ್ಮಗಳನ್ನೂ ಯಾರು ಸಮರ್ಪಣೆಮಾಡುತ್ತಾರೋ–ಅಂತಹ ಕರ್ತೃತ್ವವನ್ನು ತೊರೆದ ಸಮದರ್ಶಿಗಳಾದ ಮನುಷ್ಯರಿಗಿಂತಲೂ ಶ್ರೇಷ್ಠನಾದ ಬೇರೊಬ್ಬ ಜೀವಿಯನ್ನು ನಾನು ಕಾಣೆನು. ಆದುದರಿಂದ ಸಾಕ್ಷಾತ್ ಶ್ರೀಭಗವಂತನೇ ತನ್ನ ಜೀವರೂಪವಾದ ಕಲೆಯಿಂದ ಎಲ್ಲದರಲ್ಲೂ ಪ್ರವೇಶಮಾಡಿದ್ದಾನೆ–ಎಂದು ಭಾವಿಸಿ ಸಮಸ್ತ ಪ್ರಾಣಿಗಳನ್ನೂ ಹೆಚ್ಚು ಆದರದಿಂದ ಮಾನಸಿಕವಾಗಿ ನಮಸ್ಕರಿಸಬೇಕು.

(ಶ್ಲೋಕ 27-34)

ಅಮ್ಮಾ! ಹೀಗೆ ನಾನು ನಿನಗೋಸ್ಕರ ಭಕ್ತಿಯೋಗವನ್ನೂ ಮತ್ತು ಅಷ್ಟಾಂಗಯೋಗವನ್ನೂ ವರ್ಣಿಸಿದ್ದೇನೆ. ಇವುಗಳಲ್ಲಿ ಒಂದನ್ನು ಸಾಧನೆ ಮಾಡಿದರೂ ಜೀವನು ಪರಮಪುರುಷನಾದ ಶ್ರೀಭಗವಂತನನ್ನು ಹೊಂದ ಬಹುದು. ಇನ್ನು ಕಾಲವನ್ನು ಕುರಿತು ನಿರೂಪಣೆಮಾಡುತ್ತೇನೆ, ಕೇಳಮ್ಮಾ! ಪರಮಾತ್ಮಪರಬ್ರಹ್ಮನಾದ ಶ್ರೀಭಗವಂತನ ಅದ್ಭುತವಾದ ಪ್ರಭಾವದಿಂದ ಸಂಪನ್ನವಾಗಿ, ಜಗತ್ತಿನ ಪದಾರ್ಥಗಳ ನಾನಾವಿಧವಾದ ವೈಚಿತ್ರ್ಯಕ್ಕೆ ಕಾರಣವಾಗಿರುವ ಸ್ವರೂಪವಿಶೇಷವೇ 'ಕಾಲ' ವೆನಿಸುವುದು. ಪ್ರಕೃತಿ ಮತ್ತು ಪುರುಷರು ಇದರ ರೂಪಗಳೇ ಆಗಿದ್ದಾರೆ ಮತ್ತು ಇವರಿಬ್ಬರಿಗಿಂತಲೂ ಕಾಲವು ಪ್ರತ್ಯೇಕವೂ ಆಗಿದೆ. ಇದು ನಾನಾಪ್ರಕಾರವಾದ ಕರ್ಮಗಳಿಗೆ ಮೂಲವಾದ ಅದೃಷ್ಟವೂ ಆಗಿದೆ. ಮಹತ್ತತ್ತ್ವವೇ ಮುಂತಾದುವುಗಳಲ್ಲಿ ಅಭಿಮಾನವನ್ನಿಟ್ಟುಕೊಂಡಿರುವ ಭೇದದರ್ಶಿಗಳಾದ ಪ್ರಾಣಿಗಳು ಸದಾ ಭಯಪಡುತ್ತಿರುವುದೂ ಇದಕ್ಕೇ. (ಶ್ಲೋಕ 35-37)

ಯೋಽನ್ತಃ ಪ್ರವಿಶ್ಯ ಭೂತಾನಿ ಭೂತೈರತ್ತ್ಯಖಿಲಾಶ್ರಯಃ ।
ಸ ವಿಷ್ಣ್ವಾಖ್ಯೋಽಧಿಯಜ್ಞೋಽಸೌ ಕಾಲಃ ಕಲಯತಾಂ ಪ್ರಭುಃ* ॥

* ಕಾಲಃ ಕಲಯತಾಂ ಪ್ರಭುಃ : ಹೋಲಿಕೆ : 'ಕಾಲಃ ಕಲಯತಾಮಹಂ'
(ಶ್ರೀಗೀತಾ ಅಧ್ಯಾಯ ೧೦) (ಶ್ಲೋಕ ೩೮)

ಇದು ಎಲ್ಲಕ್ಕೂ ಆಶ್ರಯವಾಗಿರುವುದರಿಂದ ಎಲ್ಲ ಪ್ರಾಣಿಗಳಲ್ಲೂ ಒಳಹೊಕ್ಕು ಭೂತಗಳ ಮೂಲಕ ಅವುಗಳನ್ನು ಸಂಹರಿಸುವುದು. ಜಗತ್ತನ್ನೂ, ದೇವತೆಗಳನ್ನೂ ಲೆಕ್ಕಿಸುತ್ತಿರುವ ಬ್ರಹ್ಮಾದಿ ದೇವತೆಗಳಿಗೂ ಪ್ರಭುವಾಗಿರುವುದು. ಭಗವಂತನಾದ ಈ ಕಾಲನೇ ಅಧಿಯಜ್ಞನಾದ ಅಂದರೆ–ಯಜ್ಞಗಳಿಗೆ ಫಲವನ್ನು ಕೊಡುವ ವಿಷ್ಣುವಾಗಿದ್ದಾನೆ.

ಇದಕ್ಕೆ ಪ್ರಿಯಮಿತ್ರನಾಗಲೀ, ಬಂಧುವಾಗಲೀ ಯಾವನೂ ಇಲ್ಲ. ಹಾಗೆಯೇ ವೈರಕ್ಕೆ ಯೋಗ್ಯನಾದ ಶತ್ರುವೂ ಇಲ್ಲ. ಇದು–ತಾನು ಸದಾ ಸಾವಧಾನದಿಂದಲೇ ಇದ್ದು ಅಸಾವಧಾನವಾಗಿರುವ ಅಂದರೆ–ಪರಮಾತ್ಮನನ್ನು ಮರೆತು ಭೋಗಗಳಲ್ಲಿ ತೊಳಲುತ್ತಿರುವ ಪ್ರಾಣಿಗಳನ್ನು ಆಕ್ರಮಣ ಮಾಡಿ ಸಂಹರಿಸುವುದು. ಇದಕ್ಕೆ ಭಯಪಟ್ಟೇ ಗಾಳಿಯು ಬೀಸುತ್ತದೆ. ಸೂರ್ಯನು ಸುಡುತ್ತಿರುವುದೂ ಇದರ ಭಯದಿಂದಲೇ. ಇದರ ಭಯಕ್ಕೆ ವಶನಾಗಿಯೇ ಇಂದ್ರನು ಮಳೆಗರೆಯುತ್ತಾನೆ. ಓಷಧಿಗಳಿಂದ ಕೂಡಿದ ಬಳ್ಳಿಗಳೂ ಮತ್ತು ಸಮಸ್ತವನಸ್ಪತಿಗಳೂ ಕಾಲ-ಕಾಲದಲ್ಲಿ ಫಲ- ಪುಷ್ಪಗಳನ್ನು ಬಿಡುತ್ತಿರುವುದೂ ಇದರ ಭಯದಿಂದಲೇ. ಇದಕ್ಕೆ ಭಯ ಗೊಂಡೇ ನದಿಗಳು ಹರಿಯುತ್ತವೆ ಮತ್ತು ಸಮುದ್ರವು ತನ್ನ ಮೇರೆಯನ್ನು ಮೀರುತ್ತಿಲ್ಲ. ಅಗ್ನಿಯು ಜ್ವಲಿಸುತ್ತಿರುವುದೂ ಮತ್ತು ಪರ್ವತಸಹಿತವಾದ ಭೂಮಿಯು ಜಲದಲ್ಲಿ ಮುಳುಗಿಹೋಗದಿರುವುದೂ ಇದರ ಭಯ ದಿಂದಲೇ. ಇದರ ಶಾಸನದಿಂದಲೇ ಈ ಆಕಾಶವು ಜೀವಂತಪ್ರಾಣಿಗಳಿಗೆ ಉಸಿರಾಡಲು ಅವಕಾಶವನ್ನು ಮಾಡಿಕೊಡುತ್ತದೆ ಮತ್ತು ಮಹತ್ತತ್ತ್ವವು ಅಹಂಕಾರರೂಪವಾದ ಶರೀರವನ್ನು ಏಳು ಆವರಣಗಳಿಂದ ಕೂಡಿರುವ ಬ್ರಹ್ಮಾಂಡದ ರೂಪದಲ್ಲಿ ವಿಸ್ತರಿಸುತ್ತಿದೆ. ಈ ಚರಾಚರಜಗತ್ತೆಲ್ಲವೂ ಯಾರ ಅಧೀನದಲ್ಲಿದೆಯೋ–ಅಂತಹ ತ್ರಿಗುಣಗಳಿಗೆ ನಿಯಾಮಕರಾದ ಮಹಾ ದೇವತೆಗಳೂ ಕೂಡ ಇದರ ಭಯದಿಂದಲೇ ಯುಗಗಳ ಕ್ರಮಕ್ಕೆ ಅನುಗುಣವಾಗಿ ಜಗತ್ತಿನ ಸೃಷ್ಟಿಯೇ ಮುಂತಾದ ಕಾರ್ಯಗಳಲ್ಲಿ ತತ್ಪರರಾಗಿರುತ್ತಾರೆ.*

---

* ಹೋಲಿಕೆ : "ಭೀಷಾಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ । ಭೀಷಾಸ್ಮಾದಗ್ನಿಶ್ಚೇನ್ದ್ರಶ್ಚ । ಮೃತ್ಯುರ್ಧಾವತಿ ಪಂಚಮ ಇತಿ ।"

(ತೈತ್ತಿರೀಯ ಉಪನಿಷತ್ತು)

ಅವಿನಾಶಿಯಾದ ಈ ಕಾಲವು ತಾನು ಅನಾದಿಯಾಗಿದ್ದರೂ ಇತರ ತತ್ತ್ವಗಳಿಗೆ ಆದಿಯಾಗಿದೆ ಮತ್ತು ತಾನು ಅನಂತವಾಗಿದ್ದರೂ ಇತರ ತತ್ತ್ವಗಳಿಗೆ ಅಂತವನ್ನು ಉಂಟುಮಾಡುವುದಾಗಿದೆ. ಜನರಿಂದ ಜನರು ಹುಟ್ಟುವಂತೆ ಮಾಡಿ ಜಗತ್ತನ್ನು ರಚಿಸುತ್ತದೆ ಮತ್ತು ತನ್ನ ಸಂಹಾರಶಕ್ತಿಯಿಂದ ಮೃತ್ಯುವಿನ ಮೂಲಕ ಅಂತಕನಾದ ಯಮಧರ್ಮನನ್ನೂ ಸಂಹಾರಮಾಡಿಸಿ ಬಿಡುವುದು.”
(ಶ್ಲೋಕ 38-45)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ತೃತೀಯಸ್ಕಂಧದ ೨೯ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೩೦ನೆಯ ಅಧ್ಯಾಯ

ಶರೀರದಲ್ಲಿಯೂ-ಮನೆಯಲ್ಲಿಯೂ ಆಸಕ್ತರಾದ ಮನುಷ್ಯರು ಹೊಂದುವ ಅಧೋಗತಿಯ ವರ್ಣನೆ

ಶ್ರೀಕಪಿಲಭಗವಂತನು ಹೇಳುತ್ತಾನೆ :

ತಸ್ಯೈತಸ್ಯ ಜನೋ ನೂನಂ ನಾಯಂ ವೇದೋರುವಿಕ್ರಮಮ್ ।
ಕಾಲ್ಯಮಾನೋಽಪಿ ಬಲಿನೋ ವಾಯೋರಿವ ಘನಾವಲಿಃ ॥೧॥

“ಅಮ್ಮಾ! ಪ್ರಬಲವಾದ ಬಿರುಗಾಳಿಯಿಂದ ಹೊಡೆದುಕೊಂಡು ಹೋಗುತ್ತಿರುವ ಮೇಘಸಮೂಹವು ಗಾಳಿಯ ಬಲವನ್ನು ಅರಿಯದಷ್ಟೇ! ಹಾಗೆಯೇ ಈ ಜೀವವೂ ಕೂಡ ಬಲಶಾಲಿಯಾಗಿರುವ ಕಾಲದ ಪ್ರೇರಣೆ ಯಿಂದ ಬೇರೆ-ಬೇರೆ ಅವಸ್ಥೆಗಳಲ್ಲೂ, ಬೇರೆ-ಬೇರೆ ಯೋನಿಗಳಲ್ಲೂ ಅಲೆ ದಾಡಿಸಲ್ಪಡುತ್ತಾ, ಅದರ ಪ್ರಬಲವಾದ ಪರಾಕ್ರಮವನ್ನು ನಿಜವಾಗಿಯೂ ತಿಳಿಯುವುದಿಲ್ಲ.

ಜೀವವು ಸುಖವನ್ನು ಪಡೆಯುವ ಬಯಕೆಯಿಂದ ದುಃಖವನ್ನು ಸಹಿಸುತ್ತಾ ಕಷ್ಟಪಟ್ಟು ಯಾವ-ಯಾವ ಪದಾರ್ಥಗಳನ್ನು ಗಳಿಸುತ್ತದೆಯೋ–

“ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ । ಭಯಾದಿನ್ದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ॥” (ಕಠ.ಉ.II-6)

‘‘ಏತಸ್ಯೈವಾಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾ-ಚಂದ್ರಮಸೌ ವಿಧೃತೌ ತಿಷ್ಠತಃ’’ (ಬೃ.ಆ.) (ಶ್ಲೋಕ ೪೦-೪೪)

ಅವನ್ನೆಲ್ಲಾ ಈ ಕಾಲರೂಪಿಯಾದ ಭಗವಂತನು ನಾಶಪಡಿಸಿ ಈ ಜೀವಕ್ಕೆ ಮಹಾಶೋಕವನ್ನು ತರುತ್ತಾನೆ. ಮಂದಮತಿಯಾದ ಜೀವನು ಇದರಿಂದ ಏತಕ್ಕೆ ದುಃಖವಶನಾಗುತ್ತಾನೆ? ಎಂದರೆ : ಈ ಅನಿತ್ಯವಾದ ಶರೀರವನ್ನೂ ಮತ್ತು ಅದಕ್ಕೆ ಸಂಬಂಧಿಸಿದ ಮನೆ-ಮಠ, ಹೊಲ-ಗದ್ದೆ, ಹಣ-ಭೂಮಿ-ಕಾಣಿ–ಮುಂತಾದುವುಗಳನ್ನೂ ಮೋಹದಿಂದ 'ನಿತ್ಯ' ವೆಂದು ಭಾವಿಸುವುದರಿಂದ. ತಾನು ಯಾವ-ಯಾವ ಯೋನಿಗಳಿಗೆ ಹೋಗುತ್ತಾನೆಯೋ–ಅವುಗಳಲ್ಲಿಯೇ ರಮಿಸುತ್ತಾ ಈತನು ಅವುಗಳಲ್ಲಿ ವೈರಾಗ್ಯವನ್ನು ಪಡೆಯುವುದೇ ಇಲ್ಲ. ಶ್ರೀಭಗವಂತನ ಮಾಯೆಯು ಈತನನ್ನು ಎಷ್ಟರಮಟ್ಟಿಗೆ ಮರುಳು ಮಾಡುತ್ತದೆ–ಎಂದರೆ : ಈತನು ಕರ್ಮಪರವಶನಾಗಿ ನರಕಸಂಬಂಧವಾದ ಯೋನಿಗಳಲ್ಲಿ ಹುಟ್ಟಿದರೂ, ಅಲ್ಲಿರುವ ಅಸಹ್ಯಪದಾರ್ಥಗಳ ಭೋಗ ಗಳಲ್ಲೇ ಸುಖವಿದೆಯೆಂದು ತಿಳಿಯುತ್ತಾ ಅವನ್ನು ಬಿಡಲು ಬಯಸುವುದಿಲ್ಲ. ಈ ಮೂರ್ಖನು ತನ್ನ ಶರೀರ, ಮಡದಿ-ಮಕ್ಕಳು, ಮನೆ-ಮಠ, ಪಶುಗಳು, ಸಂಪತ್ತುಗಳು ಮತ್ತು ನೆಂಟರಿಷ್ಟರು–ಇವರಲ್ಲಿ ಹೆಚ್ಚು ಆಸಕ್ತನಾಗಿ, ಅವರ ವಿಷಯದಲ್ಲಿ ನಾನಾಮನೋರಥಗಳನ್ನು ಹೃದಯದಲ್ಲಿ ಬೆಳೆಸಿಕೊಳ್ಳುತ್ತಾ ತನ್ನನ್ನು ಮಹಾಭಾಗ್ಯಶಾಲಿಯೆಂದು ಭಾವಿಸಿಕೊಳ್ಳುವನು. ಅವರನ್ನು ಸಾಕಿ-ಸಲಹುವ ಚಿಂತೆಯಿಂದ ಈತನ ಅಂಗ-ಉಪಾಂಗಗಳೆಲ್ಲವೂ ಉರಿದು ಹೋಗುತ್ತಿರುತ್ತದೆ. ಆದರೂ ಹೃದಯವು ದುಷ್ಟವಾಸನೆಗಳಿಂದ ದೂಷಿತ ವಾಗಿರುವುದರಿಂದ ಈ ತಿಳಿಗೇಡಿಯು ಅವರಿಗೋಸ್ಕರವೇ ಬಗೆ-ಬಗೆಯ ಪಾಪಗಳನ್ನು ಮಾಡುತ್ತಿರುವನು. ಕುಲಟೆಯರು ಏಕಾಂತದಲ್ಲಿ ತೋರಿಸುವ ಕಪಟಪ್ರೇಮದಲ್ಲೂ, ಶಿಶುಗಳ ಮುದ್ದುಮಾತುಗಳಲ್ಲೂ ಮನಸ್ಸು ಮತ್ತು ಇಂದ್ರಿಯಗಳು ಸಿಕ್ಕಿಹಾಕಿಕೊಳ್ಳುವುದರಿಂದ ಈ ಗೃಹಸ್ಥನು ಗೃಹಕ್ಕೆ ಸಂಬಂಧಪಟ್ಟ ದುಃಖಪ್ರಧಾನವಾದ ಕಪಟದ ಕರ್ಮಗಳಲ್ಲಿ ಸ್ವಲ್ಪವಾದರೂ ಅಲಸಿಕೆಯಿಲ್ಲದೆ ನಿರತನಾಗಿರುತ್ತಾನೆ. ಈ ನಡುವೆ ತಾನು ಅನುಭವಿಸುತ್ತಿರುವ ದುಃಖಗಳಲ್ಲಿ ಯಾವುದಾದರೂ ಒಂದಕ್ಕೆ ಪ್ರತೀಕಾರಮಾಡಲು ತನಗೆ ಸಾಧ್ಯವಾದಲ್ಲಿ ಅದನ್ನೇ ಸುಖವೆಂದು ಭ್ರಮಿಸುವನು. ಭಯಂಕರವಾದ ಹಿಂಸಾವೃತ್ತಿಯನ್ನು ಅವಲಂಬಿಸಿ, ಎಲ್ಲೆಲ್ಲಿಂದಲೋ ಹಣವನ್ನು ಸಂಗ್ರಹಿಸಿ ಯಾರನ್ನು ಸಾಕುವುದರಿಂದ, ತಾನೇ ನರಕಕ್ಕೆ ಬೀಳಬೇಕಾಗುವುದೋ–

ಅಂತಹ ಜನರನ್ನೇ ಸಾಕುವನು. ಅವರು ತಿಂದು-ಕುಡಿದು ಮಿಕ್ಕಿದ್ದನ್ನು ತಾನು ಸೇವಿಸುವನು. ಮತ್ತೆ-ಮತ್ತೆ ಪ್ರಯತ್ನಮಾಡಿದರೂ ಜೀವನದ ವೃತ್ತಿಯು ಸಿಕ್ಕದಿದ್ದರೆ ಲೋಭದಿಂದ ಧೃತಿಗೆಟ್ಟು ಮತ್ತೊಬ್ಬರ ಹಣವನ್ನು ಕಸಿದುಕೊಳ್ಳಲು ಆಸೆಪಡುವನು. ದುರದೃಷ್ಟದಿಂದ ತನ್ನ ಯಾವ ಪ್ರಯತ್ನವೂ ಈಡೇರದಿದ್ದರೆ ಈ ಮೂರ್ಖನು ದರಿದ್ರನಾಗಿ, ಕುಟುಂಬವನ್ನು ಸಾಕಿ-ಸಲಹಲು ಅಸಮರ್ಥನಾಗಿ, ಅತಿದೈನ್ಯದಿಂದ ಕಳವಳಪಡುತ್ತಾ ನಿಟ್ಟುಸಿರು ಬಿಡುವನು.

(ಶ್ಲೋಕ 1-12)

ಈತನು ಹೀಗೆ ತಮ್ಮನ್ನು ಸಾಕಿ-ಸಲಹುವ ವಿಷಯದಲ್ಲಿ ಅಸಮರ್ಥನಾಗಿರುವುದನ್ನು ಕಂಡು ಈತನ ಹೆಂಡಿರು-ಮಕ್ಕಳೇ ಮುಂತಾದವರು ಈತನ ವಿಷಯದಲ್ಲಿ ಹಿಂದಿನಂತೆ ಆದರವನ್ನು ತೋರಿಸುವುದಿಲ್ಲ. ಬೇಸಾಯಗಾರನು ಮುದಿಯಾದ ಎತ್ತನ್ನು ಉಪೇಕ್ಷಿಸುವಂತೆ–ಈತನಲ್ಲಿ ತಿರಸ್ಕಾರವನ್ನೇ ತೋರುತ್ತಾರೆ. ಇಷ್ಟಾದರೂ ಈತನಿಗೆ ಸಂಸಾರದಲ್ಲಿ ವೈರಾಗ್ಯವುಂಟಾಗುವುದಿಲ್ಲ. ಈತನು–ಹಿಂದೆ ಯಾರನ್ನು ಸಾಕಿದ್ದನೋ–ಅವರೇ ಈಗ ಈತನನನ್ನು ಸಾಕುವರು. ಮುಪ್ಪಿನಕಾರಣ ಈತನ ದೇಹವು ವಿಕಾರಹೊಂದುವುದು. ಶರೀರವು ರೋಗಗ್ರಸ್ತವಾಗುವುದು. ಜಠರಾಗ್ನಿಯು ಬಲಗುಂದುವುದು. ಅಜೀರ್ಣದ ಕಾರಣ ಆಹಾರ ಮತ್ತು ಪುರುಷಾರ್ಥ–ಎರಡೂ ಕಡಿಮೆಯಾಗುವುದು. ಸಾವಿಗೆ ಅಭಿಮುಖನಾಗಿ ಮನೆಯಲ್ಲಿ ಬಿದ್ದುಕೊಂಡಿದ್ದು ಹೆಂಡತಿ-ಮಕ್ಕಳೇ ಮುಂತಾದವರು ತಿರಸ್ಕಾರಪೂರ್ವಕವಾಗಿ ತಂದು ಕೊಡುವ ಚೂರು-ಪಾರನ್ನೇ ತಿನ್ನುತ್ತಾ ನಾಯಿಯಂತೆ ಜೀವನವನ್ನು ಕಳೆಯು ವನು. ಸಾವಿನ ಸಮಯವು ಸಮೀಪಿಸಿದಾಗ ವಾಯುವಿನ ಮೇಲುಸಿರುನಿಂದ ಈತನ ಕಣ್ಣಾಲೆಗಳು ಮೇಲೇಳುವುವು. ಉಸಿರಾಟದ ಚೀಲಗಳು ಕಫದಿಂದ ಕಟ್ಟಿಹೋಗುವುವು. ಕೆಮ್ಮುವುದಕ್ಕೂ ಮತ್ತು ಉಸಿರಾಡುವುದಕ್ಕೂ ತುಂಬಾ ಕಷ್ಟವಾಗುವುದು. ಕಫವು ಹೆಚ್ಚುವುದರಿಂದ ಗಂಟಲು ಗೊರಗುಟ್ಟತೊಡಗುವುದು. ಹಾಗೆ ಬಿದ್ದುಕೊಂಡಿರುವ ಈತನ ಸುತ್ತಲೂ ದುಃಖಪೀಡಿತರಾದ ನೆಂಟರಿಷ್ಟರು ನೆರೆಯುವರು. ಆದರೆ ಮೃತ್ಯುಪಾಶಕ್ಕೆ ಸಿಲುಕಿಕೊಂಡಿರುವುದರಿಂದ ಅವರು ಕರೆದರೂ ಈತನು ಮಾತನಾಡಲಾರನು.

(ಶ್ಲೋಕ 13-17)

ಹೀಗೆ ಇಂದ್ರಿಯಗಳನ್ನು ಜಯಿಸದೇ ನಿರಂತರವಾಗಿ ಕುಟುಂಬದ ಪೋಷಣೆಯಲ್ಲೇ ಆಸಕ್ತನಾಗಿರುವ ಮನುಷ್ಯನು ಅಳುತ್ತಾ, ಗೋಳಾಡುವ ಸ್ವಜನರ ನಡುವೆ ಕಡುಪೀಡೆಯಿಂದ ನರಳುತ್ತಾ, ಪ್ರಜ್ಞೆತಪ್ಪಿ ಮರಣ ವನ್ನಪ್ಪುವನು. ಆ ಸಮಯದಲ್ಲಿ ತನ್ನನ್ನು ಎಳೆದೊಯ್ಯಲು ಬರುವ ಅತಿಭಯಂಕರರಾದ, ಸಿಟ್ಟೇರಿದ ಕಣ್ಣುಗಳುಳ್ಳ ಇಬ್ಬರು ಯಮದೂತರನ್ನು ಕಂಡು ಭಯದಿಂದ ಮಲ-ಮೂತ್ರಗಳನ್ನು ವಿಸರ್ಜನೆಮಾಡುವನು. ಆ ಯಮದೂತರು ಆತನನ್ನು ಯಾತನಾದೇಹದೊಳಕ್ಕೆ ಹಾಕಿ–ರಾಜಭಟರು ಅಪರಾಧಿಯನ್ನು ಎಳೆದೊಯ್ಯುವಂತೆ–ಕೊರಳಿಗೆ ಪಾಶವನ್ನು ಹಾಕಿ ಬಲಾತ್ಕಾರದಿಂದ ಯಮಲೋಕಕ್ಕೆ ದೂರಯಾತ್ರಿಕನನ್ನಾಗಿ ಎಳೆದುಕೊಂಡು ಹೋಗುವರು. ಅವರ ಬೆದರಿಕೆಗಳಿಂದ ಆತನ ಹೃದಯವು ಒಡೆದು, ದೇಹವು ನಡುಗತೊಡಗುವುದು. ದಾರಿಯಲ್ಲಿ ಆತನನ್ನು ನಾಯಿಗಳು ಕಚ್ಚಿ-ಕೀಳುತ್ತಾ ತಿನ್ನುವುವು. ಆಗ ಆತನು ತನ್ನ ಪಾಪಗಳನ್ನು ನೆನೆಯುತ್ತಾ ಕಳವಳ ದಿಂದ ಬಸವಳಿಯುವನು. ಹಸಿವು-ಬಾಯಾರಿಕೆಗಳು ಆತನನ್ನು ಸಂತಾಪ ಪಡಿಸುವುವು. ಉರಿಯುತ್ತಿರುವ ಕಾಡುಗಿಚ್ಚಿನ ಜ್ವಾಲೆಗಳಿಂದ ಸುಟ್ಟುಹೋಗ ತೊಡಗುವನು. ಹಸಿವು-ಬಾಯಾರಿಕೆಗಳಿಂದ ಬಳಲಿ ಬೆಂಡಾಗಿ–ಸೂರ್ಯ ನೇನು, ಕಾಡುಗಿಚ್ಚೇನು, ಸುಡುಗಾಳಿಯೇನು–ಇವುಗಳ ಜ್ವಾಲಾತರಂಗ ಗಳಿಂದ ಸುಟ್ಟುಹೋಗುತ್ತಾ, ನೀರು-ನೆರಳುಗಳಿಲ್ಲದ ಕಾದಮರಳಿನ ದಾರಿಯಲ್ಲಿ ಪ್ರಯಾಣಮಾಡಬೇಕಾಗುವುದು. ನಡೆಯಲು ಶಕ್ತಿಯಿಲ್ಲ ದಿದ್ದರೂ–ಯಮದೂತರು ಬೆನ್ನಿನ ಮೇಲೆ ಚಾವಟಿಯ ಏಟುಗಳ ಮಳೆ ಯನ್ನೇ ಸುರಿಸುವುದರಿಂದ ಅತಿಕಷ್ಟದಿಂದಲಾದರೂ ಮುಂದೆ ಹೋಗಲೇ ಬೇಕಾಗುವುದು. ಅಲ್ಲಲ್ಲಿ ಬಳಲಿಕೆಯಿಂದ ಏಳುತ್ತಾ-ಬೀಳುತ್ತಾ ಮೂರ್ಛೆ ಬೀಳುತ್ತಿದ್ದರೂ ಜ್ಞಾನಬಂದಮೇಲೆ ಎದ್ದು ಆತನು ಮುಂದುವರಿಯಬೇಕಾ ಗುವುದು. ಹೀಗೆ ಅತಿಕಷ್ಟಕರವಾದ ದಾರಿಯಲ್ಲಿ ಯಮದೂತರು ಆತನನ್ನು ಶೀಘ್ರವಾಗಿ ಯಮಲೋಕಕ್ಕೆ ಒಯ್ಯುವರು. ಯಮಲೋಕದ ದಾರಿಯ ಉದ್ದ ತೊಂಬತ್ತೊಂಬತ್ತು ಸಾವಿರ ಯೋಜನಗಳು. ಅಷ್ಟು ದೂರದ ದಾರಿ ಯಿದ್ದರೂ ಕೇವಲ ಎರಡು-ಮೂರು ಮುಹೂರ್ತಗಳಲ್ಲೇ ಆತನು ನರಕಕ್ಕೆ ಸಾಗಿಸಲ್ಪಡುವನು. ಅಲ್ಲಿಯೂ ಆತನು ಬಗೆ-ಬಗೆಯ ಯಾತನೆಗಳನ್ನು

ಅನುಭವಿಸಬೇಕಾಗುವುದು. ಅಲ್ಲಿ ಆತನ ದೇಹವನ್ನು ಉರಿಯುತ್ತಿರುವ ಕೊಳ್ಳಿಗಳೇ ಮುಂತಾದುವುಗಳ ನಡುವೆ ಹಾಕಿ ಉರಿಸಲಾಗುವುದು. ಕೆಲವು ಕಡೆ ತನ್ನ ದೇಹವನ್ನು ತಾನೇ ಕತ್ತರಿಸಿಕೊಂಡು ಅಥವಾ ಇತರರು ಕತ್ತರಿಸಿ ಕೊಡುತ್ತಿರುವಾಗ ಅದನ್ನೇ ತಿನ್ನಬೇಕಾಗುವುದು. ಯಮಪುರಿಯ ನಾಯಿಗಳು ಅಥವಾ ಹದ್ದುಗಳು ಆತನ ದೇಹದ ಕರುಳುಗಳನ್ನು ಕಚ್ಚಿ ಕೀಳುತ್ತವೆ. ಆತನನ್ನು ಹಾವು, ಚೇಳು, ಸೊಳ್ಳೆ ಮತ್ತು ಚಿಗುಟ–ಮುಂತಾದುವುಗಳಿಂದ ಕಚ್ಚಿಸಿ ಹಿಂಸಿಸಲಾಗುತ್ತದೆ. ಆತನ ದೇಹವನ್ನು ತುಂಡು-ತುಂಡಾಗಿ ಕತ್ತರಿಸ ಲಾಗುವುದು. ಆನೆಯ ಕಾಲಿನಿಂದ ತುಳಿಸಲಾಗುವುದು. ಬೆಟ್ಟದ ಶಿಖರ ಗಳಿಂದ ಕೆಳಕ್ಕೆ ತಳ್ಳಿಸಲಾಗುವುದು. ನೀರಿನ ಹಳ್ಳ-ಕೊಳ್ಳಗಳಲ್ಲಿ ಹಾಕಿ ಮುಚ್ಚಲಾಗುವುದು. ಈ ಎಲ್ಲ ಯಾತನೆಗಳನ್ನೂ* ಮತ್ತು ಇದೇ ರೀತಿಯಲ್ಲಿ ತಾಮಿಸ್ರ, ಅಂಧತಾಮಿಸ್ರ ಮತ್ತು ರೌರವಗಳೇ ಮುಂತಾದ ನರಕಗಳ ಇನ್ನೂ ಅನೇಕಯಾತನೆಗಳನ್ನೂ ಜೀವಗಳು–ಹೆಂಗಸರಾಗಲೀ, ಗಂಡಸ ರಾಗಲೀ–ಪರಸ್ಪರ ದುಷ್ಟವಾದ ಸಂಬಂಧದಿಂದ ಉಂಟಾದ ಪಾಪಗಳ ಫಲ ವಾಗಿ ಅನುಭವಿಸಲೇಬೇಕಾಗುವುದು. ನರಕದ ಯಾತನೆಗಳನ್ನು ಈ ಲೋಕದಲ್ಲೇ ಕೆಲವರು ಅನುಭವಿಸುತ್ತಾರೆ. ಆದುದರಿಂದ ಸ್ವರ್ಗ ಮತ್ತು ನರಕಗಳು ಇಲ್ಲೇ ಇವೆ–ಎಂದೂ ಕೆಲವರು ಹೇಳುವುದುಂಟು.

(ಶ್ಲೋಕ 18-29)

ಅಮ್ಮಾ! ಈ ರೀತಿ ಕೇವಲ ತನ್ನ ಕುಟುಂಬವನ್ನು ಅಥವಾ ತನ್ನ ಹೊಟ್ಟೆಯನ್ನು ಬಹಳ ಕಷ್ಟಪಟ್ಟು ಸಾಕುವ ಮನುಷ್ಯನು ಆ ತನ್ನ ಕುಟುಂಬವನ್ನೂ ಮತ್ತು ದೇಹವನ್ನೂ ಇಲ್ಲಿಯೇ ಬಿಟ್ಟು ತಾನು ಮಾಡಿದ ಪಾಪಗಳ ಫಲವನ್ನು ಸತ್ತನಂತರ ಹೀಗೆ ಅನುಭವಿಸಬೇಕಾಗುವುದು. ತನ್ನ ದೇಹವನ್ನು ಇಲ್ಲಿಯೇ ಬಿಟ್ಟು, ಪ್ರಾಣಿಗಳಿಗೆ ದ್ರೋಹವನ್ನೆಸಗಿ

* ನರಕದಲ್ಲಿ ಮೇಲ್ಕಂಡ ಘೋರಯಾತನೆಗಳನ್ನು ಅನುಭವಿಸುತ್ತಿರುವಾಗ ಆತನ ದೇಹವು ನಾಶವಾಗಿಬಿಡುವುದಿಲ್ಲವೇ? ಎಂದರೆ : ಅದು 'ಯಾತನಾದೇಹ' ಎಂಬ ವಿಶೇಷವಾದ ಶರೀರ. ಎಷ್ಟು ಹೊಡೆದು-ಬಡಿದು-ಕತ್ತರಿಸಿ-ಬೇಯಿಸಿದರೂ ಅದರಿಂದ ಜೀವಕ್ಕೆ ಆಯಾ ಕಷ್ಟವಾಗುವುದೇ ಹೊರತು, ದೇಹವು–ಕರ್ಮವು ಮುಗಿಯುವವರೆಗೂ ನಾಶವಾಗುವುದಿಲ್ಲ.

ಸಂಗ್ರಹಿಸಿದ ಪಾಪರೂಪವಾದ ದಾರಿಯ ಬುತ್ತಿಯನ್ನು ಮಾತ್ರ ಜೊತೆಯಲ್ಲಿ ಎತ್ತಿಕೊಂಡು ಆತನು ಒಬ್ಬಂಟಿಗನಾಗಿಯೇ ನರಕಕ್ಕೆ ಹೋಗಬೇಕಾಗುವುದು. ತನ್ನ ಕುಟುಂಬದವರ ಹೊಟ್ಟೆಯನ್ನು ಹೊರೆಯಲು ತಾನು ಮಾಡಿದ ಅನ್ಯಾಯದ ಫಲವನ್ನು ಆತನು ತಾನೇ ಅನುಭವಿಸಬೇಕಾಗುವುದು. ದೈವದಿಂದ ನಿರ್ದಿಷ್ಟವಾದ ಆ ಪಾಪಗಳ ಫಲವನ್ನು ಆತನು ನರಕದಲ್ಲಿ ಅನುಭವಿಸುತ್ತಾ, ತನ್ನ ಸರ್ವಸ್ವವೂ ಕೊಳ್ಳೆಹೋಯಿತೇನೋ–ಎಂಬಂತೆ ಕಳವಳಕ್ಕೆ ಈಡಾಗುವನು. ಅಧರ್ಮದಿಂದಲೇ ಕುಟುಂಬವನ್ನು ಭರಿಸುವುದರಲ್ಲಿ ಆಸಕ್ತನಾಗಿರುವ ಜೀವನು–ನರಕಗಳಲ್ಲಿಯೇ ಮಹಾನರಕವಾದ ಅಂಧತಾಮಿಸ್ರಕ್ಕೆ ಹೋಗುವನು. ಮನುಷ್ಯಜನ್ಮವನ್ನು ಪಡೆಯುವುದಕ್ಕೆ ಮೊದಲು ನಾಯಿ-ನರಿಗಳೇ ಮುಂತಾದ ಹುಟ್ಟುಗಳಲ್ಲಿ ಯಾವ-ಯಾವ ಕಷ್ಟಗಳಿದ್ದುವೋ–ಅವುಗಳನ್ನೂ ಕ್ರಮವಾಗಿ ಅನುಭವಿಸಿ, ಶುದ್ಧನಾಗಿ ಆತನು ಮತ್ತೆ ಮನುಷ್ಯಯೋನಿಯಲ್ಲಿ ಜನಿಸುವನು." (ಶ್ಲೋಕ 30-34)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೩೦ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೩೧ನೆಯ ಅಧ್ಯಾಯ

ಗರ್ಭದ ಬೆಳವಣಿಗೆಗಳು

ಶ್ರೀಕಪಿಲಭಗವಂತನು ಹೇಳುತ್ತಾನೆ :

ಕರ್ಮಣಾ ದೈವನೇತ್ರೇಣ ಜನ್ತುರ್ದೇಹೋಪಪತ್ತಯೇ ।
ಸ್ತ್ರಿಯಾಃ ಪ್ರವಿಷ್ಟ ಉದರಂ ಪುಂಸೋ ರೇತಃಕಣಾಶ್ರಯಃ ॥೧॥

"ತಾಯೇ! ಇಲ್ಲಿಯವರೆಗೂ ಪಾಪಕರ್ಮಿಗಳು ಅನುಭವಿಸುವ ಗತಿಯನ್ನು ವರ್ಣಿಸಿದೆನು. ಇನ್ನು ಜೀವನು ನರಕದಲ್ಲಿ ಪಾಪಗಳ ಫಲವನ್ನು ಅನುಭವಿಸಿ, ಶುದ್ಧನಾಗಿ ಮನುಷ್ಯಯೋನಿಯನ್ನು ಪ್ರವೇಶಿಸಿದ ಬಳಿಕ ಅನುಭವಿಸಬೇಕಾದ ಗರ್ಭವಾಸಾದಿಗಳನ್ನು ವರ್ಣಿಸುವೆನು, ಕೇಳಮ್ಮಾ! ಜೀವನು ಮನುಷ್ಯಯೋನಿಯಲ್ಲಿ ಏಕೆ ಮತ್ತು ಹೇಗೆ ಜನಿಸುತ್ತಾನೆ? ಎಂದರೆ : ಆತನು ಭಗವಂತನ ಪ್ರೇರಣೆಯಿಂದ ತನ್ನ ಪೂರ್ವಕರ್ಮಗಳಿಗೆ

ಅನುಸಾರವಾಗಿ ಮನುಷ್ಯದೇಹವನ್ನು ಪಡೆಯುವುದಕ್ಕೋಸ್ಕರ ಪುರುಷನ ವೀರ್ಯಕಣದ ಮೂಲಕ ಸ್ತ್ರೀಯ ಗರ್ಭಾಶಯವನ್ನು ಪ್ರವೇಶಿಸುತ್ತಾನೆ.*

ಅಲ್ಲಿ ಒಂದು ರಾತ್ರಿಯವರೆವಿಗೂ ಸ್ತ್ರೀಯ ರಜಸ್ಸಿನಲ್ಲಿ ಕಲೆತು 'ಕಲಲ' ಎಂಬ ರೂಪವನ್ನು ತಾಳುವನು. ಇದು ಐದು ರಾತ್ರಿಗಳಲ್ಲಿ ಪಕ್ವವಾಗಿ ಗುಳ್ಳೆಯ ಆಕಾರವನ್ನು ತಾಳುವುದು. ಇದು ಬುದ್ಬುದರೂಪ. ಈ ಬುದ್ಬುದವು ಹತ್ತು ದಿನಗಳೊಳಗೆ ಬೋರೆಯ ಹಣ್ಣಿನ ರೂಪವನ್ನು ಹೊಂದಿ ಸ್ವಲ್ಪ ಕಠಿನವಾಗುವುದು. ಕೆಲವು ದಿನಗಳೊಳಗೆ ಒಂದು ಮಾಂಸದ ಮುದ್ದೆಯ ಅಥವಾ ಮೊಟ್ಟೆಯ ಆಕಾರವನ್ನು ಪಡೆಯುವುದು. ಒಂದು ತಿಂಗಳೊಳಗೆ ಆ ಮಾಂಸಪಿಂಡದಲ್ಲಿಯೇ ತಲೆಯು ಏರ್ಪಡುವುದು. ಎರಡು ತಿಂಗಳುಗಳಲ್ಲಿ ಕೈ-ಕಾಲು ಮುಂತಾದ ಅಂಗಗಳ ವಿಭಾಗವು ಕಾಣುವುದು. ಮೂರನೆಯ ತಿಂಗಳಲ್ಲಿ ಉಗುರು, ಮೈಗೂದಲು, ಮೂಳೆ, ಚರ್ಮ ಮತ್ತು ಸ್ತ್ರೀ-ಪುರುಷರನ್ನು ಸೂಚಿಸುವ ಲಿಂಗಗಳೂ ಮತ್ತು ಇತರ ರಂಧ್ರಗಳೂ ಉದ್ಭವಿಸುವುವು. ನಾಲ್ಕನೆಯ ತಿಂಗಳಲ್ಲಿ ಅದರಲ್ಲಿ ಮಾಂಸವೇ ಮುಂತಾದ ಸಪ್ತಧಾತುಗಳು ಹುಟ್ಟಿಕೊಳ್ಳುವುವು. ಐದನೆಯ ತಿಂಗಳಲ್ಲಿ ಹಸಿವು-ಬಾಯಾರಿಕೆಗಳು ತೋರುವುವು. ಆರನೆಯ ತಿಂಗಳಲ್ಲಿ ಅದು ಗರ್ಭದ ಚೀಲದಿಂದ ಬಿಗಿಯಾಗಿ ಆವರಿಸಲ್ಪಟ್ಟು ಕೋಶದ ಬಲಭಾಗದಲ್ಲಿ ತಿರುಗುವುದು. ಆ ಸಮಯದಲ್ಲಿ ತಾಯಿಯು ಸೇವಿಸುವ ಆಹಾರ-ಪಾನೀಯಗಳಿಂದ ಅದರ ಎಲ್ಲ ಧಾತುಗಳೂ ಪೋಷಣೆಗೊಳ್ಳುತ್ತಿರುತ್ತವೆ. ಹಾಗೆಯೇ ಅದು ಕ್ರಿಮಿ- ಕೀಟ ಮುಂತಾದ ಜಂತುಗಳಿಗೆ ಉತ್ಪತ್ತಿಸ್ಥಾನವಾಗಿರುವ ಮಲ-ಮೂತ್ರಗಳ ಹಳ್ಳದಲ್ಲಿ ಬಿದ್ದುಕೊಂಡಿರುವುದು. ಅದರ ದೇಹವು ತುಂಬಾ ಸುಕುಮಾರವಾಗಿರುವುದರಿಂದ ಅಲ್ಲಿರುವ ಹಸಿದ ಕ್ರಿಮಿಗಳು ಅದರ ಅಂಗಾಂಗಗಳನ್ನು ಕಚ್ಚುವುವು. ಆ ಕ್ಲೇಶವನ್ನು ತಾಳಲಾರದೇ ಅದು ಕ್ಷಣ-ಕ್ಷಣದಲ್ಲೂ

---

* ಜೀವನು ಪಾಪಕರ್ಮಗಳ ಫಲವನ್ನು ನರಕದಲ್ಲೇ ಅನುಭವಿಸಿಬಿಟ್ಟಿರುವುದರಿಂದ ಆತನಿಗೆ ಮತ್ತೆ ಜನ್ಮವು ಹೇಗೆ ಬರುವುದು? ಎಂದರೆ : ಆತನಿಗೆ ಪಾಪಕರ್ಮಗಳು ತೀರಿದ್ದರೂ ದೇಹಸಂಬಂಧವನ್ನು ಉಂಟುಮಾಡುವ ಕರ್ಮಶೇಷವು ಇದ್ದೇ ಇರುವುದು. ಅದು ದೇಹವನ್ನು ಹೊಂದಿಯೇ ತೀರಿಸಲ್ಪಡಬೇಕಾದುದು. ಹಾಗೆಯೇ ಸ್ವರ್ಗಾದಿ ಸುಖಗಳನ್ನು ಅನುಭವಿಸಿದವರೂ ಕೂಡ ಕರ್ಮಶೇಷದಿಂದ ಜನ್ಮವನ್ನು ಹೊಂದಲೇ ಬೇಕಾಗುವುದು.

(ಶ್ಲೋಕ ೧)

ಮೂರ್ಛೆಬಿದ್ದು ಚೇತರಿಸಿಕೊಳ್ಳುವುದು. ತಾಯಿಯು ತನ್ನ ಇಷ್ಟಾನುಸಾರ ವಾಗಿ ತಿನ್ನುವ ಕಹಿ, ಖಾರ, ಒಗರು, ಉಪ್ಪು, ಹುಳಿ–ಮುಂತಾದ ತೀಕ್ಷ್ಣ ವಾದ ಪದಾರ್ಥಗಳ ಸ್ಪರ್ಶದಿಂದ ಅದರ ದೇಹಕ್ಕೆಲ್ಲಾ ಪೀಡೆಯುಂಟಾ ಗುವುದು. ಅದು ತಾಯಿಯ ಗರ್ಭಾಶಯದಲ್ಲಿ ಗರ್ಭದ ಚೀಲಕ್ಕೆ ಅಂಟಿ ಕೊಂಡು ಕರುಳು-ನರಗಳಿಂದ ಸುತ್ತಲೂ ಬಿಗಿಯಲ್ಪಟ್ಟಿರುವುದು. ಬೆನ್ನನ್ನೂ ಕೊರಳನ್ನೂ ಕುಂಡಲಾಕಾರವಾಗಿ ಬಗ್ಗಿಸಿಕೊಂಡು ತಲೆಯನ್ನು ಹೊಟ್ಟೆಯಲ್ಲಿ ಸೇರಿಸಿಕೊಂಡಿರುವುದು. ಪಂಜರದಲ್ಲಿ ಸೆರೆಸಿಕ್ಕಿದ ಹಕ್ಕಿಯಂತೆ–ಅದು ಅತ್ಯಂತ ಪರಾಧೀನವಾಗಿ ತನ್ನ ಮೈ-ಕೈ-ಕಾಲುಗಳನ್ನು ಆಡಿಸುವುದಕ್ಕೂ ಸಾಮರ್ಥ್ಯವಿಲ್ಲದೇ ಕಷ್ಟಪಡುವುದು. ಆಗ ಆ ಜೀವಕ್ಕೆ ಇದ್ದಕ್ಕಿದ್ದಂತೆ ದೈವವಶದಿಂದ ಸ್ಮರಣೆಯ ಶಕ್ತಿಯುಂಟಾಗುವುದು. ತಾನು ಹಿಂದೆ ನೂರಾರು ಜನ್ಮಗಳಲ್ಲಿ ಮಾಡಿದ ಕರ್ಮಗಳ ನೆನಪು ಬಂದು ಪಶ್ಚಾತ್ತಾಪದಿಂದ ನಿಟ್ಟುಸಿರುಬಿಡುವುದು. ಅಂತಹ ಅವಸ್ಥೆಯಲ್ಲಿ ಅದಕ್ಕೆ ನೆಮ್ಮದಿಯಾದರೂ ಹೇಗೆ ತಾನೇ ಉಂಟಾದೀತು ? ಏಳನೇ ತಿಂಗಳು ಆರಂಭವಾದಾಗಿನಿಂದ ಅದಕ್ಕೆ ಜ್ಞಾನಶಕ್ತಿಯೂ ಉಂಟಾಗುವುದು. ಆದರೆ ಪ್ರಸೂತಿವಾಯುವಿನಿಂದ ಅತ್ತಿತ್ತ ಕದಲಿಸಲ್ಪಡುತ್ತಾ, ಅದೇ ಹೊಟ್ಟೆಯಲ್ಲಿ–ಮಲದಲ್ಲಿ ಹುಟ್ಟಿಕೊಂಡ ಕ್ರಿಮಿಯಂತೆ–ಒಂದೆಡೆಯಲ್ಲಿ ನಿಲ್ಲದೇ ಅಲ್ಲಿಯೇ ಚಲಿಸುತ್ತಿರುತ್ತದೆ. ಆಗ ಸಪ್ತಧಾತುಮಯವಾದ ಸ್ಥೂಲಶರೀರಕ್ಕೆ ಬಿಗಿಯಲ್ಪಟ್ಟ ಆ ಜೀವಕ್ಕೆ ದೈವಕೃಪೆ ಯಿಂದ ಒಳ್ಳೆಯ ಜ್ಞಾನವುಂಟಾಗುವುದು. ಅದು ಕೆಲವು ಕಾಲ ಋಷಿಯಂತೆ ಜ್ಞಾನಿಯಾಗಿರುವುದು. ಮುಂದೆ ಒದಗಬಹುದಾದ ಕಷ್ಟಕ್ಕೆ ಹೆದರಿ ದೀನವಾಣಿಯಿಂದ ಪರಮಾತ್ಮನ ಕೃಪೆಯನ್ನು ಯಾಚಿಸುವುದು. ತನ್ನನ್ನು ಆ ತಾಯಿಯ ಗರ್ಭವಾಸಕ್ಕೆ ಸೇರಿಸಿದ ಸ್ವಾಮಿಯನ್ನು ಕೈಜೋಡಿಸಿಕೊಂಡು ಹೀಗೆ ಸ್ತೋತ್ರಮಾಡುವುದು : (ಶ್ಲೋಕ 1-11)

ಗರ್ಭದಲ್ಲಿರುವ ಶಿಶುವು ಮಾಡುವ ದೈವಸ್ತುತಿ :

ತಸ್ಯೋಪಸನ್ನಮವಿತುಂ ಜಗದಿಚ್ಛಯಾತ್ತ-
ನಾನಾತನೋರ್ಭುವಿ ಚಲಚ್ಚರಣಾರವಿನ್ದಮ್ ।
ಸೋಽಹಂ ವ್ರಜಾಮಿ ಶರಣಂ ಹ್ಯಕುತೋಭಯಂ ಮೇ
ಯೇನೇದೃಶೀ ಗತಿರದರ್ಶ್ಯಸತೋಽನುರೂಪಾ ॥೧೨॥

"ಶ್ರೀಭಗವಂತನ ಚರಣಾರವಿಂದಗಳನ್ನೇ ನಾನು ಶರಣುಹೊಂದುತ್ತೇನೆ. ಆತನು ಕರ್ಮಗಳಿಗೆ ತಕ್ಕ ಗತಿಯನ್ನೇ ಕೊಡುವವನು. ನಾನು ಪರಮಾಧಮನಾಗಿದ್ದೇನೆ. ಆದ್ದರಿಂದ ನನಗೆ ಯೋಗ್ಯವಾಗಿರುವ ಈ ಗತಿಯನ್ನು ಕೊಟ್ಟಿದ್ದಾನೆ. ಆತನು ಪರಮದಯಾಳುವು. ತನ್ನನ್ನು ಶರಣುಹೊಂದಿದ ಈ ಜಗತ್ತನ್ನು ರಕ್ಷಿಸುವುದಕ್ಕಾಗಿ ಸ್ವೇಚ್ಛೆಯಿಂದ ನಾನಾರೂಪಗಳನ್ನು ಧರಿಸಿ ಭೂಮಿಯಲ್ಲಿ ಸಂಚರಿಸುತ್ತಿರುವ ಯಾವ ಶ್ರೀಭಗವಂತನ ಪಾದಗಳನ್ನು ಆಶ್ರಯಿಸಿದವರಿಗೆ ಯಾವಾಗಲೂ ಯಾರಿಂದಲೂ ಭಯವಿಲ್ಲವೋ—ಅಂತಹ ಚರಣಾರವಿಂದಗಳನ್ನು ನಾನು ಶರಣುಹೊಂದುತ್ತೇನೆ.

ಯಸ್ತತ್ರ ಬದ್ಧ ಇವ ಕರ್ಮಭಿರಾವೃತಾತ್ಮಾ
ಭೂತೇನ್ದ್ರಿಯಾಶಯಮಯೀಮವಲಮ್ಬ್ಯ ಮಾಯಾಮ್ ।
ಆಸ್ತೇ ವಿಶುದ್ಧಮವಿಕಾರಮಖಣ್ಡಬೋಧ-
ಮಾತಪ್ಯಮಾನಹೃದಯೇಽವಸಿತಂ ನಮಾಮಿ ॥೧೩॥

ಆತನು—ತಾಪತ್ರಯದಿಂದ ಸುಡುತ್ತಿರುವ ನನ್ನ ಈ ಹೃದಯದಲ್ಲಿ ಸ್ಫುರಿಸುತ್ತಿದ್ದರೂ ಯಾವ ಉಪಾಧಿಯೂ ಇಲ್ಲದೇ ಪರಿಶುದ್ಧನಾಗಿರು ವವನು. ಭೂತಗಳು ಮತ್ತು ಇಂದ್ರಿಯಗಳಿಗೆ ಆಶ್ರಯವಾಗಿರುವ ಈ ದೇಹರೂಪವಾಗಿರುವ ಮಾಯೆಯನ್ನು ಆಶ್ರಯಿಸಿ, ಈ ದೇಹದಲ್ಲಿರುವ ಜೀವನಲ್ಲಿ ಅಂತರ್ಯಾಮಿಯಾಗಿ, ಈ ಜೀವನಲ್ಲಿರುವ ಪುಣ್ಯ-ಪಾಪಕರ್ಮಗಳಿಂದ ಮುಚ್ಚಲ್ಪಟ್ಟು ಬದ್ಧನಾಗಿರುವಂತೆ ಕಂಡರೂ—ವಾಸ್ತವವಾಗಿ ಯಾವ ಬಂಧನವೂ ಇಲ್ಲದವನು. ಅವಿಕಾರನು. ಅಖಂಡಜ್ಞಾನಸ್ವರೂಪನು. ಇಂತಹ ಪರಮಾತ್ಮನಿಗೆ ನಮೋ ನಮಃ.

ಯಃ ಪಞ್ಚಭೂತರಚಿತೇ ರಹಿತಃ ಶರೀರೇ-
ಚ್ಛನ್ನೋ ಯಥೇನ್ದ್ರಿಯಗುಣಾರ್ಥಚಿದಾತ್ಮಕೋಽಹಮ್ ।
ತೇನಾವಿಕುಣ್ಠಮಹಿಮಾನಮೃಷಿಂ ತಮೇನಂ
ವನ್ದೇ ಪರಂ ಪ್ರಕೃತಿಪೂರುಷಯೋಃ ಪುಮಾಂಸಮ್ ॥

ನಾನು ವಾಸ್ತವವಾಗಿ ಜ್ಞಾನಸ್ವರೂಪನಾಗಿದ್ದರೂ, ಶರೀರಸಂಬಂಧವಿಲ್ಲದವನಾಗಿದ್ದರೂ – ಪಂಚಭೂತಗಳಿಂದ ರಚಿತವಾದ ಈ ದೇಹದ

ಆವರಣದಲ್ಲಿ ಮುಚ್ಚಿಹೋಗಿ ಇಂದ್ರಿಯಗಳು, ಗುಣಗಳು ಮತ್ತು ಶಬ್ದಾದಿ ವಿಷಯಗಳಲ್ಲಿರುವ ಜ್ಞಾನದ ಆಭಾಸವೇ ನಾನೆಂದು ತಿಳಿಯುತ್ತಿರುವ ಅಜ್ಞಾನಿಯಾಗಿದ್ದೇನೆ. ಇದಕ್ಕೆ ಆ ಭಗವಂತನ ಸಂಕಲ್ಪವೇ ಕಾರಣವು. ಆದರೆ ಆತನು ಈ ಶರೀರವೇ ಮುಂತಾದ ಆವರಣಗಳಲ್ಲಿಯೇ ಇದ್ದರೂ ಕುಂದದ ಮಹಿಮೆಯುಳ್ಳವನು. ಸರ್ವಜ್ಞನು. ಪ್ರಕೃತಿ-ಪುರುಷರನ್ನು ಮೀರಿರು ವವನಾಗಿ ಪ್ರಕೃತಿಗೂ ಮತ್ತು ಪುರುಷರಿಗೂ ನಿಯಾಮಕನಾಗಿರುವ ಪರಮ ಪುರುಷಪರಮೇಶ್ವರನು. ಆತನಿಗೆ ನಮಸ್ಕಾರವು.

ಯನ್ಮಾಯಯೋರುಗುಣಕರ್ಮನಿಬನ್ಧನೇಽಸ್ಮಿ-
ನ್ಸಾಂಸಾರಿಕೇ ಪಥಿ ಚರಂಸ್ತದಭಿಶ್ರಮೇಣ ।
ನಷ್ಟಸ್ಮೃತಿಃ ಪುನರಯಂ ಪ್ರವೃಣೀತ ಲೋಕಂ
ಯುಕ್ತ್ಯಾ ಕಯಾ ಮಹದನುಗ್ರಹಮನ್ತರೇಣ ॥೧೫॥

ಈ ಜೀವನು–ಆ ಭಗವಂತನ ಮಾಯೆಯಿಂದಲೇ ತನ್ನ ಸ್ವರೂಪವನ್ನು ಮರೆತು ಬಗೆ-ಬಗೆಯ ಗುಣಗಳ ಮತ್ತು ಕರ್ಮಗಳ ಕಟ್ಟುಗಳಿಂದ ಕೂಡಿರುವ ಈ ಸಂಸಾರಮಾರ್ಗದಲ್ಲಿ ಬಗೆ-ಬಗೆಯ ಕಷ್ಟಗಳನ್ನನುಭವಿಸುತ್ತಾ ಅಲೆದಾಡುತ್ತಿದ್ದಾನೆ. ಆದುದರಿಂದ ಈತನಿಗೆ ಆ ಪರಮಪುರುಷನಾದ ಪರಮಾತ್ಮನ ಕೃಪೆಯನ್ನು ಬಿಟ್ಟು ಬೇರೆ ಯಾವ ಉಪಾಯದಿಂದ ತಾನೇ ಸ್ವರೂಪಜ್ಞಾನವು ಉಂಟಾದೀತು?

ಜ್ಞಾನಂ ಯದೇತದದಧಾತ್ಕತಮಃ ಸ ದೇವ-
ಸ್ತ್ರೈಕಾಲಿಕಂ ಸ್ಥಿರಚರೇಷ್ವನುವರ್ತಿತಾಂಶಃ ।
ತಂ ಜೀವಕರ್ಮಪದವೀಮನುವರ್ತಮಾನಾ-
ಸ್ತಾಪತ್ರಯೋಪಶಮನಾಯ ವಯಂ ಭಜೇಮ ॥೧೬॥

ನನಗೆ ಉಂಟಾಗಿರುವ ಈ ತ್ರೈಕಾಲಿಕಜ್ಞಾನವೂ ಆತನು ದಯಪಾಲಿ ಸಿದುದೇ ಆಗಿದೆ. ಆತನಲ್ಲದೇ ಬೇರೆ ಯಾರಿಗೆ ತಾನೇ ಇದನ್ನು ಕೊಡಲು ಸಾಧ್ಯ? ಸ್ಥಾವರ-ಜಂಗಮರೂಪವಾದ ಸಮಸ್ತಪ್ರಾಣಿಗಳಲ್ಲೂ ಅವನೊ ಬ್ಬನೇ ಅಲ್ಲವೇ ಅಂತರ್ಯಾಮಿರೂಪವಾದ ಅಂಶದಿಂದ ನೆಲೆಸಿರುವವನು?

ಆದುದರಿಂದ ಜೀವಗಳ ಕರ್ಮಮಾರ್ಗವನ್ನು ಅನುಸರಿಸುತ್ತಿರುವ ನಾವು ಮುಬ್ಬಗೆಯ ತಾಪಗಳ ಶಮನಕ್ಕಾಗಿ ಆತನನ್ನೇ ಭಜಿಸುತ್ತೇವೆ.

ದೇಹ್ಯನ್ಯದೇಹವಿವರೇ ಜಠರಾಗ್ನಿನಾಸೃ-
ಗ್ವಿಣ್ಮೂತ್ರಕೂಪಪತಿತೋ ಭೃಶತಪ್ತದೇಹಃ ।
ಇಚ್ಛನ್ನಿತೋ ವಿವಸಿತುಂ ಗಣಯನ್ಸ್ವಮಾಸಾ-
ನ್ನಿರ್ವಾಸ್ಯತೇ ಕೃಪಣಧೀರ್ಭಗವನ್ಕದಾ ನು ॥೧೭॥

ಓ ಭಗವಂತನೇ! ಈ ದೇಹಧಾರಿಯಾದ ಜೀವನು ಮತ್ತೊಂದು ದೇಹಿಯಾದ ತಾಯಿಯೆಂಬುವಳ ಹೊಟ್ಟೆಯಲ್ಲಿ ಮಲ-ಮೂತ್ರ ಮತ್ತು ರಕ್ತಗಳ ಆಳವಾದ ಬಾವಿಯಲ್ಲಿ ಬಿದ್ದುಬಿಟ್ಟಿದ್ದಾನೆ. ಆಕೆಯ ಜಠರಾಗ್ನಿಯಿಂದ ಈತನ ದೇಹವು ಸುಟ್ಟುಹೋಗುತ್ತಿದೆ. ಇದನ್ನು ಬಿಟ್ಟು ಯಾವಾಗ ಹೊರಬಿದ್ದೇನು?–ಎಂದು ತಿಂಗಳುಗಳನ್ನು ಎಣಿಸುತ್ತಿದ್ದಾನೆ. ಈ ದೀನನು ಇಲ್ಲಿಂದ ಯಾವಾಗ ಹೊರಬರುವನೋ ತಿಳಿಯದಾಗಿದೆಯಲ್ಲಾ!

ಯೇನೇದೃಶೀಂ ಗತಿಮಸೌ ದಶಮಾಸ್ಯ ಈಶ
ಸಂಗ್ರಾಹಿತಃ ಪುರುದಯೇನ ಭವಾದೃಶೇನ ।
ಸ್ವೇನೈವ ತುಷ್ಯತು ಕೃತೇನ ಸ ದೀನನಾಥಃ
ಕೋ ನಾಮ ತತ್ಪ್ರತಿ ವಿನಾಞ್ಜಲಿಮಸ್ಯ ಕುರ್ಯಾತ್ ॥

ಸ್ವಾಮಿಯೇ! ನೀನು ಪರಮದಯಾಳುವು. ನಿನ್ನಂತಹ ಉದಾರಿಯಾದ ಪ್ರಭುವು ತಾನೇ ಈ ಹತ್ತು ತಿಂಗಳ ಜೀವಕ್ಕೆ ಈ ಉತ್ಕೃಷ್ಟವಾದ ಜ್ಞಾನವನ್ನು ಕೊಟ್ಟಿರುವುದು! ಓ ದೀನಬಂಧುವೇ! ನಿನಗೆ ಕೈಜೋಡಿಸುತ್ತಿದ್ದೇನೆ. ಇಷ್ಟರಿಂದಲೇ ನೀನು ಪ್ರಸನ್ನನಾಗಬೇಕು. ನೀನು ಮಾಡಿರುವ ಈ ಉಪಕಾರಕ್ಕೆ ಪ್ರತಿಯಾಗಿ ಇಷ್ಟನ್ನು ಹೊರತು ಬೇರೇನು ಉಪಕಾರವನ್ನು ಮಾಡಲು ಯಾವನಿಗಾದರೂ ಹೇಗೆ ಸಾಧ್ಯವಾದೀತು?

ಪಶ್ಯತ್ಯಯಂ ಧಿಷಣಯಾ ನನು ಸಪ್ತವಧ್ರಿಃ
ಶಾರೀರಕೇ ದಮಶರೀರ್ಯಪರಃ ಸ್ವದೇಹೇ ।
ಯತ್ಸೃಷ್ಟಯಾಸಂ ತಮಹಂ ಪುರುಷಂ ಪುರಾಣಂ
ಪಶ್ಯೇ ಬಹಿರ್ಹೃದಿ ಚ ಚೈತ್ಯಮಿವ ಪ್ರತೀತಮ್ ॥೧೯॥

ಪ್ರಭುವೇ! ಪಶು-ಪಕ್ಷಿಗಳೇ ಮುಂತಾದ ಸಂಸಾರದ ಇತರ ಜೀವಗಳಾದರೋ ತಮ್ಮ ಮೂರ್ಖಬುದ್ಧಿಗೆ ತಕ್ಕಂತೆ ತಮ್ಮ ಶರೀರಗಳಲ್ಲಿ ಉಂಟಾಗುವ ಸುಖ-ದುಃಖಗಳನ್ನು ಮಾತ್ರ ಅನುಭವಿಸಬಲ್ಲವು. ಆದರೆ ನಾನು ನಿನ್ನ ಅನುಗ್ರಹದಿಂದ ಶಮ-ದಮಾದಿ ಸಾಧನಗಳಿಂದ ಕೂಡಿರುವ ಮನುಷ್ಯದೇಹವನ್ನು ಪಡೆದಿದ್ದೇನೆ. ನೀನು ಅನುಗ್ರಹಿಸಿರುವ ವಿವೇಕದಿಂದ ಕೂಡಿದ ಬುದ್ಧಿಯಿಂದ–ಪುರಾಣಪುರುಷನಾದ ನಿನ್ನನ್ನು–ನನ್ನ ಶರೀರದ ಹೊರಗೂ–ಹೃದಯದ ಒಳಗೂ ಆತ್ಮಚೈತನ್ಯಸ್ವರೂಪದಂತೆ ಪ್ರತ್ಯಕ್ಷವಾಗಿ ಅನುಭವಿಸುತ್ತಿದ್ದೇನೆ.

ಸೋಽಹಂ ವಸನ್ನಪಿ ವಿಭೋ ಬಹುದುಃಖವಾಸಂ
ಗರ್ಭಾನ್ನ ನಿರ್ಜಿಗಮಿಷೇ ಬಹಿರನ್ಧಕೂಪೇ ।
ಯತ್ರೋಪಯಾತಮುಪಸರ್ಪತಿ ದೇವಮಾಯಾ
ಮಿಥ್ಯಾಮತಿರ್ಯದನು ಸಂಸೃತಿಚಕ್ರಮೇತತ್ ॥೨೦॥

ಶ್ರೀಭಗವಂತನೇ! ನಾನು ಅತಿದುಃಖದಿಂದ ತುಂಬಿರುವ ಈ ಗರ್ಭಾಶಯದಲ್ಲಿ ಬಹಳ ಕಷ್ಟದಿಂದ ಇರುತ್ತಿದ್ದರೂ ನನಗೆ ಇಲ್ಲಿಂದ ಹೊರಬಿದ್ದು ಸಂಸಾರಮಯವಾದ ಪಾಳುಬಾವಿಯಲ್ಲಿ ಬೀಳಲು ಖಂಡಿತವಾಗಿಯೂ ಇಷ್ಟವಿಲ್ಲ. ಏಕೆಂದರೆ : ಅಲ್ಲಿಗೆ ಹೋಗುವ ಜೀವಗಳನ್ನು ನಿನ್ನ ಮಾಯೆಯು ಆವರಿಸಿಕೊಂಡುಬಿಡುವುದು. ಅದರಿಂದ ದೇಹವೇ ತಾನೆಂಬ ಬುದ್ಧಿಯು ಬಂದು ಅದರ ಫಲವಾಗಿ ಮತ್ತೆ ಈ ಸಂಸಾರಚಕ್ರದಲ್ಲಿಯೇ ಇರಬೇಕಾಗುವುದಲ್ಲವೇ?

ತಸ್ಮಾದಹಂ ವಿಗತವಿಕ್ಲವ ಉದ್ಧರಿಷ್ಯ
ಆತ್ಮಾನಮಾಶು ತಮಸಃ ಸುಹೃದಾತ್ಮನೈವ ।
ಭೂಯೋ ಯಥಾ ವ್ಯಸನಮೇತದನೇಕರನ್ಧ್ರಂ
ಮಾ ಮೇ ಭವಿಷ್ಯದುಪಸಾದಿತವಿಷ್ಣುಪಾದಃ ॥೨೧॥

ಆದುದರಿಂದ ನಾನು ಕಳವಳವನ್ನು ಬಿಟ್ಟು ಹೃದಯದಲ್ಲಿ ಶ್ರೀಮಹಾವಿಷ್ಣುಭಗವಂತನ ಶ್ರೀಪಾದಗಳನ್ನು ನೆಲೆಗೊಳಿಸಿಕೊಂಡು, ಗೆಳೆಯನಾದ ನನ್ನ ಬುದ್ಧಿಯ ಸಹಾಯದಿಂದಲೇ ನನ್ನನ್ನು ಬಲುಬೇಗನೇ ಈ ಸಂಸಾರಸಮುದ್ರದಿಂದ ಉದ್ಧರಿಸಿಕೊಳ್ಳುವೆನು. ಹೀಗಾದರೆ ಮಾತ್ರ ಬಗೆ-

ಬಗೆಯ ದೋಷಗಳಿಂದ ತುಂಬಿದ ಈ ಸಂಸಾರದುಃಖವು ನನಗೆ ಮತ್ತೆ ಬರುವುದಿಲ್ಲ.”

ಶ್ರೀಕಪಿಲಭಗವಂತನು ಹೇಳುತ್ತಾನೆ :

“ಅಮ್ಮಾ! ಆ ಹತ್ತು ತಿಂಗಳ ಶಿಶುವು ಹೀಗೆ ಗರ್ಭದಲ್ಲೇ ವಿವೇಕ ಸಂಪನ್ನವಾಗಿ ಭಗವಂತನನ್ನು ಸ್ತುತಿಸುತ್ತಿರುತ್ತದೆ. ಆಗ ಕೆಳಮುಖವಾಗಿರುವ ಆ ಶಿಶುವನ್ನು ಪ್ರಸವಕಾಲದ ವಾಯುವು ಒಡನೆಯೇ ಹೊರಗೆ ಬೀಳುವಂತೆ ನೂಕಿಬಿಡುತ್ತದೆ.

ಹೀಗೆ ಇದ್ದಕ್ಕಿದ್ದಂತೆ ಆ ವಾಯುವು ಹೊರಗೆ ನೂಕಿದಾಗ ಆ ಮಗುವು ತುಂಬಾ ಕಳವಳಗೊಂಡು, ತಲೆಯನ್ನು ಕೆಳಗೆಮಾಡಿಕೊಂಡು ಅತಿಕಷ್ಟದಿಂದ ಹೊರಗೆ ಬೀಳುವುದು. ಆಗ ಅದರ ಉಸಿರಾಟವು ತಡೆಯಲ್ಪಟ್ಟು ಅದಕ್ಕೆ ಹಿಂದಿನ ಸ್ಮೃತಿಯು ಕಳೆದುಹೋಗುವುದು. ತಾಯಿಯ ರಕ್ತ ಮತ್ತು ಮೂತ್ರಗಳೊಡನೆ ಭೂಮಿಯ ಮೇಲೆ ಬಿದ್ದ ಆ ಶಿಶುವು ಮಲದಲ್ಲಿ ಬಿದ್ದಿರುವ ಹುಳುವಿನಂತೆ ವಿಲ-ವಿಲನೆ ಚಡಪಡಿಸುವುದು. ಅದಕ್ಕೆ ಗರ್ಭ ವಾಸದಲ್ಲಿ ಉಂಟಾಗಿದ್ದ ಎಲ್ಲ ಜ್ಞಾನವೂ ನಾಶಹೊಂದುವುದು ಮತ್ತು ಅದಕ್ಕೆ ವಿರುದ್ಧವಾದ ಗತಿಯನ್ನು ಅಂದರೆ : ಅಜ್ಞಾನಾವಸ್ಥೆಯನ್ನು ಹೊಂದಿ ಅದು ಗಟ್ಟಿಯಾಗಿ ಅಳತೊಡಗುವುದು. ಆಮೇಲೆ ಆ ಶಿಶುವು ತನ್ನ ಇಂಗಿತ–ಅಭಿ ಪ್ರಾಯಗಳನ್ನು ಅರಿಯದೇ ಇರುವ ಜನರ ಪೋಷಣೆಗೆ ಒಳಗಾಗುವುದು. ತನಗೆ ಅನಿಷ್ಟವಾದ ಉಪಚಾರಗಳನ್ನು ಅವರು ಮಾಡುತ್ತಿದ್ದರೂ, ಅವು ಬೇಡವೆಂದು ತಿಳಿಸುವ ಶಕ್ತಿ ಅದಕ್ಕೆ ಇರುವುದಿಲ್ಲ. ತಿಗಣೆಯೇ ಮುಂತಾದ ಬೆವರಿನಿಂದ ಹುಟ್ಟುವ ಜಂತುಗಳಿಂದ ತುಂಬಿರುವ ಕೊಳಕು ಮಂಚ-ತೊಟ್ಟಿಲು-ಹಾಸಿಗೆಗಳಲ್ಲಿ ಅದನ್ನು ಮಲಗಿಸುವರು. ಅದಕ್ಕೆ ಆಗ ತನ್ನ ಅಂಗಗಳನ್ನು ಕೆರೆದುಕೊಳ್ಳುವುದಕ್ಕೂ, ಕೂರುವುದಕ್ಕೂ, ಏಳುವುದಕ್ಕೂ ಮತ್ತು ಹೊರಳಾಡುವುದಕ್ಕೂ ಶಕ್ತಿಯಿಲ್ಲದೇ ಕಷ್ಟಪಡುವುದು. ನೊಣ, ತಿಗಣೆ, ಸೊಳ್ಳೆ–ಮುಂತಾದ ಕೀಟಗಳು–ಚಿಕ್ಕಹುಳುಗಳು ದೊಡ್ಡಹುಳು

ಗಳನ್ನು ಕಚ್ಚುವಂತೆ–ಅದನ್ನು ನೋಯಿಸುತ್ತಾ, ಜ್ಞಾನವಿಲ್ಲದೇ ಅಳುತ್ತಾ ಇರುವ ಆ ಶಿಶುವಿನ ಸುಕುಮಾರವಾದ ಚರ್ಮವನ್ನು ಮತ್ತಷ್ಟು ಕಚ್ಚುವುವು.

(ಶ್ಲೋಕ 22-27)

ಈ ರೀತಿಯಲ್ಲಿ ಆ ಜೀವವು ಬಾಲ್ಯವಯಸ್ಸಿನ ದುಃಖವನ್ನೂ ಮತ್ತು ಅನಂತರ ಪೌಗಂಡವೆಂಬ ಬಾಲ್ಯ-ಯೌವನಗಳ ಮಧ್ಯಾವಸ್ಥೆಯ ದುಃಖವನ್ನೂ ಅನುಭವಿಸಿ ಯೌವನವನ್ನು ಹೊಂದುವುದು. ಆಗ ತನಗೆ ಇಷ್ಟವಾದ ಭೋಗವು ಸಿಕ್ಕದೇ ಇದ್ದರೆ ಅಜ್ಞಾನದಿಂದ ಕೋಪವು ಕೆರಳಿ ದುಃಖವೇಗಕ್ಕೆ ಒಳಗಾಗುವುದು. ದೇಹದೊಡನೆ ಅಭಿಮಾನವೂ, ಕೋಪವೂ ಹೆಚ್ಚುತ್ತಿರಲು ಆ ತರುಣಜೀವವು ಕಾಮುಕವಾಗುವುದು. ಇತರ ಕಾಮುಕ ರೊಡನೆ ತನಗೆ ವಿನಾಶಕರವಾದ ರೀತಿಯಲ್ಲಿ ಸ್ಪರ್ಧಿಸಿ ಕಾದಾಡುವುದು. ವಸ್ತುಸ್ಥಿತಿಗೆ ವಿರುದ್ಧವಾದ ಬುದ್ಧಿಯಿಂದ ಕೂಡಿದ ಅಜ್ಞಾನಿಯಾದ ಜೀವನು ಆ ಪಂಚಭೂತಗಳಿಂದ ನಿರ್ಮಿತವಾಗಿರುವ ಶರೀರದಲ್ಲಿ 'ನಾನು', 'ನನ್ನದು' ಎಂಬ ಅಭಿಮಾನ-ಆಗ್ರಹಗಳನ್ನು ಹೊಂದುವನು. ಆ ಆಗ್ರಹದಿಂದ ಕರ್ಮಗಳನ್ನು ಮಾಡುತ್ತಾ ಸಂಸಾರದ ಬಲೆಗೆ ಸಿಕ್ಕಿಬೀಳುವನು. ಮುಪ್ಪು, ಖಾಯಿಲೆ–ಮುಂತಾದ ಬಗೆ-ಬಗೆಯ ಕಷ್ಟಗಳನ್ನೇ ಕೊಡುತ್ತಾ ಅವಿದ್ಯೆ, ಕಾಮ ಮತ್ತು ಕರ್ಮಗಳಿಗೆ ಕಟ್ಟುಬಿದ್ದು ಸದಾ ಈತನನ್ನು ಹಿಂಬಾಲಿ ಸುತ್ತಿರುವ ಆ ದೇಹದ ರಕ್ಷಣೆಗಾಗಿಯೇ ಕರ್ಮಗಳನ್ನು ಮಾಡುತ್ತಾ ಸಂಸಾರ ಚಕ್ರಕ್ಕೆ ಸಿಕ್ಕಿಹಾಕಿಕೊಳ್ಳುವನು. ಆಗ ಈತನು ಆಹಾರ-ಮೈಥುನಗಳಿಗಾಗಿಯೇ ಪ್ರಯತ್ನಿಸುವ ಅಸಜ್ಜನರ ಸಹವಾಸಕ್ಕೆ ಬಿದ್ದು ಅವರ ದಾರಿಯನ್ನೇ ಹಿಡಿ ದರೆ–ಹಿಂದಿನಂತೆಯೇ ಮತ್ತೆ ನರಕಯೋನಿಗಳಲ್ಲಿಯೇ ಹೋಗಿ ಬೀಳಬೇಕಾ ಗುವುದು. ಯಾರ ಸಂಗದಲ್ಲಿದ್ದರೆ ಸತ್ಯ, ಒಳ-ಹೊರಗಿನ ಶುಚಿತ್ವಗಳಿಂದ ಕೂಡಿದ ಸದಾಚಾರ, ದಯೆ, ಮಿತಭಾಷಣ, ಸದ್ಬುದ್ಧಿ, ಸಂಪತ್ತು, ದುಷ್ಟ ವಿಷಯಗಳ ಬಗೆಗೆ ನಾಚಿಕೆ, ಯಶಸ್ಸು, ಕ್ಷಮೆ, ಮನಸ್ಸು, ಇಂದ್ರಿಯಗಳ ಸಂಯಮ ಮತ್ತು ಐಶ್ವರ್ಯದ ಅಭಿವೃದ್ಧಿಯೇ ಮುಂತಾದ ಸದ್ಗುಣ-ಶೀಲಗಳು ನಾಶಹೊಂದುತ್ತವೆಯೋ–ಅಂತಹ ಅತಿಶೋಚನೀಯರಾದ, ಹೆಂಗಸರ ಆಟದ ಬೊಂಬೆಗಳಂತಿರುವ-ಅಶಾಂತರೂ, ಮೂರ್ಖರೂ, ದೇಹಾತ್ಮದರ್ಶಿಗಳೂ ಆದ ದುಷ್ಟಜನರ ಸಹವಾಸವನ್ನು ಎಂದಿಗೂ

ಮಾಡಬಾರದು. ಮನುಷ್ಯನಿಗೆ ಸ್ತ್ರೀಸಂಗದಿಂದಲೂ, ಸ್ತ್ರೀಸಂಗದಲ್ಲಿರುವವರ ಸಂಗದಿಂದಲೂ ಎಂತಹ ಮೋಹ-ಬಂಧನಗಳುಂಟಾಗುತ್ತವೆಯೋ–ಅಂತಹ ಮೋಹ-ಬಂಧನಗಳು ಬೇರೆ ಯಾವುದರಿಂದಲೂ ಉಂಟಾಗುವುದಿಲ್ಲ. ಇದಕ್ಕೆ ಒಂದು ನಿದರ್ಶನವನ್ನು ಹೇಳುವೆನು ; ಕೇಳು. ಹಿಂದೆ ಪ್ರಜಾಪತಿಯೇ ತನ್ನ ಪುತ್ರಿಯಾದ ಸರಸ್ವತಿಯನ್ನು ಕಂಡು ಆಕೆಯ ರೂಪ-ಲಾವಣ್ಯಗಳಿಗೆ ಮರುಳಾದನು. ಆಕೆಯು ಹೆಣ್ಣುಹುಲ್ಲೆಯ ರೂಪವನ್ನು ತಾಳಿ ಓಡುತ್ತಿದ್ದರೂ, ತಾನು ನಾಚಿಕೆಗೆಟ್ಟು ಗಂಡುಜಿಂಕೆಯ ರೂಪದಿಂದ ಆಕೆಯನ್ನು ಬೆನ್ನಟ್ಟಿಹೋದನು. ಹೀಗಿರುವಾಗ ಅದೇ ಪ್ರಜಾಪತಿಯು ಸೃಷ್ಟಿಸಿದ– ಮರೀಚಿಯೇ ಮುಂತಾದವರಿಂದ ಸೃಷ್ಟಿಸಲ್ಪಟ್ಟ, ಕಶ್ಯಪರೇ ಮುಂತಾದವರಿಂದ ಬೆಳೆದು ಬಂದಿರುವ ಈ ಜೀವಿಗಳಲ್ಲಿ ಯಾವನು ತಾನೇ ಸ್ತ್ರೀರೂಪವಾದ ಮಾಯೆಗೆ ಒಳಗಾಗದೇ ಇರುವನು? ಆ ಮಾಯೆಗೆ ಒಳಗಾಗದ ಬುದ್ಧಿಯುಳ್ಳವನು ಋಷಿಶ್ರೇಷ್ಠನಾದ ನಾರಾಯಣಮುನಿಯೊಬ್ಬನೇ.

ಅಮ್ಮಾ! ನನ್ನ ಈ ಸ್ತ್ರೀರೂಪವಾದ ಮಾಯೆಗೆ ಎಂತಹ ಬಲ! ಕೇವಲ ತನ್ನ ಹುಬ್ಬಿನಾಟದಿಂದಲೇ ದಿಗ್ವಿಜಯಿಗಳಾದ ದೊಡ್ಡ-ದೊಡ್ಡ ವೀರರನ್ನೂ ಕಾಲುಗಳಿಂದ ಮೆಟ್ಟಿಹಾಕುವುದಲ್ಲಾ! *ಯೋಗದ ಪರಮಪಾರವನ್ನು ಹೊಂದುವ ಇಷ್ಟದಿಂದ ಕೂಡಿ, ನನ್ನ ಸೇವೆಯ ಪ್ರಭಾವದಿಂದ ಆತ್ಮಲಾಭವನ್ನು ಪಡೆದ ವಿವೇಕಿಯು ಸ್ತ್ರೀಸಂಗವನ್ನು ಮಾಡಲೇಕೂಡದು. ಅದು ಪುರುಷರಿಗೆ ನರಕಕ್ಕೆ ದ್ವಾರವೆಂದು ತಿಳಿಯಬೇಕು. ಮೆಲ್ಲ-ಮೆಲ್ಲನೆ ಬಳಿಗೆ ಸಾರಿ ತನ್ನನ್ನು ಮರಳುಮಾಡುವಂತಹ ಸ್ತ್ರೀಯೆಂಬ ದೇವಮಾಯೆಯನ್ನು– ಹುಲ್ಲು ಮುಚ್ಚಿಕೊಂಡಿರುವ ಪಾಳುಬಾವಿಯಂತೆ–ತನ್ನ ಮರಣಕ್ಕೆ ಕಾರಣವೆಂದು ತಿಳಿಯಬೇಕು. (ಶ್ಲೋಕ 28-40)

---

* "ಅಜ್ಞಾಗ್ರಸದೃಶೀ ನಾರೀ ಘೃತಕುಮ್ಭಸಮಃ ಪುಮಾನ್ ।ತಸ್ಮಾನ್ನಾರೀಷು ಸಂಸರ್ಗಂ ದೂರತಃ ಪರಿವರ್ಜಯೇತ್ ॥" ಪುರುಷನು ತುಪ್ಪದ ಗಡಿಗೆಯಂತೆ ; ಸ್ತ್ರೀಯು ಬೆಂಕಿಯಂತೆ. ಆದ್ದರಿಂದ ಪುರುಷನು ತನ್ನನ್ನು ಲಯಗೊಳಿಸುವ ಸ್ತ್ರೀಯಿಂದ ದೂರದಲ್ಲಿರಬೇಕು.
(ಶ್ಲೋಕ ೩೮)

ಯಾಂ ಮನ್ಯತೇ ಪತಿಂ ಮೋಹಾನ್ಮನ್ಮಾಯಾಮೃಷಭಾಯತೀಮ್ ।
ಸ್ತ್ರೀತ್ವಂ ಸ್ತ್ರೀಸಙ್ಗತಃ ಪ್ರಾಪ್ತೋ ವಿತ್ತಾಪತ್ಯಗೃಹಪ್ರದಮ್* ॥೪೧॥

ಸ್ತ್ರೀಯಲ್ಲಿ ಸದಾ ಆಸಕ್ತನಾಗಿರುವ ಮನುಷ್ಯನು ದೇಹದ ಕೊನೆಗಾಲದಲ್ಲೂ ಸ್ತ್ರೀಚಿಂತನೆಯನ್ನು ಮಾಡುವುದರಿಂದ ಮುಂದೆ ಸ್ತ್ರೀಯೋನಿಯಲ್ಲೇ ಜನಿಸುತ್ತಾನೆ. ಆ ಸ್ತ್ರೀಯೋನಿಯಲ್ಲಿರುವ ಜೀವವೂ ಪುರುಷರೂಪದಲ್ಲಿ ಕಾಣುವ ನನ್ನ ಮಾಯೆಗೆ ಮರುಳಾಗಬಾರದು. ಸ್ತ್ರೀಯು ಯಾರನ್ನು ತನಗೆ ಧನ-ಕನಕ-ಮನೆ-ಮಕ್ಕಳುಗಳನ್ನು ಕೊಡುವ ಪತಿಯೆಂದು ತಿಳಿಯುತ್ತಾಳೆಯೋ—ಆತನೂ ನನ್ನ ಮಾಯೆಯೇ.

ಬೇಡನು ಕಿವಿಗಿಂಪಾದ ಹಾಡನ್ನು ಹಾಡುತ್ತಿದ್ದರೂ, ಬಡಪಾಯಿಗಳಾದ ಪಶು-ಪಕ್ಷಿಗಳನ್ನು ಅದರಿಂದ ತನ್ನ ಬಲೆಗೆ ಸಿಕ್ಕಿಸಿಕೊಂಡು ಅವುಗಳ ನಾಶಕ್ಕೆ ಕಾರಣನಾಗುವನಲ್ಲವೇ? ಹಾಗೆಯೇ ಪತಿ, ಪುತ್ರ, ಮನೆ—ಮುಂತಾದುವುಗಳೆಲ್ಲವೂ ತಮ್ಮನ್ನು ಆಕರ್ಷಣೆಮಾಡಿ, ತಮ್ಮ ಮೃತ್ಯುವಿಗೂ ಕಾರಣವಾಗುವ ಸೃಷ್ಟಿಕರ್ತನ ಮಾಯೆಯೆಂದು ಸ್ತ್ರೀಯರು ತಿಳಿಯಬೇಕು. ಪುರುಷಸಂಗದಿಂದ ದೂರದಲ್ಲಿರಬೇಕು. ಅಮ್ಮಾ! ಜೀವನು ತನ್ನ ಲಿಂಗದೇಹದಿಂದ ಒಂದು ಲೋಕದಿಂದ ಮತ್ತೊಂದು ಲೋಕಕ್ಕೆ ಹೋಗುತ್ತಿರುವನು. ತನ್ನ ಪ್ರಾರಬ್ಧಕರ್ಮಗಳನ್ನು ಅನುಭವಿಸುತ್ತಾ ಇತರ ದೇಹಗಳನ್ನು ಹೊಂದುವುದಕ್ಕೋಸ್ಕರ ಎಡೆಬಿಡದೇ ಬೇರೆ ಕರ್ಮಗಳನ್ನು ಆಚರಿಸುತ್ತಿರುವನು. ಈ ಲಿಂಗಶರೀರವು ಜೀವನಿಗೆ ಎಲ್ಲಿಯವರೆಗೆ ಇರುವುದು? ಎಂದರೆ : ಆತನು ಮೋಕ್ಷವನ್ನು ಹೊಂದುವವರೆಗೂ ಇದು ಆತನ ಜೊತೆಯಲ್ಲಿರುವುದಮ್ಮಾ! ಭೂತಗಳು, ಇಂದ್ರಿಯಗಳು ಮತ್ತು ಮನಸ್ಸು—ಇವುಗಳ ಕಾರ್ಯವಾಗಿರುವ ಸ್ಥೂಲದೇಹವು ಭೋಗಕ್ಕೆ ಅಧಿಷ್ಠಾನವಾಗಿದೆ. ಈ ಸೂಕ್ಷ್ಮದೇಹ ಮತ್ತು ಸ್ಥೂಲದೇಹಗಳು ಒಟ್ಟಿಗೇ ಸೇರಿ ಕೆಲಸಮಾಡದೇ ಇರುವುದೇ ಪ್ರಾಣಿಗಳ 'ಮೃತ್ಯು' ಎನಿಸುತ್ತದೆ. ಅವೆರಡೂ ಒಟ್ಟಿಗೇ ಸೇರಿ ಕಾರ್ಯಮಾಡುವುದನ್ನೇ 'ಜನ್ಮ'ವೆಂದು ಕರೆಯುತ್ತಾರೆ. ಪದಾರ್ಥಗಳನ್ನು

---

* ಹೋಲಿಕೆ : "ಯಂ ಯಂ ವಾಪಿ ಸ್ಮರನ್ಭಾವಂ ತ್ಯಜತ್ಯನ್ತೇ ಕಲೇವರಮ್ । ತಂ ತಮೇವೈತಿ ಕೌನ್ತೇಯ ಸದಾ ತದ್ಭಾವಭಾವಿತಃ ॥" (ಶ್ರೀಗೀತಾ) (ಶ್ಲೋಕ ೪೧)

ಪಡೆಯುವುದಕ್ಕೆ ಸ್ಥಾನವಾಗಿರುವ ಈ ಸ್ಥೂಲಶರೀರದಲ್ಲಿ ಅವುಗಳನ್ನು ಗ್ರಹಿಸುವ ಯೋಗ್ಯತೆಯು ಇಲ್ಲದೇ ಇರುವುದೇ 'ಮರಣವು'. (ಕರ್ತೃತ್ವ ವೆಂಬುದು ಸೂಕ್ಷ್ಮದೇಹಕ್ಕೆ ಸಂಬಂಧಪಟ್ಟುದು. ಭೋಕ್ತೃತ್ವವು ಸ್ಥೂಲ ದೇಹಕ್ಕೆ ಸಂಬಂಧಿಸಿದ್ದು. ಈ ಸೂಕ್ಷ್ಮ ಮತ್ತು ಸ್ಥೂಲಶರೀರಗಳ್ಲಲಿ ಕರ್ತೃತ್ವ ಮತ್ತು ಬೋಕ್ತೃತ್ವರೂಪಗಳಾದ ಕರ್ಮಗಳು ನಿಂತುಹೋಗುವುದೇ ಜೀವನಿಗೆ ಮರಣವೆಂದು ಹೇಳುವರು. ಪುನಃ ದೇಹಗಳಲ್ಲಿ ಆ ಕರ್ತೃತ್ವ- ಭೋಕ್ತೃತ್ವಗಳೇ ಮುಂತಾದ ಕೆಲಸಗಳು ಪ್ರಾರಂಭವಾಗುವುದಕ್ಕೆ ಜನನವೆಂದು ಕರೆಯುವರು.) ಪದಾರ್ಥಗಳನ್ನು ಕಾಣುವುದಕ್ಕೆ ಕಣ್ಣು ಮುಂತಾ ದುವುಗಳ ಸಹಾಯವುಬೇಕು. ಆ ಕಣ್ಣು ಮುಂತಾದ ಗೋಳಕದಲ್ಲಿ—ಪರೆ ಮುಂತಾದ ರೋಗಗಳಿಂದ ಕಾಣುವ ಶಕ್ತಿಯು ಕುಂದಿದರೆ (ಆ ಗೋಳಕದಲ್ಲಿ ರುವ) ಕಣ್ಣು ಎಂಬ ಇಂದ್ರಿಯವೂ ಕುರುಡೆನಿಸುವುದು. ಆ ಗೋಳಕವೂ ಮತ್ತು ಅದರ ಇಂದ್ರಿಯವೂ ಎರಡೂ ಕುಂದಿದಾಗ ಆ ಜೀವನೂ ಕುರುಡ ನೆನಿಸುತ್ತಾನೆ. ಹಾಗೆಯೇ ಕೈ-ಕಾಲು ಮುಂತಾದ ಅವಯವಗಳಿಂದ ಕೂಡಿ ರುವ ಆ ಸ್ಥೂಲದೇಹವು ತನ್ನ ವ್ಯಾಪಾರಗಳನ್ನು ನಡೆಯಿಸಲಾರದೇ ಬಲ ಗುಂದಿದರೆ—ಆ ಸ್ಥೂಲದೇಹವನ್ನು ಆಶ್ರಯಿಸಿರುವ ಲಿಂಗದೇಹವೂ ಬಲ ಗುಂದಿ ವ್ಯಾಪಾರರಹಿತವಾಗುವುದು. ಇದೇ ಜೀವನಿಗೆ ಮರಣವು. ಈ ಸ್ಥೂಲದೇಹದಲ್ಲಿ 'ಇದೇ ನಾನು' ಎಂದು ಅಹಂಕಾರವನ್ನು ಇಟ್ಟುಕೊಳ್ಳು ವುದೇ 'ಜನ್ಮ' ವೆನಿಸುವುದು. ಹೀಗೆ ಜೀವನಿಗೆ ಜನ್ಮ-ಮರಣಗಳು ದೇಹಗಳ ಉಪಾಧಿಯಿಂದ ಬಂದಿರುವುದೇ ಹೊರತು ಸ್ವಾಭಾವಿಕಗಳಲ್ಲ. (ಶ್ಲೋಕ 41-46)

ತಸ್ಮಾನ್ನ ಕಾರ್ಯಃ ಸನ್ತ್ರಾಸೋ ನ ಕಾರ್ಪಣ್ಯಂ ನ ಸಮ್ಭ್ರಮಃ ।
ಬುದ್ಧ್ವಾ ಜೀವಗತಿಂ ಧೀರೋ ಮುಕ್ತಸಙ್ಗಶ್ಚರೇದಿಹ ॥೪೭॥

ಆದುದರಿಂದ ಮರಣಕ್ಕೆ ಭಯಪಡಬಾರದು ಮತ್ತು ಜೀವನಕ್ಕಾಗಿ ದೈನ್ಯದಿಂದ ಹಾತೊರೆಯಲೂಬಾರದು. ಜೀವನದ ಕಾರ್ಯಗಳಲ್ಲಿ ಸಡಗರ-ಸಂಭ್ರಮಗಳಿಲ್ಲದೇ ಗಂಭೀರವಾಗಿರಬೇಕು. ಸುಖ-ದುಃಖಗಳಲ್ಲಿ ಸಮಭಾವ ದಿಂದ ಇರುವ ಧೀರನಾಗಿ, ಜೀವಗತಿಯನ್ನು ತಿಳಿದು ನಿಸ್ಸಂಗಭಾವದಿಂದ ಸಂಚರಿಸಬೇಕು.

ಸಮ್ಯಗ್ದರ್ಶನಯಾ ಬುದ್ಧ್ಯಾ ಯೋಗವೈರಾಗ್ಯಯುಕ್ತಯಾ ।
ಮಾಯಾವಿರಚಿತೇ ಲೋಕೇ ಚರೇನ್ನ್ಯಸ್ಯ ಕಲೇವರಮ್ ॥೪೮॥

ಯೋಗದಿಂದಲೂ–ವೈರಾಗ್ಯದಿಂದಲೂ ಕೂಡಿದ ಸಮ್ಯಕ್‌ಜ್ಞಾನದಿಂದ ಅಂದರೆ : ಯಥಾವಸ್ಥಿತವೂ–ಪರಿಪೂರ್ಣವೂ ಆದ ಶುದ್ಧಜ್ಞಾನದಿಂದ ತನ್ನ ದೇಹವನ್ನು ಶ್ರೀಭಗವಂತನ ಮಾಯಾಶಕ್ತಿಯಿಂದ ವಿರಚಿತವಾದ ಈ ಲೋಕದಲ್ಲಿ ಗಿರವಿಯ ಪದಾರ್ಥದಂತೆ–ಇರಿಸಿ ದೇಹಭಾವವನ್ನು ಬಿಟ್ಟು ಆತ್ಮಭಾವದಿಂದ ಸಂಚರಿಸಬೇಕು.”

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೩೧ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧ ೩೨ನೆಯ ಅಧ್ಯಾಯ

ಧೂಮಾದಿಮಾರ್ಗ ಮತ್ತು ಅರ್ಚಿರಾದಿಮಾರ್ಗಗಳಿಂದ ಪ್ರಯಾಣ ಮಾಡುವವರ ಗತಿಗಳು ಮತ್ತು ಭಕ್ತಿಯೋಗದ ಶ್ರೇಷ್ಠತೆ

ಶ್ರೀಕಪಿಲಭಗವಂತನು ಹೇಳುತ್ತಾನೆ :

ಅಥ ಯೋ ಗೃಹಮೇಧೀಯಾನ್ಧರ್ಮಾನೇವಾವಸನ್ಗೃಹೇ ।
ಕಾಮಮರ್ಥಂ ಚ ಧರ್ಮಾನ್ಸ್ವಾನ್ದೋಗ್ಧಿ ಭೂಯಃ ಪಿಪರ್ತಿ ತಾನ್ ॥

“ಅಮ್ಮಾ! ಇನ್ನು ಕಾಮ್ಯಕರ್ಮಗಳನ್ನು ಆಚರಿಸುವವರು ಯಾವ ಗತಿಯನ್ನು ಹೊಂದುತ್ತಾರೆ? ಕರ್ಮಗಳನ್ನು ಪರಮಾತ್ಮನಿಗೆ ಸಮರ್ಪಣೆ ಮಾಡಿ ಫಲಾಭಿಸಂಧಿಯಿಲ್ಲದೇ ವಿಹಿತವಾದ ಕರ್ಮಗಳನ್ನು ಮಾಡುವವರು ಹೊಂದುವ ಗತಿಯು ಯಾವುದು?–ಎಂಬುದನ್ನು ವರ್ಣಿಸುತ್ತೇನೆ ; ಕೇಳು :

ಸ ಚಾಪಿ ಭಗವದ್ಧರ್ಮಾತ್ಕಾಮಮೂಢಃ ಪರಾಙ್ಮುಖಃ ।
ಯಜತೇ ಕ್ರತುಭಿರ್ದೇವಾನ್ಪಿತೄಂಶ್ಚ ಶ್ರದ್ಧಯಾನ್ವಿತಃ* ॥೨॥

ಯಾವನು ತನ್ನ ಮನೆಯಲ್ಲಿಯೇ ಇದ್ದುಕೊಂಡು ಗೃಹಸ್ಥಧರ್ಮಗಳನ್ನು ಸಕಾಮಭಾವದಿಂದ ಆಚರಿಸುತ್ತಾ, ಅವುಗಳ ಫಲವಾಗಿ ದೊರೆಯುವ

* ಹೋಲಿಕೆ : “ಸ ತಯಾಶ್ರದ್ಧಯಾಯುಕ್ತಃ ತಸ್ಯಾರಾಧನಮೀಹತೇ । ಲಭತೇ ಚ ತತಃ ಕಾಮಾನ್ ಮಯ್ಯೈವ ವಿಹಿತಾನ್ ಹಿ ತಾನ್ ॥” (ಶ್ರೀಗೀತಾ) (ಶ್ಲೋಕ ೨)

ಅರ್ಥ-ಕಾಮಗಳನ್ನು ಅನುಭವಿಸುತ್ತಾ ಮತ್ತೆ ಆ ಕಾಮ್ಯಕರ್ಮಗಳನ್ನೇ ಆಚರಿಸುತ್ತಿರುವನೋ–ಆತನ ಮನಸ್ಸು ಬಗೆ-ಬಗೆಯ ಕಾಮನೆಗಳಿಂದ ಆಕ್ರಮಿಸಲ್ಪಟ್ಟಿರುತ್ತದೆ. ಅವನು ಭಗವದ್ಧರ್ಮಕ್ಕೆ ವಿಮುಖನಾಗಿ ಯಜ್ಞಗಳ ಮೂಲಕ ಶ್ರದ್ಧಾಪೂರ್ವಕವಾಗಿ ದೇವತೆಗಳನ್ನೂ–ಪಿತೃಗಳನ್ನೂ ಆರಾಧಿಸು ತ್ತಿರುವನು. ಆತನ ಬುದ್ಧಿಯು ಅದೇ ರೀತಿಯ ಶ್ರದ್ಧೆಯಿಂದಲೇ ತುಂಬಿರುವುದು. ದೇವತೆಗಳು ಮತ್ತು ಪಿತೃಗಳೇ ಆತನ ಉಪಾಸ್ಯದೇವತೆ ಗಳಾಗಿರುತ್ತಾರೆ. ಆದ್ದರಿಂದ ಆತನು ಚಂದ್ರಲೋಕಕ್ಕೆ ಹೋಗಿ ಅವರೊಡನೆ ಸೋಮಪಾನಮಾಡುತ್ತಾ ಸುಖವಾಗಿದ್ದು ಪುಣ್ಯಕರ್ಮವು ಕ್ಷಯಿಸಿದೊಡ ನೆಯೇ ಇದೇ ಲೋಕಕ್ಕೆ ಮರಳಿ ಬರುವನು. (ಶ್ಲೋಕ 2-3)

ಯದಾ ಚಾಹೀನ್ದ್ರಶಯ್ಯಾಯಾಂ ಶೇತೇಽನನ್ತಾಸನೋ ಹರಿಃ ।
ತದಾ ಲೋಕಾ ಲಯಂ ಯಾನ್ತಿ ತ ಏತೇ ಗೃಹಮೇಧಿನಾಮ್ ॥೪॥

ಈ ಪುಣ್ಯಲೋಕಗಳಿಗೆ ಲಯವುಂಟು. ಪ್ರಳಯಕಾಲದಲ್ಲಿ ಶ್ರೀಭಗವಂತನು ಶೇಷಶಯ್ಯೆಯಲ್ಲಿ ಯಾವಾಗ ಪವಡಿಸುವನೋ–ಆಗ ಈ ಗೃಹಸ್ಥಾಶ್ರಮಿಗಳು ಪಡೆಯುವ ಲೋಕಗಳೆಲ್ಲವೂ ಲಯಹೊಂದಿಬಿಡುತ್ತವೆ.

ಇದು ಪ್ರವೃತ್ತಿಧರ್ಮಪರಾಯಣರಾದವರ ವಿಷಯವಾಯಿತು. ಇನ್ನು ನಿವೃತ್ತಿಧರ್ಮವನ್ನು ಆಚರಿಸುವವರ ಗತಿಯನ್ನು ಹೇಳುವೆನು ; ಕೇಳು. ವಿವೇಕಿಗಳಾದ ಮನುಷ್ಯರು ತಮ್ಮ ಧರ್ಮಗಳನ್ನು ಅರ್ಥ ಮತ್ತು ಕಾಮಗಳ ವಿಲಾಸಕ್ಕೆ ಉಪಯೋಗಪಡಿಸುವುದಿಲ್ಲ. ಅವರು ಶ್ರೀಭಗವಂತನ ಪ್ರೀತಿ-ಪ್ರಸನ್ನತೆಗಳಿಗಾಗಿಯೇ ಧರ್ಮಗಳನ್ನು ಆಚರಿಸುತ್ತಾರೆ. ಅಂತಹ ಅನಾಸಕ್ತರೂ, ಪ್ರಶಾಂತರೂ, ಪರಿಶುದ್ಧಚಿತ್ತವುಳ್ಳವರೂ, ನಿವೃತ್ತಿಧರ್ಮ ನಿಷ್ಠರೂ, ಮಮಕಾರ-ಅಹಂಕಾರಗಳನ್ನು ತೊರೆದವರೂ ಆದ ಸುಕೃತಿಗಳು ಸ್ವಧರ್ಮಪಾಲನಾರೂಪವಾದ ಸತ್ತ್ವಗುಣದಿಂದ ಪವಿತ್ರರಾಗುತ್ತಾರೆ. ಅವರ ಚಿತ್ತವು ಸಂಪೂರ್ಣವಾಗಿ ಶುದ್ಧವಾಗುವುದು. ಹೀಗೆ ಶುದ್ಧಚಿತ್ತರಾದ ಅವರು ಸೂರ್ಯಮಾರ್ಗ, ದೇವಯಾನಮಾರ್ಗ, ಅರ್ಚಿರಾದಿಮಾರ್ಗಗಳು– ಇತ್ಯಾದಿಯಾಗಿ ಕರೆಯಲ್ಪಡುವ ದಿವ್ಯಮಾರ್ಗಗಳಿಂದ ಪ್ರಯಾಣಮಾಡಿ ಸರ್ವವ್ಯಾಪಕನೂ–ಪೂರ್ಣಪುರುಷನೂ ಆದ ಆ ಶ್ರೀಹರಿಯನ್ನೇ ಹೊಂದು

ವರು. ಕಾರ್ಯ-ಕಾರಣರೂಪವಾದ ಜಗತ್ತಿಗೆ ನಿಯಾಮಕನೂ, ಕಾರಣನೂ, ಸೃಷ್ಟಿ-ಸ್ಥಿತಿ-ಲಯಕರ್ತೃವೂ ಆಗಿರುವ ಆತನನ್ನು ಸೇರುವರು. ಯಾರು ಸ್ವಾಮಿಯಾದ ಹಿರಣ್ಯಗರ್ಭನನ್ನು ಪರಮಾತ್ಮದೃಷ್ಟಿಯಿಂದ ಉಪಾಸನೆ ಮಾಡುವರೋ–ಅವರು ಎರಡು ಪರಾರ್ಧಕಾಲದ ಬಾಳಾಟವುಳ್ಳ ಬ್ರಹ್ಮ ದೇವರ ಸತ್ಯಲೋಕಧಾಮಕ್ಕೆ ಹೋಗಿ, ಬ್ರಹ್ಮದೇವರ ಪ್ರಳಯಕಾಲದವರೆಗೆ ಅಲ್ಲಿಯೇ ಇರುವರು. ಯಾವಾಗ ದೇವಶ್ರೇಷ್ಠರಾದ ಆ ಬ್ರಹ್ಮದೇವರು ತಮ್ಮ ಅಧಿಕಾರವನ್ನು ಮುಗಿಸಿಕೊಂಡು ಪೃಥ್ವೀ, ಜಲ, ಅಗ್ನಿ, ವಾಯು, ಆಕಾಶ, ಮನಸ್ಸು, ಇಂದ್ರಿಯ, ಇಂದ್ರಿಯವಿಷಯಗಳು ಮತ್ತು ಅಹಂಕಾರಾದಿ ಗಳಿಂದೊಡಗೂಡಿದ ಇಡೀ ವಿಶ್ವವನ್ನು ಉಪಸಂಹಾರಮಾಡಿಕೊಳ್ಳುವ ಇಚ್ಛೆ ಯಿಂದ ತ್ರಿಗುಣಾತ್ಮಕವಾದ ಪ್ರಕೃತಿಯೊಡನೆ ಒಂದಾಗಿ ಪರಮಾತ್ಮನಲ್ಲಿ ಸೇರಿಕೊಂಡುಬಿಡುವರೋ–ಆಗ ಪ್ರಾಣಗಳನ್ನೂ, ಮನಸ್ಸನ್ನೂ ಜಯಿಸಿ ಕೊಂಡಿರುವ ವಿರಕ್ತರಾದ ಈ ಯೋಗಿಗಳು ಕೂಡ ತಮ್ಮ-ತಮ್ಮ ದೇಹ ಗಳನ್ನು ತೊರೆದು, ಬ್ರಹ್ಮದೇವರ ದೇಹದಲ್ಲಿ ಪ್ರವೇಶಮಾಡಿ, ಅವರೊಡ ನೆಯೇ ಪರಮಾನಂದಸ್ವರೂಪನೂ, ಪುರಾಣಪುರುಷನೂ ಆಗಿರುವ ಪರಬ್ರಹ್ಮಪರಮಾತ್ಮನಲ್ಲಿ ಸೇರಿಕೊಳ್ಳುವರು. ಇದಕ್ಕೆ ಮೊದಲೇ ಅವರು ಪರಮಾತ್ಮನಲ್ಲಿ ಏಕೆ ಸೇರಿಕೊಳ್ಳಲಿಲ್ಲ? ಎಂದರೆ : ಅವರಲ್ಲಿ ಅಹಂಕಾರದ ಉಳಿಕೆ ಇದ್ದುದರಿಂದ. ಆದ್ದರಿಂದ, ಅಮ್ಮಾ! ನೀನೂ ಕೂಡ ಅತ್ಯಂತಭಕ್ತಿ ಭಾವದಿಂದ ಶ್ರೀಹರಿಯು ಚರಣಕಮಲಗಳನ್ನೇ ಶರಣುಹೊಂದು. ಸಮಸ್ತ ಪ್ರಾಣಿಗಳ ಹೃದಯಕಮಲಗಳೇ ಆತನ ವಾಸಮಂದಿರಗಳಾಗಿವೆ. ಆತನ ಪ್ರಭಾವವನ್ನು ನಾನು ನಿನಗೆ ವರ್ಣಿಸಿದ್ದೇನಲ್ಲವೇ? ಬ್ರಹ್ಮದೇವರನ್ನು ಮತ್ತೆ ಸೃಷ್ಟಿಮಾಡುವವನೂ ಆ ಶ್ರೀಹರಿಯೇ. ಸಮಸ್ತ ಸ್ಥಾವರ-ಜಂಗಮಪ್ರಾಣಿ ಗಳಿಗೆ ಆದಿಕಾರಣರಾಗಿರುವ, ವೇದಗರ್ಭರಾದ ಬ್ರಹ್ಮದೇವರೂ ಕೂಡ ಮರೀಚಿಗಳೇ ಮುಂತಾದ ಋಷಿಗಳು, ಯೋಗೇಶ್ವರರು, ಸನಕಾದಿಗಳು ಮತ್ತು ಸಿದ್ಧರೊಡನೆ ನಿಷ್ಕಾಮಕರ್ಮಗಳ ಮೂಲಕ ಆದಿಪುರುಷನೂ–ಪುರುಷೋತ್ತಮನೂ ಆದ ಸಗುಣನಾದ ಪರಬ್ರಹ್ಮನನ್ನು ಹೊಂದಿದ್ದರೂ ಆಗಲೇ ಆತನಲ್ಲಿ ಸೇರಿಕೊಂಡು ಮುಕ್ತರಾಗಿಬಿಡುವುದಿಲ್ಲ. ಏಕೆಂದರೆ : ಅವರಲ್ಲೂ ಭೇದದೃಷ್ಟಿಯೂ ಕರ್ತೃತ್ವಾಭಿಮಾನವೂ ಇರುವುದು. ಆದ್ದರಿಂದ

ಅವರು ಶ್ರೀಭಗವಂತನ ಇಚ್ಛೆಯಂತೆ ಸೃಷ್ಟಿಕಾಲವು ಬಂದಾಗ, ಕಾಲರೂಪ ನಾದ ಆ ಪರಮೇಶ್ವರನ ಪ್ರೇರಣೆಯಂತೆ ತ್ರಿಗುಣಗಳಲ್ಲಿ ಕ್ಷೋಭೆಯುಂಟಾದಾಗ–ಹಿಂದಿನಂತೆಯೇ ಮತ್ತೆ ಪ್ರಕಟಗೊಳ್ಳುವರು. ಹಾಗೆಯೇ ಹಿಂದೆ ಹೇಳಿದ ಸಿದ್ಧ-ಋಷಿಗಣಗಳೂ ಕೂಡ ತಮ್ಮ ಕರ್ಮಾನುಸಾರವಾಗಿ ಬ್ರಹ್ಮ ಲೋಕದ ಐಶ್ವರ್ಯವನ್ನು ಅನುಭವಿಸಿ, ಶ್ರೀಭಗವಂತನ ಇಚ್ಛೆಯಿಂದ ಯಾವಾಗ ತ್ರಿಗುಣಗಳಲ್ಲಿ ಕ್ಷೋಭೆಯುಂಟಾಗುವುದೋ–ಆಗ ಈ ಲೋಕಕ್ಕೆ ಮರಳಿ ಬರುವರು. ಯಾರು ಈ ಲೋಕದಲ್ಲಿಯೇ ಆಸಕ್ತರಾಗಿ, ಕರ್ಮಗಳಲ್ಲಿಯೂ ಶ್ರದ್ಧೆಯನ್ನು ಇಟ್ಟುಕೊಂಡಿರುವರೋ–ಅವರು ವೇದೋಕ್ತವಾದ ಕಾಮ್ಯಕರ್ಮಗಳನ್ನೂ ಮತ್ತು ನಿತ್ಯಕರ್ಮಗಳನ್ನೂ ಅಂಗ-ಉಪಾಂಗ ಸಹಿತವಾಗಿ ಸಂಪೂರ್ಣವಾಗಿ ಆಚರಿಸುವುದರಲ್ಲಿಯೇ ಆಸಕ್ತರಾಗಿರುವರು. ರಜೋಗುಣವು ಹೆಚ್ಚಾಗಿರುವುದರಿಂದ ಅವರ ಬುದ್ಧಿಯು ಕುಂಠಿತವಾಗಿರುವುದು. ಅವರ ಹೃದಯಗಳಲ್ಲಿ ಕಾಮನೆಗಳ ಬಲೆಯು ಹರಡಿಕೊಂಡಿರುವುದು. ಇಂದ್ರಿಯಗಳು ಅವರ ವಶದಲ್ಲಿ ಇರುವುದಿಲ್ಲ. ತಮ್ಮ ಮನೆಗಳಲ್ಲೇ ಆಸಕ್ತರಾಗಿ ಅವರು ಪಿತೃದೇವತೆಗಳ ಆರಾಧನೆಯಲ್ಲೇ ಪ್ರತಿದಿನವೂ ನಿರತರಾಗಿರುವರು. ಅವರು ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗಗಳಲ್ಲಿಯೇ ಪರಾಯಣರಾಗಿರುತ್ತಾರೆ. ಆದ್ದರಿಂದ ಕೀರ್ತನೆಗೆ ಯೋಗ್ಯವಾದ ಮಹಾ ಪರಾಕ್ರಮಗಳುಳ್ಳ, ಭವಭಯಪರಿಹಾರಕನಾದ ಶ್ರೀಮಧುಸೂದನನ ಕಥೆ ಮತ್ತು ಕೀರ್ತನೆಗಳ ಬಗೆಗೆ ಅವರು ವಿಮುಖರಾಗಿರುತ್ತಾರೆ. ಅಯ್ಯೋ ಪಾಪ! ಹೇಸಿಗೆಯನ್ನು ತಿನ್ನುವ ನಾಯಿ-ಹಂದಿಗಳೇ ಮುಂತಾದ ಜೀವಿಗಳು ಆ ಹೇಸಿಗೆಯನ್ನೇ ಬಯಸುವಂತೆ–ಶ್ರೀಭಗವಂತನ ಕಥಾಮೃತವನ್ನು ಬಿಟ್ಟು, ನಿಂದಿತವಾದ ವಿಷಯಗಳನ್ನು ಕುರಿತ ವಾರ್ತೆಗಳನ್ನೇ ಕೇಳುತ್ತಿರುವ ಜನರು ಎಂತಹ ದೈವಹತರು! ಎಂತಹ ಮಂದಭಾಗ್ಯರು! ಗರ್ಭಾಧಾನದಿಂದ ಆರಂಭಿಸಿ ಅಂತ್ಯೇಷ್ಟಿಯವರೆಗಿನ ಎಲ್ಲ ಸಂಸ್ಕಾರಗಳನ್ನೂ ವಿಧಿಪೂರ್ವಕವಾಗಿ ಆಚರಿಸಿದ ಆ ಕಾಮ್ಯಕರ್ಮಿಗಳು ಪಿತೃಯಾನ ಅಥವಾ ಧೂಮಯಾನವೆಂಬ ಮಾರ್ಗದಿಂದ ಪಿತೃಲೋಕಕ್ಕೆ ಹೋಗಿ ಮತ್ತೆ ತಮ್ಮ ಸಂತಾನದ ವಂಶದಲ್ಲಿಯೇ ಜನಿಸುವರು. ಅಮ್ಮಾ! ಪಿತೃಲೋಕದ ಭೋಗಗಳನ್ನು ಅನುಭವಿಸಿದನಂತರ ಅವರ ಪುಣ್ಯವೆಲ್ಲಾ ಕ್ಷಯಹೊಂದಲಾಗಿ,

ದೇವತೆಗಳು ಅವರನ್ನು ಅಲ್ಲಿಯ ಐಶ್ವರ್ಯದಿಂದ ಜಾರಿಸಿಬಿಡುವರು. ಆಗ ಅವರು ವಿವಶರಾಗಿ ಮತ್ತೆ ಈ ಲೋಕದಲ್ಲೇ ಬಂದು ಬೀಳಬೇಕಾಗುವುದು. ಆದುದರಿಂದ ನೀನು ಸದಾ ಭಜಿಸಲು ಯೋಗ್ಯವಾದ ಚರಣಕಮಲಗಳುಳ್ಳ ಶ್ರೀಭಗವಂತನನ್ನು–ಆತನ ಕಲ್ಯಾಣಗುಣಗಳನ್ನು ಆಶ್ರಯಿಸಿರುವ ಭಕ್ತಿಯ ಮೂಲಕ–ಸರ್ವಪ್ರಕಾರಗಳಿಂದಲೂ ಭಜಿಸಬೇಕು. (ಶ್ಲೋಕ 5-22)

ವಾಸುದೇವೇ ಭಗವತಿ ಭಕ್ತಿಯೋಗಃ ಪ್ರಯೋಜಿತಃ ।
ಜನಯತ್ಯಾಶು ವೈರಾಗ್ಯಂ ಜ್ಞಾನಂ ಯದ್ಬ್ರಹ್ಮದರ್ಶನಮ್ ॥೨೩॥

ಶ್ರೀಭಗವಂತನಾದ ಶ್ರೀವಾಸುದೇವನನ್ನು ಕುರಿತು ಭಕ್ತಿಯೋಗವನ್ನು ಅನುಷ್ಠಾನಮಾಡಿದರೆ–ಅದು ಒಡನೆಯೇ ವೈರಾಗ್ಯವನ್ನೂ ಮತ್ತು ಬ್ರಹ್ಮ ಸಾಕ್ಷಾತ್ಕಾರರೂಪವಾದ ಜ್ಞಾನವನ್ನೂ ದೊರಕಿಸುವುದಮ್ಮಾ!

ಎಲ್ಲ ಇಂದ್ರಿಯವಿಷಯಗಳೂ ಸಮವೇ ಆಗಿವೆ. ಏಕೆಂದರೆ : ಎಲ್ಲಕ್ಕೂ ಹೃಷೀಕೇಶ (ಇಂದ್ರಿಯಾಧೀಶ) ನಾದ ಭಗವಂತನೇ ಸ್ವಾಮಿಯು! ವಿವೇಕಿಯಾದವನು ಎಲ್ಲ ಇಂದ್ರಿಯವೃತ್ತಿಗಳಿಂದಲೂ ಭಗವಂತನನ್ನೇ ಅನುಭವಿಸುವನು. ಪ್ರಿಯ, ಅಪ್ರಿಯಗಳೆಂಬ ಭೇದವನ್ನೆಣಿಸದೇ ಎಲ್ಲದರಲ್ಲೂ ಸಾಮ್ಯವನ್ನೇ ಕಾಣುವನು. ಸಂಗದೋಷರಹಿತನಾಗಿ–'ಇದು ಗ್ರಾಹ್ಯ', 'ಇದು ಗ್ರಾಹ್ಯವಲ್ಲ'–ಎಂಬ ಗುಣ-ದೋಷಗಳಿಂದಲೂ ರಹಿತನಾಗಿ, ಎಲ್ಲದರಲ್ಲಿಯೂ ಸಮವಾಗಿರುವ ತನ್ನ ಸ್ವರೂಪ-ಮಹಿಮೆಗಳಿಗೆ ಏರಿದವನಾಗಿ, ತನಗೆ ಆತ್ಮವಾಗಿರುವ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವನು. ಆ ಭಗವಂತನೇ ಜ್ಞಾನಸ್ವರೂಪನೂ, ಪರಬ್ರಹ್ಮವೂ, ಪರಮಾತ್ಮನೂ, ಈಶ್ವರನೂ, ಪರಮಪುರುಷನೂ ಆಗಿದ್ದಾನೆ. ನಾನಾರೂಪಗಳಲ್ಲಿ ಕಾಣಿಸುತ್ತಿರುವವನೂ ಆತನೋರ್ವನೇ. ಇಡೀ ಸಂಸಾರದಲ್ಲಿ ಪೂರ್ಣವಾಗಿ ಅನಾಸಕ್ತಿಯನ್ನು ಹೊಂದಿರುವುದೇ–ಯೋಗಿಗಳು ಆಚರಿಸುವ ಎಲ್ಲ ಯೋಗಸಾಧನೆಗಳಿಗೂ ಏಕಮಾತ್ರ ಉದ್ದೇಶವಾಗಿದೆ. ಪರಮಾತ್ಮನು ಏಕಮಾತ್ರನಾಗಿ, ಜ್ಞಾನಸ್ವರೂಪನಾಗಿ, ತ್ರಿಗುಣಾತೀತನಾಗಿದ್ದರೂ ಶಬ್ದವೇ ಮುಂತಾದ ಧರ್ಮಗಳುಳ್ಳ ಬಗೆ-ಬಗೆಯ ಪದಾರ್ಥಗಳೆಲ್ಲಕ್ಕೂ ಆತ್ಮವಾಗಿರುವುದರಿಂದ ಭ್ರಾಂತಿಯಿಂದ ನಾನಾಪದಾರ್ಥಗಳೇ ಆಗಿರುವಂತೆ ತೋರುತ್ತಾನೆ. ಅಮ್ಮಾ! ಮೊದಲು ಮಹತ್ತತ್ತ್ವದಿಂದ ಅಹಂಕಾರತತ್ತ್ವವು ಪರಿಣಾಮದಿಂದ ಉಂಟಾಗಿ, ಅದ

ರಲ್ಲಿ ಸಾತ್ವಿಕ-ರಾಜಸ ಮತ್ತು ತಾಮಸಗಳೆಂಬ ಮೂರು ಬಗೆಗಳಾದುವು. ಆ ತತ್ತ್ವವೂ ಮತ್ತು ಅದರಲ್ಲಿ ಪೃಥಿವಿಯೇ ಮುಂತಾದ ಭೂತಗಳ ಸ್ವರೂಪದಿಂದ ಐದು ಬಗೆಯಾಗಿ ವಿಭಾಗಹೊಂದಿದ ತತ್ತ್ವಗಳೂ, ಆ ಎಲ್ಲ ತತ್ತ್ವಗಳ ಸಮುದಾಯರೂಪವಾಗಿರುವ ಅಂಡವೂ ಮತ್ತು ಅದರಲ್ಲಿ ಕಾಣಿಸಿಕೊಂಡ ಬ್ರಹ್ಮದೇವರೂ–ಈ ಎಲ್ಲವೂ ಮೂಲಪ್ರಕೃತಿವಿಶಿಷ್ಟನಾದ ಪರಬ್ರಹ್ಮದಿಂದಲೇ ಉತ್ಪನ್ನರಾಗುತ್ತಾರೆ. ವಿರಕ್ತನಾಗಿ, ನಿಸ್ಸಂಗನಾಗಿ, ದೃಢಚಿತ್ತನಾಗಿರುವ ಯೋಗಿಯು ಇದನ್ನು ಶ್ರದ್ಧೆಯಿಂದಲೂ, ಭಕ್ತಿಯಿಂದಲೂ, ವೈರಾಗ್ಯದಿಂದಲೂ ಚೆನ್ನಾಗಿ ತಿಳಿದುಕೊಳ್ಳಬಹುದಮ್ಮಾ! (ಶ್ಲೋಕ 24-30)

ಪೂಜನೀಯಳಾದ ಮಾತೆಯೇ! ಇದುವರೆಗೂ ನಾನು ನಿನಗೆ ಬ್ರಹ್ಮ ದರ್ಶನರೂಪವಾದ ಶ್ರೇಷ್ಠತಮವಾದ ಜ್ಞಾನವನ್ನು ವಿವರಿಸಿದೆನು. ಅದಕ್ಕೆ ಸಂಬಂಧಪಟ್ಟಂತೆ ಪ್ರಕೃತಿ ಮತ್ತು ಪುರುಷರ ಸ್ವರೂಪವನ್ನೂ ಯಥಾವತ್ತಾಗಿ ತಿಳಿಸಿದೆನು. ನನ್ನನ್ನು ಕುರಿತಾದ ತ್ರಿಗುಣಾತೀತವಾದ ಜ್ಞಾನಯೋಗ ಮತ್ತು ನನ್ನಲ್ಲಿಯೇ ನೆಲೆಗೊಂಡ ಭಕ್ತಿಯೋಗ–ಇವೆರಡಕ್ಕೂ ಫಲವೊಂದೇ. ಅದನ್ನೇ 'ಭಗವಂತ' ಎಂಬ ಶಬ್ದದಿಂದ ಕರೆಯುತ್ತಾರೆ. (ಶ್ಲೋಕ 31-32)

ಯಥೇನ್ದ್ರಿಯೈಃ ಪೃಥಗ್ದ್ವಾರೈರರ್ಥೋ ಬಹುಗುಣಾಶ್ರಯಃ ।
ಏಕೋ ನಾನೇಯತೇ ತದ್ವದ್ಭಗವಾನ್ ಶಾಸ್ತ್ರವರ್ತ್ಮಭಿಃ ॥೩೩॥

ರೂಪ-ರಸ-ಗಂಧ–ಮುಂತಾದ ಅನೇಕಗುಣಗಳಿಂದ ಒಂದು ಪದಾರ್ಥವು ಕೂಡಿದೆ ಎಂದು ಇಟ್ಟುಕೋ. ಆ ಪದಾರ್ಥವು ಒಂದೇ ಆದರೂ ಬೇರೆ-ಬೇರೆ ಇಂದ್ರಿಯಗಳಿಂದ, ಬೇರೆ-ಬೇರೆ ರೂಪಗಳಲ್ಲಿ ಅದು ಅನುಭವಕ್ಕೆ ಬರುತ್ತದೆಯಲ್ಲವೇ? ಹಾಗೆಯೇ ಶಾಸ್ತ್ರಗಳು ಹೇಳುವ ಬೇರೆ-ಬೇರೆ ಮಾರ್ಗಗಳಿಂದ ನೇಕಪ್ರಕಾರಗಳಲ್ಲಿ ಅನುಭವಕ್ಕೆ ಬರುವ ಶ್ರೀಭಗವಂತನು ಒಬ್ಬನೇ ಆಗಿದ್ದಾನಮ್ಮಾ.

ಕ್ರಿಯಯಾ ಕ್ರತುಭಿರ್ದಾನೈಸ್ತಪಃಸ್ವಾಧ್ಯಾಯಮರ್ಶನೈಃ ।
ಆತ್ಮೇನ್ದ್ರಿಯಜಯೇನಾಪಿ ಸಂನ್ಯಾಸೇನ ಚ ಕರ್ಮಣಾಮ್ ॥೩೪॥

ಯೋಗೇನ ವಿವಿಧಾಙ್ಗೇನ ಭಕ್ತಿಯೋಗೇನ ಚೈವ ಹಿ ।
ಧರ್ಮೇಣೋಭಯಚಿಹ್ನೇನ ಯಃ ಪ್ರವೃತ್ತಿನಿವೃತ್ತಿಮಾನ್ ॥೩೫॥

ಆತ್ಮತತ್ತ್ವಾವಬೋಧೇನ ವೈರಾಗ್ಯೇಣ ದೃಢೇನ ಚ ।
ಈಯತೇ ಭಗವಾನೇಭಿಃ ಸಗುಣೋ ನಿರ್ಗುಣಃ ಸ್ವದೃಕ್ ॥೩೬॥

ಬಗೆ-ಬಗೆಯ ಕರ್ಮಕಲಾಪಗಳು, ಯಜ್ಞಗಳು, ದಾನಗಳು, ತಪಸ್ಸುಗಳು, ವೇದಾಧ್ಯಯನ, ವೇದವನ್ನು ಕುರಿತ ವಿಚಾರ, ಮನಸ್ಸು ಮತ್ತು ಇಂದ್ರಿಯಗಳ ಸಂಯಮ, ಕರ್ಮಗಳ ತ್ಯಾಗ, ಬಗೆ-ಬಗೆಯ ಅಂಗಗಳುಳ್ಳ ಯೋಗ, ಭಕ್ತಿಯೋಗ, ಪ್ರವೃತ್ತಿ ಮತ್ತು ನಿವೃತ್ತಿರೂಪವಾದ ಸಕಾಮ-ನಿಷ್ಕಾಮಧರ್ಮಗಳು, ಆತ್ಮತತ್ತ್ವದ ಜ್ಞಾನ ಮತ್ತು ದೃಢವಾದ ವೈರಾಗ್ಯ–ಈ ಎಲ್ಲ ಸಾಧನಗಳಿಂದಲೂ ಸಗುಣನೂ, ನಿರ್ಗುಣನೂ, ಸ್ವಯಂಪ್ರಕಾಶನೂ ಆದ ಶ್ರೀಭಗವಂತನೇ ಹೊಂದಲ್ಪಡುವನಮ್ಮಾ!

ಪ್ರಾವೋಚಂ ಭಕ್ತಿಯೋಗಸ್ಯ ಸ್ವರೂಪಂ ತೇ ಚತುರ್ವಿಧಮ್ ।
ಕಾಲಸ್ಯ ಚಾವ್ಯಕ್ತಗತೇರ್ಯೋಽನ್ತರ್ಧಾವತಿ ಜನ್ತುಷು ॥೩೭॥

ಜನನಿಯೇ! ನಾನು ನಿನಗೆ ಸಾತ್ತ್ವಿಕ-ರಾಜಸ-ತಾಮಸ ಮತ್ತು ನಿಷ್ಕಾಮಗಳೆಂಬ ನಾಲ್ಕು ಪ್ರಕಾರಗಳಿಂದ ಕೂಡಿದ ಭಕ್ತಿಯೋಗವನ್ನು ವರ್ಣಿಸಿದ್ದೇನೆ. ಯಾವುದು ಪ್ರಾಣಿಗಳ ಜನ್ಮವೇ ಮುಂತಾದ ವಿಕಾರಗಳಿಗೆ ಕಾರಣವಾಗಿದೆಯೋ ಮತ್ತು ಯಾವುದರ ಗತಿಯು ತಿಳಿಯುವುದಿಲ್ಲವೋ–ಅಂತಹ ಕಾಲದ ಸ್ವರೂಪವನ್ನೂ ವಿವರಿಸಿದ್ದೇನೆ.

ಜೀವಸ್ಯ ಸಂಸೃತೀರ್ಬಹ್ವೀರವಿದ್ಯಾಕರ್ಮನಿರ್ಮಿತಾಃ ।
ಯಾಸ್ವಙ್ಗ ಪ್ರವಿಶನ್ನಾತ್ಮಾ ನ ವೇದ ಗತಿಮಾತ್ಮನಃ ॥೩೮॥

ಅವಿದ್ಯೆಯಿಂದ ಉಂಟಾದ ಕರ್ಮದ ಕಾರಣ ಜೀವಕ್ಕೆ ಅನೇಕ ಗತಿಗಳು ಉಂಟಾಗುತ್ತವೆ. ಅವುಗಳಿಗೆ ಹೋದಾಗ ಜೀವನು ತನ್ನ ಸ್ವರೂಪವನ್ನು ಗುರುತಿಸಿಕೊಳ್ಳಲಾರನು.

ನೈತತ್ಖಲಾಯೋಪದಿಶೇನ್ನಾವಿನೀತಾಯ ಕರ್ಹಿಚಿತ್ ।
ನ ಸ್ತಬ್ಧಾಯ ನ ಭಿನ್ನಾಯ ನೈವ ಧರ್ಮಧ್ವಜಾಯ ಚ ॥೩೯॥

ನಾನು ನಿನಗೆ ಮಾಡಿರುವ ಈ ಜ್ಞಾನೋಪದೇಶವನ್ನು ದುಷ್ಟರಿಗೂ, ಅವಿನೀತರಿಗೂ, ಅಹಂಕಾರಿಗಳಿಗೂ, ದುರಾಚಾರಿಗಳಿಗೂ ಮತ್ತು ಧರ್ಮದ ಸೋಗುಹಾಕುವ ದಾಂಭಿಕರಿಗೂ ಹೇಳಬಾರದಮ್ಮಾ!

ನ ಲೋಲುಪಾಯೋಪದಿಶೇನ್ನ ಗೃಹಾರೂಢಚೇತಸೇ ।
ನಾಭಕ್ತಾಯ ಚ ಮೇ ಜಾತು ನ ಮದ್ಭಕ್ತದ್ವಿಷಾಮಪಿ ॥೪೦॥

ಹಾಗೆಯೇ ವಿಷಯಲಂಪಟರು, ಸಂಸಾರದಲ್ಲಿಯೇ ಆಸಕ್ತರಾದವರು, ನನ್ನ ಭಕ್ತರಲ್ಲದವರು ಅಥವಾ ನನ್ನ ಭಕ್ತರನ್ನು ದ್ವೇಷಿಸುವವರು–ಇವರಿಗೂ ಇದನ್ನು ಉಪದೇಶಿಸಕೂಡದು.

ಶ್ರದ್ದಧಾನಾಯಾ ಭಕ್ತಾಯ ವಿನೀತಾಯಾನಸೂಯವೇ ।
ಭೂತೇಷು ಕೃತಮೈತ್ರಾಯ ಶುಶ್ರೂಷಾಭಿರತಾಯ ಚ ॥೪೧॥

ಬಹಿರ್ಜಾತವಿರಾಗಾಯ ಶಾನ್ತಚಿತ್ತಾಯ ದೀಯತಾಮ್ ।
ನಿರ್ಮತ್ಸರಾಯ ಶುಚಯೇ ಯಸ್ಯಾಹಂ ಪ್ರೇಯಸಾಂ ಪ್ರಿಯಃ ॥೪೨॥

ಹಾಗಾದರೆ ಇದರ ಉಪದೇಶವನ್ನು ಪಡೆಯಲು ಯಾವನು ಯೋಗ್ಯನು? ಎಂದರೆ : ಯಾವನು ಅತ್ಯಂತ ಶ್ರದ್ಧಾವಂತನಾಗಿ, ಭಕ್ತನಾಗಿ, ವಿನಯಶಾಲಿಯಾಗಿ, ಇತರರಲ್ಲಿ ಅಸೂಯಾರಹಿತನಾಗಿ (ಗುಣಗಳಲ್ಲಿ ದೋಷಬುದ್ಧಿಯನ್ನು ಇಡದವನಾಗಿ), ಎಲ್ಲ ಪ್ರಾಣಿಗಳಲ್ಲೂ ಸ್ನೇಹವುಳ್ಳವನಾಗಿ, ಗುರುಶುಶ್ರೂಷೆಯಲ್ಲಿ ತತ್ಪರನಾಗಿ, ಹೊರಗಿನ ವಿಷಯಗಳಲ್ಲಿ ಆಸಕ್ತಿರಹಿತನಾಗಿ, ಶಾಂತಚಿತ್ತನಾಗಿ, ಮಾತ್ಸರ್ಯರಹಿತನಾಗಿ, ಪವಿತ್ರಚಿತ್ತದಿಂದ ಕೂಡಿ ನನ್ನನ್ನು ಪರಮಪ್ರಿಯತಮನೆಂದು ತಿಳಿಯುತ್ತಾನೆಯೋ–ಅವನಿಗೆ ಮಾತ್ರವೇ ಇದನ್ನು ಅವಶ್ಯವಾಗಿ ಉಪದೇಶಮಾಡಬೇಕು.

ಯ ಇದಂ ಶೃಣುಯಾದಮ್ಬ ಶ್ರದ್ಧಯಾ ಪುರುಷಃ ಸಕೃತ್ ।
ಯೋ ವಾಭಿಧತ್ತೇ ಮಚ್ಚಿತ್ತಃ ಸ ಹ್ಯೇತಿ ಪದವೀಂ ಚ ಮೇ ॥೪೩॥

ತಾಯೇ! ಯಾವನು ನನ್ನಲ್ಲಿ ಮನಸ್ಸನ್ನು ಇರಿಸಿ, ಶ್ರದ್ಧೆಯೊಡನೆ ಇದನ್ನು ಒಂದು ಬಾರಿಯಾದರೂ ಕೇಳುವನೋ ಅಥವಾ ಹೇಳುವನೋ–ಆ ಸುಕೃತಿಯು ನನ್ನ ಪರಮಪದವನ್ನೇ ಪಡೆಯುವನು."

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ತೃತೀಯಸ್ಕಂಧದ ೩೨ನೆಯ ಅಧ್ಯಾಯವು ಮುಗಿಯಿತು.

ದೇವಹೂತಿಗೆ ತತ್ತ್ವಜ್ಞಾನವುಂಟಾಗಿ ಮೋಕ್ಷ ದೊರೆತುದು

ಮೈತ್ರೇಯಮಹರ್ಷಿಗಳು ವಿದುರನಿಗೆ ಹೇಳುತ್ತಾರೆ :

ಏವಂ ನಿಶಮ್ಯ ಕಪಿಲಸ್ಯ ವಚೋ ಜನಿತ್ರೀ
ಸಾ ಕರ್ದಮಸ್ಯ ದಯಿತಾ ಕಿಲ ದೇವಹೂತಿಃ ।
ವಿಸ್ರಸ್ತಮೋಹಪಟಲಾ ತಮಭಿಪ್ರಣಮ್ಯ
ತುಷ್ಟಾವ ತತ್ತ್ವವಿಷಯಾಙ್ಕಿತಸಿದ್ಧಿಭೂಮಿಮ್ ॥೧॥

ಅಯ್ಯಾ, ವಿದುರನೇ! ಕೇಳು. ಶ್ರೀಕಪಿಲಭಗವಂತನ ಆ ವಚನಗಳನ್ನು ಕೇಳಿ ಕರ್ದಮರ ಪ್ರಿಯಪತ್ನಿಯಾದ ಮಾತೆ ದೇವಹೂತಿಯ ಮೋಹದ ತೆರೆಯು ಕಳಚಿಹೋಯಿತು. ಆಕೆಯು ತತ್ತ್ವಪ್ರತಿಪಾದಕವಾದ ಸಾಂಖ್ಯಶಾಸ್ತ್ರ ಜ್ಞಾನದ ಆಧಾರಭೂಮಿಯಾಗಿರುವ ಶ್ರೀಕಪಿಲದೇವನಿಗೆ ನಮಸ್ಕಾರಮಾಡಿ ಅವನನ್ನು ಸ್ತುತಿಸತೊಡಗಿದಳು :

ಅಥಾಪ್ಯಜೋಽನ್ತಃಸಲಿಲೇ ಶಯಾನಂ
ಭೂತೇನ್ದ್ರಿಯಾರ್ಥಾತ್ಮಮಯಂ ವಪುಸ್ತೇ ।
ಗುಣಪ್ರವಾಹಂ ಸದಶೇಷಬೀಜಂ
ದಧ್ಯೌ ಸ್ವಯಂ ಯಜ್ಜಠರಾಬ್ಜಜಾತಃ ॥೨॥

“ಪ್ರಭುವೇ! ಬ್ರಹ್ಮದೇವರಿಗೂ ತಂದೆಯಾದ ಆದಿಮೂಲನು ನೀನು. ನಿನ್ನ ನಾಭಿಕಮಲದಿಂದಲೇ ಆ ಬ್ರಹ್ಮದೇವರು ಆವಿರ್ಭವಿಸಿದರು. ಪ್ರಳಯ ಕಾಲದ ಜಲದಲ್ಲಿ ಪವಡಿಸಿದ್ದ ಪಂಚಭೂತಗಳು, ಇಂದ್ರಿಯಗಳು, ಶಬ್ದಾದಿ ವಿಷಯಗಳು ಮನೋಮಯವಾದ ನಿನ್ನ ವಿಗ್ರಹವನ್ನೇ ಧ್ಯಾನಮಾಡಿದುವು. ಸತ್ತ್ವಾದಿಗುಣಗಳ ಪ್ರವಾಹದಿಂದ ಕೂಡಿರುವುದೂ, ಸತ್ತ್ವರೂಪವೂ ಮತ್ತು ಕಾರ್ಯ-ಕಾರಣಗಳೆರಡಕ್ಕೂ ಬೀಜರೂಪವಾಗಿರುವುದೂ ಆದ ನಿನ್ನ ದಿವ್ಯಮಂಗಳವಿಗ್ರಹವನ್ನೇ ಧ್ಯಾನಮಾಡಿದರಪ್ಪಾ!

ಸ ಏವ ವಿಶ್ವಸ್ಯ ಭವಾನ್ವಿಧತ್ತೇ
ಗುಣಪ್ರವಾಹೇಣ ವಿಭಕ್ತವೀರ್ಯಃ ।

ಸರ್ಗಾದ್ಯನೀಹೋಽವಿತಥಾಭಿಸನ್ಧಿ-
ರಾತ್ಮೇಶ್ವರೋಽತರ್ಕ್ಯಸಹಸ್ರಶಕ್ತಿಃ ॥೩॥

ಪ್ರಭೋ! ನೀನು ಸತ್ಯಸಂಕಲ್ಪನು. ಸರ್ವಜೀವಗಳಿಗೂ ಅಧಿ ಪತಿಯು. ಚಿಂತಿಸುವುದಕ್ಕೂ ಅಸಾಧ್ಯವಾಗಿರುವ ಸಾವಿರಾರು ಶಕ್ತಿಗಳಿಂದ ಸಂಪನ್ನನಾಗಿರುವವನು. ನೀನು ಕರ್ಮರಹಿತನಾಗಿದ್ದರೂ ಸತ್ಯಸಂಕಲ್ಪದಿಂದ ಸೃಷ್ಟಿಯೇ ಮುಂತಾದುವುಗಳನ್ನು ಮಾಡುತ್ತಿರುವೆ. ಗುಣಪರಿಣಾಮರೂಪ ವಾಗಿರುವ ಪ್ರಜಾಪತಿಗಳಿಗೆ ಆ ನಿನ್ನ ಶಕ್ತಿಯನ್ನು ಹಂಚಿಕೊಟ್ಟು ಅವರ ಮೂಲಕ ವಿಶ್ವದ ಸೃಷ್ಟಿಯೇ ಮೊದಲಾದವುಗಳನ್ನು ರಚಿಸುತ್ತಿರುವೆ.

ಸ ತ್ವಂ ಭೃತೋ ಮೇ ಜಠರೇಣ ನಾಥ
ಕಥಂ ನು ಯಸ್ಯೋದರ ಏತದಾಸೀತ್ ।
ವಿಶ್ವಂ ಯುಗಾನ್ತೇ ವಟಪತ್ರ ಏಕಃ
ಶೇತೇ ಸ್ಮ ಮಾಯಾಶಿಶುರಙ್ಘ್ರಿಪಾನಃ ॥೪॥

ದೇವ! ಪ್ರಳಯಕಾಲದಲ್ಲಿ ಈ ಸಮಸ್ತವಿಶ್ವವನ್ನೂ ಹೊಟ್ಟೆಯಲ್ಲಿ ಲಯಗೊಳಿಸಿಕೊಂಡು ಮಾಯಾಶಿಶುವಿನ ರೂಪದಲ್ಲಿ ಕಾಲುಹೆಬ್ಬೆರಳನ್ನು ಚೀಪುತ್ತಾ ಏಕಮಾತ್ರನಾಗಿ ಆಲದ ಮರದ ಎಲೆಯ ಮೇಲೆ ಪವಡಿಸಿರುವ ನಿನ್ನನ್ನು ನಾನು ನನ್ನ ಗರ್ಭದಲ್ಲಿ ಧರಿಸಿದ್ದೆನಲ್ಲಾ ; ಇದು ಎಂತಹ ಆಶ್ಚರ್ಯ!

ತ್ವಂ ದೇಹತನ್ತ್ರಃ ಪ್ರಶಮಾಯ ಪಾಪ್ಮನಾಂ
ನಿದೇಶಭಾಜಾಂ ಚ ವಿಭೋ ವಿಭೂತಯೇ ।
ಯಥಾವತಾರಾಸ್ತವ ಸೂಕರಾದಯ-
ಸ್ತಥಾಯಮಪ್ಯಾತ್ಮಪಥೋಪಲಬ್ಧಯೇ ॥೫॥

ಸ್ವಾಮಿ! ನೀನು ಪಾಪಿಗಳನ್ನು ದಮನಗೊಳಿಸುವುದಕ್ಕಾಗಿಯೂ ಮತ್ತು ಅಪ್ಪಣೆಯನ್ನು ಪಾಲಿಸುವಂತಹ ಭಕ್ತರಿಗೆ ಏಳಿಗೆಯನ್ನೂ–ಮಂಗಳ ವನ್ನೂ ಉಂಟುಮಾಡುವುದಕ್ಕಾಗಿಯೂ ಸ್ವೇಚ್ಛೆಯಿಂದಲೇ ದೇಹವನ್ನು ಆಗಾಗ್ಗೆ ಧರಿಸುವೆ. ವರಾಹವೇ ಮುಂತಾದ ಅವತಾರಗಳಂತೆಯೇ ಈ ಕಪಿಲಾವತಾರವನ್ನೂ ಮುಮುಕ್ಷುಗಳಿಗೆ ಜ್ಞಾನಮಾರ್ಗವನ್ನು ತೋರಿಸುವುದ ಕ್ಕೋಸ್ಕರವೇ ಕೈಗೊಂಡಿದ್ದೀಯೆ.

ಯನ್ನಾಮಧೇಯಶ್ರವಣಾನುಕೀರ್ತನಾ-
ದ್ಯತ್ಪ್ರಹ್ವಣಾದ್ಯತ್ಸ್ಮರಣಾದಪಿ ಕ್ವಚಿತ್ ।
ಶ್ವಾದೋಽಪಿ ಸದ್ಯಃ ಸವನಾಯ ಕಲ್ಪತೇ
ಕುತಃ ಪುನಸ್ತೇ ಭಗವನ್ನು ದರ್ಶನಾತ್ ॥೬॥

ಓ ಭಗವಂತನೇ! ನಿನ್ನ ನಾಮಗಳನ್ನು ಕೇಳಿದರೆ ಅಥವಾ ಸಂಕೀರ್ತನೆ ಮಾಡಿದರೆ ಅಥವಾ ಅಪ್ಪಿತಪ್ಪಿ ಆಗಾಗ್ಗೆ ನಿನ್ನ ನಮಸ್ಕಾರ ಮತ್ತು ಸ್ಮರಣೆಯನ್ನು ಮಾಡಿದರೂ ಕೂಡ-ನಾಯಿಯ ಮಾಂಸವನ್ನು ತಿನ್ನುವ ಚಂಡಾಲನೂ ಒಡನೆಯೇ ಸೋಮಯಜ್ಞಮಾಡಿದ ಸದ್ಬ್ರಾಹ್ಮಣನಂತೆ-ಪವಿತ್ರನಾಗುವನು. ಹೀಗಿರುವಾಗ ಸಾಕ್ಷಾತ್ ನಿನ್ನ ದರ್ಶನವನ್ನೇ ಮಾಡಿದವನು ಕೃತಕೃತ್ಯ ನಾಗುವನೆಂಬುದನ್ನು ಬೇರೆ ಹೇಳಬೇಕೇ?

ಅಹೋ ಬತ ಶ್ವಪಚೋಽತೋ ಗರೀಯಾ-
ನ್ಯಜ್ಜಿಹ್ವಾಗ್ರೇ ವರ್ತತೇ ನಾಮ ತುಭ್ಯಮ್ ।
ತೇಪುಸ್ತಪಸ್ತೇ ಜುಹುವುಃ ಸಸ್ನುರಾರ್ಯಾ
ಬ್ರಹ್ಮಾನೂಚುರ್ನಾಮ ಗೃಣನ್ತಿ ಯೇ ತೇ ॥೭॥

ಆತನ ನಾಲಿಗೆಯ ತುದಿಯಲ್ಲಿ ನಿನ್ನ ನಾಮಧೇಯವು ಬೆಳಗುತ್ತಿದೆ ಯಲ್ಲವೇ? ಆದ್ದರಿಂದ ಆ ಚಂಡಾಲನೂ ಸರ್ವಶ್ರೇಷ್ಠನೇ ಆಗುವನು. ನಿನ್ನ ನಾಮಧೇಯವನ್ನು ಉಚ್ಚಾರಣೆಮಾಡಿದವರು ತಪಸ್ಸು, ಹೋಮತೀರ್ಥಸ್ನಾನ ಮತ್ತು ಸದಾಚಾರಪರಿಪಾಲನೆಗಳನ್ನು ಮಾಡಿದಂತೆಯೇ ಸರಿ.*

ತಂ ತ್ವಾಮಹಂ ಬ್ರಹ್ಮ ಪರಂ ಪುಮಾಂಸಂ
ಪ್ರತ್ಯಕ್ಸ್ರೋತಸ್ಯಾತ್ಮನಿ ಸಂವಿಭಾವ್ಯಮ್ ।
ಸ್ವತೇಜಸಾ ಧ್ವಸ್ತಗುಣಪ್ರವಾಹಂ
ವನ್ದೇ ವಿಷ್ಣುಂ ಕಪಿಲಂ ವೇದಗರ್ಭಮ್ ॥೮॥

ಸ್ವಾಮಿ! ನೀನು ಸಾಕ್ಷಾತ್ ಪರಬ್ರಹ್ಮನು. ಪರಮಪುರುಷನು.

---

* 'ಹರಿ' ಎಂಬ ಎರಡು ಅಕ್ಷರಗಳನ್ನು ಉಚ್ಚರಿಸಿದವನು ಮೋಕ್ಷಕ್ಕೆ ಪ್ರಯಾಣಮಾಡಲು ಕಟಿಬದ್ಧನಾದಂತೆಯೇ ಸರಿ."

ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ।
ಸಕೃದುಚ್ಚಾರಿತಂ ಯೇನ ಹರಿರಿತ್ಯಕ್ಷರದ್ವಯಮ್ ॥ (ಶ್ಲೋಕ ೬-೭)

ಚಿತ್ತದ ವೃತ್ತಿಗಳ ಪ್ರವಾಹವನ್ನು ಒಳಮುಖವಾಗಿಸಿ ಅದರ ಒಳಗೇ ಧ್ಯಾನಿಸಲ್ಪಡಬೇಕಾದವನು. ಮಾಯೆಯ ಕಾರ್ಯವಾದ ಗುಣಪ್ರವಾಹವನ್ನು ತನ್ನದೇ ಆದ ತೇಜಸ್ಸಿನಿಂದ ಶಮನಗೊಳಿಸುವನು. ಸಂಪೂರ್ಣವಾದ ವೇದತತ್ತ್ವವು ನಿನ್ನ ಉದರದಲ್ಲೇ ಅಡಗಿದೆಯಪ್ಪಾ. ಇಂತಹ ಸಾಕ್ಷಾತ್ ವಿಷ್ಣುರೂಪಿಯಾದ ಕಪಿಲದೇವನೇ! ನಿನಗೆ ನಮಸ್ಕಾರವು."

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ತಾಯಿಯು ತನ್ನನ್ನು ಹೀಗೆ ಸ್ತೋತ್ರಮಾಡಲು ಮಾತೃವತ್ಸಲನಾದ, ಪರಮಪುರುಷನಾದ ಶ್ರೀಕಪಿಲಭಗವಂತನು ಗಂಭೀರವಾದ ವಾಣಿಯಿಂದ ಹೇಳಿದನು :

"ಓ ಜನನಿಯೇ! ನಾನು ನಿನಗೆ ಹೇಳಿದ ಈ ಸುಗಮವಾದ ಮಾರ್ಗವನ್ನು ಅವಲಂಬಿಸಿ ನೀನು ಶೀಘ್ರದಲ್ಲೇ ಪರಮಪದಕ್ಕೇರುವೆ. ನನ್ನ ಈ ಮತದಲ್ಲಿ ಶ್ರದ್ಧೆಯನ್ನಿಡು. ಬ್ರಹ್ಮವಾದಿಗಳು ಸೇವನೆಮಾಡಿರುವ ಸನ್ಮತ್ರವಿದು. ಇದರ ಮೂಲಕ ನೀನು ಹುಟ್ಟು-ಸಾವುಗಳಿಲ್ಲದೇ ಇರುವ ನನ್ನನ್ನು ಹೊಂದುವೆ. ಈ ಮತವನ್ನರಿಯದವರು ಹುಟ್ಟು-ಸಾವುಗಳ ಚಕ್ರಕ್ಕೆ ಸಿಕ್ಕಿಹಾಕಿಕೊಳ್ಳುತ್ತಲೇ ಇರುವರು."

ಶ್ರೀಮೈತ್ರೇಯರು ಹೇಳುತ್ತಾರೆ :

ಅಪ್ಪಾ, ವಿದುರ! ಶ್ರೀಕಪಿಲಭಗವಂತನು ಹೀಗೆ ತನ್ನ ಶ್ರೇಷ್ಠವಾದ ಆತ್ಮಜ್ಞಾನವನ್ನು ಉಪದೇಶಿಸಿ, ಬ್ರಹ್ಮವಾದಿನಿಯಾದ ಆ ತಾಯಿಯ ಅನುಮತಿಯನ್ನು ಪಡೆದು ಅಲ್ಲಿಂದ ಹೊರಟುಹೋದನು. ಬಳಿಕ ದೇವಹೂತಿಯು–ಸರಸ್ವತೀನದಿಗೆ ಶಿರೋಭೂಷಣದಂತಿದ್ದ ತನ್ನ ಆ ಆಶ್ರಮದಲ್ಲಿ ಪುತ್ರನು ಉಪದೇಶಮಾಡಿದ ಯೋಗಸಾಧನೆಯ ಮೂಲಕ ಯೋಗಾಭ್ಯಾಸವನ್ನು ಮಾಡುತ್ತಾ ಸಮಾಧಿಯಲ್ಲಿ ನಿರತಳಾದಳು. ದಿನಕ್ಕೆ ಮೂರು ಬಾರಿ ಸ್ನಾನಮಾಡುತ್ತಿದ್ದುದರಿಂದ ಆಕೆಯ ಗುಂಗುರುಕೂದಲುಗಳು ಮಹಾಜಟೆಗಳ ರೂಪವನ್ನು ತಾಳಿದುವು. ನಾರುಮಡಿಗಳನ್ನು ಧರಿಸಿದ ಆಕೆಯ ದೇಹವು ಉಗ್ರತಪಸ್ಸಿನಿಂದ ದುರ್ಬಲವಾಗಿಬಿಟ್ಟಿತು. ಆಕೆಯು ಕರ್ದಮಪ್ರಜಾಪತಿಗಳ ತಪಸ್ಸು ಮತ್ತು ಯೋಗಬಲಗಳಿಂದ ತನಗೆ

ದೊರಕಿದ್ದ, ದೇವತೆಗಳೂ ಆಸೆಪಡಲು ಯೋಗ್ಯವಾಗಿದ್ದ, ಅನುಪಮವಾದ ಗಾರ್ಹಸ್ಥ್ಯಸುಖವನ್ನು ತೊರೆದುಬಿಟ್ಟಳು. ಆಕೆಗೆ ದೊರೆತಿದ್ದ ಸುಖ-ಸಂಪತ್ತುಗಳಾದರೂ ಎಂತಹುದು! ಹಾಲಿನ ನೊರೆಯಂತೆ ಬಿಳುಪಾದ ಹಾಸಿಗೆಗಳೇನು, ಚಿನ್ನದ ಅಲಂಕಾರಗಳಿಂದ ಕೂಡಿದ ದಂತದ ಮಂಚಗಳೇನು, ಮೆದುವಾದ ಮೆತ್ತೆಗಳಿಂದ ಕೂಡಿದ ಚಿನ್ನದ ಪೀಠಗಳೇನು, ಮಹಾಮರಕತಮಣಿಗಳಿಂದ ಅಲಂಕೃತಗಳಾಗಿದ್ದ, ಸ್ವಚ್ಛವಾದ ಸ್ಫಟಿಕದ ಗೋಡೆಗಳಲ್ಲಿ ಕೆತ್ತಲ್ಪಟ್ಟಿದ್ದ, ದೀಪದ ಮಲ್ಲಿ (ಬೊಂಬೆ)ಗಳ ಕೈಗಳಲ್ಲಿ ಸಲೆಬೆಳಗುತ್ತಿದ್ದ ರತ್ನದೀಪಗಳೇನು–ಇವುಗಳಿಂದ ಶೋಭಿಸುತ್ತಿದ್ದ ದಿವ್ಯಭವನಗಳು ಮತ್ತು ಹೂಗೊಂಚಲುಗಳಿಂದ ಕಂಗೊಳಿಸುತ್ತಿದ್ದ ದಿವ್ಯಲೋಕದ ವೃಕ್ಷಸಮೂಹಗಳಿಂದಲೂ, ಕಿವಿಗಿಂಪಾಗಿ ಚಿಲಿ-ಪಿಲಿಗುಟ್ಟುತ್ತಿದ್ದ ಹಕ್ಕಿಗಳ ಜೋಡಿಗಳಿಂದಲೂ, ಮದಿಸಿ ಹಾಡುತ್ತಿದ್ದ ದುಂಬಿಗಳ ಝೇಂಕಾರದ ಇಂಚರಗಳಿಂದಲೂ, ಕಮಲಗಳ ಕಂಪಿನಿಂದ ಸುವಾಸಿತವಾಗಿದ್ದ ತಿಳಿಗೊಳಗಳಿಂದಲೂ ಸೊಗಸುಗೊಂಡು, ಕರ್ದಮರಿಂದ ಮುದ್ದಿಸಲ್ಪಟ್ಟು, ತಾನು ಅಲ್ಲಿಗೆ ವಿಹಾರಕ್ಕಾಗಿ ಪ್ರವೇಶಮಾಡಿದಾಗ ಗಂಧರ್ವಗಣಗಳಿಂದ ಸ್ತುತಿಸಲ್ಪ ಡುತ್ತಾ ಇಂದ್ರನ ಮಡದಿಯರಿಗೂ ಆಸೆ ಹುಟ್ಟಿಸುತ್ತಿದ್ದಂತಹ ಉದ್ಯಾನವನ ಗಳು! ಆದರೆ ಈ ಎಲ್ಲ ವೈಭವದ ಮಮತೆಯನ್ನೂ ಆಕೆಯು ತ್ಯಜಿಸಿ ಬಿಟ್ಟಳು. ಆದರೆ ಇಷ್ಟೆಲ್ಲವನ್ನೂ ತೊರೆದರೂ ಪುತ್ರನ ಅಗಲಿಕೆಯ ದುಃಖವು ಮಾತ್ರ ಆಕೆಯ ಮುಖದಲ್ಲಿ ಕೊಂಚ ಕಾಣಿಸುತ್ತಿತ್ತು. (ಶ್ಲೋಕ 9-20)

ಪತಿಯು ಅರಣ್ಯಕ್ಕೆ ತೆರಳಿದ ಬಳಿಕ ಪುತ್ರನೂ ಅಗಲಿ ದೂರ ಹೋಗಲು ಆಕೆಗೆ ತುಂಬಾ ವ್ಯಸನವಾಯಿತು. ಕರುವನ್ನಗಲಿದ ಹಸುವಿನಂತೆ–ಆಕೆಯು ತುಂಬಾ ಕಳವಳಗೊಂಡಳು. ಆತ್ಮಜ್ಞಾನಸಂಪನ್ನೆಯೇ ಆಗಿದ್ದರೂ ಆಕೆಗೆ ಈ ದುಃಖವು ಒಂದು ಪ್ರಮಾಣದಲ್ಲಿ ಇದ್ದೇ ಇತ್ತು. ಆದರೆ ಆಕೆಯು ತನ್ನ ಪುತ್ರನಾಗಿದ್ದ ಕಪಿಲರೂಪಿಯಾದ ಶ್ರೀಹರಿಯ ಧ್ಯಾನದಲ್ಲಿ ತೊಡಗಿ ಶೀಘ್ರದಲ್ಲಿಯೇ ವೈರಾಗ್ಯಸಂಪನ್ನೆಯಾಗಿ ಆ ವೈಭವದ ಮನೆಯನ್ನು ಬಿಟ್ಟುಬಿಟ್ಟಳು. ಅನಂತರ ಆಕೆಯು–ಶ್ರೀಕಪಿಲಭಗವಂತನು ತನಗೆ ಯಾವ ಧ್ಯಾನಯೋಗ್ಯವಾದ ಪ್ರಸನ್ನವದನಾರವಿಂದದಿಂದ ಕೂಡಿದ ಸ್ವರೂಪವನ್ನು ವರ್ಣನೆಮಾಡಿದ್ದನೋ–ಅದೇ ಸ್ವರೂಪದ ಒಂದೊಂದು ಅವಯವ

ವನ್ನೂ ಮತ್ತು ಇಡೀ ವಿಗ್ರಹವನ್ನೂ ಚಿಂತಿಸುತ್ತಾ ಧ್ಯಾನಮಗ್ನಳಾದಳು. ಭಗವದ್ಭಕ್ತಿಯ ಪ್ರವಾಹ, ಪ್ರಬಲವಾದ ವೈರಾಗ್ಯ ಮತ್ತು ಯಥೋಚಿತವಾದ ಕರ್ಮಾನುಷ್ಠಾನಗಳಿಂದ ಉಂಟಾದ, ಬ್ರಹ್ಮಸಾಕ್ಷಾತ್ಕಾರವನ್ನುಂಟುಮಾಡಿಸುವ ಜ್ಞಾನದಿಂದ ಚಿತ್ತವು ಶುದ್ಧವಾಗಿಬಿಟ್ಟಿದ್ದರಿಂದ ಆಕೆಯು ತನ್ನ ಸ್ವರೂಪಪ್ರಕಾಶದಿಂದ ಮಾಯೆಯ ಆವರಣವನ್ನು ಕಳಚಿಹಾಕುವ ಸರ್ವವ್ಯಾಪಕನಾದ ಪರಮಾತ್ಮನ ಧ್ಯಾನದಲ್ಲಿ ಮುಳುಗಿಹೋದಳು. ಹೀಗೆ ಜೀವಕ್ಕೆ ಅಧಿಷ್ಠಾನವಾಗಿರುವ ಪರಬ್ರಹ್ಮನಾದ ಶ್ರೀಭಗವಂತನಲ್ಲಿ ಬುದ್ಧಿಯು ನೆಲೆಗೊಳ್ಳಲು ಆಕೆಯು ಜೀವಭಾವವನ್ನು ಮರೆತು, ದೇವಭಾವ ಪರಿಪೂರ್ಣಳಾಗಿ, ಸಮಸ್ತಕ್ಲೇಶಗಳನ್ನೂ ಕಳೆದುಕೊಂಡು ಪರಮಾನಂದದಲ್ಲಿ ಮಗ್ನಳಾದಳು. ನಿರಂತರಸಮಾಧಿಯಲ್ಲಿ ಮುಳುಗಿದ್ದುದರಿಂದ ಆಕೆಗೆ ತ್ರಿಗುಣಗಳ ಭ್ರಮೆಯು ಹೊರಟುಹೋಯಿತು. ಶರೀರದ ಪರಿವೆಯೂ ತಪ್ಪಿಹೋಯಿತು. ಎಚ್ಚರಗೊಂಡವನು ಕನಸನ್ನು ಮರೆಯುವಂತೆ–ಆಕೆಯು ದೇಹವನ್ನು ಮರೆತುಬಿಟ್ಟಳು. ಆಕೆಯ ಶರೀರದ ಪೋಷಣೆಯನ್ನು ಇತರರು ಮಾಡುತ್ತಿದ್ದರು. ಆದರೆ ಮಾನಸಿಕವಾದ ಕ್ಲೇಶವು ಹೊರಟುಹೋಗಿದ್ದರಿಂದ ಆ ದೇಹವು ದುರ್ಬಲವಾಗಲಿಲ್ಲ. ಅದರ ತೇಜಸ್ಸು ಮತ್ತೂ ಹೆಚ್ಚಿತು. ಹೊರಗಿನ ಕೊಳೆಯಿಂದ ಕೂಡಿದ್ದ ಆ ದೇಹವು ಕೊಳೆಯ ಕಾರಣ ಹೊಗೆಯಾಡುವ ಅಗ್ನಿಯಂತೆ–ಶೋಭಿಸತೊಡಗಿತು. ಆಕೆಯ ತಲೆಗೂದಲುಗಳು ಕೆದರಿಹೋಗಿದ್ದುವು. ಬಟ್ಟೆಯೂ ಕಳಚಿಹೋಗಿತ್ತು. ಆದರೂ ನಿರಂತರವಾಗಿ ಅವಳ ಚಿತ್ತವು ಶ್ರೀವಾಸುದೇವನಲ್ಲಿಯೇ ಲಗ್ನವಾಗಿದ್ದುದರಿಂದ ಆಕೆಗೆ ತನ್ನ ತಪೋಯೋಗಮಯವಾಗಿದ್ದ ಶರೀರದ ಅರಿವು ಕಿಂಚಿತ್ತೂ ಇರಲಿಲ್ಲ. ದೈವವೇ ಆಕೆಯನ್ನು ರಕ್ಷಿಸುತ್ತಿತ್ತು. (ಶ್ಲೋಕ 21-29)

ವತ್ಸ, ವಿದುರ! ಹೀಗೆ ದೇವಹೂತಿಯು, ಶ್ರೀಕಪಿಲಭಗವಂತನು ಹೇಳಿದ್ದ ಮಾರ್ಗದಲ್ಲಿ ನಡೆದು ಸ್ವಲ್ಪಸಮಯಲ್ಲೇ ಪರಮಶಾಂತಿಸ್ವರೂಪನಾದ, ಶ್ರೀಪರಮಾತ್ಮನನ್ನು ಪಡೆದುಕೊಂಡಳು. ಎಲೈ ವೀರವರನೇ! ಆಕೆಯು ಸಿದ್ಧಿಯನ್ನು ಪಡೆದ ಪುಣ್ಯತಮವಾದ ಶ್ರೀಕ್ಷೇತ್ರವು 'ಸಿದ್ಧಪದ' ಎಂಬ ಹೆಸರಿನಿಂದ ತ್ರಿಲೋಕಗಳಲ್ಲೂ ಪ್ರಸಿದ್ಧವಾಯಿತು. ಸಾಧುಶ್ರೇಷ್ಠನೇ! ಯೋಗಸಾಧನದಿಂದ ಆಕೆಯ ಶರೀರದ ಕೊಳೆಯೆಲ್ಲವೂ ಕಳೆದುಹೋಗಿ

ಶುದ್ಧವಾಗಲಾಗಿ, ಅದು ಒಂದು ನದಿಯ ರೂಪವನ್ನು ತಾಳಿತು. ಅದು ಸಿದ್ಧಗಣಗಳಿಂದ ಸೇವಿಸಲ್ಪಡುತ್ತಾ ಸರ್ವಸಿದ್ಧಿಗಳನ್ನೂ ಕೊಡುವ ದಿವ್ಯ ಸ್ಥಾನವಾಗಿದೆ.

ಯೋಗಿವರೇಣ್ಯರಾದ ಭಗವಾನ್ ಕಪಿಲದೇವರು ತಾಯಿಯ ಆಜ್ಞೆ ಯನ್ನು ಪಡೆದು, ತಂದೆಯ ಆಶ್ರಮದಿಂದ ಈಶಾನ್ಯದಿಕ್ಕಿನ ಕಡೆಗೆ ಹೊರಟು ಹೋದರು. ಅಲ್ಲಿ ಸಮುದ್ರರಾಜನು ಸ್ವಯಂ ಅವರಿಗೆ ಪೂಜೆಮಾಡಿ, ಇರಲು ಜಾಗವನ್ನೂ ಸಮರ್ಪಣೆಮಾಡಿದನು. ಅಲ್ಲಿ ಅವರು ಮೂರು ಲೋಕಗಳಿಗೂ ಶಾಂತಿಯನ್ನು ಕೊಡುವುದಕ್ಕಾಗಿ ಯೋಗವನ್ನವಲಂಬಿಸಿ ಸಮಾಧಿಸ್ಥರಾಗಿದ್ದಾರೆ. ಸಿದ್ಧರು, ಚಾರಣರು, ಗಂಧರ್ವರು, ಮುನಿಗಳು ಮತ್ತು ಅಪ್ಸರಸ್ಸುಗಳು– ಎಲ್ಲರೂ ಅವರನ್ನು ಸ್ತುತಿಸುತ್ತಿದ್ದಾರೆ ಮತ್ತು ಸಾಂಖ್ಯಾಚಾರ್ಯರ ಸಮೂಹಗಳೂ ಅವರನ್ನು ಎಲ್ಲ ಪ್ರಕಾರಗಳಿಂದಲೂ ಸ್ತೋತ್ರಮಾಡುತ್ತಿವೆ.

ವತ್ಸ, ವಿದುರ! ನೀನು ಕೇಳಿದ್ದಂತೆ ನಾನು ನಿನಗೆ ಶ್ರೀಕಪಿಲಭಗ ವಂತರ ಮತ್ತು ದೇವಹೂತಿಯ ಪರಮಪವಿತ್ರವಾದ ಸಂವಾದವನ್ನು ತಿಳಿಸಿರುವೆನು. (ಶ್ಲೋಕ 30-36)

ಯ ಇದಮನುಶೃಣೋತಿ ಯೋಽಭಿಧತ್ತೇ
ಕಪಿಲಮುನೇರ್ಮತಮಾತ್ಮಯೋಗಗುಹ್ಯಮ್ ।
ಭಗವತಿ ಕೃತಧೀಃ ಸುಪರ್ಣಕೇತಾ–
ವುಪಲಭತೇ ಭಗವತ್ಪದಾರವಿನ್ದಮ್ ॥೩೭॥

ಶ್ರೀಕಪಿಲಭಗವಂತನ ಈ ಸಿದ್ಧಾಂತವು ಅಧ್ಯಾತ್ಮಯೋಗದ ಪರಮ ರಹಸ್ಯವಾಗಿದೆ. ಇದನ್ನು ಶ್ರವಣಮಾಡುವ ಅಥವಾ ವರ್ಣನೆಮಾಡುವ ಸುಕೃತಿಯು ಭಗವಂತನಾದ ಗರುಡಧ್ವಜನಲ್ಲಿ ನೆಟ್ಟ ಮನಸ್ಸುಳ್ಳವನಾಗಿ ಶೀಘ್ರ ಕಾಲದಲ್ಲಿಯೇ ಆ ಶ್ರೀಭಗವಂತನ ಅಡಿದಾವರೆಗಳನ್ನು ಸೇರಿಕೊಳ್ಳುವನು.''

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ತೃತೀಯಸ್ಕಂಧದ ೩೩ನೆಯ ಅಧ್ಯಾಯವು ಮುಗಿಯಿತು.

ತೃತೀಯಸ್ಕಂಧವು ಮುಗಿಯಿತು.

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ಶ್ರೀಮದ್ಭಾಗವತ

ಚತುರ್ಥಸ್ಕಂಧ ೧ನೆಯ ಅಧ್ಯಾಯ

ಸ್ವಾಯಂಭುವಮನುವಿನ ಕನ್ಯೆಯರ ವಂಶದ ವರ್ಣನೆ

ಜನ್ಮಾದ್ಯಸ್ಯ ಯತೋಽನ್ವಯಾದಿತರತ-
ಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ
ಮುಹ್ಯನ್ತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ
ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ
ಸತ್ಯಂ ಪರಂ ಧೀಮಹಿ ॥

ಮೈತ್ರೇಯಮಹರ್ಷಿಗಳು ವಿದುರನಿಗೆ ಹೇಳುತ್ತಾರೆ :

ಮನೋಸ್ತು ಶತರೂಪಾಯಾಂ ತಿಸ್ರಃ ಕನ್ಯಾಶ್ಚ ಜಜ್ಞಿರೇ ।
ಆಕೂತಿರ್ದೇವಹೂತಿಶ್ಚ ಪ್ರಸೂತಿರಿತಿ ವಿಶ್ರುತಾಃ ॥೧॥

ಆಕೂತಿಂ ರುಚಯೇ ಪ್ರಾದಾದಪಿ ಭ್ರಾತೃಮತೀಂ ನೃಪಃ ।
ಪುತ್ರಿಕಾಧರ್ಮಮಾಶ್ರಿತ್ಯ ಶತರೂಪಾನುಮೋದಿತಃ ॥೨॥

"ಎಲೈ ವಿದುರನೇ! ಕೇಳು. ಸ್ವಾಯಂಭುವಮನುವಿಗೆ ತನ್ನ ಪತ್ನಿಯಾದ ಶತರೂಪಾದೇವಿಯಲ್ಲಿ ಪ್ರಿಯವ್ರತ ಮತ್ತು ಉತ್ತಾನಪಾದರೆಂಬ ಇಬ್ಬರು ಪುತ್ರರಲ್ಲದೇ ಮೂವರು ಪುತ್ರಿಯರೂ ಜನಿಸಿದರು. ಅವರು ಕ್ರಮವಾಗಿ ಆಕೂತಿ, ದೇವಹೂತಿ ಮತ್ತು ಪ್ರಸೂತಿ ಎಂಬ ಹೆಸರುಗಳಿಂದ ವಿಖ್ಯಾತರಾದರು. ಅವರಲ್ಲಿ ಆಕೂತಿಯನ್ನು ಮನುವು ರುಚಿ ಎಂಬ ಪ್ರಜಾಪತಿಗೆ

ವಿವಾಹಮಾಡಿಕೊಟ್ಟನು. ತನ್ನ ಆ ಪುತ್ರಿಗೆ ಸೋದರರು ಇದ್ದರೂ ಕೂಡ ಆತನು ಮಹಾರಾಣಿ ಶತರೂಪೆಯ ಅನುಮತಿಯನ್ನು ಪಡೆದು ಆಕೆಯನ್ನು 'ಪುತ್ರಿಕಾಧರ್ಮ'ಕ್ಕೆ* ಅನುಸಾರವಾಗಿಯೇ ರುಚಿಪ್ರಜಾಪತಿಗೆ ಮದುವೆ ಮಾಡಿಕೊಟ್ಟನು.

ಪೂಜ್ಯಪ್ರಜಾಪತಿಯಾದ ರುಚಿಯು ಮಹಾಭಗವದ್ಭಕ್ತನಾಗಿ ಬ್ರಹ್ಮ ತೇಜಸ್ಸಿನಿಂದ ಸಂಪನ್ನನಾಗಿದ್ದನು. ತನ್ನ ಪರಮಸಮಾಧಿಯೋಗದ ಫಲವಾಗಿ ಆತನು ಆಕೂತಿಯಲ್ಲಿ ಒಂದು ಗಂಡುಮಗು ಮತ್ತು ಒಂದು ಹೆಣ್ಣುಮಗುವಿನ ರೂಪವಾದ ಅವಳಿಮಕ್ಕಳನ್ನು ಪಡೆದನು. ಆ ಮಕ್ಕಳು ಸಾಮಾನ್ಯಶಿಶುಗಳಾಗಿರಲಿಲ್ಲ. ಅವರಲ್ಲಿ ಗಂಡುಮಗುವಾಗಿದ್ದವನು ಯಜ್ಞಸ್ವರೂಪಧರನಾದ ಭಗವಂತನಾದ ಶ್ರೀಮಹಾವಿಷ್ಣುವೇ ಆಗಿದ್ದನು. ಹೆಣ್ಣು ಮಗುವಾಗಿದ್ದವಳು ಆ ಭಗವಂತನಿಂದ ಎಂದಿಗೂ ಅಗಲಿಕೆಯನ್ನು ಹೊಂದದಿರುವ ಸಾಕ್ಷಾತ್ ಶ್ರೀಮಹಾಲಕ್ಷ್ಮಿಯ ಅಂಶಸ್ವರೂಪಳೇ ಆದ 'ದಕ್ಷಿಣಾ' ದೇವಿಯು. ಸ್ವಾಯಂಭುವಮನುವು ಪರಮತೇಜಸ್ವಿಯಾದ ಆ ದೌಹಿತ್ರನನ್ನು ಅತ್ಯಂತ ಪ್ರಸನ್ನತೆಯಿಂದ ತನ್ನ ಮನೆಗೆ ಕರೆದುಕೊಂಡು ಬಂದನು. 'ದಕ್ಷಿಣಾ' ಎಂಬ ಪುತ್ರೀರತ್ನವನ್ನು ರುಚಿಯು ತನ್ನ ಬಳಿ ಇಟ್ಟುಕೊಂಡನು. ದಕ್ಷಿಣಾದೇವಿಗೆ ವಿವಾಹದ ವಯಸ್ಸು ಬಂದಾಗ ಆಕೆಯು

---

* ಪುತ್ರಿಕಾಧರ್ಮ–ಎಂಬುದು ಒಂದು ವಿಶೇಷವಾದ ನಿಬಂಧನೆಯೊಡನೆ ಕನ್ಯಾಪಿತೃವು ವರನಿಗೆ ತನ್ನ ಕನ್ಯೆಯನ್ನು ವಿವಾಹಮಾಡಿಕೊಡುವ ಪದ್ಧತಿ. "ಈ ವಿವಾಹದ ಫಲವಾಗಿ ಹುಟ್ಟುವ ಮೊದಲನೆಯ ಪುತ್ರನನ್ನು ತನಗೇ ಕೊಟ್ಟುಬಿಡಬೇಕು"–ಎಂದು ವರನೊಡನೆ ನಿಬಂಧನೆ ಮಾಡಿಕೊಂಡು ಕನ್ಯಾಪಿತೃವು ತನ್ನ ಮಗಳನ್ನು ಆತನಿಗೆ ವಿವಾಹ ಮಾಡಿಕೊಡುತ್ತಾನೆ. ಸಾಮಾನ್ಯವಾಗಿ ತನಗೆ ಗಂಡುಮಕ್ಕಳು ಇಲ್ಲದೇ ಇರುವಾಗ ಕನ್ಯಾಪಿತೃವು ವರನಿಗೆ ಇಂತಹ ವಿವಾಹವನ್ನು ಮಾಡಿಕೊಡುವನು. ಆದರೆ ಪ್ರಕೃತದಲ್ಲಿ ಸ್ವಾಯಂಭುವಮನುವಿಗೆ ಇಬ್ಬರು ಪುತ್ರರು ಇದ್ದರೂ ಆತನು ತನ್ನ ಪತ್ನಿಯ ಇಷ್ಟದಂತೆ ಮೊದಲನೇ ದೌಹಿತ್ರನನ್ನು ತನಗೇ ಕೊಡಬೇಕೆಂಬ ನಿಬಂಧನೆಯೊಡನೆ ಆಕೂತಿಯನ್ನು ರುಚಿಗೆ ವಿವಾಹಮಾಡಿಕೊಟ್ಟನೆಂದು ಅರ್ಥ.

"ಅಭ್ರಾತೃಕಾಂ ಪ್ರದಾಸ್ಯಾಮಿ ತುಭ್ಯಂ ಕನ್ಯಾಮಲಂಕೃತಾಮ್ ।
ಅಸ್ಯಾಂ ಯೋ ಜಾಯತೇ ಪುತ್ರಃ ಸ ಮೇ ಪುತ್ರೋ ಭವೇದಿತಿ॥"

(ಶ್ಲೋಕ ೨)

ಭಗವಂತನಾದ ಯಜ್ಞನ್ನವನ್ನೇ ಪತಿಯನ್ನಾಗಿ ಪಡೆಯುವ ಇಷ್ಟವನ್ನು ಪ್ರಕಟಿಸಿದಳು. ಅದರಂತೆ ಯಜ್ಞಪುರುಷನು ಆಕೆಯನ್ನು ವಿವಾಹಮಾಡಿ ಕೊಂಡನು. ಇದರಿಂದ ಪತಿ-ಪತ್ನಿಯರಿಬ್ಬರಿಗೂ ಪರಸ್ಪರವಾಗಿ ಸಂತೋಷ ವುಂಟಾಯಿತು. ಹೀಗೆ ಸಂತುಷ್ಟಳಾದ ಆ ದಕ್ಷಿಣಾದೇವಿಯಲ್ಲಿ ಯಜ್ಞನು ಹನ್ನೆರಡು ಮಂದಿ ಪುತ್ರರನ್ನು ಪಡೆದನು. ತೋಷ, ಪ್ರತೋಷ, ಸಂತೋಷ, ಭದ್ರ, ಶಾಂತಿ, ಇಡಸ್ಪತಿ, ಇಧ್ಮ, ಕವಿ, ವಿಭು, ಸ್ವಹ್ನ, ಸುದೇವ ಮತ್ತು ರೋಚನ–ಎಂಬಿವರೇ ಆ ಹನ್ನೆರಡು ಮಂದಿ ಪುತ್ರರು. ಆ ಹನ್ನೆರಡು ಮಂದಿ ಪುತ್ರರೇ ಸ್ವಾಯಂಭುವಮನ್ವಂತರದಲ್ಲಿ ತುಷಿತರೆಂಬ ದೇವತೆಗಳಾ ದರು. ಆ ಮನ್ವಂತರದಲ್ಲಿ ಮರೀಚಿಗಳೇ ಮುಂತಾದವರು ಸಪ್ತರ್ಷಿ ಗಳಾಗಿದ್ದರು. ಭಗವಂತನಾದ ಯಜ್ಞನೇ ದೇವಾಧಿಪತಿಯಾದ ಇಂದ್ರ ನಾದನು. ಮಹಾಪರಾಕ್ರಮಿಗಳಾದ ಪ್ರಿಯವ್ರತ ಮತ್ತು ಉತ್ತಾನಪಾದ– ಎಂಬ ಈ ಇಬ್ಬರೂ ಮನುಪುತ್ರರಾದರು. ಆ ಮನ್ವಂತರವು ಇವರಿಬ್ಬರ ಪುತ್ರರ, ಪೌತ್ರರ ಮತ್ತು ದೌಹಿತ್ರರ ವಂಶಗಳಿಂದ ವಿಸ್ತಾರವಾಗಿ ತುಂಬಿ ಕೊಂಡಿತು.

ಮನುಸಾರ್ವಭೌಮನು ತನ್ನ ಪುತ್ರಿಯಾದ ದೇವಹೂತಿಯನ್ನು ಕರ್ದಮರಿಗೆ ವಿವಾಹಮಾಡಿಕೊಟ್ಟನು. ಆ ವಿವಾಹಕ್ಕೆ ಸಂಬಂಧಪಟ್ಟಂತೆ ಇರುವ ಎಲ್ಲ ವಿಷಯಗಳನ್ನೂ ನಿನಗೆ ಸಾಮಾನ್ಯವಾಗಿ ಹೇಳಿಯೇ ಆಗಿದೆ. ಇನ್ನು ಮೂರನೆಯ ಕನ್ಯೆಯಾದ ಪ್ರಸೂತಿಯ ವಿವಾಹದ ವಿಷಯ. ತನ್ನ ಮೂರನೆಯ ಮಗಳನ್ನು ಸ್ವಾಯಂಭುವಮನುವು ಬ್ರಹ್ಮಮಾನಸಪುತ್ರನಾದ ದಕ್ಷಪ್ರಜಾಪತಿಗೆ ಮದುವೆಮಾಡಿಕೊಟ್ಟನು. ಆ ಪ್ರಸೂತಿ ಮತ್ತು ದಕ್ಷರಿಂದ ಜನಿಸಿದ ಸಂತಾನಗಳ ವಂಶಪರಂಪರೆಯಾದರೋ ತ್ರಿಲೋಕಗಳಲ್ಲಿಯೂ ಹಬ್ಬಿ ಹರಡಿಕೊಂಡಿದೆ.

ಕರ್ದಮರು ತಮ್ಮ ಒಂಬತ್ತು ಮಂದಿ ಪುತ್ರಿಯರನ್ನು ಒಂಬತ್ತು ಮಂದಿ ಬ್ರಹ್ಮರ್ಷಿಗಳಿಗೆ ವಿವಾಹಮಾಡಿಕೊಟ್ಟ ವಿಷಯವನ್ನು ಈ ಮೊದಲೇ ವರ್ಣನೆಮಾಡಿದ್ದೇನೆ. ಈಗ ಅವರ ವಂಶಪರಂಪರೆಯನ್ನು ವರ್ಣಿಸು ತ್ತೇನೆ; ಕೇಳು :

ಮರೀಚಿಮಹರ್ಷಿಗಳು ತಮ್ಮ ಪತ್ನಿಯಾದ ಕರ್ದಮಪುತ್ರಿಯಾದ ಕಲಾದೇವಿಯಲ್ಲಿ ಕಶ್ಯಪ ಎಂಬ ಪುತ್ರನನ್ನೂ ಪೂರ್ಣಿಮಾ ಎಂಬ ಪುತ್ರಿ ಯನ್ನೂ ಪಡೆದರು. ಅವರ ವಂಶದಿಂದ ಈ ಜಗತ್ತೆಲ್ಲವೂ ತುಂಬಿಹೋಗಿದೆ. ಎಲೈ ಪರಂತಪನೇ! ಪೂರ್ಣಿಮಾದೇವಿಗೆ ವಿರಜ ಮತ್ತು ವಿಶ್ವಗ ಎಂಬ ಇಬ್ಬರು ಪುತ್ರರೂ ಮತ್ತು ದೇವಕುಲ್ಯಾ ಎಂಬ ಕನ್ಯೆಯೂ ಜನಿಸಿದರು. ಆ ದೇವಕುಲ್ಯೆಯೇ ಮುಂದಿನ ಜನ್ಮದಲ್ಲಿ, ಬ್ರಹ್ಮದೇವರು ಶ್ರೀಹರಿಯ ಚರಣಗಳನ್ನು ತೊಳೆದಾಗ ದೇವನದಿಯಾದ ಗಂಗೆಯ ರೂಪದಲ್ಲಿ ಪ್ರಕಟಗೊಂಡಳು. ಅತ್ರಿಯ ಪತ್ನಿಯಾದ ಅನಸೂಯೆಯಲ್ಲಿ ದತ್ತಾತ್ರೇಯ, ದುರ್ವಾಸ ಮತ್ತು ಚಂದ್ರ–ಎಂಬ ಹೆಸರಿನ ಪರಮಯಶಸ್ವಿಗಳಾದ ಮೂವರು ಪುತ್ರರು ಹುಟ್ಟಿದರು. ಈ ಮೂವರೂ ಕ್ರಮವಾಗಿ ವಿಷ್ಣು, ಶಂಕರ ಮತ್ತು ಬ್ರಹ್ಮದೇವರ ಅಂಶಗಳಿಂದ ಜನಿಸಿದರು."

ಮೈತ್ರೇಯರ ಆ ನುಡಿಯನ್ನು ಕೇಳಿ ವಿದುರನಿಗೆ ಒಂದು ಕುತೂಹಲ ವುಂಟಾಯಿತು. ಆತನು ಮಹರ್ಷಿಗಳನ್ನು ಕುರಿತು–"ಮಹಾತ್ಮರೇ! ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣರಾದ ಆ ಸರ್ವಶ್ರೇಷ್ಠರಾದ ದೇವತೆಗಳು ಏತಕ್ಕಾಗಿ ಅತ್ರಿಮಹರ್ಷಿಗಳ ಗೃಹದಲ್ಲಿ ಅವತರಿಸಿದರು?"– ಎಂದು ಪ್ರಶ್ನೆಮಾಡಿದನು. ಅದಕ್ಕೆ ಮೈತ್ರೇಯರು ಹೀಗೆ ಉತ್ತರಿಸಿದರು :

"ಬ್ರಹ್ಮದೇವರು–ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಅತ್ರಿಮಹರ್ಷಿ ಗಳಿಗೆ ಸೃಷ್ಟಿಯನ್ನು ಮಾಡಲು ಆಜ್ಞಾಪಿಸಲು, ಅವರು ತಮ್ಮ ಸಹಧರ್ಮಿಣಿ ಯಾದ ಅನಸೂಯೆಯೊಡನೆ ತಪಸ್ಸನ್ನಾಚರಿಸುವುದಕ್ಕಾಗಿ ಋಕ್ಷ–ಎಂಬ ಕುಲಪರ್ವತದ ಮೇಲಕ್ಕೆ ಹೋದರು. ಅಲ್ಲಿ ಮುತ್ತುಗದ ಮರಗಳ ಮತ್ತು ಅಶೋಕವೃಕ್ಷಗಳ ಒಂದು ವಿಶಾಲವಾದ ಅರಣ್ಯವಿತ್ತು. ಅಲ್ಲಿ ಎಲ್ಲ ವೃಕ್ಷಗಳೂ ಫಲ-ಪುಷ್ಪಗಳ ಸಮೃದ್ಧಿಯಿಂದ ತುಂಬಿದ್ದುವು ಮತ್ತು ಅದರ ಎಲ್ಲ ಕಡೆಗಳಲ್ಲೂ ನಿರ್ವಿಂಧ್ಯಾನದಿಯ ಜಲದ ಕಲ-ಕಲಧ್ವನಿಯು ಪ್ರತಿಧ್ವನಿಸುತ್ತಿತ್ತು. ಆ ವನದಲ್ಲಿ ಆ ಮುನಿಶ್ರೇಷ್ಠರು ಪ್ರಾಣಾಯಾಮ ದಿಂದ ಚಿತ್ತವನ್ನು ವಶಪಡಿಸಿಕೊಂಡು ನೂರು ವರ್ಷಗಳ ಕಾಲ ಬರೀ ಗಾಳಿಯನ್ನೇ ಸೇವಿಸುತ್ತಾ, ಚಳಿ-ಸೆಕೆಗಳೇ ಮುಂತಾದ ದ್ವಂದ್ವಗಳನ್ನೂ

ಜಯಿಸಿ, ಒಂಟಿಕಾಲಿನಮೇಲೆ ನಿಂತು ತಪಸ್ಸನ್ನಾಚರಿಸಿದರು. ಆಗ ಅವರು ಮನಸ್ಸಿನಲ್ಲಿ–'ನಾನು ಇಡೀ ಜಗತ್ತಿಗೇ ಸ್ವಾಮಿಯಾದ ಯಾವ ಭಗವಂತ ನುಂಟೋ–ಆತನನ್ನೇ ಶರಣುಹೊಂದುತ್ತೇನೆ. ಆತನು ತನಗೆ ಸಮಾನರಾದ ಪುತ್ರರನ್ನು ನನಗೆ ಕರುಣಿಸಲಿ'–ಎಂದು ಪ್ರಾರ್ಥನೆಮಾಡುತ್ತಿದ್ದರು.

ಆಗ ಪ್ರಾಣಾಯಾಮವೆಂಬ ಕಟ್ಟಿಗೆಯಿಂದ ಭುಗಿಲೆದ್ದ ಅತ್ರಿಮಹರ್ಷಿ ಗಳ ತೇಜಸ್ಸು ಅವರ ತಲೆಯಿಂದ ಹೊರಬಿದ್ದು ಮೂರು ಲೋಕಗಳನ್ನೂ ದಹಿಸುತ್ತಿರುವುದನ್ನು ಕಂಡು ಜಗತ್ತಿಗೆ ಅಧಿಪತಿಗಳಾದ ಬ್ರಹ್ಮದೇವರೂ, ವಿಷ್ಣುವೂ ಮತ್ತು ರುದ್ರದೇವರೂ ಮಹರ್ಷಿಗಳ ಆಶ್ರಮಕ್ಕೆ ದಯಮಾಡಿಸಿ ದರು. ಆಗ ಅಪ್ಸರೆಯರೂ, ಮುನಿಗಳೂ, ಗಂಧರ್ವರೂ, ಸಿದ್ಧರೂ, ವಿದ್ಯಾಧರರೂ ಮತ್ತು ನಾಗರೂ ಅವರ ಸುಕೀರ್ತಿಯನ್ನು ಗಾನಮಾಡು ತ್ತಿದ್ದರು. ಆ ಮೂವರು ದೇವಶ್ರೇಷ್ಠರೂ ಒಟ್ಟಿಗೇ ಆವಿರ್ಭವಿಸಿದ್ದರಿಂದ ಅತ್ರಿಮಹರ್ಷಿಗಳ ಅಂತಃಕರಣವು ಬೆಳಕಿನಿಂದ ತುಂಬಿತು. ಅವರು ಒಂಟಿಗಾಲಿನಮೇಲೆ ನಿಂತಿದ್ದಂತೆಯೇ ಅವರನ್ನು ನೋಡಿದರು. ಒಡನೆಯೇ ಅವರಿಗೆ ದೀರ್ಘದಂಡನಮಸ್ಕಾರವನ್ನು ಮಾಡಿ, ಕೈಯ್ಯಲ್ಲಿ ಅರ್ಘ್ಯ-ಪುಷ್ಪಾದಿ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಪೂಜೆಯನ್ನು ಸಲ್ಲಿಸಿದರು. ಆ ಮೂವರೂ ತಮ್ಮ-ತಮ್ಮ ವಾಹನಗಳಾದ ಹಂಸ, ಗರುಡ ಮತ್ತು ವೃಷಭ ಗಳ ಮೇಲೆ ಕುಳಿತಿದ್ದು–ಕಮಂಡಲು, ಚಕ್ರ ಮತ್ತು ತ್ರಿಶೂಲಗಳೇ ಮುಂತಾದ ತಮ್ಮ-ತಮ್ಮ ಆಯುಧವಿಶೇಷಗಳನ್ನು ಧರಿಸಿದ್ದರು. ಅವರು ಕಣ್ಣುಗಳಿಂದ ಕರುಣೆಯ ಮಳೆಯನ್ನು ಕರೆಯುತ್ತಾ, ಮುಖದಿಂದ ಮುಗುಳ್ನಗೆಯ ಬೆಳುದಿಂಗಳನ್ನು ಸೂಸುತ್ತಾ ಪ್ರಸನ್ನಮೂರ್ತಿಗಳಾಗಿದ್ದರು. ಮುನಿವರ್ಯರು–ಅವರ ಕೋರೈಸುವ ತೇಜಸ್ಸನ್ನು ಕಂಡು, ಕಣ್ಣುಗಳನ್ನು ಮುಚ್ಚಿಕೊಂಡು, ಚಿತ್ತವನ್ನು ಅವರಲ್ಲಿಯೇ ನೆಟ್ಟು, ಕೈಜೋಡಿಸಿಕೊಂಡು, ಅತಿಮಧುರವೂ, ಭಾವಪೂರ್ಣವೂ ಆದ ನುಡಿಗಳಿಂದ ಸರ್ವಲೋಕಗಳಲ್ಲೂ ಶ್ರೇಷ್ಠತಮರಾದ ಅವರನ್ನು ಸ್ತುತಿಸತೊಡಗಿದರು :

(ಶ್ಲೋಕ 1-26)

ಅತ್ರಿಗಳು ಹೇಳುತ್ತಾರೆ :

ವಿಶ್ವೋದ್ಭವಸ್ಥಿತಿಲಯೇಷು ವಿಭಜ್ಯಮಾನೈ-
ರ್ಮಾಯಾಗುಣೈರನುಯುಗಂ ವಿಗೃಹೀತದೇಹಾಃ ।
ತೇ ಬ್ರಹ್ಮವಿಷ್ಣುಗಿರಿಶಾಃ ಪ್ರಣತೋಽಸ್ಮ್ಯಹಂ ವ-
ಸ್ತೇಭ್ಯಃ ಕ ಏವ ಭವತಾಂ ಮ ಇಹೋಪಹೂತಃ ॥೨೭॥

“ಪ್ರತಿಯೊಂದು ಕಲ್ಪದ ಪ್ರಾರಂಭದಲ್ಲಿಯೂ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವುದಕ್ಕೋಸ್ಕರ ಅದ್ಭುತವಾದ ಮಾಯಾಶಕ್ತಿಗೆ ಸೇರಿದ ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಗಳೆಂಬ ಗುಣವಿಭಾಗಕ್ಕೆ ತಕ್ಕಂತೆ ಬೇರೆ-ಬೇರೆ ಮೂರ್ತಿಗಳನ್ನು ಧರಿಸಿರುವ ಬ್ರಹ್ಮ, ವಿಷ್ಣು ಮತ್ತು ಶಿವರೂಪರಾದ ನಿಮಗೆ ನಮೋ ನಮಃ–ನಿಮ್ಮ ಮೂವರಲ್ಲಿ ನನ್ನ ಆಹ್ವಾನಕ್ಕೆ ವಿಷಯರಾದವರು ಯಾರು?–ಎಂಬುದನ್ನು ದಯವಿಟ್ಟು ತಿಳಿಸಿರಿ.

ಏಕೋ ಮಯೇಹ ಭಗವಾನ್ವಿಬುಧಪ್ರಧಾನ-
ಶ್ಚಿತ್ತೀಕೃತಃ ಪ್ರಜನನಾಯ ಕಥಂ ನು ಯೂಯಮ್ ।
ಅತ್ರಾಗತಾಸ್ತನುಭೃತಾಂ ಮನಸೋಽಪಿ ದೂರಾ-
ದ್ಬ್ರೂತ ಪ್ರಸೀದತ ಮಹಾನಿಹ ವಿಸ್ಮಯೋ ಮೇ ॥೨೮॥

ನಾನು ಹೀಗೇಕೆ ಕೇಳುತ್ತಿದ್ದೇನೆ?–ಎಂದರೆ : ನಾನು ಸಂತಾನವನ್ನು ಪಡೆಯುವ ಇಚ್ಛೆಯಿಂದ ಸುರೇಶ್ವರನಾದ ಒಬ್ಬನೇ ಭಗವಂತನನ್ನು ಚಿಂತನೆ ಮಾಡಿದ್ದೆನು. ಹಾಗಿರುವಾಗ ನೀವು ಮೂವರೂ ಇಲ್ಲಿಗೆ ಏಕೆ ದಯಮಾಡಿಸಿದಿರಿ? ದೇಹಧಾರಿಗಳ ಮನಸ್ಸಿಗೂ ದೂರವಾಗಿರುವ ನೀವು ಮೂವರೂ ಹೀಗೆ ದಯಮಾಡಿಸಿರುವುದು ನನಗೆ ಪರಮಾಶ್ಚರ್ಯವನ್ನು ಉಂಟುಮಾಡಿದೆ. ಪ್ರಭುಗಳೇ! ಕೃಪೆಯಿಂದ ನಿಮ್ಮ ಈ ರಹಸ್ಯವನ್ನು ತಿಳಿಸಿರಿ.”*

* “ಬ್ರಹ್ಮದೇವರಲ್ಲಿಯೂ ಮತ್ತು ರುದ್ರದೇವರಲ್ಲಿಯೂ ಅಂತರ್ಯಾಮಿಯಾಗಿರುವವನೂ ಮತ್ತು ಸ್ವಯಂ ತಾನೇ ಆಗಿರುವವನೂ ಆದ ಪ್ರಭುವಾದ ಶ್ರೀಹರಿಯು ಆ ಮೂವರಿಗೆ ಸಮಾನರಾಗಿರುವ ಸಂತಾನಗಳನ್ನು ಕರುಣಿಸಲಿ’–ಎಂಬುದು ಅತ್ರಿಮಹರ್ಷಿಗಳ ಇಚ್ಛೆಯಾಗಿತ್ತು. ಅದಕ್ಕೆ ತಕ್ಕಂತೆ ಜಗತ್ಪತಿಯಾದ ವಿಷ್ಣುವು ಬ್ರಹ್ಮ-ರುದ್ರರೊಡನೆ ಅಲ್ಲಿ ಕಾಣಿಸಿಕೊಂಡು ಆ ತ್ರಿಮೂರ್ತಿಗಳ ಅಂಶಭೂತರಾದ

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ವಿದುರನೇ! ಕೇಳು. ಆ ಮಾತುಗಳನ್ನು ಕೇಳಿದ ಆ ಮೂವರು ದೇವಶ್ರೇಷ್ಠರೂ ನಕ್ಕು ಮಧುರವಾಣಿಯಿಂದ ಮಹರ್ಷಿಗಳನ್ನು ಕುರಿತು ಅನುಗ್ರಹಪೂರ್ವಕವಾಗಿ ಹೇಳಿದರು :

ಯಥಾ ಕೃತಸ್ತೇ ಸಙ್ಕಲ್ಪೋ ಭಾವ್ಯಂ ತೇನೈವ ನಾನ್ಯಥಾ ।
ಸತ್ಸಙ್ಕಲ್ಪಸ್ಯ ತೇ ಬ್ರಹ್ಮನ್ಯದ್ವೈ ಧ್ಯಾಯತಿ ತೇ ವಯಮ್ ॥೩೦॥

"ಬ್ರಾಹ್ಮಣೋತ್ತಮನೇ! ನೀನು ಸತ್ಯಸಂಕಲ್ಪನಾಗಿರುವುದರಿಂದ ಹೇಗೆ ಸಂಕಲ್ಪಮಾಡಿದೆಯೋ ಅದು ಹಾಗೆಯೇ ಆಗುವುದು. ಅದಕ್ಕೆ ವಿರುದ್ಧವಾಗಿ ಆಗಲು ಹೇಗೆ ತಾನೇ ಸಾಧ್ಯ? ನೀನು ಯಾವನನ್ನು ಚಿಂತನೆಮಾಡುತ್ತಿದ್ದೆಯೋ–ಆ ಜಗದೀಶ್ವರತತ್ತ್ವವು ನಾವು ಮೂವರೂ ಆಗಿದ್ದೇವೆ.*

ಮೂವರು ಪುತ್ರರನ್ನು ಅವರಿಗೆ ಅನುಗ್ರಹಿಸಿದನು. ಕಾರ್ಯವು ಮುಂದೆ ಹಾಗೆಯೇ ಆಗಬೇಕಾಗಿರುವುದರಿಂದಲೂ ಮತ್ತು ಲೋಕಗಳಿಗೆ ಮೋಹವನ್ನುಂಟುಮಾಡುವುದಕ್ಕಾಗಿಯೂ ಹಾಗೆ ಮಾಡಿದರು.

"ಬ್ರಹ್ಮಸ್ಥಶ್ಚೈವ ರುದ್ರಸ್ಥಃ ಸ್ವಯಂ ಚಾಪಿ ಹರಿಃ ಪ್ರಭುಃ । ಪ್ರಜಾಃ ತ್ರಿಪೂರುಷ ಸಮಾಂ **ಯಚ್ಛತ್ವಿತ್ಯತ್ರಿರೈಚ್ಛತ್ ॥ ತಸ್ಮಾತ್ಸ ಬ್ರಹ್ಮರುದ್ರಾಭ್ಯಾಂ ಸಹ ವಿಷ್ಣುರ್ಜಗ- ತ್ಪತಿಃ । ಆಗತ್ಯ ತು ತ್ರಿಮೂರ್ತ್ಯಂಶಾನ್ ಪ್ರಾದಾತ್ಪುತ್ರಾನ್ ಜನಾರ್ದನಃ । ಭಾವಿತ್ವಾಚ್ಚೈವ ಕಾರ್ಯಸ್ಯ ಲೋಕಾನಾಂ ಮೋಹನಾಯ ಚ ॥"** ಅತ್ರಿಗಳು ವಿಕಲ್ಪಿಸುವುದಕ್ಕೆ ಕಾರಣವೂ ಲೋಕಮೋಹನವನ್ನು ಮಾಡುವ ಇಚ್ಛೆಯೇ. **"ಲೋಕಮೋಹನಾರ್ಥಮತ್ರಿಣಾ ವಿಕಲ್ಪಿತಂ ನ ತು ತತ್ತ್ವಾರ್ಥೇನ"** (ವಿಜಯಧ್ವಜೀಯ) (ಶ್ಲೋಕ ೨೮)

* 'ಯದ್ವೈ ಧ್ಯಾಯತಿ ತೇ ವಯಮ್'–'ನೀನು ಧ್ಯಾನಮಾಡುವ ಭಗವಂತನು ನಾವು ಮೂವರೂ ಆಗಿದ್ದೇವೆ'–ಎಂಬ ವಾಕ್ಯದಿಂದ ತ್ರಿಮೂರ್ತಿಗಳ ಐಕ್ಯವು ಕಂಡು ಬರುವುದಲ್ಲವೇ? ಆದರೆ : ಈ ಪುರಾಣದಲ್ಲಿಯೂ ಮತ್ತು ಅನೇಕಶ್ರುತಿಗಳಲ್ಲಿಯೂ ಮಹಾಭಾರತಾದಿಗಳಲ್ಲಿಯೂ ಬ್ರಹ್ಮ-ರುದ್ರರು ನಾರಾಯಣನಿಗೆ ಅಧೀನರೆಂದು ಅನೇಕ ಕಥೆಗಳಲ್ಲಿ ಹೇಳಿದೆ (ಉದಾಹರಣೆ : **"ನಾರಾಯಣಾದ್ಬ್ರಹ್ಮಾ ಜಾಯತೇ । ನಾರಾಯಣಾದ್ರುದ್ರೋ ಜಾಯತೇ॥", "ಯನ್ನಾಭಿಪದ್ಮಾದಭವತ್ ಸ ಮಹಾತ್ಮಾ ಪ್ರಜಾಪತಿಃ"**) ಹೀಗೆ ಪರಸ್ಪರವಿರೋಧವು ಕಂಡುಬರುತ್ತದೆ. ತ್ರಿಮೂರ್ತಿಗಳಿಗೆ

ಅಥಾಸ್ಮದಂಶಭೂತಾಸ್ತೇ ಆತ್ಮಜಾ ಲೋಕವಿಶ್ರುತಾಃ ।
ಭವಿತಾರೋಽಙ್ಗ ಭದ್ರಂ ತೇ ವಿಸ್ರಪ್ಸ್ಯನ್ತಿ ಚ ತೇ ವಯಮ್ ॥೩೧॥

ಮಹರ್ಷಿಯೇ! ನಿನಗೆ ಮಂಗಳವಾಗಲಿ! ನಮ್ಮ ಅಂಶಸ್ವರೂಪರೇ ಆಗಿ ಲೋಕವಿಖ್ಯಾತರಾಗಿರುವ ಮೂವರು ಪುತ್ರರು ನಿನಗೆ ಜನಿಸಿ ನಿನ್ನ ಸುಕೀರ್ತಿಯನ್ನು ಹರಡುವರು."

ಹೀಗೆ ಅತ್ರಿಮಹರ್ಷಿಗಳಿಗೆ ಅಭೀಷ್ಟವಾದ ವರವನ್ನು ಕರುಣಿಸಿ ಅತ್ರಿ ದಂಪತಿಗಳಿಂದ ಚೆನ್ನಾಗಿ ಪೂಜಿಸಲ್ಪಟ್ಟವರಾಗಿ ಆ ಮೂವರು ಸುರೇಶ್ವರರೂ ಆ ದಂಪತಿಗಳು ನೋಡುತ್ತಿರುವಂತೆಯೇ ತಮ್ಮ-ತಮ್ಮ ಲೋಕಗಳಿಗೆ ಹೊರಟುಹೋದರು.* ಬ್ರಹ್ಮದೇವರ ಅಂಶದಿಂದ ಸೋಮನೂ, ವಿಷ್ಣುವಿನ ಅಂಶದಿಂದ ಯೋಗಜ್ಞನಾದ ದತ್ತಾತ್ರೇಯನೂ ಮತ್ತು ಶಂಕರನ ಅಂಶದಿಂದ ದುರ್ವಾಸಮಹರ್ಷಿಗಳೂ ಅತ್ರಿಗೆ ಪುತ್ರರಾಗಿ ಪ್ರಕಟಗೊಂಡರು. ಈಗ ಅಂಗಿರಸಋಷಿಯ ಸಂತಾನಗಳನ್ನು ವರ್ಣಿಸುವೆನು ; ಕೇಳು :[1]

ಐಕ್ಯವುಂಟೋ ಇಲ್ಲವೋ? ಎಂದರೆ : 'ನಿಜ. ಐಕ್ಯವು ಇದ್ದೇ ಇದೆ. ಆದರೆ ಸ್ವರೂಪೈಕ್ಯವಲ್ಲ'. ಬ್ರಹ್ಮ-ರುದ್ರರಿಬ್ಬರೂ ಬ್ರಹ್ಮಾತ್ಮಕರಾಗಿರುವುದರಿಂದ ಶರೀರ-ಶರೀರಿತ್ವ ಭಾವಪ್ರಯುಕ್ತವಾದ ಐಕ್ಯವದು. ಚತುರ್ಮುಖನೂ ಮತ್ತು ಶಿವನೂ ನಾರಾಯಣಾತ್ಮಕರೆಂದು ಮಹಾಭಾರತವೂ ಹೇಳುವುದು. "**ತವಾನ್ತರಾತ್ಮಾ ಮಮ ಚ ಯೇ ಚಾನ್ಯೇ ದೇಹಿಸಂಜ್ಞಿತಾಃ । ಸರ್ವೇಷಾಂ ಸಾಕ್ಷಿಭೂತೋಽಸೌ ನ ಗ್ರಾಹ್ಯಃ ಕೇನಚಿತ್ ಕ್ವಚಿತ್ ॥**" "**ಸೃಷ್ಟಿಂ ತತಃ ಕರಿಷ್ಯಾಮಿ ತ್ವಾಮಾವಿಶ್ಯ ಪ್ರಜಾಪತೇ**", "**ಹರೋ ಹರತಿ ತಾದೃಶಂ**", "**ಸತ್ಯಂ ಐಕ್ಯಮಸ್ತ್ಯೇವ... ಸರ್ವಗತ್ವಾದನನ್ತಸ್ಯ ಸ ಏವಾಹ ಮವಸ್ಥಿತಃ ।** ಮತ್ತಸ್ಸರ್ವಮಹಂ ಸರ್ವಂ ಮಯಿ ಸರ್ವಂ ಸನಾತನೇ॥" (ವಿಷ್ಣುಪುರಾಣ) ಇತಿವತ್ ಬ್ರಹ್ಮಾತ್ಮಕತ್ವಬುದ್ಧ್ಯಾ ಚತುರ್ಮುಖಶಿವಯೋಃ ಅಭೇದವ್ಯವಹಾರೋಪಪತ್ತೇಃ (ವೀರರಾಘವೀಯ) (ಶ್ಲೋಕ ೩೦)

* ಸರ್ವವ್ಯಾಪಕನೂ–ಸರ್ವಾಂತರ್ಯಾಮಿಯೂ ಆದ ಪರಮಾತ್ಮನು ಅಂಶಾವತಾರ ಮಾಡುವುದು ಸರಿಹೊಂದುತ್ತದೆ. ಆದರೆ ಅಣುಸ್ವರೂಪರಾಗಿರುವ ಬ್ರಹ್ಮದೇವರಿಗೂ

---

1 ಅಂಶೇನ–ಎಂದು ತೃತೀಯಾವಿಭಕ್ತಿಯಿರುವುದರಿಂದ ಸೋಮನು ಬ್ರಹ್ಮದೇವರ ಸಾಕ್ಷಾದಂಶವಾಗುವುದಿಲ್ಲ. ಬ್ರಹ್ಮದೇವರು ವಿಶೇಷವಾಗಿ ಸೋಮನಲ್ಲಿಯೂ ಸನ್ನಿಧಾನಹೊಂದಿದ್ದಾರೆ–ಎಂದಷ್ಟೇ ಅರ್ಥ. "**ಬ್ರಹ್ಮಣೋ ನಾವತಾರೋಽಸ್ತಿ ಸನ್ನಿಧಾನಂ ತು ಕೇವಲಮ್ । ಋತೇ ವಿಷ್ಣೋರಾತ್ಮನಸ್ತು ತದಂಶೋಕ್ತಿಃ ಪ್ರವೇಶತಃ ॥**"–ಎಂಬ

ಮಹರ್ಷಿ ಅಂಗಿರಸರ ಪತ್ನಿಯಾದ ಶ್ರದ್ಧೆಯು ಸಿನೀವಾಲೀ, ಕುಹೂ, ರಾಕಾ ಮತ್ತು ಅನುಮತಿ–ಎಂಬ ನಾಲ್ವರು ಪುತ್ರಿಯರನ್ನು ಪಡೆದಳು. ಆ ಹೆಣ್ಣುಮಕ್ಕಳಲ್ಲದೇ ಅವಳಲ್ಲಿ ಸ್ವಾರೋಚಿಷಮನ್ವಂತರದಲ್ಲಿ ವಿಖ್ಯಾತಿಯನ್ನು ಪಡೆದ ಅತ್ಯಂತಪೂಜ್ಯರಾದ ಭಗವಾನ್ ಉತಥ್ಯರು ಮತ್ತು ಬ್ರಹ್ಮನಿಷ್ಠರಾದ ಬೃಹಸ್ಪತಿ–ಎಂಬ ಇಬ್ಬರು ಪುತ್ರರೂ ಜನಿಸಿದರು. ಪುಲಸ್ತ್ಯರಿಗೆ ಅವರ ಪತ್ನಿಯಾದ ಹವಿರ್ಭೂ ಎಂಬಾಕೆಯಲ್ಲಿ ಮಹರ್ಷಿಗಳಾದ ಅಗಸ್ತ್ಯರೂ ಮತ್ತು ಮಹಾತಪಸ್ವಿಗಳಾದ ವಿಶ್ರವಸರೂ ಪುತ್ರರಾಗಿ ಜನಿಸಿದರು. ಅವರಲ್ಲಿ ಅಗಸ್ತ್ಯರು ಮುಂದಿನ ಜನ್ಮದಲ್ಲಿ ಜಠರಾಗ್ನಿಸ್ವರೂಪರಾದರು. ಮಹರ್ಷಿ ವಿಶ್ರವಸರಿಗೆ ಇಡವಿಡಾ ಎಂಬಾಕೆಯ ಗರ್ಭದಿಂದ ಯಕ್ಷರಾಜನಾದ ಕುಬೇರನು ಸುಪುತ್ರನಾಗಿ ಜನಿಸಿದನು ಮತ್ತು ಮತ್ತೊಬ್ಬ ಪತ್ನಿಯಾದ ಕೇಶಿನೀ ಎಂಬಾಕೆಯಲ್ಲಿ ರಾವಣ, ಕುಂಭಕರ್ಣ ಮತ್ತು ವಿಭೀಷಣರೆಂಬ ಪುತ್ರರು ಹುಟ್ಟಿದರು. ಎಲೈ ಮಹಾಮತಿಯಾದ

ಮತ್ತು ರುದ್ರದೇವರಿಗೂ ಸೋಮ-ದುರ್ವಾಸರ ಮೂಲಕ ಅಂಶಾವತಾರವು ಹೇಗೆ ಸಂಭವಿಸೀತು? ಎಂದರೆ : ದೀಪವು ಚಿಕ್ಕದಾಗಿದ್ದರೂ ತನ್ನ ಬೆಳಕಿನ ಮೂಲಕ ಅನೇಕ ವಸ್ತುಗಳನ್ನು ಬೆಳಗಿಸಬಹುದು. ಹಾಗೆಯೇ ಜೀವನು ಅಣುವಾಗಿದ್ದರೂ ಆವರಣ ರಹಿತವಾದ ಜ್ಞಾನದಿಂದ ಅನೇಕಶರೀರಗಳನ್ನು ಪರಿಗ್ರಹಿಸಬಹುದು. ಬ್ರಹ್ಮ-ರುದ್ರರ ಜ್ಞಾನವು ಪರಮಾತ್ಮನ ಅನುಗ್ರಹಾತಿಶಯದಿಂದ ಅನಂತವೆನಿಸಿರುವುದರಿಂದ ಅವರು ಸೋಮ ಮತ್ತು ದುರ್ವಾಸರಲ್ಲಿ ಜ್ಞಾನದ್ವಾರಾ ಅಂಶಾವತಾರಮಾಡಿದರೆಂಬುದು ಸಂಗತವಾಗುವುದು.

(ವೀರರಾಘವೀಯ) (ಶ್ಲೋಕ ೩.೨)

ವಚನವನ್ನು ಗಮನಿಸಬೇಕು. ಜೀವವನ್ನು ಪರಮಾತ್ಮನ ಅಂಶವೆಂದು ಕರೆದರೆ ಅದಕ್ಕೆ ಪರಮಾತ್ಮನಾದ ವಿಷ್ಣುವು ಆ ಜೀವನಲ್ಲಿ ಪ್ರವಿಷ್ಟನಾಗಿದ್ದಾನೆ–ಎಂಬ ಅಭಿಪ್ರಾಯಷ್ಟೇ. "ಅಂಶೇನೇತಿ ತೃತೀಯಯಾ ಸೋಮಃ ಸಾಕ್ಷಾತ್ ಬ್ರಹ್ಮಣೋಂಟಶೋ ನ ಭವತಿ ಕಿನ್ತು ತೇನ ವಿಶೇಷೇಣ ಸನ್ನಿಹಿತ ಏವ.... ಆತ್ಮನೋ ಜೀವಸ್ಯ ತದಂ ಶೋಕ್ತಿಃ ವಿಷ್ಣ್ವಂ-ಶತ್ವವಚನಂ ಪ್ರವೇಶತ ಇತಿ ಜ್ಞೇಯಂ"... ಅತ್ರಿಯ ಮೂವರು ಪುತ್ರರಲ್ಲಿ ದತ್ತಾತ್ರೇಯರು ಸ್ವರೂಪಾಂಶಭೂತರು. ಸೋಮ ಮತ್ತು ದುರ್ವಾಸರು ಭಿನ್ನಾಂಶಭೂತರು ಎಂದು ತಿಳಿಯಬೇಕು.

"ಅತ್ರ ಅಂಶಶಬ್ದಃ ಸ್ವರೂಪಾಂಶಪರೋ ಭಿನ್ನಾಂಶ ಪರಶ್ಚಾಭಿಪ್ರೇತಃ ।
ತಥಾ ಚ ಸ್ವರೂಪಾಂಶಭೂತ ಏಕೋ ಭಿನ್ನಾಂಶಭೂತೌ ದ್ವಾವಿತ್ಯೇವಂ ತ್ರಯ
ಆತ್ಮಜಾಃ ಪುತ್ರಾ ಭವಿಷ್ಯನ್ತಿ ॥" (ವಿಜಯಧ್ವಜೀಯ) (ಶ್ಲೋಕ ೩೩)

ವಿದುರನೇ! ಮಹರ್ಷಿ ಪುಲಹರ ಪತ್ನಿಯಾದ ಸಾಧ್ವೀಮಣಿಯಾದ ಗತಿ ಎಂಬಾಕೆಗೆ ಕರ್ಮಶ್ರೇಷ್ಠ, ವರೀಯಾಂಸ ಮತ್ತು ಸಹಿಷ್ಣು–ಎಂಬ ಮೂವರು ಪುತ್ರರು ಜನಿಸಿದರು. ಹಾಗೆಯೇ ಕ್ರತುವಿನ ಪತ್ನಿಯಾದ ಕ್ರಿಯಾದೇವಿಯು ಬ್ರಹ್ಮತೇಜಸ್ಸಿನಿಂದ ಬೆಳಗುವ ವಾಲಖಿಲ್ಯರೆಂದು ಕರೆಯಲ್ಪಡುವ ಅರುವತ್ತು ಸಾವಿರ ಮಂದಿ ಋಷಿಗಳನ್ನು ಪುತ್ರರನ್ನಾಗಿ ಪಡೆದಳು. ವಸಿಷ್ಠಮಹರ್ಷಿಗಳ ಪತ್ನಿಯಾದ ಊರ್ಜಾ ಅಥವಾ ಅರುಂಧತೀದೇವಿಗೆ ಚಿತ್ರಕೇತುವೇ ಮುಂತಾದ ಪರಿಶುದ್ಧಚಿತ್ತರಾದ ಏಳು ಮಂದಿ ಬ್ರಹ್ಮರ್ಷಿಗಳು ಪುತ್ರರಾಗಿ ಜನಿಸಿದರು. ಚಿತ್ರಕೇತು, ಸುರೋಚಿ, ವಿರಜಸ, ಮಿತ್ರ, ಉಲ್ಬಣ, ವಸುಭೃದ್ಯಾನ ಮತ್ತು ದ್ಯುಮಾನ್–ಎಂಬ ಇವರೇ ಆ ಏಳು ಮಂದಿ ಸುಪುತ್ರರು. ಇವರಲ್ಲದೇ ವಸಿಷ್ಠರು ತಮ್ಮ ಮತ್ತೊಬ್ಬ ಪತ್ನಿಯಲ್ಲಿ ಶಕ್ತಿಯೇ ಮುಂತಾದ ಇನ್ನೂ ಅನೇಕಪುತ್ರರನ್ನು ಪಡೆದರು. ಅಥರ್ವಮುನಿಯ ಪತ್ನಿಯಾದ ಚಿತ್ತಿಯು ದಧ್ಯಂಚ (ದಧೀಚಿ) ಎಂಬ ತಪೋನಿಷ್ಠನಾದ ಪುತ್ರನನ್ನು ಪಡೆದಳು. ಈ ದಧೀಚಿಮಹರ್ಷಿಗಳಿಗೆ 'ಅಶ್ವಶಿರಾ' ಎಂಬುದು ಮತ್ತೊಂದು ಹೆಸರು. ಈಗ ಭೃಗುವಂಶವನ್ನು ವರ್ಣಿಸುವೆನು ; ಕೇಳು.

ಮಹಾಭಾಗರಾದ ಭೃಗುಮಹರ್ಷಿಗಳು ತಮ್ಮ ಪತ್ನಿಯಾದ ಖ್ಯಾತಿಯಲ್ಲಿ ಧಾತಾ ಮತ್ತು ವಿಧಾತಾ ಎಂಬ ಇಬ್ಬರು ಪುತ್ರರನ್ನೂ ಮತ್ತು ಭಗವತ್ಪರಾಯಣೆಯಾದ ಶ್ರೀ ಎಂಬ ಕನ್ಯೆಯನ್ನೂ ಪಡೆದರು. ಮೇರುಮಹರ್ಷಿಯು ತನ್ನ ಸುಪುತ್ರಿಯರಾದ ಆಯತಿ ಮತ್ತು ನಿಯತಿ ಎಂಬುವರನ್ನು ಕ್ರಮವಾಗಿ ಧಾತಾ ಮತ್ತು ವಿಧಾತಾ ಎಂಬ ಭೃಗು ಪುತ್ರರಿಗೆ ವಿವಾಹಮಾಡಿಕೊಟ್ಟರು. ಅವರಿಗೆ ಮೃಕಂಡ ಮತ್ತು ಪ್ರಾಣ ಎಂಬ ಇಬ್ಬರು ಪುತ್ರರು ಜನಿಸಿದರು. ಆ ಇಬ್ಬರಲ್ಲಿ ಮೃಕಂಡರಿಗೆ ಮಾರ್ಕಂಡೇಯರೂ ಮತ್ತು ಪ್ರಾಣರಿಗೆ ಮುನಿವರ್ಯರಾದ ವೇದಶಿರಾ ಎಂಬುವರೂ ಪುತ್ರರಾಗಿ ಹುಟ್ಟಿದರು. ಭೃಗುಮಹರ್ಷಿಗಳಿಗೆ ಕವಿ ಎಂಬ ಮತ್ತೊಬ್ಬ ಪುತ್ರನೂ ಇದ್ದನು. ಆ ಕವಿಯ ಪುತ್ರರೇ ಭಗವಂತ ರಾದ ಉಶನಸ (ಶುಕ್ರಾಚಾರ್ಯ)ರು. ವತ್ಸ, ವಿದುರ! ಈ ಎಲ್ಲ ಮುನೀಶ್ವರರೂ ಸಂತಾನಗಳನ್ನು ಪಡೆದು ಸೃಷ್ಟಿಯನ್ನು ಮುಂದುವರಿಸಿ ದರು. ಹೀಗೆ ನಿನಗೆ ಕರ್ದಮಮಹರ್ಷಿಗಳ ದೌಹಿತ್ರಸಂತಾನಗಳನ್ನು

ವರ್ಣಿಸಿರುವೆನು. ಇದನ್ನು ಯಾವನು ಶ್ರದ್ಧೆಯಿಂದ ಕೇಳುತ್ತಾನೋ–ಆತನ ಪಾಪಗಳು ಒಡನೆಯೇ ನಾಶಹೊಂದುವುವು.

ಬ್ರಹ್ಮದೇವರ ಪುತ್ರನಾದ ದಕ್ಷಪ್ರಜಾಪತಿಯು ಮನುಪುತ್ರಿಯಾದ ಪ್ರಸೂತಿಯನ್ನು ವಿವಾಹವಾಗಿ ಆಕೆಯಲ್ಲಿ ಪರಿಶುದ್ಧವಾದ ಕಣ್ಣುಗಳುಳ್ಳ ಹದಿನಾರುಮಂದಿ ಕನ್ಯೆಯರನ್ನು ಪಡೆದನು. ಪೂಜ್ಯನಾದ ದಕ್ಷಪ್ರಜಾಪತಿಯು ಅವರಲ್ಲಿ ಹದಿಮೂರು ಮಂದಿಯನ್ನು ಧರ್ಮನಿಗೂ, ಒಬ್ಬಳನ್ನು ಅಗ್ನಿದೇವನಿಗೂ, ಇನ್ನೊಬ್ಬಳನ್ನು ಸಮಸ್ತಪಿತೃದೇವತಾಗಣಕ್ಕೂ ಮತ್ತು ಮತ್ತೊಬ್ಬಳನ್ನು ಜಗತ್ಸಂಹಾರಕನೂ, ಸಂಸಾರಬಂಧನವನ್ನು ನಾಶಪಡಿಸುವವನೂ ಆಗಿರುವ ಭಗವಂತನಾದ ಶಂಕರನಿಗೂ ವಿವಾಹ ಮಾಡಿಕೊಟ್ಟನು. ಅವರಲ್ಲಿ ಶ್ರದ್ಧಾ, ಮೈತ್ರೀ, ದಯಾ, ಶಾನ್ತಿ, ತುಷ್ಟಿ, ಪುಷ್ಟಿ, ಕ್ರಿಯಾ, ಉನ್ನತಿ, ಬುದ್ಧಿ, ಮೇಧಾ, ತಿತಿಕ್ಷಾ, ಹ್ರೀಃ, ಮತ್ತು ಮೂರ್ತಿ–ಎಂಬ ಹದಿಮೂರು ಮಂದಿಯೂ ಧರ್ಮನ ಪತ್ನಿಯರು. ಅವರಲ್ಲಿ ಶ್ರದ್ಧಾ ದೇವಿಯು ಶುಭನಿಗೂ, ಮೈತ್ರಿಯು ಪ್ರಸಾದನಿಗೂ, ದಯಾದೇವಿಯು ಅಭಯಕ್ಕೂ, ಶಾಂತಿಯು ಸುಖಕ್ಕೂ, ತುಷ್ಟಿಯು ಮೋದಕ್ಕೂ ಮತ್ತು ಪುಷ್ಟಿಯು ಅಹಂಕಾರಕ್ಕೂ–ಜನ್ಮವಿತ್ತರು. ಕ್ರಿಯೆಯು ಯೋಗವನ್ನೂ, ಉನ್ನತಿಯು ದರ್ಪವನ್ನೂ, ಬುದ್ಧಿಯು ಅರ್ಥವನ್ನೂ, ಮೇಧೆಯು ಸ್ಮೃತಿಯನ್ನೂ, ತಿತಿಕ್ಷೆಯು ಕ್ಷೇಮವನ್ನೂ, ಹ್ರೀ (ಲಜ್ಜಾ) ದೇವಿಯು ಪ್ರಶ್ರಯ (ವಿನಯ) ವನ್ನೂ ಸಂತಾನವನ್ನಾಗಿ ಪಡೆದರು. ಸಮಸ್ತಸದ್ಗುಣಗಳಿಗೂ ನಿಧಿಯಾಗಿದ್ದ ಮೂರ್ತಿದೇವಿಯು ನರ-ನಾರಾಯಣಮಹರ್ಷಿಗಳಿಗೆ ಜನ್ಮವನ್ನಿತ್ತಳು. ಆ ನರ-ನಾರಾಯಣರು ಅವತರಿಸಿದೊಡನೆಯೇ ಇಡೀ ವಿಶ್ವವೇ ಆನಂದಿತವಾಗಿ ಪ್ರಸನ್ನತೆಯನ್ನು ಪ್ರಕಟಿಸಿತು. ಜನರ ಮನಸ್ಸಿನಲ್ಲೂ, ದಿಕ್ಕುಗಳಲ್ಲೂ, ವಾಯುವಿನಲ್ಲೂ, ನದಿಗಳಲ್ಲೂ, ಪರ್ವತಗಳಲ್ಲೂ ಎಲ್ಲೆಲ್ಲೂ ಪ್ರಸನ್ನತೆಯು ಹರಡಿತು. ಆಕಾಶದಲ್ಲಿ ಮಂಗಳವಾದ್ಯಗಳು ಮೊಳಗತೊಡಗಿದುವು. ದೇವತೆಗಳು ಹೂಮಳೆಗರೆದರು. ಮುನಿಗಳು ಪ್ರಸನ್ನರಾಗಿ ಸ್ತೋತ್ರಮಾಡತೊಡಗಿದರು ಮತ್ತು ಗಂಧರ್ವರೂ-ಕಿನ್ನರರೂ ಗಾನಮಾಡತೊಡಗಿದರು. ಅಪ್ಸರೆಯರು ನೃತ್ಯಮಾಡತೊಡಗಿದರು. ಹೀಗೆ ಆ ಸಮಯದಲ್ಲಿ ಎಲ್ಲೆಲ್ಲಿಯೂ ಆನಂದಮಂಗಳವಾಯಿತು ಮತ್ತು ಬ್ರಹ್ಮದೇವರೇ

ಮುಂತಾದ ಸಮಸ್ತದೇವತೆಗಳೂ ದಿವ್ಯಸ್ತೋತ್ರಗಳಿಂದ ಶ್ರೀಭಗವಂತನನ್ನು ಹೀಗೆ ಸ್ತೋತ್ರಮಾಡಿದರು : (ಶ್ಲೋಕ 32-55)

ಯೋ ಮಾಯಯಾ ವಿರಚಿತಂ ನಿಜಯಾತ್ಮನೀದಂ
ಖೇ ರೂಪಭೇದಮಿವ ತತ್ಪ್ರತಿಚಕ್ಷಣಾಯ ।
ಏತೇನ ಧರ್ಮಸದನೇ ಋಷಿಮೂರ್ತಿನಾದ್ಯ
ಪ್ರಾದುಶ್ಚಕಾರ ಪುರುಷಾಯ ನಮಃ ಪರಸ್ಮೈ ॥೩೭॥

"ಆಕಾಶದಲ್ಲಿ ಬಗೆ-ಬಗೆಯ ರೂಪಗಳು ರಚಿತವಾಗುವಂತೆ–ಯಾವ ಭಗವಂತನು ತನ್ನಲ್ಲಿಯೇ ತನ್ನ ಮಾಯಾಶಕ್ತಿಯಿಂದ ಈ ವಿವಿಧರೂಪ ಗಳುಳ್ಳ ಜಗತ್ತನ್ನು ರಚಿಸಿದ್ದಾನೆಯೋ–ಆತನೇ ಈಗ ತನ್ನ ಸ್ವರೂಪವನ್ನು ಪ್ರಕಾಶಪಡಿಸುವುದಕ್ಕಾಗಿ ಈ ನರ-ನಾರಾಯಣಮಹರ್ಷಿಗಳ ರೂಪದಲ್ಲಿ ಧರ್ಮನ ಮನೆಯಲ್ಲಿ ಪ್ರಕಟಗೊಂಡಿದ್ದಾನೆ. ಇಂತಹ ಪರಮಪುರುಷನಿಗೆ ನಮೋ ನಮಃ.*

---

* ಆಕಾಶವು ತನ್ನಲ್ಲಿ ತೋರುವ ಕಪ್ಪು-ಬಿಳುಪು–ಮುಂತಾದ ಬಣ್ಣಗಳಿಗೆ ಸಂಬಂಧಿಸುವುದಿಲ್ಲ. ಹಾಗೆಯೇ ಪರಮಾತ್ಮನು ತನ್ನಲ್ಲಿರುವ ಜಗತ್ತಿನ ದೋಷಗಳಿಗೆ ಒಳಗಾಗುವುದಿಲ್ಲ. ಅಥವಾ ತನ್ನ ಸಂಕಲ್ಪದಿಂದ ಜೀವರಲ್ಲಿ ದೇವತೆಗಳು, ಮನುಷ್ಯರು, ಪ್ರಾಣಿಗಳು–ಮುಂತಾದ ಭೇದಗಳನ್ನುಂಟುಮಾಡಿದ್ದಾನೆ. ಹಾಗೆಯೇ ಅವರಿಗೆ ಬಂಧ ಮತ್ತು ಮೋಕ್ಷಗಳನ್ನೂ ಕಲ್ಪಿಸಿದ್ದಾನೆ. "ಸಿತನೀಲಾದಿ ಭೇದೇನ ಯಥೈಕಂ ದೃಶ್ಯತೇ ನಭಃ । ಭ್ರಾನ್ತದೃಷ್ಟಿಭಿರಾತ್ಮಾಪಿ ತಥೈಕಃ ಸನ್ ಪೃಥಕ್ ಪೃಥಕ್ ॥" ಜೀವರಿಗೆ ರೂಪಭೇದರಹಿತವಾದ ಸ್ವಸ್ವರೂಪವನ್ನು ಪ್ರಕಾಶಗೊಳಿಸಿ ಅವರ ಸಂಸಾರದ ಕಟ್ಟನ್ನು ಬಿಡಿಸುವುದಕ್ಕಾಗಿ ಧರ್ಮನ ಗೃಹದಲ್ಲಿ ನರ-ನಾರಾಯಣಮಹರ್ಷಿಗಳ ರೂಪದಲ್ಲಿ ಅವತರಿಸಿದ್ದಾನೆ. ಮಾಯಯಾ= ತನ್ನ ಜ್ಞಾನದಿಂದ, ಸಂಕಲ್ಪದಿಂದ. (ಮಾಯಾವಯುನಂ ಜ್ಞಾನಮಿತಿ-ನಿಘಂಟುಃ) (ವೀರರಾಘವೀಯ)

ಮಾಯಯಾ = ಇಚ್ಛೆಯಿಂದ. ಆಕಾಶದಲ್ಲಿ ಕಾಣುವ ಕಪ್ಪು-ಬಿಳುಪು–ಮುಂತಾದ ರೂಪಭೇದಗಳಿಗೆ ಆಕಾಶವೇ ಆಧಾರವಾಗಿರುವಂತೆ–ಪರಮಾತ್ಮನಲ್ಲಿ ಇರುವ ಈ ವಿವಿಧ ವಾದ ಜಗತ್ತಿಗೆ ಪರಮಾತ್ಮನೇ ಆಧಾರವು. ತನಗೂ ಜಗತ್ತಿಗೂ ಇರುವ ಈ ಆಧಾರ ಆಧೇಯಭಾವವನ್ನು ಪ್ರಕಟಪಡಿಸುವುದಕ್ಕಾಗಿ ಧರ್ಮನ ಪತ್ನಿಯಾದ ಮೂರ್ತಿದೇವಿಯ ಪುತ್ರನಾಗಿ ಧರ್ಮನ ಮನೆಯಲ್ಲಿ ಅವತರಿಸಿದ್ದಾನೆ. "ಯಥಾಕಾಶೇ ವಿಮಾನಾನಾಂ ರೂಪಭೇದಃ ಪ್ರತೀಯತೇ । ತಥಾಹತಾ ಜಗದಿದಂ ತತ್ಸಾಮರ್ಥ್ಯಾತ್ ಪ್ರತೀಯತೇ ॥" (ವಿಜಯಧ್ವಜೀಯ) (ಶ್ಲೋಕ ೩೭)

ಸೋಽಯಂ ಸ್ಥಿತಿವ್ಯತಿಕರೋಪಶಮಾಯ ಸೃಷ್ಟಾ-
ನ್ಸತ್ತ್ವೇನ ನಃ ಸುರಗಣಾನನುಮೇಯತತ್ತ್ವಃ ।
ದೃಶ್ಯಾದದಭ್ರಕರುಣೇನ ವಿಲೋಕನೇನ
ಯಚ್ಛ್ರೀನಿಕೇತಮಮಲಂ ಕ್ಷಿಪತಾರವಿನ್ದಮ್ ॥೫೭॥

ಈತನು ಅಪ್ರಮೇಯನು. ಇವನ ತತ್ತ್ವವನ್ನು ಶಾಸ್ತ್ರವೇ ಮುಂತಾದ ಪ್ರಮಾಣಗಳಿಂದ ಊಹಿಸಬಹುದೇ ಹೊರತು ಪ್ರತ್ಯಕ್ಷವಾಗಿ ತಿಳಿದು ಕೊಳ್ಳುವುದು ತುಂಬಾ ಕಷ್ಟಸಾಧ್ಯವಾಗಿದೆ. ಜಗತ್ತಿನ ಸ್ಥಿತಿಯನ್ನು ಸಂರಕ್ಷಿಸುವ ಸ್ವಾಮಿಯೇ ಈತನು. ಈ ಜಗತ್ತಿನ ಮರ್ಯಾದೆಯನ್ನು ಕಾಪಾಡುವುದಕ್ಕಾಗಿ ಸತ್ತ್ವಗುಣದಿಂದ ದೇವಗಣಗಳಾದ ನಮ್ಮನ್ನು ನಿರ್ಮಿಸಿದ್ದಾನೆ. ದಯಾ ಮೂರ್ತಿಯಾದ ಈ ಭಗವಂತನು ಸಮಸ್ತಸೌಂದರ್ಯ–ಲಾವಣ್ಯಗಳಿಗೆ ನೆಲೆಮನೆಯಾಗಿ ತಾವರೆಯ ಹೂವನ್ನೂ ನಾಚಿಸುವಂತಹ ತನ್ನ ಪರಮ ಕರುಣೆಯ ನೋಟದಿಂದ ನಮ್ಮನ್ನು ನೋಡುತ್ತಿರಲಿ."

ವತ್ಸ, ವಿದುರನೇ! ಹೀಗೆ ಅವತಾರಮಾಡಿದ ತಮ್ಮನ್ನು ಸಂದರ್ಶಿಸಿದ ದೇವತೆಗಳಿಂದ ಸ್ತುತಿ-ಪೂಜೆಗಳನ್ನು ಸ್ವೀಕರಿಸಿ ನರ-ನಾರಾಯಣಮಹರ್ಷಿ ಗಳಿಬ್ಬರೂ ಗಂಧಮಾದನಪರ್ವತದ ಮೇಲಕ್ಕೆ ಹೊರಟುಹೋದರು. ಶ್ರೀಹರಿಯ ಅಂಶಸಂಭೂತರಾದ ಆ ನರ-ನಾರಾಯಣರೇ ಈಗ ಭೂಮಿಯ ಭಾರವನ್ನು ಇಳುಹುವುದಕ್ಕಾಗಿ ಯದುಕುಲಭೂಷಣನಾದ ಶ್ರೀಕೃಷ್ಣ ಮತ್ತು ಕುರುಕುಲಭೂಷಣನಾದ ಅರ್ಜುನ–ಎಂಬ ರೂಪಗಳಿಂದ ಅವತರಿ ಸಿದ್ದಾರೆ. ಇಬ್ಬರೂ ಶ್ಯಾಮಲವರ್ಣದಿಂದ ಶೋಭಿಸುತ್ತಾ 'ಕೃಷ್ಣಾ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದಾರೆ. ಅಗ್ನಿದೇವರ ಪತ್ನಿಯಾದ ಸ್ವಾಹಾದೇವಿಯು ಅಗ್ನಿದೇವರಿಗೆ ಅಭಿಮಾನಿಗಳಾದ ಪಾವಕ, ಪವಮಾನ ಮತ್ತು ಶುಚಿ–ಎಂಬ ಮೂವರು ಪುತ್ರರನ್ನು ಪಡೆದಳು. ಅವರೂ ತಂದೆ ಯಂತೆಯೇ ಹವಿಸ್ಸನ್ನು ಭುಜಿಸುವರು. ಆ ಮೂವರು ಅಗ್ನಿಪುತ್ರರಿಂದ ನಲವತ್ತೈದು ಪ್ರಕಾರಗಳಾದ ಅಗ್ನಿಗಳು ಉತ್ಪನ್ನರಾದರು. ತಮ್ಮ ಪಿತೃಗಳು ಮತ್ತು ಪಿತಾಮಹರಿಂದೊಡಗೂಡಿ ಇವರು ಒಟ್ಟು ನಲವತ್ತೊಂಬತ್ತು

ಮಂದಿ ಅಗ್ನಿಗಳಾಗುವರು. (ಪಿತಾಮಹನಾದ ಅಗ್ನಿ ಮತ್ತು ಪಿತೃಗಳಾದ ಪಾವಕ, ಪವಮಾನ ಮತ್ತು ಶುಚಿ ಹಾಗೂ ಈ ಮೂವರ ಪುತ್ರರು ನಲವತ್ತೈದು ಮಂದಿ–ಒಟ್ಟಿಗೆ ಸೇರಿ ನಲವತ್ತೊಂಬತ್ತು ಮಂದಿ ಅಗ್ನಿಗಳು). ಈ ನಲವತ್ತೊಂಬತ್ತು ಮಂದಿ ಅಗ್ನಿಗಳ ಹೆಸರಿನಲ್ಲೇ ವೇದಜ್ಞರಾದ ಬ್ರಾಹ್ಮಣರು ವೈದಿಕವಾದ ಯಜ್ಞಕರ್ಮಗಳಲ್ಲಿ 'ಆಗ್ನೇಯೀ' ಎಂಬ ಇಷ್ಟಿಗಳನ್ನು ಮಾಡುವರು. ಅಗ್ನಿಷ್ವಾತ್ತ, ಬರ್ಹಿಷದ, ಸೌಮ್ಯ (ಸೋಮಪ) ಮತ್ತು ಆಜ್ಯಪ–ಎಂಬ ಈ ನಾಲ್ವರೂ ಪಿತೃದೇವತೆಗಳು. ಶ್ರುತಿಯು ಹೇಳುವಂತೆ 'ಅಗ್ನೌಕರಣ'ವೆಂಬ ಕರ್ಮವಿಶೇಷವಿಲ್ಲದೇ ಆಜ್ಯಪಾನಮಾಡುವವರು, ಅಗ್ನಿಷ್ವಾತ್ತಪಿತೃಗಳು. 'ಅಗ್ನೌಕರಣ'ವೆಂಬ ಕರ್ಮವಿಶೇಷವುಳ್ಳವರಾಗಿ ಸೋಮಪಾನಮಾಡುವವರು ಬರ್ಹಿಷದಪಿತೃಗಳು.* ಈ ಎಲ್ಲ ಪಿತೃದೇವತೆಗಳಿಗೂ ದಕ್ಷಬ್ರಹ್ಮನ ಹದಿನೈದನೆಯ ಪುತ್ರಿಯಾದ 'ಸ್ವಧಾ' ಎಂಬುವಳೇ ಪತ್ನಿಯಾದಳು. ಈ ಸ್ವಧಾದೇವಿಗೆ ಧಾರಿಣೀ ಮತ್ತು ವಯುನಾ–ಎಂಬ ಇಬ್ಬರು ಕನ್ಯೆಯರು ಜನಿಸಿದರು. ಅವರಿಬ್ಬರೂ ಜ್ಞಾನ-ವಿಜ್ಞಾನಪಾರಂಗತೆಯರೂ–ಬ್ರಹ್ಮವಾದಿನಿಗಳೂ ಆದರು. ಮಹಾದೇವನ ಪತ್ನೀ ಸಾಧ್ವೀಮಣಿಯಾದ ಸತೀದೇವಿಯು ಎಲ್ಲ ಪ್ರಕಾರಗಳಿಂದಲೂ ಪತಿನಿಷ್ಠೆಯಿಂದ ಕೂಡಿದವಳಾಗಿ ಪತಿಸೇವಾಪರಾಯಣೆಯಾಗಿದ್ದಳು. ಆದರೆ ಆಕೆಗೆ ತನ್ನ ಗುಣ-ಶೀಲಗಳಿಗೆ ಅನುರೂಪನಾದ ಪುತ್ರನು ಹುಟ್ಟಲಿಲ್ಲ. ಏಕೆಂದರೆ: ಶಿವನು ನಿರಪರಾಧಿಯಾಗಿದ್ದರೂ–ತನ್ನ ತಂದೆಯಾದ ದಕ್ಷ ಪ್ರಜಾಪತಿಯು ಆತನಿಗೆ ಪ್ರತಿಕೂಲವನ್ನು ಆಚರಿಸಿದ್ದರಿಂದ–ಕ್ರುದ್ಧಳಾಗಿ ಆಕೆಯು ತಾರುಣ್ಯದಲ್ಲಿಯೇ ಯೋಗಸಮಾಧಿಯಿಂದ ತನ್ನ ದೇಹವನ್ನು ತ್ಯಜಿಸಿಬಿಟ್ಟಳು. (ಶ್ಲೋಕ 58-66)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಚತುರ್ಥಸ್ಕಂಧದ ೧ನೆಯ ಅಧ್ಯಾಯವು ಮುಗಿಯಿತು.

---

* ಬರ್ಹಿಷದಪಿತೃಗಳು = ಸಾಗ್ನಿಕರು. ಅಗ್ನಿಷ್ವಾತ್ತಪಿತೃಗಳು= ನಿರಗ್ನಿಕರು. "ಯೇ ವೈ ಯಜ್ವಾನಃ ತೇ ವೈ ಪಿತರೋ ಬರ್ಹಿಷದಃ । ಯೇ ವಾ ಅಯಜ್ವಾನೋ ಗೃಹಮೇಧಿನಸ್ತೇ ಪಿತರೋಽಗ್ನಿಷ್ವಾತ್ತಾಃ ॥"

ಅಗ್ನೌಕರಣ–ಎಂದರೆ : ನೀರನ್ನು ದೊನ್ನೆಯಲ್ಲಿ ತುಂಬಿಕೊಂಡು "ಅಗ್ನಯೇ

ಚತುರ್ಥಸ್ಕಂಧ ೨ನೆಯ ಅಧ್ಯಾಯ

ಭಗವಂತನಾದ ಶಿವನಿಗೂ ಮತ್ತು ದಕ್ಷಪ್ರಜಾಪತಿಗೂ ಉಂಟಾದ ಮನಸ್ತಾಪ

'ಶಿವನು ನಿರಪರಾಧಿಯಾಗಿದ್ದರೂ ತನ್ನ ತಂದೆಯಾದ ದಕ್ಷಪ್ರಜಾಪತಿಯು–ಆತನಿಗೆ ಪ್ರತಿಕೂಲವನ್ನು ಆಚರಿಸಿದುದನ್ನು ಸಹಿಸಲಾರದೇ ಸತೀದೇವಿಯು ದೇಹತ್ಯಾಗಮಾಡಿದಳು'–ಎಂಬ ಮಾತನ್ನು ಮೈತ್ರೇಯ ಮಹರ್ಷಿಗಳು ಹೇಳಲು ವಿದುರನು ಅವರನ್ನು ಹೀಗೆ ಪ್ರಶ್ನೆಮಾಡಿದನು :

ಭವೇ ಶೀಲವತಾಂ ಶ್ರೇಷ್ಠೇ ದಕ್ಷೋ ದುಹಿತೃವತ್ಸಲಃ ।
ವಿದ್ವೇಷಮಕರೋತ್ಕಸ್ಮಾದನಾದೃತ್ಯಾತ್ಮಜಾಂ ಸತೀಮ್ ॥೧॥

ಕಸ್ತಂ ಚರಾಚರಗುರುಂ ನಿರ್ವೈರಂ ಶಾನ್ತವಿಗ್ರಹಮ್ ।
ಆತ್ಮಾರಾಮಂ ಕಥಂ ದ್ವೇಷ್ಟಿ ಜಗತೋ ದೈವತಂ ಮಹತ್ ॥೨॥

"ಮಹಾತ್ಮರೇ! ದಕ್ಷಪ್ರಜಾಪತಿಗೆ ತನ್ನ ಪುತ್ರಿಯರಲ್ಲಿ ಅತ್ಯಂತ ಪ್ರೀತಿಯಿತ್ತು ಎಂದು ನಾವು ಕೇಳಿದ್ದೇವೆ. ಹೀಗಿರುವಾಗ ಆತನು ಪುತ್ರಿಯಾದ ಸತೀದೇವಿಯನ್ನು ತಿರಸ್ಕರಿಸಿ, ಆಕೆಯ ಪತಿಯಾದ ಮತ್ತು ಶೀಲವಂತರಲ್ಲಿ ಅತ್ಯಂತಶ್ರೇಷ್ಠನಾದ ಶ್ರೀಮಹಾದೇವನಲ್ಲಿ ದ್ವೇಷವನ್ನು ಏಕೆ ತಾಳಿದನು? ಶಿವನಾದರೋ ಚರಾಚರಗಳಿಗೆಲ್ಲಾ ಗುರುವಾದವನು. ಯಾರಲ್ಲಿಯೂ ವೈರವಿಲ್ಲದವನು. ಶಾಂತಮೂರ್ತಿಯು. ಆತ್ಮಾರಾಮನು. ಜಗತ್ತಿಗೇ ಪರಮಾರಾಧ್ಯನಾದ ಪರದೇವತೆಯು. ಅಂತಹವನ ಮೇಲೂ ಯಾರಾದರೂ ವೈರತಾಳುತ್ತಾರೆಯೇ?

ಮಹರ್ಷಿಗಳೇ! ಆ ಮಾವ-ಅಳಿಯಂದಿರಲ್ಲಿ ಇಂತಹ ದ್ವೇಷವು ಏಕೆ ಉಂಟಾಯಿೀತು? ಪ್ರಾಣಗಳನ್ನು ಬಿಡುವುದು ಅತಿಕಷ್ಟವಾದುದು. ಅಂತಹ ಪ್ರಾಣಗಳನ್ನೂ ಸತೀದೇವಿಯು ತ್ಯಜಿಸುವುದಕ್ಕೆ ಕಾರಣವಾದ ಆ ಮಾವ-ಅಳಿಯಂದಿರ ದ್ವೇಷಕ್ಕೆ ಕಾರಣವೇನೆಂಬುದನ್ನು ನನಗೆ ತಿಳಿಸಿರಿ."

ಕವ್ಯವಾಹನಾಯ ಸ್ವಧಾ ಸ್ವಾಹಾ" "ಸೋಮಾಯ ಪಿತೃಮತೇ ಸ್ವಧಾ ಸ್ವಾಹಾ ॥"–ಎಂದು ಎರಡು ಬಾರಿ ಜಲದಲ್ಲಿ ಹೋಮಮಾಡುವುದು. (ವೀರರಾಘವೀಯ)

(ಶ್ಲೋಕ ೬೩)

ಶ್ರೀಮೈತ್ರೇಯರು ವಿದುರನಿಗೆ ಉತ್ತರಿಸುತ್ತಾರೆ :

"ವತ್ಸ, ವಿದುರನೇ! ಕೇಳು. ಹಿಂದೊಮ್ಮೆ ಸೃಷ್ಟಿಕರ್ತರಾದ ಪ್ರಜಾಪತಿಗಳು ಯಜ್ಞವನ್ನು ಮಾಡಿದಾಗ ಆ ಯಜ್ಞಕ್ಕೆ ಎಲ್ಲ ಮಹರ್ಷಿಗಳೂ, ಮುನಿಗಳೂ, ಅಗ್ನಿಗಳೂ ಮತ್ತು ಸಮಸ್ತದೇವತೆಗಳೂ ತಮ್ಮ-ತಮ್ಮ ಅನುಯಾಯಿಗಳೊಡನೆ ದಯಮಾಡಿಸಿದರು. ಆಗ ಅಲ್ಲಿಗೆ ಮಹಾ ತೇಜಸ್ವಿಯಾದ ದಕ್ಷಪ್ರಜಾಪತಿಯೂ ಆಗಮಿಸಿದನು. ಅವನು ಸೂರ್ಯ ನೋಪಾದಿಯಲ್ಲಿ ತೇಜಸ್ಸಿನಿಂದ ಬೆಳಗುತ್ತಾ ಆ ದೊಡ್ಡ ಸಭಾಭವನದ ಕತ್ತಲೆಯನ್ನು ಕಳೆದುಹಾಕಿದನು. ಆ ತೇಜಸ್ಸಿಗೆ ಬೆರಗಾಗಿ ಬ್ರಹ್ಮದೇವರನ್ನೂ ಮತ್ತು ಶಿವನನ್ನೂ ಬಿಟ್ಟು ಉಳಿದ ಅಗ್ನಿಸಮೇತರಾದ ಸಮಸ್ತಸಭಾಸದರೂ ತಮ್ಮ-ತಮ್ಮ ಆಸನಗಳನ್ನು ಬಿಟ್ಟು ಎದ್ದುನಿಂತರು. ಹೀಗೆ ಎಲ್ಲ ಸಭಾಸದರಿಂದಲೂ ಸಮ್ಮಾನಪಡೆದ ತೇಜಸ್ವಿಯಾದ ದಕ್ಷಪ್ರಜಾಪತಿಯು ತಂದೆಯಾದ ಬ್ರಹ್ಮದೇವರಿಗೆ ನಮಸ್ಕಾರಮಾಡಿ ಅವರ ಆಜ್ಞೆಯಂತೆ ಆಸನದಲ್ಲಿ ಮಂಡಿಸಿದನು. ಆದರೆ ಶಿವನು ಮಾತ್ರ ಕುಳಿತೇ ಇದ್ದು ತನಗೆ ಗೌರವವನ್ನು ಸಲ್ಲಿಸದೇ ಇದ್ದುದನ್ನು ಆತನು ಗಮನಿಸಿದನು. ಆ ಅನಾದರವನ್ನು ಆತನಿಗೆ ಸಹಿಸಲಾಗಲಿಲ್ಲ. ಆಗ ಆತನು ಶಿವನನ್ನು ತನ್ನ ಕ್ರೋಧಾಗ್ನಿಯಿಂದ ಸುಟ್ಟುಹಾಕುತ್ತಿರುವನೋ–ಎಂಬಂತೆ ಕಡೆಗಣ್ಣಿನಿಂದ ದುರ-ದುರನೆ ನೋಡುತ್ತಾ ಸಭೆಯಲ್ಲಿ ಹೇಳಿದನು :

"ಅಗ್ನಿಗಳಿಂದಲೂ ದೇವತೆಗಳಿಂದಲೂ ಒಡಗೂಡಿರುವ ಎಲೈ ಬ್ರಹ್ಮರ್ಷಿಗಳೇ! ನನ್ನ ಈ ಮಾತನ್ನು ಕೇಳಿರಿ. ನಾನು ಅಜ್ಞಾನದಿಂದಾಗಲೀ ಮಾತ್ಸರ್ಯದಿಂದಾಗಲೀ ಮಾತನಾಡುತ್ತಿಲ್ಲ. ಶಿಷ್ಟರ ಆಚಾರ-ವ್ಯವಹಾರ ಗಳನ್ನು ಕುರಿತೇ ಆಡುತ್ತಿದ್ದೇನೆ. ಲೋಕಪಾಲಕರಲ್ಲಿ ಒಬ್ಬನಾಗಿರುವ ಈ ನಾಚಿಕೆಗೆಟ್ಟವನು ಇಡೀ ಲೋಕಪಾಲಕರ ಪವಿತ್ರಕೀರ್ತಿಯನ್ನೇ ಕೆಡಿಸು ತ್ತಿದ್ದಾನೆ ; ನೋಡಿದಿರಾ? ಸತ್ಪುರುಷರು ನಡೆದುಬಂದ ದಾರಿಯನ್ನೇ ಕಳಂಕಿತಗೊಳಿಸಿದನಲ್ಲಾ, ಈ ದುರಹಂಕಾರಿ! ಬ್ರಾಹ್ಮಣರ ಮತ್ತು ಅಗ್ನಿಯ ಸಮಕ್ಷದಲ್ಲಿ ಸಾಧುವಿನಂತೆ ನನ್ನ ಸಾವಿತ್ರೀಸದೃಶಳಾದ ಮಗಳ ಕೈಹಿಡಿದ ಈತನು ನನ್ನ ಶಿಷ್ಯರಿಗೆ ಸಮಾನನಲ್ಲವೇ? ಆದರೂ ಇವನು ನನಗೆ

ಎಂತಹ ಅವಮಾನಮಾಡಿದ? ಈ ಕಪಿಯ ಕಣ್ಣಿನ ಕುರೂಪಿಯು–ಜಿಂಕೆಯ ಮರಿಯ ಕಣ್ಣಿನಂತೆ ಚೆಲುವಾದ ಕಣ್ಣುಗಳುಳ್ಳ ನನ್ನ ಪ್ರಿಯಪುತ್ರಿಯ ಕೈಹಿಡಿದನಲ್ಲಾ! ಈತನಿಗೆ ಗುರುಸ್ಥಾನದಲ್ಲಿದ್ದು, ಎದ್ದುನಿಂತು ಸ್ವಾಗತ-ನಮಸ್ಕಾರಗಳನ್ನು ಪಡೆಯಲು ಯೋಗ್ಯನಾದ ನನಗೆ, ಈತನು ಮಾತಿನಿಂದಲೂ ಸತ್ಕಾರಮಾಡಲಿಲ್ಲವಲ್ಲಾ! ಅಯ್ಯೋ! ಅಯೋಗ್ಯನಿಗೆ ವೇದವನ್ನು ಹೇಳಿಕೊಟ್ಟಂತೆ–ನಾನು ಇಷ್ಟವಿಲ್ಲದಿದ್ದರೂ ಈತನಿಗೆ ನನ್ನ ಪುತ್ರಿಯನ್ನು ಕೊಟ್ಟೆನಲ್ಲಾ! ಈತನು ಸತ್ಕರ್ಮಗಳನ್ನು ಲೋಪಗೊಳಿಸಿದವನು. ಅಶುಚಿಯು. ದುರಭಿಮಾನಿಯು. ಧರ್ಮದ ಮರ್ಯಾದೆಯನ್ನು ಮುರಿದು ಹಾಕಿದವನು. ಇವನು ಯಾವಾಗಲೂ ಪ್ರೇತಗಳಿಗೆ ವಾಸಸ್ಥಾನವಾಗಿರುವ ಭಯಂಕರವಾದ ಶ್ಮಶಾನಗಳಲ್ಲಿ ಭೂತ-ಪ್ರೇತಗಳೊಡನೆ ಅಲೆದಾಡುತ್ತಿರುತ್ತಾನೆ. ಹುಚ್ಚನಂತೆ ತಲೆಗೂದಲುಗಳನ್ನು ಕೆದರಿಕೊಂಡು, ಬೆತ್ತಲೆಯಾಗಿ, ನಗುತ್ತಲೂ ಅಳುತ್ತಲೂ ಅಲೆಮಾರಿಯಾಗಿ ತಿರುಗುತ್ತಿರುತ್ತಾನೆ. ಅಪವಿತ್ರವಾದ ಚಿತಾಭಸ್ಮವನ್ನು ಮೈಗೆಲ್ಲಾ ಬಳಿದುಕೊಂಡು, ಕೊರಳಲ್ಲಿ-ಭೂತಗಳು ಧರಿಸಲು ಯೋಗ್ಯವಾಗಿರುವ ಮನುಷ್ಯರ ತಲೆಬುರುಡೆಗಳ ಮಾಲೆಯನ್ನೂ, ದೇಹದಲ್ಲೆಲ್ಲಾ ಮೂಳೆಗಳೆಂಬ ಒಡವೆಗಳನ್ನೂ ಹಾಕಿಕೊಂಡಿರುತ್ತಾನೆ. ಇವನು ಹೆಸರಿಗೆ ಮಾತ್ರ ಶಿವನಾಗಿದ್ದಾನೆ. ಆದರೆ ವಾಸ್ತವವಾಗಿ ಅತ್ಯಂತ ಅಶಿವ–ಅಮಂಗಳರೂಪಿಯಾಗಿದ್ದಾನೆ. ಮತ್ತೇರಿದವನಿಗೆ ಮತ್ತೇರಿದವರೇ ಪ್ರಿಯರಾಗಿರುವಂತೆ–ಈತನಿಗೂ ಭೂತ-ಪ್ರೇತ-ಪಿಶಾಚಾದಿ ತಮೋಗುಣದ ಜೀವಗಳೇ ಪ್ರಿಯರು. ಅವರಿಗೆ ಈತನು ನಾಯಕನು. ಛೇ! ನಾನು ಬ್ರಹ್ಮದೇವರ ಮಾತಿಗೆ ಮರುಳಾಗಿ, ಭೂತಪತಿಯೂ, ಆಚಾರಹೀನನೂ, ದುಷ್ಟಸ್ವಭಾವದವನೂ ಆದ ಇಂತಹವನಿಗೆ ಸಾಧುಸ್ವಭಾವದ ಸುಕುಮಾರಿಯಾದ ನನ್ನ ಕುವರಿಯನ್ನು ವಿವಾಹಮಾಡಿಕೊಟ್ಟೆನಲ್ಲಾ!" (ಶ್ಲೋಕ 3-16)

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಎಲೈ ಸಾಧುಶ್ರೇಷ್ಠನಾದ ವಿದುರನೇ! ಕೇಳು. ದಕ್ಷನು ಹೀಗೆ ತನ್ನನ್ನು ನಿಂದಿಸಿದರೂ, ಭಗವಂತನಾದ ಮಹಾದೇವನು ಅದಕ್ಕೆ ಯಾವ ಪ್ರತಿಕ್ರಿಯೆಯನ್ನೂ ತೋರದೇ ಹಿಂದಿನಂತೆ ನಿಶ್ಚಲಭಾವದಿಂದಲೇ ಕುಳಿತಿದ್ದನು.

ಅದರಿಂದ ದಕ್ಷನ ಕ್ರೋಧವು ಮತ್ತಷ್ಟು ಉಕ್ಕೇರಿ, ಆತನು ಕೈಯ್ಯಲ್ಲಿ ನೀರನ್ನು ತೆಗೆದುಕೊಂಡು ಶಿವನನ್ನು ಶಪಿಸಲು ಸಿದ್ಧನಾದನು. "ಈತನು ದೇವಗಣಗಳಲ್ಲಿ ಅಧಮನು. ಇಂದಿನಿಂದ ಈತನಿಗೆ ಇಂದ್ರ-ಉಪೇಂದ್ರರೇ ಮುಂತಾದ ದೇವತೆಗಳೊಡನೆ ಯಜ್ಞದಲ್ಲಿ ಭಾಗವು ದೊರೆಯದಿರಲಿ"– ಎಂದು ಶಾಪವಾಕ್ಯವನ್ನು ಉಚ್ಚರಿಸಿದನು. ಸಭೆಯಲ್ಲಿ ನೆರೆದಿದ್ದ ಮುಖ್ಯ ಸದಸ್ಯರು–'ಬೇಡ! ಬೇಡ!'–ಎಂದು ತಡೆಯುತ್ತಿದ್ದರೂ ಆತನು ಯಾರ ಮಾತನ್ನೂ ಕೇಳದೇ, ಶಿವನಿಗೆ ಶಾಪವನ್ನು ಕೊಟ್ಟೇಬಿಟ್ಟನು ಮತ್ತು ಕಡುಕೋಪದಿಂದ ಸಭಾತ್ಯಾಗಮಾಡಿ ತನ್ನ ಮನೆಗೆ ಹೊರಟುಹೋದನು.

ಸ್ವಾಮೀ ಶ್ರೀಶಂಕರನ ಅನುಯಾಯಿಗಳಲ್ಲಿ ಅಗ್ರಗಣ್ಯನಾದ ನಂದಿಕೇಶ್ವರನಿಗೆ ಈ ಶಾಪಸಮಾಚಾರವು ತಿಳಿಯಲು ಆತನು ಒಡನೆಯೇ ಕಿಡಿ-ಕಿಡಿಯಾದನು. ಆ ದಕ್ಷನಿಗೂ ಮತ್ತು ಆತನ ಕೆಟ್ಟಮಾತುಗಳನ್ನು ಅನುಮೋದನೆಮಾಡಿದ ಬ್ರಾಹ್ಮಣರಿಗೂ ಅವನು ಭಯಂಕರವಾದ ಶಾಪವನ್ನು ಉಚ್ಚರಿಸಿದನು :

"ಮರಣಸ್ವಭಾವವುಳ್ಳ, ಈ ದೇಹದಲ್ಲಿಯೇ ಅಭಿಮಾನಹೊಂದಿರುವ ಈ ಮೂರ್ಖನು ಯಾರಿಗೂ ದ್ರೋಹಮಾಡದೇ ಇರುವ ಭಗವಂತನಾದ ಶಂಭುವಿನ ವಿಷಯದಲ್ಲಿ ದ್ವೇಷದ್ರೋಹವನ್ನು ಮಾಡಿದ್ದಾನೆ. ಭೇದಬುದ್ಧಿಯಿಂದ ಕೂಡಿದ ಈ ಗಾಂಪನು ತತ್ತ್ವಜ್ಞಾನವಿಮುಖನೇ ಆಗಲಿ. ಈತನು ಅರ್ಥವಾದರೂಪವಾದ* ವೇದವಾಕ್ಯಗಳಿಂದ ಮರುಳುಗೊಂಡು,

---

* ಅರ್ಥವಾದ–ಎಂದರೆ : ಅತ್ಯಂತ ಹೊಗಳಿಕೆಯ ಅಥವಾ ತೆಗಳಿಕೆಯ ಮಾತು. ಆದರೆ ಅವಕ್ಕೆ ಆ ಹೊಗಳಿಕೆಯಲ್ಲಾಗಲೀ ಅಥವಾ ತೆಗಳಿಕೆಯಲ್ಲಾಗಲೀ ತಾತ್ಪರ್ಯವಿಲ್ಲ. ನಿರ್ದಿಷ್ಟವಾದ ಆ ಕರ್ಮವನ್ನು ಆಚರಿಸಲೇಬೇಕು ಅಥವಾ ಆಚರಿಸಲೇಬಾರದು ಎಂಬ ವಿಧಿ-ನಿಷೇಧಗಳಲ್ಲಿ ಮಾತ್ರ ತಾತ್ಪರ್ಯ. ಉದಾ : ಚಾತುರ್ಮಾಸ್ಯ ಮಾಡುವವನಿಗೆ ಅಕ್ಷಯವಾದ ಪುಣ್ಯವು ದೊರೆಯುತ್ತದೆ–ಎಂಬ ವೇದವಾಕ್ಯ.' ಇದಕ್ಕೆ ಚಾತುರ್ಮಾಸ್ಯವನ್ನು ಆಚರಿಸುವಂತೆ ಪ್ರೇರಿಸುವುದರಲ್ಲಿ ಮಾತ್ರವೇ ತಾತ್ಪರ್ಯ. ಏಕೆಂದರೆ : ಚಾತುರ್ಮಾಸ್ಯಮಾಡಿದವನಿಗೆ ಪುಣ್ಯವು ಉಂಟಾದರೂ ಅದು ಅಕ್ಷಯವಲ್ಲ. ಕಾಲಕ್ರಮದಲ್ಲಿ ಪುಣ್ಯವು ಕ್ಷೀಣಿಸಿ ಅವನೂ ಮನುಷ್ಯಲೋಕದಲ್ಲಿ

ವಿವೇಕಭ್ರಷ್ಟನಾಗಿ, ಗ್ರಾಮ್ಯವಾದ ವಿಷಯಸುಖಗಳನ್ನೇ ಬಯಸುತ್ತಾ, ಕಪಟಧರ್ಮಗಳುಳ್ಳ ಮನೆವಾರ್ತೆಗಳಲ್ಲಿಯೇ ಆಸಕ್ತನಾಗಿ ಕರ್ಮಕಾಂಡ ದಲ್ಲಿಯೇ ರಮಿಸುತ್ತಿದ್ದಾನೆ. ದೇಹಾದಿಗಳಲ್ಲಿಯೇ ಆತ್ಮಭಾವವನ್ನು ನಿಶ್ಚಯಿಸಿಕೊಂಡಿರುವ ಬುದ್ಧಿ ಈತನದು. ಆದರಿಂದ ಆತ್ಮಸ್ವರೂಪವನ್ನು ಮರೆತು ಸಾಕ್ಷಾತ್ ಪಶುವಿನಂತೆ ಆಗಿಬಿಟ್ಟಿರುವ ಈತನು ಅತ್ಯಂತ ಸ್ತ್ರೀಲಂಪಟನಾಗಲಿ. ಶೀಘ್ರದಲ್ಲಿ ಈತನಿಗೆ ಹೋತದ ಮುಖ ಬರಲಿ. ಈ ಮೂರ್ಖನು ಕರ್ಮಮಯವಾದ ಅವಿದ್ಯೆಯನ್ನೇ ವಿದ್ಯೆಯೆಂದು ತಿಳಿದು ಕೊಂಡಿದ್ದಾನೆ. ಆದ್ದರಿಂದ ಈತನೂ ಮತ್ತು ಭಗವಂತನಾದ ಶಂಕರನಿಗೆ ಅವಮಾನಮಾಡಿರುವ ಈತನ ಬೆಂಬಲಿಗರೂ–ಎಲ್ಲರೂ ಹುಟ್ಟು-ಸಾವುಗಳ ರೂಪವಾದ ಸಂಸಾರಚಕ್ರದಲ್ಲಿಯೇ ಸುತ್ತುತ್ತಿರಲಿ. ಕರ್ಮಕಾಂಡಕ್ಕೆ ಸೇರಿದ ವೇದವಾಣಿಯೆಂಬ ಬಳ್ಳಿಯು ಫಲಶ್ರುತಿಯೆಂಬ ಪುಷ್ಪಗಳಿಂದಲೇ ರಮಣೀಯವಾಗಿದೆ. ಕರ್ಮಫಲರೂಪವಾದ ಅದರ ಮೋಹಕವಾದ ಗಂಧಕ್ಕೆ ವಶರಾದವರ ಚಿತ್ತವು ಕಲಕಿಹೋಗುತ್ತದೆ. ಅವರಿಗೆ ಶ್ರೇಯಸ್ಸಿನ ಫಲವು ದೊರೆಯುವುದೇ ಇಲ್ಲ; ಶಾಂತಿಯೂ ಸಿಕ್ಕುವುದಿಲ್ಲ. ಅಂತಹ ಶಂಕರದ್ರೋಹಿಗಳು ಕರ್ಮಗಳ ಬಲೆಯಲ್ಲಿಯೇ ಸಿಕ್ಕಿಹಾಕಿಕೊಂಡಿರಲಿ. ಜ್ಞಾನಹೀನರಾಗಿ ಕೇವಲ ಕರ್ಮಠರಾಗಿರುವ ಇಂತಹ ಬ್ರಾಹ್ಮಣರು

ಜನ್ಮವೆತ್ತಲೇಬೇಕಾಗುತ್ತದೆ. ಆದುದರಿಂದ ಆ ಯಜ್ಞಕರ್ಮದ ಸ್ವಲ್ಪವಾದ ಮಹಿಮೆಯನ್ನೇ ತುಂಬಾ ಅತಿಶಯವಾಗಿ ಹೇಳಿ ಅವರಲ್ಲಿ ಆ ಕರ್ಮದಲ್ಲಿ ಆಸಕ್ತಿಯನ್ನು ಮೂಡಿಸುವುದರಲ್ಲೇ ಇದಕ್ಕೆ ತಾತ್ಪರ್ಯ. ಇದಕ್ಕೆ 'ಪ್ರಶಂಸಾರ್ಥವಾದ' ಎಂದು ಹೆಸರು. (೨) 'ಉದಯಾನಂತರ ಹೋಮಮಾಡುವವನು ಅಗ್ನಿಗೆ ದ್ರೋಹಮಾಡುತ್ತಾನೆ. ಉದಯಕ್ಕೆ ಮೊದಲೇ ಹೋಮಮಾಡುವವನು ಆದಿತ್ಯನಿಗೆ ದ್ರೋಹ ಮಾಡುತ್ತಾನೆ'–ಎಂದು ಶ್ರುತಿವಾಕ್ಯಗಳಿವೆ. ಇಲ್ಲಿ ಉದಯಾನಂತರದ ಹೋಮವನ್ನು ನಿಂದಿಸಿರುವುದರ ಉದ್ದೇಶ ಉದಯಕ್ಕೆ ಮೊದಲೇ ಹೋಮಮಾಡಲಿ ಎಂಬುದನ್ನು ಮನವರಿಕೆ ಮಾಡುವುದು. ಉದಯಾತ್ಪೂರ್ವದ ಹೋಮವನ್ನು ನಿಂದೆಮಾಡಿರುವುದರ ಉದ್ದೇಶ ಉದಯಾನಂತರ ಹೋಮಮಾಡಲಿ–ಎಂಬುದನ್ನು ಮನವರಿಕೆಮಾಡುವುದು. ಇದು 'ನಿಂದಾರ್ಥವಾದ' ಎನಿಸುವುದು. ಅರ್ಥವಾದಗಳಿಗೆ ಸ್ವತಂತ್ರವಾದ ನೇರವಾದ ಅರ್ಥವಿಲ್ಲ. ವಿಧಿ ಅಥವಾ ನಿಷೇಧವಾಕ್ಯಗಳೊಡನೆ ಸೇರಿಸಿ ಅವುಗಳ ತಾತ್ಪರ್ಯವನ್ನರಿಯಬೇಕು. (ಶ್ಲೋಕ ೨೨)

ಭಕ್ಷ್ಯ ಯಾವುದು? ಅಭಕ್ಷ್ಯ ಯಾವುದು?–ಎಂಬ ವಿವೇಕವಿಲ್ಲದೇ ಕೇವಲ ಉದರಂಭರಣಕ್ಕಾಗಿಯೇ ವಿದ್ಯೆ, ತಪಸ್ಸು, ವ್ರತ–ಮುಂತಾದುವುಗಳನ್ನು ಆಶ್ರಯಿಸಿ, ಹಣಕಾಸು ಮತ್ತು ದೇಹೇಂದ್ರಿಯಸುಖಗಳನ್ನೇ ಪರಮಸುಖ ವೆಂದು ಭಾವಿಸಿ ಅವುಗಳಿಗೇ ಗುಲಾಮರಾಗಿ ಲೋಕದಲ್ಲಿ ಭಿಕ್ಷೆಬೇಡುತ್ತಾ ಅಲೆದಾಡುತ್ತಿರಲಿ"–ಎಂದು ಶಾಪವನ್ನಿತ್ತನು.

ನಂದೀಶ್ವರನು ಹೀಗೆ ಬ್ರಾಹ್ಮಣಕುಲವನ್ನು ಶಪಿಸಿದ್ದನ್ನು ಕೇಳಿ ಭೃಗುಮಹರ್ಷಿಗಳು ಕ್ರುದ್ಧರಾಗಿ ಬ್ರಾಹ್ಮಣರು ಶಿಕ್ಷೆಯ ರೂಪದಲ್ಲಿ ಕೊಡುವ ಪ್ರತಿಶಾಪವನ್ನು ಉಚ್ಚರಿಸಿದರು :

"ಯಾರು ಕಾಪಾಲೀ–ಶಿವವ್ರತವನ್ನು ಕೈಗೊಂಡು ಅಂತಹ ವ್ರತಿಗಳ ಅನುಯಾಯಿಗಳಾಗುತ್ತಾರೋ–ಅವರು ಸಚ್ಛಾಸ್ತ್ರಗಳಿಗೆ ವಿರುದ್ಧವಾಗಿ ಆಚರಿಸುವ ಪಾಷಂಡಿಗಳಾಗಲಿ. ಶೌಚಾಚಾರವನ್ನು ಬಿಟ್ಟು, ಮಂದ ಬುದ್ಧಿಯುಳ್ಳವರಾಗಿ, ಜಟೆ, ಭಸ್ಮ ಮತ್ತು ಮೂಳೆಗಳನ್ನು ಯಾರು ಧರಿಸುತ್ತಾರೋ–ಅವರು ಮಾತ್ರವೇ ಈ ಕಾಪಾಲಿಕಸಂಪ್ರದಾಯದಲ್ಲಿ ದೀಕ್ಷಿತರಾಗಲಿ. ಸುರೆ ಮತ್ತು ಆಸವಗಳೆಂಬ ಮದ್ಯಗಳನ್ನು ದೇವತೆಗಳಿಗೆ ಸಮವಾಗಿ ಆದರಿಸಲ್ಪಡುವ ಸಂಪ್ರದಾಯ ಇದು. ಎಲ-ಎಲಾ ತಲೆಕೆಟ್ಟ ವರೇ! ಧರ್ಮಮರ್ಯಾದೆಯನ್ನು ಸಂಸ್ಥಾಪನೆಮಾಡುತ್ತಾ ವರ್ಣಾಶ್ರಮಿ ಗಳನ್ನು ರಕ್ಷಿಸುವ ಸೇತುವೆಯಾಗಿರುವ ವೇದವನ್ನೂ ಮತ್ತು ಬ್ರಾಹ್ಮಣರನ್ನೂ ನಿಂದಿಸುತ್ತಿದ್ದೀರಲ್ಲಾ! ನೀವು ಪಾಷಂಡಮತವನ್ನು ಆಶ್ರಯಿಸಿದ್ದೀರಿ ಎಂಬುದು ಇದರಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಈ ವೇದಮಾರ್ಗವೇ ಜನರಿಗೆ ಕಲ್ಯಾಣಕರವಾದುದು. ಇದೇ ಸನಾತನಮಾರ್ಗ. ನಮ್ಮ ಹಿಂದಿನ ಹಿರಿಯರು ನಡೆದುಬಂದ ದಾರಿಯೂ ಇದೇ. ಎಲ್ಲಕ್ಕೂ ಮೇಲಾಗಿ ಸಾಕ್ಷಾತ್ ಮಹಾವಿಷ್ಣುವೇ ಮೂಲವಾಗಿರುವ ಮಾರ್ಗವಿದು. ನೀವು ಸತ್ಪುರುಷರ ಪರಮಪವಿತ್ರವೂ–ಸನಾತನಮಾರ್ಗವೂ ಆದ ವೇದವನ್ನು ನಿಂದಿಸುತ್ತಿದ್ದೀರಿ. ಆದ್ದರಿಂದ ನೀವು ಭೂತಗಳಿಗೆ ಅಧಿಪತಿಯಾಗಿರುವ, ನಿಮ್ಮ ಇಷ್ಟದೇವನು ವಾಸಮಾಡುತ್ತಿರುವ ಪಾಷಂಡಮಾರ್ಗಕ್ಕೆ ಹೊರಟು ಹೋಗಿರಿ."

ಶ್ರೀಮೈತ್ರೇಯರು ಹೇಳುತ್ತಾರೆ :

ಸಾಧುಶಿರೋಮಣಿಯೇ! ವಿದುರ! ಕೇಳು. ಭೃಗುಮಹರ್ಷಿಗಳು ಹೀಗೆ ಶಾಪವನ್ನು ಕೊಡಲು ಭಗವಂತನಾದ ಶಂಕರನು ಸ್ವಲ್ಪ ಖೇದ ಗೊಂಡವನಂತೆ ತನ್ನ ಅನುಯಾಯಿಗಳೊಡನೆ ಅಲ್ಲಿಂದ ಹೊರಟು ಹೋದನು. ಪ್ರಜಾಪತಿಗಳು ಆಚರಿಸುತ್ತಿದ್ದ ಆ ಯಜ್ಞದ ಕಾಲಾವಧಿ ಒಂದು ಸಾವಿರ ವರ್ಷಗಳಾಗಿದ್ದುವು. ಅದರಲ್ಲಿ ಉಪಾಸ್ಯದೇವತೆಯಾದರೋ ಪುರುಷೋತ್ತಮನಾದ ಶ್ರೀಹರಿಯೇ ಆಗಿದ್ದನು. ಅಂತಹ ಯಜ್ಞವನ್ನು ಮುಗಿಸಿ ಆ ಪ್ರಜಾಪತಿಗಳು ಗಂಗಾ-ಯಮುನೆಗಳ ಸಂಗಮಸ್ಥಳದಲ್ಲಿ ಅವಭೃಥಸ್ನಾನವನ್ನು ಮಾಡಿ ಪ್ರಸನ್ನವಾದ ಮನಸ್ಸಿನಿಂದ ತಮ್ಮ-ತಮ್ಮ ಸ್ಥಾನಗಳಿಗೆ ಹೊರಟುಹೋದರು. (ಶ್ಲೋಕ 17-35)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೨ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೩ನೆಯ ಅಧ್ಯಾಯ

ಸತೀದೇವಿಯು ತಂದೆಯು ಮಾಡುತ್ತಿದ್ದ ಯಜ್ಞೋತ್ಸವಕ್ಕೆ ಹೋಗಬೇಕೆಂದು ಹಠಮಾಡಿದುದು

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ವಿದುರ! ಮುಂದೇನಾಯಿತೆಂಬುದನ್ನು ಹೇಳುತ್ತೇನೆ ; ಕೇಳು :

ಸದಾ ವಿದ್ವಿಷತೋರೇವಂ ಕಾಲೋ ವೈ ಧ್ರಿಯಮಾಣಯೋಃ ।
ಜಾಮಾತುಃ ಶ್ವಶುರಸ್ಯಾಪಿ ಸುಮಹಾನತಿಚಕ್ರಮೇ ॥೧॥

ಹೀಗೆ ಮಾವ-ಅಳಿಯಂದಿರು ಪರಸ್ಪರವಾಗಿ ವೈರವಿರೋಧವನ್ನು ಹೊಂದಿರುವಂತೆಯೇ ಬಹಳ ಕಾಲವು ಕಳೆಯಿತು.

ಈ ನಡುವೆ ಬ್ರಹ್ಮದೇವರು ದಕ್ಷನನ್ನು ಎಲ್ಲ ಪ್ರಜಾಪತಿಗಳಿಗೂ ಅಧಿಪತಿಯನ್ನಾಗಿ ನೇಮಕಮಾಡಿದರು. ಇದರಿಂದ ದಕ್ಷನ ಗರ್ವ-ಪ್ರತಿಷ್ಠೆ ಗಳು ಮತ್ತೂ ಹೆಚ್ಚಿದುವು. ಆತನು ಅತ್ಯಂತಬ್ರಹ್ಮನಿಷ್ಠರಾದ ಮಹಾತ್ಮ

ರನ್ನೂ ತಿರಸ್ಕರಿಸಿ, ವಾಜಪೇಯಯಜ್ಞವನ್ನೂ ಮಾಡಿ ಅನಂತರ 'ಬೃಹಸ್ಪತಿಸವ' ವೆಂಬ ಮಹಾಯಜ್ಞವನ್ನೂ ಪ್ರಾರಂಭಿಸಿದನು. ಆ ಯಜ್ಞೋತ್ಸವಕ್ಕೆ ಎಲ್ಲ ಬ್ರಹ್ಮರ್ಷಿಗಳೂ, ದೇವರ್ಷಿಗಳೂ, ಪಿತೃಗಳೂ, ದೇವತೆಗಳೇ ಮುಂತಾದವರೂ ತಮ್ಮ-ತಮ್ಮ ಪತ್ನಿಯರೊಡನೆ ದಯಮಾಡಿಸಿದರು. ದಕ್ಷಪ್ರಜಾಪತಿಯು ಅವರೆಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದನು. ಆಗ ಆಕಾಶಮಾರ್ಗದಲ್ಲಿ ಹೋಗುತ್ತಿದ್ದ ದೇವತೆಗಳು ಆ ಯಜ್ಞದ ವಿಚಾರವಾಗಿಯೇ ಪರಸ್ಪರವಾಗಿ ಚರ್ಚೆ-ಮಾತುಕತೆಗಳನ್ನು ನಡೆಸುತ್ತಿದ್ದರು. ಅವರ ಬಾಯಿಂದ ದಕ್ಷಕುಮಾರಿಯಾದ ಸತೀದೇವಿಯು ತನ್ನ ತಂದೆಯ ಮನೆಯಲ್ಲಿ ನಡೆಯುತ್ತಿದ್ದ ಯಜ್ಞದ ಸಮಾಚಾರವನ್ನು ಕೇಳಿ ತಿಳಿದಳು. ತಮ್ಮ ವಾಸಸ್ಥಾನವಾದ ಕೈಲಾಸದ ದಾರಿಯ ಮೂಲಕ ಎಲ್ಲ ಕಡೆಗಳಿಂದಲೂ ಚಂಚಲವಾದ ಕಣ್ಣುಗಳುಳ್ಳ ಸುಂದರಿಯರಾದ ಗಂಧರ್ವ ಮತ್ತು ಯಕ್ಷಸ್ತ್ರೀಯರು ಥಳ-ಥಳಿಸುವ ಕುಂಡಲಗಳನ್ನೂ ಹಾರಗಳನ್ನೂ ಧರಿಸಿ ಚೆನ್ನಾಗಿ ಅಲಂಕಾರಮಾಡಿಕೊಂಡು, ತಮ್ಮ-ತಮ್ಮ ಪತಿಗಳೊಡನೆ ವಿಮಾನಗಳಲ್ಲಿ ಕುಳಿತು ಆ ಯಜ್ಞೋತ್ಸವಕ್ಕೆ ಹೋಗುತ್ತಿರುವುದನ್ನೂ ಆಕೆಯು ನೋಡಿದಳು. ಅದರಿಂದ ಆಕೆಗೂ ಯಜ್ಞಕ್ಕೆ ಹೋಗಬೇಕೆಂಬ ಕುತೂಹಲವುಂಟಾಗಿ, ಆಕೆಯು ತನ್ನ ಪತಿಯಾದ ಭಗವಂತನಾದ ಭೂತೇಶನಲ್ಲಿ ಆಗ್ರಹಪೂರ್ವಕವಾಗಿ ಪ್ರಾರ್ಥಿಸಿಕೊಂಡಳು : (ಶ್ಲೋಕ 2-7)

"ಸ್ವಾಮಿ! ವಾಮದೇವರೇ! ನಿಮ್ಮ ಮಾವನಾದ ದಕ್ಷಪ್ರಜಾಪತಿಯ ಮನೆಯಲ್ಲಿ ದೊಡ್ಡ ಯಜ್ಞೋತ್ಸವವು ನಡೆಯುತ್ತಿದೆಯೆಂದು ತಿಳಿದು ಬಂದಿದೆ. ನೋಡಿರಿ, ಈ ದೇವತೆಗಳೆಲ್ಲರೂ ಅಲ್ಲಿಗೇ ಹೋಗುತ್ತಿದ್ದಾರೆ. ನೀವು ಇಷ್ಟಪಡುವುದಾದರೆ ನಾವು ಅದಕ್ಕೆ ಹೋಗೋಣ. ಈ ಸಮಯದಲ್ಲಿ ತಮ್ಮ ಆತ್ಮೀಯರನ್ನು ಸಂಧಿಸಿ ಅವರೊಡನೆ ಸೇರಿರಬೇಕೆಂದು ನನ್ನ ಸೋದರಿಯರೂ ತಮ್ಮ-ತಮ್ಮ ಪತಿಗಳೊಡನೆ ಅಲ್ಲಿಗೆ ಅವಶ್ಯವಾಗಿ ಬರುವರು. ಅಲ್ಲಿಗೆ ನಿಮ್ಮೊಡನೆ ಹೋಗಿ, ಅಲ್ಲಿ ನನ್ನ ತಂದೆ-ತಾಯಿಗಳು ಕೊಡುವ ಒಡವೆ, ಉಡುಗೆಗಳ ಬಳುವಳಿಗಳನ್ನು ಸ್ವೀಕರಿಸಬೇಕೆಂದು ನನಗೂ ಇಷ್ಟವಾಗುತ್ತಿದೆ. ಅಲ್ಲಿ ತಮ್ಮ ಪತಿಗಳಿಂದ ಸಮ್ಮಾನಿತರಾಗುವ ನನ್ನ ಸೋದರಿಯರು,

ಚಿಕ್ಕಮ್ಮ-ದೊಡ್ಡಮ್ಮಂದಿರು ಮತ್ತು ಸ್ನೇಹದಿಂದ ನೆನೆದ ಮನಸ್ಸುಳ್ಳ ನನ್ನ ತಾಯಿ–ಇವರೆಲ್ಲರನ್ನೂ ನೋಡಬೇಕೆಂದು ನನ್ನ ಮನಸ್ಸು ಬಹಳ ದಿವಸ ಗಳಿಂದ ಹಂಬಲಿಸುತ್ತಿದೆ. ಎಲೈ ಸುಖಕರನೇ! ಇದೂ ಅಲ್ಲದೇ ಅಲ್ಲಿಗೆ ಹೋದರೆ ಮಹರ್ಷಿಗಳು ರಚಿಸಿರುವ ಶ್ರೇಷ್ಠವಾದ ಯಜ್ಞವನ್ನೂ ಸಂದರ್ಶಿಸ ಬಹುದು.

ಜನ್ಮರಹಿತರಾದ ಪ್ರಭುದೇವರೇ! ನೀವಾದರೋ ತತ್ತ್ವಜ್ಞರು. ಜಗತ್ತಿನ ಉತ್ಪತ್ತಿಗೆ ಕಾರಣರಾಗಿರುವ ದೇವರು. ನಿಮ್ಮ ಮಾಯೆಯಿಂದ ರಚಿತವಾಗಿರುವ ಈ ತ್ರಿಗುಣಾತ್ಮಕವಾದ ಜಗತ್ತು ನಿಮ್ಮಲ್ಲಿಯೇ ಪ್ರಕಾಶಿಸು ತ್ತಿದೆ. ಆದರೆ ನಾನು ನಿಮ್ಮ ತತ್ತ್ವವನ್ನರಿಯದ ಹೆಣ್ಣುಹೆಂಗಸು. ದೀನ ಳಾಗಿರುವ ನನಗೆ ಈಗ ನನ್ನ ಜನ್ಮಭೂಮಿಯನ್ನು ನೋಡಲು ತುಂಬಾ ಆಸೆ ಯಾಗುತ್ತಿದೆ. ಜನ್ಮಾದಿರಹಿತರಾಗಿರುವ ನೀಲಕಂಠಸ್ವಾಮಿಯೇ! ಅಲ್ಲಿ ನೋಡಿ ; ಆ ಹೆಂಗಸರಲ್ಲಿ ಅನೇಕಮಂದಿಗೆ ದಕ್ಷನೊಡನೆ ಯಾವ ಸಂಬಂಧವೂ ಇಲ್ಲ. ಆದರೂ ಅವರು ಚೆನ್ನಾಗಿ ಅಲಂಕಾರಮಾಡಿಕೊಂಡು ತಮ್ಮ-ತಮ್ಮ ಪತಿಗಳೊಡನೆ ಗುಂಪು-ಗುಂಪಾಗಿ ಆ ಯಜ್ಞಕ್ಕೆ ಹೋಗು ತ್ತಿದ್ದಾರೆ. ಅಲ್ಲಿಗೆ ಹೋಗುತ್ತಿರುವ ದೇವಸ್ತ್ರೀಯರ ರಾಜಹಂಸಸದೃಶವಾದ ಬಿಳಿಯ ವಿಮಾನಗಳಿಂದ ಆಕಾಶಮಂಡಲವು ಎಷ್ಟು ಶೋಭಾಯಮಾನ ವಾಗಿದೆ! (ಶ್ಲೋಕ 8-12)

ಕಥಂ ಸುತಾಯಾಃ ಪಿತೃಗೇಹಕೌತುಕಂ
ನಿಶಮ್ಯ ದೇಹಃ ಸುರವರ್ಯ ನೇಙ್ಗತೇ ।
ಅನಾಹುತಾ ಅಪ್ಯಭಿಯನ್ತಿ ಸೌಹೃದಂ
ಭರ್ತುರ್ಗುರೋರ್ದೇಹಕೃತಶ್ಚ ಕೇತನಮ್ ॥೧೩॥

ಎಲೈ ಸುರಶ್ರೇಷ್ಠರೇ! ಈ ಪರಿಸ್ಥಿತಿಯಲ್ಲಿ ತಂದೆಯ ಮನೆಯಲ್ಲಿ ಉತ್ಸವವಾಗುತ್ತಿದೆ–ಎಂಬ ಸಮಾಚಾರವನ್ನು ಕೇಳಿ ಆತನ ಪುತ್ರಿಯ ದೇಹವೂ ಅಲ್ಲಿಗೆ ಹೋಗಿ ಯಜ್ಞದಲ್ಲಿ ಭಾಗವಹಿಸಬೇಕೆಂದು ಹಾತೊರೆಯದೇ ಇರುವುದೇ? ಪತಿ, ಗುರುಗಳು, ತಂದೆ-ತಾಯಿಗಳು ಮತ್ತು ಗೆಳೆಯರ ಮನೆಗೆ ಆಹ್ವಾನವಿಲ್ಲದೇ ಇದ್ದರೂ ಹೋಗಬಹುದಷ್ಟೇ!

ಆದುದರಿಂದ ಪತಿದೇವರೇ! ನನ್ನಲ್ಲಿ ಪ್ರಸನ್ನರಾಗಿ ನನ್ನ ಆ ಅಪೇಕ್ಷೆಯನ್ನು ಅವಶ್ಯವಾಗಿ ಈಡೇರಿಸಿರಿ. ನೀವು ತುಂಬಾ ಕರುಣಾಮಯರು. ಅದಕ್ಕೋಸ್ಕರವೇ ಪರಮಜ್ಞಾನಿಗಳಾಗಿದ್ದರೂ ನಿಮ್ಮ ದೇಹದ ಅರ್ಧಭಾಗದಲ್ಲಿ ನನಗೆ ಸ್ಥಾನವನ್ನು ಕರುಣಿಸಿದ್ದೀರಿ. ನನ್ನ ಈ ಬೇಡಿಕೆಯನ್ನು ಗಮನಿಸಿ ನನ್ನನ್ನು ಅನುಗ್ರಹಿಸಿರಿ."

ಶ್ರೀಮೈತ್ರೇಯರು ಹೇಳುತ್ತಾರೆ :

ಪ್ರಿಯೆಯಾದ ಸತೀದೇವಿಯು ಹೀಗೆ ಪ್ರಾರ್ಥಿಸಿದಾಗ, ಸ್ನೇಹಿತರಿಗೂ ಆತ್ಮೀಯರಿಗೂ ಪ್ರಿಯವನ್ನುಂಟುಮಾಡುವ ಸ್ವಾಮೀ ಶ್ರೀಶಂಕರನಿಗೆ ದಕ್ಷ ಪ್ರಜಾಪತಿಯು ಸಮಸ್ತಪ್ರಜಾಪತಿಗಳ ಎದುರಿಗೆ ಹಿಂದೆ ಹೇಳಿದ್ದ ಮರ್ಮಭೇದಕವಾದ ಮಾತಿನ ಬಾಣಗಳು ನೆನಪಿಗೆ ಬಂದುವು. ಆತನು ನಗುತ್ತಾ ಆಕೆಗೆ ಹೀಗೆಂದನು : (ಶ್ಲೋಕ 14-15)

ತ್ವಯೋದಿತಂ ಶೋಭನಮೇವ ಶೋಭನೇ
ಅನಾಹುತಾ ಅಪ್ಯಭಿಯನ್ತಿ ಬನ್ಧುಷು ।
ತೇ ಯದ್ಯನುತ್ಪಾದಿತದೋಷದೃಷ್ಟಯೋ
ಬಲೀಯಸಾನಾತ್ಮ್ಯಮದೇನ ಮನ್ಯುನಾ ॥೧೬॥

"ಎಲೈ ಸುಂದರಿಯೇ! 'ಅನಾಹುತಾ ಅಪ್ಯಭಿಯನ್ತಿ ಬನ್ಧುಷು'– 'ಬಂಧುಗಳ ಮನೆಗೆ ಆಹ್ವಾನವಿಲ್ಲದಿದ್ದರೂ ಹೋಗಬಹುದು'–ಎಂದು ನೀನು ಹೇಳಿದೆಯಲ್ಲವೇ! ಆ ಮಾತೇನೋ ಸಮೀಚೀನವಾಗಿದೆ. ಆದರೆ ಆ ಬಂಧುಗಳ ದೃಷ್ಟಿಯು ಅತಿಪ್ರಬಲವಾದ ದೇಹಾಭಿಮಾನದಿಂದ ಉಂಟಾದ ಮದ ಮತ್ತು ಕ್ರೋಧಗಳಿಂದ, ದ್ವೇಷವೆಂಬ ದೋಷದಿಂದ ಕೂಡಿರದಿದ್ದರೆ ಮಾತ್ರ ಹಾಗೆ ಮಾಡಬೇಕು.

ವಿದ್ಯಾತಪೋವಿತ್ತವಪುರ್ವಯಃಕುಲೈಃ
ಸತಾಂ ಗುಣೈಃ ಷಡ್ಭಿರಸತ್ತಮೇತರೈಃ ।
ಸ್ಮೃತೌ ಹತಾಯಾಂ ಭೃತಮಾನದುರ್ದೃಶಃ
ಸ್ತಬ್ಧಾ ನ ಪಶ್ಯನ್ತಿ ಹಿ ಧಾಮ ಭೂಯಸಾಮ್ ॥೧೭॥

ವಿದ್ಯೆ, ತಪಸ್ಸು, ಸಂಪತ್ತು, ಗಟ್ಟಿಮುಟ್ಟಾದ ಸುಂದರವಾದ ಶರೀರ,

ಯೌವನದ ವಯಸ್ಸು ಮತ್ತು ಉಚ್ಚವಾದ ಕುಲ–ಇವು ಆರೂ ಸತ್ಪುರುಷ ರಲ್ಲಿ ಗುಣಗಳಾಗಿ ಶೋಭಿಸುತ್ತವೆ. ಆದರೆ ನೀಚನಾದ ಪುರುಷನಲ್ಲಿ ಅವು ಅವಗುಣಗಳಾಗಿಬಿಡುವುವು. ಏಕೆಂದರೆ : ಅವುಗಳಿಂದ ಅವನ ಗರ್ವವು ಹೆಚ್ಚುವುದು. ದೃಷ್ಟಿಯು ದೋಷಯುಕ್ತವಾಗುವುದು. ವಿವೇಕಶಕ್ತಿಯು ನಷ್ಟವಾಗುವುದು. ಆದ್ದರಿಂದ ಅವರು ಮಹಾಪುರುಷರ ಪ್ರಭಾವವನ್ನು ನೋಡಲು ಅಸಮರ್ಥರಾಗುತ್ತಾರೆ.

ನೈತಾದೃಶಾನಾಂ ಸ್ವಜನವ್ಯಪೇಕ್ಷಯಾ
ಗೃಹಾನ್ಪ್ರತೀಯಾದನವಸ್ಥಿತಾತ್ಮನಾಮ್ ।
ಯೇಽಭ್ಯಾಗತಾನ್ವಕ್ರಧಿಯಾಭಿಚಕ್ಷತೇ
ಆರೋಪಿತಭ್ರೂಭಿರಮರ್ಷಣಾಕ್ಷಿಭಿಃ ॥೧೮॥

ಆದ್ದರಿಂದಲೇ ಯಾರು ತಮ್ಮ ಬಳಿಗೆ ಬರುವ ಮನುಷ್ಯರನ್ನು ಕುಟಿಲ ಬುದ್ಧಿಯಿಂದ ಹುಬ್ಬುಗಂಟುಹಾಕಿಕೊಂಡು ದೋಷತುಂಬಿದ ದೃಷ್ಟಿಯಿಂದ ನೋಡುತ್ತಾರೆಯೋ–ಅಂತಹ ಅವ್ಯವಸ್ಥಿತಚಿತ್ತರಾದ ಜನರ ಮನೆಗೆ 'ಇವರು ಎಷ್ಟಾದರೂ ನಮ್ಮ ಬಂಧುಗಳಲ್ಲವೇ?'–ಎಂಬ ಕಾರಣದಿಂದ ಎಂದಿಗೂ ಹೋಗಕೂಡದು.

ತಥಾರಿಭಿರ್ನ ವ್ಯಥತೇ ಶಿಲೀಮುಖೈಃ
ಶೇತೇಽರ್ದಿತಾಙ್ಗೋ ಹೃದಯೇನ ದೂಯತಾ ।
ಸ್ವಾನಾಂ ಯಥಾ ವಕ್ರಧಿಯಾಂ ದುರುಕ್ತಿಭಿ-
ರ್ದಿವಾನಿಶಂ ತಪ್ಯತಿ ಮರ್ಮತಾಡಿತಃ ॥೧೯॥

ಎಲೈ ದೇವಿಯೇ! ಕುಟಿಲಬುದ್ಧಿಯುಳ್ಳ ಬಂಧುಗಳು ಕುಟಿಲವಾದ ಚುಚ್ಚುಮಾತುಗಳನ್ನು ಆಡಿದರೆ–ಅವುಗಳಿಂದ ಉಂಟಾಗುವಷ್ಟು ನೋವು ಶತ್ರುಗಳ ಬಾಣಗಳು ಚುಚ್ಚಿದರೂ ಆಗುವುದಿಲ್ಲ. ಬಾಣಗಳು ಚುಚ್ಚಿದ ನೋವನ್ನಾದರೂ ಹೇಗೋ ಸಹಿಸಿಕೊಂಡು ನಿದ್ರೆ ಮಾಡಬಹುದು. ಆದರೆ ವಕ್ರಬುದ್ಧಿಯುಳ್ಳವರು ಆಡಿದ ಕೆಟ್ಟಮಾತುಗಳು ಮರ್ಮಸ್ಥಾನಗಳನ್ನು ಭೇದಿಸಿದರೆ ಹಗಲೂ-ರಾತ್ರಿ ಮಾನಸಿಕಪೀಡೆಯಿಂದ ನರಳುತ್ತಿರಬೇಕಾಗುವುದು.

ವ್ಯಕ್ತಂ ತ್ವಮುತ್ಕೃಷ್ಟಗತೇಃ ಪ್ರಜಾಪತೇಃ
ಪ್ರಿಯಾತ್ಮಜಾನಾಮಸಿ ಸುಭ್ರು ಸಮ್ಮತಾ ।
ಅಥಾಪಿ ಮಾನಂ ನ ಪಿತುಃ ಪ್ರಪತ್ಸ್ಯಸೇ
ಮದಾಶ್ರಯಾತ್ಕಃ ಪರಿತಪ್ಯತೇ ಯತಃ ॥೨೦॥

ಸುಂದರಿ! ನೀನು, ಪರಮೋನ್ನತಿಯನ್ನು ಪಡೆದಿರುವ ಆ ದಕ್ಷಪ್ರಜಾಪತಿಗೆ–ಆತನ ಪುತ್ರಿಯರಲ್ಲಿಯೇ ಅತ್ಯಂತಪ್ರೀತಿಪಾತ್ರಳಾದ ಪುತ್ರಿಯಾಗಿದ್ದೀಯೆ–ಎಂಬುದನ್ನು ನಾನು ಬಲ್ಲೆನು. ಆದರೂ ನೀನು ನನ್ನನ್ನು ಆಶ್ರಯಿಸಿರುವುದರಿಂದ ನಿನಗೆ ತಂದೆಯ ಮನ್ನಣೆ ಸಿಕ್ಕುವುದಿಲ್ಲ. ಆತನಿಗೆ ನನ್ನಲ್ಲಿ ಮಿತಿಮೀರಿದ ಕಿಚ್ಚಿದೆ.

ಪಾಪಚ್ಯಮಾನೇನ ಹೃದಾತುರೇನ್ದ್ರಿಯಃ
ಸಮೃದ್ಧಿಭಿಃ ಪೂರುಷಬುದ್ಧಿಸಾಕ್ಷಿಣಾಮ್ ।
ಅಕಲ್ಪ ಏಷಾಮಧಿರೋಢುಮಞ್ಜಸಾ
ಪದಂ ಪರಂ ದ್ವೇಷ್ಟಿ ಯಥಾಸುರಾ ಹರಿಮ್ ॥೨೧॥

ಅಹಂಕಾರಾದಿ ದೋಷರಹಿತರಾಗಿ ಪ್ರಕೃತಿ-ಪುರುಷಾದಿ ತತ್ತ್ವಗಳ ಯಾಥಾತ್ಮ್ಯವನ್ನು ತಿಳಿದಿರುವ ಸತ್ಪುರುಷರ ಸಮೃದ್ಧಿಯನ್ನು ಕಂಡು ಕರು ಬುತ್ತಾ ಮನಸ್ಸು ಮತ್ತು ಇಂದ್ರಿಯಗಳಲ್ಲಿ ಸಂಕಟಪಡುವ ಕುಪುರುಷನಿಗೆ ಆ ಸತ್ಪುರುಷರ ಪದವಿಯಂತೂ ಸಿಗುವುದಿಲ್ಲ. ಆದರೆ ದೈತ್ಯಗಣಗಳು ಶ್ರೀಹರಿಯ ಮೇಲೆ ದ್ವೇಷವನ್ನು ಕಾರುವಂತೆ–ಆತನು ಆ ಸತ್ಪುರುಷರ ಮೇಲೆ ದ್ವೇಷವನ್ನು ಕಾರುತ್ತಾ ಕೊರಗುತ್ತಿರಬೇಕಾಗುತ್ತದೆ, ಅಷ್ಟೇ!

ಪ್ರತ್ಯುದ್ಗಮಪ್ರಶ್ರಯಣಾಭಿವಾದನಂ
ವಿಧೀಯತೇ ಸಾಧು ಮಿಥಃ ಸುಮಧ್ಯಮೇ ।
ಪ್ರಾಜ್ಞೈಃ ಪರಸ್ಮೈ ಪುರುಷಾಯ ಚೇತಸಾ
ಗುಹಾಶಯಾಯೈವ ನ ದೇಹಮಾನಿನೇ ॥೨೨॥

ಪ್ರಿಯೇ! 'ನೀವು ಪ್ರಜಾಪತಿಗಳ ಸಭೆಯಲ್ಲಿ ನಿಮ್ಮ ಮಾವನಾದ ದಕ್ಷಪ್ರಜಾಪತಿಗೆ ಎದ್ದುನಿಂತು ಸ್ವಾಗತಿಸಿ ನಮಸ್ಕಾರಾದಿಗಳನ್ನು ಮಾಡುವುದರ ಮೂಲಕ ಗೌರವವನ್ನು ಏಕೆ ತೋರಲಿಲ್ಲ?'–ಎಂದು ನೀನು ನನ್ನನ್ನು ಕೇಳ

ಬಹುದು. ಆದರೆ ಜ್ಞಾನಿಗಳಾದವರು ಗೌರವವನ್ನು ತೋರಿಸುವ ರೀತಿಯೇ ಬೇರೆ. ಲೋಕವ್ಯವಹಾರಗಳಲ್ಲಿ ಪರಸ್ಪರವಾಗಿ ಮುಂದೆಹೋಗಿ ವಿನಯ ತೋರುವುದು, ನಮಸ್ಕಾರಮಾಡುವುದು–ಮುಂತಾದ ಕ್ರಿಯೆಗಳಿಂದ ಗೌರವ ವನ್ನು ಸೂಚಿಸುವರಲ್ಲವೇ? ತತ್ತ್ವಜ್ಞಾನಿಗಳು ಅದನ್ನೇ ಅತ್ಯುತ್ತಮವಾದ ಬೇರೆ ರೀತಿಯಲ್ಲಿ ಮಾಡುತ್ತಾರೆ. ಅವರು ಆ ನಮಸ್ಕಾರಾದಿಗಳನ್ನು ಅಂತರ್ಯಾಮಿರೂಪದಲ್ಲಿ ಹೃದಯಗುಹೆಯಲ್ಲಿರುವ ಶ್ರೀವಾಸುದೇವನಿಗೇ ಮನಸ್ಸಿನಿಂದ ಸಮರ್ಪಿಸುತ್ತಾರೆ ; ದೇಹಾಭಿಮಾನಿಯಾದ ಪುರುಷನಿಗೆ ಸಲ್ಲಿಸುವುದಿಲ್ಲ.

ಸತ್ತ್ವಂ ವಿಶುದ್ಧಂ ವಸುದೇವಶಬ್ದಿತಂ
ಯದೀಯತೇ ತತ್ರ ಪುಮಾನಪಾವೃತಃ ।
ಸತ್ತ್ವೇ ಚ ತಸ್ಮಿನ್ಭಗವಾನ್ವಾಸುದೇವೋ
ಹ್ಯಧೋಕ್ಷಜೋ ಮೇ ನಮಸಾ ವಿಧೀಯತೇ ॥೨೩॥

ಪರಿಶುದ್ಧವಾದ ಸತ್ತ್ವ (ಅಂತಃಕರಣ)ಕ್ಕೇ 'ವಾಸುದೇವ' ಎಂದು ಹೆಸರು. ಏಕೆಂದರೆ : ಅದರಲ್ಲಿಯೇ ಭಗವಂತನಾದ ಶ್ರೀವಾಸುದೇವನು ಪ್ರತ್ಯಕ್ಷವಾಗಿ ಆವಿರ್ಭವಿಸಿ ಅನುಭವಕ್ಕೆ ಬರುವನು. ಅಂತಹ ವಿಶುದ್ಧಚಿತ್ತದಲ್ಲಿ ನೆಲೆಸಿರುವ ಭಗವಂತನಾದ ಶ್ರೀವಾಸುದೇವನಿಗೇ ನಾನು ನಮಸ್ಕಾರಗಳನ್ನು ಸಲ್ಲಿಸುತ್ತಿರುವೆನು.

ತತ್ತೇ ನಿರೀಕ್ಷ್ಯೋ ನ ಪಿತಾಪಿ ದೇಹಕೃ-
ದ್ದಕ್ಷೋ ಮಮ ದ್ವಿಟ್ತದನುವ್ರತಾಶ್ಚ ಯೇ ।
ಯೋ ವಿಶ್ವಸೃಗ್ಯಜ್ಞಗತಂ ವರೋರು ಮಾ-
ಮನಾಗಸಂ ದುರ್ವಚಸಾಕರೋತ್ತಿರಃ ॥೨೪॥

ಆದುದರಿಂದ, ಎಲೈ ಇನಿಯಳೇ! ದಕ್ಷಪ್ರಜಾಪತಿಯು ನಿನಗೆ ಜನ್ಮ ವನ್ನು ಕೊಟ್ಟಿರುವ ತಂದೆಯೇ ಆಗಿದ್ದರೂ–ನನ್ನನ್ನು ಮಿತಿಮೀರಿ ದ್ವೇಷಿಸುವ ಶತ್ರುವಾಗಿರುವುದರಿಂದ–ನೀನು ಆತನನ್ನಾಗಲೀ ಆತನ ಅನುಯಾಯಿಗಳ ನ್ನಾಗಲೀ ನೋಡುವ ವಿಚಾರವನ್ನೇ ಮಾಡಬಾರದು. ಆತನು ಪ್ರಜಾಪತಿಗಳ

ಯಜ್ಞದಲ್ಲಿ ನಾನು ಯಾವುದೇ ಅಪರಾಧವನ್ನು ಮಾಡದಿದ್ದರೂ ನನ್ನನ್ನು ಕಟುವಾದ ಮಾತುಗಳಿಂದ ತಿರಸ್ಕರಿಸಿದ್ದಾನಲ್ಲವೇ?

ಯದಿ ವ್ರಜಿಷ್ಯಸ್ಯತಿಹಾಯ ಮದ್ವಚೋ
ಭದ್ರಂ ಭವತ್ಯಾ ನ ತತೋ ಭವಿಷ್ಯತಿ ।
ಸಮ್ಭಾವಿತಸ್ಯ ಸ್ವಜನಾತ್ಪರಾಭವೋ
ಯದಾ ಸ ಸದ್ಯೋ ಮರಣಾಯ ಕಲ್ಪತೇ ॥೨೫॥

ನನ್ನ ಈ ಮಾತನ್ನು ಮೀರಿ ನೀನು ಅಲ್ಲಿಗೆ ಹೋದುದೇ ಆದರೆ–ನಿನಗೆ ಖಂಡಿತವಾಗಿ ಒಳ್ಳೆಯದಾಗುವುದಿಲ್ಲ. ಏಕೆಂದರೆ : ಲೋಕದಲ್ಲಿ ಗೌರವಾನ್ವಿತನಾದ ಮನುಷ್ಯನಿಗೆ ಸ್ವಜನರಿಂದ ಏನಾದರೂ ಅಪಮಾನವು ಒದಗಿದರೆ–ಅದು ಒಡನೆಯೇ ಆತನ ಮೃತ್ಯುವಿಗೆ ಕಾರಣವಾಗುವುದು.”

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತದಲ್ಲಿ ಚತುರ್ಥಸ್ಕಂಧದ ೩ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೪ನೆಯ ಅಧ್ಯಾಯ

ಸತೀದೇವಿಯ ಅಗ್ನಿಪ್ರವೇಶ

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಏತಾವದುಕ್ತ್ವಾ ವಿರರಾಮ ಶಂಕರಃ
ಪತ್ನ್ಯಙ್ಗನಾಶಂ ಹ್ಯುಭಯತ್ರ ಚಿನ್ತಯನ್ ।
ಸುಹೃದ್ದಿದೃಕ್ಷುಃ ಪರಿಶಙ್ಕಿತಾ ಭವಾ-
ನ್ನಿಷ್ಕ್ರಾಮತೀ ನಿರ್ವಿಶತೀ ದ್ವಿಧಾಸ ಸಾ ॥೧॥

ಸತೀದೇವಿಗೆ ಇಷ್ಟು ಹಿತವಚನಗಳನ್ನು ಹೇಳಿ ಶಂಕರನು ಸುಮ್ಮನಾದನು. ಆಕೆಯು ದಕ್ಷನ ಮನೆಗೆ ಹೋಗಲಿ ಅಥವಾ ತಡೆಯಲ್ಪಟ್ಟು ತನ್ನ ಮನೆಯಲ್ಲೇ ಉಳಿದುಕೊಳ್ಳಲಿ–ಈ ಎರಡರಲ್ಲಿ ಏನೇ ಆದರೂ ತನ್ನ ಆ ಪತ್ನಿಯ ಪ್ರಾಣತ್ಯಾಗವು ಆಗಿಯೇ ಆಗುವುದೆಂದು ಆತನು ಚಿಂತಿಸಿದನು. ಇತ್ತಕಡೆ ಸತೀದೇವಿಯೂ–ಬಂಧುಗಳನ್ನು ನೋಡೋಣವೆಂದು ಹೊರಗೆ ಹೋಗುವುದು ಮತ್ತು ಸ್ವಾಮಿಯಾದ ಶಂಕರನು ಕ್ರುದ್ಧನಾಗದಿರಲಿ

ಎಂದು ಹಿಂದಿರುಗುವುದು—ಹೀಗೆ ಯಾವ ನಿಶ್ಚಯಕ್ಕೂ ಬರಲಾಗದೆ ಆಕೆಯ ಮನಸ್ಸು ತೂಗಾಡುತ್ತಿದ್ದಿತು.

ತನ್ನ ಪ್ರೀತಿಯ ಬಂಧು-ಬಳಗದವರನ್ನು ನೋಡಬೇಕೆಂಬ ಇಚ್ಛೆಗೆ ಭಂಗ ಒದಗಿದ್ದರಿಂದ ಸತೀದೇವಿಗೆ ತುಂಬಾ ಖೇದವಾಯಿತು. ಬಂಧುಪ್ರೇಮದಿಂದ ಅಳುತ್ತಾ ಕಣ್ಣೀರುಸುರಿಸುತ್ತಾ ಆಕೆಯು ಕಡುದುಃಖದಲ್ಲಿ ಮುಳುಗಿದಳು. ಕೋಪದಿಂದ ಗಡ-ಗಡನೆ ನಡುಗುತ್ತಾ ಆಕೆಯು, ತನ್ನ ಆ ಅಪ್ರತಿಮನಾದ ಪತಿಯನ್ನು ಕೋಪದಿಂದ ಸುಡುವಳೋ ಎಂಬಂತೆ ದುರ-ದುರನೆ ನೋಡತೊಡಗಿದಳು. ನಿಟ್ಟುಸಿರುಬಿಡುತ್ತಾ ಸ್ತ್ರೀಸಹಜವಾದ ಅವಿವೇಕಕ್ಕೆ ಒಳಗಾಗಿ, ಶೋಕದಿಂದಲೂ ಕೋಪದಿಂದಲೂ ಸಂತಾಪಗೊಂಡ ಮನಸ್ಸಿನಿಂದ ಆಕೆಯು ತನಗೆ ಪರಮಪ್ರೇಮದಿಂದ ಶರೀರದ ಅರ್ಧಭಾಗವನ್ನೇ ಕೊಟ್ಟಿದ್ದ, ಸಜ್ಜನಪ್ರಿಯನಾದ ಆ ಪತಿದೇವನನ್ನು ಬಿಟ್ಟು ತೌರುಮನೆಯ ಕಡೆಗೆ ಹೊರಟೇಬಿಟ್ಟಳು. ಹಾಗೆ ಒಡತಿಯು ಒಬ್ಬಂಟಿಗಳಾಗಿ ಧಡ-ಧಡನೆ ಹೋಗುತ್ತಿರುವುದನ್ನು ಕಂಡು ಮಹಾದೇವನ ಪರಿವಾರಕ್ಕೆ ಸೇರಿದ ಮಣಿಮಂತ, ಮದ—ಮುಂತಾದ ಸಾವಿರಾರು ಮಂದಿ ಸೇವಕರು ಭಗವಂತನ ವಾಹನವಾದ ವೃಷಭವನ್ನು ಮುಂದಿಟ್ಟುಕೊಂಡು, ಇನ್ನೂ ಅನೇಕಪಾರ್ಷದರನ್ನೂ—ಯಕ್ಷರನ್ನೂ ಜೊತೆಯಲ್ಲಿ ಕರೆದುಕೊಂಡು, ನಿರ್ಭಯರಾಗಿ ಮಹಾವೇಗದಿಂದ ಆಕೆಯನ್ನು ಹಿಂಬಾಲಿಸಿದರು. ಅವರು ಸತೀದೇವಿಯನ್ನು ವೃಷಭದ ಮೇಲೆ ಕುಳ್ಳಿರಿಸಿ, ಆಟದ ಅರಗಿಳಿ, ಚೆಂಡು, ಕನ್ನಡಿ, ಕಲಶ, ಕಮಲ, ಬೆಳ್ಗೊಡೆ, ಚಾಮರ, ಮಾಲೆಗಳೇ ಮುಂತಾದ ರಾಜಚಿಹ್ನೆಗಳನ್ನು ತೆಗೆದುಕೊಂಡು ಶಂಖ, ಕೊಳಲು ದುಂದುಭಿಗಳೇ ಮುಂತಾದ ವಾದ್ಯಗಳನ್ನು ಬಾರಿಸುತ್ತಾ ಗೌರವದಿಂದ ಕರೆದುಕೊಂಡು ಹೋದರು. ಹಾಗೆ ಪ್ರಯಾಣಮಾಡಿದ ಸತೀದೇವಿಯು ತನ್ನ ಸಮಸ್ತಸೇವಕರೊಡನೆ ದಕ್ಷನ ರಮಣೀಯವಾದ ಯಜ್ಞಶಾಲೆಯನ್ನು ಪ್ರವೇಶಿಸಿದಳು. ಅಲ್ಲಿ ಬ್ರಹ್ಮರ್ಷಿಗಳೂ—ದೇವತೆಗಳೂ ಎಲ್ಲೆಡೆಗಳಲ್ಲಿಯೂ ನೆರೆದಿದ್ದರು. ಋತ್ವಿಜರು ಗಂಭೀರವಾದ ವೇದಘೋಷವನ್ನು ಮಾಡುತ್ತಾ ಮಂತ್ರೋಚ್ಚಾರಣೆಯ ವೈಖರಿಯಲ್ಲಿ ಸ್ಪರ್ಧಿಸುತ್ತಿದ್ದರು. ಯಜ್ಞಾಂಗವಾದ ಮೃತ್ತಿಕೆಗಳೂ, ಮರಗಳೂ, ಕಬ್ಬಿಣ-ಚಿನ್ನ-ದರ್ಭೆ ಮತ್ತು

ಚರ್ಮಗಳಿಂದ ರಚಿತವಾದ ಯಜ್ಞಪಾತ್ರೆಗಳೂ ಶಾಸ್ತ್ರವಿಧಿಗೆ ತಕ್ಕ ಶಿಸ್ತು-ಸಿಂಗಾರಗಳಿಂದ ಅಳವಡಿಸಲ್ಪಟ್ಟಿದ್ದುವು. ಸತೀದೇವಿಯು ಆ ಯಜ್ಞಶಾಲೆಯನ್ನು ಹೊಕ್ಕಾಗ ಯಜ್ಞದ ಯಜಮಾನನಾಗಿದ್ದ ತಂದೆ ದಕ್ಷನು ಆಕೆಯನ್ನು ತಿರಸ್ಕಾರದಿಂದ ಕಂಡನು. ಅದನ್ನು ಕಂಡು, ಆತನಿಗೆ ಹೆದರಿದ ಇತರರೂ ಆಕೆಯನ್ನು ಆದರಿಸಲಿಲ್ಲ. ತಾಯಿ ಮತ್ತು ಸೋದರಿಯರು ಮಾತ್ರ ಆಕೆಯನ್ನು ಕಂಡು ಸಂತೋಷಗೊಂಡು ಪ್ರೀತ್ಯಾದರಗಳಿಂದ ಆಲಿಂಗಿಸಿಕೊಂಡರು. ಆದರೂ ತಂದೆಯು ಅಪಮಾನಮಾಡಿದ್ದರಿಂದ ಖೇದಗೊಂಡ ಆಕೆಯು ಸೋದರಿಯರ ಕುಶಲಪ್ರಶ್ನೆಯ ಸವಿಮಾತುಗಳನ್ನಾಗಲೀ, ತಾಯಿ-ಚಿಕ್ಕಮ್ಮ-ದೊಡ್ಡಮ್ಮಂದಿರು ಗೌರವಪೂರ್ವಕವಾಗಿ ಕೊಟ್ಟ ಬಳುವಳಿಗಳನ್ನಾಗಲೀ, ಶ್ರೇಷ್ಠವಾದ ಆಸನವನ್ನಾಗಲೀ–ಯಾವುದನ್ನೂ ಸ್ವೀಕರಿಸಲಿಲ್ಲ.

ಮಹಾದೇವಿಯಾದ ಸತೀದೇವಿಗೆ ಯಜ್ಞಮಂಟಪದಲ್ಲಿ ತಿರಸ್ಕಾರವಾದದ್ದು ಮಾತ್ರವಲ್ಲದೇ ಆಕೆಯ ಪತಿಗೂ ಅಪಚಾರವಾಗಿತ್ತು. ಹಾಗೆ ಭಗವಂತನಾದ, ತನ್ನ ಪತಿಯಾದ ರುದ್ರನಿಗೆ ಯಜ್ಞದಲ್ಲಿ ಭಾಗವನ್ನೇ ಕೊಡದೇ ದೊಡ್ಡ ದೈವಾಪಚಾರ ನಡೆಸಿದುದನ್ನು ಕಂಡು ದೇವಿಯ ಕ್ರೋಧಜ್ವಾಲೆ ಭುಗಿಲೆದ್ದಿತು. ಇಡೀ ಲೋಕವನ್ನೇ ಕೋಪಾಗ್ನಿಯಿಂದ ಸುಟ್ಟು ಹಾಕುವಳೋ–ಎಂಬಂತೆ ಆಕೆಯು ಆವೇಶದಿಂದ ಕೆರಳಿದಳು. ಶಿವದ್ವೇಷಿಯಾಗಿ ಧೂಮಗತಿಗೆ ಒಯ್ಯುವ ಕರ್ಮಗಳ ಅಭ್ಯಾಸದಿಂದ ದುರಹಂಕಾರಿಯಾದ ಆ ದುಷ್ಟನಾದ ದಕ್ಷನನ್ನು ಒಡನೆಯೇ ಸಂಹರಿಸಲು ಶಿವನ ಭೂತಗಣಗಳು ಸಿದ್ಧವಾದುವು. ಆದರೆ ಸತೀದೇವಿಯು ತನ್ನ ತೇಜಸ್ಸಿನಿಂದ ಅವರನ್ನು ತಡೆಗಟ್ಟಿ, ಜಗತ್ತೆಲ್ಲವೂ ಕೇಳುವಂತೆ ಕೋಪಾವೇಶದಿಂದ ತೊದಲುವ ಬಿರುನುಡಿಗಳಿಂದ ತಂದೆಯಾದ ದಕ್ಷನನ್ನು ಸಂಬೋಧಿಸಿ ಹೇಳಿದಳು : (ಶ್ಲೋಕ 1-10)

ನ ಯಸ್ಯ ಲೋಕೇಽಸ್ತ್ಯತಿಶಾಯನಃ ಪ್ರಿಯ–
ಸ್ತಥಾಪ್ರಿಯೋ ದೇಹಭೃತಾಂ ಪ್ರಿಯಾತ್ಮನಃ ।
ತಸ್ಮಿನ್ಸಮಸ್ತಾತ್ಮನಿ ಮುಕ್ತವೈರಕೇ
ಋತೇ ಭವನ್ತಂ ಕತಮಃ ಪ್ರತೀಪಯೇತ್ ॥೧೧॥

"ಎಲೈ ದುರಹಂಕಾರಿಯಾದ ತಂದೆಯೇ! ಜಗದೀಶ್ವರನಾದ ಶಂಕರನ ಮಹಿಮೆಯನ್ನು ನೀನೇನು ಬಲ್ಲೆ? ಆತನಿಗೆ ಮಿಗಿಲಾದವರು ಲೋಕದಲ್ಲಿ ಯಾರೂ ಇಲ್ಲ. ಎಲ್ಲ ದೇಹಿಗಳಿಗೂ ಪ್ರಿಯವಾಗಿರುವ ಆತ್ಮಸ್ವರೂಪನವನು. ಸಮದರ್ಶನನಾದ ಆತನಿಗೆ ಯಾವನೂ ಪ್ರಿಯನೂ ಅಲ್ಲ ; ಅಪ್ರಿಯನೂ ಅಲ್ಲ. ಯಾವ ಪ್ರಾಣಿಗಳಲ್ಲೂ ವೈರವಿಲ್ಲದ ಶಾಂತಮೂರ್ತಿಯು ಆತನು. ಅಂತಹ ಮಹಾತ್ಮನನ್ನು–ನಿನ್ನೊಬ್ಬನ ಹೊರತಾಗಿ ಬೇರೆ ಯಾವನು ತಾನೇ ವಿರೋಧಿಸಿಯಾನು ?*

ದೋಷಾನ್ಪರೇಷಾಂ ಹಿ ಗುಣೇಷು ಸಾಧವೋ
ಗೃಹ್ಣನ್ತಿ ಕೇಚಿನ್ನ ಭವಾದೃಶಾ ದ್ವಿಜ ।
ಗುಣಾಂಶ್ಚ ಫಲ್ಗೂನ್ಬಹುಲೀಕರಿಷ್ಣವೋ
ಮಹತ್ತಮಾಸ್ತೇಷ್ವವಿದದ್ಭವಾನಘಮ್ ॥೧೨॥

ಎಲೈ ದ್ವಿಜನೇ! ನಿನ್ನಂತಹವರು ಯಾವಾಗಲೂ ಇತರರ ಗುಣಗಳಲ್ಲೂ ದೋಷವನ್ನೇ ಎಣಿಸುತ್ತಾರೆ. ಆದರೆ ಸಾಧುಗಳು ಹಾಗೆ ಮಾಡುವುದಿಲ್ಲ. (ಕೆಲವು ಸಾಧುಗಳು ಗುಣ-ದೋಷಗಳೆರಡನ್ನೂ ಗ್ರಹಿಸುತ್ತಾರೆ.)

---

* ಪರಮಪ್ರೇಮರೂಪವಾದ ಭಕ್ತಿಯಿಂದ ಪರಮಪುರುಷನನ್ನೇ ಧ್ಯಾನಮಾಡುತ್ತಾ ಸರ್ವವನ್ನೂ ಬ್ರಹ್ಮಾತ್ಮಕವೆಂದು ತಿಳಿದಿರುವ ನಿರುಪಮನೂ–ಪ್ರಿಯಾಪ್ರಿಯರಹಿತನೂ ಆದ ರುದ್ರನಲ್ಲಿ ನಿನ್ನನ್ನು ಹೊರತು ಬೇರಾವನು ತಾನೇ ದ್ವೇಷವನ್ನು ಮಾಡುವನು? ["ಪರಮಾತ್ಮಾನಮೇವ ನಿರತಿಶಯಪ್ರೀತಿರೂಪಾಪನ್ನಯಾ ಭಕ್ತ್ಯಾ ಭಜತಃ ತಸ್ಯ ಸರ್ವಂ ಬ್ರಹ್ಮಾತ್ಮಕತಯಾ ಅನುಸಂದಧತಃ ಪ್ರಿಯಾಪ್ರಿಯವಿಭಾಗೋ ನಾಸ್ತಿ.... ಸರ್ವಾತ್ಮಕಂ ಬ್ರಹ್ಮ ಸ್ವಸ್ಮಿನ್ ಸಾಕ್ಷಾತ್ಕುರ್ವತಃ" (ವಾಮದೇವರ್ಷಿಯತ್)]

ಅಥವಾ ರುದ್ರದೇವರು ಪರಮಾತ್ಮನ ಆವೇಶಾವತಾರವಾಗಿರುವುದರಿಂದ ಅವರನ್ನೇ ಪರಬ್ರಹ್ಮದೃಷ್ಟಿಯಿಂದ ಹೀಗೆ ಸ್ತೋತ್ರಮಾಡಿದೆ. (ವೀರರಾಘವೀಯ)

ನ ಯಸ್ಯ ಲೋಕೇಽಸ್ತ್ಯತಿಶಾಯನಃ = ಯಾವ ರುದ್ರದೇವರಿಗೆ ಮಿಗಿಲಾದವರು ಬೇರೆ ಯಾರೂ ಇಲ್ಲವೋ–ಎಂದರೆ : ವಿಷ್ಣು, ಪ್ರಕೃತಿ (ಲಕ್ಷ್ಮೀ) ದೇವಿಯೇ ಮುಂತಾದ ಆರು ಮಂದಿಯನ್ನು ಬಿಟ್ಟು ಇಂದ್ರನೇ ಮುಂತಾದವರಲ್ಲಿ ಯಾರೂ ಆ ರುದ್ರದೇವರಿಗಿಂತಲೂ ಶ್ರೇಷ್ಠರಲ್ಲ. ("ವಿಷ್ಣ್ವಾದೀನ್ ಷಟ್ ಋತೇ ಇಂದ್ರಾದಿ ಸಮಸ್ತಸ್ವಾಮಿನಿ ನ ಕಶ್ಚಿತ್ ವಿರೋಧ್ಯತಿಷ್ಠತಿ") ಅವರೆಲ್ಲರಿಗೂ ರುದ್ರದೇವರೇ ಸ್ವಾಮಿಯಾಗಿದ್ದಾರೆ. (ವಿಜಯಧ್ವಜೀಯ) (ಶ್ಲೋಕ ೧೧)

ಉತ್ತಮೋತ್ತಮರಾದ ಸಾಧುಶ್ರೇಷ್ಠರು ಇತರರಲ್ಲಿ ದೋಷಗಳನ್ನು ನೋಡು ವುದೇ ಇಲ್ಲ. ಅಷ್ಟೇ ಅಲ್ಲ ; ಅವರಲ್ಲಿರುವ ಅಲ್ಪ-ಸ್ವಲ್ಪಗುಣಗಳನ್ನೇ ಅತ್ಯಧಿಕವನ್ನಾಗಿ ಭಾವಿಸಿ ಸಂತೋಷಪಡುತ್ತಾರೆ. ಆದರೆ ನೀನು ಅಂತಹ ಶ್ರೇಷ್ಠತಮರಾದ ಮಹಾತ್ಮರಲ್ಲೂ ಅಪರಾಧವನ್ನು ಎಸಗಿದ್ದೀಯೆ. ಅವ ರಲ್ಲೂ ದೋಷಾರೋಪಣೆಮಾಡಿದ್ದೀಯೆ.

ನಾಶ್ಚರ್ಯಮೇತದದ್ಯಸತ್ಸು ಸರ್ವದಾ
ಮಹದ್ವಿನಿನ್ದಾ ಕುಣಪಾತ್ಮವಾದಿಷು ।
ಸೇರ್ಷ್ಯಂ ಮಹಾಪೂರುಷಪಾದಪಾಂಸುಭಿ-
ರ್ನಿರಸ್ತತೇಜಃಸು ತದೇವ ಶೋಭನಮ್ ॥೧೩॥

ಶವಸಮಾನವಾಗಿರುವ ಈ ಜಡದೇಹವನ್ನೇ ಆತ್ಮವೆಂದು ಸದಾ ಭಾವಿಸುವ ದುಷ್ಟರು ಅಸೂಯೆಯಿಂದ ಮಹಾತ್ಮರನ್ನು ಸದಾ ನಿಂದಿಸು ತ್ತಿದ್ದರೂ ಅದರಲ್ಲಿ ಅಚ್ಚರಿಯೇನಿಲ್ಲ. ಆ ಮಹಾತ್ಮರು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಆದರೆ ಆ ಸಾಧುಶ್ರೇಷ್ಠರ ಪಾದಧೂಳಿಯೇ ದುಷ್ಟರ ತೇಜಸ್ಸನ್ನು ನಾಶಪಡಿಸಿಬಿಡುವುದು. ಆದುದರಿಂದ ಮಹಾಪುರುಷರ ನಿಂದೆಯಂತಹ ನೀಚಕಾರ್ಯವು ಆ ದುಷ್ಟಪುರುಷರಿಗೆ ಮಾತ್ರವೇ ಶೋಭೆ ಯನ್ನು ತರುತ್ತದೆ ; ಸಹಜಗುಣವಾಗುತ್ತದೆ.

ಯದ್ದ್ವ್ಯಕ್ಷರಂ ನಾಮ ಗಿರೇರಿತಂ ನೃಣಾಂ
ಸಕೃತ್ಪ್ರಸಙ್ಗಾದಘಮಾಶು ಹನ್ತಿ ತತ್ ।
ಪವಿತ್ರಕೀರ್ತಿಂ ತಮಲಙ್ಘ್ಯಶಾಸನಂ
ಭವಾನಹೋ ದ್ವೇಷ್ಟಿ ಶಿವಂ ಶಿವೇತರಃ ॥೧೪॥

ಯಾವನ 'ಶಿವ' ಎಂಬ ಎರಡು ಅಕ್ಷರಗಳ ನಾಮಧೇಯವು ಪ್ರಾಸಂಗಿಕವಾಗಿ ಒಂದು ಬಾರಿ ಬಾಯಿಂದ ಬಂದರೂ ಮನುಷ್ಯರ ಸಮಸ್ತಪಾಪಗಳೂ ಒಡನೆಯೇ ನಾಶಹೊಂದುತ್ತವೆಯೋ,* ಯಾವನ

---

* ಭಗವನ್ನಾಮೋಚ್ಚಾರಣೆಯು ಹೇಗೋ ಹಾಗೆ–ಭಗವದ್ಭಕ್ತರಾದ ಮಹಾತ್ಮರ ನಾಮೋಚ್ಚಾರಣೆ ಮುಂತಾದುವುಗಳೂ ಕೂಡ ಉಚ್ಚರಿಸುವವರ ಪಾಪಗಳನ್ನು ಕಳೆಯುತ್ತವೆ. **"ಸತಾಮಪಿ ನಾಮೋಚ್ಚಾರಣಾದೇಃ ಭಗವನ್ನಾಮವತ್ ಅಘನಿವರ್ತಕ ತ್ವಾದಿತಿಭಾವಃ "**
(ವೀರರಾಘವೀಯ) (ಶ್ಲೋಕ ೧೪)

ಆಜ್ಞೆಯನ್ನು ಮತ್ತಾರೂ ಉಲ್ಲಂಘಿಸಲಾರರೋ–ಅಂತಹ ಪವಿತ್ರಕೀರ್ತಿ ಯಾದ ಪರಮೇಶ್ವರನನ್ನೇ ನೀನು ದ್ವೇಷಿಸುತ್ತಿರುವೆಯಲ್ಲಾ, ಅಯ್ಯೋ! ಮಂಗಳಮಯನಾದ ಶಿವನನ್ನು ದ್ವೇಷಿಸುವ ನೀನು ಅಶಿವನೇ (ಅಮಂಗಳನೇ) ಸರಿ.

ಯತ್ಪಾದಪದ್ಮಂ ಮಹತಾಂ ಮನೋಽಲಿಭಿಃ
ನಿರ್ಷೇವಿತಂ ಬ್ರಹ್ಮರಸಾಸವಾರ್ಥಿಭಿಃ ।
ಲೋಕಸ್ಯ ಯದ್ವರ್ಷತಿ ಚಾಶಿಷೋಽರ್ಥಿನ-
ಸ್ತಸ್ಮೈ ಭವಾನ್ದ್ರುಹ್ಯತಿ ವಿಶ್ವಬನ್ಧವೇ ॥೧೫॥

ಯಾವನ ಪಾದಾರವಿಂದಗಳನ್ನು ಮಹಾಪುರುಷರ ಮನಸ್ಸೆಂಬ ಮಧುಕರಗಳು ಬ್ರಹ್ಮಾನಂದರಸವನ್ನು ಸವಿಯುವುದಕ್ಕಾಗಿ ನಿರಂತರವಾಗಿ ಸೇವೆಮಾಡುತ್ತವೆಯೋ ಮತ್ತು ಯಾವನ ಪಾದಾರವಿಂದಗಳು ಸಕಾಮರಾಗಿ ಸೇವಿಸುವ ಭಕ್ತರಲ್ಲಿಯೂ ಪ್ರಸನ್ನವಾಗಿ ಅವರ ಇಷ್ಟಾರ್ಥಗಳನ್ನು ಈಡೇರಿಸುತ್ತವೆಯೋ–ಅಂತಹ ವಿಶ್ವಬಂಧುವಾದ ಶಿವಭಗವಂತನಲ್ಲಿ ವೈರವನ್ನು ಸಾಧಿಸುತ್ತಿರುವೆಯಲ್ಲಾ!*

ಕಿಂ ವಾ ಶಿವಾಖ್ಯಮಶಿವಂ ನ ವಿದುಸ್ತ್ವದನ್ಯೇ
ಬ್ರಹ್ಮಾದಯಸ್ತಮವಕೀರ್ಯ ಜಟಾಃ ಶ್ಮಶಾನೇ ।
ತನ್ಮಾಲ್ಯಭಸ್ಮನೃಕಪಾಲ್ಯವಸತ್ಪಿಶಾಚೈ-
ರ್ಯೇ ಮೂರ್ಧಭಿರ್ದಧತಿ ತಚ್ಚರಣಾವಸೃಷ್ಟಮ್ ॥೧೬॥

'ಈತನು ಹೆಸರಿಗೆ ಮಾತ್ರ ಶಿವನು. ಆದರೆ ರೂಪ, ಗುಣ, ವೇಷ'– ಇತ್ಯಾದಿಗಳಲ್ಲೆಲ್ಲಾ ಈತನು ಅಶಿವನೇ (ಅಮಂಗಳನೇ) ಆಗಿದ್ದಾನೆ–ಎಂದು ನೀನು ಶಿವನನ್ನು ನಿಂದಿಸಿದೆಯಲ್ಲಾ! ನೀನು ಹೇಳಿದ ಈ ತತ್ತ್ವವು

---

* **"ಈಶ್ವರಾತ್ ಜ್ಞಾನಮನ್ವಿಚ್ಛೇತ್"**–ಮುಂತಾದ ವಚನಗಳಂತೆ ಶಿವನು ಜ್ಞಾನ ಪ್ರದಾತೃವು. (ವೀರರಾಘವೀಯ)

"ಸನಕಾದಯೋ ರುದ್ರಶಿಷ್ಯಾಃ ತೇಷಾಮನ್ಯೇ ಚ ಯೋಗಿನಃ । ಬ್ರಹ್ಮಶಿಷ್ಯಸ್ತಥಾ ರುದ್ರೋ ಬ್ರಹ್ಮಾನಾರಾಯಣಸ್ಯ ಚ ॥ "–ಇತ್ಯಾದಿ ವಚನಗಳಂತೆ ರುದ್ರದೇವರು ದಕ್ಷನಿಗೆ ಗುರುಸ್ಥಾನದಲ್ಲಿದ್ದಾರೆ. ಆ ರುದ್ರದೇವರನ್ನು ದ್ವೇಷಿಸುವುದರಿಂದ ದಕ್ಷನು ಗುರು ದ್ರೋಹಿಯಾಗಿದ್ದಾನೆ. 'ಮಹತಾಂ' ಎಂದರೆ–ಸನಕಾದಿಗಳು.

(ವಿಜಯಧ್ವಜೀಯ) (ಶ್ಲೋಕ ೧೫)

ನಿನ್ನನ್ನು ಹೊರತು ಬಹುಶಃ ಬೇರೆ ಯಾವ ದೇವತೆಗಳಿಗೂ ತಿಳಿದಿಲ್ಲವೆಂದು ಕಾಣುತ್ತದೆ. ಆದಕ್ಕೇ ಬ್ರಹ್ಮಾದಿ ದೇವತೆಗಳು–ಶ್ಮಶಾನದಲ್ಲಿರುತ್ತಾ, ಮನುಷ್ಯರ ತಲೆಬುರುಡೆಗಳ ಮಾಲೆ, ಚಿತಾಭಸ್ಮ ಮತ್ತು ಮೂಳೆಗಳನ್ನು ಧರಿಸಿ, ಜಟೆಗಳನ್ನು ಕೆದರಿಕೊಂಡು ಭೂತ-ಪಿಶಾಚಗಳೊಡನೆ ವಾಸಮಾಡುವ ಭಗವಂತನಾದ ಪರಶಿವನ ಪಾದಗಳಿಂದ ಉದುರಿದ ನಿರ್ಮಾಲ್ಯವನ್ನು ತಮ್ಮ ತಲೆಯಲ್ಲಿ ಧರಿಸಿಕೊಳ್ಳುತ್ತಾರೆ.*

ಕರ್ಣೌ ಪಿಧಾಯ ನಿರಯಾದ್ಯದಕಲ್ಪ ಈಶೇ
ಧರ್ಮಾವಿತರ್ಯಸೃಣಿಭಿರ್ನೃಭಿರಸ್ಯಮಾನೇ ।
ಛಿನ್ದ್ಯಾತ್ಪ್ರಸಹ್ಯ ರುಶತೀಮಸತೀಂ ಪ್ರಭುಶ್ಚೇ-
ಜ್ಜಿಹ್ವಾಮಸೂನಪಿ ತತೋ ವಿಸೃಜೇತ್ಸ ಧರ್ಮಃ[1] ॥೧೭॥

ಧರ್ಮಮರ್ಯಾದೆಯನ್ನು ರಕ್ಷಿಸುವ ಪೂಜ್ಯನಾದ ತನ್ನ ಸ್ವಾಮಿಯನ್ನು ಯಾವನಾದರೂ ನಿರಂಕುಶನಾದ ವ್ಯಕ್ತಿಯು ನಿಂದೆಮಾಡಿದ್ದೇ ಆದರೆ ಏನು ಮಾಡಬೇಕು? ಎಂದರೆ : ತನಗೆ ಶಕ್ತಿಯಿದ್ದರೆ ಆ ದುಷ್ಟನನ್ನು ಶಿಕ್ಷಿಸಬೇಕು. ಆ ಶಕ್ತಿಯಿಲ್ಲದಿದ್ದರೆ ಕಿವಿಗಳನ್ನು ಮುಚ್ಚಿಕೊಂಡು ಅಲ್ಲಿಂದ

---

* ಹೋಲಿಕೆ : "ತದಙ್ಗಸಂಸರ್ಗಮವಾಪ್ಯ ಕಲ್ಪತೇ ಧ್ರುವಂ ಚಿತಾಭಸ್ಮರಜೋ ವಿಶುದ್ಧಯೇ । ತಥಾ ಹಿ ನೃತ್ಯಾಭಿನಯಕ್ರಿಯಾಚ್ಯುತಂ ವಿಲಿಪ್ಯತೇ ಮೌಲಿಭಿರಮ್ಬರೌಕಸಾಮ್ ॥" (ಕುಮಾರಸಂಭವ-ಸರ್ಗ ೫)

ವಿಷ್ಣುವೇ ಸರ್ವೋತ್ತಮನೂ, ಉಪಾಸ್ಯನೂ, ಮೋಕ್ಷಪ್ರದನೂ–ಎಂದು ಬೋಧಿಸುವ ಈ ಪುರಾಣದಲ್ಲಿ ರುದ್ರನನ್ನೇ ಸರ್ವೋತ್ತಮನೆಂದೂ–ಜಗತ್ಕಾರಣನೆಂದೂ ಕೆಲವು ಕಡೆ ಏಕೆ ಹೇಳಿದೆ? ಎಂದರೆ : ರುದ್ರದೇವರು ಭಗವಂತನ ಆವೇಶಾವತಾರವಾಗಿರುವುದರಿಂದ ಹಾಗೆ ಸ್ತೋತ್ರಮಾಡಿದೆ. ಅಥವಾ ಸತೀದೇವಿಯು ಹಿಂದೆ ಮಾಡಿದ ಕೊಂಡಾಟವನ್ನು ಇಲ್ಲಿ ಅನುವಾದಮಾಡಿದೆ ಎಂದು ತಿಳಿಯಬೇಕು. 'ನಾರಾಯಣನನ್ನು ಬಿಟ್ಟು ಬೇರೆ ದೇವತೆಗಳನ್ನು ನಮಸ್ಕರಿಸಕೂಡದು'. "ನಾನ್ಯಂ ದೈವಂ ನಮಸ್ಕುರ್ಯಾನ್ನಾನ್ಯಂ ದೈವಂ ನಿರೀಕ್ಷಯೇತ್"–ಎಂದು ಸಾತ್ವತತಂತ್ರವು ಹೇಳಿದೆಯಲ್ಲಾ! ಎಂದರೆ : ಅದಕ್ಕೆ ನಾರಾಯಣನ ಉಪಾಸನೆಯಲ್ಲಿ ತಾತ್ಪರ್ಯವೇ ಹೊರತು ಅನ್ಯದೇವತೆಗಳ ದೂಷಣೆಯಲ್ಲಿ ತಾತ್ಪರ್ಯವಲ್ಲ. ಅನನ್ಯಭಕ್ತಿಯಿಂದ ನಾರಾಯಣನನ್ನು

---

1 ಹೋಲಿಕೆ : "ಯತ್ರ ಗುರೋಃ ನಿಂದಾ ಅಪವಾಧೋ ವಾ ಶ್ರೂಯತೇ ತತ್ರ ಕರ್ಣೌ ಪಿನದ್ಧವ್ಯಂ, ಅನ್ಯತ್ರ ವಾ ಗಂತವ್ಯಮ್ ॥" (ಶ್ಲೋಕ ೧೭)

ಹೊರಟುಹೋಗಬೇಕು. ಸಾಮರ್ಥ್ಯವಿದ್ದ ಪಕ್ಷದಲ್ಲಿ ಆ ದುಷ್ಟನನ್ನು ಬಲಾತ್ಕಾರದಿಂದ ಹಿಡಿದು ಅಮಂಗಳವಾದ ನುಡಿಗಳನ್ನಾಡುತ್ತಿರುವ ಆತನ ಕೆಟ್ಟ ನಾಲಗೆಯನ್ನು ಕತ್ತರಿಸಿಹಾಕಬೇಕು. ಆ ಪಾಪವನ್ನು ತಡೆಗಟ್ಟುವುದಕ್ಕಾಗಿ ತನ್ನ ಪ್ರಾಣವನ್ನು ತೊರೆಯಲೂ ಸಿದ್ಧನಾಗಿರಬೇಕು. ಇದೇ ಧರ್ಮ ಸೂಕ್ಷ್ಮವು.

ಅತಸ್ತವೋತ್ಪನ್ನಮಿದಂ ಕಲೇವರಂ
ನ ಧಾರಯಿಷ್ಯೇ ಶಿತಿಕಣ್ಠಗರ್ಹಿಣಃ ।
ಜಗ್ಧಸ್ಯ ಮೋಹಾದ್ಧಿ ವಿಶುದ್ಧಿಮನ್ಧಸೋ
ಜುಗುಪ್ಸಿತಸ್ಯೋದ್ಧರಣಂ ಪ್ರಚಕ್ಷತೇ ॥೧೮॥

ಅಪ್ಪಾ! ನೀನು ಭಗವಂತನಾದ ನೀಲಕಂಠನನ್ನೇ ನಿಂದಿಸುತ್ತಿರುವೆ. ಆದುದರಿಂದ ನೀನು ಜನ್ಮಕೊಟ್ಟಿರುವ ಈ ದೇಹವನ್ನು ಇನ್ನು ಇರಿಸಿಕೊಳ್ಳುವುದಿಲ್ಲ. ಯಾವುದಾದರೂ ನಿಂದಿತವಾದ ಪದಾರ್ಥಗಳನ್ನು ತಿಳಿಯದೇ ತಿಂದುಬಿಟ್ಟರೆ–ಅದನ್ನು ವಮನ ಅಥವಾ ವಿರೇಚನದ ಮೂಲಕ ಹೊರಕ್ಕೆ ತಳ್ಳಿಬಿಡಬೇಕು. ಹಾಗೆ ಮಾಡಿದರೆ ತಾನೇ ಶುದ್ಧಿಯಾಗುವುದು? ಎಂದು ತಿಳಿದವರು ಹೇಳುತ್ತಾರೆ.

ನ ವೇದವಾದಾನನುವರ್ತತೇ ಮತಿಃ
ಸ್ವ ಏವ ಲೋಕೇ ರಮತೋ ಮಹಾಮುನೇಃ ।
ಯಥಾ ಗತಿರ್ದೇವಮನುಷ್ಯಯೋಃ ಪೃಥ–
ಕ್ಸ್ವ ಏವ ಧರ್ಮೇ ನ ಪರಂ ಕ್ಷಿಪೇತ್ಸ್ಥಿತಃ ॥೧೯॥

ಆರಾಧಿಸಬೇಕು ಎಂದಷ್ಟೇ ಅಭಿಪ್ರಾಯ. ಉಪಾಸನೆಗಳಲ್ಲಿ ಸದ್ವಾರಕ ಮತ್ತು ಅದ್ವಾರಕ–ಎಂದು ಎರಡು ಬಗೆಗಳು. ನೇರವಾಗಿಯೇ ನಾರಾಯಣನನ್ನು ಆರಾಧಿಸುವುದು ಅದ್ವಾರಕ. ಇತರ ದೇವತೆಗಳ ಮೂಲಕ ಶ್ರೀಭಗವಂತನನ್ನು ಆರಾಧಿಸುವುದು ಸದ್ವಾರಕ. ಸದ್ವಾರಕೋಪಾಸನೆಗೆ ಕಾಮ್ಯಗಳು ಫಲ. ಅದ್ವಾರಕೋಪಾಸನೆಯು ಕಾಮ್ಯ ಮತ್ತು ಮೋಕ್ಷ– ಈ ಎರಡಕ್ಕೂ ಸಾಧನವಾಗುವುದು. (ವೀರರಾಘವೀಯ)

ಗರುಡದೇವರು, ಶೇಷದೇವರು, ಪ್ರಾಣದೇವರು, ಬ್ರಹ್ಮದೇವರು, ಮಹಾವಿಷ್ಣು, ಶ್ರೀದೇವಿ ಮತ್ತು ಸರಸ್ವತೀ–ಇವರನ್ನು ಬಿಟ್ಟು ಉಳಿದವರೆಲ್ಲರೂ ಪುರುಷಾರ್ಥಸಿದ್ಧಿಗಾಗಿ ರುದ್ರದೇವರನ್ನು ನಮಸ್ಕರಿಸಲೇಬೇಕು. "ಸುಪರ್ಣಶೇಷಪ್ರಾಣೇಶಬ್ರಹ್ಮ ವಿಷ್ಣೂನ್ ಶ್ರಿಯಂ ಗಿರಮ್ । ಋತೇ ನಮತಿ ನೋ ರುದ್ರಂ ಕ ಏವ ಪುರುಷಾರ್ಥ ಭಾಕ್॥" (ವಿಜಯಧ್ವಜೀಯ) (ಶ್ಲೋಕ ೧೬)

ನೀನು ವೈರಾಗ್ಯಧರ್ಮದಲ್ಲಿರುವ ಪರಶಿವನನ್ನು ನಿಂದೆಮಾಡಿರುವುದು ಖಂಡಿತವಾಗಿಯೂ ಸರಿಯಲ್ಲ. ತಮ್ಮ ಆತ್ಮಸ್ವರೂಪವೆಂಬ ಲೋಕದಲ್ಲೇ ಸದಾ ರಮಿಸುತ್ತಿರುವ ಮಹಾಮುನಿಗಳ ಮನಸ್ಸು, ವೇದಗಳಲ್ಲಿರುವ ವಿಧಿ-ನಿಷೇಧರೂಪವಾದ ಕರ್ಮಕಾಂಡದ ವಾಕ್ಯಗಳನ್ನು ಅನುಸರಿಸುವುದಿಲ್ಲ. ದೇವತೆಗಳ ಮತ್ತು ಮನುಷ್ಯರ ಗತಿಗಳಲ್ಲಿ ಭೇದವಿದೆಯಲ್ಲವೇ? ಹಾಗೆಯೇ ಜ್ಞಾನಿ ಮತ್ತು ಅಜ್ಞಾನಿಗಳ ಸ್ಥಿತಿ-ಗತಿಗಳಲ್ಲೂ ಭೇದವಿರುತ್ತದೆ. ಆದ್ದರಿಂದ ಮನುಷ್ಯರು ತಮ್ಮದ್ದೇ ಆದ (ಪ್ರವೃತ್ತಿ ಅಥವಾ ನಿವೃತ್ತಿ) ಧರ್ಮದ ಮಾರ್ಗದಲ್ಲಿ ತಾವು ಇರುತ್ತಿದ್ದರೂ, ಇನ್ನೊಬ್ಬರ ಮಾರ್ಗವನ್ನು ಜರಿಯ ಬಾರದು.

ಕರ್ಮ ಪ್ರವೃತ್ತಂ ಚ ನಿವೃತ್ತಮಪ್ಯೃತಂ
ವೇದೇ ವಿವಿಚ್ಯೋಭಯಲಿಙ್ಗಮಾಶ್ರಿತಮ್ ।
ವಿರೋಧಿ ತದ್ಯೌಗಪದ್ಯೈಕಕರ್ತರಿ
ದ್ವಯಂ ತಥಾ ಬ್ರಹ್ಮಣಿ ಕರ್ಮ ನರ್ಚ್ಛತಿ ॥೨೦॥

ಪ್ರವೃತ್ತಿಮಾರ್ಗ (ಯಜ್ಞ-ಯಾಗಾದಿ-ಕರ್ಮಗಳ ಮಾರ್ಗ) ಮತ್ತು ನಿವೃತ್ತಿಮಾರ್ಗ (ಶಮ-ದಮಾದಿರೂಪವಾದ ಆಧ್ಯಾತ್ಮಮಾರ್ಗ)—ಈ ಎರಡೂ ಪ್ರಕಾರದ ಧರ್ಮಗಳೂ ಸರಿಯಾಗಿವೆ. ವೇದಗಳಲ್ಲಿ ಅವುಗಳಿಗೆ ಬೇರೆ-ಬೇರೆ ಅಧಿಕಾರಿಗಳನ್ನು ಹೇಳಿವೆ. ರಾಗಿಗಳಿಗೆ ಪ್ರವೃತ್ತಿಧರ್ಮವೂ, ವಿರಾಗಿಗಳಿಗೆ ನಿವೃತ್ತಿಧರ್ಮವೂ ಉಚಿತವಾದುದು. ಈ ಎರಡೂ ಧರ್ಮ ಗಳೂ ಪರಸ್ಪರವಿರುದ್ಧವಾಗಿರುವುದರಿಂದ ಎರಡೂ ಧರ್ಮಗಳನ್ನೂ ಒಬ್ಬನೇ ಮನುಷ್ಯನು ಏಕಕಾಲದಲ್ಲಿ ಆಚರಿಸಲಾಗದು. ಶ್ರೀಶಂಕರನಾದರೋ ಪರಬ್ರಹ್ಮನು. ಭಗವಂತನು. ಆತನಿಗೆ ಇವೆರಡರಲ್ಲಿ ಯಾವುದೇ ಪ್ರಕಾರದ ಕರ್ಮವನ್ನೂ ಆಚರಿಸುವ ಆವಶ್ಯಕತೆಯಿಲ್ಲ.

ಮಾ ವಃ ಪದವ್ಯಃ ಪಿತರಸ್ಮದಾಸ್ಥಿತಾ
ಯಾ ಯಜ್ಞಶಾಲಾಸು ನ ಧೂಮವರ್ತ್ಮಭಿಃ ।
ತದನ್ನತೃಪ್ತೈರಸುಭೃದ್ಭಿರೀಡಿತಾ
ಅವ್ಯಕ್ತಲಿಙ್ಗಾ ಅವಧೂತಸೇವಿತಾಃ ॥೨೧॥

ಅಪ್ಪಾ! ನೀನು ನನ್ನ ಪತಿಯನ್ನು ಭಾಗ್ಯಹೀನನೆಂದೂ ಭೋಗಹೀನ

ನೆಂದೂ ದೂಷಿಸಿದೆಯಲ್ಲವೇ? ಆದರೆ ನಮಗೆ ಅಕ್ಷಯವಾದ ಭೋಗ-ಭಾಗ್ಯಗಳಿವೆ. ವೈರಾಗ್ಯಚಕ್ರವರ್ತಿಗಳಾಗಿ ಗುರುತು ಸಿಕ್ಕದೇ ಇರುವ ಅವಧೂತರಾದ ಜ್ಞಾನಿಶ್ರೇಷ್ಠರು ಸೇವಿಸುವ ಒಳಅಳವಿಲ್ಲದ ಐಶ್ವರ್ಯದ ಭೋಗ ನಮ್ಮದು. ನಿಮಗೆ ಇಂತಹ ಐಶ್ವರ್ಯಗಳಾದರೂ ಎಲ್ಲಿಂದ ಬರಬೇಕು? ಯಜ್ಞಶಾಲೆಗಳಲ್ಲಿ ಸಿಕ್ಕುವ ಊಟದಿಂದ ತೃಪ್ತಿಪಡುವ ನಿಮ್ಮಂತಹ ಕೇವಲಕರ್ಮಠರಾದ ಉಂಡಾಡಿಗಳು ನಮ್ಮ ಅಕ್ಷಯವಾದ ಭಾಗ್ಯವನ್ನು ಹೇಗೆ ತಾನೇ ಹೊಗಳಿಯಾರು?

ನೈತೇನ ದೇಹೇನ ಹರೇ ಕೃತಾಗಸೋ
ದೇಹೋದ್ಭವೇನಾಲಮಲಂ ಕುಜನ್ಮನಾ ।
ವ್ರೀಡಾ ಮಮಾಭೂತ್ಕುಜನಪ್ರಸಙ್ಗತ-
ಸ್ತಜ್ಜನ್ಮ ಧಿಗ್ಯೋ ಮಹತಾಮವದ್ಯಕೃತ್ ॥೨೨॥

ತಂದೆಯೇ! ನೀನು ಭಗವಂತನಾದ ಶಂಕರನಲ್ಲಿ ಅಪರಾಧಮಾಡಿದವನಾಗಿದ್ದೀಯೆ. ಅಂತಹ ನಿನ್ನ ಶರೀರದಿಂದ ಉಂಟಾಗಿರುವ ಈ ನಿಂದಾಯೋಗ್ಯವಾದ ದೇಹವನ್ನು ಇಟ್ಟುಕೊಂಡು ನಾನೇನು ಮಾಡಬೇಕು? ನಿನ್ನಂತಹ ದುರ್ಜನವ್ಯಕ್ತಿಯ ಸಂಬಂಧವನ್ನು ಹೊಂದಿರುವುದಕ್ಕಾಗಿ ನನಗೆ ನಾಚಿಕೆಯಾಗುತ್ತಿದೆ. ಮಹಾಪುರುಷರಲ್ಲಿ ಯಾವನು ಅಪರಾಧವನ್ನೆಸಗುತ್ತಾನೋ—ಆತನಿಂದ ಉಂಟಾಗುವ ಜನ್ಮಕ್ಕೂ ಧಿಕ್ಕಾರವು.

ಗೋತ್ರಂ ತ್ವದೀಯಂ ಭಗವಾನ್ವೃಷಧ್ವಜೋ
ದಾಕ್ಷಾಯಣೀತ್ಯಾಹ ಯದಾ ಸುದುರ್ಮನಾಃ ।
ವ್ಯಪೇತನರ್ಮಸ್ಮಿತಮಾಶು ತದ್ಧ್ಯಹಂ
ವ್ಯುತ್ಸ್ರಕ್ಷ್ಯ ಏತತ್ಕುಣಪಂ ತ್ವದಙ್ಗಜಮ್ ॥೨೩॥

ಭಗವಂತನಾದ ಶಿವನು ನಿನ್ನೊಡನೆ ನನಗಿರುವ ಸಂಬಂಧವನ್ನು ನೆನಪಿಸುತ್ತಾ, ಹಾಸ್ಯಕ್ಕಾಗಿ—“ದಾಕ್ಷಾಯಣಿ’ (ದಕ್ಷಕುಮಾರಿ)—ಎಂಬ ಹೆಸರಿನಿಂದ ನನ್ನನ್ನು ಕರೆದರೆ—ಆಗ ನಾನು ನಗುವುದನ್ನು ಮರೆತು ನಾಚಿಕೆಯಲ್ಲೂ ದುಃಖದಲ್ಲೂ ಸಿಕ್ಕಿಹಾಕಿಕೊಳ್ಳುವೆನು. ಆದುದರಿಂದ ಅದಕ್ಕೆ

ಮೊದಲೇ ನಾನು–ನಿನ್ನ ಅಂಗದಿಂದ ಉತ್ಪನ್ನವಾಗಿ, ಹೆಣಕ್ಕೆ ಸಮಾನ ವಾಗಿರುವ ಈ ದೇಹವನ್ನು ತೊರೆದುಬಿಡುವೆನು."

ಮೈತ್ರೇಯರು ಹೇಳುತ್ತಾರೆ :

ಕಾಮ-ಕ್ರೋಧಾದಿ ಅಂತಃಶತ್ರುಗಳನ್ನು ಗೆದ್ದಿರುವ ವಿದುರನೇ! ಸತೀದೇವಿಯು ಯಜ್ಞಮಂಟಪದಲ್ಲಿ ದಕ್ಷನಿಗೆ ಹೀಗೆ ಹೇಳಿ ಮೌನವಾಗಿ ಉತ್ತರದಿಕ್ಕಿಗೆ ತಿರುಗಿಕೊಂಡು ನೆಲದ ಮೇಲೆ ಕುಳಿತುಬಿಟ್ಟಳು. ಶುದ್ಧಾಚಮನಮಾಡಿ ಹಳದೀಬಟ್ಟೆಯನ್ನು ಹೊದ್ದುಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡು ದೇಹತ್ಯಾಗಮಾಡುವ ಸಂಕಲ್ಪದಿಂದ ಯೋಗಮಾರ್ಗವನ್ನು ಹಿಡಿದಳು. ಯೋಗಾಸನದ ಸ್ಥೈರ್ಯವನ್ನು ಪಡೆದು, ಪ್ರಾಣಾಯಾಮದ ಮೂಲಕ ಪ್ರಾಣ ಮತ್ತು ಅಪಾನವಾಯುಗಳನ್ನು ಸಮಗೊಳಿಸಿ ಮಣಿಪೂರ ವೆಂಬ ನಾಭಿಚಕ್ರದಲ್ಲಿ ನೆಲೆಗೊಳಿಸಿದಳು. ಉದಾನವಾಯುವನ್ನು ಆ ನಾಭಿಚಕ್ರದಿಂದ ಮೇಲಕ್ಕೆ ಎಬ್ಬಿಸಿ, ಮೆಲ್ಲ-ಮೆಲ್ಲಗೆ ಬುದ್ಧಿಯೊಡನೆ ಅನಾಹತವೆಂಬ ಹೃದಯಚಕ್ರದಲ್ಲಿ ಸ್ಥಾಪಿಸಿದಳು. ಅನಂತರ ವಿಶುದ್ಧಿಯೆಂಬ ಕಂಠಚಕ್ರದ ದ್ವಾರದಿಂದ ಆ ಮಹಾಯೋಗಿನಿಯು ಅದನ್ನು ಆಜ್ಞಾಚಕ್ರವೆಂಬ ಭ್ರೂಮಧ್ಯಸ್ಥಾನಕ್ಕೆ ಒಯ್ದಳು. ಈ ರೀತಿಯಲ್ಲಿ ದಕ್ಷನಲ್ಲಿ ಕುಪಿತಳಾದ ಆ ಸಾಧ್ವೀಮಣಿಯು, ಯಾವುದನ್ನು ಮಹಾಪುರುಷರಲ್ಲೂ ಮಹತ್ತಮನಾದ ಮಹಾದೇವನು ಹಲವುಬಾರಿ ಅತ್ಯಂತ ಆದರದಿಂದ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದನೋ–ಅಂತಹ ಪವಿತ್ರವಾದ ದೇಹವನ್ನು ತೊರೆಯ ಬೇಕೆಂದು ದೃಢವಾಗಿ ನಿಶ್ಚಯಿಸಿದವಳಾಗಿ, ತನ್ನ ಎಲ್ಲ ಅಂಗಗಳಲ್ಲಿಯೂ ಅಗ್ನಿಜ್ವಾಲೆಯನ್ನು ಎಬ್ಬಿಸುವ 'ಅನಿಲಾಗ್ನಿಧಾರಣ' ಎಂಬ ಯೋಗಧಾರಣೆ ಯನ್ನು ತಂದುಕೊಂಡಳು. ಬಳಿಕ ಪಾಪರಹಿತೆಯಾದ ಆ ದೇವಿಯು ತನ್ನ ಪತಿದೇವನಾದ, ಜಗದ್ಗುರುವಾದ ಪರಶಿವನ ದಿವ್ಯಚರಣಕಮಲಗಳ ಮಕರಂದವನ್ನೇ ಧ್ಯಾನಿಸುತ್ತಾ ಬೇರೆಲ್ಲವನ್ನೂ ಮರೆತುಬಿಟ್ಟಳು. ಒಡನೆಯೇ ಆಕೆಯ ಪರಿಶುದ್ಧವಾದ ದೇಹವು ಸಮಾಧಿಯಿಂದುಂಟಾದ ಯೋಗಾಗ್ನಿಯಲ್ಲಿ ಸುಟ್ಟುಹೋಯಿತು.

ಆ ಅದ್ಭುತವನ್ನು ಕಂಡ, ದೇವತೆಗಳೂ–ಮಹರ್ಷಿಗಳೂ–'ಅಯ್ಯೋ! ಎಂತಹ ಅನ್ಯಾಯವಾಯಿತು?'–ಎಂದು ಹಾಹಾಕಾರಮಾಡಿದರು. ಅವರ

ಆ ಕೋಲಾಹಲವು ಆಕಾಶದಲ್ಲೂ–ಭೂಮಿಯಲ್ಲೂ ಎಲ್ಲೆಲ್ಲೂ ಹರಡಿತು. ಎಲ್ಲ ಕಡೆಗಳಿಂದಲೂ "ಅಕಟಾ! ಎಂತಹ ಅನಾಹುತವಾಯಿತು! ದಕ್ಷನ ದುಷ್ಟವಾದ ಆಚರಣೆಯನ್ನು ಕಂಡು ಕ್ರುದ್ಧಳಾಗಿ ದೇವಾಧಿದೇವನಾದ ಮಹಾದೇವನ ಪತ್ನಿಯು ಪ್ರಾಣವನ್ನೇ ತ್ಯಾಗಮಾಡಿಬಿಟ್ಟಳಲ್ಲಾ! ಈ ದಕ್ಷನಾದರೋ ಪ್ರಜಾಪತಿಯು. ಚರಾಚರವಾದ ಜೀವಗಳೆಲ್ಲವೂ ಈತನ ಸಂತಾನಗಳೇ ಆಗಿವೆ. ಅದರಲ್ಲಿಯೂ ಈ ಸತೀದೇವಿಯು ಈತನ ಸಾಕ್ಷಾತ್ ಪುತ್ರಿಯು. ಇವಳು ಶುದ್ಧಹೃದಯಳು. ಸಾಧ್ವೀಮಣಿಯು. ಸದಾ ಸತ್ಕಾರಕ್ಕೆ ಯೋಗ್ಯಳಾದವಳು. ಆದರೂ ಈಕೆಯ ವಿಷಯದಲ್ಲಿ ಈ ದುಷ್ಟನು ಎಂತಹ ಅನಾದರವನ್ನು ತೋರಿದನು? ಅದರ ಫಲವಾಗಿ ಈಕೆಯು ಪ್ರಾಣವನ್ನೇ ತ್ಯಜಿಸಿಬಿಟ್ಟಳಲ್ಲಾ! ವಾಸ್ತವವಾಗಿಯೂ ಈ ದಕ್ಷನು ಕಠಿಣಹೃದಯನೂ, ಸ್ಥೈರಣೆಯಿಲ್ಲದವನೂ, ಬ್ರಹ್ಮದ್ರೋಹಿಯೂ ಆಗಿದ್ದಾನೆ. ಈತನು ಇಡೀ ಜಗತ್ತಿನಲ್ಲಿ ಅಪಕೀರ್ತಿಯನ್ನು ಪಡೆಯುವನು. ಮಗಳಾದ ಸತೀದೇವಿಯು ಈತನ ಅಪರಾಧವನ್ನು ಸಹಿಸಲಾಗದೇ ಪ್ರಾಣತ್ಯಾಗಮಾಡಲು ಸಿದ್ಧಳಾದ ಸಮಯದಲ್ಲೂ ಈ ಶಿವದ್ರೋಹಿಯು ಈಕೆಯನ್ನು ತಡೆಯಲಿಲ್ಲವಲ್ಲ!"–ಎಂಬ ಆಕ್ರೋಶದ ಧ್ವನಿಗಳು ಕೇಳಿಬರ ತೊಡಗಿದುವು. ಜನರೆಲ್ಲರೂ ಹೀಗೆ ಹೇಳುತ್ತಿರುವಾಗ ಪರಶಿವನ ಪಾರ್ಷದ ಗಣಗಳು ತಮ್ಮ ಒಡತಿಯು ಹೀಗೆ ಅದ್ಭುತವಾಗಿ ಪ್ರಾಣತ್ಯಾಗಮಾಡಿದು ದನ್ನು ಕಂಡು ಅತಿಕುಪಿತರಾಗಿ, ಆಯುಧಗಳನ್ನು ಎತ್ತಿಕೊಂಡು ದಕ್ಷನನ್ನು ಕೊಂದುಹಾಕಲು ಎದ್ದುನಿಂತರು. ಅವರು ಹೀಗೆ ಮೇಲೆ ಬೀಳುತ್ತಿರುವು ದನ್ನು ಕಂಡ ಭಗವಂತನಾದ ಭೃಗುಮುನಿಯು ದಕ್ಷಿಣಾಗ್ನಿಯಲ್ಲಿ ಯಜ್ಞ ಕಂಟಕಗಳನ್ನು ಧ್ವಂಸಗೊಳಿಸುವ ಯಜುರ್ಮಂತ್ರಗಳಿಂದ ಹೋಮಮಾಡಿ ದನು. ಅಧ್ವರ್ಯುವಾದ ಭೃಗುವು ಹೀಗೆ ಆಹುತಿಕೊಟ್ಟೊಡನೆಯೇ ಯಜ್ಞಕುಂಡದಿಂದ 'ಋಭು' ಗಳೆಂಬ ಸಾವಿರಾರು ಮಂದಿ ತೇಜಸ್ವಿಗಳಾದ ದೇವತೆಗಳು ಎದ್ದುಬಂದರು. ಅವರು ತಪೋಬಲದಿಂದ ಸೋಮಪಾನ ಮಾಡುವ ಅಧಿಕಾರವನ್ನು ಸಂಪಾದಿಸಿದ್ದ ಅಥವಾ ಸೋಮಲೋಕವನ್ನು ಸಂಪಾದಿಸಿದ್ದ ಮಹಾಶಕ್ತಿಸಂಪನ್ನರಾದ ದೇವತೆಗಳು. ಅವರು ತಮ್ಮ ಉರಿಯುತ್ತಿರುವ ಕೊಳ್ಳಿಗಳೆಂಬ ಆಯುಧಗಳಿಂದ ತಮ್ಮನ್ನು ಆಕ್ರಮಿಸ

ತೊಡಗಲು, ಆ ಬ್ರಹ್ಮತೇಜಸ್ಸನ್ನು ತಡೆಯಲಾರದೇ ಶಿವನ ಪ್ರಮಥಗಣ ಗಳೂ ಮತ್ತು ಗುಹ್ಯಕರೂ ದಿಕ್ಕು-ದಿಕ್ಕುಗಳಿಗೆ ಓಡಿಹೋದರು.

(ಶ್ಲೋಕ 24-34)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ ದಲ್ಲಿ ಚತುರ್ಥಸ್ಕಂಧದ ೪ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೫ನೆಯ ಅಧ್ಯಾಯ

ವೀರಭದ್ರಸ್ವಾಮಿಯಿಂದ ದಕ್ಷಯಜ್ಞವಿನಾಶ : ದಕ್ಷನ ವಧೆ

ಶ್ರೀಮೈತ್ರೇಯರು ಹೇಳುತ್ತಾರೆ :

ಭವೋ ಭವಾನ್ಯಾ ನಿಧನಂ ಪ್ರಜಾಪತೇ-
ರಸತ್ಕೃತಾಯಾ ಅವಗಮ್ಯ ನಾರದಾತ್ ।
ಸ್ವಪಾರ್ಷದಸೈನ್ಯಂ ಚ ತದಧ್ವರರ್ಭುಭಿ-
ರ್ವಿದ್ರಾವಿತಂ ಕ್ರೋಧಮಪಾರಮಾದಧೇ ॥೧॥

ತನ್ನ ಪ್ರಿಯಪತ್ನಿಯು–ತಂದೆಯಾದ ದಕ್ಷನುಮಾಡಿದ ಅಪಮಾನ ವನ್ನು ತಾಳಲಾರದೇ ಪ್ರಾಣತ್ಯಾಗಮಾಡಿದಳೆಂಬ ಮತ್ತು ಯಜ್ಞವೇದಿಕೆ ಯಿಂದ ಪ್ರಕಟಗೊಂಡ ಋಭುಗಳೆಂಬ ದೇವತೆಗಳು ತನ್ನ ಪಾರ್ಷದರನ್ನು ಹೊಡೆದು ಓಡಿಸಿಬಿಟ್ಟರೆಂಬ ಸಮಾಚಾರವನ್ನು ಕೇಳಿ ಮಹಾದೇವನಿಗೆ ಮಿತಿ ಮೀರಿದ ಕೋಪವುಂಟಾಯಿತು.

ಒಡನೆಯೇ ಆ ರುದ್ರದೇವನು ಎದ್ದುನಿಂತು ಉಗ್ರರೂಪವನ್ನು ಧರಿಸಿ, ಕ್ರೋಧದಿಂದ ತುಟಿಗಳನ್ನು ಕಚ್ಚುತ್ತಾ ಮಿಂಚಿನಂತೆಯೂ–ಬೆಂಕಿಯ ಜ್ವಾಲೆ ಗಳಂತೆಯೂ ಭಯಂಕರವಾಗಿ ಹೊಳೆಯುತ್ತಿದ್ದ ತನ್ನ ಒಂದು ಜಟೆಯನ್ನು ಕಿತ್ತು ಗಂಭೀರನಾದದಿಂದ ಅಟ್ಟಹಾಸಮಾಡುತ್ತಾ ಅದನ್ನು ನೆಲಕ್ಕೆ ಅಪ್ಪಳಿಸಿ ದನು. ತತ್ಕ್ಷಣದಲ್ಲಿಯೇ ಅದರಿಂದ ಸ್ವರ್ಗವನ್ನು ಮುಟ್ಟುತ್ತಿದ್ದ, ಅತ್ಯುನ್ನತ ನಾಗಿದ್ದ, ವಿಶಾಲಕಾಯನಾಗಿದ್ದ ಒಬ್ಬ ಪುರುಷನು ಉತ್ಪನ್ನನಾದನು. ಆತನಿಗೆ ಸಾವಿರ ತೋಳುಗಳೂ, ನೀರುಂಡಮೋಡದಂತೆ ಶ್ಯಾಮಲ

ವರ್ಣವಾದ ದೇಹಕಾಂತಿಯೂ, ಸೂರ್ಯನಂತೆ ಬೆಳಗುತ್ತಿರುವ ಮೂರು ಕಣ್ಣುಗಳೂ, ಕರಾಳವಾದ ಕೋರೆದಾಡೆಗಳೂ, ಉರಿಯುತ್ತಿರುವ ಬೆಂಕಿಯಂತೆ ಹೊಳೆಯುತ್ತಿದ್ದ ರಕ್ತಕೇಶಗಳೂ, ಕುತ್ತಿಗೆಯಲ್ಲಿ ಮನುಷ್ಯರ ತಲೆಬುರುಡೆಗಳ ಮಾಲೆಗಳೂ ಮತ್ತು ಕೈಯಲ್ಲಿ ಬಗೆ-ಬಗೆಯ ಅಸ್ತ್ರ-ಶಸ್ತ್ರಗಳೂ ಇದ್ದುವು. ಹೀಗೆ ಉಗ್ರವಾದ ರೂಪ-ವೇಷ-ಭೂಷಣ-ಆಯುಧಗಳಿಂದ ಒಪ್ಪುತ್ತಿದ್ದ ಆ ಪುರುಷನು ಕೈಜೋಡಿಸಿಕೊಂಡು–'ಜೀಯಾ! ನನಗೇನು ಅಪ್ಪಣೆ?'–ಎಂದು ಪ್ರಾರ್ಥನೆಮಾಡಲು, ಭಗವಂತನಾದ ಭೂತನಾಥನು–'ವತ್ಸ! ವೀರಭದ್ರ! ನೀನು ನನ್ನ ಅಂಶಸಂಭೂತನು. ನನ್ನ ಭಟರಿಗೆ ಅಧಿನಾಯಕನಾಗಿ ಒಡನೆಯೇ ಇಲ್ಲಿಂದ ಹೋಗಿ ಆ ದಕ್ಷನನ್ನೂ ಮತ್ತು ಆತನ ಯಜ್ಞವನ್ನೂ ಧ್ವಂಸಮಾಡಿ ಬಾ'–ಎಂದು ಆತನಿಗೆ ಆಜ್ಞೆಯನ್ನಿತ್ತನು. ದೇವಾಧಿದೇವನಾದ ಮೃತ್ಯುಂಜಯನು ಕ್ರೋಧದಿಂದ ಹೀಗೆ ಆಜ್ಞೆಮಾಡಲು–ಆ ವೀರಭದ್ರನು ಆತನಿಗೆ ಪ್ರದಕ್ಷಿಣೆಮಾಡಿ ಅಲ್ಲಿಂದ ಹೊರಡಲು ಸಿದ್ಧನಾದನು. 'ನನ್ನನ್ನು ಪ್ರತಿಭಟಿಸುವವನು ಈ ಲೋಕದಲ್ಲಿ ಯಾವನೂ ಇಲ್ಲ. ನಾನು ಎಂತಹ ಪರಾಕ್ರಮಿಗಳ ವೇಗವನ್ನಾದರೂ, ಬಲವನ್ನಾದರೂ ಸಹಿಸಬಲ್ಲೆನು'–ಎಂಬ ವಿಶ್ವಾಸವು ಅವನ ಹೃದಯದಲ್ಲಿ ತುಂಬಿತು. ಆತನು ಭಯಂಕರವಾಗಿ ಸಿಂಹನಾದಮಾಡುತ್ತಾ, ಕರಾಳವಾದ ಒಂದು ತ್ರಿಶೂಲವನ್ನು ಕೈಯಲ್ಲಿ ಝಳಪಿಸುತ್ತಾ, ಕಾಲ್ಗಡಗಗಳು ಝಣ-ಝಣಿಸುವಂತೆ ಹೆಜ್ಜೆಹಾಕುತ್ತಾ ದಕ್ಷನ ಯಜ್ಞಮಂಟಪದೆಡೆಗೆ ದಡ-ದಡನೆ ಓಡಿಹೋದನು. ಆತನ ತ್ರಿಶೂಲಕ್ಕೆ ಸಂಹಾರಕಾರಕನಾದ ಮೃತ್ಯುವನ್ನೂ ಸಂಹಾರಮಾಡುವ ಶಕ್ತಿಯಿತ್ತು. ರುದ್ರನ ಪ್ರಮಥಗಣಗಳು ಆರ್ಭಟಿಸುತ್ತಾ ಆತನನ್ನು ಹಿಂಬಾಲಿಸಿದುವು.

ಇತ್ತಕಡೆ ಯಜ್ಞಶಾಲೆಯಲ್ಲಿ ಕುಳಿತಿದ್ದ ಋತ್ವಿಜರೂ, ಯಜಮಾನನೂ, ಸದಸ್ಯರೂ, ಇತರ ಬ್ರಾಹ್ಮಣರೂ, ಬ್ರಾಹ್ಮಣರ ಪತ್ನಿಯರೂ, ಉತ್ತರದಿಕ್ಕಿನ ಕಡೆ ಭಯಂಕರವಾಗಿ ಧೂಳು ಏಳುತ್ತಿರುವುದನ್ನು ಕಂಡು–'ಅಯ್ಯೋ! ಇದೇನು ಹೀಗೆ ಕತ್ತಲೆ ಕವಿಯುತ್ತಿದೆಯಲ್ಲಾ! ಈ ಧೂಳೀ ಪಟಲ ಎಲ್ಲಿಂದ ಏಳುತ್ತಿದೆ? ಏಕೆ ಏಳುತ್ತಿದೆ? ಇದೇನೂ ಬಿರುಗಾಳಿಯ ಸಮಯವಲ್ಲ. ಕಳ್ಳ-ಕಾಕರರ ಹಾವಳಿಯೂ ಇಲ್ಲ. ಏಕೆಂದರೆ : ದುಷ್ಟರಿಗೆ

ಉಗ್ರವಾದ ದಂಡನೆಯನ್ನು ಕೊಡುವ ಪ್ರಾಚೀನಬರ್ಹಿಮಹಾರಾಜನು ದೇಶವನ್ನು ಆಳುತ್ತಿದ್ದಾನೆ. ಹಸುಗಳು ಮೇವಿನಿಂದ ಹಿಂದಿರುಗಿ ಬರುವ ಸಮಯವೂ ಇದಲ್ಲ. ಹಾಗಿದ್ದರೂ ಧೂಳು ಏಕೆ ಏಳುತ್ತಿದೆ? ಜಗತ್ತಿಗೆ ಏನಾದರೂ ಪ್ರಳಯಕಾಲವು ಬಂದುಬಿಟ್ಟಿದೆಯೇ?'–ಎಂದು ಗಾಬರಿಗೊಂಡು ಚಿಂತಿಸತೊಡಗಿದರು. (ಶ್ಲೋಕ 2-8)

ಪ್ರಸೂತಿಮಿಶ್ರಾಃ ಸ್ತ್ರಿಯ ಉದ್ವಿಗ್ನಚಿತ್ತಾ
ಊಚುರ್ವಿಪಾಕೋ ವೃಜಿನಸ್ಯೈಷ ತಸ್ಯ ।
ಯತ್ಪಶ್ಯನ್ತೀನಾಂ ದುಹಿತ್ರೂಣಾಂ ಪ್ರಜೇಶಃ
ಸುತಾಂ ಸತೀಮವದಧ್ಯಾವನಾಗಾಮ್ ॥೯॥

ಆಗ ದಕ್ಷನ ಪತ್ನಿಯಾದ ಪ್ರಸೂತಿಯೇ ಮುಂತಾದ ಸ್ತ್ರೀಯರು ಚಿಂತೆಗೀಡಾಗಿ–"ಈ ದಕ್ಷಪ್ರಜಾಪತಿಯು ತನ್ನ ಎಲ್ಲ ಕನ್ಯೆಯರ ಎದುರಿಗೆ ನಿರಪರಾಧಿನಿಯಾಗಿದ್ದ ಪುತ್ರಿಯಾದ ಸತೀದೇವಿಯ ವಿಷಯದಲ್ಲಿ ಮಹಾಪರಾಧವನ್ನೆಸಗಿದ್ದಾನೆ. ಮಹಾತಿರಸ್ಕಾರವನ್ನು ಮಾಡಿದ್ದಾನೆ. ಈ ಪಾತಕದ ಫಲವೇ ಇದು ಎಂದು ಕಾಣುತ್ತದೆ.

ಯಸ್ತ್ವನ್ತಕಾಲೇ ವ್ಯುಪ್ತಜಟಾಕಲಾಪಃ
ಸ್ವಶೂಲಸೂಚ್ಯರ್ಪಿತದಿಗ್ಗಜೇನ್ದ್ರಃ ।
ವಿತತ್ಯ ನೃತ್ಯತ್ಯುದಿತಾಸ್ತ್ರದೋರ್ಧ್ವಜಾ–
ನುಚ್ಚಾಟ್ಟಹಾಸಸ್ತನಯಿತ್ನುಭಿನ್ನದಿಕ್ ॥೧೦॥

ಅಮರ್ಷಯಿತ್ವಾ ತಮಸಹ್ಯತೇಜಸಂ
ಮನ್ಯುಪ್ಲುತಂ ದುರ್ನಿಷಹಂ ಭ್ರುಕುಟ್ಯಾ ।
ಕರಾಲದಂಷ್ಟ್ರಾಭಿರುದಸ್ತಭಾಗಣಂ
ಸ್ಯಾತ್ಸ್ವಸ್ತಿ ಕಿಂ ಕೋಪಯತೋ ವಿಧಾತುಃ ॥೧೧॥

ಇದು ಸಂಹಾರಮೂರ್ತಿಯಾದ ರುದ್ರನ ನಿಗ್ರಹದ ಸೂಚನೆಯೇ ಆಗಿರಬೇಕು. ಆ ರುದ್ರನು ಅತ್ಯುಗ್ರನು, ಅಪ್ರತಿಭಟನು. ಪ್ರಳಯಕಾಲವು ಬಂದಾಗ ಆತನು ತನ್ನ ಜಟೆಗಳನ್ನು ಕೆದರಿಕೊಂಡು ಶಸ್ತ್ರಾಸ್ತ್ರಗಳಿಂದ ಸಜ್ಜಿತವಾದ ಭುಜಗಳನ್ನು ಧ್ವಜಗಳಂತೆ ಬೀಸುತ್ತಾ ತಾಂಡವನೃತ್ಯವನ್ನಾಡು

ತ್ತಿರುವಾಗ–ಆತನ ತ್ರಿಶೂಲದ ಅಲಗುಗಳಲ್ಲಿ ದಿಗ್ಗಜಗಳೂ ಪೋಣಿಸಲ್ಪಡು ತ್ತವೆ. ಆತನ ಉಚ್ಚವಾದ ಅಟ್ಟಹಾಸದ ಗುಡುಗು-ಗರ್ಜನೆಗಳಿಂದ ದಿಕ್ಕುಗಳು ಸೀಳಿಹೋಗುತ್ತವೆ. ಸಹಿಸಲದಳವಾದ ತೇಜಸ್ಸು ಆತನಲ್ಲಿ ಉಕ್ಕೇರಿ ಬರುತ್ತದೆ. ಕ್ರೋಧದಿಂದ ಹುಬ್ಬುಗಂಟುಹಾಕಿಕೊಂಡು ನಿಂತ ಆತನನ್ನು ಯಾರೂ ಎದುರಿಸಲಾರರು. ಆತನ ಕರಾಳವಾದ ಕೋರೆಹಲ್ಲುಗಳ ಏಟಿಗೆ ಸಿಕ್ಕಿ ನಕ್ಷತ್ರಗಣಗಳೂ ಚೆಲ್ಲಾಪಿಲ್ಲಿಯಾಗಿಬಿಡುವುವು. ಅಂತಹ ರೋಷ ಭೀಷಣನಾದ ಉಗ್ರತೇಜೋಮೂರ್ತಿಯನ್ನು ಕೆಣಕಿದರೆ ಸಾಕ್ಷಾತ್ ಸೃಷ್ಟಿ ಕರ್ತನಿಗೇ ಆದರೂ ಕ್ಷೇಮವೆತ್ತಣದು?"–ಎಂದು ಹೇಳತೊಡಗಿದರು.

ಹೀಗೆ ಮಹಾತ್ಮನಾದ ದಕ್ಷನ ಯಜ್ಞಮಂಟಪದಲ್ಲಿ ಕುಳಿತಿದ್ದ ಜನರು ಭಯಗ್ರಸ್ತರಾಗಿ ಒಬ್ಬರನ್ನೊಬ್ಬರು ಅಂಜಿಕೆಯ ನೋಟದಿಂದ ದಿಟ್ಟಿಸುತ್ತಾ, ಬಗೆ-ಬಗೆಯಾಗಿ ಮಾತನಾಡಿಕೊಳ್ಳುತ್ತಿರುವಂತೆಯೇ ಭೂಮಿಯಲ್ಲೂ, ಆಕಾಶದಲ್ಲೂ, ಎಲ್ಲ ಕಡೆಗಳಲ್ಲೂ ಭಯಂಕರವಾದ ಉತ್ಪಾತಗಳು ಕಾಣಿಸ ತೊಡಗಿದುವು. ಅಷ್ಟರಲ್ಲೇ ರುದ್ರನ ಸೇವಕರಾದ ಪ್ರಮಥಗಣಗಳು ಆ ದೊಡ್ಡ ಯಜ್ಞಮಂಟಪವನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದು ಮುತ್ತಿಗೆ ಹಾಕಿದುವು. ಆ ಗಣಗಳ ಭೀಕೃತ-ವಿಕೃತರೂಪವನ್ನು ಕೇಳಬೇಕೇ? ಕೆಲವರು ಕುಳ್ಳರು. ಕೆಲವರು ಕೆಂಪುಬಣ್ಣದವರು. ಕೆಲವರು ಕಂದುಬಣ್ಣದವರು. ಕೆಲವರು ಹಳದೀಬಣ್ಣದವರು. ಕೆಲವರಿಗೆ ಮೊಸಳೆಯಂತೆ ಹೊಟ್ಟೆ ಮತ್ತು ಮುಖಗಳಿದ್ದುವು. ಎಲ್ಲರ ಕೈಗಳಲ್ಲೂ ಆಯುಧಗಳಿದ್ದುವು. ಅವರಲ್ಲಿ ಕೆಲವರು ಯಜ್ಞದ ಪ್ರಾಗ್ವಂಶವನ್ನು* ಮುರಿದುಹಾಕಿದರು. ಮತ್ತೆ ಕೆಲವರು ಯಜ್ಞಶಾಲೆಯ ಪಶ್ಚಿಮದಕ್ಕಿನಲ್ಲಿದ್ದ ಪತ್ನೀಶಾಲೆಯನ್ನು ಧ್ವಂಸಮಾಡಿ ದರು. ಇನ್ನು ಕೆಲವರು ಯಜ್ಞಶಾಲೆಯ ಮುಂಭಾಗದ ಸಭಾಮಂಟಪವನ್ನೂ

---

* ಪ್ರಾಗ್ವಂಶಃ = ಯಜ್ಞಶಾಲೆಯ ಪೂರ್ವ ಮತ್ತು ಪಶ್ಚಿಮದಿಕ್ಕುಗಳ ಕಂಬಗಳ ಮೇಲೆ ಅಡ್ಡಲಾಗಿ ಹಾಕುವ ಬಿದುರು ದಬ್ಬೆಗಳು. ಪಶ್ಚಿಮದಿಕ್ಕಿನಲ್ಲಿ ಯಜಮಾನನ ಪತ್ನಿಯು ಇರುವ ಶಾಲೆಗೆ 'ಪತ್ನೀಶಾಲೆ' ಎಂದು ಹೆಸರು. ಯಜ್ಞಶಾಲೆಯ ಮುಂದೆ ಪ್ರೇಕ್ಷಕರು ಕುಳಿತುಕೊಳ್ಳುವ ಸ್ಥಳವು 'ಸದಸ್ಸು-ಸಭಾಮಂಟಪ' ಎನಿಸುವುದು. ಸಭಾಮಂಟಪದ ಮುಂದೆ ಇರುವುದು. 'ಹವಿರ್ಧಾನ'. ಹವಿರ್ಧಾನದ ಉತ್ತರದಲ್ಲಿರುವುದು 'ಅಗ್ನೀಧ್ರಶಾಲೆ'.

(ಶ್ಲೋಕ ೧೪)

ಮತ್ತು ಮಂಟಪದ ಉತ್ತರದಲ್ಲಿದ್ದ ಆಗ್ನೀಧ್ರಶಾಲೆಯನ್ನೂ ಕಿತ್ತುಹಾಕಿದರು. ಕೆಲವರು ಯಜಮಾನಗೃಹವನ್ನೂ ಪಾಕಶಾಲೆಯನ್ನೂ ಒಡೆದು ಹಾಳುಮಾಡಿದರು. ಕೆಲವರು ಯಜ್ಞದ ಪಾತ್ರೆಗಳನ್ನು ಒಡೆದುಹಾಕಿದರೆ, ಇನ್ನು ಕೆಲವರು ದಕ್ಷಿಣಾಗ್ನಿ-ಗಾರ್ಹಪತ್ಯ-ಆಹವನೀಯಗಳೆಂಬ ಅಗ್ನಿಗಳನ್ನು ಆರಿಸಿಬಿಟ್ಟರು. ಕೆಲವರು ಯಜ್ಞಕುಂಡಗಳಲ್ಲಿ ಮೂತ್ರಗಳನ್ನು ಸುರಿಸಿದರು. ಕೆಲವರು ಉತ್ತರವೇದಿಯ ಸುತ್ತಲೂ ಸುತ್ತಿದ್ದ ಹಸಿದಾರವನ್ನು ಕಿತ್ತು ಬಿಸುಟರು. ಕೆಲವರು ಋಷಿಗಳನ್ನು ಪೀಡಿಸಿದರೆ, ಮತ್ತೆ ಕೆಲವರು ಹೆಂಗಸರನ್ನು ಹೆದರಿಸಿ-ಗದರಿಸತೊಡಗಿದರು. ಇನ್ನು ಕೆಲವರು ಹತ್ತಿರದಲ್ಲಿದ್ದ ಮತ್ತು ಓಡಿಹೋಗುತ್ತಿದ್ದ ದೇವತೆಗಳನ್ನು ಹಿಡಿದುಕೊಂಡರು. ಮಣಿ ಮಂತನು ಭೃಗುಮಹರ್ಷಿಗಳನ್ನು ಕಟ್ಟಿಹಾಕಿದನು. ವೀರಭದ್ರನು ದಕ್ಷಪ್ರಜಾ ಪತಿಯನ್ನು ಸೆರೆಹಿಡಿದನು. ಚಂಡೀಶನು ಪೂಷನನ್ನೂ ಮತ್ತು ನಂದೀಶ್ವರನು ಭಗದೇವತೆಯನ್ನೂ ಹಿಡಿದುಕೊಂಡರು. ಸಭೆಯಲ್ಲಿದ್ದ ಎಲ್ಲ ಋತ್ವಿಜರೂ, ದೇವತೆಗಳೂ ಮತ್ತು ಇತರ ಸದಸ್ಯರೂ ಈ ಆಕ್ರಮಣದ ಹಾವಳಿಯನ್ನು ಕಂಡು ಗಾಬರಿಗೊಂಡರು. ರುದ್ರಭಟರ ಕಲ್ಲು-ಕವಣೆಗಳ ಏಟುಗಳನ್ನು ತಾಳಲಾರದೇ ಎಲ್ಲರೂ ದಿಕ್ಕಾಪಾಲಾಗಿ ಓಡಿಹೋದರು.

ಭೃಗುಮಹರ್ಷಿಗಳು ಕೈಯ್ಯಲ್ಲಿ ಸ್ರುವೆಯನ್ನು ಹಿಡಿದು ಹೋಮ ಮಾಡುತ್ತಿದ್ದರು. ಅವರು ದಕ್ಷಪ್ರಜಾಪತಿಯ ಸಭೆಯಲ್ಲಿ ಮೀಸೆಗಳನ್ನು ತಿರುವುತ್ತಾ ಶಿವನ ಬಗೆಗೆ ಹಾಸ್ಯಮಾಡಿದ್ದರು. ಆದ್ದರಿಂದ ವೀರಭದ್ರನು ಅವರ ಗಡ್ಡ-ಮೀಸೆಗಳನ್ನು ಕಿತ್ತು ಬಿಸಾಡಿದನು. ಭಗದೇವತೆಯು ಸಭೆ ಯಲ್ಲಿ ಶಿವನಿಂದನೆಯನ್ನು ಮಾಡುತ್ತಿದ್ದ ದಕ್ಷನಿಗೆ ಕಣ್ಣನ್ನು ಮಿಟುಕಿಸಿ ಪ್ರೇರಣೆಯನ್ನು ಕೊಡುತ್ತಿದ್ದನು. ಆದ್ದರಿಂದ ವೀರಭದ್ರಸ್ವಾಮಿಯು ಅವನನ್ನು ಕೋಪದಿಂದ ಕೆಳಕ್ಕೆ ಕುಕ್ಕಿ ಆತನ ಕಣ್ಣುಗಳನ್ನು ಕಿತ್ತುಹಾಕಿದನು. ಅನಂತರ ಪೂಷನನ್ನು ಹಿಡಿದುಕೊಂಡು–ಮುಂದೆ ಬಲರಾಮನು ಕಳಿಂಗರಾಜನ ಹಲ್ಲುಗಳನ್ನು ಮುರಿದುಹಾಕುವಂತೆ* –ಆತನ ಹಲ್ಲುಗಳನ್ನು ಕಿತ್ತುಹಾಕಿದನು. ಏಕೆಂದರೆ : ದಕ್ಷನು ಮಹಾದೇವನನ್ನು ಬಯ್ಯುತ್ತಿದ್ದಾಗ

* ಬಲರಾಮನು ಕಳಿಂಗರಾಜನ ಹಲ್ಲುಗಳನ್ನು ಕಿತ್ತುಹಾಕುವುದು ಮುಂದೆ ನಡೆಯುವ ಘಟನೆ. ಅದನ್ನು ಇಲ್ಲಿ ಉಪಮಾನವಾಗಿ ಹೇಳಿದೆ. (anechronism)

ಈ ಪೂಷದೇವತೆಯು ಹಲ್ಲುಕಿರಿಯುತ್ತಾ ನಗುತ್ತಿದ್ದನು. ಆ ಬಳಿಕ ಮುಕ್ಕಣ್ಣನಾದ ವೀರಭದ್ರನು ದಕ್ಷನ ಎದೆಯ ಮೇಲೆ ಕುಳಿತು ತೀಕ್ಷ್ಣವಾದ ಕತ್ತಿಯಿಂದ ಆತನ ತಲೆಯನ್ನು ಕತ್ತರಿಸತೊಡಗಿದನು. ಆದರೆ ಎಷ್ಟು ಕಡಿದರೂ ಆ ತಲೆಯನ್ನು ಕಿತ್ತುಹಾಕಲು ಸಾಧ್ಯವಾಗಲಿಲ್ಲ. ಯಾವುದೇ ಪ್ರಕಾರದ ಅಸ್ತ್ರ-ಶಸ್ತ್ರಗಳಿಂದಲೂ ದಕ್ಷಪ್ರಜಾಪತಿಯ ಚರ್ಮವು ಕತ್ತರಿಸಿಹೋಗದಿರಲು ವೀರಭದ್ರಸ್ವಾಮಿಗೆ ತುಂಬಾ ಆಶ್ಚರ್ಯವಾಯಿತು. ಆಗ ಅವನು ಏನು ಮಾಡುವುದೆಂದು ಬಹಳ ಕಾಲ ಯೋಚನೆಮಾಡಿದನು. ಅನಂತರ ಆತನು ಯಜ್ಞದಲ್ಲಿ ಯಜ್ಞಪಶುಗಳನ್ನು ಬಲಿಕೊಡುವ ರೀತಿಯಲ್ಲಿಯೇ ದಕ್ಷನೆಂಬ ಯಜಮಾನಪಶುವಿನ ಕತ್ತನ್ನು ಹಿಸುಕಿಹಾಕಿದನು.

ಹೀಗೆ ದಕ್ಷನು ಸಾಯಿಸಲ್ಪಡಲು ವೀರಭದ್ರನು ಮಾಡಿದ ಆ ಕರ್ಮವನ್ನು ಭೂತ-ಪ್ರೇತ-ಪಿಶಾಚಾದಿಗಳು 'ಭಲೇ-ಭಲೇ' ಎಂದು ಹರ್ಷದಿಂದ ಕೊಂಡಾಡಿದುವು. ದಕ್ಷನ ಕಡೆಯವರು 'ಅಯ್ಯೋ! ಅಕಟಾ!'–ಎಂದು ಗೋಳಾಡಿದರು.*

ಹೀಗೆ ವೀರಭದ್ರನು ಕ್ರೋಧಾವೇಶದಿಂದ ದಕ್ಷನ ತಲೆಯನ್ನು ಕತ್ತರಿಸಿ ಅದನ್ನು ದಕ್ಷಿಣಾಗ್ನಿಯಲ್ಲಿ ಹೋಮಮಾಡಿ, ಯಜ್ಞಶಾಲೆಗೆ ಬೆಂಕಿಹಚ್ಚಿ ಧ್ವಂಸಗೊಳಿಸಿ, ಕೈಲಾಸಕ್ಕೆ ಹಿಂದಿರುಗಿದನು." (ಶ್ಲೋಕ 12-26)

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೫ನೆಯ ಅಧ್ಯಾಯವು ಮುಗಿಯಿತು.

---

* ಇಲ್ಲಿ ಹೇಳಿರುವ ಭೂತ-ಪ್ರೇತ-ಪಿಶಾಚಾದಿಗಳು ಶಿವನ ಗಣಕ್ಕೆ ಸೇರಿದವರು. ಇವರು ಜ್ಞಾನಿಗಳು. ಸಂಹಾರಕಾರ್ಯಗಳಲ್ಲಿ ರುದ್ರನಿಗೆ ಸಹಾಯಮಾಡುವವರು. ಇವರೆಲ್ಲರೂ ದೇವಯೋನಿಗೆ ಸೇರಿದವರು. ಪಾಪಕರ್ಮಗಳ ಫಲವಾಗಿ ಪಿಶಾಚಾದಿರೂಪವನ್ನು ತಾಳುವ ಜೀವಗಳೇ ಬೇರೆ. (ಶ್ಲೋಕ ೨೫)

* 'ಸತೀದೇವಿಯು ದೇಹತ್ಯಾಗಮಾಡಲು ತಾನು ಕಾರಣನಾದುದಕ್ಕಾಗಿ ಮತ್ತು ಶಿವನಲ್ಲಿ ಅಪರಾಧವನ್ನೆಸಗಿದ್ದಕ್ಕಾಗಿ ದಕ್ಷನು ಪಶ್ಚಾತ್ತಾಪಪಟ್ಟನು'–ಎಂಬ ಅರ್ಥದ ಎರಡು ಶ್ಲೋಕಗಳು ಒಂದು ಪಾಠದಲ್ಲಿವೆ.

ದೇವತೆಗಳು ಕೈಲಾಸಕ್ಕೆ ಹೋಗಿ ಶಿವನನ್ನು ಪ್ರಸನ್ನಗೊಳಿಸಿದುದು

ಮೈತ್ರೇಯಮಹರ್ಷಿಗಳು ವಿದುರನಿಗೆ ದಕ್ಷಯಜ್ಞದ ಕಥೆಯನ್ನು ಮುಂದುವರಿಸುತ್ತಾ ಹೇಳತೊಡಗಿದರು :

ಅಥ ದೇವಗಣಾಃ ಸರ್ವೇ ರುದ್ರಾನೀಕೈಃ ಪರಾಜಿತಾಃ ।
ಶೂಲಪಟ್ಟಿಶನಿಸ್ತ್ರಿಂಶಗದಾಪರಿಘಮುದ್ಗರೈಃ ॥೧॥
ಸಂಛಿನ್ನಭಿನ್ನಸರ್ವಾಙ್ಗಾಃ ಸರ್ತ್ವಿಕ್ಸಭ್ಯಾ ಭಯಾಕುಲಾಃ ।
ಸ್ವಯಮ್ಭುವೇ ನಮಸ್ಕೃತ್ಯ ಕಾರ್ತ್ಸ್ನ್ಯೇನೈತನ್ನ್ಯವೇದಯನ್ ॥೨॥

ಎಲೈ ಮಹಾತ್ಮನೇ! ಕೇಳು. ಈ ರೀತಿಯಲ್ಲಿ ರುದ್ರದೇವರ ಸೈನಿಕರಿಂದ ಪರಾಜಿತರಾಗಿ ತ್ರಿಶೂಲ, ಪಟ್ಟಿಶ, ಖಡ್ಗ, ಗದೆ, ಪರಿಘ, ಮುದ್ಗರ ಗಳೇ–ಮುಂತಾದ ಆಯುಧಗಳಿಂದ ಛಿನ್ನ-ಭಿನ್ನವಾದ ಸರ್ವಾಂಗಗಳುಳ್ಳವ ರಾಗಿ ಭಯಗ್ರಸ್ತರಾದ ದೇವತೆಗಳೂ, ಯಜ್ಞಕ್ಕೆ ಬಂದಿದ್ದ ಋತ್ವಿಜರೂ ಮತ್ತು ಸದಸ್ಯರೂ ಬ್ರಹ್ಮದೇವರ ಬಳಿಗೆ ಹೋಗಿ ನಮಸ್ಕಾರಮಾಡಿ ಅವರಿಗೆ ಎಲ್ಲಾ ಸಮಾಚಾರಗಳನ್ನೂ ನಿವೇದಿಸಿದರು.

ಯಜ್ಞದಲ್ಲಿ ಹೀಗೆ ಉತ್ಪಾತವಾಗುವುದೆಂದು ಸರ್ವಾಂತರ್ಯಾಮಿ ಯಾದ ನಾರಾಯಣನಿಗೂ ಮತ್ತು ಬ್ರಹ್ಮದೇವರಿಗೂ ಮೊದಲೇ ತಿಳಿದಿತ್ತು. ಆದ್ದರಿಂದಲೇ ಅವರು ಯಜ್ಞಕ್ಕೆ ಹೋಗಿರಲಿಲ್ಲ. ಈಗ ದೇವತೆಗಳ ಬಾಯಿಂದ ಎಲ್ಲ ವೃತ್ತಾಂತವನ್ನೂ ಕೇಳಿದ ಬ್ರಹ್ಮದೇವರು ಅವರುಗಳಿಗೆ ಹೀಗೆಂದರು :

.... ತೇಜೀಯಸಿ ಕೃತಾಗಸಿ ।
ಕ್ಷೇಮಾಯ ತತ್ರ ಸಾ ಭೂಯಾನ್ನ ಪ್ರಾಯೇಣ ಬುಭೂಷತಾಮ್ ॥
ಅಥಾಪಿ ಯೂಯಂ ಕೃತಕಿಲ್ಬಿಷಾ ಭವಂ
ಯೇ ಬರ್ಹಿಷೋ ಭಾಗಭಾಜಂ ಪರಾದುಃ ।

ದಕ್ಷಸ್ತು ದೃಷ್ಟ್ವಾ ದುಹಿತುಃ ಸ್ವನಿಮಿತ್ತಂ ವಿನಾಶನಮ್ ।
ಬಹ್ವತಪ್ಯತ ಘೋರೇಣ ಮಯಾಸಾಧುಕೃತಂ ಬತ ॥
ಧಿಙ್ಮಾಮವಿಜಿತಾತ್ಮಾನಂ ನಿರ್ಗುಣಂ ನಿರಪತ್ರಪಮ್ ।
ಯೋಽಹಂ ಸ್ವೀಕೃತ್ಯ ಮೃತಾಕಾಂ ವ್ಯರ್ಥಮೇನೋ ಮಹೀಯಸಿ ॥ (ಶ್ಲೋಕ ೩೦)

ಪ್ರಸಾದಯಧ್ವಂ ಪರಿಶುದ್ಧಚೇತಸಾ
ಕ್ಷಿಪ್ರಪ್ರಸಾದಂ ಪ್ರಗೃಹೀತಾಙ್ಘ್ರಿಪದ್ಮಮ್ ॥೫॥

"ಎಲೈ ದೇವತೆಗಳಿರಾ! ಮಹಾತೇಜಸ್ವಿಯೂ ಸಮರ್ಥನೂ ಆದ ಪುರುಷನು ಒಂದು ಪಕ್ಷ ಅಪರಾಧವನ್ನೇ ಮಾಡಿದ್ದರೂ ಸಾಮಾನ್ಯಜನರು ಅದರ ಬದಲಿಗೆ ಅವನಲ್ಲಿ ಅಪರಾಧವನ್ನು ಎಸಗಬಾರದು. ಹಾಗೆ ಅಪರಾಧ ಮಾಡಿದರೆ ಅವರಿಗೆ ಅದರಿಂದ ಒಳ್ಳೆಯದಾಗುವುದಿಲ್ಲ. ಹೀಗಿರುವಾಗ ನೀವು ಅಲ್ಪಬಲವುಳ್ಳವರಾಗಿದ್ದು, ಮಹಾಬಲಶಾಲಿಯೂ ಮತ್ತು ನಿರಪರಾಧಿಯೂ ಆಗಿರುವ ಮಹಾದೇವನಲ್ಲಿ ಅಪರಾಧವನ್ನೆಸಗಿದ್ದೀರಿ. ಆ ಭಗವಂತನಾದ ಶಂಕರನಿಗೆ ಯಜ್ಞದಲ್ಲಿ ಹವಿರ್ಭಾಗವನ್ನು ಸಲ್ಲಿಸದೇ, ಆತನಲ್ಲಿ ದೊಡ್ಡ ತಪ್ಪನ್ನು ಮಾಡಿದ್ದೀರಿ. ಆದರೆ ಆ ಭಗವಂತನು ಶೀಘ್ರವಾಗಿ ಪ್ರಸನ್ನನಾಗುವವನು. ಶುದ್ಧವಾದ ಮನಸ್ಸಿನಿಂದ ಆತನ ಪಾದಗಳನ್ನು ಹಿಡಿದುಕೊಂಡು ಆತನಲ್ಲಿ ಕ್ಷಮೆಯನ್ನು ಬೇಡಿ ಆತನನ್ನು ಪ್ರಸನ್ನಗೊಳಿಸಿರಿ.

ಆ ಮಹಾತ್ಮನ ಮನಸ್ಸು ದಕ್ಷನ ದುಷ್ಟವಚನರೂಪವಾದ ಬಾಣಗಳಿಂದ ಈಗಾಗಲೇ ಏಟುತಿಂದು ನೋವುಂಡಿತ್ತು. ಅದರ ಜೊತೆಗೆ ಪ್ರಿಯ ಪತ್ನಿಯಾದ ಸತಿಯ ಅಗಲಿಕೆಯ ನೋವೂ ಈಗ ಸೇರಿಕೊಂಡಿದೆ. ಆದುದರಿಂದ ಈ ಯಜ್ಞವು ಮತ್ತೆ ಪ್ರಾರಂಭಗೊಂಡು ಪೂರ್ಣವಾಗಬೇಕೆಂಬ ಬಯಕೆಯೇನಾದರೂ ನಿಮಗಿದ್ದರೆ–ಬೇಗನೇ ಹೋಗಿ ನೀವು ಮಾಡಿರುವ ಅಪರಾಧಗಳಿಗಾಗಿ ಸತಿಯ ಅಗಲಿಕೆಯಿಂದ ಕಳವಳಗೊಂಡಿರುವ ಆತನಲ್ಲಿ ಕ್ಷಮೆಯನ್ನು ಯಾಚಿಸಿರಿ. ಹಾಗಲ್ಲದೇ ಆತನೇನಾದರೂ ಕುಪಿತನಾಗಿಬಿಟ್ಟರೆ–ಲೋಕವಾಗಲೀ, ಲೋಕಪಾಲಕರಾಗಲೀ–ಯಾರೂ ಉಳಿಯುವಂತಿಲ್ಲ. ಆ ಮಹಾದೇವನಾದರೋ ಪರಮಸ್ವತಂತ್ರನು. ಆತನ ತತ್ತ್ವವನ್ನೂ ಶಕ್ತಿ-ಸಾಮರ್ಥ್ಯಗಳನ್ನೂ ಯಜ್ಞಪುರುಷನಾದ ಇಂದ್ರನಾಗಲೀ, ಯಾವ ಋಷಿ-ಮುನಿಗಳಾಗಲೀ, ದೇವತೆಗಳಾಗಲೀ, ಅಥವಾ ನಾನೇ ಆಗಲೀ–ಯಾರೂ ಅರಿಯೆವು. ಹೀಗಿರುವಾಗ ಇತರರ ಬಗೆಗೆ ಹೇಳುವುದೇನಿದೆ? ಇಂತಹ ಸ್ಥಿತಿಯಲ್ಲಿ ಆತನನ್ನು ಶಾಂತಗೊಳಿಸುವ ಉಪಾಯವನ್ನು ಯಾವನು ತಿಳಿದಿರುವನು?"

ಬ್ರಹ್ಮದೇವರು ದೇವತೆಗಳಿಗೆ ಹೀಗೆ ಹೇಳಿ ಅವರನ್ನೂ, ಪ್ರಜಾಪತಿಗಳನ್ನೂ ಮತ್ತು ಪಿತೃದೇವತೆಗಳನ್ನೂ ಜೊತೆಯಲ್ಲಿಯೇ ಕರೆದುಕೊಂಡು

ತನ್ನ ಲೋಕದಿಂದ ಭಗವಂತನಾದ ಶಂಕರನ ವಾಸಸ್ಥಾನವಾಗಿರುವ ಕೈಲಾಸಕ್ಕೆ ಹೋದರು. ಆ ದಿವ್ಯಧಾಮದ ಪವಿತ್ರತೆ–ರಮಣೀಯತೆಗಳನ್ನು ಹೇಗೆ ವರ್ಣಿಸುವುದು! ಔಷಧಿ-ವನಸ್ಪತಿಗಳು, ತಪಸ್ಸು, ಮಂತ್ರ, ಯೋಗಗಳ ಉಪಾಯಗಳಿಂದಲೂ ಮತ್ತು ಹುಟ್ಟಿನಿಂದಲೂ ಸಿದ್ಧಿಯನ್ನು ಪಡೆದಿರುವ ದೇವತೆಗಳು ನಿತ್ಯವೂ ವಾಸಮಾಡುವ ದಿವ್ಯಧಾಮವದು. ಕಿನ್ನರರು, ಗಂಧರ್ವರು ಮತ್ತು ಅಪ್ಸರೆಯರೇ ಮುಂತಾದವರೂ ಅಲ್ಲಿ ನೆರೆದಿರುತ್ತಾರೆ. ಅಲ್ಲಿ ನಾನಾಧಾತುಗಳಿಂದ ಚಿತ್ರ-ವಿಚಿತ್ರವಾಗಿ ವರ್ಣರಂಜಿತವಾಗಿರುವ ವಿವಿಧ ರತ್ನಮಯವಾಗಿರುವ ಉನ್ನತವಾದ ಶಿಖರಗಳು ಕಂಗೊಳಿಸುತ್ತಿವೆ. ಅವು ಬಗೆ-ಬಗೆಯ ಮರ-ಬಳ್ಳಿ-ಪೊದೆಗಳಿಂದ ಕೂಡಿ, ನಾನಾವನ್ಯಪಶುಗಳ ಹಿಂಡುಗಳಿಗೆ ಆಶ್ರಯವಾಗಿವೆ. ತಿಳಿನೀರಿನಿಂದ ಕೂಡಿ ಹರಿಯುತ್ತಿರುವ ನಾನಾನದಿಗಳಿಂದ ರಮಣೀಯವಾಗಿವೆ. ಹಾಗೂ ಅನೇಕ ಗುಣಗಳಿಂದಲೂ, ತಪ್ಪಲುಪ್ರದೇಶಗಳಿಂದಲೂ ಕೂಡಿ ಕಂಗೊಳಿಸುತ್ತಿವೆ. ಇಂತಹ ಶಿಖರ ಗಳಿಂದ ಮೆರೆಯುತ್ತಿರುವುದರಿಂದ ಆ ಪರ್ವತವು ತಮ್ಮ ಕಾಂತರೊಡನೆ ಸಂತೋಷದಿಂದ ವಿಹರಿಸುತ್ತಿರುವ ಸ್ತ್ರೀಯರಿಗೆ ಕ್ರೀಡಾಸ್ಥಳವಾಗಿ ಬೆಳಗುತ್ತಿದೆ. ಕುಣಿಯುತ್ತಿರುವ ನವಿಲುಗಳ ಕೇಕಾರವಗಳಿಂದಲೂ, ಮದವೇರಿದ ದುಂಬಿ ಗಳ ಝೇಂಕಾರನಾದಗಳಿಂದಲೂ, ಕೋಗಿಲೆಗಳ ಪಂಚಮಧ್ವನಿಯ ಕೂಜಿತ ಗಳಿಂದಲೂ ಮತ್ತು ಇತರ ಪಕ್ಷಿಗಳ ಕಲರವಗಳಿಂದಲೂ ಕಿವಿಗಳಿಗೆ ಹಬ್ಬ ವಾಗಿದೆ. ಅಲ್ಲಿ ಎತ್ತರವಾಗಿ ಬೆಳೆದಿರುವ ಕಲ್ಪವೃಕ್ಷಗಳು ಹಕ್ಕಿ ಮತ್ತು ಹಾರುವವರೆಂಬ ದ್ವಿಜಾತಿಗಳನ್ನು ತಮ್ಮ ಕೊಂಬೆಗಳಿಂದ ಕರೆಯುತ್ತಿರು ವಂತೆಯೂ, ಕಾಡಾನೆಗಳ ಓಡಾಟದಿಂದ ಅವರ ಬಳಿಗೆ ಆಹ್ವಾನಕ್ಕಾಗಿ ಹೋಗುತ್ತಿರುವಂತೆಯೂ, ನದಿಗಳ ಕಲ-ಕಲಧ್ವನಿಯಿಂದ ಅವರನ್ನು ಮಾತನಾಡಿಸಿ ಕರೆಯುತ್ತಿರುವಂತೆಯೂ–ಭಾವುಕರ ಸುಂದರವಾದ ಸಂಭಾವನೆಗೆ ವಿಷಯವಾಗಿ ಶೋಭಿಸುತ್ತಿವೆ. ಆ ರಜತಗಿರಿಯು ರಮ ಣೀಯವಾದ ಮಂದಾರ, ಪಾರಿಜಾತ, ಸರಳ, ತಮಾಲ, ಸಾಲ, ತಾಲ, ಕೋವಿದಾರ, ಅಸನ, ಅರ್ಜುನ, ಚೂತ, ಕದಂಬ, ನೀಪ, ನಾಗ, ಪುನ್ನಾಗ, ಚಂಪಕ, ಪಾಟಲ, ಅಶೋಕ, ಬಕುಳ, ಕುಂದ, ಕುರವಕ, ಸ್ವರ್ಣವರ್ಣದ ಶತಪತ್ರ, ಏಲಾ, ಮಾಲತೀ, ರೇಣುಕ, ಜಾಜಿ, ಕುಬ್ಜಕ,

ಮಲ್ಲಿಕಾ, ಮಾಧವೀ, ಪನಸ, ಉದುಂಬರ, ಅಶ್ವತ್ಥ , ಪ್ಲಕ್ಷ, ನ್ಯಗ್ರೋಧ, ಹಿಂಗು, ಭೂರ್ಜ, ಪೂಗ, ರಾಜಪೂಗ, ಜಂಬೂ, ಖರ್ಜೂರ, ಆಮ್ರಾತಕ, ಆಮ್ರ, ಪ್ರಿಯಾಳು, ಮಧುಕ, ಇಂಗುದ, ವೇಣು, ಕೀಚಕಗಳೇ–ಮುಂತಾದ ವೃಕ್ಷ-ಔಷಧಿ-ವನಸ್ಪತಿಗಳಿಂದ ನೋಡುವವರ ಕಣ್ಮನಗಳನ್ನು ಸೆಳೆಯುತ್ತಿದೆ. ಸರೋವರಗಳಲ್ಲಿ ಅರಳಿ ಆಡುತ್ತಿರುವ ಕುಮುದ, ಕನ್ನೈದಿಲೆ, ಕಲ್ಹಾರ, ಶತಪತ್ರ, ಸಹಸ್ರಪತ್ರಗಳೇ–ಮುಂತಾದ ಕಮಲಪುಷ್ಪಕದಂಬಗಳಲ್ಲಿ ಕುಳಿತು ಹಂಸ-ಸಾರಸ-ಕಾರಂಡವಾದಿ ಜಲಪಕ್ಷಿಗಳು ಕಿವಿಗಿಂಪಾಗಿ ಕಲ-ಕಲನಿನಾದ ಗಳನ್ನು ಮಾಡುತ್ತಿವೆ. ಅಲ್ಲಲ್ಲಿ ಹುಲ್ಲೆಗಳೂ, ಕಪಿಗಳೂ, ಕರಡಿಗಳೂ, ಕಾಡು ಹಂದಿಗಳೂ, ಮುಳ್ಳುಹಂದಿಗಳೂ, ಕೇಸರಿಗಳೂ, ಗವಯಗಳೂ, ಶರಭ ಗಳೂ, ವ್ಯಾಘ್ರಗಳೂ, ರುರುಮೃಗಗಳೂ, ಕೃಷ್ಣಮೃಗಗಳೂ, ಕಾಡುಕೋಣ ಗಳೂ, ಗೋಕರ್ಣಗಳೂ, ಊರ್ಣಾಮೃಗಗಳೂ, ಒಕ್ಕಾಲಿನ ಮೃಗಗಳೂ, ಕುದುರೇಮುಖದ ಮೃಗಗಳೂ, ತೋಳಗಳೂ, ಕಸ್ತೂರೀಮೃಗಗಳೂ ಯಥೇಚ್ಛವಾಗಿ ಸಂಚರಿಸುತ್ತಿವೆ. ಜಾತಿವೈರಿಗಳಾದ ಪ್ರಾಣಿಗಳೂ, ಸಹಜ ವಾದ ಗೆಳೆತನದಿಂದ ಕೂಡಿ ಸಂತೋಷದಿಂದ ಆಟವಾಡುತ್ತಿವೆ. ಸರೋವರ ಗಳ ತೀರಗಳು ಬಾಳೆಯ ಸಾಲುಗಳಿಂದ ಶೋಭಿಸುತ್ತಿವೆ. ನಾಲ್ಕೂ ಕಡೆಗಳ ಲ್ಲಿಯೂ ನಂದಾ ಎಂಬ ನದಿಯು ಹರಿಯುತ್ತಿದ್ದು, ಸತೀದೇವಿಯ ಸ್ನಾನ ಗಳಿಂದ ಮತ್ತೂ ಪವಿತ್ರವಾಗಿ, ಸುಗಂಧಿತವಾದ ತಿಳಿಜಲದಿಂದ ಕಂಗೊಳಿಸು ತ್ತಿದೆ. ಭಗವಂತನಾದ ಭೂತನಾಥನ ನಿವಾಸಸ್ಥಾನವಾದ ಆ ಕೈಲಾಸಪರ್ವತದ ಇಂತಹ ಸೊಬಗನ್ನು ಕಂಡು ದೇವತೆಗಳೂ ಸಹ ಅತ್ಯಂತ ಆಶ್ಚರ್ಯ ಭರಿತರಾದರು. (ಶ್ಲೋಕ 6-22)

ಅಲ್ಲಿ ಅವರು ಅಲಕಾ ಎಂಬ ರಮಣೀಯವಾದ ನಗರಿಯನ್ನೂ ಮತ್ತು ಎಲ್ಲೆಡೆಗಳಲ್ಲಿಯೂ ಸುಗಂಧವನ್ನು ಹರಡುವ ಸೌಗಂಧಿಕವೆಂಬ ಕಮಲಗಳು ಅರಳಿರುವ ಸೌಗಂಧಿಕವೆಂಬ ಉದ್ಯಾನವನವನ್ನೂ ನೋಡಿದರು. ಆ ನಗರಿಯ ಹೊರಭಾಗದಲ್ಲಿ ತೀರ್ಥಪಾದನಾದ ಶ್ರೀಹರಿಯ ಚರಣಧೂಳಿಯ ಸಂಯೋಗದಿಂದ ಅತ್ಯಂತಪವಿತ್ರವಾಗಿರುವ ನಂದಾ ಮತ್ತು ಅಲಕನಂದಾ– ಎಂಬ ಎರಡು ನದಿಗಳು ಹರಿಯುತ್ತಿವೆ. ರತಿವಿಲಾಸದಿಂದ ಆಯಾಸಗೊಂಡ ದೇವತಾಸ್ತ್ರೀಯರು ತಮ್ಮ ನಿವಾಸಸ್ಥಾನಗಳಿಂದ ಬಂದು ಆ ನದಿಗಳಲ್ಲಿ

ಸ್ನಾನಮಾಡುತ್ತಾ ತಮ್ಮ ಪ್ರಿಯತಮರ ಮೇಲೆ ನೀರನ್ನೆರಚುವರು. ಸ್ನಾನಮಾಡುವಾಗ ಅವರ ಸ್ತನಗಳ ಮೇಲಿನ ಕೇಸರಿಯ ಲೇಪವನ್ನು ತೊಳೆದುಹಾಕುವುದರಿಂದ ಆ ನದಿಗಳ ನೀರೂ ಹಳದಿಯ ಬಣ್ಣವನ್ನು ಪಡೆಯುತ್ತವೆ. ಆ ಕೇಸರಿಯ ಲೇಪವು ಬೆರೆತಿರುವ ಜಲವನ್ನು ಗಂಧದ ಆಸೆಯಿಂದ ಸಲಗಗಳು ಬಾಯಾರಿಕೆಯಿಲ್ಲದಿದ್ದರೂ ಕುಡಿಯುತ್ತವೆ. ಹಾಗೆಯೇ ಹೆಣ್ಣಾನೆಗಳಿಗೂ ಕುಡಿಸುತ್ತವೆ. ಅಲಕಾನಗರಿಯ ಮೇಲೆ ಚಿನ್ನ, ಬೆಳ್ಳಿ ಮತ್ತು ಬಹುಮೂಲ್ಯಗಳಾದ ಮಣಿಗಳಿಂದ ಖಚಿತವಾದ ನೂರಾರು ವಿಮಾನಗಳು ವಿರಾಜಿಸುತ್ತಿವೆ. ಅವುಗಳಲ್ಲಿ ಅನೇಕ ಯಕ್ಷಪತ್ನಿಯರು ವಾಸ ಮಾಡುತ್ತಿದ್ದಾರೆ. ಆ ವಿಮಾನಗಳಿಂದ ವಿಶಾಲವಾದ ಆ ನಗರಿಯು ಮಿಂಚು-ಮೋಡಗಳಿಂದ ಆವರಿಸಲ್ಪಟ್ಟಿರುವ ಆಕಾಶದಂತೆ ಮೆರೆಯುತ್ತಿದೆ. ಯಕ್ಷರಾಜ ನಾದ ಕುಬೇರನ ರಾಜಧಾನಿಯಾದ ಅಲಕಾನಗರಿಯನ್ನು ಹಿಂದೆ ಬಿಟ್ಟು ದೇವಗಣಗಳು ಸೌಗಂಧಿಕವನಕ್ಕೆ ಬಂದುವು. ಆ ವನವು ಬಣ್ಣ-ಬಣ್ಣಗಳ ಹಣ್ಣು, ಹೂವು ಮತ್ತು ಪತ್ರೆಗಳಿಂದ ಕೂಡಿದ ಅನೇಕಕಲ್ಪವೃಕ್ಷಗಳಿಂದ ಕಮನೀಯವಾಗಿ ಕಂಗೊಳಿಸುತ್ತಿತ್ತು. ಅದು ಕೋಗಿಲೆಯೇ ಮುಂತಾದ ಹಕ್ಕಿಗಳ ಕಲರವಗಳಿಂದಲೂ, ದುಂಬಿಗಳ ಝೇಂಕಾರಗಳಿಂದಲೂ ಕೇಳು ವವರ ಕಿವಿಗಳಿಗಿಂಪಾಗಿ, ರಾಜಹಂಸಗಳಿಗೆ ಪರಮಪ್ರಿಯವಾದ ಕಮಲ ಕುಸುಮಗಳಿಂದ ಕಂಗೊಳಿಸುವ ಅನೇಕಸರೋವರಗಳಿಂದ ಶೋಭಾಯ ಮಾನವಾಗಿತ್ತು. ಆ ವನವು–ಕಾಡಾನೆಗಳ ದೇಹಗಳು ಉಜ್ಜಿದ್ದರಿಂದ–ವಿಶೇಷ ವಾಗಿ ಗಂಧವನ್ನು ಸೂಸುವ ಹರಿಚಂದನವೃಕ್ಷಗಳನ್ನು ಹಾಯ್ದು ಬೀಸುವ ಸುವಾಸಿತವಾದ ವಾಯುವಿನಿಂದ ಯಕ್ಷಪತ್ನಿಯರ ಮನಸ್ಸಿನಲ್ಲಿ ವಿಶೇಷವಾಗಿ ಮದವನ್ನೇರಿಸುತ್ತಿತ್ತು. ಅಲ್ಲದೇ ವೈಡೂರ್ಯಮಣಿಗಳಿಂದ ರಚಿತವಾದ ಸೋಪಾನಗಳಿಂದ ಕೂಡಿ ಅರಳಿದ ಕಮಲಪುಷ್ಪಗಳ ಸಮೂಹವು ಅರಳಿದ್ದ ಅನೇಕಪುಷ್ಕರಿಣಿಗಳೂ ಅಲ್ಲಿ ಪ್ರಕಾಶಿಸುತ್ತಿದ್ದುವು. ಕಿಂಪುರುಷರು ಆಯಾಸ ಪರಿಹಾರಕ್ಕಾಗಿ ನೀರಾಟ ಮತ್ತು ಮನೋವಿನೋದಗಳಿಗೋಸ್ಕರ ಅಲ್ಲಿಗೆ ಬಂದಿದ್ದರು. ಇಂತಹ ವನಶೋಭೆಯನ್ನು ದಿಟ್ಟಿಸುತ್ತಾ ಸ್ವಲ್ಪ ಮುಂದೆ ಬಂದಾಗ ದೇವತಾಗಣಗಳಿಗೆ ಹತ್ತಿರದಲ್ಲಿಯೇ ಒಂದು ವಿಶಿಷ್ಟವಾದ ವಟವೃಕ್ಷವು ಗೋಚರಿಸಿತು. ಆ ಅದ್ಭುತವಾದ ವಟವೃಕ್ಷವು ನೂರು

ಯೋಜನಗಳಷ್ಟು ಎತ್ತರವಾಗಿಯೂ, ಕೊಂಬೆಗಳಿಂದ ಎಪ್ಪತ್ತೈದು ಯೋಜನ ಗಳಷ್ಟು ವಿಸ್ತಾರವಾಗಿಯೂ ಇದ್ದಿತು. ಅದರ ನಾಲ್ಕು ಕಡೆಗಳಲ್ಲಿಯೂ ನಿರಂತರವಾಗಿ ನೆರಳು ಬೀಳುತ್ತಿದ್ದುದರಿಂದ ಸಂತಾಪದ ಲವಲೇಶವೂ ಇಲ್ಲದ ತಂಪಿನ ನೆಲೆ ಅದಾಗಿತ್ತು. ಆ ವೃಕ್ಷದಲ್ಲಿ ಒಂದು ಗೂಡೂ ಇರಲಿಲ್ಲ. (ಶ್ಲೋಕ 23-32)

ತಸ್ಮಿನ್ಮಹಾಯೋಗಮಯೇ ಮುಮುಕ್ಷುಶರಣೇ ಸುರಾಃ ।
ದದೃಶುಃ ಶಿವಮಾಸೀನಂ ತ್ಯಕ್ತಾಮರ್ಷಮಿವಾನ್ತಕಮ್ ॥೩೩॥

ಸನಕಾದ್ಯೈರ್ಮಹಾಸಿದ್ಧೈಃ ಶಾನ್ತೈಃ ಸಂಶಾನ್ತವಿಗ್ರಹಮ್ ।
ಉಪಾಸ್ಯಮಾನಂ ಸಖ್ಯಾ ಚ ಭರ್ತ್ರಾ ಗುಹ್ಯಕರಕ್ಷಸಾಮ್ ॥೩೪॥

ಅಂತಹ ಮಹಾಯೋಗಮಯವೂ–ಮೋಕ್ಷವನ್ನು ಬಯಸುವವರಿಗೆ ಆಶ್ರಯವೂ ಆಗಿದ್ದ ಆ ವೃಕ್ಷದ ಕೆಳಗೆ ಕುಳಿತು ಬೆಳಗುತ್ತಿದ್ದ ಭಗವಂತನಾದ ಪರಶಿವನನ್ನು ದೇವತೆಗಳು ಕಣ್ಣಾರೆ ಕಂಡರು. ಸ್ವಾಮಿಯು ಕೋಪವನ್ನು ತೊರೆದ ಕಾಲದೇವನಂತೆ ಪ್ರಶಾಂತವೂ ಗಂಭೀರವೂ ಆದ ದಿವ್ಯ ಮೂರ್ತಿಯಾಗಿ ವಿರಾಜಿಸುತ್ತಿದ್ದನು. ಸನಕಾದಿಗಳೇ ಮುಂತಾದ ಪ್ರಶಾಂತ ರಾದ ಜ್ಞಾನಸಿದ್ಧರೂ ಮತ್ತು ನೆಚ್ಚಿನ ಗೆಳೆಯನಾದ, ಯಕ್ಷಪುರುಷರ ಪ್ರಭು ವಾದ ಕುಬೇರದೇವನೂ ಆ ಮಹಾದೇವನ ಸೇವೆಮಾಡುತ್ತಿದ್ದರು.

ವಿದ್ಯಾತಪೋಯೋಗಪಥಮಾಸ್ಥಿತಂ ತಮಧೀಶ್ವರಮ್ ।
ಚರನ್ತಂ ವಿಶ್ವಸುಹೃದಂ ವಾತ್ಸಲ್ಯಾಲ್ಲೋಕಮಙ್ಗಲಮ್ ॥೩೫॥

ಜಗದೀಶ್ವರನಾದ ಆ ಶಿವನು ಇಡೀ ವಿಶ್ವಕ್ಕೇ ಮಿತ್ರನಾಗಿ ವಾತ್ಸಲ್ಯ ದಿಂದ ಎಲ್ಲರಿಗೂ ಕಲ್ಯಾಣವನ್ನುಂಟುಮಾಡುವವನು. ಲೋಕಹಿತಕ್ಕಾಗಿಯೇ ಆತನು ಉಪಾಸನೆ, ತಪಸ್ಸು ಮತ್ತು ಸಮಾಧಿಗಳೇ–ಮುಂತಾದ ಯೋಗ ಸಾಧನೆಗಳನ್ನು ಆಚರಣೆಮಾಡುತ್ತಿದ್ದನು.

ಲಿಙ್ಗಂ ಚ ತಾಪಸಾಭೀಷ್ಟಂ ಭಸ್ಮದಣ್ಡಜಟಾಜಿನಮ್ ।
ಅಙ್ಗೇನ ಸಂಧ್ಯಾಭ್ರರುಚಾ ಚನ್ದ್ರಲೇಖಾಂ ಚ ಬಿಭ್ರತಮ್ ॥೩೬॥

ಭಗವಂತನು ಸಂಜೆಯ ಮೋಡದಂತೆ ಬೆಳಗುತ್ತಿದ್ದ ತನ್ನ ದಿವ್ಯದೇಹದಲ್ಲಿ–ತಪಸ್ವಿಗಳಿಗೆ ಇಷ್ಟಚಿಹ್ನೆಗಳಾದ ಭಸ್ಮ, ಯೋಗದಂಡ ಮತ್ತು ಮೃಗಚರ್ಮಗಳನ್ನೂ, ತಲೆಯಲ್ಲಿ ಚಂದ್ರಕಲೆಯನ್ನೂ ಧರಿಸಿದ್ದನು.

ಉಪವಿಷ್ಟಂ ದರ್ಭಮಯ್ಯಾಂ ಬೃಸ್ಯಾಂ ಬ್ರಹ್ಮ ಸನಾತನಮ್ ।
ನಾರದಾಯ ಪ್ರವೋಚನ್ತಂ ಪೃಚ್ಛತೇ ಶೃಣ್ವತಾಂ ಸತಾಮ್ ॥೩೭॥

ದರ್ಭೆಯ ಆಸನದಲ್ಲಿ ವಿರಾಜಿಸುತ್ತಿದ್ದ ಪ್ರಭುವಾದ ಆ ದಕ್ಷಿಣಾಮೂರ್ತಿಯು, ಶ್ರೋತೃಗಳ ನಡುವೆ ಪ್ರಶ್ನೆಮಾಡುತ್ತಿದ್ದ ನಾರದಮಹರ್ಷಿ ಗಳಿಗೆ ಸನಾತನವಾದ ಪರಬ್ರಹ್ಮವನ್ನು ಕುರಿತು ಉಪದೇಶಮಾಡುತ್ತಿದ್ದನು.

ಕೃತ್ವೋರೌ ದಕ್ಷಿಣೇ ಸವ್ಯಂ ಪಾದಪದ್ಮಂ ಚ ಜಾನುನಿ ।
ಬಾಹುಂ ಪ್ರಕೋಷ್ಠೇಽಕ್ಷಮಾಲಾಮಾಸೀನಂ ತರ್ಕಮುದ್ರಯಾ ॥೩೮॥

ಎಡಗಾಲನ್ನು ಬಲಮೊಣಕಾಲಿನ ಮೇಲೂ–ಎಡಗೈಯನ್ನು ಎಡ ಮಂಡಿಯ ಮೇಲೂ ಇರಿಸಿಕೊಂಡು, ಮಣಿಕಟ್ಟಿನಲ್ಲಿ ರುದ್ರಾಕ್ಷಿಮಾಲೆಯನ್ನು ಧರಿಸಿ, ತರ್ಕ (ಜ್ಞಾನ) ಮುದ್ರೆಯಿಂದ ಕೂಡಿದ ಪರಮಾನಂದಮೂರ್ತಿಯಾಗಿ ವಿರಾಜಿಸುತ್ತಿದ್ದನು.*

ತಂ ಬ್ರಹ್ಮನಿರ್ವಾಣಸಮಾಧಿಮಾಶ್ರಿತಂ
ವ್ಯುಪಾಶ್ರಿತಂ ಗಿರಿಶಂ ಯೋಗಕಕ್ಷಾಮ್ ।
ಸಲೋಕಪಾಲಾ ಮುನಯೋ ಮನೂನಾ-
ಮಾದ್ಯಂ ಮನುಂ ಪ್ರಾಞ್ಜಲಯಃ ಪ್ರಣೇಮುಃ ॥೩೯॥

ಆತನು ಯೋಗಪಟ್ಟವನ್ನು ಆಶ್ರಯಿಸಿ ಏಕಾಗ್ರವಾದ ಚಿತ್ತದಿಂದ

---

* ಭಗವಂತನು ಕುಳಿತಿದ್ದ ಆ ಆಸನಕ್ಕೆ 'ವೀರಾಸನ' ಎಂದು ಹೆಸರು. ಅದರ ಲಕ್ಷಣವು ಹೀಗೆ ಹೇಳಲ್ಪಟ್ಟಿದೆ :

"ಏಕಂ ಪಾದಮಥೈಕಸ್ಮಿನ್ ವಿನ್ಯಸೇದೂರುಸಂಸ್ಥಿತಮ್ । ಇತರಸ್ಮಿಂತಸ್ತಥಾ ಬಾಹುಂ ವೀರಾಸನಮಿದಂ ಸ್ಮೃತಮ್ ॥"

ಆತನು ಬೆಳಗಿಸುತ್ತಿದ್ದ ಯೋಗಮುದ್ರೆಗೆ ತರ್ಕಮುದ್ರಾ ಅಥವಾ ಜ್ಞಾನಮುದ್ರಾ ಎಂದು ಹೆಸರು. ಅದರ ಲಕ್ಷಣವು ಹೀಗಿದೆ :

ತರ್ಜನ್ಯಙ್ಗುಷ್ಠಯೋರಗ್ರೇ ಮಿಥಸ್ಸಂಯೋಜ್ಯ ಚಾಂಗುಳೀಃ ।
ಪ್ರಸಾರ್ಯ ಬೋಧನಂ ಪ್ರಾಹುಃ ಜ್ಞಾನ (ತರ್ಕ) ಮುದ್ರೇತಿ ಮಾನ್ತ್ರಿಕಾಃ ॥

ತರ್ಜನಿಯನ್ನು ಅಂಗುಷ್ಠದೊಡನೆ ಸೇರಿಸಿ ಇತರ ಬೆರಳುಗಳನ್ನು ಒಟ್ಟಿಗೇ ಸೇರಿಸಿ ಚಾಚಿ, ಜ್ಞಾನವನ್ನು ಬೋಧಿಸುವ ಮುದ್ರೆಗೆ ಜ್ಞಾನಮುದ್ರೆ, ಚಿನ್ಮುದ್ರೆ, ತರ್ಕಮುದ್ರೆ–ಎಂದು ಹೆಸರು. (ಶ್ಲೋಕ ೩೮)

ಬ್ರಹ್ಮಸಮಾಧಿಯ ಸುಖವನ್ನು ಅನುಭವಿಸುತ್ತಿದ್ದನು. ಲೋಕಪಾಲ ಸಹಿತರಾದ ಸಮಸ್ತಮುನಿಗಳೂ ಮನನಶೀಲರಲ್ಲಿ ಸರ್ವಶ್ರೇಷ್ಠನಾದ ಆ ಯೋಗೀಶ್ವರನಾದ ಪರಶಿವಮೂರ್ತಿಗೆ ಕೈಜೋಡಿಸಿ ಪ್ರಣಾಮಮಾಡಿದರು.

ಸಮಸ್ತದೇವಾಧಿಪತಿಗಳಿಂದಲೂ–ದೈತ್ಯಾಧಿಪತಿಗಳಿಂದಲೂ ವಂದಿಸಲ್ಪಟ್ಟ ಪಾದಾರವಿಂದಗಳುಳ್ಳ ಆ ಮಹಾದೇವನು ಬ್ರಹ್ಮದೇವರನ್ನು ಕಂಡೊಡನೆಯೇ ಮೇಲೆದ್ದು–ವಾಮನಾವತಾರಿಯಾದ ಮಹಾವಿಷ್ಣುವು ಕಶ್ಯಪರಿಗೆ ನಮಸ್ಕರಿಸಿದಂತೆ–ತಲೆತಗ್ಗಿಸಿ ನಮಸ್ಕಾರಮಾಡಿದನು. ಹಾಗೆಯೇ ಶಿವನ ಸುತ್ತಲೂ ಕುಳಿತಿದ್ದ ಮಹರ್ಷಿಸಹಿತರಾದ ಸಿದ್ಧಗಣಗಳೂ ಬ್ರಹ್ಮದೇವರಿಗೆ ಎದ್ದು ಪ್ರಣಾಮಮಾಡಿದರು. ಹಾಗೆ ಎಲ್ಲರೂ ನಮಸ್ಕಾರಮಾಡಿದ ಬಳಿಕ ಬ್ರಹ್ಮದೇವರು ತನಗೆ ನಮಸ್ಕಾರಮಾಡಿದ್ದ ಭಗವಂತನಾದ ಚಂದ್ರಶೇಖರನಿಗೆ ನಗುತ್ತಾ ಹೀಗೆ ಹೇಳಿದರು : (ಶ್ಲೋಕ 40-41)

ಜಾನೇ ತ್ವಾಮೀಶಂ ವಿಶ್ವಸ್ಯ ಜಗತೋ ಯೋನಿಬೀಜಯೋಃ ।
ಶಕ್ತೇಃ ಶಿವಸ್ಯ ಚ ಪರಂ ಯತ್ತದ್ಬ್ರಹ್ಮ ನಿರನ್ತರಮ್ ॥೪೨॥

"ಎಲೈ ದೇವನೇ! ನೀನು ಇಡೀ ಜಗತ್ತಿಗೇ ಕ್ರಮವಾಗಿ ಕ್ಷೇತ್ರ ಮತ್ತು ಬೀಜಗಳಾಗಿರುವ ಪ್ರಕೃತಿ ಮತ್ತು ಪುರುಷ–ಇವರಿಬ್ಬರಿಗೂ ಪರನಾಗಿ, ಏಕರಸನಾಗಿರುವ ಶಾಶ್ವತಪರಬ್ರಹ್ಮನೇ ಆಗಿದ್ದೀಯೆ–ಎಂಬುದನ್ನು ನಾನು ಬಲ್ಲೆನು.

ತ್ವಮೇವ ಭಗವನ್ನೇತಚ್ಛಿವಶಕ್ತ್ಯೋಃ ಸರೂಪಯೋಃ ।
ವಿಶ್ವಂ ಸೃಜಸಿ ಪಾಸ್ಯತ್ಸಿ ಕ್ರೀಡನ್ನೂರ್ಣಪಟೋ ಯಥಾ ॥೪೩॥

ಎಲೈ ಭಗವಂತನೇ! ನೀನು ನಿನ್ನ ಅಂಶವೇ ಆಗಿರುವ (ನಿನಗೆ ಶರೀರದಂತೆ ಇರುವ) ಪ್ರಕೃತಿ ಮತ್ತು ಪುರುಷರ ಮೂಲಕ ಕ್ರೀಡಿಸುತ್ತಾ ಜೇಡರ ಹುಳುವಿನಂತೆ ಬೇರಾವುದರ ಅಪೇಕ್ಷೆಯೂ ಇಲ್ಲದೇ ಈ ಜಗತ್ತೆಂಬ ಬಲೆಯನ್ನು ರಚಿಸಿ-ರಕ್ಷಿಸಿ-ಉಪಸಂಹಾರಮಾಡಿಕೊಳ್ಳುತ್ತಿರುವೆ.*

---

* ಇಲ್ಲಿ ಬ್ರಹ್ಮದೇವರು ರುದ್ರದೇವರನ್ನು ಜಗತ್ಕಾರಣವಾದ ಪರಬ್ರಹ್ಮ ಮತ್ತು ಧರ್ಮಸೇತುಸಂರಕ್ಷಕ ಎಂದು ಸ್ತುತಿಸಿದ್ದಾರೆ. ರುದ್ರದೇವರು ಶ್ರೀಭಗವಂತನ ಆವೇಶಾವತಾರವೇ ಆಗಿರುವುದರಿಂದ ಹೀಗೆ ಸ್ತೋತ್ರಮಾಡಿದೆ. ಬ್ರಹ್ಮ-ರುದ್ರಾದಿ

ತ್ವಮೇವ ಧರ್ಮಾರ್ಥದುಘಾಭಿಪತ್ತಯೇ
ದಕ್ಷೇಣ ಸೂತ್ರೇಣ ಸಸರ್ಜಿಥಾಧ್ವರಮ್ ।
ತ್ವಯೈವ ಲೋಕೇಽವಸಿತಾಶ್ಚ ಸೇತವೋ
ಯಾನ್ಬ್ರಾಹ್ಮಣಾಃ ಶ್ರದ್ದಧತೇ ಧೃತವ್ರತಾಃ ॥೪೪॥

ಹಾಗೆಯೇ ಯಜ್ಞರಕ್ಷಕನೂ ಮತ್ತು ಧರ್ಮರಕ್ಷಕನೂ ನೀನೇ ಆಗಿರುವೆ. ಧರ್ಮವನ್ನೂ-ಅರ್ಥವನ್ನೂ ದೊರಕಿಸಿಕೊಡುವ ವೇದಗಳ ರಕ್ಷಣೆಗೋಸ್ಕರವಾಗಿ ದಕ್ಷನನ್ನು ನಿಮಿತ್ತವನ್ನಾಗಿ ಮಾಡಿಕೊಂಡು ಯಜ್ಞವನ್ನು ಪ್ರಕಟಪಡಿಸಿದವನೂ ನೀನೇ. ನಿಯಮನಿಷ್ಠರಾದ ಬ್ರಾಹ್ಮಣರು ಶ್ರದ್ಧೆಯಿಂದ ಪಾಲನೆಮಾಡುವ ವರ್ಣಾಶ್ರಮಗಳ ಮರ್ಯಾದೆಯನ್ನು ನೆಲೆಗೊಳಿಸಿದವನೂ ನೀನೇ ಆಗಿದ್ದೀಯೆ.

ತ್ವಂ ಕರ್ಮಣಾಂ ಮಙ್ಗಲಂ ಮಙ್ಗಲಾನಾಂ
ಕರ್ತುಃ ಸ್ಮ ಲೋಕಂ ತನುಷೇ ಸ್ವಃ ಪರಂ ವಾ ।
ಅಮಙ್ಗಲಾನಾಂ ಚ ತಮಿಸ್ರಮುಲ್ಬಣಂ
ವಿಪರ್ಯಯಃ ಕೇನ ತದೇವ ಕಸ್ಯಚಿತ್ ॥೪೫॥

ನೀನು ಮಂಗಳವಾದ ಕರ್ಮಗಳನ್ನು ಆಚರಿಸುವವರಿಗೆ ಸ್ವರ್ಗಾದಿ ಪುಣ್ಯಲೋಕಗಳನ್ನೂ ಮತ್ತು ಆ ಮಂಗಳವಾದ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೇ ಮಾಡುವವರಿಗೆ ಮೋಕ್ಷವನ್ನೂ ಕೊಡುವೆ. ಅಮಂಗಳವಾದ

ಶಬ್ದಗಳಿಗೆಲ್ಲಾ ಅಂತರ್ಯಾಮಿಯಾಗಿರುವ ಪರಮಾತ್ಮನಲ್ಲೇ ತಾತ್ಪರ್ಯ. (ಋಷಿವಾಮದೇವನು ತಾನೇ ಮನು ಎಂದು ಹೇಳುವ ಉಪನಿಷದ್ವಾಕ್ಯದ ನ್ಯಾಯದಂತೆ) ಶ್ರೀರುದ್ರದೇವರೂ ಭಗವದಾತ್ಮಕರಾಗಿರುವುದರಿಂದ ಅವರನ್ನು ಹೇಳುವ ಶಬ್ದಗಳಿಗೆಲ್ಲಾ ಭಗವಂತನಲ್ಲೇ ತಾತ್ಪರ್ಯ. "ರುದ್ರಸ್ಯ ಭಗವದಾತ್ಮಕತ್ವೇನ ತಾತ್ಪರ್ಯ-ಸ್ತಮವಗಮ್ಯ ಬ್ರಹ್ಮಸಾಮಾನಾಧಿಕರಣ್ಯೇನ ನಿರ್ದೇಶಃ" (ವೀರರಾಘವೀಯ)

ರುದ್ರಾಂತರ್ಯಾಮಿಯಾದ ಪರಮಾತ್ಮನು ಪ್ರಸನ್ನನಾದರೆ ರುದ್ರದೇವರೂ ಪ್ರಸನ್ನರಾಗುವರು ಮತ್ತು ಯಜ್ಞವು ಮತ್ತೆ ಸಂಪನ್ನವಾಗುವುದು-ಎಂದು ಎಣಿಸಿ ಬ್ರಹ್ಮದೇವರು ಇಲ್ಲಿ ರುದ್ರಾಂತರ್ಯಾಮಿಯಾದ ನರಸಿಂಹದೇವರನ್ನು ಸ್ತುತಿಸುತ್ತಿದ್ದಾರೆ.

"ತಸ್ಮಿನ್ ತುಷ್ಟೇ ಶಿವೋಽಪಿ ತುಷ್ಟಃ ಸ್ಯಾತ್... ಶಿವಸ್ಯ । ಅಸಮ್ಭಾವ್ಯೈರ್ಗುಣೈಃ ಶಿವಾನ್ತರ್ಯಾಮಿಣಂ ನರಸಿಹ್ಮಂ ಸ್ತೌತಿ ॥" (ವಿಜಯಧ್ವಜೀಯ)

(ಭಗವಂತನನ್ನು ಜೇಡರಹುಳುವಿಗೆ ಹೋಲಿಸಿರುವುದರಿಂದ) ಆತನು ಜಗತ್ತಿಗೆ

ಪಾಪಕರ್ಮಗಳನ್ನು ಮಾಡುವವರನ್ನು ಘೋರನರಕದಲ್ಲಿ ತಳ್ಳುತ್ತೀಯೆ. ಹೀಗೆ ಪಕ್ಷಪಾತವಿಲ್ಲದೆ ಕರ್ಮಾಧ್ಯಕ್ಷನಾಗಿರುವ ನೀನು ಏತಕ್ಕೆ ಒಬ್ಬನ ವಿಷಯದಲ್ಲಿ ಮಾತ್ರ ಯಜ್ಞವೆಂಬ ಸತ್ಕರ್ಮದ ಆಚರಣೆಗೆ ವಿಪರೀತವಾದ ದುಷ್ಫಲವನ್ನು ಕೊಟ್ಟೆ?

ನ ವೈ ಸತಾಂ ತ್ವಚ್ಚರಣಾರ್ಪಿತಾತ್ಮನಾಂ
ಭೂತೇಷು ಸರ್ವೇಷ್ವಭಿಪಶ್ಯತಾಂ ತವ ।
ಭೂತಾನಿ ಚಾತ್ಮನ್ಯಪೃಥಗ್ದಿದೃಕ್ಷತಾಂ
ಪ್ರಾಯೇಣ ರೋಷೋಽಭಿಭವೇದ್ಯಥಾ ಪಶುಮ್* ॥೪೬॥

ಯಾವ ಮಹಾತ್ಮರು ನಿನ್ನ ಪಾದಾರವಿಂದಗಳಲ್ಲಿ ತಮ್ಮನ್ನು ಸಮರ್ಪಣೆಮಾಡಿಕೊಂಡು ಸಮಸ್ತಭೂತಗಳಲ್ಲಿಯೂ ನಿನ್ನನ್ನೇ ಕಾಣುತ್ತಾರೆಯೋ ಮತ್ತು ಸಮಸ್ತಜೀವಗಳನ್ನೂ ಪರಮಾತ್ಮನಾದ ನಿನ್ನಲ್ಲಿ ಅಭೇದದಿಂದ ನೋಡಲು ಬಯಸುತ್ತಾರೆಯೋ–ಅಂತಹವರು ಸಾಮಾನ್ಯವಾಗಿ ಪಶುಗಳಂತೆ ಕೋಪಕ್ಕೆ ವಶವಾಗುವುದಿಲ್ಲ.

ಪೃಥಗ್ಧಿಯಃ ಕರ್ಮದೃಶೋ ದುರಾಶಯಾಃ
ಪರೋದಯೇನಾರ್ಪಿತಹೃದ್ರುಜೋಽನಿಶಮ್ ।
ಪರಾನ್ದುರುಕ್ತೈರ್ವಿತುದನ್ತ್ಯರುನ್ತುದಾ-
ಸ್ತಾನ್ಮಾ ವಧೀದ್ದೈವವಧಾನ್ಭವದ್ವಿಧಃ ॥೪೭॥

ಸದ್ಬುದ್ಧಿಯುಳ್ಳ ಮಹಾಶಯರ ವಿಷಯವು ಹೀಗಾದರೆ ದುಷ್ಟಬುದ್ಧಿಯುಳ್ಳವರ ವಿಷಯವು ಇದಕ್ಕೆ ವಿರುದ್ಧವಾಗಿರುತ್ತದೆ. ಅವರು ಭೇದ

ಉಪಾದಾನಕಾರಣ ಮತ್ತು ನಿಮಿತ್ತಕಾರಣ ಎರಡೂ ಆಗಿದ್ದಾನೆ. ಅನ್ಯಾಪೇಕ್ಷೆಯಿಲ್ಲದೇ ಜಗತ್ತನ್ನು ಸೃಷ್ಟಿಸುತ್ತಾನೆ–ಎಂಬುದು ಅದ್ವೈತಿಗಳ ಮತ್ತು ವಿಶಿಷ್ಟಾದ್ವೈತಿಗಳ ಆಶಯ. ದ್ವೈತಮತದಂತೆ ಶ್ರೀಭಗವಂತನು ಜಗತ್ತಿಗೆ ನಿಮಿತ್ತಕಾರಣನು; ಉಪಾದಾನಕಾರಣವು ಪ್ರಕೃತಿ. (ಶ್ಲೋಕ ೪೨-೪೩)

* ಹೋಲಿಕೆ : "ಯೋ ಮಾಂ ಪಶ್ಯತಿ ಸರ್ವತ್ರಸರ್ವಂ ಚ ಮಯಿ ಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥"
(ಶ್ರೀಗೀತಾ) (ಶ್ಲೋಕ ೪೬)

ದೃಷ್ಟಿಯನ್ನು ಹೊಂದಿ ಕರ್ಮಗಳಲ್ಲಿಯೇ ಆಸಕ್ತರಾಗಿರುತ್ತಾರೆ. ಇತರರ ಉನ್ನತಿಯನ್ನು ಕಂಡರೆ ಸಹಿಸದೇ ಹಗಲೂ-ರಾತ್ರಿ ಅಸೂಯೆಯಿಂದ ಕೊರಗುತ್ತಾರೆ ಮತ್ತು ಮರ್ಮಭೇದಕವಾದ ದುಷ್ಟವಚನಗಳಿಂದ ಇತರರ ಮನಸ್ಸನ್ನು ನೋಯಿಸುತ್ತಾರೆ. ಆದರೆ ನಿನ್ನಂತಹ ಮಹಾಪುರುಷರು ಅಂತಹ ದುರಾತ್ಮರನ್ನೂ ಸಂಹರಿಸಬಾರದು. ಏಕೆಂದರೆ : ಆ ಬಡಪಾಯಿಗಳು ದೈವದ ದಂಡನೆಗೇ ಒಳಪಟ್ಟವರೂ ಒಳಪಡುವವರೂ ಆಗಿದ್ದಾರಲ್ಲವೇ!

ಯಸ್ಮಿನ್ಯದಾ ಪುಷ್ಕರನಾಭಮಾಯಯಾ
ದುರನ್ತಯಾ ಸ್ಪೃಷ್ಟಧಿಯಃ ಪೃಥಗ್ದೃಶಃ ।
ಕುರ್ವನ್ತಿ ತತ್ರ ಹ್ಯನುಕಮ್ಪಯಾ ಕೃಪಾಂ
ನ ಸಾಧವೋ ದೈವಬಲಾತ್ಕೃತೇ ಕ್ರಮಮ್ ॥೪೮॥

ದೇವನೇ! ಭಗವಂತನಾದ ಪದ್ಮನಾಭನ ಮಾಯೆಗೆ ಮರುಳಾಗಿ ಯಾವನಾದರೂ ಎಲ್ಲಾದರೂ ಭೇದಬುದ್ಧಿಯನ್ನು ತೋರಿದರೂ ಸಾಧು-ಸತ್ಪುರುಷರು ಅವನಲ್ಲಿ ಕರುಣೆಯನ್ನೇ ತೋರಿಸುತ್ತಾರೆ. ಏಕೆಂದರೆ : ಇತರರ ದುಃಖವನ್ನು ಕಂಡು ಅನುಕಂಪೆಯನ್ನು ತೋರುವುದು ಅವರ ಸ್ವಭಾವವೇ ಆಗಿರುತ್ತದೆ. ದೈವಶದಿಂದ ಏನಾದರೂ ಆದರೆ ಅವರು 'ಇದೆಲ್ಲಾ ಕರ್ಮಗಳ ಫಲ'–ಎಂದು ಆತನಲ್ಲಿ ಕನಿಕರಿಸುತ್ತಾರೆಯೇ ಹೊರತು ಕೋಪಿಸಿ ದಂಡನೆಯನ್ನು ಪ್ರಯೋಗಿಸುವುದಿಲ್ಲ.

ಭವಾಂಸ್ತು ಪುಂಸಃ ಪರಮಸ್ಯ ಮಾಯಯಾ
ದುರನ್ತಯಾಸ್ಪೃಷ್ಟಮತಿಃ ಸಮಸ್ತದೃಕ್ ।
ತಯಾ ಹತಾತ್ಮಸ್ವನುಕರ್ಮಚೇತಃ
ಸ್ವನುಗ್ರಹಂ ಕರ್ತುಮಿಹಾರ್ಹಸಿ ಪ್ರಭೋ ॥೪೯॥

ಪ್ರಭುವೇ! ನೀನಾದರೋ ಸರ್ವಜ್ಞನು. ದುಸ್ತರವಾದ ಭಗವಂತನ ಮಾಯೆಯ ಸ್ಪರ್ಶವೂ ಇಲ್ಲದ ಬುದ್ಧಿಯುಳ್ಳವನು. ಆದುದರಿಂದ ಯಾರ ಚಿತ್ತವು ಆ ಮಾಯೆಗೆ ವಶವಾಗಿ ಕರ್ಮಮಾರ್ಗದಲ್ಲಿಯೇ ಆಸಕ್ತವಾಗಿರುತ್ತದೆಯೋ–ಅಂತಹವರು ಒಂದು ಪಕ್ಷ ಅಪರಾಧವನ್ನೇ ಎಸಗಿದರೂ ನೀನು ಅವರ ಮೇಲೆ ಕೃಪೆಯನ್ನೇ ತೋರಬೇಕು.

ಕುರ್ವಧ್ವರಸ್ಯೋದ್ಧರಣಂ ಹತಸ್ಯ ಭೋ-
ಸ್ತ್ವಯಾಸಮಾಪ್ತಸ್ಯ ಮನೋ ಪ್ರಜಾಪತೇಃ ।
ನ ಯತ್ರ ಭಾಗಂ ತವ ಭಾಗನೋ ದದುಃ
ಕುಯಜ್ವಿನೋ ಯೇನ ಮಖೋ ನಿನೀಯತೇ ॥೫೦॥

ಎಲೈ ದೇವನೇ! ನೀನು ಎಲ್ಲಕ್ಕೂ ಮೂಲವಾದವನು. ಎಲ್ಲ ಯಜ್ಞಗಳನ್ನೂ ಪೂರ್ಣಗೊಳಿಸುವವನೂ ನೀನೇ ಆಗಿರುವೆ. ಯಜ್ಞದಲ್ಲಿ ಭಾಗವನ್ನು ಪಡೆಯಲು ನಿನಗೆ ಪೂರ್ಣವಾದ ಅಧಿಕಾರವುಂಟು. ಆದರೂ ತಿಳಿವಳಿಕೆಯಿಲ್ಲದ ಈ ದಕ್ಷಯಜ್ಞದ ಯಾಜಕರು ನಿನಗೆ ಯಜ್ಞದಲ್ಲಿ ಹವಿರ್ಭಾಗವನ್ನು ಕೊಡಲಿಲ್ಲ. ಆದ್ದರಿಂದಲೇ ನೀನು ಈ ಯಜ್ಞವನ್ನು ಧ್ವಂಸಗೊಳಿಸಿದೆ. ಆದರೆ ಈಗ ನೀನು ಅಪೂರ್ಣವಾಗಿರುವ ಈ ಯಜ್ಞವನ್ನು ಪೂರ್ಣಗೊಳಿಸುವ ಕೃಪೆಯನ್ನು ತೋರಬೇಕು.

ಜೀವತಾದ್ಯಜಮಾನೋಽಯಂ ಪ್ರಪದ್ಯೇತಾಕ್ಷಿಣೀ ಭಗಃ ।
ಭೃಗೋಃ ಶ್ಮಶ್ರೂಣಿ ರೋಹನ್ತು ಪೂಷ್ಣೋ ದನ್ತಾಶ್ಚ ಪೂರ್ವವತ್ ॥

ಪ್ರಭೋ! ನಿನ್ನ ಅನುಗ್ರಹದಿಂದ ಈ ಯಜ್ಞದ ಯಜಮಾನನಾದ ದಕ್ಷನು ಬದುಕಿ ಮೇಲೇಳಲಿ. ಭಗದೇವತೆಗೆ ಮತ್ತೆ ಕಣ್ಣುಗಳು ಬರಲಿ. ಬೃಗುಮಹರ್ಷಿಗಳಿಗೆ ಪುನಃ ಗಡ್ಡ-ಮೀಸೆಗಳು ಬರಲಿ ಮತ್ತು ಪೂಷದೇವತೆಗೆ ಹಿಂದಿನಂತೆಯೇ ಹಲ್ಲುಗಳು ಮೊಳೆಯಲಿ.

ದೇವಾನಾಂ ಭಗ್ನಗಾತ್ರಾಣಾಮೃತ್ವಿಜಾಂ ಚಾಯುಧಾಶ್ಮಭಿಃ ।
ಭವತಾನುಗೃಹೀತಾನಾಮಾಶು ಮನ್ಯೋಽಸ್ತ್ವನಾತುರಮ್ ॥೫೨॥

ಎಲೈ ರುದ್ರದೇವನೇ! ಅಸ್ತ್ರ-ಶಸ್ತ್ರಗಳ ಮತ್ತು ಕಲ್ಲು-ಕವಣೆಗಳ ಮಳೆಯಿಂದ ಯಾವ ದೇವತೆಗಳ ಮತ್ತು ಋತ್ವಿಜರ ಅಂಗ-ಉಪಾಂಗಗಳು ಗಾಯಗೊಂಡಿವೆಯೋ—ಅವೆಲ್ಲವೂ ಮತ್ತೆ ನಿನ್ನ ಅನುಗ್ರಹದಿಂದ ಸರಿಹೋಗಲಿ.

ಏಷ ತೇ ರುದ್ರ ಭಾಗೋಽಸ್ತು ಯದುಚ್ಛಿಷ್ಟೋಽಧ್ವರಸ್ಯ ವೈ ।
ಯಜ್ಞಸ್ತೇ ರುದ್ರ ಭಾಗೇನ ಕಲ್ಪತಾಮದ್ಯ ಯಜ್ಞಹನ್ ॥೫೩॥

ಯಜ್ಞವು ಸಂಪೂರ್ಣವಾದ ಬಳಿಕ ಉಳಿಯುವ ಹವಿಸ್ಸೆಲ್ಲವೂ ನಿನ್ನ ಭಾಗವಾಗಿರಲಿ. (ಹಾಗೆ ಉಳಿಯುವ 'ಸ್ವಿಷ್ಟಿಕೃತ್' ಎಂಬುದಕ್ಕೆ ನೀನು ಭಾಗಿಯಾಗು). ಎಲೈ ಯಜ್ಞಧ್ವಂಸಿಯೇ! ನಿನ್ನ ಈ ಯಜ್ಞಭಾಗದಿಂದಲೇ ಈಗ ಈ ಯಜ್ಞವು ಪೂರ್ಣವಾಗಲಿ."

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೬ನೆಯ ಅಧ್ಯಾಯವು ಮುಗಿಯಿತು.

ಚತುರ್ಥಸ್ಕಂಧ ೭ನೆಯ ಅಧ್ಯಾಯ

ದಕ್ಷಯಜ್ಞದ ಪರಿಸಮಾಪ್ತಿ

ಶ್ರೀಮೈತ್ರೇಯರು ಹೇಳುತ್ತಾರೆ :

ಇತ್ಯಜೇನಾನುನೀತೇನ ಭವೇನ ಪರಿತುಷ್ಯತಾ ।
ಅಭ್ಯಧಾಯಿ ಮಹಾಬಾಹೋ ಪ್ರಹಸ್ಯ ಶ್ರೂಯತಾಮಿತಿ ॥೧॥

ಎಲೈ ಮಹಾಬಾಹುವೇ! ಕೇಳು. ಬ್ರಹ್ಮದೇವನಿಂದ ಹೀಗೆ ಸಂತೈಸಲ್ಪಟ್ಟ ಶ್ರೀಭಗವಂತನಾದ ಶಂಕರನು ಪ್ರಸನ್ನತೆಯಿಂದ ನಗುತ್ತಾ ಅವರಿಗೆ ಹೇಳಿದನು:

ನಾಘಂ ಪ್ರಜೇಶ ಬಾಲಾನಾಂ ವರ್ಣಯೇ ನಾನುಚಿನ್ತಯೇ ।
ದೇವಮಾಯಾಭಿಭೂತಾನಾಂ ದಣ್ಡಸ್ತತ್ರ ಧೃತೋ ಮಯಾ ॥೨॥

"ಪ್ರಜಾಪತಿದೇವರೇ! ಭಗವಂತನ ಮಾಯೆಯಿಂದ ಮೋಹಗೊಂಡ ಹಸುಳೆಗಳು. ತಿಳಿವಳಿಕೆಯಿಲ್ಲದೇ ಮಾಡಿರುವ ಅಪರಾಧವನ್ನು ನಾನು ವರ್ಣಿಸುವುದಿಲ್ಲ. ಅದರ ಬಗೆಗೆ ಚಿಂತಿಸುವುದೂ ಇಲ್ಲ. ಆದರೆ ತಪ್ಪು ಮಾಡಿದ್ದಕ್ಕಾಗಿ ಅವರಿಗೆ ದಂಡನೆಯನ್ನು ವಿಧಿಸಿದ್ದೇನೆ, ಅಷ್ಟೇ.

ಪ್ರಜಾಪತೇರ್ದಗ್ಧಶೀರ್ಷ್ಣೋ ಭವತ್ವಜಮುಖಂ ಶಿರಃ ।
ಮಿತ್ರಸ್ಯ ಚಕ್ಷುಷೇಕ್ಷೇತ ಭಾಗಂ ಸ್ವಂ ಬರ್ಹಿಷೋ ಭಗಃ ॥೩॥

ದಕ್ಷಪ್ರಜಾಪತಿಯ ತಲೆಯು ಸುಟ್ಟುಹೋಗಿದೆ. ಅದರ ಜಾಗದಲ್ಲಿ ಈಗ ಆತನಿಗೆ ಹೋತದ ತಲೆಯು ಉಂಟಾಗಲಿ. ಕಣ್ಣುಗಳನ್ನು ಕಳೆದು

ಕೊಂಡಿರುವ ಭಗದೇವತೆಯು ಮಿತ್ರದೇವತೆಯ ಕಣ್ಣುಗಳಿಂದಲೇ ತನ್ನ ಯಜ್ಞಭಾಗವನ್ನು ನೋಡುವಂತಾಗಲಿ.

ಪೂಷಾ ತು ಯಜಮಾನಸ್ಯ ದದ್ಭಿರ್ಜಕ್ಷತು ಪಿಷ್ಟಭುಕ್ ।
ದೇವಾಃ ಪ್ರಕೃತಸರ್ವಾಙ್ಗಾ ಯೇ ಮ ಉಚ್ಛೇಷಣಂ ದದುಃ ॥೪॥

ಹಿಟ್ಟಿನ ರೂಪವಾದ ಆಹಾರವನ್ನು ಸ್ವೀಕರಿಸುತ್ತಿದ್ದ ಪೂಷದೇವನು ಇನ್ನು ಮುಂದೆ ಯಜ್ಞಮಾಡುವ ಯಜಮಾನನ ಹಲ್ಲುಗಳಿಂದ ಹವಿರ್ಭಾಗವನ್ನು ತಿನ್ನುವಂತಾಗಲಿ. ಅಂಗವೈಕಲ್ಯವನ್ನು ಹೊಂದಿರುವ ಇತರ ದೇವತೆಗಳ ಅಂಗೋಪಾಂಗಗಳೂ ಆರೋಗ್ಯವನ್ನು ಪಡೆಯಲಿ. ಏಕೆಂದರೆ : ಅವರು ಯಜ್ಞದ ಉಳಿಕೆಯಾದ 'ಸ್ವಿಷ್ಟಕೃತ್' ಎಂಬ ಹವಿರ್ಭಾಗವು ನನಗೆ ಸೇರ ತಕ್ಕದ್ದೆಂದು ಅಂಗೀಕರಿಸಿದ್ದಾರೆ.

ಬಾಹುಭ್ಯಾಮಶ್ವಿನೋಃ ಪೂಷ್ಣೋ ಹಸ್ತಾಭ್ಯಾಂ ಕೃತಬಾಹವಃ ।
ಭವನ್ತ್ವಧ್ವರ್ಯವಶ್ಚಾನ್ಯೇ ಬಸ್ತಶ್ಮಶ್ರುರ್ಭೃಗುರ್ಭವೇತ್ ॥೫॥

ಅಧ್ವರ್ಯುಗಳೇ ಮುಂತಾದ ಋತ್ವಿಜರಲ್ಲಿ ಭುಜಗಳು ಮುರಿದು ಹೋಗಿರುವವರು ಅಶ್ವಿನೀದೇವತೆಗಳ ಭುಜಗಳಿಂದಲೂ–ಹಸ್ತಗಳನ್ನು ಕಳೆದುಕೊಂಡಿರುವವರು ಪೂಷದೇವನ ಹಸ್ತಗಳಿಂದಲೂ ಇನ್ನು ಮುಂದೆ ತಮ್ಮ ಕಾರ್ಯಗಳನ್ನು ಮಾಡಲಿ. ಭೃಗುಮಹರ್ಷಿಗಳಿಗೆ ಟಗರಿನ ಗಡ್ಡ-ಮೀಸೆಗಳು ಉಂಟಾಗಲಿ."

ಶ್ರೀಮೈತ್ರೇಯರು ಹೇಳುತ್ತಾರೆ :

ವತ್ಸ, ವಿದುರನೇ! ಅನಂತರ ಸದಾಶಿವನು ಹೇಳಿದ ಅನುಗ್ರಹವಾಣಿ ಯನ್ನು ಕೇಳಿ ಎಲ್ಲರೂ ಪ್ರಸನ್ನಾತ್ಮರಾಗಿ ಸಾಧು-ಸಾಧು ಎಂದು ಹೇಳಿ ಕೊಂಡು ಜಯಕಾರಮಾಡಿದರು. ಆಮೇಲೆ ಇಂದ್ರನೇ ಮುಂತಾದ ದೇವತೆಗಳೂ ಮತ್ತು ಋಷಿಗಳೂ ಮಹಾದೇವನನ್ನು ಯಜ್ಞಕ್ಕೆ ದಯ ಮಾಡಿಸಬೇಕೆಂದು ಪ್ರಾರ್ಥಿಸಿ, ಆತನನ್ನೂ ಮತ್ತು ಬ್ರಹ್ಮದೇವರನ್ನೂ ಕರೆದು ಕೊಂಡು ಪುನಃ ಯಜ್ಞಶಾಲೆಗೆ ಹೋದರು. ಭಗವಂತನಾದ ಶಂಕರನು ಹೇಳಿ ದಂತೆಯೇ ಅಲ್ಲಿ ಎಲ್ಲವನ್ನೂ ಮಾಡಿದರು. ದಕ್ಷನ ದೇಹಕ್ಕೆ ಯಜ್ಞಪಶುವಿನ ತಲೆಯನ್ನು ಜೋಡಿಸಿದರು. ಹಾಗೆ ತಲೆಯು ಸೇರಿಸಲ್ಪಟ್ಟು ರುದ್ರದೇವರ

ದೃಷ್ಟಿಯು ಬಿದ್ದೊಡನೆಯೇ ದಕ್ಷನು ನಿದ್ರೆಯಿಂದ ಎಚ್ಚೆತ್ತವನಂತೆ, ಬದುಕನ್ನು ಪಡೆದು ಮೇಲೆದ್ದು ತನ್ನ ಮುಂದೆ ನಿಂತಿದ್ದ ಭಗವಂತನಾದ ಶಿವನನ್ನು ನೋಡಿದನು. ಶಂಕರದ್ರೋಹದಿಂದ ಕಲುಷಿತವಾಗಿದ್ದ ಆತನ ಹೃದಯವು ಶಿವನ ದರ್ಶನದ ಮಹಿಮೆಯಿಂದ ಶರತ್ಕಾಲದ ಸರೋವರದಂತೆ ಸ್ವಚ್ಛವಾಗಿ ಬಿಟ್ಟಿತು. ಆಗ ಆತನು ಶಿವನನ್ನು ಸ್ತುತಿಸಬೇಕೆಂದು ಬಯಸಿದರೂ ಮೃತಿ ಹೊಂದಿದ್ದ ಪುತ್ರಿಯ ಸ್ಮರಣೆಯು ಬಂದು ಪ್ರೀತಿಯಿಂದಲೂ, ಚಿಂತಾ-ದುಃಖಗಳಿಂದಲೂ ಆತನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಬಾಯಿಂದ ಶಬ್ದವೇ ಹೊರಡಲಿಲ್ಲ. ಪ್ರೀತಿಯಿಂದ ವ್ಯಾಕುಲಗೊಂಡ ಮನಸ್ಸುಳ್ಳ ಮೇಧಾವಿಯಾದ ಆ ಪ್ರಜಾಪತಿಯು ಶೋಗವೇಗವನ್ನು ಕಷ್ಟದಿಂದ ತಡೆದು ಕೊಂಡು ವಿಶುದ್ಧಭಾವದಿಂದ ಶಿವನನ್ನು ಹೀಗೆ ಸ್ತೋತ್ರಮಾಡಿದನು :

(ಶ್ಲೋಕ 6-12)

ಭೂಯಾನನುಗ್ರಹ ಅಹೋ ಭವತಾ ಕೃತೋ ಮೇ
ದಣ್ಡಸ್ತ್ವಯಾ ಮಯಿ ಭೃತೋ ಯದಪಿ ಪ್ರಲಬ್ಧಃ ।
ನ ಬ್ರಹ್ಮಬನ್ಧುಷು ಚ ವಾಂ ಭಗವನ್ನವಜ್ಞಾ
ತುಭ್ಯಂ ಹರೇಶ್ಚ ಕುತ ಏವ ಧೃತವ್ರತೇಷು ॥೧೩॥

"ಓ ಭಗವಂತನೇ! ನಾನು ನಿನ್ನಲ್ಲಿ ಮಹಾಪರಾಧವನ್ನೇ ಮಾಡಿರುವೆನು. ಆದರೆ ನೀನು ಅದರ ಬದಲಿಗೆ ನನ್ನನ್ನು ಶಿಕ್ಷೆಯ ಮೂಲಕ ಶುದ್ಧಿಗೊಳಿಸಿ ಮಹಾನುಗ್ರಹವನ್ನೇ ತೋರಿಸಿದೆಯಲ್ಲಾ! ಎಂತಹ ಕೃಪೆ ನಿನ್ನದು! ಪೂಜ್ಯನಾದ ನೀನೂ ಮತ್ತು ಶ್ರೀಹರಿಯೂ—ಆಚಾರಹೀನರಾಗಿ ಯಾರು ಹೆಸರಿಗೆ ಮಾತ್ರ ಬ್ರಾಹ್ಮಣರಾಗಿದ್ದಾರೆಯೋ—ಅಂತಹವರನ್ನೂ ಉಪೇಕ್ಷೆ ಮಾಡುವುದಿಲ್ಲ. ಇನ್ನು ಯಜ್ಞವೇ ಮುಂತಾದ ವ್ರತಗಳಲ್ಲಿ ನಿಷ್ಠರಾಗಿರುವ ನಮ್ಮನ್ನು ಮರೆಯುವಿರಾ?

ವಿದ್ಯಾತಪೋವ್ರತಧರಾನ್ಮುಖತಃ ಸ್ಮ ವಿಪ್ರಾ-
ನ್ಬ್ರಹ್ಮಾತ್ಮತತ್ತ್ವಮವಿತುಂ ಪ್ರಥಮಂ ತ್ವಮಸ್ರಾಕ್ ।
ತದ್ಬ್ರಾಹ್ಮಣಾನ್ಪರಮ ಸರ್ವವಿಪತ್ಸು ಪಾಸಿ
ಪಾಲಃ ಪಶೂನಿವ ವಿಭೋ ಪ್ರಗೃಹೀತದಣ್ಡಃ ॥೧೪॥

ಪ್ರಭುವೇ! ನೀನು ಬ್ರಹ್ಮರೂಪನಾಗಿ ಎಲ್ಲಕ್ಕೂ ಮೊದಲು ಆತ್ಮ

ತತ್ತ್ವವನ್ನು ಸಂರಕ್ಷಿಸುವುದಕ್ಕಾಗಿ ನಿನ್ನ ಬಾಯಿಂದ ವಿದ್ಯೆ, ತಪಸ್ಸು, ವ್ರತಾದಿಗಳನ್ನು ಧರಿಸಿರುವ ಬ್ರಾಹ್ಮಣರನ್ನು ಸೃಷ್ಟಿಮಾಡಿದೆ. ಅನಂತರ ಗೋವಳನು ದೊಣ್ಣೆಯನ್ನು ಹಿಡಿದುಕೊಂಡು ಗೋವುಗಳನ್ನು ಕಷ್ಟಕ್ಕೆ ಈಡುಮಾಡದೇ ಕಾಯುವಂತೆ–ಆ ಬ್ರಾಹ್ಮಣರನ್ನು ನೀನೇ ಸಕಲವಿಪತ್ತುಗಳ ದೆಸೆಯಿಂದಲೂ ಸಂರಕ್ಷಿಸುತ್ತೀಯೆ.

ಯೋಽಸೌ ಮಯಾವಿದಿತತತ್ತ್ವದೃಶಾ ಸಭಾಯಾಂ
ಕ್ಷಿಪ್ತೋ ದುರುಕ್ತಿವಿಶಿಖೈರಗಣಯ್ಯ ತನ್ಮಾಮ್ ।
ಅರ್ವಾಕ್ಪತನ್ತಮರ್ಹತ್ತಮನಿನ್ದಯಾಪಾ-
ದ್ದೃಷ್ಟ್ಯಾರ್ದ್ರಯಾ ಸ ಭಗವಾನ್ಸ್ವಕೃತೇನ ತುಷ್ಯೇತ್ ॥

ನಿನ್ನ ತತ್ತ್ವವನ್ನರಿಯದೇ ತುಂಬಿದ ಸಭೆಯಲ್ಲಿ ನಾನು ನಿನ್ನ ಮೇಲೆ ಮಾತಿನ ಬಾಣಗಳನ್ನೇ ಪ್ರಯೋಗಿಸಿದೆನು. ಆದರೆ ನೀನು ನನ್ನ ಅಪರಾಧ ವನ್ನು ಮನಸ್ಸಿಗೆ ಹಚ್ಚಿಕೊಳ್ಳದೇ ಅನುಗ್ರಹವನ್ನು ತೋರಿದೆ. ನಿನ್ನಂತಹ ಪೂಜ್ಯತಮರಾದ ಮಹಾತ್ಮರಲ್ಲಿ ಅಪರಾಧಮಾಡಿದ್ದಕ್ಕಾಗಿ ನಾನು ನರಕವೇ ಮುಂತಾದ ನೀಚಗತಿಗಳಲ್ಲಿ ಬೀಳಬೇಕಾಗಿತ್ತು. ಆದರೆ ನೀನು ಕರುಣಾ ದೃಷ್ಟಿಯಿಂದ ನನ್ನನ್ನು ಉದ್ಧಾರಮಾಡಿದೆಯಲ್ಲವೇ! ಈಗಲೂ ನಿನ್ನನ್ನು ಸಂತೋಷಪಡಿಸಲು ಯೋಗ್ಯವಾದ ಸದ್ಗುಣವಾವುದೂ ನನ್ನಲ್ಲಿ ಇಲ್ಲ. ಆದರೂ ನೀನು ನನ್ನ ಔದಾರ್ಯದ ವರ್ತನೆಯಿಂದಲೇ ನನ್ನಲ್ಲಿ ಪ್ರಸನ್ನನಾಗ ಬೇಕು, ಪ್ರಭುವೇ!”

ಶ್ರೀಮೈತ್ರೇಯರು ಹೇಳುತ್ತಾರೆ :

ಹೀಗೆ ಆಶುತೋಷನಲ್ಲಿ ತಾನು ಮಾಡಿದ ಅಪರಾಧಕ್ಕಾಗಿ ಕ್ಷಮೆಯನ್ನು ಪ್ರಾರ್ಥಿಸಿ, ದಕ್ಷಪ್ರಜಾಪತಿಯು ಬ್ರಹ್ಮದೇವರ ಆದೇಶದಂತೆ ಉಪಾ ಧ್ಯಾಯರೂ, ಋತ್ವಿಜರೂ ಮುಂತಾದವರ ಸಹಾಯದಿಂದ ಮತ್ತೆ ಯಜ್ಞ ಕಾರ್ಯವನ್ನು ಪ್ರಾರಂಭಿಸಿದನು. ಆಗ ಬ್ರಾಹ್ಮಣರು ಯಜ್ಞವನ್ನು ನೆರವೇರಿಸುವ ಉದ್ದೇಶದಿಂದ, ರುದ್ರಪರಿವಾರವಾದ ಭೂತ-ಪ್ರೇತಾದಿಗಳ ಸಂಬಂಧದಿಂದ ಉಂಟಾಗಿದ್ದ ದೋಷದ ಶಾಂತಿಗಾಗಿ ಮೂರು ಪಾತ್ರೆಗಳಲ್ಲಿ

ಭಗವಂತನಾದ ಮಹಾವಿಷ್ಣುವಿಗೋಸ್ಕರ ಸಿದ್ಧಗೊಳಿಸಲ್ಪಟ್ಟ ಪುರೋಡಾಶ ವೆಂಬ ಚರುವನ್ನು ಅಗ್ನಿಯಲ್ಲಿ ಹೋಮಮಾಡಿದರು. ಆ ಹವಿಸ್ಸನ್ನು ಕೈಯಲ್ಲಿ ಹಿಡಿದು ನಿಂತುಕೊಂಡ ಅಧ್ವರ್ಯವಿನೊಡನೆ ಯಜಮಾನನಾದ ದಕ್ಷನು ಪರಿಶುದ್ಧವಾದ ಚಿತ್ತದಿಂದ ಶ್ರೀಹರಿಯನ್ನು ಧ್ಯಾನಮಾಡಿದೊಡ ನೆಯೇ–ಶ್ರೀಭಗವಂತನು ಅಲ್ಲಿ ಆವಿರ್ಭವಿಸಿಬಿಟ್ಟನು. ಬೃಹತ್ ಮತ್ತು ರಥಂತರ–ಎಂಬ ಸಾಮಗಳನ್ನೇ ರೆಕ್ಕೆಗಳನ್ನಾಗಿ ಹೊಂದಿರುವ ವೇದಮೂರ್ತಿ ಯಾದ ಗರುಡದೇವರಿಂದ ಹತ್ತಿರಕ್ಕೆ ಒಯ್ಯಲ್ಪಟ್ಟ ಆ ಶ್ರೀಭಗವಂತನು ಹತ್ತು ದಿಕ್ಕುಗಳನ್ನೂ ತನ್ನ ತೇಜೋರಾಶಿಯಿಂದ ಬೆಳಗಿಸುತ್ತಾ–ತನ್ನ ಅಂಗಗಳ ಕಾಂತಿಯಿಂದ ಎಲ್ಲ ದೇವತೆಗಳ ತೇಜಸ್ಸನ್ನೂ ಕಸಿದುಕೊಂಡನು. ಆತನ ಮುಂದೆ ಉಳಿದವರೆಲ್ಲರ ಕಾಂತಿಯೂ ಕುಂದಿಹೋಯಿತು. (ಶ್ಲೋಕ 16-19)

ಶ್ಯಾಮೋ ಹಿರಣ್ಯರಶನೋಽರ್ಕಕಿರೀಟಜುಷ್ಟೋ
ನೀಲಾಲಕಭ್ರಮರಮಣ್ಡಿತಕುಣ್ಡಲಾಸ್ಯಃ ।
ಕಮ್ಬ್ವಬ್ಜಚಕ್ರಶರಚಾಪಗದಾಸಿಚರ್ಮ–
ವ್ಯಗ್ರೈರ್ಹಿರಣ್ಮಯಭುಜೈರಿವ ಕರ್ಣಿಕಾರಃ ॥೨೦॥

ಆ ದೇವದೇವನ ಸೌಂದರ್ಯ-ಲಾವಣ್ಯಗಳನ್ನು ಕೇಳಬೇಕೇ! ನೀಲ ಮೇಘದಂತೆ ಶ್ಯಾಮಲವಾದ ದೇಹಕಾಂತಿ. ನಡುವಿನಲ್ಲಿ ಕನಕದ ಕಟಿ ಸೂತ್ರವೂ, ಮಿಂಚಿನಂತೆ ಮಿನುಗುವ ಪೀತಾಂಬರವೂ ಪ್ರಕಾಶಿಸುತ್ತಿದೆ. ತಲೆಯಲ್ಲಿ ಆದಿತ್ಯನಂತೆ ತೊಳ-ತೊಳಗಿ ಬೆಳಗುತ್ತಿರುವ ಮಕುಟವು ಥಳ-ಥಳಿಸುತ್ತಿದೆ. ಮುಖಕಮಲವು ದುಂಬಿಗಳನ್ನು ಸರಿಹೋಲುವ ನೀಲ ಕಾಂತಿಯ ಮುಂಗುರುಳುಗಳಿಂದ ಶೋಭಿಸುತ್ತಿದೆ. ಕಿವಿಗಳು ಕನಕಕುಂಡಲ ಗಳಿಂದ ಮಂಡಿತವಾಗಿವೆ. ಭಕ್ತರ ರಕ್ಷಣೆಗಾಗಿ ಸದಾ ಸಿದ್ಧವಾಗಿರುವ ಎಂಟು ಭುಜಗಳೂ–ಸುವರ್ಣಾಭರಣಗಳಿಂದ ಶೋಭಿಸುತ್ತಾ–ಶಂಖ, ಪದ್ಮ, ಚಕ್ರ, ಬಾಣ, ಧನುಸ್ಸು, ಗದೆ, ಖಡ್ಗ ಮತ್ತು ಗುರಾಣಿಗಳೆಂಬ ದಿವ್ಯಾಯುಧ ಗಳನ್ನು ಧರಿಸಿ ಪುಷ್ಪಗಳಿಂದ ತುಂಬಿರುವ ಕರ್ಣಿಕಾರವೃಕ್ಷದಂತೆ–ವಿರಾಜಿಸು ತ್ತಿವೆ.

ವಕ್ಷಸ್ಯಧಿಶ್ರಿತವಧೂರ್ವನಮಾಲ್ಯುದಾರ-
ಹಾಸಾವಲೋಕಕಲಯಾ ರಮಯಂಶ್ಚ ವಿಶ್ವಮ್ ।
ಪಾರ್ಶ್ವಭ್ರಮದ್ವ್ಯಜನಚಾಮರರಾಜಹಂಸಃ
ಶ್ವೇತಾತಪತ್ರಶಶಿನೋಪರಿ ರಜ್ಯಮಾನಃ ॥೨೧॥

ಶ್ರೀಹರಿಯ ಹೃದಯದಲ್ಲಿ ಶ್ರೀವತ್ಸಚಿಹ್ನೆಯೂ, ಕೊರಳಿನಲ್ಲಿ ಕಮನೀಯವಾದ ವೈಜಯಂತೀವನಮಾಲೆಯೂ ಕಂಗೊಳಿಸುತ್ತಿವೆ. ಆ ಶ್ರೀಮೂರ್ತಿಯು ತನ್ನ ಉದಾರವಾದ ನಗುವಿನಿಂದಲೂ ಮತ್ತು ಸವಿ ನೋಟದ ವಿಲಾಸದಿಂದಲೂ ಇಡೀ ವಿಶ್ವವನ್ನೇ ಆನಂದದ ಧಾರೆಗಳಿಂದ ನೆನೆಸುತ್ತಿರುವ ಸೌಂದರ್ಯದ ಗಣಿಯು. ಇಕ್ಕೆಲಗಳಲ್ಲಿಯೂ ರಾಜಹಂಸ ಗಳಂತೆ ರಾರಾಜಿಸುತ್ತಿರುವ ಬೀಸಣಿಗೆ, ಚಾಮರಗಳ ಸೇವೆ ಮತ್ತು ಮಸ್ತಕದ ಮೇಲೆ ಚಂದ್ರನಂತೆ ಶೋಭಿಸುತ್ತಿರುವ ಶುಭ್ರವಾದ ಬೆಳ್ಗೊಡೆಯ ಬೆಡಗಿನಿಂದ ಕಂಗೊಳಿಸುತ್ತಿದ್ದಾನೆ.

ಇಂತಹ ವೈಭವದಿಂದ ಒಪ್ಪುತ್ತಿದ್ದ ಶ್ರೀಭಗವಂತನು ಬಂದುದನ್ನು ಕಂಡೊಡನೆಯೇ—ಬ್ರಹ್ಮದೇವರು, ಮಹಾದೇವರು, ಇಂದ್ರದೇವರು—ಇವರೇ ಮುಂತಾದ ಎಲ್ಲ ದೇವತೆಗಳೂ, ಗಂಧರ್ವರೂ, ಋಷಿಗಳೂ ಸರ್ವರೂ ಮೇಲೆದ್ದು ಆತನಿಗೆ 'ನಮೋ ನಮಃ' ಎಂದು ಪ್ರಣಾಮಮಾಡಿದರು. ದೇವದೇವನ ದಿವ್ಯತೇಜಸ್ಸು ಅವರೆಲ್ಲರ ಕಾಂತಿಯನ್ನೂ ಕಸಿದುಕೊಂಡಿತು. ಭಯ-ಭಕ್ತಿಗಳಿಂದ ತಲೆಗಳ ಮೇಲೆ ಕೈಜೋಡಿಸಿಕೊಂಡು ತೊದಲುವ ನಾಲಗೆಗಳಿಂದ ಎಲ್ಲರೂ ಆತನನ್ನು ಸ್ತುತಿಸತೊಡಗಿದರು. ಬ್ರಹ್ಮಾದಿದೇವರ ಮತಿಗಳಿಗೂ ಮುಟ್ಟಲಾರದ ಮಹಾಮಹಿಮನು ಆತ. ಆದರೂ ಭಕ್ತರ ಮೇಲೆ ಕೃಪೆದೋರಿ ಹೀಗೆ ಸಾಕಾರನಾಗಿ ಪ್ರಕಟಗೊಂಡಿದ್ದಾನೆ. ಇಂತಹ ಸರ್ವಬುದ್ಧಿಗಳಿಗೂ ಅತೀತನಾದ ದಯಾನಿಧಿಯನ್ನು ತಮ್ಮ-ತಮ್ಮ ಬುದ್ಧಿಗಳಿಗೆ ಅನುಗುಣವಾಗಿ ಅವರು ಸ್ತೋತ್ರಮಾಡತೊಡಗಿದರು. ಎಲ್ಲರಿಗಿಂತಲೂ ಮೊದಲು ದಕ್ಷಪ್ರಜಾಪತಿಯು ಶ್ರೇಷ್ಠತಮವಾದ ಪಾತ್ರೆಯಲ್ಲಿ ಪೂಜಾಸಾಮಗ್ರಿಗಳನ್ನು ತುಂಬಿಕೊಂಡು ಬಂದು, ನಂದ-ಸುನಂದರೇ ಮುಂತಾದ ಪರಿವಾರದವರಿಂದ ಪರಿವೃತನಾಗಿದ್ದ, ಪ್ರಜಾಪತಿಗಳಿಗೂ ಪರಮಗುರುವಾಗಿದ್ದ, ಪರಮಾತ್ಮನಾದ ಯಜ್ಞಪತಿಯ ಬಳಿಗೆ ಬಂದು,

ವಿನೀತನಾಗಿ ಪರಮಾನಂದದಿಂದ ಕೈಮುಗಿದುಕೊಂಡು ಪ್ರಾರ್ಥನೆ ಮಾಡುತ್ತಾ ಆತನನ್ನು ಶರಣುಹೊಂದಿದನು. (ಶ್ಲೋಕ 22-25)

ದಕ್ಷನು ಮಾಡಿದ ಸ್ತುತಿ :

ಶುದ್ಧಂ ಸ್ವಧಾಮ್ನ್ಯುಪರತಾಖಿಲಬುದ್ಧ್ಯವಸ್ಥಂ
ಚಿನ್ಮಾತ್ರಮೇಕಮಭಯಂ ಪ್ರತಿಷಿಧ್ಯ ಮಾಯಾಮ್ ।
ತಿಷ್ಠಂಸ್ತಯೈವ ಪುರುಷತ್ವಮುಪೇತ್ಯ ತಸ್ಯಾ-
ಮಾಸ್ತೇ ಭವಾನಪರಿಶುದ್ಧ ಇವಾತ್ಮತನ್ತ್ರಃ ॥೨೬॥

"ಪ್ರಭುವೇ! ನೀನು ಸ್ವರೂಪದಿಂದಲೇ ಪರಿಶುದ್ಧನು. ಬುದ್ಧಿಯ (ಎಚ್ಚರ, ಕನಸು ಮತ್ತು ಗಾಢನಿದ್ರೆಗಳೆಂಬ) ಎಲ್ಲ ಅವಸ್ಥೆಗಳನ್ನೂ ಮೀರಿದ ಸ್ವಧಾಮದಲ್ಲಿ ನೆಲೆಗೊಂಡವನು. ಚಿನ್ಮಾತ್ರನು. ಅದ್ವಿತೀಯನು. ಅಭಯನು ಮತ್ತು ಮಾಯೆಯನ್ನು ಮೆಟ್ಟಿನಿಂತ ಸ್ವತಂತ್ರನು. ಆದರೂ ನೀನು ಮಾಯಾಪ್ರಕೃತಿಯ ರೂಪವಾದ ಶರೀರದಲ್ಲಿ ಶಯನಿಸಿಕೊಂಡಿರುವಾಗ ಪರಿಶುದ್ಧನಾಗಿದ್ದರೂ ಅಪರಿಶುದ್ಧನೋ ಎಂಬಂತೆ ತೋರಿಬರುತ್ತಿದ್ದೀಯೆ."

ಋತ್ವಿಜರು ಮಾಡಿದ ಸ್ತುತಿ :

ತತ್ತ್ವಂ ನ ತೇ ವಯಮನಞ್ಜನ ರುದ್ರಶಾಪಾ-
ತ್ಕರ್ಮಣ್ಯವಗ್ರಹಧಿಯೋ ಭಗವನ್ವಿದಾಮಃ ।
ಧರ್ಮೋಪಲಕ್ಷಣಮಿದಂ ತ್ರಿವೃದಧ್ವರಾಖ್ಯಂ
ಜ್ಞಾತಂ ಯದರ್ಥಮಧಿದೈವಮದೋವ್ಯವಸ್ಥಾಃ ॥೨೭॥

"ಎಲೈ ನಿರಂಜನಸ್ವರೂಪನಾದ ನಾರಾಯಣನೇ! ನಂದಿಕೇಶ್ವರನ ಶಾಪದಿಂದ ನಮ್ಮ ಬುದ್ಧಿಯು ಕೇವಲ ಕರ್ಮಕಾಂಡದಲ್ಲಿ ಸಿಲುಕಿಕೊಂಡಿದೆ. ಆದ್ದರಿಂದ ನಾವು ನಿನ್ನ ತತ್ತ್ವವನ್ನು ತಿಳಿಯಲಾರದೇ ಹೋಗಿದ್ದೇವೆ. 'ಈ ಕರ್ಮಕ್ಕೆ ಇದೇ ದೇವತೆಯು'–ಎಂದು ಧರ್ಮಪ್ರವೃತ್ತಿಯನ್ನು ಹೇಳುವ ಮೂರು ವೇದಗಳೂ ಪ್ರತಿಪಾದನೆಮಾಡುವ ಯಜ್ಞವನ್ನೇ ನಿನ್ನ ಸ್ವರೂಪವೆಂದು ಭಾವಿಸುತ್ತೇವೆ."

ಯಜ್ಞಸದಸ್ಯರ ಸ್ತುತಿ :

ಉತ್ಪತ್ಯಧ್ವನ್ಯಶರಣ ಉರುಕ್ಲೇಶದುರ್ಗೇಽನ್ತಕೋಗ್ರ-
ವ್ಯಾಲಾನ್ವಿಷ್ಟೇ ವಿಷಯಮೃಗತೃಷ್ಯಾತ್ಮಗೇಹೋರುಭಾರಃ ।
ದ್ವನ್ದ್ವಶ್ವಭ್ರೇ ಖಲಮೃಗಭಯೇ ಶೋಕದಾವೇಽಜ್ಞಸಾರ್ಥಃ
ಪಾದೌಕಸ್ತೇ ಶರಣದ ಕದಾ ಯಾತಿ ಕಾಮೋಪಸೃಷ್ಟಃ ॥

"ಎಲೈ ಶರಣಾಗತರಿಗೆ ಆಸರೆನೀಡುವ ಸ್ವಾಮಿಯೇ! ಈ ಸಂಸಾರ ಮಾರ್ಗವು ಅನೇಕಪ್ರಕಾರದ ಕ್ಲೇಶಗಳಿಂದ ಕೂಡಿ ಅತ್ಯಂತದುರ್ಗಮ ವಾದುದು. ಕಾಲವೆಂಬ ಸರ್ಪವು ಹೊಂಚುಹಾಕಿ ಕಾಯುತ್ತಿರುವ ಅಪಾಯ ಕರವಾದ ದಾರಿ ಇದು. ಸುಖ-ದುಃಖ, ಶೀತೋಷ್ಣಾದಿ ರೂಪಗಳಾದ ದ್ವಂದ್ವ ಗಳೆಂಬ ಹಳ್ಳ-ಕೊಳ್ಳಗಳಿಂದ ಕೂಡಿ, ದುರ್ಜನರೆಂಬ ಕ್ರೂರಿಗಳಾದ ಕಾಡು ಪ್ರಾಣಿಗಳು ತುಂಬಿರುವ ಭಯಂಕರವಾದ ಪಥ. ಹಾಗೆಯೇ ಶೋಕವೆಂಬ ಕಾಡುಗಿಚ್ಚು ಉರಿಯುತ್ತಿರುವ ಜಾಗವಾಗಿದೆ. ವಿಶ್ರಾಂತಿಸ್ಥಳವೇ ಇಲ್ಲದ ಗೊಂಡಾರಣ್ಯದ ದಾರಿಯೂ ಆಗಿದೆ. ಇಲ್ಲಿ ಬಗೆ-ಬಗೆಯ ಕಾಮನೆಗಳಿಂದ ಪೀಡಿತರಾಗಿ ವಿಷಯವೆಂಬ ಬಿಸಿಲ್ಗುದುರೆಯ ನೀರಿಗಾಗಿಯೇ ದೇಹ-ಗೇಹ ಗಳೆಂಬ ಭಾರೀ ಹೊರೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗು ತ್ತಿರುವ ಅಜ್ಞಾನಿಗಳಾದ ಜೀವರೆಂಬ ಪಥಿಕರು ಯಾವಾಗ ನಿನ್ನ ಚರಣ ಕಮಲಗಳಲ್ಲಿ ಶರಣುಬರುವರಪ್ಪಾ?"

ರುದ್ರದೇವರು ಹೇಳಿದ ಸ್ತುತಿ :

ತವ ವರದ ವರಾಙ್ಘ್ರಾವಾಶಿಷೇಹಾಖಿಲಾರ್ಥೇ
ಹ್ಯಪಿ ಮುನಿಭಿರಸಕ್ತೈರಾದರೇಣಾರ್ಹಣೀಯೇ ।
ಯದಿ ರಚಿತಧಿಯಂ ಮಾವಿದ್ಯಲೋಕೋಽಪವಿದ್ಧಂ
ಜಪತಿ ನ ಗಣಯೇ ತತ್ತ್ವತ್ಪರಾನುಗ್ರಹೇಣ ॥೨೯॥

"ಎಲೈ ವರಪ್ರದನಾದ ವಾಸುದೇವನೇ! ನಿನ್ನ ಉತ್ತಮೋತ್ತಮವಾದ ಪಾದಾರವಿಂದಗಳು ಈ ಜಗತ್ತಿನಲ್ಲಿ ಸಕಾಮರಾಗಿ ಪ್ರಾರ್ಥನೆಮಾಡುವ ಭಕ್ತರ ಎಲ್ಲ ಪುರುಷಾರ್ಥಗಳನ್ನೂ ಕರುಣಿಸುತ್ತವೆ. ಹಾಗೆಯೇ ನಿಷ್ಕಾಮರಾದ ಮಹಾಮುನಿಗಳೂ ನಿನ್ನ ಈ ಚರಣಕಮಲಗಳನ್ನು ಆದರದಿಂದ ಆರಾಧಿಸು

ತ್ತಾರೆ. ಹೀಗೆ ಎಲ್ಲ ಬಗೆಯ ಭಕ್ತರ ಇಷ್ಟಾರ್ಥಗಳನ್ನೂ ಈಡೇರಿಸುವ ನಿನ್ನ ಚರಣಾರವಿಂದಗಳಲ್ಲಿ ಸದಾ ಆಸಕ್ತನಾಗಿರುವ ಕಾರಣ ನಾನು ಆಚಾರಗಳ ಕಡೆಗೆ ಗಮನಕೊಡದಿರಬಹುದು. ಅದಕ್ಕಾಗಿ ಅಜ್ಞಾನಿಗಳು ನನ್ನನ್ನು 'ಆಚಾರಭ್ರಷ್ಟ' ಎಂದು ಕರೆಯುತ್ತಾರೆ. ಅವರು ಹಾಗೆ ಕರೆದರೆ ಕರೆಯಲಿ. ನಿನ್ನ ಪರಮಾನುಗ್ರಹದಿಂದ ನಾನು ಅವರ ನಿಂದೆಯನ್ನು ಮನಸ್ಸಿಗೆ ಹಚ್ಚಿಕೊಳ್ಳುವುದೇ ಇಲ್ಲ."

ಭೃಗುಮಹರ್ಷಿಗಳು ಮಾಡಿದ ಸ್ತುತಿ :

ಯನ್ಮಾಯಯಾ ಗಹನಯಾಪಹೃತಾತ್ಮಬೋಧಾ
ಬ್ರಹ್ಮಾದಯಸ್ತನುಭೃತಸ್ತಮಸಿ ಸ್ವಪನ್ತಃ ।
ನಾತ್ಮನ್ ಶ್ರಿತಂ ತವ ವಿದನ್ತ್ಯಧುನಾಪಿ ತತ್ತ್ವಂ
ಸೋಽಯಂ ಪ್ರಸೀದತು ಭವಾನ್ಪ್ರಣತಾತ್ಮಬನ್ಧುಃ ॥೩೦॥

"ಸ್ವಾಮಿ! ನಿನ್ನ ಗಹನವಾದ ಮಾಯೆಯಿಂದ ಆತ್ಮಜ್ಞಾನದ ಲೋಪವಾಗಿ, ಅಜ್ಞಾನವೆಂಬ ನಿದ್ರೆಯಲ್ಲಿ ನಿದ್ರಿಸುತ್ತಿರುವ ಬ್ರಹ್ಮದೇವರೇ ಮುಂತಾದ ದೇಹಿಗಳು ಆತ್ಮಜ್ಞಾನಕ್ಕೆ ಉಪಯೋಗವಾಗುವ ನಿನ್ನ ತತ್ತ್ವವನ್ನು ಇಲ್ಲಿಯವರೆಗೂ ತಿಳಿಯಲು ಸಮರ್ಥರಾಗಿಲ್ಲ. ಹೀಗಿದ್ದರೂ ನೀನು ನಿನ್ನನ್ನು ಶರಣು ಹೊಂದಿರುವ ಭಕ್ತರಿಗೆ ಆತ್ಮವೂ ಮತ್ತು ಶ್ರೇಷ್ಠಸ್ನೇಹಿತನೂ ಆಗಿದ್ದೀಯೆ. ಇಂತಹ ನೀನು ನನ್ನಲ್ಲಿ ಪ್ರಸನ್ನನಾಗು, ಪ್ರಭುವೇ!"

ಬ್ರಹ್ಮದೇವರು ಮಾಡಿದ ಸ್ತುತಿ :

ನೈತತ್ಸ್ವರೂಪಂ ಭವತೋಽಸೌ ಪದಾರ್ಥ-
ಭೇದಗ್ರಹೈಃ ಪುರುಷೋ ಯಾವದೀಕ್ಷೇತ್ ।
ಜ್ಞಾನಸ್ಯ ಚಾರ್ಥಸ್ಯ ಗುಣಸ್ಯ ಚಾಶ್ರಯೋ
ಮಾಯಾಮಯಾದ್ವ್ಯತಿರಿಕ್ತೋ ಯತಸ್ತ್ವಮ್ ॥೩೧॥

"ಎಲೈ ಪ್ರಭುವೇ! ಬೇರೆ-ಬೇರೆ ಪದಾರ್ಥಗಳನ್ನು ತಿಳಿಯುವ ಇಂದ್ರಿಯಗಳ ಮೂಲಕ ಪುರುಷನು ಏನನ್ನು ನೋಡುತ್ತಾನೆಯೋ–ಅದು ನಿನ್ನ ಸ್ವರೂಪವಲ್ಲ. ಏಕೆಂದರೆ : ನೀನು ಆ ಜ್ಞಾನಕ್ಕೂ, ಶಬ್ದ-ಸ್ಪರ್ಶಾದಿ ವಿಷಯಗಳಿಗೂ, ಶ್ರೋತ್ರವೇ ಮುಂತಾದ ಅವುಗಳ ಇಂದ್ರಿಯಗಳಿಗೂ

ಆಶ್ರಯವಾಗಿ, ಪ್ರಕೃತಿಮಯವಾದ ಅವೆಲ್ಲಕ್ಕಿಂತಲೂ ಅತಿರಿಕ್ತನಾಗಿದ್ದೀಯೆ."

ಇಂದ್ರದೇವರು ಅರ್ಪಿಸಿದ ಸ್ತುತಿ :

ಇದಮಪ್ಯಚ್ಯುತ ವಿಶ್ವಭಾವನಂ
ವಪುರಾನನ್ದಕರಂ ಮನೋದೃಶಾಮ್ ।
ಸುರವಿದ್ವಿಟ್‌ಕ್ಷಪಣೈರುಧಾಯುಧೈ-
ರ್ಭುಜದಣ್ಡೈರುಪಪನ್ನಮಷ್ಟಭಿಃ ॥೩೨॥

"ಓ ಅಚ್ಯುತನೇ! ದೇವದ್ರೋಹಿಗಳನ್ನು ಸಂಹಾರಮಾಡುವ ನಾನಾ ದಿವ್ಯಾಯುಧಗಳನ್ನು ಧರಿಸಿರುವ, ಅಷ್ಟಭುಜಗಳಿಂದ ಕಂಗೊಳಿಸುತ್ತಿರುವ ಮತ್ತು ಜಗತ್ತನ್ನು ಪ್ರಕಾಶಪಡಿಸುತ್ತಿರುವ ನಿನ್ನ ಈ ದಿವ್ಯರೂಪವು ನಮ್ಮ ಕಣ್ಮನಗಳಿಗೆ ಪರಮಾನಂದವನ್ನು ತುಂಬುತ್ತಿದೆ.

ಯಾಜ್ಞಿಕರ ಪತ್ನಿಯರು ಸಮರ್ಪಿಸಿದ ಸ್ತೋತ್ರ :

ಯಜ್ಞೋಽಯಂ ತವ ಯಜನಾಯ ಕೇನ ಸೃಷ್ಟೋ
ವಿಧ್ವಸ್ತಃ ಪಶುಪತಿನಾದ್ಯ ದಕ್ಷಕೋಪಾತ್ ।
ತಂ ನಸ್ತ್ವಂ ಶವಶಯನಾಭಶಾನ್ತಮೇಧಂ
ಯಜ್ಞಾತ್ಮನ್ನಲಿನರುಚಾ ದೃಶಾ ಪುನೀಹಿ ॥೩೩॥

"ಎಲೈ ಯಜ್ಞಾತ್ಮಕನಾದ ಪ್ರಭುವೇ! ಬ್ರಹ್ಮದೇವರು ನಿನ್ನ ಆರಾಧನೆಗಾಗಿಯೇ ಯಜ್ಞವನ್ನು ರಚಿಸಿದ್ದಾರೆ. ಆದರೆ ಭಗವಂತನಾದ ಪಶುಪತಿಯು ದಕ್ಷಪ್ರಜಾಪತಿಯ ಮೇಲೆ ಕೋಪಗೊಂಡು ಇದನ್ನು ನಾಶಪಡಿಸಿದ್ದರಿಂದ ಇದು ಶ್ಮಶಾನಭೂಮಿಯಂತೆ ಉತ್ಸವಾನಂದರಹಿತವಾಗಿಬಿಟ್ಟಿದೆ. ಇದರ ಮೇಲೆ ನೀಲಕಮಲದ ಕಾಂತಿಯಿಂದ ಕಂಗೊಳಿಸುತ್ತಿರುವ ನಿನ್ನ ಅನುಗ್ರಹದೃಷ್ಟಿಯನ್ನು ಬೀರಿ ಇದನ್ನು ಪವಿತ್ರಗೊಳಿಸು, ಯಜ್ಞಮೂರ್ತಿಯೇ!"

ಋಷಿಗಳು ಅರ್ಪಿಸಿದ ಸ್ತುತಿ :

ಅನನ್ವಿತಂ ತೇ ಭಗವನ್ವಿಚೇಷ್ಟಿತಂ
ಯದಾತ್ಮನಾ ಚರಸಿ ಹಿ ಕರ್ಮ ನಾಜ್ಯಸೇ ।

ವಿಭೂತಯೇ ಯತ ಉಪಸೇದುರೀಶ್ವರೀಂ
ನ ಮನ್ಯತೇ ಸ್ವಯಮನುವರ್ತತೀಂ ಭವಾನ್ ॥೩೪॥

"ಭಗವಂತನೇ! ನಿನ್ನ ಲೀಲೆಯು ತುಂಬಾ ಅದ್ಭುತವಾಗಿದೆ. ಏಕೆಂದರೆ: ನೀನು ಕರ್ಮಗಳನ್ನು ಆಚರಿಸುತ್ತಿದ್ದರೂ ಅವು ನಿನಗೆ ಸ್ವಲ್ಪವೂ ಅಂಟಿ ಕೊಳ್ಳುವುದಿಲ್ಲ. ಇತರ ಜನರು ವೈಭವದ ಆಸೆಯಿಂದ ಯಾವಳನ್ನು ಉಪಾಸನೆಮಾಡುತ್ತಿರುವರೋ–ಆ ಶ್ರೀಲಕ್ಷ್ಮೀದೇವಿಯು ಸದಾ ನಿನ್ನ ಸೇವೆ ಮಾಡುತ್ತಿರುವಳು ; ನಿನ್ನನ್ನು ಓಲೈಸುತ್ತಿರುವಳು. ಆದರೂ ನೀನು ಆಕೆಯಲ್ಲಿ ನಿಃಸ್ಪೃಹನಾಗಿದ್ದೀಯೆ. ಇದು ಎಂತಹ ವಿಚಿತ್ರ!"

ಸಿದ್ಧರು ಹೇಳಿದ ಸ್ತುತಿ :

ಅಯಂ ತ್ವತ್ಕಥಾಮೃಷ್ಟಪೀಯೂಷನದ್ಯಾಂ
ಮನೋವಾರಣಃ ಕ್ಲೇಶದಾವಾಗ್ನಿದಗ್ಧಃ ।
ತೃಷಾರ್ತೋಽವಗಾಢೋ ನ ಸಸ್ಮಾರ ದಾವಂ
ನ ನಿಶ್ಕ್ರಾಮತಿ ಬ್ರಹ್ಮಸಮ್ಪನ್ನವನ್ನಃ ॥೩೫॥

"ಪ್ರಭುವೇ! ನಮ್ಮ ಮನಸ್ಸೆಂಬ ಆನೆಯು ಬಗೆ-ಬಗೆಯ ಕ್ಲೇಶಗಳೆಂಬ ಕಾಡುಗಿಚ್ಚಿನಲ್ಲಿ ಬಿದ್ದು ಸಂತಾಪಗೊಂಡು, ಬಹಳ ಬಾಯಾರಿಕೆಯಿಂದ ಪೀಡಿತವಾಗಿ ನಿನ್ನ ಕಥೆಗಳೆಂಬ ಪರಿಶುದ್ಧಾಮೃತದ ಮಹಾನದಿಯಲ್ಲಿ ಮುಳುಗುಹಾಕುತ್ತಿರುತ್ತದೆ. ಅಲ್ಲಿ ಬ್ರಹ್ಮಾನಂದಾನುಭವದಲ್ಲಿ ಲಯಗೊಂಡಂತೆ ಇರುವ ಅದಕ್ಕೆ ಸಂಸಾರವೆಂಬ ಕಾಡುಗಿಚ್ಚಿನ ನೆನಪೂ ಬರುವುದಿಲ್ಲ. ಅದು ಆ ಅಮೃತಮಹಾನದಿಯಿಂದ ಹೊರಕ್ಕೆ ಬರುವುದಕ್ಕೂ ಬಯಸುವುದಿಲ್ಲ."

ಯಜಮಾನನ ಪತ್ನಿಯು ಅರ್ಪಿಸಿದ ಸ್ತುತಿ :

ಸ್ವಾಗತಂ ತೇ ಪ್ರಸೀದೇಶ ತುಭ್ಯಂ ನಮಃ
ಶ್ರೀನಿವಾಸ ಶ್ರಿಯಾ ಕಾನ್ತಯಾ ತ್ರಾಹಿ ನಃ ।
ತ್ವಾಮೃತೇಽಧೀಶ ನಾಙ್ಗೈರ್ಮಖಃ ಶೋಭತೇ
ಶೀರ್ಷಹೀನಃ ಕಬನ್ಧೋ ಯಥಾ ಪೂರುಷಃ ॥೩೬॥

"ಸ್ವಾಗತವು ನಿನಗೆ, ಸರ್ವೇಶ್ವರನೇ! ನಿನಗೆ ನಮೋ ನಮಃ

ಮನದನ್ನೆಯಾದ ಮಹಾಲಕ್ಷ್ಮೀ ಶ್ರೀದೇವಿಯೊಡನೆ ಕೂಡಿ ನಮ್ಮನ್ನು ಪೊರೆಯಯ್ಯಾ, ಶ್ರೀನಿವಾಸನೇ! ಓ ಯಜ್ಞೇಶ್ವರನೇ! ಉಳಿದ ಎಲ್ಲ ಅಂಗಗಳಿದ್ದರೂ ತಲೆಯಿಲ್ಲದಿದ್ದರೆ ಮನುಷ್ಯದೇಹವು ಶೋಭಿಸುವುದಿಲ್ಲವಷ್ಟೇ! ಅಂತೆಯೇ ನೀನಿಲ್ಲದಿದ್ದರೆ ಯಜ್ಞಕ್ಕೆ ಶೋಭೆಯಿಲ್ಲವಪ್ಪಾ!"

ಲೋಕಪಾಲಕರು ಹೇಳಿದ ಸ್ತುತಿ :

ದೃಷ್ಟಃ ಕಿಂ ನೋ ದೃಗ್ಭಿರಸದ್ಗ್ರಹೈಸ್ತ್ವಂ
ಪ್ರತ್ಯಗ್ದ್ರಷ್ಟಾ ದೃಶ್ಯತೇ ಯೇನ ದೃಶ್ಯಮ್ ।
ಮಾಯಾ ಹ್ಯೇಷಾ ಭವದೀಯಾ ಹಿ ಭೂಮ-
ನ್ಯಸ್ತ್ವಂ ಷಷ್ಠಃ ಪಞ್ಚಭಿರ್ಭಾಸಿ ಭೂತೈಃ ॥೩೭॥

"ಎಲೈ ಅನಂತನಾದ ಪರಮಾತ್ಮನೇ! ನೀನು ಎಲ್ಲ ಅಂತಃಕರಣಗಳಿಗೂ ಸಾಕ್ಷಿಯಾಗಿದ್ದೀಯೆ. ಈ ಇಡೀ ಜಗತ್ತನ್ನು ನಾವು ನೋಡುವುದು ನಿನ್ನ ಮೂಲಕವೇ. ಆದರೂ ಮಾಯಾಮಯವಾದ ಈ ಪ್ರಾಕೃತಪದಾರ್ಥಗಳನ್ನು ಗ್ರಹಿಸುವ ನಮ್ಮ ಕಣ್ಣುಗಳೇ ಮುಂತಾದ ಇಂದ್ರಿಯಗಳಿಗೆ ನೀನು ಪ್ರತ್ಯಕ್ಷವಾಗುವುದಿಲ್ಲ. ಏಕೆಂದರೆ : ವಾಸ್ತವಿಕವಾಗಿ ನೀನು ಈ ಪಂಚಭೂತಗಳಿಂದ ಪ್ರತ್ಯೇಕವಾದವನು. ಆದರೂ ಈ ಪಾಂಚಭೌತಿಕವಾದ ಶರೀರಗಳೊಡನೆ ನಿನಗೆ ಸಂಬಂಧವಿರುವಂತೆ ಕಾಣುತ್ತದೆಯಲ್ಲಾ, ಅದಕ್ಕೆ ಕಾರಣವೇನು? ಎಂದರೆ–'ನಿನ್ನ ಮಾಯೆಯೇ'.

ಯೋಗೇಶ್ವರರು ಹೇಳಿದ ಸ್ತೋತ್ರ :

ಪ್ರೇಯಾನ್ನ ತೇಽನ್ಯೋಽಸ್ತ್ಯಮುತಸ್ತ್ವಯಿ ಪ್ರಭೋ
ವಿಶ್ವಾತ್ಮನೀಕ್ಷೇನ್ನ ಪೃಥಗ್ಯ ಆತ್ಮನಃ ।
ಅಥಾಪಿ ಭಕ್ತ್ಯೇಶತಯೋಪಧಾವತಾ-
ಮನನ್ಯವೃತ್ತ್ಯಾನುಗೃಹಾಣ ವತ್ಸಲತ ॥೩೮॥

ಜಗದುದ್ಭವಸ್ಥಿತಿಲಯೇಷು ದೈವತೋ
ಬಹುಭಿದ್ಯಮಾನಗುಣಯಾತ್ಮಮಾಯಯಾ ।
ರಚಿತಾತ್ಮಭೇದಮತಯೇ ಸ್ವಸಂಸ್ಥಯಾ
ವಿನಿವರ್ತಿತಭದ್ರಮಗುಣಾತ್ಮನೇ ನಮಃ ॥೩೯॥

"ಎಲೈ ಪ್ರಭುವೇ! ಯಾವನು ಇಡೀ ವಿಶ್ವಕ್ಕೇ ಆತ್ಮನಾಗಿರುವ ನಿನ್ನಿಂದ ತನ್ನನ್ನು ಪ್ರತ್ಯೇಕವನ್ನಾಗಿ ತಿಳಿಯುವುದಿಲ್ಲವೋ–ಅಂತಹ ಅನನ್ಯಭಕ್ತನಿಗಿಂತಲೂ ನಿನಗೆ ಪ್ರಿಯನಾದವನು ಬೇರೊಬ್ಬನಿಲ್ಲ. ಆದರೂ ಎಲೈ ಭಕ್ತವತ್ಸಲನೇ! ನಿನ್ನಲ್ಲಿ ಸ್ವಾಮಿಭಾವವನ್ನಿಟ್ಟು ಅನನ್ಯಭಕ್ತಿಯಿಂದ ನಿನ್ನನ್ನು ಸೇವೆಮಾಡುವ ಭಕ್ತರ ಮೇಲೂ ನೀನು ಕರುಣೆತೋರಯ್ಯಾ! ಜೀವಗಳ ಅದೃಷ್ಟವಶದಿಂದ ಪ್ರಕೃತಿಯ ಸತ್ತ್ವಾದಿಗುಣಗಳಲ್ಲಿ ವಿಭಿನ್ನತೆ ಉಂಟಾಗುವುದು. ಅಂತಹ ವಿಚಿತ್ರವಾದ ಮಾಯಾಪ್ರಕೃತಿಯಿಂದ ನೀನು ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೋಸ್ಕರ ಬ್ರಹ್ಮನೇ ಮುಂತಾದ ಭಿನ್ನ-ಭಿನ್ನರೂಪಗಳನ್ನು ಧರಿಸಿ ಭೇದಬುದ್ಧಿಯನ್ನುಂಟುಮಾಡುತ್ತೀಯೆ. ಆದರೆ ಸ್ವರೂಪತಃ ನೀನು ಆ ಭೇದಜ್ಞಾನಕ್ಕೂ ಮತ್ತು ಅದಕ್ಕೆ ಕಾರಣವಾದ ಸತ್ತ್ವಾದಿಗುಣಗಳಿಗೂ ಎಲ್ಲ ರೀತಿಗಳಿಂದಲೂ ದೂರವಾಗಿರುವೆ. ಇಂತಹ ನಿನಗೆ ನಮೋ ನಮಃ"

ಬ್ರಹ್ಮದೇವರು ಹೇಳಿದ ಸ್ತುತಿ :

ನಮಸ್ತೇ ಶ್ರಿತಸತ್ತ್ವಾಯ ಧರ್ಮಾದೀನಾಂ ಚ ಸೂತಯೇ ।
ನಿರ್ಗುಣಾಯ ಚ ಯತ್ಕಾಷ್ಠಾಂ ನಾಹಂ ವೇದಾಪರೇಽಪಿ ಚ ॥೪೦॥

"ಧರ್ಮವೇ ಮುಂತಾದುವುಗಳನ್ನು ಉತ್ಪಾದನೆಮಾಡುವುದಕ್ಕಾಗಿ ಶುದ್ಧಸತ್ತ್ವವನ್ನು ಸ್ವೀಕರಿಸಿದರೂ–ನಿರ್ಗುಣನೂ ಆಗಿರುವ ಪರಮಾತ್ಮನು ನೀನು. ಆದ್ದರಿಂದಲೇ ನಿನ್ನ ತತ್ತ್ವವನ್ನು ನಾನು ಅರಿಯೆನು. ಇತರರೂ ಅರಿಯರು. ಇಂತಹ ನಿನಗೆ ನಮಸ್ಕಾರವು."

ಅಗ್ನಿದೇವರು ಹೇಳಿದ ಸ್ತೋತ್ರ :

ಯತ್ತೇಜಸಾಹಂ ಸುಸಮಿದ್ಧತೇಜಾ
ಹವ್ಯಂ ವಹೇ ಸ್ವಧ್ವರ ಆಜ್ಯಸಿಕ್ತಮ್ ।
ತಂ ಯಜ್ಞಿಯಂ ಪಞ್ಚವಿಧಂ ಚ ಪಞ್ಚಭಿಃ
ಸ್ವಿಷ್ಟಂ ಯಜುರ್ಭಿಃ ಪ್ರಣತೋಽಸ್ಮಿ ಯಜ್ಞಮ್ ॥೪೧॥

"ಓ ಭಗವಂತನೇ! ನಾನು ನಿನ್ನ ತೇಜಸ್ಸಿನಿಂದಲೇ ಪ್ರಜ್ವಲಿತನಾಗಿ ಶ್ರೇಷ್ಠವಾದ ಯಜ್ಞಗಳಲ್ಲಿ ದೇವತೆಗಳ ಬಳಿಗೆ ತುಪ್ಪವು ಬೆರೆತಿರುವ

ಹವಿಸ್ಸನ್ನು ತಲುಪಿಸುತ್ತೇನೆ. ನೀನು ಸಾಕ್ಷಾತ್ ಯಜ್ಞಪುರುಷನೂ ಮತ್ತು ಯಜ್ಞಸಂರಕ್ಷಕನೂ ಆಗಿರುವೆ. ಅಗ್ನಿಹೋತ್ರ, ದರ್ಶ, ಪೂರ್ಣಮಾಸ, ಚಾತುರ್ಮಾಸ್ಯ ಮತ್ತು ಪಶುಸೋಮ–ಎಂಬ ಈ ಐದು ಬಗೆಯ ಯಜ್ಞಗಳು ನಿನ್ನ ಸ್ವರೂಪಗಳೇ ಆಗಿವೆ. 'ಆಶ್ರಾವಯ', 'ಅಸ್ತುಶ್ರೌಷಟ್', 'ಯಜ', 'ಯೇ ಯಜಾಮಹೇ' ಮತ್ತು 'ವೌಷಟ್'–ಎಂಬ ಈ ಐದು ಬಗೆಯ ಯಜುರ್ಮಂತ್ರಗಳಿಂದ ಆರಾಧಿಸಲ್ಪಡುವವನೂ ನೀನೇ. ಇಂತಹ ನಿನಗೆ ನನ್ನ ಪ್ರಣಾಮಗಳು."

ದೇವತೆಗಳು ಅರ್ಪಿಸಿದ ಸ್ತೋತ್ರ :

ಪುರಾ ಕಲ್ಪಾಪಾಯೇ ಸ್ವಕೃತಮುದರೀಕೃತ್ಯ ವಿಕೃತಂ
ತ್ವಮೇವಾದ್ಯಸ್ತಸ್ಮಿನ್ಸಲಿಲ ಉರಗೇನ್ದ್ರಾಧಿಶಯನೇ ।
ಪುಮಾನ್ ಶೇಷೇ ಸಿದ್ಧೈರ್ಹೃದಿ ವಿಮೃಶಿತಾಧ್ಯಾತ್ಮಪದವಿಃ
ಸ ಏವಾದ್ಯಾಕ್ಷ್ಣೋರ್ಯಃ ಪಥಿ ಚರಸಿ ಭೃತ್ಯಾನವಸಿ ನಃ ॥

"ಪ್ರಭುವೇ! ನೀನೇ ಹಿಂದಿನ ಕಲ್ಪವು ಮುಗಿದಾಗ ನಿನ್ನ ಕಾರ್ಯರೂಪವಾದ ಈ ಪ್ರಪಂಚವನ್ನು ಹೊಟ್ಟೆಯಲ್ಲಿ ಅಡಗಿಸಿಕೊಂಡು ಪ್ರಳಯಕಾಲದ ಜಲದೊಳಗೆ ಆದಿಶೇಷನೆಂಬ ಹಾಸಿಗೆಯ ಮೇಲೆ ಪವಡಿಸಿದ್ದೆ. ಆಗ ನಿನ್ನ ಆಧ್ಯಾತ್ಮಿಕಸ್ವರೂಪವನ್ನು ಸಿದ್ಧಗಣಗಳೂ ತಮ್ಮ ಹೃದಯಗಳಲ್ಲಿ ಧ್ಯಾನಿಸುತ್ತಿದ್ದರು. ಅಂತಹ ಆದಿಪುರುಷನಾದ ನೀನೇ ಈಗ ಭಕ್ತರಾದ ನಮ್ಮ ಕಣ್ಣುಗಳಿಗೆ ವಿಷಯವಾಗಿ ನಮ್ಮನ್ನು ರಕ್ಷಿಸುತ್ತಿದ್ದೀಯೆ."

ಗಂಧರ್ವರು ಮಾಡಿದ ಸ್ತುತಿ :

ಅಂಶಾಂಶಾಸ್ತೇ ದೇವ ಮರೀಚ್ಯಾದಯ ಏತೇ
ಬ್ರಹ್ಮೇನ್ದ್ರಾದ್ಯಾ ದೇವಗಣಾ ರುದ್ರಪುರೋಗಾಃ ।
ಕ್ರೀಡಾಭಾಣ್ಡಂ ವಿಶ್ವಮಿದಂ ಯಸ್ಯ ವಿಭೂಮಂ-
ಸ್ತಸ್ಮೈ ನಿತ್ಯಂ ನಾಥ ನಮಸ್ತೇ ಕರವಾಮ ॥೪೩॥

"ದೇವನೇ! ಮರೀಚಿಯೇ ಮುಂತಾದ ಋಷಿಗಳೂ ಮತ್ತು ಈ ಬ್ರಹ್ಮದೇವರು, ರುದ್ರದೇವರು, ಇಂದ್ರದೇವರೇ ಮುಂತಾದ ದೇವಗಣಗಳೂ ನಿನ್ನ ಅಂಶದಲ್ಲಿಯೂ ಅಂಶವಾಗಿದ್ದಾರೆ. ಮಹತ್ತಮನಾದ ಪ್ರಭುವೇ!

ಈ ಇಡೀ ವಿಶ್ವವೂ ನಿನ್ನ ಆಟದ ಸಾಮಗ್ರಿಯೇ ಆಗಿದೆ. ಇಂತಹ ನಿನಗೆ ನಾವು ಸದಾ ಪ್ರಣಾಮಗಳನ್ನು ಸಮರ್ಪಿಸುತ್ತೇವೆ."

ವಿದ್ಯಾಧರರು ಸಮರ್ಪಿಸಿದ ಸೋತ್ರ :

ತ್ವನ್ಮಾಯಯಾರ್ಥಮಭಿಪದ್ಯ ಕಲೇವರೇಽಸ್ಮಿ-
ನ್ಕೃತ್ವಾ ಮಮಾಹಮಿತಿ ದುರ್ಮತಿರುತ್ಪಥೈಃ ಸ್ವೈಃ ।
ಕ್ಷಿಪ್ತೋಽಪ್ಯಸದ್ವಿಷಯಲಾಲಸ ಆತ್ಮಮೋಹಂ
ಯುಷ್ಮತ್ಕಥಾಮೃತನಿಷೇವಕ ಉದ್ವ್ಯುದಸ್ಯೇತ್ ॥೪೪॥

"ಜೀಯಾ! ಪರಮಪುರುಷಾರ್ಥದ ಪ್ರಾಪ್ತಿಗೆ ಸಾಧನವಾಗಿರುವ ಈ ಮಾನವದೇಹವನ್ನು ಪಡೆದೂ ಕೂಡ ಜೀವನು ನಿನ್ನ ಮಾಯೆಗೆ ಮರುಳಾಗಿ 'ನಾನು', 'ನನ್ನದು' ಎಂಬ ಅಭಿಮಾನಕ್ಕೆ ತುತ್ತಾಗುತ್ತಾನೆ. ಇಂತಹ ಅಭಿಮಾನವನ್ನು ಇಟ್ಟುಕೊಂಡಿರುವ ದುರ್ಬುದ್ಧಿಯ ಮನುಷ್ಯನು ತನ್ನ ಆತ್ಮೀಯರಿಂದ ತಿರಸ್ಕೃತನಾದರೂ ದುಷ್ಟವಿಷಯಗಳಿಗಾಗಿ ಹಂಬಲಿಸುತ್ತಾನೆ. ಆದರೆ ಅಂತಹ ಅವಸ್ಥೆಯಲ್ಲೂ ಯಾವನು ನಿನ್ನ ಕಥಾಮೃತವನ್ನು ಸೇವನೆಮಾಡುತ್ತಾನೆಯೋ–ಅವನು ಈ ಅಂತಃಕರಣದ ಮೋಹವನ್ನು ತೊರೆಯುವನು."

ಬ್ರಾಹ್ಮಣರು ಸಮರ್ಪಣೆಮಾಡಿದ ಸ್ತೋತ್ರ :

ತ್ವಂ ಕ್ರತುಸ್ತ್ವಂ ಹವಿಸ್ತ್ವಂ ಹುತಾಶಃ ಸ್ವಯಂ
ತ್ವಂ ಹಿ ಮನ್ತ್ರಃ ಸಮಿದ್ದರ್ಭಪಾತ್ರಾಣಿ ಚ ।
ತ್ವಂ ಸದಸ್ಯರ್ತ್ವಿಜೋ ದಮ್ಪತೀ ದೇವತಾ
ಅಗ್ನಿಹೋತ್ರಂ ಸ್ವಧಾ ಸೋಮ ಆಜ್ಯಂ ಪಶುಃ ॥೪೫॥

"ಸ್ವಾಮಿ! ಭಗವಂತನೇ! ಯಜ್ಞವೂ ನೀನೇ. ಹವಿಸ್ಸೂ ನೀನೇ. ಅಗ್ನಿಯೂ ನೀನೇ. ಮಂತ್ರವೂ ನೀನೇ ಆಗಿದ್ದೀಯೆ. ಸಮಿತ್ತೂ, ದರ್ಭೆಗಳೂ ಮತ್ತು ಯಜ್ಞಪಾತ್ರೆಗಳೂ ನೀನೇ. ಹಾಗೆಯೇ ಯಜ್ಞದ ಸದಸ್ಯರೂ, ಋತ್ವಿಜರೂ, ಯಜಮಾನನೂ ಮತ್ತು ಆತನ ಧರ್ಮಪತ್ನಿಯೂ, ದೇವತೆಯೂ, ಅಗ್ನಿಹೋತ್ರವೂ, ಸ್ವಧೆಯೂ, ಸೋಮರಸವೂ, ಘೃತವೂ ಮತ್ತು ಪಶುವೂ ನೀನೇ ಆಗಿದ್ದೀಯೆ.

ತ್ವಂ ಪುರಾ ಗಾಂ ರಸಾಯಾ ಮಹಾಸೂಕರೋ
ದಂಷ್ಟ್ರಯಾ ಪದ್ಮಿನೀಂ ವಾರಣೇನ್ದ್ರೋ ಯಥಾ ।
ಸ್ತೂಯಮಾನೋ ನದಲ್ಲೀಲಯಾ ಯೋಗಿಭಿ-
ರ್ವ್ಯುಜ್ಜಹರ್ಥ ತ್ರಯೀಗಾತ್ರ ಯಜ್ಞಕ್ರತುಃ ॥೪೬॥

ಎಲೈ ವೇದಮೂರ್ತಿಯೇ! ಯಜ್ಞಮತ್ತು ಯಜ್ಞಸಂಕಲ್ಪ ಸ್ವರೂಪಿಯೇ! ನೀನೇ ಅತಿವಿಶಾಲವಾದ ವರಾಹರೂಪವನ್ನು ಧರಿಸಿ ರಸಾತಲದಲ್ಲಿ ಮುಳುಗಿದ್ದ ಭೂಮಿಯನ್ನು ಕೋರೆದಾಡೆಯ ಮೇಲೆ ಇರಿಸಿ ಕೊಂಡು–ಗಜರಾಜನು ತಾವರೆಯ ದಂಟನ್ನು ಹೇಗೋ ಹಾಗೆ–ಲೀಲಾಜಾಲ ವಾಗಿಯೇ ಮೇಲಕ್ಕೆ ಎತ್ತಿಕೊಂಡುಬಂದೆ. ಆಗ ಗಂಭೀರವಾಗಿ ಗರ್ಜಿಸುತ್ತಿದ್ದ ನಿನ್ನನ್ನೂ, ನಿನ್ನ ಅಲೌಕಿಕವಾದ ಆ ಪರಾಕ್ರಮವನ್ನೂ ಕಂಡ ಯೋಗಿಗಳು ಸ್ತೋತ್ರಮಾಡುತ್ತಿದ್ದರು.

ಸ ಪ್ರಸೀದ ತ್ವಮಸ್ಮಾಕಮಾಕಾಂಕ್ಷತಾಂ
ದರ್ಶನಂ ತೇ ಪರಿಭ್ರಷ್ಟಸತ್ಕರ್ಮಣಾಮ್ ।
ಕೀರ್ತ್ಯಮಾನೇ ನೃಭಿರ್ನಾಮ್ನಿ ಯಜ್ಞೇಶ ತೇ
ಯಜ್ಞವಿಘ್ನಾಃ ಕ್ಷಯಂ ಯಾನ್ತಿ ತಸ್ಮೈ ನಮಃ ॥೪೭॥

"ನಮ್ಮ ಯಜ್ಞರೂಪವಾದ ಸತ್ಕರ್ಮವು ನಷ್ಟವಾಗಿಹೋಗಿತ್ತು. ಅದನ್ನು ಸರಿಪಡಿಸುವುದಕ್ಕಾಗಿ ನಾವು ನಿನ್ನ ದರ್ಶನಕ್ಕಾಗಿ ಹಂಬಲಿಸುತ್ತಿದ್ದೆವು. ಆ ದಿವ್ಯದರ್ಶನವನ್ನು ದಯಪಾಲಿದೆಯಲ್ಲಾ, ಸ್ವಾಮಿ! ನಮ್ಮಲ್ಲಿ ಪ್ರಸನ್ನನಾಗು. ಯಜ್ಞೇಶನೇ! ನಿನ್ನ ಹೆಸರನ್ನು ಕೀರ್ತನೆಮಾಡಿದರೆ ಯಜ್ಞದ ಎಲ್ಲ ವಿಘ್ನಗಳೂ ನಾಶಹೊಂದುತ್ತವೆಯಲ್ಲವೇ? ಇಂತಹ ನಿನಗೆ ನಮೋ ನಮಃ."

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ವತ್ಸ, ವಿದುರ! ಎಲ್ಲ ಜನರೂ ಹೀಗೆ ಯಜ್ಞರಕ್ಷಕನಾದ ಭಗವಂತ ನಾದ ಹೃಷೀಕೇಶನನ್ನು ಸ್ತುತಿಸತೊಡಗಲು, ಚತರುನಾದ ದಕ್ಷಪ್ರಜಾಪತಿಯು ರುದ್ರಪಾರ್ಷದನಾದ ಶ್ರೀವೀರಭದ್ರನಿಂದ ಧ್ವಂಸಮಾಡಲ್ಪಟ್ಟಿದ್ದ ಯಜ್ಞವನ್ನು ಮತ್ತೆ ಪ್ರಾರಂಭಮಾಡಿದನು.

ಭಗವಂತನಾದ ಶ್ರೀಹರಿಯು ಸರ್ವಾತ್ಮನಾಗಿರುವುದರಿಂದ ಎಲ್ಲ ದೇವತೆಗಳಿಗೆ ಅರ್ಪಿಸಿದ ಹವಿಸ್ಸನ್ನೂ ಅವರ ಮೂಲಕ ತಾನೇ ಭುಂಜಿಸು ವವನಾದರೂ–ತನಗೋಸ್ಕರವೇ ವಿಶೇಷವಾಗಿ ಸಮರ್ಪಣೆಮಾಡಲ್ಪಟ್ಟ ತ್ರಿಕಪಾಲಪುರೋಡಾಶರೂಪವಾದ ತನ್ನ ಭಾಗದಿಂದ ಮತ್ತೂ ಹೆಚ್ಚು ಪ್ರಸನ್ನನಾಗಿ ದಕ್ಷಪ್ರಜಾಪತಿಯನ್ನು ಕುರಿತು ಹೀಗೆಂದನು :

"ವತ್ಸ, ದಕ್ಷಪ್ರಜಾಪತಿಯೇ! ಜಗತ್ತಿಗೆ ಪರಮಕಾರಣನಾದ ನಾನೇ ಬ್ರಹ್ಮನು. ನಾನು ಎಲ್ಲ ಆತ್ಮಗಳಿಗೂ ಈಶ್ವರನು. ಸರ್ವಸಾಕ್ಷಿಯು. ಸ್ವಯಂಪ್ರಕಾಶನು ಮತ್ತು ಸರ್ವೋಪಾಧಿರಹಿತನು. ಬ್ರಾಹ್ಮಣೋತ್ತಮನೇ! ಅಂತಹ ನಾನೇ ನನ್ನ ತ್ರಿಗುಣಾತ್ಮಕವಾದ ಮಾಯೆಯನ್ನು ಸ್ವೀಕರಿಸಿ ಜಗತ್ತಿನ ಸೃಷ್ಟಿ-ಸ್ಥಿತಿ-ಸಂಹಾರಗಳನ್ನು ಮಾಡುವೆನು ಮತ್ತು ಅದಕ್ಕೆ ತಕ್ಕಂತೆ ಬ್ರಹ್ಮ, ವಿಷ್ಣು, ರುದ್ರರೆಂಬ ಹೆಸರುಗಳನ್ನು ಧರಿಸುವೆನು. ಅರಿಯದ ಜನರು ಇಂತಹ ಅದ್ವಿತೀಯವೂ, ಕೇವಲವೂ ಆದ ಪರಿಶುದ್ಧವಾದ ಒಂದೇ ಪರಬ್ರಹ್ಮ ಸ್ವರೂಪದಲ್ಲಿಯೇ ಬ್ರಹ್ಮ-ರುದ್ರರನ್ನೂ ಮತ್ತು ಇತರ ಭೂತಗಳನ್ನೂ ಬೇರೆ-ಬೇರೆಯಾಗಿ ಕಾಣುತ್ತಾರೆ.

(ಶ್ಲೋಕ 48-52)

ಯಥಾ ಪುಮಾನ್ನ ಸ್ವಾಙ್ಗೇಷು ಶಿರಃ ಪಾಣ್ಯಾದಿಷು ಕ್ವಚಿತ್ ।
ಪಾರಕ್ಯಬುದ್ಧಿಂ ಕುರುತೇ ಏವಂ ಭೂತೇಷು ಮತ್ಪರಃ ॥೫೩॥

ಮನುಷ್ಯನು ತನ್ನ ತಲೆ ಮತ್ತು ಕೈ-ಕಾಲು ಮುಂತಾದ ಅಂಗಗಳಲ್ಲಿ 'ಇವು ನನ್ನಿಂದ ಬೇರೆ. ನಾನು ಇವುಗಳಿಂದ ಭಿನ್ನನಾದವನು'–ಎಂಬುದಾಗಿ ಬುದ್ಧಿಯನ್ನು ಇಟ್ಟುಕೊಳ್ಳುವುದಿಲ್ಲವಲ್ಲವೇ? ಹಾಗೆಯೇ ನನ್ನ ಭಕ್ತನು ಪ್ರಾಣಿಮಾತ್ರವನ್ನೂ ನನ್ನಿಂದ ಭಿನ್ನವನ್ನಾಗಿ ತಿಳಿಯುವುದಿಲ್ಲ. ಅವುಗಳಲ್ಲಿ ಪ್ರತ್ಯೇಕಬುದ್ಧಿಯನ್ನು ಇಟ್ಟುಕೊಳ್ಳುವುದಿಲ್ಲ.

ತ್ರಯಾಣಾಮೇಕಭಾವಾನಾಂ ಯೋ ನ ಪಶ್ಯತಿ ವೈ ಭಿದಾಮ್ ।
ಸರ್ವಭೂತಾತ್ಮನಾಂ ಬ್ರಹ್ಮನ್ಸ ಶಾನ್ತಿಮಧಿಗಚ್ಛತಿ ॥೫೪॥

ಎಲೈ ಪ್ರಜೇಶನೇ! ಬ್ರಹ್ಮ, ವಿಷ್ಣು ಮತ್ತು ರುದ್ರ–ಎಂಬ ನಾವು ಮೂವರೂ ಒಂದೇ ಭಾವವುಳ್ಳವರು. ಎಲ್ಲ ಭೂತಗಳಿಗೂ ಆತ್ಮವಾಗಿರು

ವವರು. ಆದ್ದರಿಂದ ಇಂತಹ ನಮ್ಮಲ್ಲಿ ಯಾವನು ಭೇದಬುದ್ಧಿಯನ್ನು ಇಟ್ಟುಕೊಳ್ಳುವುದಿಲ್ಲವೋ–ಆತನೇ ಶಾಂತಿಯನ್ನು ಪಡೆಯುವನು."

ಮೈತ್ರೇಯಮಹರ್ಷಿಗಳು ಹೇಳುತ್ತಾರೆ :

ಶ್ರೀಭಗವಂತನು ಹೀಗೆ ಆದೇಶಮಾಡಲು ಪ್ರಜಾಪತಿಗಳಿಗೆ ಅಧಿಪತಿಯಾದ ದಕ್ಷನು ತ್ರಿಕಪಾಲಯಜ್ಞದ ಮೂಲಕ ಆ ಶ್ರೀಹರಿಯನ್ನು ಆರಾಧಿಸಿ, ಅನಂತರ ಅಂಗಭೂತವಾದ ಮತ್ತು ಪ್ರಧಾನಭೂತವಾದ ಎರಡೂ ಬಗೆಯ ಯಜ್ಞಗಳಿಂದ ಇತರ ಸಮಸ್ತದೇವತೆಗಳನ್ನೂ ಪೂಜಿಸಿದರು. ಅನಂತರ ಏಕಾಗ್ರಚಿತ್ತನಾಗಿ ಭಗವಂತನಾದ ರುದ್ರನನ್ನು ಯಜ್ಞಶೇಷರೂಪವಾದ ಆತನ ಭಾಗದಿಂದ ಅಂದರೆ : "ಸ್ವಿಷ್ಟಕೃತ್" ಎಂಬ ಹವಿರ್ಭಾಗದಿಂದ ಪೂಜೆಮಾಡಿ, ಕೊನೆಯಲ್ಲಿ ಮಾಡಲ್ಪಡುವ 'ಉದವಸಾನ' ವೆಂಬ ಕರ್ಮದಿಂದ ಇತರ ಸೋಮಪಾಯಿಗಳನ್ನೂ ಮತ್ತು ಉಳಿದ ದೇವತೆಗಳನ್ನೂ ಆರಾಧಿಸಿ, ಯಜ್ಞವನ್ನು ಮುಗಿಸಿ ಕೊನೆಯಲ್ಲಿ ಋತ್ವಿಜರೊಡನೆ ಅವಭೃಥಸ್ನಾನವನ್ನು ಆಚರಿಸಿದನು. ಆಗ ದೇವತೆಗಳು ತನ್ನ ಪುರುಷಾರ್ಥದಿಂದಲೇ ಎಲ್ಲ ಬಗೆಯ ಸಿದ್ಧಿಗಳನ್ನೂ ಪಡೆದಿದ್ದ ದಕ್ಷಪ್ರಜಾಪತಿಗೆ "ನಿನ್ನ ಬುದ್ಧಿಯು ಸದಾ ಧರ್ಮದಲ್ಲೇ ನೆಲೆಗೊಂಡಿರಲಿ'–ಎಂಬ ಆಶೀರ್ವಾದಮಾಡಿ ಸ್ವರ್ಗಕ್ಕೆ ಹೊರಟುಹೋದರು.

ವತ್ಸ, ವಿದುರ! ದಕ್ಷಪುತ್ರಿಯಾದ ಸತೀದೇವಿಯು ಹೀಗೆ ತನ್ನ ಹಿಂದಿನ ಶರೀರವನ್ನು ತ್ಯಜಿಸಿ, ಹಿಮವಂತನ ಪತ್ನಿಯಾದ ಮೇನಾದೇವಿಯ ಗರ್ಭದಲ್ಲಿ ಮತ್ತೆ ಜನ್ಮವನ್ನು ಪಡೆದಳು–ಎಂದು ಕೇಳಿದ್ದೇವೆ. ಪ್ರಳಯಕಾಲದಲ್ಲಿ ಲೀನವಾಗಿದ್ದ ಶಕ್ತಿಯು ಸೃಷ್ಟಿಯ ಪ್ರಾರಂಭದಲ್ಲಿ ಮತ್ತೆ ಈಶ್ವರನನ್ನು ಆಶ್ರಯಿಸುವಂತೆ–ಅನನ್ಯಪರಾಯಣೆಯಾದ ಆ ಸತೀದೇವಿಯು ಆ ಜನ್ಮ ದಲ್ಲಿಯೂ ತನ್ನ ಏಕಮಾತ್ರ ಆಶ್ರಯವೂ, ಪ್ರಿಯತಮನೂ ಆದ ಭಗವಂತ ನಾದ ಶಂಕರನನ್ನೇ ಪತಿಯನ್ನಾಗಿ ವರಿಸಿದಳು. ದಕ್ಷಯಜ್ಞವನ್ನು ಧ್ವಂಸ ಮಾಡಿದ ಈ ಶಿವಭಗವಂತನ ಚರಿತ್ರವನ್ನು ನಾನು ಹಿಂದೆ ಬೃಹಸ್ಪತಿಯ ಶಿಷ್ಯನಾದ, ಪರಮಭಾಗ್ಯವತೋತ್ತಮನಾದ ಉದ್ಧವನ ಬಾಯಿಂದ ಕೇಳಿ ದ್ದೆನು. (ಶ್ಲೋಕ 55-60)

ಇದಂ ಪವಿತ್ರಂ ಪರಮೀಶಚೇಷ್ಟಿತಂ
ಯಶಸ್ಯಮಾಯುಷ್ಯಮಘೌಘಮರ್ಷಣಮ್ ।
ಯೋ ನಿತ್ಯದಾಕರ್ಣ್ಯ ನರೋಽನುಕೀರ್ತಯೇ-
ದ್ಧುನೋತ್ಯಘಂ ಕೌರವ ಭಕ್ತಿಭಾವತಃ ॥೬೧॥

ಕುರುನಂದನನೇ! ಮಹಾದೇವನ ಈ ಪವಿತ್ರವಾದ ಚರಿತ್ರವು ಯಶಸ್ಸನ್ನೂ, ಆಯುಸ್ಸನ್ನೂ ವೃದ್ಧಿಪಡಿಸುವುದು ಮತ್ತು ಪಾಪರಾಶಿಯನ್ನು ಧ್ವಂಸಮಾಡುವುದು. ಪ್ರತಿದಿನವೂ ಭಕ್ತಿಯಿಂದ ಈ ಕಥೆಯ ಶ್ರವಣ-ಸಂಕೀರ್ತನೆಗಳನ್ನು ಮಾಡುವ ಪುಣ್ಯಾತ್ಮನು ತನ್ನ ಸಕಲಪಾಪರಾಶಿಯನ್ನೂ ತೊಳೆದುಕೊಂಡು ಪವಿತ್ರನಾಗುವನು.”

ಮಹಾಪುರಾಣವೂ ಪರಮಹಂಸಸಂಹಿತೆಯೂ ಆಗಿರುವ ಶ್ರೀಮದ್ಭಾಗವತ
ದಲ್ಲಿ ಚತುರ್ಥಸ್ಕಂಧದ ೭ನೆಯ ಅಧ್ಯಾಯವು ಮುಗಿಯಿತು.

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಎರಡನೆಯ ಸಂಪುಟವು ಮುಗಿಯಿತು.

❄

❄ ❄ ❄

❄

ಚತುರ್ಥಸ್ಕಂಧ ೮ನೆಯ ಅಧ್ಯಾಯ

ಮೈತ್ರೇಯ ಉವಾಚ :

ಸನಕಾದ್ಯಾ ನಾರದಶ್ಚ ಋಭುರ್ಹಂಸೋಽರುಣಿರ್ಯತಿಃ ।
ನೈತೇ ಗೃಹಾನ್ಬ್ರಹ್ಮಸುತಾ ಹ್ಯಾವಸನ್ನೂರ್ಧ್ವರೇತಸಃ ॥೧॥

License No. WPP-13 Licensed to Post without pre-payment of postage
Posted at Thayagaraja Nagar Post Office
Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.